
ಕನ್ನಡಿಗರಿಗೆ

ಒಳ್ಳೆಯ ಸಾಹಿತ್ಯ



ಕಾವ್ಯಾಲಯ : ಪ್ರಕಾಶಕರು : ಮೈಸೂರು

ಅವರ ('ಶ್ರೀ'ಯವರ) ಜೀವಮಾನದ ಗೆಯ್ಮೆಯನ್ನೂ ಅವರ ಜೀವನಗತಿಯನ್ನೂ ನೆನಪಿಗೆ ತಂದುಕೊಂಡರೆ ಹರ್ಷ ತಾನಾಗಿ ಊರಿ, ಹೊಳೆ ಹರಿದು ಆನಂದ ಸರೋವರವಾಗುತ್ತದೆ. ಯೌವನ ಪೂರ್ವ ವಯಸ್ಸುಗಳಲ್ಲಿ . . . . ಜ್ಞಾನಾರ್ಜನೆ ಗೈದರು; ಮೂರು ನಾಲ್ಕು ಭಾಷಾ ಸಾಹಿತ್ಯಗಳಲ್ಲಿ ಉತ್ಕೃಷ್ಟ ಪಂಡಿತರೆನ್ನಿಸಿಕೊಂಡರು; ದರ್ಶನ, ಮತಧರ್ಮ, ಮೇಲಾಗಿ ಮಾನವ ಸಂಸ್ಕೃತಿಯ, ಅಧಿಷ್ಠಾನ ಸಿದ್ಧಾಂತಗಳನ್ನೂ ಪ್ರಧಾನ ಚರಿತ್ರೆಯನ್ನೂ ಕರಗತ ಮಾಡಿಕೊಂಡರು; ತಾರುಣ್ಯದಲ್ಲಿಯೇ ಕನ್ನಡದ ಮೇಲಣ ಮಮತೆ ಹುಟ್ಟಿ ಬೇರೂರಿ, ಬೆಳೆದು, ಘನವೃಕ್ಷವಾದ್ದರಿಂದ, ಅವರು ಕೇವಲ ಕನ್ನಡ ಸೇವಕರಾಗಿ ಉಳಿಯಲಿಲ್ಲ, ಕನ್ನಡ ಪೋಷಕರಾಗುವ ಸುಯೋಗವೂ ಅವರಿಗೆ ಬಂತು; ಜ್ಞಾನ, ವಿಜ್ಞಾನ ಲಲಿತಕಲೆ ಸಂಸ್ಕೃತಿಗಳ ಮೇಲಣ ಅಕ್ಕರೆ—ಇವನ್ನು ನೂರಾರು ಸಾವಿರಾರು ಬಾಲಕ ಯುವಕ ವಯಸ್ಕರಿಗೆ, ಸುಮಾರು ಮೂವತ್ತು ವರ್ಷ ದಿನದಿನವೂ ಧಾರಾಳವಾಗಿ, ನಿರ್ವಂಚನೆಯಿಂದ, ಆಸಕ್ತಿ ಕುಗ್ಗದೆ ದಾನಮಾಡಿ ಋಣಮುಕ್ತರಾದರು; . . . ಸಹಸ್ರಗಟ್ಟಲೆ ದ್ರವ್ಯವನ್ನು ಕನ್ನಡ ಪ್ರೋತ್ಸಾಹಕ್ಕೆ, ಕನ್ನಡ ಸಂಸ್ಥೆಗಳ ಅಭಿವೃದ್ಧಿಗೆ, ದತ್ತಿ ಇತ್ತು, ಬಿರುದಾಂಕಿತರಾದರು; ಕರ್ನಾಟಕದ ಸಂದಿಗೊಂದಿಯನ್ನೂ ಬಿಡದೆ ಸಂಚರಿಸಿ . . . . ಸಾತ್ವಿಕ ದೇಶಪ್ರೇಮ ಪುಳಕಿತರಾದರು; ಉತ್ಸಾಹ ನಂಬಿಕೆ ಧೈರ್ಯ ಆತ್ಮಗೌರವಗಳನ್ನ ಬಿತ್ತಿದರು, ಬೆಳೆಸಿದರು; ಚೇತನವನ್ನು ಉದ್ಧರಿಸುವ ದೊಡ್ಡ ಭಾವ ಭಾವನೆಗಳನ್ನು ಹರಸಿದರು, ಹರಡಿದರು; ವಿದ್ವಾಂಸರಿಗೆ, ಕವಿಗಳಿಗೆ ನವಜಾಗ್ರತಿಗೆ, ಕರುಣಾಳು ಬೆಳಕಾದರು; . . . ಕನ್ನಡದ ಆಚಾರ್ಯ ಪದವಿಗೇರಿದರು; ಮಡಿಯುವುದಕ್ಕೆ ಮೊದಲೇ ಮೂಲ ಪುರುಷರಾದರು. ಪರಂಧಾಮದ ಪೂರ್ವವೇ ಪುರಾತನರಾದರು!

* * *

. . . ಒಟ್ಟಿನಲ್ಲಿ ಅವರೊಬ್ಬ ತಪಸ್ವಿ, ಸಿದ್ಧಪುರುಷ, ಸ್ಥಾಪನಾಚಾರ್ಯ ಎಂಬುದನ್ನು ಯಾರೂ ಪ್ರಶ್ನಿಸುವ ಹಾಗಿಲ್ಲ.

ಶ್ರೀ ಎಸ್. ವಿ. ರಂಗಣ್ಣನವರ
ಪೀಠಿಕೆಯಿಂದ

ಬೆಲೆ:

ಸಾದಾ ಪ್ರತಿ ರೂ. ೬-೦೦
ಕ್ಯಾಲಿಕೊ ಪ್ರತಿ ರೂ. ೮-೫೦



ಬಿ. ಎಂ. ಶ್ರೀಕಂಠಯ್ಯನವರು

ಕನ್ನಡ ಕಾವ್ಯಮಾಲೆ

ಕನ್ನಡಿಗರಿಗೆ

ಒಳ್ಳೆಯ ಸಾಹಿತ್ಯ

ಭಾಗಗಳು ೧-೨-೩

ಭಾಷಣಗಳು ಮತ್ತು ಲೇಖನಗಳು
ಮುನ್ನುಡಿಗಳು ಮತ್ತು ಲೇಖನಗಳು
ಕಾವ್ಯಾವಲೋಕನಂ

'ಶ್ರೀ'

ಶ್ರೀಮಾನ್ ಎಸ್. ವಿ. ರಂಗಣ್ಣನವರ
ಪೀಠಿಕೆಯೊಡನೆ

ಮೈಸೂರು
ಕಾವ್ಯಾಲಯ : ಪ್ರಕಾಶಕರು

ಮೊದಲನೆಯ ಮುದ್ರಣ : ೧೯೪೮
ಎರಡನೆಯ ಮುದ್ರಣ : ೧೯೫೧
ಮೂರನೆಯ ಮುದ್ರಣ : ೧೯೬೩
ನಾಲ್ಕನೆಯ ಮುದ್ರಣ : ೧೯೭೦

ಮುದ್ರಕರು
ಜಿ. ಹೆಚ್. ರಾಮರಾವ್
ಮೈಸೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಹೌಸ್
ಮೈಸೂರು

ಮತ್ತೂರು ಶಾಸ್ತ್ರಿ ಕೃಷ್ಣ

ಪೀಠಿಕೆ—೧

ಗುರುವರ್ಯ "ಶ್ರೀ"ಯವರು ಜೀವಿಸಿದ್ದಾಗ, ಅವರು ತಮ್ಮ ಪ್ರಯಾಣ ಪ್ರವಾಸಗಳನ್ನು ಬಹುಮಟ್ಟಿಗೆ ಕಡಿಮೆಮಾಡಿ, ಉಪನ್ಯಾಸ ಸಭಾಧ್ಯಕ್ಷತೆ ವಿಮರ್ಶೆಗಳನ್ನು ಅನಿವಾರ್ಯವೆಂದಾಗ ಮಾತ್ರ ಕೈಗೊಂಡು, ಒಂದೆಡೆ ಕುಳಿತು, ವ್ಯಾಖ್ಯಾನ ಭಾಷಾಂತರ ಸ್ವಂತಕೃತಿ ಮುಂತಾದ ಆವಶ್ಯಕ, ಅಮೂಲ್ಯ, ಶಾಶ್ವತ ಲೇಖನೋದ್ಯಮದ ಕಡೆಗೆ ತಮ್ಮ ಕಾಲ, ಗಮನ, ಆಸಕ್ತಿ, ಶಕ್ತಿಗಳನ್ನು ಹೆಚ್ಚು ಹೆಚ್ಚಾಗಿ ಏತಕ್ಕೆ ವಿನಿಯೋಗಿಸಬಾರದೆಂದು ಆಶಿಸುತ್ತಿದ್ದವರಲ್ಲಿ, ಆಕ್ಷೇಪಿಸುತ್ತಿದ್ದವರಲ್ಲಿ, ನಾನೂ ಒಬ್ಬ. ಆಗ ಅವರ ಸನ್ನಿಧಿಯಲ್ಲಿ, ಸಾಮಿಪ್ಯದಲ್ಲಿ, ನಾನು ನಿಂತಿರುತ್ತಿದ್ದುದರಿಂದ, ಅವರ ಇಡೀ ಜೀವಿತದ ಒಂದು ಅವಲೋಕನ ಅಶಕ್ಯವಾಗುತ್ತಿದ್ದುದರಿಂದ, ಆ ಆಶೆ, ಆಕ್ಷೇಪ, ನಿಷ್ಫಲವಾಯಿತಲ್ಲ ಎಂಬ ಕೊರಗು ನನ್ನ ಮನಸ್ಸಿನಲ್ಲಿ ಇತ್ತೇ ಇತ್ತು. ಈಗ "ಶ್ರೀ"ಯವರು ತಮ್ಮ ಐಹಿಕಯಾತ್ರೆಯನ್ನು ಪೂರ್ತಿಗೊಳಿಸಿಕೊಂಡು ಯಶೋಶರೀರದೊಡನೆ ಮೂಡಿರುತ್ತಾರಾಗಿ, ಅವರ ಆಕಾಂಕ್ಷೆ ಉತ್ಸಾಹ ಉದ್ವೇಗ ಪ್ರಯತ್ನ ವಿಜಯವೆಲ್ಲದರ ಸಮಗ್ರ ಸಮಕಟ್ಟಿನ ಪರಿಚಯ ನಮಗೆ ದೊರೆಯಲು ಅನುಕೂಲವಾಗಿದೆ. ಆಗ ಸಡಿಲವೂ ಆವೇಗಪೂರಿತವೂ ಕ್ರಮಭಂಗಬಾಧಿತವೂ ಎಂದು ಭ್ರಾಂತಿ ಹುಟ್ಟಿಸುತ್ತಿದ್ದ ಅವರ ಬಹುಮುಖದ ಬಾಳಿಕೆ, ಈಗ ಪರಿಪೂರ್ಣವಾದೊಂದು ಜೀವನ, ಸಮುದಾಯ ಸೌಂದರ್ಯದಿಂದ ಭೂಷಿತವಾದ ಜೀವನ, ಎಂದು ತೋರುತ್ತದೆ. ಅವರ ಬದುಕು ದೃಢಾಭಿಪ್ರಾಯ ಪ್ರೇರಿತವಾದ್ದು, ಸುವ್ಯವಸ್ಥಿತವಾದ್ದು, ನೇರವಾದ್ದು, ತನ್ನ ಮುಖ್ಯ ಅಂಗ ಯಾವುದರಲ್ಲಿಯೂ ಬದಲಾವಣೆಯನ್ನು ಬಯಸುವಂಥಾದ್ದಲ್ಲ, ಬದಲಾವಣೆಯನ್ನು ಸಹಿಸುವಂಥಾದ್ದಲ್ಲ, ಎಂಬುದು ಈಗ ಸುಸ್ಪಷ್ಟ. "ಶ್ರೀ"ಯವರ ಮನೋಧರ್ಮ, ಗುಣರಾಶಿ, ಧ್ಯೇಯ, ಆಶಯ, ಬಲ, ಪರಾಕ್ರಮಗಳು ಅವರ ಸ್ಥಳ, ಸನ್ನಿವೇಶ, ಕಾಲ, ಆವರಣ, ಅವಕಾಶಗಳೊಡನೆ ಅಚ್ಚುಕಟ್ಟಾಗಿ ಹೊಂದಿಕೊಂಡುದರಿಂದ, ಅವರು ಹಿಡಿದುದನ್ನು ಹೆಚ್ಚು ಕಡಮೆ ಪೂರ್ತಿ ಸಾಧಿಸುವಂತಾಯ್ತು. ಅ ಮುಖ್ಯವಾದ ಈ ಅಂಶ ಆ ಅಂಶದಲ್ಲಿ ಹೇಗಾದರೂ ಆಗಲಿ, ಅವರ

ಜೀವಮಾನದ ಕಟ್ಟಕಡೆಯಲ್ಲಿ ಅವರು ತಾನಾಗಿ ಕೂಗಿಕರೆದ ಚಿಂತೆ ನಿರುತ್ಸಾಹ ಹತಾಶೆ ಯಾವುದೇ ಇರಲಿ, ಒಟ್ಟಿನಲ್ಲಿ ಅವರೊಬ್ಬ ತಪಸ್ವಿ, ಸಿದ್ಧಪುರುಷ, ಸ್ಥಾಪನಾಚಾರ್ಯ ಎಂಬುದನ್ನು ಯಾರೂ ಪ್ರಶ್ನಿಸುವ ಹಾಗಿಲ್ಲ.

ಒಂದಕ್ಷರವನ್ನು ಕಲಿಸಿದವನಾದರೂ ಉಪಾಧ್ಯಾಯ, ಉಪಾಧ್ಯಾಯನ ನಾಮಸ್ಮರಣೆ ವಿದ್ಯಾರ್ಥಿಯ ಕರ್ತವ್ಯ ; ಇದು ಸಾಮಾನ್ಯ ಸಾಮತಿ. ಅದರೆ ಮೇಲ್ತರಗತಿಯ ಉಪಾಧ್ಯಾಯ, ನಿಜವಾದ ಗುರು, ಲಭಿಸುವುದು ಶಿಷ್ಯನ ಪೂರ್ವ ಪುಣ್ಯದಿಂದಲೇ. "ಶ್ರೀಯವರನ್ನು ಗುರುವೆಂದು ನಂಬಿರುವವರೆಲ್ಲರೂ ಯಾವುದೋ ಒಂದು ಅತಿಶಯವಾದ, ಅಪೂರ್ವವಾದ, ಮಹಾ ಮಹಿಮೆಯುಳ್ಳ ಸೌಭಾಗ್ಯ ತಮಗೆ ದಕ್ಕಿದಂತೆ ಭಾವಿಸುತ್ತಾರೆ. "ಶ್ರೀ"ಯವರ ಶಿಷ್ಯರಲ್ಲಿ ಮೂರು ನಾಲ್ಕು ಬಗೆ. ಹಲಕೆಲವರು ಅವರ ನಿಶ್ಚಲ ಭಕ್ತರು, ಕೊಂಚ ಮಟ್ಟಿಗೆ ಅಂಧ ಶ್ರದ್ಧೆಯ ಹಿಂಬಾಲಕರು ; ಅವರನ್ನೂ ಅವರ ಕಾರ್ಯವನ್ನೂ ಟೀಕಿಸುವ, ಪ್ರತಿಭಟಿಸುವ, ಕೃತ್ಯ ಈ ತರದ "ಶ್ರೀಕಂಠ ಮತ"ದವರಿಗೆ ಪರಮ ಪಾಪ. ಬಹಳ ಮಂದಿ ಶಿಷ್ಯರಾದರೋ "ಶ್ರೀಯವರ ಬೋಧನೆಯಿಂದ ಉತ್ತಮ ಜ್ಞಾನ, ವಿಶಾಲ ಅನುಭವ, ಹೇರಳ ಆನಂದವನ್ನು ಪಡೆದು, ಅದರಿಂದ ತೃಪ್ತರಾಗಿ, ಅವರ ಹೆಸರನ್ನು ಉಚ್ಚರಿಸಿದೊಡನೆ ಹಿಗ್ಗಿ ಹೆಚ್ಚುವ ಅಭ್ಯಾಸದವರು. ಪ್ರತಿಯೊಬ್ಬ ದೊಡ್ಡ ಅಧ್ಯಾಪಕನಿಗೂ ಈ ಪಂಗಡದ ಶಿಷ್ಯ ಪ್ರಶಿಷ್ಯರ ಸಂಖ್ಯೆಯೇ ಅಧಿಕ. ಮತ್ತೆ ಕೆಲವರು ಮಾತ್ರ ಎಲ್ಲವನ್ನೂ ಪಿಕ್ಕಿ ನೋಡುವ, ಯಾವುದನ್ನಾದರೂ ತೂಕ ಮಾಡಲು ತವಕಿಸುವ, 'ಜಳ್ಳನ್ನು ತೂರಿ ಕಾಳನ್ನು ತುಂಬಿಕೊಳ್ಳಲು' ಆಟಿಸುವ, ನಿಷ್ಪಕ್ಷಪಾತ ಪ್ರಕೃತಿಯವರು. ಇವರ ರಕ್ತ ಬೇಗ, ಸುಲಭವಾಗಿ, ಸ್ವಲ್ಪ ಕಾರಣದಿಂದ, ಕುದಿದೇಳುವಂಥಾದ್ದಲ್ಲ. ತಲೆಬಾಗಿ ಗಮನಗೈಯುವ ಅನುಯಾಯಿಗಳಿಗೆ ಇವರು ವಾತ್ಸಲ್ಯಹೀನರು, ಕಠೋರಮತಿಗಳು, ಅಹಂಭಾವಲಾಂಛಿತರು. ಆದರೆ "ಕಡೆಗೆ ಉಳಿಯುವುದು ಅಭಿಮಾನವಲ್ಲ, ಸತ್ಯ"ವೆಂದು "ಶ್ರೀ"ಯವರೇ ಸಾರಿ ಸಾರಿ ಘೋಷಿಸಿಲ್ಲವೆ ? ಎಂದಮೇಲೆ ದುರಭಿಮಾನ, ವಿಪರೀತಾಭಿಮಾನ, ಉಳಿಯಲಾಪುದೆ ? ಆಗಲಿ ; ಪರಿಶೀಲಿಸಲಿ, ತಕ್ಕಡಿ ಹಿಡಿಯಲಿ, ಕೇರಲಿ, ತೂರಲಿ : "ಶ್ರೀ"ಯವರ ವ್ಯಕ್ತಿತ್ವಕ್ಕೂ ಸಾಹಸ ಕೆಲಸಕ್ಕೂ ಅಂಜಿಕೆಯೇನು ? ಅವರ ಜೀವಮಾನದ

ಗೆಯ್ಮೆಯನ್ನೂ ಅವರ ಜೀವನ ಗತಿಯನ್ನೂ ನೆನಪಿಗೆ ತಂದುಕೊಂಡರೆ ಹರ್ಷ ತಾನಾಗಿ ಊರಿ, ಹೊಳೆ ಹರಿದು ಆನಂದ ಸರೋವರವಾಗುತ್ತದೆ. ಯೌವನ ಪೂರ್ವ ವಯಸ್ಸುಗಳಲ್ಲಿ ತಮಗೆ ಸಿಕ್ಕಿದ ಕಾಲಾವಕಾಶವನ್ನು ಒಂದು ಕ್ಷಣವನ್ನಾದರೂ ವ್ಯರ್ಥವಾಗಲೀಯದೆ, ತದೇಕ ಚಿತ್ತರಾಗಿ, ಸರಸ್ವತೀ ಔಪಾಸನೆ ಮಾಡುವರೋ ಎಂಬಂತೆ ಆಚರಿಸುತ್ತ, ಜ್ಞಾನಾರ್ಜನೆಗೈದರು ; ಮೂರು ನಾಲ್ಕು ಭಾಷಾ ಸಾಹಿತ್ಯಗಳಲ್ಲಿ ಉತ್ಕೃಷ್ಟ ಪಂಡಿತರೆನ್ನಿಸಿಕೊಂಡರು ; ದರ್ಶನ, ಮತಧರ್ಮ, ಮೇಲಾಗಿ ಮಾನವ ಸಂಸ್ಕೃತಿಯ ಅಧಿಷ್ಠಾನ ಸಿದ್ಧಾಂತಗಳನ್ನೂ ಪ್ರಧಾನ ಚರಿತ್ರೆಯನ್ನೂ ಕರಗತಮಾಡಿಕೊಂಡರು ; ತಾರುಣ್ಯದಲ್ಲಿಯೇ ಕನ್ನಡದ ಮೇಲಣ ಮಮತೆ ಹುಟ್ಟಿ, ಬೇರೂರಿ, ಬೆಳೆದು, ಘನವೃಕ್ಷವಾದ್ದರಿಂದ, ಅವರು ಕೇವಲ ಕನ್ನಡ ಸೇವಕರಾಗಿ ಉಳಿಯಲಿಲ್ಲ, ಕನ್ನಡ ಪೋಷಕರಾಗುವ ಸುಯೋಗವೂ ಅವರಿಗೆ ಬಂತು ; ಜ್ಞಾನ ವಿಜ್ಞಾನ ಲಲಿತಕಲೆ ಸಂಸ್ಕೃತಿಗಳ ಮೇಲಣ ಆದರ, ಕನ್ನಡನಾಡು ಭಾಷೆ ಸಾಹಿತ್ಯಗಳ ಮೇಲಣ ಅಕ್ಕರೆ—ಇವನ್ನು ನೂರಾರು ಸಾವಿರಾರು ಬಾಲಕ ಯುವಕ ವಯಸ್ಕರಿಗೆ, ಸುಮಾರು ಮೂವತ್ತು ವರ್ಷ ದಿನ ದಿನವೂ, ಧಾರಾಳವಾಗಿ, ನಿರ್ವಂಚನೆಯಿಂದ, ಆಸಕ್ತಿ ಕುಗ್ಗದೆ, ದಾನ ಮಾಡಿ ಋಣಮುಕ್ತರಾದರು : ಬೋಧಕ ಶಿಖಾಮಣಿಯಾದರು ; ಲಕ್ಷ್ಮೀ ಕಟಾಕ್ಷಕ್ಕೂ ಪಾತ್ರರಾಗಿ, ಉದಾರ ಹೃದಯದಿಂದ, ಅತಿಥಿ ಸತ್ಕಾರ ಶ್ರೀಮಂತರಾದರು ; ಸಹಸ್ರಗಟ್ಟಲೆ ದ್ರವ್ಯವನ್ನು ಕನ್ನಡ ಪ್ರೋತ್ಸಾಹಕ್ಕೆ ಕನ್ನಡ ಸಂಸ್ಥೆಗಳ ಅಭಿವೃದ್ಧಿಗೆ, ದತ್ತಿ ಇತ್ತು, ಬಿರುದಾಂಕಿತರಾದರು ; ಕರ್ನಾಟಕದ ಸಂದಿಗೊಂದಿಯನ್ನೂ ಬಿಡದೆ ಸಂಚರಿಸಿ, ಚಿರಲಾವಣ್ಯ ನವಲಾವಣ್ಯದ ಕನ್ನಡ ತಾಯಿಯ ಪೂರ್ಣಾಲಿಂಗನದ ಸುರಸ ಸೌಖ್ಯವನ್ನು ಪುನಃ ಪುನಃ ಅನುಭವಿಸಿ, ಸಾತ್ವಿಕ ದೇಶಪ್ರೇಮ ಪುಳಕಿತರಾದರು ; ಉತ್ಸಾಹ ನಂಬಿಕೆ ಧೈರ್ಯ ಆತ್ಮಗೌರವಗಳನ್ನು ಬಿತ್ತಿದರು, ಬೆಳೆಸಿದರು ; ಚೇತನವನ್ನು ಉದ್ಧರಿಸುವ ದೊಡ್ಡ ಭಾವ ಭಾವನೆಗಳನ್ನ ಹರಸಿದರು, ಹೆರಡಿದರು; ವಿದ್ವಾಂಸರಿಗೆ, ಕವಿಗಳಿಗೆ, ನವಜಾಗ್ರತಿಗೆ, ಕರುಣಾಳು ಬೆಳಕಾದರು ; ತನ್ನ ಆಶಾಶಿಶುಗಳು, ತಮ್ಮ ಶಿಷ್ಯರ ದಾದಿತನದ ಒಲುಮೆಯಲ್ಲಿ ಬೆಳೆದು ಘಟ್ಟ ಘಟ್ಟಿಯಾಗುತ್ತಿದ್ದುದನ್ನು, ಕಣ್ಣಾರೆ ಕಂಡು ಕುಣಿದಾಡಿದರು ; ಕನ್ನಡದ ಆಚಾರ್ಯ ಪದವಿಗೇರಿದರು ; ಮಡಿಯುವುದಕ್ಕೆ ಮೊದಲೇ

ಮೂಲಪುರುಷರಾದರು, ಪರಂಧಾಮದ ಪೂರ್ವವೇ ಪುರಾತನರಾದರು. ಇಂಥಾ ಮಹಾನುಭಾವನನ್ನು ಗುರುವಾಗಿ ಪಡೆಯುವುದು ದುರ್ಲಭ ; ಪಡೆದವನು ದಿಟವಾಗಿ ಭಾಗ್ಯವಂತ. ಆ ಗುರುವಿನ ಪ್ರೀತಿಯ ಪಾಠವನ್ನು ಮರೆಯದಿರುವುದು, ಬಳಕೆಗೆ ತರುವುದು, ಇತರರಿಗೆ ತೋರಿಸುವುದು, ಅವನ ಆದ್ಯ ಕರ್ತವ್ಯವಲ್ಲವೆ ?

"ಶ್ರೀ" ಯವರ ಜೀವಮಾನವನ್ನು ನಾಲ್ಕು ಅವಧಿಗಳಾಗಿ ವಿಭಾಗಿಸಬಹುದು. ಮೈಸೂರು ಮಹಾರಾಜ ಕಾಲೇಜಿನ ಅಧ್ಯಾಪಕ ಗುಂಪಿಗೆ ಸೇರುವವರೆಗೆ ವಿದ್ಯಾರ್ಥಿ ದಸೆ : ಆಗ ಜ್ಞಾನ ಪ್ರಪಂಚದ ಬಾಹ್ಯರೇಖೆಗಳ ಪರಿಚಯ ; ಸಾರಸ್ವತ ಲಾಲಸೆಗಳ ಅಂಕುರ. ಅಲ್ಲಿಂದ ಮುಂದೆ ಹದಿನೈದು ಹದಿನಾರು ವರ್ಷ, ಸುಮಾರು ೧೯೨೬ನೇ ಇರವಿಯವರೆಗೆ, ಪೂರ್ವಸಿದ್ಧತೆಯ ಸಮಯ : ಆಗ ಅವಿಶ್ರಾಂತ ವ್ಯಾಸಂಗ, ಮನನ, ಮನ್ಥನ, ವಿದ್ಯಾರ್ಜನ ; ಪ್ರಚಾರಕಾರ್ಯಕ್ಕೆ ಹಂಚಿಕೆ ಹವಣಿಕೆ ; ಹಾಗೂ ಗೃಹಕೃತ್ಯದಲ್ಲಿ ದುರ್ಭರವಾದ ಅಳಲು ಅಗಲಿಕೆಗಳ ಉಣಿಸು, ತನ್ಮೂಲಕ ಚಿತ್ತಸ್ಥೈರ್ಯ ಮನೋನಿಗ್ರಹದ ಸಾಧನೆ, "ಹೊರಗೆ ಸಂಸಾರ, ಒಳಗೆ ಸನ್ಯಾಸ"ದ ಸಂಕಲ್ಪ. ಮೂರನೆಯ ಅವಧಿ ಸುಮಾರು ೧೯೪೨ನೇ ಇಸವಿಯವರೆಗೆ, ಹೆಚ್ಚುಹೆಚ್ಚು ಮನೋರಥ ಸಿದ್ಧಿ ಪ್ರಖ್ಯಾತಿ ಸಂತೋಷಗಳ ಗಡು, ಗಡಿ ; ಭಾಷಾಸಾಹಿತ್ಯಗಳ ದಣಿವಿಲ್ಲದ ಪ್ರಚಾರ ; ಕರ್ನಾಟಕದ ಮೇಲೆ ಸಾಂಸ್ಕೃತಿಕ ದಂಡಯಾತ್ರೆ ; ಕನ್ನಡಬಾವುಟವನ್ನು ಏರಿಸಿ ಹಾರಿಸಿ ಪ್ರಚಂಡ ದಿಗ್ವಿಜಯ. ಅಲ್ಲಿಂದ ಮರಣದವರೆಗೆ ಗೆಲವು ಕುಂದಿದ ಇಳಿಗಾಲ, ಮನೋವ್ಯಥೆಯ ಸಮಯ, ಒಂದು 'ರುದ್ರನಾಟಕ'ದ ಕೊನೆಯ ಅಂಕ. ಸ್ವಭಾವತಃ ಪುಸ್ತಕಪ್ರೇಮಿಗಳಾದ್ದರಿಂದ "ಶ್ರೀಯವರು ಶ್ರದ್ಧೆ ವಹಿಸಿ, ಓದಿ ತಿರುತಿರುಗಿ ಓದಿ ಧ್ಯಾನಗೈದು, ನಿಸ್ಸಂದೇಹವಾದ ಅರಿವನ್ನು ಸಂಪಾದಿಸಿದುದು ಸರಿಯೇ. ಯೌವನ ಸಾಮಾನ್ಯವಾಗಿ ಪ್ರತಿಯೊಬ್ಬನಿಗೂ ಮಹಾಕಾಂಕ್ಷೆಗಳು ಮೂಡುವ ಪರ್ವಕಾಲ. ಅನೇಕರಲ್ಲಿ ಅವು ಪದವಿ ಅಧಿಕಾರ ಮದುವೆ ಮನೆ ಜಮೀನು ಮುಂತಾದ ಐಹಿಕ ಪುರುಷಾರ್ಥಗಳ ಸಲುವಾಗಿ ಜನಿಸಿ, ಅಲ್ಲಿಗೇ ನಿಂತುಬಿಡುವುದು, ಸಹಜ. ಹೃದಯದ ಶಿಕ್ಷಣ, ಮನಸ್ಸಿನ ವೈಶಾಲ್ಯ, ಆತ್ಮದ ಬಿಡುಗಡೆ, ಜೀವನದ ಸಿದ್ಧಿಗಳ ಸಲುವಾಗಿ ಅವು ಏಳುವುದು, ಹೊರಳುವುದು, ವಿರಳ. "ಶ್ರೀ"ಯವರು ತಾರುಣ್ಯದಲ್ಲಿಯೇ,

ತಮ್ಮ ಪಾಲಿಗೆ ದೈವನಿಯಾಮಕವೋ ಎಂಬಂತೆ ಬಂದ, ತಾವು ಜೀವಮಾನವೆಲ್ಲ ಕಂಕಣತೊಟ್ಟು ವ್ರತಗೈಯಲೇಬೇಕಾದ, ಮುಖ್ಯ ಕರ್ತವ್ಯಗಳ ಛಾಯೆಯನ್ನು ಕಂಡುಕೊಂಡರು. "ಡಿಳ್ಳಿ ನನಗೆ ಬಲುದೂರ. ಕನ್ನಡ ನಾಡಿನ ಹಳ್ಳಿ ನನಗೆ ಸಾಕೆಂದು, ನನ್ನ ವಿದ್ಯಾಭ್ಯಾಸ ಮುಗಿಯುವುದರೊಳಗೆ ನಾನು ನಿರ್ಧರಿಸಿಕೊಂಡೆನು....ಅವೇ ನನ್ನ ದೀಕ್ಷೆ, ನನ್ನ ವ್ರತ, ನನ್ನ ನೋಂಪಿ." "ಕನ್ನಡಿಗರ ಅದರಲ್ಲೂ ಮಕ್ಕಳ, ಹೆಣ್ಣುಮಕ್ಕಳ, ಒಕ್ಕಲು ಮಕ್ಕಳ ಮೆಚ್ಚುಗೆಯೇ ನಾನು ಎದಿರುನೋಡುವ ಫಲ". ಒಂದು ದೃಷ್ಟಿಕೋನದಿಂದ ಇದು ನಮ್ರವಾದ, ಸಂಕೋಚವಾದ, ಸಣ್ಣ ಆಸೆ; ಬಲಿಷ್ಠ ಪುರುಷನಿಗೆ ಕನ್ನಡನಾಡು ಸಾಕೆ? ವಿಸ್ತಾರವಾದ ಭರತಭೂಮಿಯಿಲ್ಲವೆ? ಗಂಗಾನದಿ ಕೂಗಿ ಕರೆಯುತ್ತಿರುವಾಗ ತುಂಗಭದ್ರೆಯಮೇಲೆ ಓಡು ನಡೆಸುವುದೆ? ಇರಬಹುದು, ಇರಲಿ: ಆದರೆ "ಶ್ರೀ" ಯವರು ಸಮ್ಮೋದದಿಂದ ಕಂಡ ಸವಿಗನಸುಗಳು ಕೇವಲ ಸ್ವಪ್ನದೃಶ್ಯಗಳಲ್ಲ, ನೆನಸಾಗಬಲ್ಲ ಅಭಿಮತಗಳು; ಅವರು ಅಪ್ಪಿಕೊಂಡ ಆಲೋಚನೆಗಳು ತೋರಿಯೂ ತೋರದೆ ಹಾರಿಹೋಗುವ ಗಾಳಿಗೋಪುರಗಳಲ್ಲ, ಕಾರ್ಯಗತವಾಗಬಲ್ಲ ಸುಪುಷ್ಟ ಯೋಜನೆಗಳು. ಅವರೇ ವಿಡಂಬನಮಾಡಿ ಹೇಳಿದಂತೆ "ಇದಕ್ಕೂ ದೊಡ್ಡ ದೊಡ್ಡ ಧ್ಯೇಯಗಳನ್ನು ದೊಡ್ಡದೊಡ್ಡ ಮೇಧಾವಿಗಳಿಗೂ ಜಗದುದ್ಧಾರಕರಿಗೂ ಬಿಡಿ. ನಿಮ್ಮ, ನನ್ನ, ಜೀವಮಾದದ ತೀರ್ಪು ಕನ್ನಡತಾಯ ಸೇವೆ." ಎಂದ ಮಾತ್ರಕ್ಕೆ ಅವರಿಗೆ ಇಂಡಿಯದಲ್ಲಿ ದೇಶಭಕ್ತಿ ಇರಲಿಲ್ಲವೆಂದಲ್ಲ. "ಕನ್ನಡ ಮಾತೆಯ ಮೂಲಕ ಭಾರತಮಾತೆಯನ್ನು ಸೇವಿಸೋಣ. ಕನ್ನಡ ಮಾತೆ ಉದ್ಧಾರವಾದರೆ ಭಾರತಮಾತೆಯೂ ವೃದ್ಧಿಯಾಗುತ್ತಾಳೆ" : ಇದೇ ಅವರ ಉದಾರಮತ, ಆಳದ ಅಭಿಪ್ರಾಯ. ಪ್ರತಿಯೊಬ್ಬರೂ ಅವರವರ ಮನೆಯನ್ನು ಅಂದಗೈದರೆ ಒಟ್ಟು ಕೇರಿಯೇ ಅಂದವಾಗಲಿಲ್ಲವೆ? ಎಂದೂ, ನಮ್ಮ ತಾಯಿಯನ್ನು ನಾವೇ ಹೊಟ್ಟೆಗೆ ಹಾಕದೆ ಕೃಶವಾಗಲು ಬಿಟ್ಟರೆ ಬೇರೆಯವರು ಬೇಗ ಬಂದು ಪೋಷಿಸುತ್ತಾರೆಯೇ? ಎಂದೂ, ಅವರು ಆಗಾಗ ಆವೇಗದಿಂದ ವಾದಿಸುತ್ತಿದ್ದುದು, ಎಚ್ಚರಿಸುತ್ತಿದ್ದುದು, ನನಗೆ ಚೆನ್ನಾಗಿ ಜ್ಞಾಪಕ. ಕನ್ನಡನಾಡಿನ ಕಲ್ಯಾಣವೆನ್ನುವುದರಲ್ಲಿ ಅವರ ಅರ್ಥವಾವುದು? ಕನ್ನಡಿಗರು ನಿದ್ರೆಯಿಂದೇಳಬೇಕು, ಜಡತ್ವವನ್ನು ಕೊಡಹಬೇಕು; ಅಂಧ ಸಂಪ್ರದಾಯಗಳನ್ನು ಕಳೆದುಕೊಂಡು, ವಿಚಾರಪರರಾಗಿ, ಸತ್ವಶಾಲಿ

ಗಳಾಗಬೇಕು. ಜನತೆಯನ್ನು ಪ್ರಚೋದಿಸಿ, ಬೆನ್ನು ತಟ್ಟಿ, ಶ್ರೇಯಸ್ಸಿನ ಮಾರ್ಗಕ್ಕೆ ಕೊಂಡೊಯ್ಯುವುದು ನಾಡಿನಲ್ಲಿ ಓದಿದವರ, ನಾಯಕರ, ಗುರುತರವಾದ, ಅಲಕ್ಷಿಸಲಾಗದ ಜವಾಬ್ದಾರಿ. ಈ ದೊಡ್ಡ ಕೆಲಸವನ್ನು ಪೂರೈಸಲು, ಹಿಂದಿನ ಕನ್ನಡ ಕಾವ್ಯಗಳನ್ನೆಲ್ಲಾ ವಿವೇಕವಾಗಿ ಪಠಿಸಿ, ಜನರಲ್ಲಿ ಅವನ್ನು ವಿವೇಚನೆಯಿಂದ ಬಳಕೆಗೆ ತರಬೇಕು; ಪ್ರಪಂಚದ ಉತ್ಕೃಷ್ಟ ಗ್ರಂಥಗಳನ್ನು—ಪ್ಲೇಟೋ, ಗ್ರೀಕರ ರುದ್ರನಾಟಕ, ಷೇಕ್ಸ್‌ಪಿಯರ್, ಕಾರ್ಲೈಲ್, ಇತ್ಯಾದಿ—ಸುಲಭವಾಗಿ ಸರಲವಾಗಿ ಕನ್ನಡಿಸಿಕೊಡಬೇಕು; ಹೊಸ ಕಾಲಕ್ಕೆ ತಕ್ಕ ಪುಸ್ತಕಗಳನ್ನು ಸದುದ್ದೇಶದಿಂದ, ಕಷ್ಟಪಟ್ಟು, ರಚಿಸಬೇಕು;—ಇಂತು ಕನ್ನಡ ಜನತೆಯ ಏಳಿಗೆಯ ಸಾಧನೆ. ಇದು “ಶ್ರೀ” ಯವರು ಪುನಃ ಪುನಃ ಜಪಿಸಿ, ಜಪಿಸಿ, ಬೆಂಡಾಗುತ್ತಿದ್ದ ಮಂತ್ರ. ಇಂಥಾ ಅಭಿಪ್ರಾಯಗಳು ಈಗ ಸರ್ವಸಾಮಾನ್ಯವಾದ ಸೊತ್ತಾಗಿ ಹೋಗಿವೆ. ಆದರೆ ಮೂವತ್ತೈದು ನಲವತ್ತುವರ್ಷಗಳ ಹಿಂದಿನ ಪರಿಸ್ಥಿತಿಯನ್ನ, ಮೌಢ್ಯವನ್ನ, ಹಗೆತನವನ್ನ, ಕೊಂಚ ಲೆಕ್ಕಿಸೋಣ. ಆಗಿನ ಸನ್ನಿವೇಶದಲ್ಲಿ; ಇಂಗ್ಲಿಷ್ ಭಾಷೆ ಸಾಹಿತ್ಯಗಳ ಸಾಮ್ರಾಜ್ಯ ಅಬಾಧಿತವಾಗಿ, ಆಡಂಬರದ ಅಟ್ಟಹಾಸದಲ್ಲಿ, ನೆಲೆಸಿದ್ದಾಗ; ಪಾಶ್ಚಾತ್ಯ ಪದ್ಧತಿಗಳು ವಿದ್ಯಾವಂತರನ್ನು ಪರವೇಶ್ಯೆಯರಂತೆ ಅಪಹರಿಸಿ ಗುಲಾಮಗಿರಿಯಲ್ಲಿಟ್ಟಿದ್ದಾಗ: ನೆರೆಹೊರೆಯವರ ಇಷ್ಟಮಿತ್ರರ ವೈರಕ್ಕಾಗಲೀ ವಾದಕ್ಕಾಗಲೀ ಲೇವಡಿಗಾಗಲೀ ನ್ಯಾಯಕ್ಕಾಗಲೀ ಬೆದರದೆ, ಕನ್ನಡವನ್ನು ಕುರಿತು ಹೀಗೆ ಕುದ್ದುಕೊಂಡು ಕನ್ನಡ ಸೇವೆಯ ಪ್ರತಿಜ್ಞೆಯನ್ನು ಎದೆಯ ಗುಹಾಂತರದಲ್ಲಿ ನಿಶ್ಚಲವಾಗಿ ನೆಟ್ಟುಕೊಳ್ಳುವುದು ತಾತ್ಕಾಲಿಕ ಹೆಡ್ಡತನ, ಉತ್ತರೋತ್ತರ ದೊಡ್ಡತನ, ಅಲ್ಲವೆ! ಆ ಭಾರಿ ಆಶಯಕ್ಕಾಗಿ ಎಷ್ಟೊಂದು ಕಾಲ, ಎಷ್ಟು ವಿಧದಲ್ಲಿ, ಹೇಗೆ ದುಡಿದರು ನಮ್ಮ “ಶ್ರೀ” ಯವರು! ಅಲ್ಲಿ ಇಲ್ಲಿ ಎಲ್ಲ ಕಡೆಯಲ್ಲೂ ಸುತ್ತಾಟ; ಮೇಲಿಂದ ಮೇಲೆ ಸಮಿತಿ ಸಭೆ ಸಮ್ಮೇಳನ; ಒಂದು ಭಾಷಣ ಮುಗಿದ ಘಳಿಗೆ ಮತ್ತೊಂದು ಭಾಷಣ; ಘಂಟೆಗಟ್ಟಲೆಯ ಉಪನ್ಯಾಸ; ಹತ್ತಾರು ಗಣ್ಯವ್ಯಕ್ತಿಗಳನ್ನು ಭೇಟಿ ಮಾಡುವುದು; ನೂರಾರು ಮಾನ್ಯಮಂದಿಗೆ ಭೇಟಿ ಕೊಡುವುದು; ಅಕ್ಷರಪ್ರಚಾರ, ಲಿಪಿಸುಧಾರಣೆ: ವಯಸ್ಕರ ಶಿಕ್ಷಣ; ಮೊದಲನೇ ತರಗತಿಯಿಂದ ಎಂ.ಎ. ತರಗತಿಯವರೆಗೆ ಕನ್ನಡ ಪಠ್ಯಪುಸ್ತಕಗಳ ಪರಿಷ್ಕರಣ; ವಿಶ್ವವಿದ್ಯಾನಿಲಯದಲ್ಲಿ ಕನ್ನಡಕ್ಕೆ ಸಂಬಂಧಿಸಿದ ಸೂಕ್ಷ್ಮ

ವ್ಯವಹಾರಗಳು ; ಸಾಹಿತ್ಯ ಪರಿಷತ್ತಿನ ಹಲವಾರು ಜಟಿಲ ಸಮಸ್ಯೆಗಳು; ಒಂದು ಮಾತಿನಲ್ಲಿ ಸಂಕ್ಷೇಪಿಸುವುದಾದರೆ, ಈಗತಾನೆ ಮುಗಿದ ತಲೆಮಾರಿನ ಕರ್ನಾಟಕದ ಎಲ್ಲ ಪ್ರಗತಿ ಪ್ರಯತ್ನಗಳಿಗೂ ಅವರು ಚೈತನ್ಯದುಸಿರು, ಜೀವರಕ್ತ, ವಾಹಕ ಶಕ್ತಿಯಾಗಿದ್ದರು. ಅದೆಲ್ಲಿ ಅವರಿಗೆ ಬಿಡುವು ಸಿಕ್ಕುತ್ತಿತ್ತೋ, ಅದೆಂತು ಅವರು ಬಿಡುವು ಮಾಡಿಕೊಳ್ಳುತ್ತಿದ್ದರೋ, ಕಾಲಾಧಿಪತಿಯೇ ಬಲ್ಲ! ಒಂದು ಗಮನಾರ್ಹವೂ ಸಂತೃಪ್ತಿಕರವೂ ಆದ ವಿಚಾರ. ಕಾಲೇಜಿನ ಅಧ್ಯಾಪಕ ವೃತ್ತಿಯಲ್ಲಿ ಅವರ ಅಲಸಿಕೆಯನ್ನಾಗಲೀ ನಿರುತ್ಸಾಹವನ್ನಾಗಲೀ ಯಾವ ಹೊತ್ತೂ ಕಂಡವರಿಲ್ಲ. ಒಂದು ವಾರಕ್ಕೆ ಇಷ್ಟೆಂದು ಗೊತ್ತಾದ ಎಂಟು ಹತ್ತು ಘಂಟೆಗಳ ಬೋಧನ ಹಾಗಿರಲಿ; ಅವಕ್ಕಿಂತ ಎಷ್ಟೋ ಹೆಚ್ಚು ಘಂಟೆಗಳ ಕಾಲ ಅವರು ಅತ್ಯಂತ ಒಲವಿನಿಂದ ಗೆಲವಿನಿಂದ ತಮ್ಮ ಪುಣ್ಯವಂತ ವಿದ್ಯಾರ್ಥಿಗಳಿಗೆ ಪಾಠ ಹೇಳುತ್ತಿದ್ದರು. ಅವರಂಥಾ ಕಾರ್ಯ ತತ್ಪರರು ಮತ್ತೆಲ್ಲಿ ? ಪತ್ನೀವಿಯೋಗವಾದ ಮಾರನೆಯ ದಿವಸ ಅವರು ಕಾಲೇಜಿಗೆ ಬಂದು ಎಂದಿನಂತೆ ಉಪನ್ಯಾಸಮಾಡಿದ ಆಶ್ಚರ್ಯ ಸಂಗತಿ ಕೆಲವರ ನೆನಪಿನಲ್ಲಿರಬಹುದು. 'ರಜ ತೆಗೆದುಕೊಳ್ಳಿ, ಸ್ವಲ್ಪ ವಿಶ್ರಾಂತಿ ಪಡೆಯಿರಿ' ಎಂದರೆ ಅವರು 'ರಜ ತೆಗೆದುಕೊಂಡು ನಾನೇನು ಮಾಡಲಿ ?' ಎನ್ನುತ್ತಿದ್ದರು. ಪಿತೃಗಳ ಆರಾಧನೆ ಭಾನುವಾರ ಬಾರದೆ ಹೋಗುತ್ತಲ್ಲ, ಎಂದು ಅವರು ಕಳವಳಿಸಿದ್ದುಂಟು. ಬಲಭುಜದ ಮೂಳೆ ಮುರಿದಿದ್ದಾಗ, ಬಹು ಕಷ್ಟದಿಂದ, ದಟ್ಟಿಪಂಚೆ ಶರಟು ಮೇಲೊಂದು ಕರಿಯ ಗೌನು ತಲೆಗೊಂದು ಟೋಪಿಯ ವಿಚಿತ್ರ ಉಡುಪನ್ನು ಧರಿಸಿ, ಕಾಲೇಜಿಗೆ ಬಂದು, ಎಡದಕೈಯಲ್ಲಿ ಪ್ರಯಾಸದಿಂದ ಷೇಕ್ಸ್‌ಪಿಯರ್ ನಾಟಕವನ್ನು ಹಿಡಿದುಕೊಂಡು, ಪಾಠ ಹೇಳಿದ ಪವಾಡವನ್ನು ಕಣ್ಣಾರೆ ಕಂಡವರಿದ್ದಾರೆ. ಹಿದೊಂದು ಗುಣದ್ಯೋತಕವಾದ ಸ್ವಾರಸ್ಯ ಕಥೆ. ಪ್ರಾಯಶಃ ಆ ಪ್ರಸಂಗದಲ್ಲಿ "ಶ್ರೀ"ಯವರು ಒಂದೆರಡು ತಿಂಗಳು ರಜ ಬೇಡುತ್ತಿದ್ದರು. ಅವರಿಗಾದ ಅಪಘಾತವನ್ನು ಕೇಳಿ, ಕಾಲೇಜಿನ ಮುಖ್ಯಸ್ಥ ಸೆಲ್, ಅವರ ಮನೆಗೆ ಹೋಗಿ, ಅವರು ಮಲಗಿದ್ದ ಕೋಣೆಯೊಳಕ್ಕೆ ಕಾಲಿಟ್ಟೊಡನೆ, "ಸರಿ, ಕಾಲೇಜಿನ ನಿಮ್ಮ ಪಾಠಗಳಿಗೆ ಏರ್ಪಾಡೇನು ?" ಎಂದನಂತೆ. ಅತಿ ಸೂಕ್ಷ್ಮ ಪ್ರಕೃತಿಯ "ಶ್ರೀ"ಯವರು ತಕ್ಷಣ, "ನಿಮಗೇಕೆ ಚಿಂತೆ, ಸ್ವಾಮಿ, ನನ್ನ ಪಾಠಗಳನ್ನು ನಾನೇ ಮಾಡುತ್ತೇನೆ!" ಎಂದು ಉತ್ತರವಿತ್ತರು.

ಮೊದ್ದು ಸೆಲ್ಲಿಗೆ ಆ ಅಣಕ ಅರ್ಥವಾಗುವುದುಂಟೆ? ಆದರೂ ಅವನು ಆಗ ಭೂಮಿಗಿಳಿದು ಹೋಗಿರಬೇಕು. ಪರಿಹಾಸಕ್ಕಾಗಿ "ಶ್ರೀ"ಯವರು ಒಂದೊಂದು ವೇಳೆ ನುಡಿಯುತ್ತಿದ್ದರು: "'ಗುರು' ದೊಡ್ಡ ಹೆಸರು; ನಾವು ಸಂಬಳದ ಉಪಾಧ್ಯಾಯರು." ಸಂಬಳದ ಉಪಾಧ್ಯಾಯರಲ್ಲಿ ನೂರಕ್ಕೆ ಐವತ್ತು "ಶ್ರೀ"ಯವರ ಮೇಲ್ಪಂಕ್ತಿಯನ್ನು ಅನುಸರಿಸಿದರೆ ನಮ್ಮ ದೇಶವನ್ನು ಹಿಡಿಯುವವರಾರು! ಮೈಸೂರಿನಲ್ಲಿ ಪ್ರಾಧ್ಯಾಪಕವೃತ್ತಿಯಿಂದ ನಿವೃತ್ತರಾದಮೇಲೂ ಅವರು ಧಾರವಾಡಕ್ಕೆ ಧಾಳಿಸಿ, ಕಾಲೇಜೊಂದರ ಮುಖ್ಯಸ್ಥರಾಗಿರಲಿಲ್ಲವೆ? ಅಷ್ಟೇಕೆ: ಅಧ್ಯಾಪಕ ನಿಲುವಂಗಿ ಸಹಿತ ತಾನೆ ಅವರು ವಿಧಿಮುಖವನ್ನು ಹೊಕ್ಕದ್ದು! ಯಾವ ದರ್ಜೆಯ ಜೀತವಾದರೂ ಜೀತಗಾರರಲ್ಲಿ ಮೂರು ವಿಧ; ತೆಗೆದುಕೊಳ್ಳುವ ಶುಲ್ಕಕ್ಕಾಗಿ, ಅದರ ಅಳತೆ ಯಷ್ಟುಮಾತ್ರ, ಕೃಷಿಗೈಯುವ ಊನಮನವರ ದೊಡ್ಡಗುಂಪು; ಬೇರೆಹವ್ಯಾಸ ದಲ್ಲಿ ಮಗ್ನರಾಗಿಯೋ, ಸೋಮಾರಿತನದಲ್ಲಿ ಬಿದ್ದುಕೊಂಡೋ, ಅಂತು ಇಂತು ಕೆಲಸಮಾಡದೆ 'ಪಗಾರ' ದೋಚುವ 'ಅದೃಷ್ಟಶಾಲಿ'ಗಳ ಸಣ್ಣ ಗುಂಪು; "ಶ್ರೀ"ಯವರಂತೆ ದುಡ್ಡಿನ ಹಂಬಲನ್ನು ಸಂಪೂರ್ಣವಾಗಿ ಕಳಕ್ಕೊಂಡು, ಕೇವಲ ಆತ್ಮವಿಮೋಚನೆಗಾಗಿ, ದೇಹವನ್ನು ದಂಡಿಸುವವರು ಅಲ್ಲೊಬ್ಬ ಇಲ್ಲೊಬ್ಬ. ಮೈ ಮನಸ್ಸನ್ನು ಮನ್ನಿಸದೆ, ಒಂದು ಕ್ಷಣ ಕುಳ್ಳಿರಲೂ ಒಲ್ಲದೆ, ಕರ್ಮನಿರತರಾಗುವುದು ಧ್ಯೇಯಜೀವಿಗಳ ಹುಚ್ಚು. ಸ್ವಾಮಿ ವಿವೇಕಾನಂದ ರನ್ನು "ದೇವರೆಂದರೆ ನಿನಗೆ ಮತಿಭ್ರಮೆಯೆನ್ನುತ್ತಾರೆ: ಅದೇತಕ್ಕೆ ಹಾಗೆ?" ಎಂದೊಬ್ಬ ಅಮೇರಿಕದವ ಆಕ್ಷೇಪಿಸಲು, ಸ್ವಾಮಿಜಿ ಜವಾಬುಕೊಟ್ಟರಂತೆ: "ಅಹುದು: ಕೆಲವರಿಗೆ ಹೆಂಗಸೆಂದರೆ ಹುಚ್ಚು; ಕೆಲವರಿಗೆ ಮದ್ಯವೆಂದರೆ ಹುಚ್ಚು; ನನಗೆ ದೇವರೆಂದರೆ ಹುಚ್ಚು, ಅಷ್ಟೆ!" "ಶ್ರೀ"ಯವರನ್ನು ಕನ್ನಡದ ಬುದ್ಧಿಗೇಡಿಯೆನ್ನೋಣವೆ, ನಮ್ಮನ್ನು ಮಂದಬುದ್ಧಿಗಳೆಂದು ಕೊಳ್ಳೋಣವೆ?

ಇಂಥಾ ಭಾರಿ ಹೊಣೆಗಾರಿಕೆಯ, ಅಧಿಕ ಕಷ್ಟದ, ಅತ್ಯಗತ್ಯವಾದ ಮಹತ್ಕಾರ್ಯವನ್ನು ಎಸಗುವಾಗ, ನಾನಾ ತೊಡರುಗಳು, ಲೌಕಿಕ ದಾಕ್ಷಿಣ್ಯಗಳು, ಧರ್ಮಸಂಕಟಗಳು, ಚಿತ್ತ ಚಾಂಚಲ್ಯಗಳು, ಹೃದಯ ದೌರ್ಬಲ್ಯಗಳು, ಕ್ಷುದ್ರ ಬಾಧೆಗಳು, ತಬ್ಬಿಬ್ಬುಗಳು, "ಶ್ರೀ"ಯವರಿಗೆ ಒದಗಿಬಂದುದು ಪ್ರಕೃತಿವಿಲಾಸ. ಭಿನ್ನರುಚಿಗಿಂತ ಭಿನ್ನಾಭಿಪ್ರಾಯ

ಸಮಾಜದಲ್ಲಿ ಹೆಚ್ಚು ಅನರ್ಥಕರ. ಅವರಲ್ಲಿಯೂ ಭರತವರ್ಷ ರಾಜಕೀಯ ಸ್ವಾತಂತ್ರ್ಯವನ್ನು ಗಳಿಸಲು ಅಸಮಾನ ಹೋರಾಟ ಹೂಡಿದ್ದ ಉತ್ಕಟ ಸಮಯದಲ್ಲಿ, ಗೊಂದಲಗಳ ಪ್ರಮಾಣ, ಸಂಖ್ಯೆಗಳನ್ನು ಬಣ್ಣಿಸಲಾದೀತೆ? "ಶ್ರೀ"ಯವರು ಎಲ್ಲವನ್ನೂ ಎದುರಿಸಿ, ವಿಜಯಶಾಲಿಗಳಾದರೆಂದು ಭಾವಿಸುವುದು ಸಲ್ಲದ ಉತ್ಪ್ರೇಕ್ಷೆ. ಒಂದೆರಡು ಅಂಶಗಳಲ್ಲಿ ಅವರದ್ದು ಹಿನ್ನಡೆಯೇ ಹೊರತು ಮುನ್ನಡೆಯಲ್ಲ; ಒಂದೆರಡು ವಿಚಾರಗಳಲ್ಲಿ ಅವರ ಚಿತ್ತಕ್ಕೆ ನಿಶ್ಚಲತೆ ಪ್ರಿಯ, ಚಲನೆ ಅಪ್ರಿಯ. ಕೊರತೆಕಾಣದ ನಯ ವಿನಯ ಅವರಲ್ಲಿ ಮನೆಮಾಡಿಕೊಂಡಿದ್ದರೂ, ಆ ಕೆಲವು ಅಭಿಮತಗಳ ಬಗ್ಗೆ ಅವರು ಖಂಡಿತವಾಗಿ ಹಟ ತೊಡುತ್ತಿದ್ದರು. ಚಕ್ರವರ್ತಿಗಳಲ್ಲಿ, ಮಹಾರಾಜರಲ್ಲಿ, ಆಡಳಿತದ ಮುಖ್ಯಾಧಿಕಾರಿಗಳಲ್ಲಿ, ಅವರಿಗೆ ಅಚ್ಚಳಿಯದ ನಂಬಿಕೆ, ವಿಶ್ವಾಸ, ಭಕ್ತಿ; ಬ್ರಿಟಿಷರನ್ನು, ಬ್ರಿಟಿಷ್ ಚಕ್ರಾಧಿಪತ್ಯವನ್ನು, ಕುರಿತು ಅವರಿಗೆ ಹೆಗ್ಗೌರವ. ಆದ್ದರಿಂದ ಅವರದ್ದು ದಿಟವಾಗಿ ಸಂಸ್ಕೃತಿಯ ಪುನರುಜ್ಜೀವನ ಪ್ರಯತ್ನವಾದರೂ, ರಾಜಕೀಯ ಆವರ್ತಗಳಲ್ಲಿ ಅವರು ಹೇಗೋ ಸಿಕ್ಕಿಕೊಂಡುಬಿಡುತ್ತಿದ್ದರು. ಮಾತನಾಡುವ ಭರದಲ್ಲಿ ಬಹುಮಂದಿಯನ್ನು ಕೆರಳಿಸುವ ಬಿರುನುಡಿಗಳನ್ನು ಆಡಿಬಿಡುತ್ತಿದ್ದರು. ಅಷ್ಟೇ ಅಲ್ಲದೆ, ಆ ಪಂಗಡ ಈ ಪಂಗಡದವರೊಡನೆ ಬೆರೆತು, ಮಾತುಕಥೆ ವ್ಯವಹಾರ ವಿಚಾರ ವಿನಿಮಯ ನಡೆಸಬೇಕಾಗಿ ಬರುತ್ತಿದ್ದುದರಿಂದ, ಆಯಾ ಮತೀಯರಿಗೆ ರುಚಿಸುವಂಥಾ ಅತ್ಯುಕ್ತಿಯನ್ನೂ ಆತ್ಮನಿರಾಕರಣೆಯನ್ನೂ ಉಚ್ಚರಿಸಿಬಿಡುತ್ತಿದ್ದರು. "ಆ ಪಂಪನೆಲ್ಲಿ, ಈ ಗಾಂಪನೆಲ್ಲಿ?" "ಹರಿಹರ ಕನ್ನಡ ಜಾಣನೂ ಅಹುದು, ಕನ್ನಡ ಪ್ರಾಣನೂ ಅಹುದು." "ಶ್ರೀ"ಯವರ ಆತ್ಮ ಮುಡಿಪಾಗಿದ್ದದ್ದು ಅತ್ಯುನ್ನತ ಧ್ಯೇಯಗಳಿಗೆ, ರವೆಯಷ್ಟೂ ಮುಕ್ಕಾಗದ ಸರ್ವಾಂಗಸುಂದರವಾದ ಅಭಿವೃದ್ಧಿಗೆ, ಪರಿಪೂರ್ಣತೆಗೆ. ಅವರ ಈ ಪದ ಮುದ್ದಲೆಯನ್ನು ಲಾಲಿಸಿ, "ತಾರತಮ್ಯ ಜ್ಞಾನವುಳ್ಳವರು ಯಾರು ತಾನೇ ಕೀಳನ್ನು ಮೇಲೆಂದೂ, ಸಾಮಾನ್ಯವಾದದ್ದನ್ನು ಉತ್ಕೃಷ್ಟವೆಂದೂ, ಕಳಂಕಮಿಶ್ರವಾದದ್ದನ್ನು ಪರಿಶುದ್ಧವೆಂದೂ, ಅರ್ಧಪಕ್ವವಾದ ಕಲಾಚಾತುರ್ಯವನ್ನು ಪೂರ್ಣಸಂಸ್ಕೃತಕಲೆಯ ಪರಮಪದವೆಂದೂ ಹೇಳಲಾದೀತು?" "ನಮ್ಮದು, ಆದದ್ದರಿಂದ ಹೆಮ್ಮೆಯದು ಎಂಬ ದುರಭಿಮಾನವನ್ನು ಬಿಡೋಣ. ತಾರತಮ್ಯವನ್ನು ಬಲ್ಲ ವಿಮರ್ಶೆಯನ್ನು ಅಭ್ಯಾಸ

ಮಾಡೋಣ. ನೆರೆಮನೆಯ ಮಕ್ಕಳು ಮನೆಯ ಮಕ್ಕಳಿಗಿಂತ ಮುದ್ದಾಗಿದ್ದರೆ, ಹೊಟ್ಟೆ ಉರಿದರೂ, ಅವರ ಚೆಲುವನ್ನು ಒಪ್ಪಿಕೊಳ್ಳೋಣ. ಆಗ್ಗೆ ನಮಗೆ ವಿಸ್ತೀತರಲ್ಲಿ ಮರ್ಯಾದೆ ಹುಟ್ಟುವುದು. ನಿಜವಾದ ಸೌಂದರ್ಯದ ಸರಿಯಾದ ಪರಿಜ್ಞಾನವುಂಟಾಗುವುದು." "ಗಾಳಿ ಬಂದು ತೂರುವಾಗ ಜೊಳ್ಳಾಗಿರುವುದು ಹೋಗುತ್ತದೆ; ಅದಕ್ಕಾಗಿ ವ್ಯಥೆಪಡಬೇಕಾದುದಿಲ್ಲ. ಯಾವುದನ್ನೂ ತೂಕಮಾಡಿ, ವಿಮರ್ಶೆಮಾಡಿ, ಯಾವುದು ಉತ್ತಮ, ಯಾವುದು ಉತ್ತಮವಲ್ಲ, ಯಾವುದು ಹಿತ, ಯಾವುದು ಅಹಿತ, ಎನ್ನುವುದನ್ನು ವಿಚಾರಮಾಡಿ, ಹಿರಿಯರಿಗೂ ದ್ರೋಹಮಾಡದೆ, ನಮಗೂ ಕೆಟ್ಟದಾಗದೆ ಇರುವಂತೆ ಮುಂದಿನ ಏಳಿಗೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಗೆ ತೀರ್ಮಾನಮಾಡಿದರೂ ಒಪ್ಪತಕ್ಕದ್ದಾಗಿದೆ." "ಶ್ರೀ"ಯವರ ಸೂಕ್ತಿಗಳಲ್ಲಿ ನನಗೆ ಅತಿ ಮುದ್ದಾದುದು ಇದು: "ದೋಷಗಳಮೇಲೆ ಎಡವಿ ಎಡವಿ ಬೀಳುವ ನನಗೆ ಯಾವ ಬ್ರಹ್ಮರಾಕ್ಷಸನು 'ಸ್ವಲ್ಪಕ್ಕೆ ತೃಪ್ತನಾಗಬೇಡ'—'ಅಸಂತೋಷಃ ಶ್ರಿಯೋ ಮೂಲಃ' ಎಂದು ಕಿವಿಯಲ್ಲಿ ಊದಿ ಹೋದನೋ ಕಾಣೆ". ಹೀಗೆ ಯಾವ ವಿಷಯವನ್ನಾದರೂ ಘನವಾದೊಂದು ಅಳತೆಗೋಲಿನಿಂದ ಅಳೆಯಬೇಕೆಂದು ಅವರ ಮನಸ್ಸಿನಲ್ಲಿ ಪ್ರಬಲೇಚ್ಛೆ ತಾಂಡವವಾಡುತ್ತಿದ್ದರೂ, ಪ್ರಾಪಂಚಿಕಾಸಕ್ತಿಗಳ ದೆಸೆಯಿಂದ, ಯಾವುದೋ ಕ್ಷಿಪ್ರ ಫಲಸಾಧನೆಗಾಗಿ, ಅವರು ದಾಕ್ಷಿಣ್ಯಕ್ಕೆ ಶರಣುಬೀಳುತ್ತಿದ್ದರು. ಆಗಾಗ ಅವರ ವದನದಿಂದ, ಪೂರ್ವಾಪರ ವಿರುದ್ಧವೆಂದು ತೋರುವ, ಮನವೊಪ್ಪಿಸಲಾಗದ ಹೇಳಿಕೆಗಳೂ, ಅಸಮರ್ಪಕ ಅಭಿಮತಗಳೂ ಹೊರಬರುತ್ತಿದ್ದುವು. ಈ ಕೆಲವನ್ನು ಗಮನಿಸಿ. "ಪಂಪ ರನ್ನ ಕುಮಾರವ್ಯಾಸ ಷಡಕ್ಷರಿ ಮುಂತಾದ ಕನ್ನಡಸಾಹಿತ್ಯ ರತ್ನಗಳನ್ನು ನೀವು ಕೇಳಿದ್ದೀರಿ." "ಹಿಂದಿನ ಕನ್ನಡಸಾಹಿತ್ಯದಲ್ಲಿ ಏನಿದೆ? ನಾನೂ ಮೂವತ್ತುವರ್ಷ ಸಂತತವಾಗಿ ಓದಿ ನೋಡಿದ್ದೇನೆ." ಸಂಸ್ಕೃತ ಕನ್ನಡವನ್ನು ಕೊಚ್ಚಿಹಾಕಿದ ಹಾಗೆ." "ನಮ್ಮ ದಿವ್ಯ ಸಂಸ್ಕೃತವಿದೆ. ಅದರಿಂದ ಹೀರಬಹುದಾದ, ತಂದು ಬೀರಬಹುದಾದ ತಿರುಳು ಅಪಾರವಾಗಿದೆ, ಅನಂತವಾಗಿದೆ." "ವಿಮರ್ಶೆಯ ತಾರತಮ್ಯ ಜ್ಞಾನವಿಲ್ಲದ ಅತಿ ಶ್ಲಾಘನೆ ಬೇಡ." "'ಪ್ರಭುಲಿಂಗ ಲೀಲೆ' ಕನ್ನಡಸಾಹಿತ್ಯದಲ್ಲಿ ಅತ್ಯುತ್ತಮವಾದ ಕಾವ್ಯಗಳಲ್ಲಿ ಒಂದಾಗಿದೆ." "ಕನ್ನಡನಾಡಿನ ಭಾರವನ್ನು ಹೊತ್ತು ಮೈಸೂರು ನಿಂತಿದೆ, ನಮ್ಮ ನಾಲ್ವಡಿ ಕೃಷ್ಣನ

ಮೈಸೂರು !" "ಅಂದು ಚಕ್ರವರ್ತಿಯ ಆಶೀರ್ವಾದ; ಇಂದು ನಮ್ಮನ್ನಾಳುವ ರಾಜರ್ಷಿಗಳ ಉದಾರಪೋಷಣೆ ; ಕನ್ನಡ ಗೆದ್ದೇ ಗೆಲ್ಲುವುದು." "ಈಗ ದೈವಯತ್ನದಿಂದ ಲಭಿಸಿರುವ ಇಂಗ್ಲಿಷಿನ ಶಿಕ್ಷೆಯಲ್ಲೂ, ಇಂಗ್ಲಿಷಿನ ಪೋಷಣೆಯಲ್ಲೂ, ಅದನ್ನು ಬೆಳೆಸಬೇಕು." "ಇಂಗ್ಲಿಷ್ ಸಾಹಿತ್ಯವೇ ಸಂಸ್ಕೃತ ಸಾಹಿತ್ಯದಿಂದ ನಮ್ಮ ಕಾವ್ಯಮಾಲೆಗೆ ಇಳಿದಿರುವ ದೋಷಗಳನ್ನು ಪರಿಹಾರಮಾಡಬೇಕು." "ನಾಯಕನನ್ನು ಬೆನ್ನುಹತ್ತಿ 'ಜಯ'ವನ್ನು ಬಯಸುನವರು ಪ್ರತಿನಾಯಕನ ದೃಷ್ಟಿಯಿಂದ ಅವನ ಅಪಜಯವನ್ನು ನೋಡಬಾರದೇಕೆ ?" "'ಶಾಕುಂತಲ' ರುದ್ರನಾಟಕವಾಗಿಯೆ ಪರಿಣಮಿಸ ಬಹುದಾಗಿತ್ತಲ್ಲವೆ ?"

"ಇವಳ ಸೊಬಗನವಳು ತೊಟ್ಟು,
ನೋಡ ಬಯಸಿದೆ ;
ಅವಳ ತೊಡಿಗೆ ಇವಳಿಗಿಟ್ಟು
ಹಾಡ ಬಯಸಿದೆ."

ಈ ತರದ ನಿಷ್ಠುರ ವಚನ, ತೀವ್ರ ಪ್ರತಿಪಾದನೆ, ಅಸಮಂಜಸ ತತ್ವ, ವಿಚಾರಪೂರಿತವಲ್ಲವೆಂದು ತೋರುವ ಹಳೆಯ ನಂಬಿಕೆ, ವಿಕಟಾಪೇಕ್ಷೆಗಳನ್ನು, ತಮ್ಮದೇ ಆದೊಂದು ಔದ್ಧತ್ಯದಲ್ಲಿ ಅವರು ತುಂಬಿದ ಸಭೆಯೆದುರು ಕಂಠೋಕ್ತವಾಗಿ ಘೋಷಿಸುತ್ತಿದ್ದರು. ಅದರಿಂದ ಜನ, ಜನತೆ ಸಿಟ್ಟಾಗುತ್ತಿದ್ದುದು ಅನಪೇಕ್ಷಿತವಾದರೂ ಅನಿವಾರ್ಯವಾಯ್ತು. "ಶ್ರೀ"ಯವರ ಜೀವನಲಾಂಛನ ಗುರಿ ಗೈಮೆಯೆಲ್ಲವನ್ನೂ ಚೆನ್ನಾಗಿ ಬಲ್ಲವರನ್ನು ಈ ಬಗೆಯ ಹೇಳಿಕೆಗಳು ಎಂದಿಗೂ ಹಿಂಸಿಸುತ್ತಿರಲಿಲ್ಲ. ಸಮಸ್ತ ಸಂಗತಿಗಳ ಸೂಕ್ಷ್ಮಪರಿಚಯ, ಅದರಿಂದ ತಾನಾಗಿ ಉದ್ಭವಿಸುವ ಔದಾರ್ಯ, ಇಲ್ಲದವರಿಗಾದರೋ ಅವು ಸಹಜವಾಗಿ ಅಸಹನೀಯ, ಅತಿ ಸಂಕಟಕರ.

ದಿವಸ ಕಳೆದ ಹಾಗೆಲ್ಲ, ಗುರುವರ್ಯರಿಗೂ ಚಿಂತೆ ಬೆಳೆಯುತ್ತ ಬಂತು. ತಾವು ಹೇಳಿದುದನ್ನು ಕೇಳದವರು ಹೆಚ್ಚಾದರು ; ತಮ್ಮ ಯೋಜನೆಗಳನ್ನು ಒಪ್ಪದವರು ಬಲಗೊಳ್ಳುತ್ತ ಬಂದರು ; "ಕನ್ನಡಿಗರು ಒಡೆದಿದ್ದಾರೆ, ಒಡಕು ಬೆಳೆಯುತ್ತಲೂ ಇದೆ" ಎಂಬ ಕೊರಗು ಅವರಲ್ಲಿ ವೃದ್ಧಿಯಾಯ್ತು. ಅಲ್ಲಿಂದ ಬೇಗ ಬೇಗ, ಅಸಮಾಧಾನ, ಅಪನಂಬಿಕೆ, ಅಧೈರ್ಯ, ಖಿನ್ನತೆ, ಅಶುಭವೀಕ್ಷಣೆ, ಹತಾಶೆಗಳು ಒಂದೊಂದಾಗಿ ಧಾವಿಸಿ ಕವಿದುಬಂದುದರಿಂದ,

"ಶ್ರೀಯವರ ಕಟ್ಟಕಡೆಯ ಘಟ್ಟ ನಿಸ್ಸಂಶಯವಾಗಿ ವಿಷಾದಮಯ ವಾಯ್ತು. ವಿಷಾದಕ್ಕೆ ಕಾರಣವಿರಲಿಲ್ಲ, ಖಂಡಿತ: ಕನ್ನಡ ಜನತೆಯಲ್ಲಾಗಲೀ ಕರ್ನಾಟಕ ಮುಖಂಡರಲ್ಲಾಗಲೀ "ಶ್ರೀ"ಯವರನ್ನು ಕುರಿತು ಇದ್ದ ಪೂಜ್ಯಭಾವಕ್ಕೆ ಯಾವಾಗಲೂ ಎಳ್ಳಷ್ಟೂ ಕುಂದಿರಲಿಲ್ಲ, ಕುಂದು ಬರುವಂತಿರಲಿಲ್ಲ. "ಶ್ರೀ"ಯವರು ಕೈಗೊಂಡ ಮಹಾ ಉದ್ಯಮಗಳಲ್ಲಿ ಮುಖ್ಯವಾದುವೆಲ್ಲ ರೂಪುರೇಖೆಯೊಡಗೂಡಿ ಸಿದ್ಧಿಪಡೆದಿದ್ದುವು. ವಸ್ತುಸ್ಥಿತಿ ಹೀಗಿದ್ದರೂ "ಶ್ರೀ"ಯವರಿಗೆ ಯಾವುದೋ ಅವರ್ಣನೀಯ ವ್ಯಾಕುಲ, ತಳಮಳ, ನಿರಾಶೆ. ಕನ್ನಡ ಸಾಹಿತ್ಯ ಪರಿಷತ್ತಿನ ಆಡಳಿತ ಸೂತ್ರಗಳನ್ನು ಅವರು ಬಿಟ್ಟುಕೊಡುವಾಗ ಪ್ರಸಂಗ ಬಹು ಕಹಿಯಾದ್ದನ್ನು ಅನೇಕರು ಮರೆಯಲಾರರು. ಆಗ ಅವರು ಉದ್ಗಾರಗೈದ ಚರಮವಾಕ್ಯಗಳು, "ಬೀಳ್ಕೊಡಿಂ, ಎನಗೆ ಜೀವಾನಂದಮಾಗಿರ್ದರೆಲ್ಲರ್ ಬೀಳ್ಕೊಡಿಂ, ನಾನ್ ಪೋಗಿ ಬರ್ಪೆನ್ !" ಅವರೇ ಸೃಷ್ಟಿಸಿದ, ಹತಾತ್ಮ ಅಶ್ವತ್ಥಾಮನ ಕಟ್ಟಕಡೆಯ ಸಿಟ್ಟುಸಿರು ! ಅವರ ಮೊದಲಿನ ಮಾತುಗಳು, "ನನ್ನ ಕನ್ನಡದ ಉರುಬಿನಲ್ಲಿ ಕಾವು ನೋವುಗಳಿಗೆ ಎಡೆಕೊಟ್ಟದ್ದೇನೆ. ಕನ್ನಡಕ್ಕಾಗಿ, ಕನ್ನಡ ನಾಡಿಗಾಗಿ. ಹಟಕ್ಕಲ್ಲ, ನಾನು ಕಂಡ ದಿಟಕ್ಕಾಗಿ. ಮರೆತುಬಿಡಿ, ಮನ್ನಿಸಿಬಿಡಿ" ಸೌಮ್ಯವಾಗಿದ್ದುವು, ಸೌಜನ್ಯಪೂರಿತವಾಗಿದ್ದುವು. "ಶ್ರೀ"ಯವರ ನಿಶ್ಚಯವ್ಯಕ್ತಿತ್ವದ ಪರಿಮಳ ಪುಷ್ಪಗಳಾಗಿದ್ದುವು ; ಅವು ಬೇರೆಯಾಗುವ ಅಪ್ರಿಯ ಸಂದರ್ಭವನ್ನು ಪ್ರಿಯಗೊಳಿಸುವ ಮಂತ್ರಶಕ್ತಿಯ ಪ್ರಶಾಂತವಾಣಿ. ಆದರೆ ಚಂಡಾಲ ಮುಂಗೋಪಿ, ಅದೃಷ್ಟಹೀನ ಅಶ್ವತ್ಥಾಮನ, ಆತ್ಮಹತ್ಯೆಯ ಅಂಧಕೂಪಕ್ಕೆ ಬೀಳುತ್ತಿರುವ ಅಶ್ವತ್ಥಾಮನ, ಅಂತಿಮ ಅಪಲಾಪ ! ಆಗ ನಾನು ಮನಗಂಡೆ : ವಿಧಿಯೆಂಬುದು ಬೇರೊಂದಿಲ್ಲ ; ನಮ್ಮ ನಮ್ಮ ಸ್ವಭಾವ, ಆಲೋಚನೆ, ಹವ್ಯಾಸಗಳೇ ನಮನಮಗೆ ವಿಧಿ, ನಮ್ಮ ನಮ್ಮ ನೋವು ನೆಮ್ಮದಿಗಳಿಗೆ ಕಾರಣ ; ಅದರಲ್ಲಿಯೂ ಮುಖ್ಯವಾಗಿ ಮೇಲ್ಮಟ್ಟದ ಮನುಷ್ಯವ್ಯಕ್ತಿಗಳಿಗೆ.

"ಶ್ರೀ"ಯವರ ವ್ಯಸನಕ್ಕೆ ತಾವು ಮನಸ್ಸಿನಲ್ಲಿ ಧ್ಯಾನಿಸಿಕೊಂಡ ಕನ್ನಡಲೋಕ ಮೂರ್ತಿವತ್ತಾಗಲಿಲ್ಲವೆಂಬ ಅತೃಪ್ತಿ, ತಮ್ಮ ನಾಯಕತ್ವದಲ್ಲಿ ಕನ್ನಡಿಗರಿಗೆ ಶಂಕೆಯುಂಟಾಯ್ತೆಂಬ ಅಶಾಂತಿ, ಮತ್ತು ಅವರ ಅತ್ಯಾವೇಶದ ಚಿತ್ತವೃತ್ತಿ ಪ್ರಧಾನ ಹೇತುಗಳು. ಇನ್ನೊಂದು ಪ್ರಬಲ ನಿಮಿತ್ತವಿತ್ತು.

ಅದಾವುದೆಂದರೆ, ಸಾಟಿಯಿಲ್ಲದ ಸಮರ್ಥ ವಾಗ್ಮಿಗಳಾಗಿದ್ದುದೇ ಅಲ್ಲದೆ "ಶ್ರೀ"ಯವರು ಕ್ರಮೇಣ, ಅಪ್ರಯತ್ನಿತವಾಗಿ ಬಹುಶಃ ಅವರಿಗೆ ಗೊತ್ತಿರದ ರೀತಿಯಲ್ಲಿ, ಕಸಬುಗಾರರ ಭಾಷಣಗಾರರಾಗಿಬಿಟ್ಟುದು. "ಶ್ರೀ"ಯವರ ಗುಣ ವೈಶಿಷ್ಟ್ಯ, ಮಹತ್ಪ್ರೌಢಿಮೆ, ಮುಖ್ಯ ವರ್ಚಸ್ಸನ್ನು ಚಿತ್ರಿಸಿಕೊಳ್ಳುವಾಗ, ಅವರ ಇತರ ಗುಣಗಳೂ ಶೀಲಸೌಜನ್ಯಗಳೂ ನಡೆ ನುಡಿಗಳೂ ಹಿನ್ನೆಲೆಗೆ ಸರಿದು ; ಅವರ ವೈಯಕ್ತಿಕ ಜೀವನ, ಗ್ರಂಥಪಠಣ, ಸುಖ ಸಂಕಥೆಗಳೆಲ್ಲವೂ ಗೌಣವಾಗಿಬಿಟ್ಟು ; ಅವರ ವೇದಿಕೆಯ ಜೀವನವೇ ಎತ್ತರವೂ ಪರಿಪುಷ್ಟವೂ ಆಗಿ ಕಣ್ಣು ಮುಂದೆ ನಿಲ್ಲುತ್ತದೆ. ಶ್ರೀಯುತ ಆಲೂರು ವೆಂಕಟರಾಯರು ಒಮ್ಮೆ ಮಾಡಿದ ರಸಪ್ರಾಸ ಸತ್ಯ : "ಶ್ರೀಕಂಠಯ್ಯನವರ 'ಕಂಠಶ್ರೀ' ಇತರರಿಗಿಲ್ಲ." "ಶ್ರೀ" ಯವರು ವಾಗ್ಶ್ರೀಯುತರು, ವಾಕ್ಕೋವಿದರು, ವಾಗ್ವೈಭವಶಾಲಿಗಳು. ವಾಗ್ಮಿತೆ ಯಲ್ಲಿ ಅವರ ಐಹಿಕ ಸಾಹಸಗಳ ಚರಿತ್ರೆ ಅಡಗಿತ್ತು ; ಅವರ ಆತ್ಮದ ಕುರುಹು ಪ್ರತಿಬಿಂಬಿಸಿತ್ತು. ವಾಗ್ವ್ಯವಸಾಯದ ವಿಚಾರದಲ್ಲಿ ನಾನೊಬ್ಬ ನಿರ್ಲಜ್ಜೆಯ ಸಂದೇಹಿ ; ಅದು ವ್ಯರ್ಥವೆಂದು—ತಪ್ಪೊ ನೆಪ್ಪೊ—ಬಲವಾಗಿ ನಂಬಿರುವವರಲ್ಲಿ ನಾನೊಬ್ಬ. ಆದರೆ "ಶ್ರೀ"ಯವರನ್ನು ಸ್ಮರಿಸಿಕೊಂಡಾಗ ಭಾಷಣದ ಸ್ವರೂಪ ಪ್ರಭಾವ ಕಾರ್ಯಸಾಧನೆ ಮಹತ್ತರವೆಂದು ಬೋಧೆ ಯಾಗಿ, ನನ್ನ ಸಂದೇಹ ಶಿಥಿಲವಾಗುತ್ತದೆ ; ಮಾತಿನ ಶಕ್ತಿಯೂ ದೈವ ದತ್ತ, ಪರಿಣಾಮಕರವಾದ ಮಾನವ ಶಕ್ತಿಗಳಲ್ಲಿ ಒಂದು, ಎಂದು ಒಪ್ಪಲೇ ಬೇಕಾಗುತ್ತದೆ. ಇದು ಗುರುವೆಂಬ ವಾಂಛಿಲ್ಯವಲ್ಲ ; ಕ್ಲುಪ್ತ ಮರ್ಯಾದೆಯ ಹೊಗಳಿಕೆಯಲ್ಲ : ತಾರನಮ್ಯವನ್ನರಿತ ಪರಿಶೀಲನೆಯ ಪ್ರಸಾದ. ಆ ವಾಗ್ವಿಜೃಂಭಣೆಯನ್ನು ಇನ್ನೆಲ್ಲಿ ಕಾಣೋಣ ? ಆ ಉಚ್ಚಾರಣೆ, ಆ ಅವ ಧಾರಣೆ ; ಆ ಲಯ, ಆ ಗತಿ : ಆ ಝುರಿ, ಆ ಜಾಣ್ಮೆ ; ಆ ಪದವಿನ್ಯಾಸ ಕಲೆ, ಆ ಆನಂದಲಹರಿಗಳನ್ನು ಇನ್ನೆಂದು ಅನುಭವಿಸೋಣ ? ಪ್ರಥಮ ಶ್ರೇಣಿಯ ಭಾಷಣಕಾರನಿಗೆ ಇರಬೇಕಾದ ಶಾರೀರಿಕ ಮಾನಸಿಕ ಗುಣಮಣಿ ಗಳೆಲ್ಲವೂ "ಶ್ರೀ"ಯವರಲ್ಲಿ ನಿಬಿಡವಾಗಿ, ಅಪೂರ್ವ ಅಲಂಕರಣದಲ್ಲಿ ಕೂಡಿಕೊಂಡಿದ್ದುವು ! ದುಂಡುದುಂಡಾದ, ಮಧ್ಯ ಎತ್ತರದ, ಭವ್ಯ ದೇಹಾ ಕೃತಿ ; ಅಗಲವಾದ, ನಸುಗೆಂಪಿನ, ಗಂಭೀರ ಹಣೆ ; ಉಬ್ಬಿದ ತಿಳಿಗೆಂಪಿನ ಲವಲವಿಕೆಯ ಕೆನ್ನೆಗಳು ; ತೀಕ್ಷ್ಣವೂ ಆಲೋಚನಾಪೂರಿತವೂ

ಅತ್ಯುತ್ಸಾಹಸೂಚಕವೂ ನಗುವನ್ನು ಸೂಸುವುದೂ ಆದ ಉಜ್ಜ್ವಲ ಕಾಂತಿಯ ಕಣ್ಣುಗಳು; ಸ್ವಲ್ಪ ಸಣ್ಣದಾದರೂ ಮುಖಕ್ಕೆ ಮುದ್ದಾಗಿ ಹೊಂದಿಕೊಂಡ ನಾಸಿಕ; ಮಂದಸ್ಮಿತದಿಂದ ಕೂಡಿದ್ದರೂ ದೃಢತೆ ಕಾಠಿಣ್ಯ ಗಳನ್ನು ವ್ಯಕ್ತಪಡಿಸುವ ಸ್ಪಷ್ಟ ತುಟಿಗಳು; ಕೆಳಗಲ್ಲದ ಹಿಂಬದಿಯಿಂದ ಮೇಲಕ್ಕೆದ್ದು, ಕೆಳಗುಳಿಯೊಂದರಿಂದ ಕೊಂಚ ಇಬ್ಬಗೆಯಾದ ನುಣ್ಣನೆಯ ರಂಜಕಗಲ್ಲ; ಎಲ್ಲಕ್ಕಿಂತ ಮಿಗಿಲಾಗಿ, ಲೋಚನಾಗ್ರದಿಂದ ಅವುಡಿನವರೆಗೆ ಇಳಿದುಬಂದು, ಕವುಳುಗಳನ್ನು ಮೂಗು ಬಾಯಿಗಳಿಂದ ಪ್ರತ್ಯೇಕಿಸುತ್ತ, ಗೆಲವಿನಿಂದ ಕೂಡಿದ ಎರಡು ಗೀರುಗಳು; ಒಟ್ಟಿನಲ್ಲಿ ಒಂದು ಸಾರಿ ನೋಡಿ ದರೆ ಸಾಕು, ಪ್ರೇಕ್ಷಕನ ಚಿತ್ತ ಭಿತ್ತಿಯಲ್ಲಿ ಕೊರೆದು ನಿಲ್ಲುವ, ಅಂಬಾರಿ ಆನೆ ಯಂದದ, ಠೀವಿಯ ಮುಖಮುದ್ರೆ; ಏರಲೂ ಬಲ್ಲ, ಇಳಿಯಲೂ ಬಲ್ಲ, ಇಂಪಾದ, ಕುಗ್ಗದ ದನಿ; ತಗಾಗ ಮೇಲಕ್ಕೆದ್ದು, ಪ್ರತಿಪಾದಿಸುವ ಅಂಶ ವನ್ನು ಒತ್ತಿ ಹೇಳುವ ಭಂಗಿಯನ್ನು ತಾಳುವ, ಉಚಿತಾಕಾರದ, ದುಂಡಾದ ಕೈಗಳು; ತಾವರೆಯಂತೆ ಕೆಂಪಾಗಿ ಕೋಮಲವಾದ ಅಂಗೈ; ಹಾಗೆಯೇ ರಕ್ತ ಸೋರುತ್ತವೆಯೋ ಎನ್ನುವಂತೆ ಕಾಣಿಸುತ್ತಿದ್ದ ಶುಭ್ರ ಸುಂದರವಾದ ಹೆಜ್ಜೆಗಳು:—ಇನ್ನಾವ ಶುಭಲಕ್ಷಣವನ್ನು ಬಯಸಬೇಕು? ಆ ಅಂಗೈ ಆ ಅಂಗಾಲನ್ನು ಹತ್ತಿರ ಕುಳಿತು ದರ್ಶಿಸಿದವನು ತಕ್ಕಷ್ಟುಮಟ್ಟಿಗೆ ಧನ್ಯ; ಏತಕ್ಕೆಂದರೆ ಅವುಗಳ ಮೇಲೆ ನಿಷ್ಕಳಂಕಿಯ, ಸಂಯಮಶಾಲಿಯ, ತಪಸ್ವಿಯ, ಗುರುತು ಸ್ವಚ್ಛವಾಗಿ ಒತ್ತಿದಂತಿದ್ದಿತು. ಅದೆಂತೊ, ಅವನ್ನು ಈಕ್ಷಿಸಿದೊಡನೆ ನನಗೆ—ಗುರುವಿಗೆ ಆ ದೇವತೆ ಈ ದೇವತೆಯಲ್ಲಿ ತಾತ್ಸಾರ, ತಿರಸ್ಕಾರವಿದ್ದುದು ನನಗೆ ಗೊತ್ತಿದ್ದರೂ—ಹಠಾತ್ತು ಲಲಿತಾ ಸ್ತೋತ್ರದ ಕೆಲವು ವಾಕ್ಯಗಳು ಮಿಂಚಿ ಮಾಯವಾಗುತ್ತಿದ್ದುವು. ಅದು ಹಾಗಿರಲಿ, ವೇದಿಕೆಯ ಮೇಲೆ ಸಾವಧಾನದಲ್ಲಿ ವಿಹರಿಸುತ್ತ, ಉಪದೇಶಗೈಯಲು ಸರ್ವ ಯೋಗ್ಯವಾದ ವ್ಯಕ್ತಿತ್ವವನ್ನು ಪಡೆದಿದ್ದರು "ಶ್ರೀ"ಯವರು. ಐದು ನಿಮಿಷದ ಔಪಚಾರಿಕ ಪೀಠಿಕೆಯಾಗಲೀ ಮೂರು ಘಂಟೆಯ ದೀರ್ಘ ವ್ಯಾಖ್ಯಾನವಾಗಲೀ ಅದಕ್ಕೆ ತಮ್ಮ ಅಳವು ಆಪುಗಳೆಲ್ಲವನ್ನೂ ಪರಿಶುದ್ಧಾಂತಃ ಕರಣದಿಂದ ನೀಡಿ, ಅದೇ ತಾವು ತಾವೇ ಅದು ಎಂಬ ಆತ್ಮೀಯತೆಯಿಂದ, ಅದನ್ನು ಎಸಗುವ ಚಿತ್ತ ನೈರ್ಮಲ್ಯ, ಮನೋಧಾರ್ಢ್ಯ, ಹೃದಯಾವೇಶ ಅವರಲ್ಲಿ ತುಂಬಿತ್ತು. ತಕ್ಕ ಸಾಧನ ಸಾಮಗ್ರಿಗಳನ್ನು ಸಂಪಾದಿಸಿಕೊಳ್ಳುವ,

ಅವನ್ನು ಸದಾ ಹರಿತವಾಗಿಟ್ಟುಕೊಳ್ಳುವ ನಿಷ್ಠೆಯೂ, ಆ ಕೃಷಿಯಲ್ಲಿಯೇ ತಮ್ಮ ಜೀವನದ ಪ್ರಧಾನ ಸೌಖ್ಯವೆಂಬ ಪ್ರತಿಷ್ಠೆಯೂ ಇದ್ದುವು. ಅಷ್ಟೇಕೆ "ಶ್ರೀ"ಯವರು ಭಾಷಣವನ್ನು ಮಾಡುತ್ತಿಗಲಿಲ್ಲ, ಭಾಷಣವನ್ನು ಬಾಳುತ್ತಿದ್ದರು. ಅವರದೊಂದು ಉಪನ್ಯಾಸವೆಂದರೆ ಕಿವಿಯಲ್ಲಿ ಕೇಳಲು ಮಾತ್ರ ಮಂದಿ ಹೋಗುತ್ತಿರಲಿಲ್ಲ; ಕಣ್ಣು ಕಿವಿ ಚಿತ್ತ ಹೃದಯ ಮನಸ್ಸು ಆತ್ಮವೆಲ್ಲಕ್ಕೂ ಹಬ್ಬಹೊಂದಿಸಿಕೊಳ್ಳಲು ಹಾತೊರೆಯುತ್ತಿದ್ದರು. ಸಭೆಯ ನಿರೀಕ್ಷೆಯನ್ನು ಸಾಧಾರಣವಾಗಿ ಮೀರಿಸುತ್ತಿದ್ದರಲ್ಲವೆ "ಶ್ರೀ"ಯವರು ? ಉಪಾಧ್ಯಾಯನಿಗೂ ಭಾಷಣಕಾರನಿಗೂ ಬೆನ್ನುಹತ್ತಿದ ಭೇತಾಳವೆಂದರೆ, ಉಪನ್ಯಾಸದಲ್ಲಿ ತಲ್ಲೀನನಾಗಕೊಡದೆ, ತಿರುತಿರುಗಿ ಉಲ್ಬಣವಾಗಿ, ನಾಚಿಕೆ ಅಂಜಿಕೆಗಳನ್ನು ಹುಟ್ಟಿಸುವ, ಹುಟ್ಟುತ್ತಲೇ ಬಂದು ರೂಢಮೂಲವಾದ, ಹಾಯಾಗಿರಗೊಡದ ಆತ್ಮಪರಿಜ್ಞಾನ. ತಾನಾರು, ತಾನೆಲ್ಲಿರುವೆ, ತಾನೇನನ್ನಾಡುತ್ತಿರುವೆ, ಎಂಬ ಅರಿವನ್ನು ಎಷ್ಟರಮಟ್ಟಿಗೆ ಸ್ಮೃತಿಯಲ್ಲಿಟ್ಟಿರಬೇಕು, ಎಷ್ಟರಮಟ್ಟಿಗೆ ಸ್ಮೃತಿಯಿಂದಟ್ಟಿರಬೇಕು—ಇದು ವಾಗ್ಮಿಯನ್ನು ತಲ್ಲಣಗೊಳಿಸುವ ತೊಡಕು. ಇವನ್ನು ಬಿಡಿಸುವುದರಲ್ಲಿ ಪ್ರತ್ಯಕ್ಷವಾಗುವ ನೈಪುಣ್ಯ ವಾಕ್ಪಟುವಿನ ವರ್ಗವನ್ನು ಸ್ಥಾಪಿಸಲು ಉತ್ಕೃಷ್ಟ ಸಲಕರಣೆ. "ಶ್ರೀ"ಯವರಿಗಾದರೋ, ಅದು ಸಮಸ್ಯೆಯೇ ಆಗಿರಲಿಲ್ಲ. ಕಾರ್ಯಕ್ರಮದ ಆರಂಭದಲ್ಲಿ ಕೊಂಚ ಕೊಂಚ ಆ ಕಷ್ಟ ತೋರಿಬಂದಂತಿದ್ದರೂ, ಬಹುಬೇಗ ಅವರು ಸಭೆ, ಸನ್ನಿವೇಶ, ಸಮಯ, ವಿಷಯ, ತಾವು ಎಲ್ಲವನ್ನೂ ಸಮತೂಕದ ಸಂಯೋಜನೆಯಲ್ಲಿ ಹದಗೂಡಿಸಿ, ಕೃತಕೃತ್ಯರಾಗುತ್ತಿದ್ದರು.

"ಶ್ರೀ"ಯವರೊಬ್ಬ ಆಶು ಭಾಷಣಕಾರರು ; ಪೂರ್ವಸಿದ್ಧತೆ ಯಾವುದೂ ಅವರಿಗೆ ಬೇಡವಾಗಿತ್ತು ; ವೇದಿಕೆಯನ್ನ ಅವರು ಏರಿದೊಡನೆಯೇ ವಾಗ್ದೇವಿ ಅವರ ನಾಲಗೆಯಿಂದ ನರ್ತಿಸುತ್ತಿದ್ದಳು, -ಎಂಬ ಭಾವನೆ ಹಲವರಲ್ಲಿತ್ತು ; ಈಗಲೂ ಇರಬಹುದು. ಅದು ಒಪ್ಪಲಾಗದ, ಸತ್ಯಾಂಶದಿಂದ ದೂರವಾದ, ಭಾವಾತಿರೇಕದ ನಂಬಿಕೆ. ಸಯನಾಕರ್ಷಕ ವ್ಯಕ್ತಿಗಳು, ಮಾಗಿ ಹಣ್ಣಾದ ಪಾಂಡಿತ್ಯದಿಂದ ಯಥೇಷ್ಟರಾದ ವಿದ್ವಾಂಸರು, ಪೆಂಪಿನ ನುರಿತ ಶಿಕ್ಷಕರು, ನಾಡಿನಲ್ಲೆಲ್ಲ ಅತ್ಯಂತ ಪೂಜ್ಯರು : ಹಾಗಿದ್ದರೂ "ಶ್ರೀ"ಯವರು ಸಾರ್ವಜನಿಕೋಪನ್ಯಾಸದ ಕರೆಯಾಗಲೀ ಪಾಠಪ್ರವಚನದ

ಘಂಟೆಯಾಗಲೀ ಪೂರ್ವ ಪುಷ್ಕಳ ಸಿದ್ಧತೆಯಿಲ್ಲದೆ ಮಂದಿರದೊಳಗೆ ಕಾಲಿಡು ತ್ತಿರಲಿಲ್ಲ. ಕೊನೆಗೆ ಮೋಟಾರುಗಾಡಿಯಲ್ಲಿ ಸಭೆಗೆ ಬರುವಾಗ ಕೂಡ ಪುಠ್ಯಪುಸ್ತಕವನ್ನ, ಮೂವತ್ತು ನಲವತ್ತು ಬಾರಿ ಪಾಠಹೇಳಿದ ಪುಸ್ತಕವನ್ನ, ಐವತ್ತು ಬಾರಿ ವ್ಯಾಖ್ಯಾನಿಸಿದ ವಿಷಯವನ್ನ, ಪುನರಾವರ್ತಿಸಿಕೊಳ್ಳುವುದು ಅವರ ಅಭ್ಯಾಸ, ಸ್ವಭಾವ, ಅಪೇಕ್ಷೆ. ಹಾಗೆ ಮಾಡಿಕೊಳ್ಳದಿದ್ದರೆ ತಮಗೆ ಧೈರ್ಯವೇ ಬರುತ್ತಿರಲಿಲ್ಲವೆಂದು ಅವರು ನನ್ನೊಡನೆ ಹೇಳಿದುದುಂಟು. ಆ ಸೂತ್ರದ ಒಳಗಣ ಅರ್ಥ ಗೋಚರವಾಗಲು ನನಗೆ ಕೆಲವು ವರ್ಷಗಳು ಬೇಕಾಯ್ತು. ಅಲ್ಲದೆ "ಶ್ರೀ" ಯವರು ಮುನ್ನ ನಡಸಿದ ಇಪ್ಪತ್ತು ಇಪ್ಪತ್ತೈದು ಸಂವತ್ಸರಗಳ ಜ್ಞಾನಯಜ್ಞ ಅತ್ಯುತ್ತಮ ಪೂರ್ವಸಿದ್ಧತೆ ಯಲ್ಲವೇ ? ಯಾವೊಂದು ಉಪನ್ಯಾಸವನ್ನಾದರೂ ಅಧಿಕ ಆಸಕ್ತಿಯಿಂದ, ಹೇರಳ ವಿಶ್ವಾಸದಿಂದ, ಏಕಚಿತ್ತದಿಂದ ಎಸಗಬೇಕೆನ್ನುವ ಜಾಯಮಾನ ಅವರದ್ದು. ಭಾಷಣ ಕಾರ್ಯವನ್ನು ಸಪ್ಪೆಯೆಂದಾಗಲೀ, ಹೇಗೋ ಆದ ರಾಯ್ತೆಂದಾಗಲೀ, ಬಲಾತ್ಕಾರದ ಹಂಗೆಂದಾಗಲೀ, ಅವರಾವತ್ತೂ ಭಾವಿಸಿ ದವರಲ್ಲ. ಭಾಷಣವೇ ಅವರ ಬದುಕಾದಂತಿರಲಿಲ್ಲವೆ ? ಆಶ್ಚರ್ಯವೇನು : ಡೆಮಾಸ್ತನೀಸನಿಂದ ಗೋಖಲೆಯವರೆಗೂ ಯಾವ ದೊಡ್ಡ ಭಾಷಣ ಕಾರನೂ ಸಂಪೂರ್ಣ ಸಜ್ಜಿಲ್ಲದೆ ತನ್ನ ಗೆಯ್ಮೆಗೆ ಕೈಹಾಕಲಿಲ್ಲ, ಕೈಹಾಕ ಲೊಲ್ಲ, ಎಂಬುದಕ್ಕೆ ಆತ್ಮಕಥೆಗಳ ಇಡೀ ಭಂಡಾರವೇ ನಿದರ್ಶನ.

"ಶ್ರೀ"ಯವರ ವಿಷಯ ಪ್ರತಿಪಾದನಾಕ್ರಮಕ್ಕೆ ಒಂದು ನೂತನವೂ ವಿಚಿತ್ರವೂ ಆದ ಲಕ್ಷಣ : ವಿಚಾರವಸ್ತುವಿನಲ್ಲಿ ಅಡಕವಾದ ಒಂದಂಶವನ್ನೂ ಬಿಡದೆ ಹೊರಗೆಡಹುವುದರಲ್ಲಿ ಅವರು ನಿಸ್ಸೀಮರು. ಅದನ್ನು ನಾಲ್ಕಾರು ಸಲ ಹೀಗೆ ಜಗ್ಗಿ, ಹಾಗೆ ಎಳೆದು, ಹಿಗ್ಗಲಿಸಿ, ಸಂಕ್ಷೆಪ್ತಗೈದು, ಇತ್ತಲಿಂದ ನೋಡಿ, ಅತ್ತಲಿಂದ ನೋಡಿ, ಪುಷ್ಟಿಗೊಳಿಸುವುದರಲ್ಲಿ ಅವರದು ಒಂದು ಅಸದೃಶ ಕೈವಾಡ. ಸಾಂಸ್ಕೃತಿಕ, ರಾಜಕೀಯ, ಸಾಮಾಜಿಕ, ಧಾರ್ಮಿಕ ಹಿನ್ನೆಲೆಗಳನ್ನು ಅವರು ವಿಶದವಾಗಿ ವಿವರಿಸುತ್ತಿದ್ದ ಕ್ರಮವೂ ನವೀನ ವಾದ್ದು. ಅಲ್ಪದರಲ್ಲಿಯೂ ಸ್ವಲ್ಪದರಲ್ಲಿಯೂ ಅವರಿಗೆ ತಾಳ್ಮೆ ಕಡಮೆ. ಅವರ ಬಾಯಿಂದ ಬರುತ್ತಿದ್ದುದು ಒಂದು ತುಂಡು ಕಾವ್ಯದ ಮೇಲಣ ಲಘು ವಿಮರ್ಶೆಯಲ್ಲ; ಪ್ರತಿಯೊಂದು ಘಂಟೆಯ ಉಪನ್ಯಾಸವೂ ಸಂಸ್ಕೃತಿಯ, ನಾಗರಿಕತೆಯ, ಒಂದೊಂದು ಜಿಜ್ಞಾಸೆಯಾಗಿರುತ್ತಿತ್ತು. ಸಾಹಿತ್ಯದ ಸವಿ

ಹರ್ಷ, ಶಾಸ್ತ್ರದ ಬುದ್ಧಿ ವಿವೇಕವೆರಡರ ಸಮನ್ವಯ ಅವರ ಅಂತರ್ಯದ ಅಭಿಲಾಷೆ. ಸಾಮಾನ್ಯವಾಗಿ ಅವರು ತಮ್ಮ ಸ್ವಂತ ಅಭಿಮತವನ್ನು ಸ್ಪಷ್ಟವಾಗಿ ಉದ್ಘೋಷಿಸುತ್ತಿರಲಿಲ್ಲ. ಎಲ್ಲೋ ಒಂದು ಸಾರಿ ರೆಪ್ಪೆ ಮಿಟುಕಿಸುವುದರಲ್ಲಿ, ಕೊಂಚ ದನಿ ಎತ್ತರಿಸುವುದರಲ್ಲಿ, ಒಂದು ಪಂಕ್ತಿಯನ್ನೊ ಪದವನ್ನೊ ಪುನರುಚ್ಚರಿಸುವುದರಲ್ಲಿ, ಹಗುರವಾಗಿ ತೇಲಿಸಿ ಅದನ್ನು ಸೂಚಿಸುತ್ತಿದ್ದರು. 'ಇದೊಂದೇ ಸ್ವೀಕರಿಸತಕ್ಕ ದರ್ಶನವೇ ? ಇದೇ ಕಟ್ಟಕಡೆಯ ನಿರ್ಧಾರವೇ ?'—ಈ ತರದ ನಿಷ್ಪಕ್ಷಪಾತವಾದ, ರಾಗರಹಿತವಾದ, ದಟ್ಟವಾದ, ವಿಚಾರವಿಚಕ್ಷಣೆಯನ್ನು ಪ್ರಚೋದಿಸುವುದು, ಪ್ರೋತ್ಸಾಹಿಸುವುದು ಅವರ ಉಪದೇಶದ ಸಾರ, ತಿರುಳು, ಸತ್ವ, ಸ್ವಾರಸ್ಯ. "ಧಿಯೋ ಯೋನಃ ಪ್ರಚೋದಯಾತ್", "ನವೋ ನವೋ ಭವತಿ ಜಾಯಮಾನಃ" : ಎಂಬುವೇ ಅಲ್ಲವೆ ಈ ಆಧುನಿಕ ಋಷಿಶ್ರೇಷ್ಠರ ಪ್ರಾಣಮಂತ್ರ ?

ಗುಣಾಧಿಕ್ಯ ಕೆಲವು ಸಾರಿ ಅವಗುಣವಾಗುವುದು ನರನಾಟಕದೊಂದು ಲೀಲೆ. "ಶ್ರೀ"ಯವರೂ ಮನುಷ್ಯಮಾತ್ರರಾದ್ದರಿಂದ ಅವರಲ್ಲೂ ಅಷ್ಟೊಂದು ಹಿತವಲ್ಲದ ಚರ್ಯೆ ಆಗೊಮ್ಮೆ ಈಗೊಮ್ಮೆ ಪ್ರಕಟವಾಗುತ್ತಿತ್ತು. ಭಾಷಣದಲ್ಲಿ ಉದ್ಯುಕ್ತರಾದಾಗ ಕಾಲದ ಆತಂಕವೆಂಬ ನೇಮವನ್ನು ಅವರು ಎಷ್ಟೋ ವೇಳೆ ಧಿಕ್ಕರಿಸಿಬಿಡುತ್ತಿದ್ದರು. ಆ ನಿಮಿತ್ತದಿಂದಲೂ, ಅವರು ಮೊದ ಮೊದಲು ಪಂಪನ "ಆದಿಪುರಾಣ"ವನ್ನು ವಿಲಂಬವಾಗಿ ವಾಚನ—ವ್ಯಾಖ್ಯಾನ ಮಾಡಿದುದರಿಂದಲೂ, ಅವರನ್ನು "ಪುರಾಣಿಕ"ನೆಂದೂ, ಅವರು ಎಸಗುತ್ತಿದ್ದುದು "ಹರಿಕಥೆ"ಯೆಂದೂ ಅಪಹಾಸ್ಯ ಆಡಿದವರುಂಟು. ಅಲ್ಲದೆ, ಮಾತನಾಡುವ ರಭಸದಲ್ಲಿ, ಮಾತುಗಾರಿಕೆಯ ಪರವಶತೆಯಲ್ಲಿ, ಕೆಲವು ಸಾರಿ ಗ್ರಾಮ್ಯ, ಕುಚೋದ್ಯ ಪದಗಳನ್ನು ಬಳಸಲು ಅವರು ಹಿಂದೆಗೆಯುತ್ತಿರಲಿಲ್ಲ. ಒಂದು ಸಲ ಹುಡುಗಾಟಿಕೆಯ 'ಕೊಚ್ಚುಫ್ರೈಡ್' ಎಂಬುವನ್ನು ಉಪಯೋಗಿಸಿದಾಗ, ಸಭಾಧ್ಯಕ್ಷ ಪಂಜೆ ಮಂಗೇಶರಾಯರು ನೊಂದುಕೊಂಡು, ಆಕ್ಷೇಪಣೆ ಎತ್ತಲು, "ಶ್ರೀ"ಯವರು ಮನ್ನಣೆಯಾಚಿಸಿದ್ದುಂಟು. ಇನ್ನೊಂದು ಸಂಗತಿ. ಅವರು ಏನನ್ನ, ಎಷ್ಟನ್ನ, ಎಂತು, ನಿರೂಪಿಸಬೇಕೆಂದು ನಿಷ್ಕರ್ಷಿಸಿಕೊಂಡು ಬಂದಿದ್ದರೂ, ಭಾಷಣಕ್ಕೆ ಬರುತ್ತಿರುವಾಗ ಜರುಗಿದ ಒಂದು ಘಟನೆ, ನೆರವಿಯ ಒಂದು ನಡತೆ, ಸದಸ್ಯ

ರೊಬ್ಬರ ಒಂದು ಪ್ರಶ್ನೆ, ಅವರ ಮನಸ್ಸಿಗೆ ಹೊಕ್ಕು ಕಲಕಿದರಾಯ್ತು, ಅವರ ಆ ದಿನದ ಭಾಷಣವೆಲ್ಲ ಕಹಿಖಾರದಿಂದ ಮಿಳಿತವಾಗಿ, ಸ್ವಾರಸ್ಯ ಕೆಡುತ್ತಿತ್ತು. ಅವರ ಶಿಷ್ಯರಾದ ನಾವು ಸಭೆಯಲ್ಲಿ ಕುಳಿತು, ನಮ್ಮ ನಮ್ಮಲ್ಲಿಯೇ "ಈ ಹೊತ್ತು ಗುರುಗಳಿಗೆ ರೇಗಿಸುವಂಥಾ ಯಾವ ಅನುಭವವೂ ಆಗಿಲ್ಲದಿರಲಿ, ಆಗದಿರಲಿ, ದೇವರೆ!" ಎಂದು ಪ್ರಾರ್ಥಿಸಿಕೊಳ್ಳುತ್ತಿದ್ದೆವು. ಐದು ಹತ್ತು ನಿಮಿಷಗಳಲ್ಲಿ ನಮಗೆ ಗುಟ್ಟು ಗೊತ್ತಾಗಿಬಿಡುತ್ತಿದ್ದಿತು. ಅಲ್ಲಿಂದ ಮೇಲೆ ಅಮೃತ ಸರೋವರದಲ್ಲಿ ಜಲಕೇಳಿ; ಅಥವಾ ಒಂದೊಂದು ಸಾರಿ 'ಅಯ್ಯೋ' ಎನ್ನಿಸುವಷ್ಟು ಅಸಂತೋಷ ಇಕ್ಕಳದ ಹಿಡಿತ! ನಾವೇ ಹೇಳಿಕೊಳ್ಳುತ್ತಿದ್ದೆವು, ಅವರೊಂದಿಗೆ ಹೇಳಿಬಿಡುತ್ತಿದ್ದೆವು: "ಬೀದಿಯ ದಾಸಯ್ಯನ ಹರಟೆಗೇಕೆ ಅಷ್ಟೊಂದು ತವಕ, ಸ್ವಾಮಿ? ತಾವೆಲ್ಲಿ! ಅವನೆಲ್ಲಿ!" ಆದರೆ ಅವರದ್ದು ಮುಟ್ಟಿದರೆ ಮುನಿಯುವ ಮರ್ಜಿ. ಅತಿ ಬೇಗ ಅವರ ಮೃದು ಹೃದಯಕ್ಕೆ ಅಹಿತವಿಡಂಬನ ಚುಚ್ಚಿಕೊಳ್ಳುತ್ತಿತ್ತು, ಅಂಟಿಕೊಳ್ಳುತ್ತಿತ್ತು. ಜೊತೆಗಾರರೊಬ್ಬರು "ನಾವು ಕಾಡುಸಂಪಿಗೆ, ನೀವು ಕಸಿಸಂಪಿಗೆ" ಎಂದದ್ದೂ, ಮತ್ತೊಬ್ಬರು "ಆಕ್ಸ್‌ಫರ್ಡ್ ಪದವಿಯಿಲ್ಲದಿದ್ದರೆ ನಿನ್ನ ಭವಿಷ್ಯ ಮೊಟಕು" ಎಂದದ್ದೂ, ಅವರನ್ನು ಚಿರಕಾಲ ಪೀಡಿಸಿರಬೇಕು. ನುಂಗಿದ ವಿಷಕಣ ಗುಪ್ತವಾಗಿ ಜಠರದಲ್ಲಿ ಉಳಿದುಬಿಟ್ಟಂತೆ; ಎಷ್ಟು ಸಲ ಕಾರಿದರೂ ಹೊರಬೀಳದೆ ಅಸ್ವಸ್ಥ ಮಾಡಿದಂತೆ. "ಶ್ರೀ"ಯವರ ತೀವ್ರ ಪ್ರಾಮಾಣಿಕತನ, ಘನ ಭಾವನೆಗಳಲ್ಲಿ ಅವರಿಗಿದ್ದ ಮಿತಿಯಿಲ್ಲದ ಭಕ್ತಿ, ಅವರ ಪ್ರಕೃತಿಯಲ್ಲಿ ಹುದುಗಿದ್ದ ಛಲಮಿಶ್ರಿತವಾದೊಂದು ಗರ್ವ, ಆ ಉಮ್ಮಳಕ್ಕೆ ಕಾರಣ. ಮತ್ತೊಂದು ಸಂಗತಿಯನ್ನೂ ಮುಚ್ಚಿಡಲೇಕೆ? ಕಾಲಕ್ರಮೇಣ 'ಶ್ರೀ'ಯವರು ಔದ್ಯೋಗಿಕ ಭಾಷಣಕಾರರಾದಂತೆ, ಆ ಕಸಬುಗಾರನ ಗುಣಾವಗುಣದಿಂದ ಭೂಷಿತರಾದಂತೆ; ಹಲ ಕೆಲವರಿಗೆ ಭಾಸವಾಗಲು ಷುರುವಾಯ್ತು. ಯಾರೂ ಕರೆದರೂ, ಎಲ್ಲಿ ಎಂದರೂ, ಎಷ್ಟು ಹೊತ್ತಿನಲ್ಲಾದರೂ, ಮಾತನಾಡಿಬಿಡುವ ವಾಗ್ಚಾಪಲ್ಯ ಬಾಧಿತರೋ ಎಂಬ ಅನುಮಾನ: ಅದು "ಶ್ರೀ"ಯವರ ಉಪನ್ಯಾಸವೋ ಒಬ್ಬ ವಾಚಾಳಿಯ ಒದರಾಟವೋ ಎಂಬ ಶಂಕೆ; ಅವರೀಯುತ್ತಿದ್ದ ರಸದ ಗಂಗೆ, ಔನ್ನತ್ಯದ ಹಿಮಾಚಲ, ಆನಂದದ ಆಕಾಶ, ಎಲ್ಲಿ ಹೋಯ್ತೆಂಬ ಪಶ್ಚಾತ್ತಾಪ. "ಶ್ರೀ" ಯವರ ಒಂದು ಉಪನ್ಯಾಸಕ್ಕಾಗಿಯೋ ಎಂದು ಹುಟ್ಟಿ, ಅದಾದೊಡನೆ

ಅದೃಶ್ಯವಾದ, ಒಂದು "ಷೇಕ್ಸ್‌ಪಿಯರ್ ಸಂಘ"ವನ್ನು ನಾ ಬಲ್ಲೆ. ಏನು ಹೇಳಿದರೂ "ಶ್ರೀ"ಯವರಿಗೂ ಔದ್ಯೋಗಿಕ ಭಾಷಣಕಾರನಿಗೂ ಅಗಾಧ ವ್ಯತ್ಯಾಸ: ಎಷ್ಟು ಸಾಧಾರಣಮಟ್ಟಕ್ಕೆ ಇಳಿದರೂ ಅವರ ನುಡಿಗಟ್ಟಿನಲ್ಲಿ ಜ್ಞಾನ, ಪ್ರತಿಭೆ, ಗಾಢಾನುಭವ ಪ್ರಕಾಶವಾಗಿಯೇ ಆಗುತ್ತಿತ್ತು ; ಒಂದು ಅಪೂರ್ವತೆ, ಅನಿರೀಕ್ಷಿತ ಸೊಗಸು, ಬೇರೆಲ್ಲಿಯೂ ಸಿಗದ ವ್ಯಕ್ತಿ ವೈಶಿಷ್ಟ್ಯ ಕೂಡಿಕೊಂಡೇ ಇರುತ್ತಿತ್ತು. ಮೇಕೆದಾಟಿನ ಚಿಕ್ಕ ಕಮರಿಯಲ್ಲಿ ಹರಿಯು ವಾಗಲೂ ಕಾವೇರಿ ಕಾವೇರಿಯೆ ಅಲ್ಲವೆ? ಅದು ಒತ್ತಟ್ಟಿಗಿರಲಿ. ಈಗ ನಾವು ಗಮನಿಸಬೇಕಾದುದು ಈ ತರದ ಸಂತತವಾಗುದ್ಯೋಗದಿಂದ "ಶ್ರೀ" ಯವರ ಮೇಲಾದ ಪರಿಣಾಮ. ತುಂಬ ಗಡಿಬಿಡಿಗೆ ಅವರು ಸಿಕ್ಕಿ, ಇದು ಹೆಚ್ಚು ಅದು ಕಡಮೆ ಇದು ಮುಖ್ಯ ಅದು ಅಮುಖ್ಯವೆಂಬ ಕುಶಲವಿವೇಚನೆ ಅವರಲ್ಲಿ ನಪುಂಸಕವಾಯಿತು. ಅದರಿಂದ ಅವರಿಗೆ ಕೊನೆಯಲ್ಲಿ ಅನಾವಶ್ಯಕ ವಾದ ನಿರಾಶೆ, ಶೋಕ !

ಬರವಣಿಗೆಯಾಗಲೀ ಭಾಷಣವಾಗಲೀ ಒಂದೇ ಬಗೆಯ ಶೈಲಿ "ಶ್ರೀ"ಯವರ ಹೆಗ್ಗುರುತು. ಅವರಿಗೆ ಸಂಪೂರ್ಣವಾಗಿ ವಶವಾಗಿದ್ದುದು ಮಾತುಗಾರಿಕೆಯ ಶೈಲಿ,—ಕೆಲವು ಸಮಯದಲ್ಲಿ ಅದು 'ಮಾತನಾಡುವ' ಶೈಲಿಯೂ ಅಹುದು—ಗಂಭೀರ ಸಾಮಾನ್ಯ, ನಾಗರಿಕ ಅಶಿಕ್ಷಿತ, ನಿಯಮ ನಿರ್ಬಂಧಗಳ ಹತೋಟಿಯನ್ನು ಅತಿಕ್ರಮಿಸಿದ ಸರಾಗ ಸ್ವತಂತ್ರಶೈಲಿ. ಕನ್ನಡದ ಬಳಕೆಯ ಶಬ್ದಗಳು, ಮರ್ಯಾದೆಗಳು, ದೇಸಿಗಳು, ಸರಲತೆ ಸಾಧಾರಣತೆಗಳು ತಾವಾಗಿ ಬಂದು ಸೇರಿ, ಸಾರವತ್ತಾಗಿ, ರಸವತ್ತಾಗಿ, ಹೃದಯಂಗಮವಾಗುತ್ತಿದ್ದುವು.

"ಹಲವು ಸಾಹಿತ್ಯಗಳನ್ನೆಲ್ಲಾ ನೋಡಿ, ಅನುಭವಿಸಿ, ಸಂಸ್ಕಾರವನ್ನು ಪಡೆಯಬೇಕು ಎಂಬುದಕ್ಕಾಗಿ ಹೇಳಿದೆ, ನಮ್ಮದು, ಆದದ್ದರಿಂದ ಹೆಮ್ಮೆ ಯದು ಎಂಬ ದುರಭಿಮಾನವನ್ನು ಬಿಡೋಣ."

"ಸಂಸಾರವನ್ನು ತೊರೆದ ಸನ್ಯಾಸಿಯ ಕಥೆಯಾದರೂ ಸರಿಯೆ, ಒಂದು ರಾತ್ರಿ ಬೆಳದಿಂಗಳಲ್ಲಿ ಅಲೆತ, ಹಿಂದಿನ ದಿನ ನೀರಿನಲ್ಲಿ ಆಟ, ಎಂದರೆ ಎರಡು ಆಶ್ವಾಸ ಮಲಗಿಹೋಯಿತು ಆ ಕಡೆ."

"ಹೊಸದನ್ನು ಕಲಿಯುವುದರಿಂದ ದೇಶವೂ ಮುಳುಗುವುದಿಲ್ಲ, ಭಾಷೆಯೂ ಕೆಡುವುದಿಲ್ಲ, ಸತ್ಸಂಪ್ರದಾಯವೂ ಅಳಿಯುವುದಿಲ್ಲ. ಅದರಲ್ಲಿ

ಜೀವವಿಲ್ಲದ್ದು ಹೋಗಲಿ, ಬಿಡಿ."

ಆದ್ದರಿಂದ ಅವರ ವಾಕ್ಯಗಳಿಗೆ ಕೊಂಡಿಗೆ ಕೊಂಡಿ ಸೇರಿ ಸರಪಣಿಯಾಗುವ ಸರಣಿ: ಪ್ರಾರಂಭಕ್ಕೊಂದು ಸುಲಭವಾದ ಅವಕಾಶ; ಮುಂದುವರಿಕೆಯ ಪದ್ಧತಿ ತನ್ನದೇ ಆದುದು; ಮುಕ್ತಾಯದ ವಿಚಾರ ಬೇರೆ.

"ಏಕೆಂದರೆ, ನಮ್ಮ ಕವಿಗಳಲ್ಲಿ ಪ್ರಮುಖರಾದವರು ಎಷ್ಟೇ ಪಾಂಡಿತ್ಯದ ಹುಚ್ಚುಹೊಳೆಯ ಸೆಳೆತಕ್ಕೆ ಸಿಕ್ಕಿದ್ದರೂ, ಎಷ್ಟೇ ಶಾಸ್ತ್ರದ ನಿರರ್ಥಕವಾದ ನಿರ್ಬಂಧಗಳಿಗೆ ಕಟ್ಟುಬಿದ್ದಿದ್ದರೂ, ಎಷ್ಟೇ ಆ ಕಾಲದ ಅಭಿರುಚಿಯ ಸಂಕೇತಗಳಿಗೆ ಅಂಧಪರಂಪರೆಯಾಗಿ ಮನ್ನಣೆಯನ್ನು ತೆತ್ತಿದ್ದರೂ, ಎಷ್ಟೇ ತಮ್ಮ ತಮ್ಮ ಮತಸಿದ್ಧಾಂತಗಳನ್ನು ರಾದ್ಧಾಂತಮಾಡಿ, ವಿಸ್ತರಿಸಿ, ಲಂಬಿಸಿ, ಮರಳುಗಾಡಿನಲ್ಲಿ ಬಾಯಾರಿಕೆಯನ್ನಿಂಗಿಸುವ ಹೊಳೆ ಮುಚ್ಚಿಹೋಯಿತೆಂಬಂತೆ ತೀರ್ಥಂಕರರ, ಪುರಾತನ ಭಕ್ತರ, ಅವತಾರಪುರುಷರ, ವೀರರ, ನಾಯಕರ, ದಿವ್ಯ ವಿಗ್ರಹಗಳನ್ನು ಸರ್ವಕಾಲದಲ್ಲಿಯೂ ಸರ್ವರೂ ಮೆಚ್ಚುವಂತೆ ಕಡೆದಿರಿಸಲಾರದೆ ಹೋದರೂ, ಈ ಮತಾಭಿಮಾನಿಗಳಲ್ಲಿ, ಈ ಶಾಸ್ತ್ರ ಪಕ್ಷಪಾತಿಗಳಲ್ಲಿ, ಈ ಪಂಡಿತರಲ್ಲಿ, ಹೊಟ್ಟೆಯೊಳಗೆ ಒಬ್ಬ ಹುಟ್ಟುಕವಿ ಅವಿತುಕೊಂಡಿದ್ದದ್ದರಿಂದ, ಆ ಹುಟ್ಟುಕವಿ ಸರಿಯಾದ, ಸ್ವತಂತ್ರವಾದ, ಸಂಪೂರ್ಣವಾದ, ವಿವಿಧ ಮಹಾನುಭವ ಚೋದಿತವಾದ ಶುದ್ಧ ಕಲಾಜ್ಯೋತಿಯ ಬಿಸಿಲಿನಲ್ಲಿ ಹೊಮ್ಮಿ, ಬೆಳದಿಂಗಳಿನಲ್ಲಿ ಹೂವಾಗದಿದ್ದರೂ, ಆ ಒಳಗಿದ್ದ ನಿಸರ್ಗಕವಿಯ ಪ್ರಭಾವದಿಂದ, ಶುಷ್ಕವಾದ ಅರಣ್ಯರೋದನದ ನಡುವೆ, ಸಮಯಬಂದಕೂಡಲೇ, ಒಂದು ಕ್ಷಣದಲ್ಲಿ ಹೃದಯ ಹಿಗ್ಗಿ, ರಸ ಉಕ್ಕಿ, ಮರುಭೂಮಿಯಲ್ಲಿ ತಣ್ಣೀರಳ ಕೊಳ ಊರಿ ಬಂದಂತೆ, ಸುಗ್ಗಿಯ ಹೊಸ ಮಾವಿನ ಚಿಗುರನ್ನು ಸವಿದ ಕೋಗಿಲೆಯ ಕಂಠ ಇಂಪಾದಂತೆ, ಈ ಪಂಜರದ ಹಕ್ಕಿಗಳು, ಈ ಬಲೆಯ ಜಿಂಕೆಗಳು, ನೆಗೆದು, ನುಡಿದು, ಹಾರಿ, ಹಾಡಿ, ಸರಸ್ವತೀ ಪ್ರಸಾದದ ಪೂರ್ಣ ರಮಣೀಯತೆಯನ್ನು ಸಹೃದಯರಿಗೆ ಅನುಭವ ಮಾಡಿಸಿಬಿಟ್ಟಿರುವರು". ಅಬ್ಬಬ್ಬ ಏನು ವಾಕ್ಯ! ಅಲ್ಪವಿರಾಮದ ಹುಲುಸು ಬೆಳೆ! ಆದ್ದರಿಂದ ಅವರ ಭಾಷಣವನ್ನು 'ಬರವಣಿಗೆ' ಯೆಂದು ಲೆಕ್ಕಿಸಿಕೊಂಡು ಓದಿದರೆ ಅದರ ವಯ್ಯಾರಕ್ಕೆ ಅನ್ಯಾಯ; ಆ ಓದು ವಿಕಾರವಾಗಿ ಕೇಳಿಸಿದರೂ ಕೇಳಿಸೀತು. ಅವರೇ ಒಂದೆಡೆ ಹೇಳಿದ್ದಾರೆ: "ಏನೋ ಚಾಪಲ್ಯದಿಂದ ತಪ್ಪುಮಾಡಿದೆ, ಅದನ್ನು ಬರೆದೆ." ಬಿಳಿಕಾಗದದ ಎಲೆ

ಕಟ್ಟು, ಲೇಖನಿಯ ಅಂಕೆ, ಬರವಣಿಗೆಯ ಹಿಡಿತ, "ಶ್ರೀ"ಯವರಿಗೆ ಸಾಧಾರಣವಾಗಿ ಹೊಲ್ಲ. ಈ ಮನೋಭಾವ ಅವರ ಭಾಷಣ ಲೇಖನಗಳನ್ನು ಸಡಿಲಗೊಳಿಸುವ ಭಯವಿರಲಿಲ್ಲ; ಏಕೆಂದರ ಅವರ ಪದಪ್ರಯೋಗ ಲಯಪೂರ್ಣವಾದದ್ದು. ಅವರು ವಾಕ್ಚತುರರಾಗಿದ್ದುದರಿಂದ, ಅವರ ಒಂದೊಂದು ಭಾಷಣವೂ ಒಂದೊಂದು ಕಾವ್ಯಬಂಧ, ಸಂಗೀತಕೃತಿ, ಕಲಾಸೌಧವಾಗಿರುತ್ತಿತ್ತು. ಅವರ ಭಾಷೆಗೆ ಮೆರವಣಿಗೆಯ ಗಜರಾಜ ಜಗ್ಗು ಹಾಕಿ, ಹೀಗೆ ಹಾಗೆ ಒಲೆದು, ಘಂಟೆಯ ಧ್ವನಿಯೊಡನೆ, ಸಾಗುವ ಗತ್ತು, ಗಾಂಭೀರ್ಯ, ರಾಜವೈಖರಿ. "ಶ್ರೀ"ಯವರು ಕುಮಾರವ್ಯಾಸನ ಹಾಗೆ ಪದಗಳೊಡನೆ, ಪದಗುಮ್ಫನಗಳೊಡನೆ, ಚಕ್ಕಂದವಾಡುತ್ತಿದ್ದರು. ಅವರಲ್ಲಿ ಸ್ವಾಭಾವಿಕವಾಗಿ. ಅಪ್ರಯಾಸವಾಗಿ, ಸುಂದರವಾಗಿ, ಫಲಪ್ರದವಾಗಿ, ಪ್ರಾಸ ಬರುತ್ತಿತ್ತು.

"ತೆರೆ ತೆರೆಯಾಗಿ, ಸೊಂಟಿಸೊಂಟೆಯಾಗಿ, ಏಳಿಸಿ, ಕೇಳಿಸಿ, ಹೇಳಿಸಿ, ಮಹಾಭಾರಾವತಾರವಾಯಿತು."

"ಭಾಷೆ ಭಾಷೆಗೆ ಹೊಯ್ಯುತ್ತಲೇ ಇರಬೇಕು. ರೀತಿ ರೀತಿಗೆ ನೆಯ್ಯುತ್ತಲೇ ಇರಬೇಕು."

"ಆ ಹಳೆ ಎಳೆ, ಈ ಒಳ ಎಳೆ."

"ಜನಗಳ ಕಥೆ ಉಪಕಥೆ ದಂತಕಥೆಗಳಲ್ಲಿ ಹೆಬ್ಬಿದ್ದೇನೋ ಉಬ್ಬಿದ್ದೇನೋ."

"ಆ ನಚ್ಚು, ಆ ಹುಚ್ಚು, ಸಂಪೂರ್ಣವಾಗಿ ಅವರನ್ನು ಬಿಡಲಿಲ್ಲ."

"ಮುನ್ನುಡಿಕಾರನು ಈ ತನ್ನ ಹಿನ್ನುಡಿಯನ್ನು ಬರೆಯುತ್ತಿದ್ದಾನೆ."

ಪ್ರಾಸ ಉಸಿರು ಕಟ್ಟಿ ಸಾಯಿಸುವ ಸುಂಟರಗಾಳಿಯಾಗಬಹುದು, ಚೈತನ್ಯ ತುಂಬಿ ಕುಣಿಸುವ ಜೀವದುಸಿರಾಗಬಹುದು. "ಶ್ರೀ"ಯವರದ್ದು ಎರಡನೆಯ ಬಗೆ. ಬಲವಾದ ಪರಿಣಾಮ ಅವರ ಮಾತಿನ ಗುರಿಯಲ್ಲ, ಪರಿಣಾಮದಲ್ಲಿ ಅವರ ಮಾತು ಬಲಿಷ್ಟ. ಭಾವಪ್ರಮುಖವಾದದ್ದು, ಭಾವಾನ್ವಿತವಾದದ್ದು, ಭಾವಪೂರಿತವಾದದ್ದು, ಅವರ ಮಾತುಗಾರಿಕೆ. ಹೆಬ್ಬಯಕೆ, ಸಮೃದ್ಧ ಶ್ರದ್ಧೆ, ಹುಡುಗರ ಸಂಭ್ರಮ, ಗಾಢ ನಂಬಿಕೆ, ಅವರಲ್ಲಿದ್ದಿತಾಗಿ ಹಾಗಾದದ್ದು ಏನು ಅತಿಶಯ ?

ಜ್ಞಾನಜೀವಿಯ ಬಾಳಿಕೆಯಲ್ಲಿ ಒಂದು ಅರ್ಥವತ್ತಾದ ಬದಲಾವಣೆ

ಆಗಿಯೇ ಆಗಬೇಕೆಂದು ನಿಸರ್ಗ ನಿಯಮ. ಒಂದು ದೃಷ್ಟಿಯಿಂದ ಅದು ಬೆಳವಣಿಗೆಯ ಸಂಕೇತ, ಅನುಭವವೃದ್ಧಿಯ ಕುರುಹು, ಹೆಚ್ಚಿದ ಪರ್ಯಾಲೋಚನೆಯ ಕನ್ನಡಿ. ಇನ್ನೊಂದು ದೃಷ್ಟಿಯಿಂದ ಅದು ಬಿಸಿ ಆವೇಶ ತಣ್ಣಗಾದಂತೆ, ಕೂಡಿಸಿ ಕಟ್ಟಿದ ನಂಬಿಕೆ ಕದರಿ ಚೆಲ್ಲಿದಂತೆ, ಅಂದದ ಕಳೆ ಕುಂದಿದಂತೆ. ಇಂಗ್ಲಿಷಿನ ನಾಣ್ಣುಡಿ ಒರೆಯುತ್ತದೆ: 'ಮನುಷ್ಯನಿಗೆ ಸಂಸಾರದಲ್ಲಿ ಮೊದ ಮೊದಲು ಪದ್ಯ, ಆಮೇಲಾಮೇಲೆ ಗದ್ಯ.' ಈ ವಿಧದ ಮಾನಸಿಕ ಮಾರ್ಪಾಟು ತಪ್ಪಿಸಿಕೊಳ್ಳಲಾಗದ್ದೂ ಅಹುದು, ಅತ್ಯಗತ್ಯವಾದದ್ದೂ ಅಹುದು. ಭಾಷೆಯ ಬಣ್ಣ ಬಣ್ಣ, ಥಟಪಟ, ಅಲಂಕಾರ, ಸಂಪ್ರೌಢಿ, ಆಡಂಬರ, ಯುವಕ ಓದುಗನನ್ನು ಹೆಚ್ಚು ಸೆಳೆಯುವುದು ತರ್ಕಸಮ್ಮತ. ಶಬ್ದ, ಭಾವ, ಅರ್ಥಗಳಲ್ಲಿ ಶಬ್ದ, ಭಾವಗಳ ಕಡೆ ಅವನ ಚಿತ್ತ ಬೇಗ, ಆದರದಿಂದ ಚಲಿಸುತ್ತದೆ. ಮಧ್ಯವಯಸ್ಸಿನಲ್ಲಿ ಅರ್ಥದ ಕಡೆ ಹೆಚ್ಚು ಆದರ, ವಾಗಾಟ್ಟಹಾಸ ಭಾವೋದ್ರೇಕದ ಕಡೆ ಹೆಚ್ಚು ಅನಾದರ. "ಶ್ರೀ"ಯವರ ಉದಾಹರಣೆಯಾದರೋ ಈ ವಿಧಿಗೆ ಅಸಾಧಾರಣ ರೀತಿಯಲ್ಲಿ ನಿಷಿದ್ಧ. ಅವರ ೧೯೧೧-೧೨ ರ ಶೈಲಿ, ಸುಮಾರು ೧೯೨೮-೩೦ರ ಶೈಲಿ, ಮತ್ತು ೧೯೪೦ರ ಈಚಿನ ಶೈಲಿಯನ್ನು ಪರಸ್ಪರ ಹೋಲಿಸಿದರೆ ಕಣ್ಣಿಗೆ ಕಟ್ಟುತ್ತದೆ ಆ ಕೌತುಕ. ಮೊದಲು ಅವರಲ್ಲಿ ಉತ್ಸಾಹ, ಧೈರ್ಯ, ಕೆಚ್ಚು: ಅವುಗಳ ಹಿಂದೆ ಅವನ್ನು ಹಾಳತದಲ್ಲಿಟ್ಟು ಆಳಬಲ್ಲ ವಿವೇಚನಾಶಕ್ತಿ ಮತ್ತು ವ್ಯವಹಾರ ದಕ್ಷತೆ; ಮೇಲಾಗಿ ಪ್ರಪಂಚದ, ಊಹಾಪ್ರಪಂಚದ, ವಿಶಾಲ ಅನುಭವಿಯ ಸಂಯಮ ಮನೋಭಾವ: ಇವೆಲ್ಲವೂ ಕಂಡುಬಂದುದರಿಂದ ಅವರ ಭಾಷೆ ಸುಲಭ, ಸರಳ, ಸತ್ವಪೂರ್ಣ, ಗದ್ಯಕ್ಕನುಗುಣವಾದದ್ದಾಗಿತ್ತು. ಮಧ್ಯಕಾಲದಲ್ಲಿ ಆವೇಶ, ಪಕ್ವವಾದ ತಿಳಿವು, ಜಾಣ್ಮೆ, ಮಹಾತ್ಮೆಗಳು ಕೂಡಿಕೊಂಡು ಓಜೋಯುಕ್ತವಾದ ಶೈಲಿ ಬಂತು. ಅದು ಮಧ್ಯಕಾಲದ ಅನುರೂಪ ಫಲ. ಕಡೆಯ ಘಟ್ಟದಲ್ಲಾದರೋ ಆವೇಶದ ಅತಿಶಯ, ಭಾವದೌರ್ಬಲ್ಯ, ವಿವೇಚನೆಯ ಇಳಿಮುಖಗಳ ದೆಸೆಯಿಂದ ಶೈಲಿ ಕೇವಲ ಸಡಿಲವಾದ್ದಷ್ಟೇ ಅಲ್ಲದೆ, ನಿಯತ ಬಂಧವಿಲ್ಲದೆ, ತೋರಿದ ದಾರಿಯಲ್ಲಿ ಹೋಗುವ, ಪೂರ್ವಾಪರ ಯೋಜನೆ ತಪ್ಪಿ ಯುಕ್ತ ಬೆಳವಣಿಗೆಯಿಲ್ಲದೆ, ರೀತಿರಹಿತ ರೀತಿಯನ್ನು ಪ್ರಕಟಿಸುವ ಚಲ್ಲಾಪಿಲ್ಲಿಯಾದ ಪದರಾಶಿಯಾಯ್ತು. ವಾಕ್ಯದ ಬದಲು ಒಂದೆರಡು ಶಬ್ದ; ಹಾಗೆ ಹಾಗೆ

ನಿಂತ ಪದಗುಂಪುಗಳು ; ಗೂಢ ಹಾಸ್ಯ ; ಅಪ್ರಾಸಂಗಿಕ ಪರಿಹಾಸ ; ಯಾವ ಯಾವುದೋ ಪೂರ್ವ ಕಥಾಸೂಚನೆ ; ಇದ್ದಕ್ಕಿದ್ದಂತೆ ಉದ್ಗಾರ ; ಒದರಾಟ ; ಪದರಾಟ :—ಈ ಬಗೆಯ ಮಾತಿನ ಥಾಟಯನ್ನು ಏನೆಂದು ನಿರ್ದೇಶಿಸೋಣ ? ನನ್ನ ಮಿತ್ರರೊಬ್ಬರು ಅದನ್ನು ಇಂತು ಬಣ್ಣಿಸಿದರು : "ಬಿ.ಎಂ. ಶ್ರೀಯವರ ಚಕ್ಕಳಿಕೆ". ಈ ಶೈಥಿಲ್ಯಕ್ಕೆ, ನಿಶ್ಶಕ್ತಿಗೆ, ಅಡ್ಡಾದಿಡ್ಡಿಗೆ, ಗಮನಗೇಡಿಕೆಗೆ, ಕಾರಣವಾವುದು ? ಮಹಾವ್ಯಕ್ತಿಯ ಪ್ರತಿಯೊಂದು ವಿದ್ಯಮಾನವೂ ಸದೋಷವಾದರೂ ಪರಿಶೀಲನೆಗೆ ಯೋಗ್ಯವಸ್ತು ; ಅದರಿಂದ ಪ್ರಯೋಜನ ಯಥೇಷ್ಟ. "ಶ್ರೀ"ಯವರು ತಮ್ಮ ಪ್ರಯಾಣದ ಕಡೆಯ ಮಜಲಿನಲ್ಲಿ ಹತಾಶೆ ಸಂಕಟಗಳನ್ನು ಬಾಚಿ ತಬ್ಬಿಕೊಂಡರು. ನೊಂದ ಜೀವಕ್ಕೆ ನೋವಿನಲ್ಲಿ ಕೊನೆ. "ಶ್ರೀ"ಯವರಿಗೆ 'ಟ್ರಾಜೆಡಿ' ಅಥವಾ ರುದ್ರನಾಟಕದಮೇಲೆ ಯಾವಾಗಲೂ ವೀರಾಭಿಮಾನ ಇದ್ದಿತಲ್ಲವೆ ? ಅವರ ದರ್ಶನದಲ್ಲಿ, ಮತದಲ್ಲಿ, "ನಮ್ಮ ಸಂಸಾರ ಅನೇಕ ರೀತಿಯಲ್ಲಿ ಟ್ರಾಜೆಡಿ ; ನಮ್ಮ ಜನಾಂಗಜೀವನ ಅನೇಕ ರೀತಿಯಲ್ಲಿ ಟ್ರಾಜೆಡಿ."

ಈ ಕೆಲವು ಸೂಕ್ತಿಗಳನ್ನು ಆಯ್ದುಕೊಂಡು, ಅವನ್ನು ಬಿಡದೆ ಪರ್ಯಾಲೋಚಿಸುತ್ತ, ಅವುಗಳ ತಾತ್ಪರ್ಯವನ್ನು ಹಿಡಿದು ಅನುಷ್ಠಾನಕ್ಕೆ ತರುವುದಲ್ಲವೆ, "ಶ್ರೀ"ಯವರಿಗೆ ನಾವು ಈಯಬಹುದಾದ ಕಾಣಿಕೆ ?

"ಅಂಧಶ್ರದ್ಧೆಯನ್ನು ಬಿಟ್ಟು ಸತ್ಯವನ್ನು ಹುಡುಕೋಣ....'ಆಚಾರ್ಯ ದೇವೋಭವ,' ಎಂದೇ ನಾವು ಕುಳಿತುಕೊಳ್ಳಬೇಕಾದುದಿಲ್ಲ."

"ನಮ್ಮ ಸಮಾಜದ ದುಷ್ಟಮಗತಿ 'ಅತಿಸರ್ವತ್ರ ವರ್ಜಯೇತ್' ಎಂಬ ನಾಣ್ಣುಡಿಯನ್ನು ಮರೆತು ನಾವೆಲ್ಲರೂ ಅತಿ ಮತೀಯರಾದ್ದರಿಂದ ಎಂದು ಹೇಳಬಹುದಲ್ಲವೇ ?"

"ದಯೆ, ಧರ್ಮ, ಸತ್ಯ ಉಂಟು ಎಂದು ನಂಬಿ ನಡೆಯುವವರೂ ಆಸ್ತಿಕರೇ ; ನಡೆಯದವರು ನಾಸ್ತಿಕರೇ, ಏನೇ ನಂಬಿದರೂ."

"'ಅಹಿಂಸಾ ಪರಮೋ ಧರ್ಮಃ' ಎಂಬ ಸೂತ್ರದ ಮೇಲೆ ಕಟ್ಟಿದ ಧರ್ಮಗಳಿಗೆ ಚ್ಯುತಿಯಿಲ್ಲ."

"ಹೊಂದೊಡರೂ ತೊಡರಲ್ಲವೆ ?"

"ಜೀವರಸವೂ ಉಂಟು. ಬರಿಯ ಭ್ರಾಂತಿಯ ಕಸವೂ ಉಂಟು. ಹಿತ್ತಾಳೆಯಿಂದ ಚಿನ್ನ ಕೆಟ್ಟೀತು ; ಕಸದಿಂದ ರಸ ವಿಷವಾದೀತು."

"ಹೊಸಸಾಹಿತ್ಯದ ಮೂಲಮಂತ್ರ : 'ಉದಾರಚರಿತಾನಾಂತು ವಸುಧೈವ ಕುಟುಂಬಕಂ.' ಮಾನುಷಿಕವಾದದ್ದು ಯಾವುದೂ ನನಗೆ ಹೊರಗಲ್ಲ" ಎಂಬ ಪಾಶ್ಚಾತ್ಯರ ಆರ್ಯೋಕ್ತಿ."

"ಎತ್ತಕಡೆಗೂ ಕಣ್ಣುಮುಚ್ಚಬಾರದು, ಎತ್ತಕಡೆಗೂ ಹೃದಯದ ಬಾಗಿಲನ್ನು ಕಿರಿಕಿರಿದು ಮಾಡುತ್ತಾ ಮುಚ್ಚಿಬಿಡಬಾರದು."

"ನಮ್ಮ ಮೈಯಲ್ಲಿ ಹುಟ್ಟಿದ ರೋಗ ನಮ್ಮದಾದರೂ ಕಳೆಯತಕ್ಕ ವಿಷ ; ಹೊರಗಿನ ಕಾಡಿನಿಂದ ತಂದ ಮೂಲಿಕೆ, ಹೊರಗಿನದಾದರೂ ರಕ್ತ ಗತವಾಗಬೇಕಾದ ಅಮೃತ."

"ಕೊನೆಗೆ ನಿಲ್ಲುವುದು ಅಭಿಮಾನವಲ್ಲ, ಸತ್ಯ."

"ಕವಿಯಿಲ್ಲದ ನಾಡು ಕುರುಡು ನಾಡು."

"ಜಳ್ಳನ್ನು ತೂರಿ, ಕಾಳನ್ನು ಕಣಜಕ್ಕೆ ತುಂಬಿ."

"ಯಾವುದಕ್ಕೂ ಒಂದು ಹದ್ದು ಇದೆ ; ಬೊಜ್ಜು ಬಲವಲ್ಲ."

"ವಿಮರ್ಶಕ ಬುದ್ಧಿಗೆ ಕಡಿವಾಣ ಹಾಕಬೇಡಿ."

"ನನ್ನನ್ನೂ ನಿಲ್ಲಿಸಿ ಪ್ರಶ್ನೆಮಾಡಿ, ಪರೀಕ್ಷೆಮಾಡಿ."

ಪ್ರಜಾಪ್ರಭುತ್ವ : "ಅದು ಬರಿಯ ಬಲವಲ್ಲ : ಬರಿಯ ಬಹುಮತವೇ ಅಲ್ಲ ; ಹಕ್ಕುಗಳಿಗಿಂತಲೂ ಹೆಚ್ಚಾಗಿ ಜವಾಬ್ದಾರಿಯನ್ನು ಬಯಸುವ ಬಲ್ಲಾಳುಗಳ ಬಾಳಿಕೆಯ ಆಳಿಕೆ."

ಪ್ರಜಾಪ್ರತಿನಿಧಿಗಳಿಗೆ : "ನೀವು ಜನತೆಯ ಕೆನೆ, ಆಡಳಿತದ ಮೊನೆ."

"ಜನವಾಣಿ ಬೇರು, ಕವಿವಾಣಿ ಹೂವು."

"ಆದರೂ ಯಾವ ಗಳಿಗೆಗೆ ಹೇಗೋ ಮಾನವ ಪ್ರಕೃತಿ."

"ಬೆಲೆ ಜನಸಂಖ್ಯೆಯ ಮೇಲೆ, ವಿಸ್ತೀರ್ಣದಮೇಲೆ, ನಿಂತಿಲ್ಲ. ಬೆಲೆ ಬೆಲೆಯ ಮೇಲೆ ನಿಂತಿದೆ."

"ನಮ್ಮ ಮಾತೇನೂ ನೆನ್ನೆ ಮೊನ್ನೆಯ ಕಾಡುಮಾತಲ್ಲ ; ನಮ್ಮ ಕಾವ್ಯಮಾಲೆ ಓದುಬರಹ ಬರದ ಒಡ್ಡರು ಹೇಳುವ ಕುರುಕುಪದವೂ ಅಲ್ಲ."

"ಕನ್ನಡದ ಬೇರನ್ನು ಕೊಯ್ದು, ಕನ್ನಡನಾಡನ್ನು ಒಂದುಗೂಡಿಸ ಬಹುದೆ? ನಾಡಿಗೆ ಆಗ ಕನ್ನಡತನವೆಲ್ಲಿ? ಇಂಗ್ಲಿಷಿನಲ್ಲಿಯೋ ಹಿಂದಿ ಯಲ್ಲಿಯೋ ಕೆಲಸ ನಡೆಯುವ ಹಾಗಾದರೆ ಬೇರೆ ಒಂದು ಕನ್ನಡ ನಾಡೇಕೆ?"

"ನಮ್ಮ ಅದೃಷ್ಟ ನಮ್ಮ ಕೈಯಲ್ಲೇ ಅಡಗಿದೆ."

"ಕನ್ನಡನಾಡಿಗೆ ಕನ್ನಡವೇ ಗತಿ. ಅನ್ಯಥಾ ಶರಣಂ ನಾಸ್ತಿ. ಸಂಸ್ಕೃತವಲ್ಲ, ಇಂಗ್ಲಿಷಲ್ಲ, ಹಿಂದಿಯಲ್ಲ, ಕನ್ನಡ."

"ಕನ್ನಡ, ನಮ್ಮ ಕನ್ನಡ, ನಮ್ಮ ಹಿರಿಯರ ಕನ್ನಡ, ನಮ್ಮ ಮಕ್ಕಳ ಮೊಮ್ಮಕ್ಕಳ ಕನ್ನಡ."

"ಕುಮಾರವ್ಯಾಸನಲ್ಲಿ ಕನ್ನಡ, ತಿಳಿಗನ್ನಡ, ತಿರುಳ್ಗನ್ನಡ, ಗೆದ್ದಿತು. ಇನ್ನು ಅದಕ್ಕೆ ಭಯವಿಲ್ಲ."

"ಕನ್ನಡ ಬಲು ಸರಳವಾದ ಸುಲಭವಾದ ಭಾಷೆ. ಇದರ ಮೇಲೆ ಅನಗತ್ಯವಾದ ಶಾಸ್ತ್ರದ ಭಾರವನ್ನು ಹೊರಿಸಬೇಕಾಗಿಲ್ಲ."

"ಕನ್ನಡದ ಸಾರಮಂತ್ರ: ಹೀರಿ ಹೊಮ್ಮುವುದು; ಮರಳಿ ಮರಳಿ ಪುನರುಜ್ಜೀವನ."

"ಕನ್ನಡದ ಕೆಲಸ, ನುಡಿಯ ನಾಡ ಕೆಲಸ—ಒಂದು ಗುರು ಪರಂಪರೆ."

ನಾನೇ ಆ ಮಾತನ್ನು ನುಡಿಯುವುದು ನಯಭಂಗವಾದರೂ ನುಡಿದು ಬಿಡುತ್ತೇನೆ; ನುಡಿಯದಿದ್ದರೆ ನನಗೆ ನೆಮ್ಮದಿ ನಾಶ: ಈ ಇನ್ನೂರರು ವತ್ತುಮೂರು ಪುಟಗಳಲ್ಲಿ ಕನ್ನಡಿಗರಿಗೆ ನಿಶ್ಚಯವಾಗಿ ಒಳ್ಳೆಯ ಗದ್ಯ ಸಾಹಿತ್ಯ ಲಭಿಸಿದೆ. "ಶ್ರೀ"ಯವರ ಭಾಷಣ ಲೇಖನ ಮುನ್ನುಡಿಗಳನ್ನು ಹುಡುಕಿ ಹುಡುಕಿ ಸಂಗ್ರಹಿಸಿ, ಅವನ್ನು ಪರಿಶೀಲಿಸಿ, ಸಂಪಾದಕ ಕೆಲಸ ವನ್ನು ಪ್ರೀತಿ ಶ್ರದ್ಧೆ ಎಚ್ಚರಿಕೆ ದಕ್ಷತೆಗಳಿಂದ ನೆರವೇರಿಸಿ, ಶ್ರೀಮಾನ್ ಕೊಡಲಿ ಚಿದಂಬರಂರವರು ಏಕ ಕಾಲದಲ್ಲಿ ಸಾಧಿಸಿದ್ದಾರೆ. ಶ್ರೀ ಯವರಿಗೆ ಉಚಿತ ಸನ್ಮಾನ, ಅವರ ಶಿಷ್ಯ ಪರಂಪರೆಗೆ ಸಂತೃಪ್ತಿ, ಕನ್ನಡಕ್ಕೆ ಆವಶ್ಯಕವಾದೊಂದು ಉತ್ತೇಜನ, ಕರ್ನಾಟಕಕ್ಕೆ ಮಹದುಪಕಾರ. ಎಲ್ಲರೂ ಈ ಮಾಣಿಕ್ಯ ವಚನಗಳನ್ನು ಓದಿ, ಪುಷ್ಟಿಹೊಂದಿ, ಹುರಿದುಂಬಿ, ಕಾರ್ಯೋನ್ಮುಖರಾಗಿ, ಕೈಲಾದಷ್ಟು ಸೇವೆ ಗೈಯಬೇಕೆಂದು ನನ್ನ ನಮ್ರ ಪ್ರಾರ್ಥನೆ.

ಮೈಸೂರು,
ತಾ॥ ೨೭-೭-೧೯೪೪.

ಎಸ್. ವಿ. ರಂಗಣ್ಣ

ಒಳಸಿಡಿ—೧

ಒಳಸಿಡಿ—೨

ಒಳಸಿಡಿ—೩

ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ

ಕನ್ನಡಮಾತು ತಲೆಯೆತ್ತುವ ಬಗೆ*

ಅಧ್ಯಕ್ಷರೆ, ಆರ್ಯರೆ,

ಕನ್ನಡ ವಿದ್ಯೆಯನ್ನು ವೃದ್ಧಿಮಾಡುವುದಕ್ಕೆ ಏರ್ಪಟ್ಟಿರುವ ಈ ಸಂಘದಲ್ಲಿ ಆ ಭಾಷೆಯ ಮುಂದಿನ ಏಳಿಗೆಯನ್ನು ಕುರಿತು ಪ್ರಸ್ತಾಪಿಸುವುದು ಹಿತವಾಗಿಯೇ ಇರುತ್ತದೆ. ಆದರೆ ಈ ವಿಷಯದಲ್ಲಿ ಉತ್ಸಾಹ ಎಲ್ಲರಿಗೂ ಒಂದೇ ಸಮನಾಗಿರುವುದಿಲ್ಲ; ಕೆಲವರು ಇದಕ್ಕೆ ವಿರೋಧಿಗಳೇ ಇರಬಹುದು; ಇದಲ್ಲದೆ ನಮ್ಮಲ್ಲಿಯೂ ಕೆಲವರಿಗೆ ಸಭೆಕೂಡಿದಾಗ ಉತ್ಸಾಹಕಳೆ ತುಂಬಿದ್ದು, ಮನೆಗೆ ತಿರುಗಿದಾಗ ಮಾಯವಾಗುವುದೂ ಉಂಟು. ಈ ಕಾರಣಗಳಿಂದ ಭಾಷೆಯ ಪ್ರಕೃತಸ್ಥಿತಿಯನ್ನೂ ವೃದ್ಧಿಮಾರ್ಗವನ್ನೂ ತಿಳಿಸುವುದಕ್ಕೆ ಮುಂಚೆ, ಸಂಘದ ಕಾರ್ಯದಲ್ಲಿ ಅಸಮಾಧಾನ ತರತಕ್ಕವರ ಕಾರಣಗಳೇನು, ಅಸಡ್ಡೆ ಮಾಡತಕ್ಕವರ ಕಾರಣಗಳೇನು, ಇವರಿಬ್ಬರಿಗೂ ಹೇಳಬಹುದಾದ ಸಮಾಧಾನಗಳೇನು, ಈ ಅಂಶಗಳನ್ನು ವಿಚಾರಮಾಡುವುದು ಅವಶ್ಯಕವಾಗಿದೆ.

೨. ದೇಶಭಾಷೆಗಳು ಪ್ರಬಲವಾಗುವುದಕ್ಕೆ ಇಷ್ಟವಿಲ್ಲದವರ ಅಭಿಪ್ರಾಯಗಳನ್ನು ಹೀಗೆ ಸೂಚಿಸಬಹುದು....“ಇಂಗ್ಲಿಷ್ ಚಕ್ರಾಧಿಪತ್ಯ ನೆಲೆಯಾಗುವುದಕ್ಕೆ ಮುಂಚೆ ಇದ್ದ ಸ್ಥಿತಿ ಈಗ ಇಂಡಿಯಾದಲ್ಲಿ ಇಲ್ಲ. ಆಗ ಹೊರಗಿನ ಪ್ರಪಂಚದ ಸೆಲೆಯೇ ಇರಲಿಲ್ಲ. ರಾಜ್ಯವೂ ಎಂಟು ಹತ್ತು ಪ್ರಾಂತ್ಯಗಳಾಗಿ ಒಂದಕ್ಕೊಂದು ಸಂಪರ್ಕವೇ ಇಲ್ಲದೇ ಇತ್ತು. ಜೀವನ ಸುಲಭವಾಗಿ ಜರುಗುತ್ತಿತ್ತು. ಅದೆಲ್ಲಕ್ಕೂ ತಕ್ಕಹಾಗೆ ಪ್ರಪಂಚವನ್ನು ಮಾಯವೆಂದು ಎಣಿಸಿ, ಸಂಸಾರವನ್ನು ಪಾಶವೆಂದು ಹೇಳಿ ಬೇಸರಪಟ್ಟು, ಈ ಲೋಕಯಾತ್ರೆ ಎಷ್ಟು ಬೇಗ ಮುಗಿದೀತೋ ಎಂದು ಯಾವಾಗಲೂ ಕಾಡಿನ ಮೇಲೇ ದೃಷ್ಟಿಯಿಟ್ಟುಕೊಂಡು ಇರುತ್ತಿದ್ದರು. ಈಗ

---

* ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ವಾರ್ಷಿಕ ಸಭೆಯಲ್ಲಿ ಮಾಡಿದ ಉಪನ್ಯಾಸ (ಡಿಸೆಂಬರ್, ೧೯೧೧).

ಇದೊಂದೂ ನಡೆಯುವುದಿಲ್ಲ. ದೇಶಕ್ಕೆಲ್ಲಾ ಚಕ್ರವರ್ತಿ ಒಬ್ಬನಾದನು ; ದೇಶವೆಲ್ಲಾ ಕಬ್ಬಿಣದಿಂದ ಕಟ್ಟಿ ಬಿಗಿದಂತೆ ಏಕವಾಯಿತು ; ಕೆಂಪುಜನರ ವಿದ್ಯೆ, ವ್ಯಾಪಾರ, ಕೈಗಾರಿಕೆ, ಇವುಗಳ ಉರುಬಿನಲ್ಲಿ ನಾವು ಮೂಲೆಗೆ ಬೀಳುತ್ತಿದ್ದೇವೆ. ಅವರ ಆಳಿಕೆಯಿಂದ ಶಾಂತಿಯೇನೋ ದೊರಕಿತು. ಆದರೆ ಮಿಕ್ಕ ಪುರುಷಾರ್ಥಗಳೆಲ್ಲಾ ನಾವೇ ಶ್ರಮಪಟ್ಟು ಸಂಪಾದಿಸಿದಲ್ಲದೆ ಬರುವುವಲ್ಲ. ಹಿಂದಿನಂತೆ ಒಡೆದುಕೊಂಡೇ ಇದ್ದೆವೇ, ಬಿದ್ದೇಹೋಗುವೆವು ಒಗ್ಗಟ್ಟಾದೆವೇ, ಇನ್ನೂ ನಿಲ್ಲುವ ಆಸೆಯುಂಟು. ಒಗ್ಗಟ್ಟು ಬಾಯಿಮಾತಿಗೆ ಬರತಕ್ಕದ್ದಲ್ಲ. ಯಾವ ಯಾವ ಭೇದಗಳಿಂದ ಆರ್ಯಭೂಮಿಯಲ್ಲಿ ಒಗ್ಗಟ್ಟು ಹುಟ್ಟಲಿಲ್ಲವೋ, ಆಯಾ ಭೇದಗಳನ್ನೆಲ್ಲಾ ಸುಟ್ಟು ಬೂದಿಮಾಡಿ ನೀರಿನಲ್ಲಿ ಕಲಸಿಬಿಡಬೇಕು. ಆಚಾರ, ಜಾತಿ, ಮತ, ಎಲ್ಲಾ ಒಂದೇ ಆಗುವಂತೆ ಪ್ರಯತ್ನ ಮಾಡುತ್ತ ಹೋಗಬೇಕು. ಇವೆಲ್ಲಕ್ಕೂ ಮೊದಲು ಭಾಷೆ ಒಂದಾಗಬೇಕು ; ಇಂಗ್ಲಿಷ್, ಇಲ್ಲವೆ ಹಿಂದಿ, ಯಾವುದೋ ಒಂದು ಸಾಧ್ಯವಾದದ್ದು. ಮಿಕ್ಕ ಭಾಷೆಗಳು ಸತ್ತುಹೋಗಲಿ ; ಈಗ ತಾವಾಗಿಯೇ ಸಾಯುತ್ತಾ ಬಿದ್ದಿರುವುವು ; ಎರಡು ದಿನ ನಾವು ತಟಸ್ಥರಾಗಿದ್ದರೆ ಹೋಗಿ ಹಳ್ಳಿಗಳಲ್ಲಿ ಅಡಗಿಕೊಳ್ಳುವುವು ; ಆಗ ರಾಜಭಾಷೆಯೊಂದು ಹಿಮಾಲಯದಿಂದ ರಾಮೇಶ್ವರದವರೆಗೂ ಸ್ವೇಚ್ಛೆಯಾಗಿ ಓಡಾಡುವುದು. ಇದು ಬಿಟ್ಟು, ನರಳುತ್ತಿರುವ ದೇಶ ಭಾಷೆಗಳನ್ನು ಗುಣಮಾಡಿ ತಲೆಯೆತ್ತಿಸಬೇಕು ಎನ್ನುವರು ಇಂಡಿಯದ ಒಗ್ಗಟ್ಟಿಗೆ ಅಡ್ಡಬಂದು ನಿಲ್ಲುವರು ; ಅವರು ರಾಜ್ಯದ ಹಿತಚಿಂತನೆಗೆ ಮೃತ್ಯುಗಳು."

೩. ಹೀಗೆ ಯೋಚಿಸತಕ್ಕವರು ತಿಳಿಯದವರು, ಕೆಡುಕಿಗಳು, ಅಭಿಮಾನವಿಲ್ಲದವರು ಎಂದು ಹೇಳುವುದಕ್ಕಾಗುವುದಿಲ್ಲ. ಇವರು ಬಹುದೂರ ಯೋಚನೆಮಾಡಿ, ಒಗ್ಗಿ ಬಂದ ಪಕ್ಷಪಾತವನ್ನು ತೊರೆದು, ಅಲ್ಪ ಲಾಭಕ್ಕೇ ಮಣಿದು ಹೋಗದೆ, ರಾಜ್ಯಕ್ಕೆಲ್ಲಾ ಉತ್ತಮವಾಗಿಯೂ ಶ್ರೇಯಸ್ಕರವಾಗಿಯೂ ಇರುವ ಮಾರ್ಗವನ್ನು ಉಪದೇಶಮಾಡುತ್ತಿರುವರು. ದೇಶ ಭಾಷೆಗಳಲ್ಲಿ ವಿಶ್ವಾಸವುಳ್ಳವರು ಇವರಿಗೆ ಏನುತಾನೇ ಹೇಳಲಾದೀತು ? ನಮಗೆ ಒಗ್ಗಟ್ಟು ಬೇಡ ಎನ್ನಬಹುದೆ ? ಒಂದು ಭಾಷೆ ಇಲ್ಲದೆ ಒಗ್ಗಟ್ಟೂ ಇಲ್ಲವಾದರೆ, ದೇಶಭಾಷೆಗಳನ್ನು ನಾವು ಕೈಬಿಟ್ಟೇ ತೀರಬೇಕು. ನಮ್ಮ ಪುಣ್ಯಕ್ಕೆ ಆ ನಿರ್ಬಂಧವೇನೂ ಇಲ್ಲ ; ಏಕೆಂದರೆ ನಾವು ಈ ಸಿದ್ಧಾಂತವನ್ನು ಸಂಪೂರ್ಣ

ವಾಗಿ ಒಪ್ಪಬೇಕಾದದ್ದಿಲ್ಲ. ಒಂದೇ ಭಾಷೆ ಇರುವುದು ಉತ್ತಮಪಕ್ಷವೇ ಸರಿ; ಆ ರೀತಿ ಇರತಕ್ಕ ಜನರು ಪುಣ್ಯವಂತರು. ಆದರೆ ಇದಕ್ಕೆ ಆಯಾ ಜನರ ಚರಿತ್ರೆ ಮೂಲ ಕಾರಣವಾಗಿದೆ. ಯಾವ ದೇಶದಲ್ಲಿ ಒಂದೇ ಜಾತಿಯ ಜನರು ಹೆಚ್ಚುತ್ತ ಹೋದರೋ, ಇಲ್ಲವೆ ಕೆಲವರಾದ ಪೂರ್ವನಿವಾಸಿಗಳಿಗೂ ತಮ್ಮ ಭಾಷೆಯನ್ನೇ ಹಿಂದೆಯೇ ಕಲಿಸಿಬಿಟ್ಟರೋ, ಅಲ್ಲಿ ಈಗ ಒಂದೇ ಭಾಷೆ ನಿಂತಿದೆ. ಇಂಡಿಯದಲ್ಲಿ ಹಾಗಾಗಲಿಲ್ಲ. ಇಲ್ಲಿ ಮುಖ್ಯವಾಗಿ ಎರಡು ಬುಡಕಟ್ಟಿಗೆ ಸೇರಿದ ಆರ್ಯಶೂದ್ರರೇ ಇದ್ದರೂ, ಅವರ ಎರಡು ಭಾಷೆಗಳೂ ಒಡೆದು ಈಗ ಮೇಲಾಗಿರತಕ್ಕುವು ಹತ್ತು ಹದಿನೈದಿರುತ್ತವೆ. ಇವುಗಳಲ್ಲಿ ದೇಶಕ್ಕೆಲ್ಲಾ ಯಾವುದಾದರೂ ಒಂದನ್ನು ಹರಡಬೇಕಾದರೆ ಮಿಕ್ಕಮಾತಿನವರು ಒಪ್ಪುವರೋ ? ಅವರ ಅಭಿಮಾನವೇನಾಗಬೇಕು ? ಇದಲ್ಲದೆ ಶ್ರಮವೆಷ್ಟು ? ಯಾವ ಕಾಲಕ್ಕೆ ಕೊನೆ ಮುಟ್ಟಬೇಕು ? ಹಾಗೆ ಮಾಡಿದರೂ ಪ್ರಜೆಗೆಲ್ಲಾ ಒಂದು ಭಾಷೆಯಾಯಿತೇ ಹೊರತು, ಎಂದಿನಂತೆ ರಾಜರ ಸಂಗಡ ಕೆಲಸ ನಡೆಯುವುದಕ್ಕೆ ಇಂಗ್ಲಿಷ್ ಕಲಿತೇ ತೀರಬೇಕು. ಒಳ್ಳೆಯದು, ಇಂಗ್ಲಿಷನ್ನೇ ಏಕೆ ದೇಶಕ್ಕೆಲ್ಲಾ ಹರಡಬಾರದು ? ಆಗಬಹುದು; ಆದರೆ ಮೂವತ್ತು ಕೋಟಿ ಜನರಲ್ಲಿ ಒಂದು ಪಿಳ್ಳೆಯೂ ಬಿಡದಹಾಗೆ ಇಂಗ್ಲಿಷ್ ಮಾತನ್ನು ಆಡುವುದು ಸುಲಭಸಾಧ್ಯವೇ ಯೋಚಿಸಿ; ಆ ಯುಗ ಬರುವತನಕ ನಾವೇನು ಮಾಡಬೇಕು ? ಕನ್ನಡಿಯಲ್ಲಿರುವ ಗಂಟಿಗಾಗಿ ಕೈಯಲ್ಲಿರುವುದನ್ನು ಬಿಟ್ಟು ಕುಳಿತುಕೊಳ್ಳುವುದಷ್ಟೆ !

೪. ಇದನ್ನು ಬಿಟ್ಟು ಬೇರೆ ಮಾರ್ಗವನ್ನು ಹುಡುಕಿದರೆ ಅಭಿಮಾನವೂ ಉಳಿಯುತ್ತದೆ, ಅನುಕೂಲವೂ ಆಗುತ್ತದೆ. ಅದೇನೆಂದರೆ, ಸಾಮಾನ್ಯವಾದ ರಾಜಕಾರ್ಯಕ್ಕೂ, ಇಂಡಿಯರಾಜ್ಯಕ್ಕೆಲ್ಲಾ ಸಂಬಂಧಪಟ್ಟ ವಿಷಯಗಳಿಗೂ, ಬೇರೆ ಬೇರೆ ಪ್ರಾಂತ್ಯಗಳಿಂದ ಜನ ಕಲೆಯತಕ್ಕ ಸಭೆಗಳಿಗೂ, ಬಳಸುವುದಕ್ಕೆ ಇಂಗ್ಲಿಷ್ ಭಾಷೆಯನ್ನು ಇಟ್ಟುಕೊಳ್ಳುವುದು; ಪ್ರಾಂತ್ಯಗಳಲ್ಲಿ ಹುಡುಗರು, ಹೆಂಗಸರು, ಒಕ್ಕಲಿಗರು ಎಲ್ಲರ ವಿದ್ಯಾಭಿವೃದ್ಧಿಗಾಗಿ ಆಯಾ ಜನರ ದೇಶಭಾಷೆಯನ್ನು ಇಟ್ಟುಕೊಳ್ಳುವುದು. ಎರಡಲ್ಲ, ಇಪ್ಪತ್ತು ದೇಶಭಾಷೆಗಳಿದ್ದರೂ ಒಗ್ಗಟ್ಟಿಗೆ ಕುಂದುಕವಿಲ್ಲ. ಎಲ್ಲಾಕಡೆಯಲ್ಲಿಯೂ ಆಡಬಹುದಾದ ಒಂದು ರಾಜಭಾಷೆಯ ಜೊತೆಗೆ ಎಷ್ಟುಬೇಕಾದರೂ ಇವು ಇರಬಹುದು. ಒಂದೇ ಏಕಭಾಷೆಯಿಲ್ಲದೆ ಏಕರಾಜ್ಯವಿಲ್ಲ ಎನ್ನುವ ಮಾತು

ಸುಳ್ಳು. ಹಿಂದೆ ಸಣ್ಣ ರಾಜ್ಯಗಳಲ್ಲಿ ಹೀಗಿತ್ತು ; ಈಗಲೂ ಕೆಲವು ಕಡೆ ಹೀಗಿದೆ. ಆದರೆ ಇಪ್ಪತ್ತನೆಯ ಶತಮಾನದ ವಿಸ್ತಾರವಾದ ಚಕ್ರಾಧಿಪತ್ಯಗಳಲ್ಲಿ, ಸಮವಾದ ನಾಗರಿಕತೆಯೂ, ರಾಜಿಕ ವಿಷಯಗಳಲ್ಲಿ ಬಹುಕಾಲದಿಂದ ಕಷ್ಟ ಸುಖಕ್ಕೂ ಜಯಾಪಜಯಕ್ಕೂ ಸಮಭಾಗಿಗಳಾಗಿ ಮುಂದೆಯೂ ಏಕ ಗೃಹಕೃತ್ಯದಿಂದ ಪರಸ್ಪರ ಲಾಭವುಂಟೆಂಬ ತಿಳಿವಳಿಕೆಯೂ, ಮತ, ಜಾತಿ, ಆಚಾರ, ಭಾಷೆಗಳ ಎಲ್ಲೆಕಟ್ಟುಗಳನ್ನು ಮೀರಿ ಜನಾಂಗಗಳನ್ನು ಒಟ್ಟಿಗೆ ಬೆಸೆಯುತ್ತಿವೆ. ಈ ನಾಗರಿಕತೆ ಇಂಡಿಯದಲ್ಲಿ ಮೊದಲಿಂದ ಉಂಟು ; ಈ ತಿಳಿವಳಿಕೆ ಈಗೀಗ ಹುಟ್ಟುತ್ತಿದೆ. ಐಕಮತ್ಯವೆಂದರೆ ಎಲ್ಲರೂ ಒಂದೇ ಪಡಿಯಚ್ಚಾಗಿ ಸ್ವತಂತ್ರವನ್ನು ನೀಗಿಕೊಳ್ಳಬೇಕೆಂದಲ್ಲ ; ಭೇದವಿರಬೇಕಾದ ಕಡೆ ಭೇದವೂ, ಸಾಮ್ಯವಿರಬೇಕಾದ ಕಡೆ ಸಾಮ್ಯವೂ, ಮುಖ್ಯ ಪರಸ್ಪರ ವಿಶ್ವಾಸವಿದ್ದಲ್ಲಿ ಎರಡೂ ಐಕಮತ್ಯದಲ್ಲಿ ಸೇರಬಹುದು. ಆದಕಾರಣ, ಅಭಿಮಾನದಿಂದ ದೇಶಭಾಷೆಗಳನ್ನು ಉದ್ಧಾರಮಾಡಿ ಆಯಾ ಪ್ರಾಂತ್ಯಗಳ ಜನಸಾಮಾನ್ಯಕ್ಕೂ, ಅನುಕೂಲಕ್ಕೆ ಇಂಗ್ಲಿಷ್ ಭಾಷೆಯನ್ನು ಸ್ವೀಕರಿಸಿ ಒಗ್ಗಟ್ಟಿಗಾಗಿ ಒದ್ದಾಡುವ ಇಂಡಿಯದ ವಿದ್ಯಾವಂತರಿಗೂ, ಇಬ್ಬರಿಗೂ ಲಾಭವಾಗುವಂತೆ ನಡೆಯತಕ್ಕದ್ದೇ ಮೇಲು. ಈ ರೀತಿ ಈಗ ನಡೆಯುತ್ತಲೇ ಇದೆ. ಮುಂದೆಯೂ ಅದನ್ನೇ ಬಲಪಡಿಸಿಕೊಂಡು ಹೋಗುವುದು ಮೇಲೆಂದು ಕಾಣುತ್ತದೆ.

೫. ನಾವು ಸ್ವೀಕರಿಸತಕ್ಕ ಭಾಷೆಗಳನ್ನು ಹೇಳುತ್ತಿರುವಾಗ ಸಂಸ್ಕೃತವನ್ನು ಬಿಡುವುದಕ್ಕಿಲ್ಲ. ಇದು ನಮ್ಮ ಪೂರ್ವಿಕರಾದ ಆರ್ಯರ ಭಾಷೆ ; ಇದರಲ್ಲೇ ನಮ್ಮ ಪುಸ್ತಕ ಭಂಡಾರವೆಲ್ಲಾ ಅಡಗಿದೆ. ಇದನ್ನು ತಿಳಿದ ಹೊರತು ಹಿಂದಿದ್ದ ಸ್ಥಿತಿಯಾಗಲಿ, ಈಗಿನ ಸ್ಥಿತಿಗೆ ಕಾರಣವಾಗಲಿ, ಮುಂದೆ ತಿದ್ದಬೇಕಾದ ರೀತಿಯಾಗಲಿ ತಿಳಿಯುವದಿಲ್ಲ. ಆದದ್ದರಿಂದ ಇಂಡಿಯದಲ್ಲಿ ವಿದ್ಯಾವಂತನೆನ್ನುವ ಪ್ರತಿಯೊಬ್ಬನೂ ಇಂಗ್ಲಿಷ್, ಸಂಸ್ಕೃತ, ತನ್ನ ಕಡೆಯ ದೇಶಭಾಷೆ ಈ ಮೂರನ್ನೂ ಚೆನ್ನಾಗಿ ತಿಳಿದಿರಬೇಕು. ತನಗೆ ಹರ್ಷವೂ ಲಾಭವೂ, ದೇಶಕ್ಕೆ ಉನ್ನತಿಯೂ ಸೌಖ್ಯವೂ ಬರುವಂತೆ ಶ್ರಮಬೀಳಬೇಕೆನ್ನುವವನಿಗೆ ಈ ಮೂರೂ ಬಂದೇ ತೀರಬೇಕು ; ಇಲ್ಲದಿದ್ದರೆ ಅಷ್ಟು ನೇರ್ಪಿಲ್ಲ.

೬. ಈ ಮೂರನ್ನೂ ಕಲಿಸತಕ್ಕ ಭಾರ ಯೂನಿವರ್ಸಿಟಿಯ ಪಂಡಿ

ತರ ಮೇಲೆ ಬಿದ್ದಿದೆ; ಉಳಿಸಿಕೊಂಡು ತೇಜಸ್ಸನ್ನು ಹೊಂದಿಸುವ ಭಾರ ವಿದ್ಯಾವಂತರ ಮೇಲಿದೆ. ಆದರೆ ಈ ಎರಡು ಕಡೆಯಿಂದಲೂ ಇವಕ್ಕೆ ಸರಿಯಾದ ಶ್ರದ್ಧೆ ಕಾಣಬರುವುದಿಲ್ಲ. ಇಂಗ್ಲಿಷೇನೋ ಬಲವಾಗುತ್ತಿದೆ; ಮಿಕ್ಕ ನಮ್ಮ ಭಾಷೆಗಳೆರಡೂ ಕುಗ್ಗುತ್ತಿವೆ. ಇಂಗ್ಲಿಷ್ ಕಲಿಯುವ ಹುಡುಗರೆಲ್ಲಾ ಹಿಂದೆ ಕನ್ನಡವನ್ನಾಗಲಿ, ಸಂಸ್ಕೃತವನ್ನಾಗಲಿ ಒಂದನ್ನಾದರೂ ಕಲಿಯುತ್ತಿದ್ದರು. ಈಗ ಅದೂ ಹೋಯಿತು. ಕನ್ನಡ ಸಂಸ್ಕೃತಗಳನ್ನು ಈಗ ಒಟ್ಟಿಗೆ ಕಲಿಯುತ್ತಾರಲ್ಲ ಎನ್ನಬಹುದು; ಇದೇನೋ ಸರಿಯೆ; ಆದರೆ ಎಷ್ಟು ಜನ! ಹೀಗೆ ಮಾಡಿದ್ದರಿಂದ ಮೇಲೆ ಮೇಲೆ ತೇಲಿಸಿಕೊಂಡು ಓದಿ ಬಿ.ಎ. ಡಿಗ್ರಿ ಪಡೆದು ತಾವಾಗಿ ಒಂದು ಗ್ರಂಥವನ್ನು ನೋಡಿಕೊಳ್ಳಲಾರದ ವಿದ್ಯಾರ್ಥಿಗಳು ಹೋಗಿ, ಪ್ರಚಂಡ ಪಂಡಿತರು ಬಂದು ಭಾಷೆಯನ್ನು ಉದ್ಧರಿಸುತ್ತಾರೆ ಎಂದು ಯೋಚಿಸಿ ಏರ್ಪಡಿಸಿದ ಹಾಗೆ ತೋರುತ್ತದೆ. ಹೇಳಿಕೆಯಲ್ಲೇನೋ ಇದು ಮುದ್ದಾಗಿದೆ; ನಡವಳಿಕೆ ತಾನೇ ಅಷ್ಟು ಮುದ್ದಾಗಿಲ್ಲ. ಸಂಸ್ಕೃತ-ಕನ್ನಡವನ್ನು ಅರಿಸಿಕೊಂಡವರು ಈ ಏರ್ಪಾಟಿನಲ್ಲಿ ಪೂರ್ಣ ಪಾಂಡಿತ್ಯವನ್ನು ಪಡೆಯಬಹುದು. ನಿಜ; ಆದರೆ ಅರಿಸಿಕೊಳ್ಳುವವರು ಯಾರಾದರೂ ಉಂಟೋ, ತಿಳಿಯದೆ ಅರಿಸಿಕೊಂಡು ಆಮೇಲೆ ಕೊರಗದವರು ಉಂಟೋ? ಪ್ರಶಸ್ತವಾದ ಗ್ರಂಥಗಳಿಂದ ತುಂಬಿ, ಬಹುಮಾನಕ್ಕೆ ಪಾತ್ರವಾದ ಭಾಷೆಗಳನ್ನು ತೆಗೆದುಕೊಳ್ಳುವುದೇ ಒಂದು ರೀತಿ; ಬಹುಮಾನ ದೊರೆಯದಿದ್ದರೂ ಪ್ರಶಸ್ತವಾದ ಸಂಸ್ಕೃತವನ್ನು ತೆಗೆದುಕೊಳ್ಳುವುದೂ ಒಂದು ರೀತಿ; ಇವರ ಮೇಲೆ, ಎರಡೂ ಇಲ್ಲದೆ, ದುರ್ಬಲವಾಗಿ, ಸಂಸ್ಕೃತ ಪಂಡಿತರಿಂದಲೂ, ಇಂಗ್ಲಿಷ್ ವಿದ್ಯಾರ್ಥಿಗಳಿಂದಲೂ, ಲೋಕ ವ್ಯಾಪಾರದಲ್ಲಿ ತೊಡರಿಕೊಂಡ ಜನ ಸಾಮಾನ್ಯದಿಂದಲೂ ಅಸಡ್ಡೆ ಮಾಡಿಸಿಕೊಂಡು, ಕೈ ಕೊಟ್ಟು ಎತ್ತುವರಿಲ್ಲದೆ ಮುರಿದು ಬೀಳುತ್ತಿರುವ ಕನ್ನಡದ ವಿಷಯ ಹೇಳಬೇಕಾದದ್ದೇ ಇಲ್ಲ. ಕೇವಲ ಜ್ಞಾನವಿಕಾಸಕ್ಕಾಗಿಯೇ ಯಾರೂ ಕನ್ನಡವನ್ನು ಓದುವುದಿಲ್ಲ; ಜೀವನಕ್ಕೆ ಮಾರ್ಗವೋ, ಅದು ಕನಸಿಗೂ ಬರಲಿಲ್ಲ. ಜ್ಞಾನವೂ ಇಲ್ಲ, ಜೀವನವೂ ಇಲ್ಲ. ಇನ್ನು ಯಾವ ಪುರುಷಾರ್ಥಕ್ಕೆ ಇದನ್ನು ಕಲಿಯುವುದು? ಒಳ್ಳೆಯದು, ಮುಂದಾದರೂ ವೃದ್ಧಿಯಾದೀತೆಂದು ಅಭಿಮಾನದಿಂದ ಬಹುಮಾನದ ಆಶೆಯನ್ನು ತೊರೆದು, ವರ್ಷಕ್ಕೆ ಮೂರು ನಾಲ್ಕು ಜನ ಸೇರುತ್ತಾರಲ್ಲಾ, ಅವರೆಲ್ಲರೂ ಭಾಷಾಸೇವೆಯಲ್ಲಿ ಬದ್ಧಕಂಕಣರಾಗುತ್ತಾರೆ, ಎಂದೇ

ಭಾವಿಸೋಣ. ಆಯಿತು, ಇವರ ಪ್ರಯತ್ನವನ್ನೂ ಇವರ ಪಾಂಡಿತ್ಯದ ಫಲವನ್ನೂ ಮೆಚ್ಚತಕ್ಕವರು ಯಾರು? ಕನ್ನಡವನ್ನು ಹಿಡಿದದ್ದಕ್ಕಾಗಿ ಇವರನ್ನು ಆಡಿಕೊಳ್ಳುತ್ತಾ, ಹುಟ್ಟುಗನ್ನಡವನ್ನೂ ಮರೆಯುತ್ತಾ, ದೊಡ್ಡ ಮನುಷ್ಯರಾಗುವ ಇವರ ಸಹಪಾಠಿಗಳೇ ಅಲ್ಲವೇ? ಇದು ಹೇಗಾಯಿತು ಎಂದರೆ, ಊರಕಿವಿಗೆಲ್ಲಾ ಹತ್ತಿಯಿಟ್ಟು, ಒಬ್ಬನಿಗೆ ವೀಣೆ ಹೇಳಿದಹಾಗಾಯಿತು ಸರಸ್ವತೀದೇವಿ. ಜನರಿಗೆ ಹಿರಿಯರಿಂದ ಬರುವ ಒಡವೆಗಳಲ್ಲಿ ಭಾಷೆ ಒಂದು; ಅದು ಚೆನ್ನಾಗಿದ್ದಷ್ಟೂ ಭೂಷಣ; ಅದರಲ್ಲಿ ಎಲ್ಲರಿಗೂ ಪರಿಶ್ರಮವಿದ್ದು ಪ್ರಮುಖರಾದವರಿಗೆ ಪೂರ್ಣ ಜ್ಞಾನವಿದ್ದರೆ, ಅವರಿಗೆ ಲಾಭವೂ, ಇವರಿಗೆ ಉತ್ಸಾಹವೂ ಉಂಟಾಗಿ, ಭಾಷೆಯೂ ಉತ್ಕೃಷ್ಟವಾಗುತ್ತದೆ. ಹಾಗೆಗರಿ ಬೆಳೆದು ಪೋಷಣೆಯನ್ನು ಕೇಳದ ಕಾಲಬಂದಾಗ ನೋಡಿಕೊಳ್ಳೋಣ. ಬಲವಂತದಿಂದ ಬದುಕಿಸಿಕೊಂಡು ಪ್ರಾಣವನ್ನು ಹುಯ್ಯುವ ಕಾಲದಲ್ಲಿ, ಅಭಿಮಾನವಿದ್ದವರು ಓದಿ ಎಂದು ಪರೀಕ್ಷೆಮಾಡತಕ್ಕದ್ದು ನ್ಯಾಯವೂ ಅಲ್ಲ; ವಿವೇಕವೂ ಅಲ್ಲ. ಇದರ ಕೆಡಕು ಆಗಲೇ ಕಾಣುತ್ತಿದೆ; ಬೇಗ ಕಣ್ಣು ಬಿಟ್ಟು ನೋಡಿ ಯೂನಿವರ್ಸಿಟಿಯವರು ಸಮರ್ಪಕವಾದ ಏರ್ಪಾಟನ್ನು ಮಾಡಲೆಂದು ಹಾರೈಸಬೇಕಾಗಿದೆ.

೭. ಕನ್ನಡ ವಿದ್ಯೆಯನ್ನು ಕಲಿಸತಕ್ಕವರು ಅದಕ್ಕೆ ತಂದ ಅಪಾಯವನ್ನು ನೋಡಿದೆವಷ್ಟೆ; ಅದನ್ನು ಹಿಂದೆ ಓದಿ ಬಿರುದು ಪಡೆದವರು ಮಾಡುವ ಸಹಾಯವೇನು ನೋಡೋಣ. ಇವರಿಗೆ ಕನ್ನಡದ ಏಳಿಗೆಯ ಆತಂಕವೇ ಇಲ್ಲ. ಇಂಗ್ಲಿಷ್ ಕಾವ್ಯದ ಉತ್ತಮ ಗುಣಗಳನ್ನು ಭೋಗಿಸಿ, ಅದರ ಅಂದವನ್ನು ಕಂಡ ಇವರ ಕಣ್ಣಿಗೆ, ಇಂಪನ್ನು ಕೇಳಿದ ಇವರ ಕಿವಿಗೆ, ಕನ್ನಡ ಸೊಗಸದು. ಓದುವುದು ಆನಂದಕ್ಕೆ, ಇಲ್ಲ ಅರ್ಥಕ್ಕೆ, ಇವರ ಮನಸ್ಸಿನಲ್ಲಿ ಇಂಗ್ಲಿಷಿನಿಂದ ಎರಡೂ ಉಂಟು; ಕನ್ನಡದಿಂದ ಒಂದೂ ಇಲ್ಲ. ನಿಮ್ಮ ತಾಯಿಮಾತಿನಲ್ಲಿ ನಿಮಗೆ ಅಕ್ಕರೆಯೇ ಇಲ್ಲವಲ್ಲ ಎಂದು ಕೊರಗಿನಿಂದ ನಾವು ಆಕ್ಷೇಪಣೆ ಎತ್ತಿದರೆ—"ದಿಟ, ಮಾಡುವುದೇನು, ನಾವೂ ನಾಲ್ಕುದಿನ ಅದಕ್ಕೆ ಮಣ್ಣು ಹಾಕಿದೆವು. ಅಪ್ಪನೆಟ್ಟ ಆಲದಮರ ಎಂದು ನೇತುಹಾಕಿಕೊಳ್ಳೋಣವೇ! ಕೆಲಸಕ್ಕೆ ಬಾರದ ಮಾತು; ಎಲ್ಲೋ ಒಂದು ಮೂಲೆಯಲ್ಲಿ ಹತ್ತು ಜನ ಆಡುತ್ತಾರೆ; ಅದೂ ಅವರೂ ಎರಡು ಮೂರು ಸರ್ಕಾರಕ್ಕೆ ಸಿಕ್ಕಿ ಹೋಳು ಒಡೆದಿದ್ದಾರೆ. ಬರವಣಿಗೆಯನ್ನು ನೋಡೇವೇ, ಮೇಲೆ ತೋಟ

ಶೃಂಗಾರ, ಒಳಗೆ ಗೋಣಿಸೊಪ್ಪು. ಯಾವ ಕವಿಯ ಕವನವೇ ತೆಗೆಯಿರಿ, ಲೋಕಶ್ರೇಷ್ಠವಾದ ನೀತಿಗಳಾಗಲಿ, ದಿವ್ಯಜೀವನಕ್ಕೆ ಮೇಲುಪಂಕ್ತಿಯಾದ ಚರಿತ್ರೆಗಳಾಗಲಿ, ರಮ್ಯವಾದ ಸಹಜವರ್ಣನೆಗಳಾಗಲಿ, ಮನಸ್ಸು ಮುಳುಗಿ ಹೋಗುವ ಕಲ್ಪನೆಗಳಾಗಲಿ, ಯಾವುದಾದರೂ ಒಂದು ನಮ್ಮ ಹೃದಯವನ್ನು ಆನಂದ ಪ್ರವಾಹದಲ್ಲಿ ತೊಳೆದು, ದುಃಖಮಯವಾದ ಈ ಸಂಸಾರದಲ್ಲೇ ಸ್ವರ್ಗಸುಖವನ್ನು ತಂದುಕೊಡುವಂತದು ಇದೆಯೇ? ಹಿತವಾಗಿ ಸಾರ್ಥಕವಾಗಿ ಹೊತ್ತು ಕಳೆಯಬಹುದಾದ ವಚನಕಾವ್ಯಗಳುಂಟೇ ? ಹಿಂದಿನ ಕಾಲದ ಸತ್ಯವಾದ ವೃತ್ತಾಂತವಿಲ್ಲ; ನೀತಿಹೇಳಿ ಪ್ರಪಂಚ ಧರ್ಮವನ್ನು ಚಿತ್ರಿಸುವ ಕಟ್ಟು ಕಥೆ ಇಲ್ಲ; ಸಾಮಾನ್ಯವಾದ ವ್ಯವಹಾರಜ್ಞಾನವನ್ನು ಕೊಡುವ ಪ್ರಸಂಗವಿಲ್ಲ; ಅದ್ಭುತ ಇಲ್ಲ ತುಚ್ಛವಾದ ಮಹಾತ್ಮೆಯಿಂದ ಪೊಳ್ಳಾಗದಂತ ದೇಶದ ಮಹನೀಯರ ಜೀವನ ಚರಿತ್ರೆ ಇಲ್ಲ; ಎಲ್ಲಕ್ಕಿಂತ, ಮನುಷ್ಯನ ಜೀವನೋಪಾಯಕ್ಕೂ ಸುಖಲೋಲುಪ್ತಿಗೂ ಅನುಕೂಲಿಸತಕ್ಕ ಶಾಸ್ತ್ರಗಳ ಪರಿಚಯಕ್ಕೆ ಅವಕಾಶವಿಲ್ಲ. ಈ ನಮ್ಮ ಕನ್ನಡವನ್ನು ಏನು ಕೊಳ್ಳೆ ಹೋಗುತ್ತದೆಂದು ಕಾಪಾಡಬೇಕು ; ಕಷ್ಟಬಿದ್ದು ಹೆಚ್ಚಿಸಬೇಕು ? ಅದರಲ್ಲಿ ನಮಗೆ ವೈರವೂ ಇಲ್ಲ, ವಿಶ್ವಾಸವೂ ಇಲ್ಲ. ಅದು ಇದ್ದರೆಷ್ಟು, ಹೋದ ರೆಷ್ಟು ? ನಿಮಗೆ ಇನ್ನೇನೂ ಕೆಲಸವಿಲ್ಲದಿದ್ದರೆ, ಅದನ್ನು ಹೆಚ್ಚಿಸಿಕೊಂಡು ಹೊತ್ತು ಕಳೆಯಿರಿ, ನಮಗೆ ದುಃಖವಿಲ್ಲ. ನಮ್ಮ ಪಾಲಿಗೆ ಸಾಕಾದಷ್ಟು ಕನ್ನಡ ತಾಯಹಾಲಿನಲ್ಲೇ ಬೆರೆದು ಬಂದುಹೋಯಿತು; ಅಷ್ಟು ಆಡುತ್ತೇವೆ, ಸಾಲದ್ದಕ್ಕೆ ಇಂಗ್ಲಿಷ್ ಹಿಂದುಸ್ಥಾನಿ ಜೋಡಿಸುತ್ತೇವೆ. ಕಾಗದಗಳು ಬೇಕಾದರೆ ಇಂಗ್ಲಿಷಿನಲ್ಲಿ ಬರೆಯುತ್ತೇವೆ. ಏನೋ ಎರಡುದಿನ ನಾಲ್ಕು ಜನಕ್ಕೆ ಮೇಲಾಗಿ ಬಾಳಿ ಹೊರಟು ಹೋಗುತ್ತೇವೆ. ನಿಮ್ಮ ಕನ್ನಡದಿಂದ ನಮಗೆ ಆಗಬೇಕಾದದ್ದು ಏನೂ ಇಲ್ಲ; ಆ ಹಾಳು ಕನ್ನಡಕ್ಕೆ ನಾವು ಪಟ್ಟ ರಗಳೆಯೇ ಸಾಕಾಗಿದೆ; ಒಂದು ಸಲ ಪರೀಕ್ಷೆ ಕೂಡ ಆಗದೆ ಹೋಗುವ ಸಂಕಟಕ್ಕೆ ಬಂದು ಬಿಟ್ಟಿತು. ನಮ್ಮ ಹುಡುಗರನ್ನೂ ಏತಕ್ಕೆ ಗೋಳು ಹುಯ್ದು ಕೊಳ್ಳುತ್ತೀರಿ?" ಎಂದು ಹಾಸ್ಯ ಮಾಡುತ್ತಾ ಉತ್ತರ ಹೇಳುವರು.

೮. ಆರ್ಯರೆ, ಇವರ ಮಾತನ್ನು ನಾವು ಮನಸ್ಸಿಗೆ ತೆಗೆದುಕೊಂಡರೆ ಒಳ್ಳೆಯದೆಂದು ತೋರುತ್ತದೆ. ಏಕೆಂದರೆ ಅದು ಬಲುಮಟ್ಟಿಗೆ ವಾಸ್ತವ. ಬಲುಮಟ್ಟಿಗೆ ಅದನ್ನು ನಾವು ಒಪ್ಪಬೇಕಾಗುತ್ತದೆ. ಆಕ್ಷೇಪಣೆಗೆ ಗಮನ

ಕೊಡುವುದರಿಂದ ಮುಂದೆ ಯಾವ ದೋಷಗಳನ್ನು ಬಿಟ್ಟು, ಯಾವ ಗುಣಗಳನ್ನು ಸೇರಿಸಿ, ಸರ್ವಜನಸಮ್ಮತವಾಗುವಂತೆ ಕನ್ನಡ ಕಾವ್ಯಮಾಲೆಯನ್ನು ಬೆಳಸಬಹುದೋ ಆ ಮಾರ್ಗ ಕಣ್ಣಿಗೆ ಹೊಳೆಯುತ್ತದೆ. ಅವರಿಗೂ ನಮಗೂ ಇಷ್ಟೇ ಭೇದ. ಕನ್ನಡ ಪುಸ್ತಕಗಳಲ್ಲಿ ಅವರಿಗೆ ಬರಿಯ ಹುಳುಕೇ ಕಾಣುತ್ತದೆ; ನಮಗೆ ಅಷ್ಟಿಲ್ಲ, ಆದರೂ ಬಲವಾದ ಕೊರತೆಗಳುಂಟೆಂದು ನಾವೂ ಬಲ್ಲೆವು. ಹುಳುಕನ್ನು ಕಂಡು ಅವರು ವಾತ್ಸಲ್ಯವನ್ನು ತೊರೆದಿದ್ದಾರೆ; ನಮಗೆ ಆ ಹುಳುಕೇ ವಾತ್ಸಲ್ಯವನ್ನು ಹೆಚ್ಚಿಸುತ್ತಿದೆ. ಇತರ ಹವ್ಯಾಸಗಳಲ್ಲಿ ಅವರು ಮಗ್ನರಾಗಿ, ಕನ್ನಡದ ಪಾಡು ಏನು ಎನ್ನುವ ಚಿಂತೆಯೇ ಅವರಿಗೆ ಹತ್ತುವುದಿಲ್ಲ; ನಮಗೆ ಮೊದಲಿಂದಲೂ ಕನ್ನಡದಲ್ಲಿ ಬಳಕೆಯೂ ಅಕ್ಕರೆಯೂ ಸಡಗರವೂ ಹುಟ್ಟಿ ಎಂದಿಗೆ ನಾವು ಕೈಯಲ್ಲಾದಷ್ಟು ಸೇವೆಮಾಡಿ ಕನ್ನಡವನ್ನು ಒಳ್ಳೆಯ ಪದವಿಗೆ ತಂದೇವು ಎಂದು ಹುಮ್ಮುಕೊಳ್ಳುತ್ತೇವೆ. ಮುಖ್ಯಭಾಷೆಯಲ್ಲದಿದ್ದರೂ, ತನ್ನ ಪ್ರಾಂತ್ಯದಲ್ಲಿ ತಾನು ಉಪಭಾಷೆಯಾಗಿರುವಂತೆ ಆದರೂ ಮಾಡಬೇಕು. ಹೀನ ಸ್ಥಿತಿಯನ್ನು ನೋಡಿ ಕೈ ಬಿಡಬಾರದು; ದೋಷಗಳನ್ನೇ ಎತ್ತಿಹಾಕುತ್ತಾ ಅಲ್ಲಗಳೆಯಬಾರದು; ಭಾಷೆಯ ಮತ್ತು ಕಾವ್ಯಮಾಲೆಯ ಪೂರ್ವೋತ್ತರವನ್ನು ತಿಳಿದು, ಅವು ಮುಂದೆ ಶೋಭಿಸಿ ತಮ್ಮ ಸತ್ವದಿಂದಲೇ ಜನರು ಮೋಹಿಸುವಂತೆ ಮಾಡುವುದಕ್ಕಾಗಿ, ಎಲ್ಲರೂ ಅಭಿಮಾನ ಪಟ್ಟುಕೊಂಡು ಯೋಗ್ಯತಾನುಸಾರ ಸಹಾಯಮಾಡಬೇಕು. ಹಳ್ಳಕ್ಕೆ ಬಿದ್ದ ಹುಲಿಗೆ ತಲೆಗೊಂದು ಕಲ್ಲು ಎನ್ನುವ ಗಾದೆಯ ಉಪದೇಶಕ್ಕೆ ಸರಿಯಾಗಿ ನಡೆಯಬಾರದು. ನಮ್ಮ ಭಾಷೆಯನ್ನು ನಾವು ಎತ್ತದೆ ಹೋದರೆ ಎತ್ತುವರು ಯಾರು ? ಎತ್ತುವುದಕ್ಕೆ ನಿಂತರೆ, ತಡೆಯುವರು ಯಾರು ?

೯. ಇದಲ್ಲದೆ, ನಮ್ಮ ಕನ್ನಡವನ್ನು ಮುಂದಕ್ಕೆ ತರುವುದಕ್ಕೆ ಬೇಕಾದ ಹೆಮ್ಮೆಯೂ ಹೆಬ್ಬುಬ್ಬೂ ನಮ್ಮಲ್ಲಿ ಉಂಟು. ನಮ್ಮ ಮಾತೇನೂ ನೆನ್ನೆ ಮೊನ್ನೆಯ ಕಾಡುಮಾತಲ್ಲ; ನಮ್ಮ ಕಾವ್ಯಮಾಲೆ ಓದುಬರಹ ಬರದ ಒಡ್ಡರು ಹೇಳುವ ಕುರುಕುಪದವೂ ಅಲ್ಲ. ಆರ್ಯರು ಇಂಡಿಯಕ್ಕೆ ಬರುವುದಕ್ಕೆ ಮೊದಲೇ ಇಲ್ಲಿ ದ್ರಾವಿಡಭಾಷೆ ನೆಲಸಿತ್ತು ; ಈಚೆಗೆ ಒಡೆದು ಮುಖ್ಯವಾಗಿ ತೆಲುಗು, ತಮಿಳು, ಕನ್ನಡ, ಮಲೆಯಾಳ ಎಂದು ನಾಲ್ಕು ಕವಲಾಗಿದೆ. ಇವುಗಳು ಪ್ರತಿಯೊಂದರಲ್ಲಿಯೂ ವಿಸ್ತಾರವಾದ ಗ್ರಂಥಮಾಲೆ ಹುಟ್ಟಿದೆ.

ಕನ್ನಡದಲ್ಲಿ ಸುಮಾರು ಐದು ಆರನೆಯ ಶತಮಾನದಿಂದಲೂ ಕಾವ್ಯಗಳನ್ನು ಬರೆದಿದ್ದಾರೆಂದು ಸ್ಪಷ್ಟವಾಗಿದೆ. ಹನ್ನೆರಡನೆಯ ಶತಮಾನದ ಕೊನೆಯ ವರೆಗೆ ಪುಸ್ತಕಗಳೆಲ್ಲಾ ಹಳಗನ್ನಡವಲ್ಲಿಯೂ, ಈಚೆಗೆ ಸಾಧಾರಣವಾಗಿ ಹೊಸಗನ್ನಡವಲ್ಲಿಯೂ ಬರೆದಿರುತ್ತವೆ; ಕೆಲವರು ಹಳಗನ್ನಡವನ್ನು ಕಲಿತು ಆಗಾಗ್ಗೆ ಅದರಲ್ಲಿ ಬರೆದಿರುವುದೂ ಉಂಟು. ನಮ್ಮ ಹಿರಿಯರು ಹೇಳಿಕೊಳ್ಳು ತ್ತಿದ್ದ ಇತಿಹಾಸಗಳೂ, ನಂಬುತ್ತಿದ್ದ ಮತಗಳೂ, ನಡೆಯುತ್ತಿದ್ದ ಆಚಾರ ಗಳೂ, ಈ ಪುಸ್ತಕಗಳಲ್ಲಿ ಕಾಣಬರುತ್ತವೆ. ಇದಲ್ಲದೆ, ಕಾವ್ಯಲಕ್ಷಣ, ವ್ಯಾಕರಣ, ನಿಘಂಟು, ಕೆಲವು ಪ್ರಕೃತಿಶಾಸ್ತ್ರಗಳು ಕೂಡ ಸಿಕ್ಕುತ್ತವೆ. ಈ ಭಂಡಾರವನ್ನೆಲ್ಲಾ ಕೂಡಿಟ್ಟು ಕಾಪಾಡಿಕೊಂಡು ಮುಂದೆ ಹೆಚ್ಚಿಸುತ್ತಾ ಹೋಗುವುದು ಬಿಟ್ಟು, ಇದ್ದಬದ್ದದ್ದನ್ನೆಲ್ಲಾ ಕೆರೆಯಲ್ಲಿ ಮುಳುಗಿಸಿ ಕೈ ಬೀಸಿಕೊಂಡು ಮನೆಗೆ ಬರುವಷ್ಟು ಮರುಳುತನ ಎಲ್ಲಾದರೂ ಉಂಟೆ ?

೧೦. ಆದರೆ ಈ ರೀತಿ ನಮ್ಮ ಕಾವ್ಯಮಾಲೆಯನ್ನು ಬಲಮಾಡ ಬೇಕೆಂದು ಹೊರಡುವವರು ಮೊದಲು ಗಮನಿಸತಕ್ಕ ಅಂಶಗಳು ಕೆಲವಿವೆ. ಭಾಷೆಯಲ್ಲೂ ಕಾವ್ಯಮಾಲೆಯಲ್ಲೂ ಇರತಕ್ಕ ಗುಣಗಳನ್ನು ಉಳಿಸಿಕೊಳ್ಳ ಬೇಕೆಂದು ಹೇಳಬೇಕಾಗಿಯೇ ಇಲ್ಲ; ಅವನ್ನು ತೆಗೆದು ತೋರಿಸಬೇಕಾಗಿಯೂ ಇಲ್ಲ. ಆದರೆ ಇವು ಎರಡೂ ಯಾವ ಆಶ್ರಯದಲ್ಲಿ ಯಾವ ಸಂದರ್ಭಗಳಲ್ಲಿ ಬೆಳೆದುವು ? ಇವುಗಳಲ್ಲಿ ಅಡಗಿರತಕ್ಕ ದೋಷಗಳೇನು ? ಮುಂದೆ ಇವಕ್ಕೆ ಸೇರತಕ್ಕ ಗುಣಗಳು ಯಾವುವು ? ಈ ವಿಚಾರವನ್ನು ನಿಷ್ಪಕ್ಷಪಾತದಿಂದ ಮಾಡುವುದು ಒಳ್ಳೆಯದು. ಹಾಗೆ ಮಾಡಿ ಕೆಲವು ವಿಧಿಗಳನ್ನು ಏರ್ಪಡಿಸಿ ಕೊಳ್ಳದೆ ಹೋದರೆ, ನೀವು ಎಷ್ಟೇ ಪುಸ್ತಕ ಬರೆಯುತ್ತಾ ಹೋಗಿ, ವಿದ್ಯಾ ವಂತರು ನಿಮ್ಮ ಕಡೆ ಕಣ್ಣೆತ್ತಿ ಕೂಡ ನೋಡುವುದಿಲ್ಲ; ಸಾಮಾನ್ಯ ಜನರಿ ಗಂತೂ ಅದರ ಸೆಲೆಯೇ ತಿಳಿಯುವುದಿಲ್ಲ.

೧೧. ಕನ್ನಡಭಾಷೆ ಪ್ರಬಲವಾಗುವುದಕ್ಕೆ ಸಂಸ್ಕೃತವೇ ಆಧಾರ ವೆಂದು ಎಲ್ಲರೂ ಬಲ್ಲ ವಿಷಯವಾಗಿದೆ. ಆರ್ಯರು ದಕ್ಷಿಣಕ್ಕೆ ಬಂದು ದ್ರಾವಿಡ ರಲ್ಲಿ ಉತ್ತಮವಾದ ನಾಗರಿಕತೆಯನ್ನು ಹರಡಿದರು ; ಆ ನಾಗರಿಕತೆಗೆ ತಕ್ಕ ಭಾವಗಳಿಗೆ ಶಬ್ದವನ್ನು ಹೊಂದಿಸಿಕೊಟ್ಟು ಭಾಷೆಯನ್ನು ಪುಷ್ಟಿಮಾಡಿದರು; ಬರಹವನ್ನು ಕಲಿಸಿಕೊಟ್ಟರು; ಕಾವ್ಯಸ್ವರೂಪವನ್ನು ತೋರಿಸಿಕೊಟ್ಟರು : ಆ ಕಾವ್ಯಕ್ಕೆ ಬೇಕಾದ ವೃತ್ತಗಳನ್ನೂ ಅಲಂಕಾರ ವ್ಯಾಕರಣಗಳನ್ನೂ,

ಪುರಾಣ ಇತಿಹಾಸಗಳನ್ನೂ ಒಪಗಿಸಿಕೊಟ್ಟರು. ಈ ರೀತಿ ಉಳದ ಹೊಲದಲ್ಲಿ ಬೆಳೆಮಾಡಿ ನಾಡೆಲ್ಲಾ ಜೀಪಕಳೆಯಿಂದ ತುಂಬಿ ತುಳುಕಾಡುವಂತೆ ಮಾಡಿಟ್ಟರು. ತಮ್ಮ ಸಂಸ್ಕೃತಭಾಷೆಯ ಮತ್ತು ಕಾವ್ಯದ ಬಲದಿಂದ ದ್ರಾವಿಡಜನರಿಗೆ ಲಾಭವನ್ನು ಕಾಣಿಸಿದರೇ ಹೊರತು ನಷ್ಟವೇನೂ ತರಲಿಲ್ಲ; ಅವರ ಭಾಷೆ ಪುಷ್ಟಿಯಾಯಿತು, ಅವರ ಜ್ಞಾನ ವೃದ್ಧಿಯಾಯಿತು, ಅವರ ಮತ ಶ್ರೇಷ್ಠವಾಯಿತು. ಆದರೆ ಕನ್ನಡದಲ್ಲಿ ಕಾವ್ಯಗಳನ್ನು ಬರೆಯತೊಡಗಿದ ಜೈನರು ಮತ್ತು ಬ್ರಾಹ್ಮಣರು ಇದೇ ರೀತಿ ಕರ್ಣಾಟಕರ ಶ್ರೇಯಸ್ಸನ್ನು ಕೋರಲಿಲ್ಲ. ಇವರೂ ಮತವಿಷಯವಾದ ತತ್ವಗಳನ್ನು ಜನರಿಗೆ ಬೋಧಿಸಿದ್ದು ನಿಜ; ಆದರೆ ಇವರ ಗ್ರಂಥಗಳೆಲ್ಲಾ ಮುಕ್ಕಾಲುಪಾಲು ವಸ್ತುವಿನಲ್ಲಾಗಲಿ, ಭಾವಗಳಲ್ಲಾಗಲಿ, ಶೈಲಿಯಲ್ಲಾಗಲಿ, ಜನಸಾಮಾನ್ಯಕ್ಕೆ ರುಚಿಸುವಂತೆ ಬರೆಯದೇ ಇರುವುದು ವ್ಯಸನಪಡತಕ್ಕದ್ದಾಗಿದೆ. ಇವರ ಗ್ರಂಥಗಳನ್ನು ಸಾಮಾನ್ಯಜನರು ಓದುತ್ತಿದ್ದರೋ—ಎಲ್ಲರೂ ಓದುವುದೆಲ್ಲಿ ಬಂತು ?—ಓದಿಸಿಕೇಳುತ್ತಿದ್ದರೋ ಇಲ್ಲವೋ ಹೇಳುವುದು ಕಷ್ಟ. ಸಾಮಾನ್ಯಜನರೆಂದರೆ ದಕ್ಷಿಣದಲ್ಲಿ ಆರ್ಯರಲ್ಲ, ಶೂದ್ರರು; ಶೂದ್ರರನ್ನು ಕಂಡರೆ ಆರ್ಯರಿಗೆ ತಿರಸ್ಕಾರ ಈಗಲೂ ಇದೆ; ಹಿಂದೆ ಇನ್ನೂ ಹೆಚ್ಚೇ ಇದ್ದಿರಬೇಕು. ಈ ಶೂದ್ರರು ತಮ್ಮನ್ನು ಗೌರವದಿಂದ ಕಾಣುವುದಕ್ಕೆ ಎಷ್ಟು ಬೇಕೋ ಅಷ್ಟು ಅವರಿಗೆ ಉಪದೇಶವನ್ನು ಮಾಡಿದರು; ಮಿಕ್ಕದ್ದನ್ನೆಲ್ಲಾ ತಮ್ಮಲ್ಲೇ ಬಚ್ಚಿಟ್ಟುಕೊಂಡರು. ಗ್ರಂಥಗಳನ್ನು ಅವರ ಏಳಿಗೆಗೆ ಬರೆಯಲಿಲ್ಲ. ರಾಜಸಭೆಗಳಲ್ಲಿ ಸುಖಪುರುಷನಾದ ಪೋಷಕನಿಗೆ ಹೊಗಳುಭಟ್ಟರಾಗಿ, ತಮ್ಮೊಳಗೆ ಒಬ್ಬರನ್ನೊಬ್ಬರು ಜರೆಯುತ್ತಾ, ಸಂಸ್ಕೃತ ಕವಿಗಳನ್ನು ತಲೆಮೆಟ್ಟಿ ಹಾರಿದೆವೆಂದು ಪ್ರತಿಷ್ಠೆ ಕೊಚ್ಚುತ್ತಾ, ಹತ್ತು ಎಳೆ ಸಂಸ್ಕೃತ ಒಂದು ಎಳೆ ಕನ್ನಡ, ಹೀಗೆ ಕೂಡಿಸಿ ಬರಿಯ ಶಬ್ದಾಡಂಬರದ ಮಗ್ಗವನ್ನು ಹೆಣೆಯುತ್ತಾ, ದೊಡ್ಡ ಬಿರುದುಗಳನ್ನೂ ಧನವನ್ನೂ ಅಗ್ರಹಾರಗಳನ್ನೂ ಪಡೆಯುವುದಕ್ಕಾಗಿ ಸಂಸ್ಕೃತ ಪಂಡಿತರಾದ ಕವಿಗಳು ಈ ಗ್ರಂಥಗಳನ್ನು ಬರೆದದ್ದು. ರಾಜರ ಪ್ರಾಬಲ್ಯ ಮುರಿದುಹೋದ ಹಾಗೆಲ್ಲಾ ಈ ಕವಿಗಳ ಅಬ್ಬರವೂ ಅಡಗುತ್ತ ಬಂತು. ಶಿವಭಕ್ತರ ಕಾಲದಿಂದ ಸ್ವಲ್ಪಮಟ್ಟಿಗೆ ಅತಿ ಪಾಂಡಿತ್ಯಕ್ಕೆ ಹೋಗದೆ ಜನಮಂಡಲಿಗಾಗಿ ಬರೆದ ಕಾವ್ಯಗಳು ದೊರಕುತ್ತವೆ. ಆದರೆ ಪಾಂಡಿತ್ಯ ಅತಿವೃಷ್ಟಿಯಾಗಿ ಬ್ರಾಹ್ಮಣ ಜೈನರ ಕಾವ್ಯಗಳು ನರೆತುಕೊಂಡುವು;

ಲಿಂಗಾಯಿತರ ಕಾವ್ಯಗಳು ಪಾಂಡಿತ್ಯ ಸಾಲದೆ ಬಂದು ಕಣ್ಣಿಗೆ ಒಣಬರಲಾಗಿ ನಿಂತುಕೊಂಡಿವೆ. ಈಚೀಚೆಗಂತೂ ಯಕ್ಷಗಾನ, ದೊಂಬಿದಾಸರಪದ, ಶುಕಸಪ್ತತಿ, ಹಲ್ಲಿಯಶಕುನ, ಇವೇ ಜನಗಳಿಗೆ ಮಹಾಕಾವ್ಯಗಳು ! ಏನು ಇಕ್ಕಟ್ಟಿನಲ್ಲಿ ಸಿಕ್ಕಿದೆವು ! ಹಿಂದಿನ ಸಂಸ್ಕೃತದ ಪ್ರಾಬಲ್ಯವೂ ಅದರ ಕಾವ್ಯಮಾರ್ಗವೂ ಕುಗ್ಗಿಹೋದುವು; ಮುಂದೆ ಇಂಗ್ಲಿಷಿನ ಪ್ರಾಬಲ್ಯವೂ ಅದರ ಕಾವ್ಯಮಾರ್ಗವೂ ಹೆಚ್ಚುವಂತೆ ತೋರುತ್ತದೆ. ಆದರೆ ಇದು ಇನ್ನೂ ದೃಢವಾಗಿ ಎಲ್ಲರ ಮನಸ್ಸಿಗೂ ಹತ್ತಿಲ್ಲ. ನಮಗೇನೋ ಇದು ಸ್ವತಸ್ಸಿದ್ಧವಾಗಿ ಕಾಣುತ್ತದೆ; ಇಂಗ್ಲಿಷ್ ಸಾಹಿತ್ಯವೇ ಜೀರ್ಣವಾದ ನಮ್ಮ ಕಾವ್ಯಮಾಲೆಯನ್ನು ಕೈಕೊಟ್ಟು ಎತ್ತಬೇಕು; ಇಂಗ್ಲಿಷ್ ಸಾಹಿತ್ಯವೇ ಸಂಸ್ಕೃತಸಾಹಿತ್ಯದಿಂದ ನಮ್ಮ ಕಾವ್ಯಮಾಲೆಗೆ ಇಳಿದಿರುವ ದೋಷಗಳನ್ನು ಪರಿಹಾರ ಮಾಡಬೇಕು.

೧೨. ಹಾಗೆ ಪರಿಹಾರವಾಗತಕ್ಕ ದೋಷಗಳು ಯಾವುವು ವಿಚಾರಿಸೋಣ. ಇವನ್ನು ಮುಖ್ಯವಾಗಿ ಕಾವ್ಯಗಳ ವಸ್ತು, ರೀತಿ, ಭಾವ, ವರ್ಣನೆ, ಶೈಲಿ, ರೂಪ ಎಂದು ಆರು ಬಗೆಯಾಗಿ ತಗೆದುಕೊಳ್ಳಬಹುದು.

(೧) ಕಾವ್ಯವಸ್ತುವಿನ ವಿಷಯದಲ್ಲಿ ಎಲ್ಲಾ ಹಳೆಯ ಕಥೆಗಳೇ ಹೊರತು ಹೊಸಹೊಸ ಸಂಗತಿಗಳು ಯಾವ ಕವಿತೆಯಲ್ಲಿಯೂ ಸಿಕ್ಕುವುದಿಲ್ಲ. ಜನರ ಬಾಳಿಕೆಯಲ್ಲಿ ನಡೆಯುತಕ್ಕ ವಿಚಿತ್ರಗಳನ್ನು ಅನುಸರಿಸಿ ಕಥೆಯನ್ನು ಕಟ್ಟಿ ಕುತೂಹಲವನ್ನು ಹುಟ್ಟಿಸಬಲ್ಲ ಕವಿಯೇ ಇಲ್ಲ. ರಾಮಾಯಣಗಳೆಷ್ಟು, ಭಾರತಗಳೆಷ್ಟು, ಇನ್ನೂ ಇವನ್ನು ಬರೆಯತಕ್ಕವರು ಇದ್ದಾರಲ್ಲ! ಇವುಗಳಿಂದ ಭಾಗಗಳನ್ನು ತೆಗೆದು ಕವನ ಮಾಡಿ ದಣಿಯದವರು ಎಷ್ಟು ಮಂದಿ ! ಆಯಾ ಮತದ ಪುರಾಣ, ಇತಿಹಾಸ, ಇವು ಬಿಟ್ಟರೆ ಬೇರೆ ಹಾಡತಕ್ಕ ದಾಸರೇ ಇಲ್ಲವೋ !

(೨) ಕಾವ್ಯರೀತಿಯೂ ಅಷ್ಟೆ, ಎಲ್ಲಾ ಒಂದೇ ಕ್ರಮ. ಸೂತ್ರಕ್ಕೆ ಸ್ವತಂತ್ರವನ್ನು ಮಾರಿಕೊಂಡ ಕವಿಗಳಿಗೆ ಚಮತ್ಕಾರ ಏನು ಇದ್ದೀತು ? ಒಂದರ ಪಡಿಯಚ್ಚು ಒಂದು ; ಇಲ್ಲದಿದ್ದರೆ ಮಹಾಕಾವ್ಯವಾಗುವ ಪಾಪ ಉಂಟೆ ? ಕವಿಯ ಕಂಠಕ್ಕೆ ಸೂತ್ರವೆಂಬ ಹೆಬ್ಬಾವು ನುಲಿದುಕೊಂಡು ಬಿಗಿಯುತ್ತ ಹೋದ ಹಾಗೆಲ್ಲಾ ಕೀಲು ಕೊಟ್ಟಂತೆ ಹೊರಡುತ್ತವೆ ನೋಡಿ

ಒಂದಾದ ಮೇಲೊಂದು — ದೇವತಾಸ್ತುತಿ, ಆತ್ಮಶ್ಲಾಘನೆ, ಕುಕವಿನಿಂದೆ, ಸಮುದ್ರವರ್ಣನೆ, ದೇಶ, ಪುರ, (ಆದರಲ್ಲೂ ಹೂವಿನಂಗಡಿ, ಸೂಳೆಗೇರಿ, ಮರೆಯುವುದೇ ಇಲ್ಲ), ರಾಜ, ರಾಣಿ, ಮಕ್ಕಳ ಬಯಕೆ, ವರ, ಮಗುವಿನ ಆಟ, ಹೀಗೆ ತೇರಿನ ಮೊರಜಿಯಂತೆ ಎಷ್ಟು, ಕಾವ್ಯದ ಉದ್ದಕ್ಕೂ! ಹದಿನೆಂಟು ವರ್ಣನೆಯಲ್ಲಿ ಒಂದು ತಪ್ಪಿದ್ದರೂ ಮುಕ್ಕಾಯಿತು. ಸಂಸಾರವನ್ನು ತೊರೆದ ಸನ್ಯಾಸಿಯ ಕಥೆಯಾದರೂ ಸರಿಯೇ, ಒಂದು ರಾತ್ರಿ ಬೆಳದಿಂಗಳಲ್ಲಿ ಅಲೆತ, ಹಿಂದಿನ ದಿನ ನೀರಿನಲ್ಲಿ ಆಟ, ಎಂದರೆ ಎರಡು ಆಶ್ವಾಸ ಮುಲಗಿಹೋಯಿತು ಆ ಕಡೆ. ಭಕ್ತಿಯಿಂದ ಓದುವ ಅಜ್ಜಂದಿರಿಗೆ ಏನು ಪುಣ್ಯಕಥೆ! ಹೀಗೆ ಒಂದೇ ಕ್ರಮವನ್ನು ಹಿಡಿದರೆ ಒಬ್ಬ ಕವಿಯನ್ನು ಓದಿದಮೇಲೆ ಇನ್ನೊಬ್ಬನನ್ನು ಏಕೆ ಓದಬೇಕು? ಅದೂ ಬೇಡ, ಸಾಹಿತ್ಯ ದರ್ಪಣವನ್ನು ಓದಿಬಿಟ್ಟರೆ ಸಾಲದೆ?

(೩) ಒಂದೇ ಕಥೆ, ಒಂದೇ ಕ್ರಮವಾದರೂ ಭಾವಗಳೇನಾದರೂ ಹೊಸವು ಕಲಿಯಬಹುದೇ? ಅಯ್ಯೋ ಪಾಪ, ಎಲ್ಲಿ ಬಂದಾವು! ನಾಟಕವೇ, ನಾಯಕ ನಾಯಕಿಯರು ಹೀಗೇ ಇರಬೇಕು, ಇಂತ ಮಾತೇ ಆಡಬೇಕು, ಇಷ್ಟು ಸಲವೇ ಮೂರ್ಛೆಬೀಳಬೇಕು. ಕಾವ್ಯವೇ, ಕವಿ ಸಮಯಗಳು ಭದ್ರ, ಅಲಂಕಾರ ಕಂಠಪಾಠವಾಗಿರಲಿ, ಬಾಯಿ ಬಿಟ್ಟರೆ ಒಂದು ಮುತ್ತು ಸುರಿಯಬೇಕು, ಆಡಿದ ಹಾಗೆ ಪೆಚ್ಚಾಗಿ ಪದ್ಯವನ್ನು ಬರೆದವನೂ ಒಬ್ಬ ಪಂಡಿತನೇ? ಆ ವಿಜಾತೀಯವಾದ ಶ್ಲೇಷೆ, ವಿರೋಧಾಭಾಸಗಳಿಗೆ ಇವರಿಲ್ಲದಿದ್ದರೆ ಆಸರೆ ಇನ್ನೆಲ್ಲಿ? ಸವೆದ ದಾರಿಯಿಂದ ಕದಲ ಕೂಡದು. ಅದೇ ಭಾವವನ್ನು ಹಿಂದಿನವನು ಹೇಳಿದ್ದಾನೋ, ಇರಲಿ, ಬೇರೆ ಮಾತಿನಲ್ಲಿ ಜೋಡಿಸಿಬಿಟ್ಟರೆ ಆಯಿತು, ಕವಿಯ ಪಟ್ಟಬಂತು. ನಿಜ, ನಮಗೂ ಬೇಸರ ಬಂತು, ತಲೆನೋವು ಬಂತು; ಆದರ ಹಿಂದೆ ತಾತ್ಸಾರ, ವಿರೋಧ ಇವೂ ಬಂದುವು.

(೪) ಇನ್ನು ವರ್ಣನೆಯನ್ನು ಕುರಿತು ಹೇಳಬೇಕಾಗಿಲ್ಲ. ಕಣ್ಣಿಗೆ ಹಬ್ಬವಾದ ಸೃಷ್ಟಿಯ ಅಂದಚೆಂದಗಳನ್ನು ಸಹಜವಾಗಿ ಚಿತ್ರಿಸುವ

ಕೌಶಲವನ್ನೇ ಅರಿಯರು ನಮ್ಮ ಕವಿಗಳು. ಎಲ್ಲಕ್ಕೂ ಕಿವಿ ಮೂಗು ಹರಿದು, ಕೊಂಬು ಕೋಡು ಹತ್ತಿಸಿ ವಿಕಾರಮಾಡುತ್ತಾರೆ. ಇವರ ಉತ್ಪ್ರೇಕ್ಷೆಗಳೂ ಅತಿಶಯೋಕ್ತಿಗಳೂ ಲೋಕದಲ್ಲಿ ಯಾರೂ ಕಾಣದಂತವು. ಇದ್ದದ್ದನ್ನು ಇದ್ದಹಾಗೆ ಹೇಳುವುದು ಎಷ್ಟು ಅಪೂರ್ವವೆಂದರೆ, ಎಲ್ಲಾದರೂ ಪ್ರಜ್ಞೆತಪ್ಪಿ ಬಂದುಬಿಟ್ಟರೆ, ಅದನ್ನೂ ಸ್ವಭಾವೋಕ್ತಿ ಎಂಬ ಅಲಂಕಾರವನ್ನಾಗಿ ತಿಳಿಯುತ್ತಾರೆ. ಇನ್ನೊಂದು ಸಂಗತಿ ಹೇಳದೇ ಬಿಡುವುದಕ್ಕಿಲ್ಲ; ಅನೇಕ ಗ್ರಂಥಗಳಲ್ಲಿ ಲಜ್ಜೆಯನ್ನು ಕೂಡ ಮೀರಿ ಬರೆದಿರತಕ್ಕ ಭಾಗಗಳು ಬರುವುದರಿಂದ, ಮಕ್ಕಳಿಗಾಗಲಿ, ಹೆಂಗಸರಿಗಾಗಲಿ, ಮರ್ಯಾದೆಯುಳ್ಳ ಗಂಡಸರಿಗಾಗಲಿ ಅವನ್ನು ಓದಹೇಳುವುದೇ ಅವಿವೇಕವಾಗಿದೆ.

(೫) ಶೈಲಿಯ ಪ್ರಸ್ತಾಪ ಹಿಂದೆಯೇ ಬಂದಿತ್ತು. ಎಲ್ಲೋ ಸಂಸ್ಕೃತದಲ್ಲಿ ಬರೆಯುವುದಕ್ಕೆ ಹೊರಟು, ಮರೆತು ಕನ್ನಡದ ಪ್ರತ್ಯಯಗಳನ್ನು ಹತ್ತಿಸಿದ ಹಾಗೆ ಕಾಣುತ್ತದೆ. ಪುಟ್ಟವಾಗಿಯೂ ಇಂಪಾಗಿಯೂ, ತಿರುಳುಳ್ಳವಾಗಿಯೂ ಇರುವ ಕನ್ನಡ ಮಾತುಗಳನ್ನು ಮೂಲೆಗೆ ತಳ್ಳಿ, ಎರಡು ಮೂರು ಪಾದ ಉದ್ದವಾದ ಸಂಸ್ಕೃತ ಸಮಾಸಗಳ ಆಡಂಬರದಿಂದ ಅನ್ಯಾಯವಾಗಿ ಭಾಷೆಯನ್ನು ಹಿಂದುಮಾಡಿದರಲ್ಲ! ಸಂಸ್ಕೃತ ಆರ್ಭಟವಿಲ್ಲದೆ ಕನ್ನಡದಲ್ಲಿ ಗ್ರಂಥವನ್ನೇ ಬರೆಯುವುದಕ್ಕೆ ಆಗುವುದಿಲ್ಲ ಎಂದು ಬಾಯಿಬಡಿಯುವರಲ್ಲ! ದಿಟ, ಈ ಕಾಲದ ಭಾಷೆ ಯಾವುದೂ ಬೆರಕೆಯಾಗದೆ ಶುದ್ಧವಾಗಿಲ್ಲ; ಆದರೆ ಯಾವ ಮಾತುಗಳನ್ನು ಜನಮಂಡಲ ಪರಭಾಷೆಯೆಂಬ ಗಮನವೇ ಇಲ್ಲದೆ ಬಳಸುವುದೋ ಅವೆಲ್ಲಾ ಕನ್ನಡಕ್ಕೇ ಸೇರಿಹೋದವು. ಅಷ್ಟು ಬಿಟ್ಟು, ಬೇಡವಾದ ಕಡೆ ಕೂಡ, ಸಂಸ್ಕೃತ ಬಲ್ಲೆವೆಂಬ ಕೊಬ್ಬಿನಿಂದ ಸ್ವೇಚ್ಛೆಯಾಗಿ ಶಬ್ದಗಳನ್ನು ಗಿಡಿದು, ಹತ್ತು ಜನ ತಮ್ಮ ಪುಸ್ತಕವನ್ನು ಮುಟ್ಟದಂತೆ ಮಾಡಿಕೊಂಡರಲ್ಲ! ಇದಲ್ಲದೆ ಕನ್ನಡದ ಭಾಷೆಯ ಕ್ರಮಕ್ಕೆ ಸರಿಹೋಗದ ಕರ್ಮಣಿ ಮೊದಲಾದ ಪ್ರಯೋಗಗಳನ್ನು ಅಡಕುತ್ತಿರುವರಲ್ಲ! ಇದೇನು ಕನ್ನಡವೋ ನೀವೇ ನೋಡಿ—

"ವಿಲುಠತ್ ಘಂಟಾಪಟಿಷ್ಠಧ್ವನಿಬಧಿರಿತದಿಙ್ಮಂಡಲಂ ಕರ್ಣತಾಳಾ·
ನಿಲಲೋಲದ್ವಿೀಚಿಮಾಲಾಂಜರಸರಿದುದಕಂ ಪುಷ್ಕರೋಚ್ಚಾಟನವ್ಯಾ
ಕುಲಿತ ಬ್ರಹ್ಮಾಸನಾಂಭೋರುಹವತಿವಿತತಾಯೋಗ ರತ್ನಪ್ರಭಾಪಿಂ
ಗಲಿತಸ್ವರ್ಗಾಂತರಾಳಂ ಹಿಮಗಿರಿಧವಳಂ ಬಂದುದಿಂದ್ರದ್ವಿಪೇಂದ್ರಂ"

ಈ ಕನ್ನಡವನ್ನು ನೋಡಿ—

"ಮಹಾರಾಜಾ ದುರ್ಯೋಧನನು, ನಿಮ್ಮಿಂದ ಈ ಸ್ಥಳದಲ್ಲಿ ನೋಡಲ್ಪಟ್ಟನೆ?"
"—ದುರ್ಯೋಧನನ ತೊಡೆಗಳೆಂಬ ಸ್ತಂಭಗಳನ್ನು ಮುರಿಯತಕ್ಕದ್ದರಲ್ಲಿ ನಿಶ್ಚೈಸಲ್ಪಟ್ಟ ವಿಜಯವುಳ್ಳ ಭೀಮಸೇನನು"

ಅಯ್ಯೋ! ಕನ್ನಡಮಾತನಾಡುವ ಜನರಾ, ನಿಮಗಾಗಿ ಪುಸ್ತಕವನ್ನು ಬರೆಯುವವರು ಯಾರೂ ಕಾಣಲಿಲ್ಲ; ತಮ್ಮ ಪಾಂಡಿತ್ಯವನ್ನು ತಮ್ಮಂತ ಪಂಡಿತರಲ್ಲಿ ಮೆರೆಯುವುದಕ್ಕೇ ಬರೆಯುವಂತೆ ಕಾಣುತ್ತದೆ.

೬. ಕಾವ್ಯದ ರೂಪವೋ ಸಾಮಾನ್ಯನಾಗಿ ಎಲ್ಲಾ ಪದ್ಯವೇ. ಜನರು ಹೆಚ್ಚಾಗಿ ಮೋಹಿಸತಕ್ಕುವು ನಾಟಕಗಳು, ವಚನ ಕಾವ್ಯಗಳು. ಇವೆರಡೂ ಕನ್ನಡದಲ್ಲಿ ಕಡಮೆ. ಹೆಸರಿಗೊಂದು ಹಿಂದಿನ ನಾಟಕವಿದೆ; ಸಂಸ್ಕೃತ ಆಡುವುದು ನಿಂತುಹೋದ ಎರಡು ಸಾವಿರ ವರ್ಷದ ಮೇಲೂ ಅದೇ ಭಾಷೆಯಲ್ಲಿ ಬರೆಯುತ್ತಿದ್ದರೇ ಹೊರತು ಜನರು ಆಡುವ ದೇಶಭಾಷೆಗಳಲ್ಲಿ ಬರೆಯುವ ಯೋಚನೆಯೇ ಯಾರಿಗೂ ಬರಲಿಲ್ಲ. ಇವೊಂದರಿಂದಲೇ ಪಂಡಿತರಿಗೆ ಪಾಮರರ ಮೇಲೆ ಇದ್ದ ಮಮತೆ ಎಷ್ಟು ಎನ್ನುವುದು ಹೊರಪಡುತ್ತದೆ. ವಚನ ಕಾವ್ಯಗಳು ಎಲ್ಲೋ ಕೆಲವು ಇವೆ; ಆದರೆ ಇವೂ ಛಂದಸ್ಸಿಲ್ಲದ ಪದ್ಯ ಕಾವ್ಯಗಳೆಂದೇ ಹೇಳಬಹುದು. ಸುಲಭ ಶೈಲಿಯಲ್ಲಿ ಲೌಕಿಕ ವಿಷಯಗಳನ್ನು ರಂಜನೆ ಮಾಡತಕ್ಕುವು ಇಲ್ಲವೇ ಇಲ್ಲ. ಈಗೀಗ ಈ ಕೊರತೆಗಳನ್ನು ಹೋಗಲಾಡಿಸುವ ಪ್ರಯತ್ನದಲ್ಲಿರುತ್ತಾರೆ.

೧೩. ಮೇಲೆ ಹೇಳಿದ ದೋಷಗಳಿಂದ ನಮ್ಮ ಕಾವ್ಯಮಾಲೆಯನ್ನು ಸಾಧಾರಣ ಜನರು ಓದಿ ಅರ್ಥಮಾಡಿಕೊಳ್ಳಲೇ ಆರರು; ಇಂಗ್ಲಿಷ್ ಬಲ್ಲ ವಿದ್ಯಾವಂತರು ಎಳ್ಳಷ್ಟಾದರೂ ಹರ್ಷವಿಲ್ಲ, ಲಾಭವಿಲ್ಲ, ಎಲ್ಲಾ ಕೃತ್ರಿಮ,

ಅಸಂಬದ್ಧ ಎಂದು ಕೈ ಬಿಟ್ಟುಬಿಟ್ಟರು; ಸಂಸ್ಕೃತ ವಿದ್ವಾಂಸರಂತೂ ಕನ್ನಡದಲ್ಲೇನಿದೆ ಸ್ವಾರಸ್ಯ, ಸಂಸ್ಕೃತದ ಎಂಜಲು, ಉಗಿದ ಕಬ್ಬಿನ ಸಿಪ್ಪೆ ಎಂದು ಧಿಕ್ಕರಿಸುತ್ತಾರೆ. ಮುಖ್ಯ, ನಮ್ಮ ಕಾವ್ಯಮಾಲೆ ಕೀಳೆಂದೂ ನಿಸ್ಸಾರ ವೆಂದೂ ತೆಗೆದೆಸೆಯುವ ಹೊತ್ತು ಬಂದಿದೆ. ಸಾವಿರ ವರ್ಷದಿಂದ ಬೆಳೆದು ಬಂದದ್ದನ್ನು ಹಾಗೆ ಎಂದಿಗೂ ಬಿಡತಕ್ಕದ್ದಲ್ಲ. ಜನರೆಲ್ಲ ಮುಂದಾದರೂ ಪುಸ್ತಕದ ಕಡೆ ಆಸಕ್ತಿಯಿಡುವಂತೆ ಮಾಡಿಯೇ ತೀರಬೇಕು; ಇಂಗ್ಲಿಷ್ ಮತ್ತು ಸಂಸ್ಕೃತ ಪಂಡಿತರು ಸರಿಯಾದ ಮಾರ್ಗದಲ್ಲಿ ಅವರಿಗೆ ಹಿತವಾದ ಪುಸ್ತಕಗಳನ್ನು ಒದಗಿಸಿಕೊಟ್ಟು ದೇಶಾಭಿಮಾನಿಗಳಾಗಬೇಕು. ಈ ಕಾರ್ಯ ಸಾಧನೆಯಲ್ಲಿ ನಾವು ಮಾಡಬೇಕಾಗಿರುವ ಕೆಲಸಗಳೇನು ಅದನ್ನು ತಿಳಿಸು ತ್ತೇನೆ.

೧೪. ಮೊದಲು, ಹಿಂದಿನಿಂದ ಬಂದ ಕಾವ್ಯಗಳನ್ನು ಏನು ಮಾಡು ವುದು? ಇವು ನಮ್ಮ ಹಿರಿಯರು ಗಳಿಸಿದ ಸ್ವತ್ತು–ಬಡತನವೋ, ಸಿರಿಯೋ, ಇದ್ದದ್ದನ್ನು ಉಳಿಸಿಕೊಂಡು, ಮುಂದಕ್ಕೆ ಹೆಚ್ಚಿಸುತ್ತಾ ಹೋಗಬೇಕು. ಇದಲ್ಲದೆ ಇವು ತೀರ ಕೆಲಸಕ್ಕೆ ಬಾರದುವೂ ಅಲ್ಲ. ಪೂರ್ವದ ಶಾಸನಗಳಿಂದ ಮೈಸೂರಿನ ಚರಿತ್ರೆಯನ್ನು ಕೂಡಿಸಬಹುದು; ಕಾವ್ಯಗಳಲ್ಲಿ ಚರಿತ್ರಾಂಶ ಗಳೂ, ಆಚಾರ ವ್ಯವಹಾರಗಳೂ, ದೇಶಕಾಲ ಭೇದಗಳೂ ತಿಳಿಯು ತ್ತವೆ; ಮತಸಂಬಂಧವಾದ ವಿಷಯಗಳು ಎಷ್ಟೋ ಅಡಕವಾಗಿವೆ. ಇದರ ಜೊತೆಗೆ, ಭಾಷೆಯ ಚರಿತ್ರೆಯನ್ನೂ ಕಾವ್ಯಮಾಲೆಯ ಬೆಳವಳಿಗೆಯನ್ನೂ ಸಂಗ್ರಹಿಸುವ ಅವಶ್ಯಕತೆ ಬೇರೆ ಇದೆ. ತಾಯಿಬೇರನ್ನು ಕಡಿದು ಮರವನ್ನು ಚಿಗುರಿಸುವುದಕ್ಕೆ ಹೇಗೆ ಆಗಲಾರದೋ, ಹಾಗೆಯೇ ನಮ್ಮ ಪೂರ್ವವನ್ನು ಅಳಿಸಿಬಿಟ್ಟು ಭವಿಷ್ಯಕ್ಕೆ ಹಾರುವುದಕ್ಕೆ ಆಗಲಾರದು. ಆದದ್ದರಿಂದ ಪೂರ್ವದ ಕಾವ್ಯಗಳ ವಿಷಯದಲ್ಲಿ ಹೀಗೆ ಮಾಡಬೇಕು:—

(೧) ದೇಶದಲ್ಲಿ ಹುಳು ತಿಂದು ಹೋಗದೆ ಉಳಿದಿರುವ ಗ್ರಂಥಗಳನ್ನೆಲ್ಲಾ ಶೇಖರಿಸಿ ಒಂದನ್ನೂ ಬಿಡದಂತೆ ಅಚ್ಚುಹಾಕುವುದು. ಈ ಕೆಲಸ ವನ್ನು ಮೈಸೂರು ಸರ್ಕಾರದವರೂ, ಕಾವ್ಯಮಂಜರಿ, ಕಾವ್ಯಕಲಾ ನಿಧಿಗಳ ಸಂಪಾದಕರೂ ಆಗಲೇ ಮಾಡುತ್ತಲೇ ಇದ್ದಾರೆ. ಇವರಿಗೆ ಎಲ್ಲರೂ ಕೃತಜ್ಞರಾಗಿರತಕ್ಕದ್ದೆ.

(೨) ಈ ಲಕ್ಷ್ಯಗ್ರಂಥಗಳೆಲ್ಲಾ ಅಚ್ಚಾದಮೇಲೆ ಎಲ್ಲವನ್ನೂ ಕೊನೆ ಮುಟ್ಟ

ಶೋಧಿಸಿ, ಹೊಸದಾಗಿ ಲಕ್ಷಣ ಗ್ರಂಥಗಳನ್ನು ಕಾಲಕ್ಕೆ ತಕ್ಕಂತೆ ರಚಿಸುವುದು. ಇವು ಯಾವುವೆಂದರೆ—ಭಾಷೆಯ ಚರಿತ್ರೆ, ಹಳ ಹೊಸಗನ್ನಡದ ವ್ಯಾಕರಣ, ನಿಘಂಟು, ರಸ, ಅಲಂಕಾರ, ಕಾವ್ಯ ಸ್ವರೂಪ, ಕಾವ್ಯವಿಮರ್ಶೆ, ಛಂದಸ್ಸು, ಕಾವ್ಯಮಾಲೆಯ ಚರಿತ್ರೆ. ಈ ಲಕ್ಷಣಗಳನ್ನು ಕಲ್ಪಿಸತಕ್ಕವರು ಹಿಂದಿನ ಸಂಸ್ಕೃತ ಮಾರ್ಗ ವನ್ನೂ ಈಗಿನ ಇಂಗ್ಲಿಷ್ ಮಾರ್ಗವನ್ನೂ, ಪ್ರಕೃತದಲ್ಲಿ ಜನರ ಸ್ವಭಾವ ಅಭಿಪ್ರಾಯ ಲಾಭಗಳನ್ನೂ, ಗಣನೆಗೆ ತಂದು, ಸರ್ವ ಮತವನ್ನೂ ತೂಕ ಮಾಡಿ, ವಿಪರೀತಕ್ಕೆ ಹೋಗದೆ, ಉತ್ತಮ ಪಕ್ಷವನ್ನೇ ಹಿಡಿಯತಕ್ಕದ್ದಾಗಿದೆ.

(೩) ಪೂರ್ವ ಕಾವ್ಯಗಳಲ್ಲಿ ಉತ್ತಮ ಭಾಗಗಳನ್ನು ಆದುಕೊಂಡು ಬಾಲ ಶಿಕ್ಷೆಗಾಗಿ ಉಪಯೋಗಿಸುವುದು. ಮತ್ತು ಇದಕ್ಕೆ ಕೈ ಸೆರವಾಗಿ ಐದಾರು ಹಳಗನ್ನಡದ ಪಾಠಗಳನ್ನು ಏರ್ಪಡಿಸುವುದು.

ಇಷ್ಟು ಕೆಲಸ ಮಾಡಿದಲ್ಲಿ, ಜನರಿಗೆ ಹಳಗನ್ನಡ ಸುಲಭವಾಗುತ್ತದೆ. ಏಕೆಂದರೆ, ಹಳಗನ್ನಡಕ್ಕೂ ಹೊಸಗನ್ನಡಕ್ಕೂ ಶಬ್ದಗಳು ಕೆಲವು ಬಿಟ್ಟು ಹೋಗಿರುವುದು, ರೂಪ ಕೊಂಚ ಮಾರ್ಪಟ್ಟಿರುವುದು ಇಷ್ಟೇ ಹೊರತು ಎರಡೂ ಬೇರೆ ಭಾಷೆ ಎನ್ನುವಷ್ಟು ಭೇದವೇನೂ ಇಲ್ಲ. ಕಾವ್ಯಗಳ ವಿಷಯದಲ್ಲಿ ಎಲ್ಲಾ ಕಾವ್ಯಮಾಲೆಗಳ ಲಕ್ಷಣಗಳನ್ನೂ ಒರೆಹಚ್ಚಿ ತೆಗೆಯುವುದರಿಂದ, ಸಹಜವಾದ ರೀತಿಯಲ್ಲಿ ಗುಣದೋಷ ವಿವೇಚನೆ ಹುಟ್ಟುತ್ತದೆ. ಪೂರ್ವದ ಕಥೆಗಳೂ, ಅಭಿಪ್ರಾಯಗಳೂ ಮರೆತುಹೋಗುವುದಿಲ್ಲ.

೧೫. ಹಿಂದಿನ ಭಂಡಾರವನ್ನು ಹೀಗೆ ಕಾಪಾಡಿಕೊಂಡು ಕ್ರಮಪಡಿ ಸುವುದಲ್ಲದೆ, ಮುಂದಕ್ಕೆ ಉತ್ತಮಕಾವ್ಯಗಳು ಸಾಧ್ಯವಾಗುವಂತೆ ಈಗಿನಿಂದ ಉದ್ಯಮ ಮಾಡಬೇಕು. ಕೆಲವರು ಹೊಸಮಾರ್ಗ ಆಗಲೇ ದೇಶದಲ್ಲಿ ಬೇರೂರಿ ತೆಂದೂ, ಬೇಕಾದಷ್ಟು ಜನ ಕವಿಗಳು ಆಗಲೇ ಹುಟ್ಟಿರುವರೆಂದೂ ತಿಳಿಯು ತ್ತಾರೆ. ಇದರಲ್ಲಿ ನನಗೆ ನಂಬಿಕೆ ಸಾಲದು. ನನ್ನ ಬುದ್ಧಿಗೆ ಈಗ ಇನ್ನೂ ನಮಗೆ ವ್ಯವಸಾಯಕಾಲವೇ ಹೊರತು ಫಲ ಬಿಡುವ ಕಾಲವಲ್ಲ. ಅದು ಹೇಗಾದರೂ ಇರಲಿ, ಮುಂದೆ ಎಲ್ಲರೂ ನಮ್ಮ ಕನ್ನಡ ಎಂದು ಹೆಮ್ಮೆಪಟ್ಟು ಕೊಂಡು ಓದಬಹುದಾದ ಪುಸ್ತಕಗಳನ್ನು ಬರೆಯತಕ್ಕವರು ಈ ಅಂಶಗಳನ್ನು ನೆನಪಿನಲ್ಲಿ ಇಟ್ಟಿದ್ದರೆ ಒಳ್ಳೆಯದು—

(೧) ಭಾಷೆಯ ವಿಚಾರದಲ್ಲಿ, ಹೊಸಗನ್ನಡವನ್ನೇ ಬರೆಯಬೇಕು. ಹಳಗನ್ನಡದಲ್ಲಿ ನನಗೂ ಅಕ್ಕರೆ ಉಂಟು; ತಿಳಿಯಾದ, ಬಿಗಿಯಾದ, ತಿರುಳಾದ, ಇಂಪಾದ, ಆ ನುಡಿಯನ್ನು ಕೈ ಬಿಡುವುದೆಂದರೆ ನನಗೂ ವ್ಯಸನವೆ. ಮುಂದೆ ಜನರಲ್ಲಿ ಆದರ ತಿಳಿವಳಿಕೆ ಹೆಚ್ಚಿದ ಮೇಲೋ, ಇಲ್ಲ, ಕೇವಲ ವಿದ್ಯಾವಂತರೇ ತಿಳಿಯಬೇಕಾದ ತತ್ತ್ವಗಳಿಗಾಗಿಯೋ, ಇಲ್ಲ, ಪರಮೋತ್ಕೃಷ್ಟವಾದ ಕಾವ್ಯ-ನಾಟಕ-ಗೀತೆಗಳಿಗಾಗಿಯೋ ಅದನ್ನು ಉಪಯೋಗಿಸಿವರೂ ಉಪಯೋಗಿಸಬಹುದು. ಆದರೆ ಸವ್ಯಕ್ಕೆ ಜನರಿಗೆ ತಿಳಿಯದ ಭಾಷೆಯಲ್ಲಿ ಬರೆಯುವುವರಲ್ಲಿ ಯಾವ ಬುದ್ಧಿವಂತಿಕೆಯೂ ಇಲ್ಲ. ಹೊಸಗನ್ನಡವನ್ನೇ ಎಲ್ಲರೂ ಹಿಡಿಯಬೇಕು. ಅದಕ್ಕೆ ಹಳಗನ್ನಡದ ಬೆರಕೆಯಾಗಲಿ, ಜನರ ಬಾಯಲ್ಲಿ ಬಳಕೆಗೆ ಬಂದಿರುವಷ್ಟು ಮಟ್ಟಿಗಲ್ಲದೆ ಹೆಚ್ಚಿನ ಪುಸ್ತಕದ ಸಂಸ್ಕೃತವಾಗಲಿ ತದ್ಭವವಾಗಲಿ ಸೇರಕೂಡದು. ಗ್ರಾಮ್ಯವನ್ನು ಬಿಟ್ಟು ವಿದ್ಯಾವಂತರೂ ಉತ್ತಮಜಾತಿಯವರೂ ಆಡತಕ್ಕ ಸ್ಫುಟವಾದ ಕನ್ನಡವನ್ನು ಗ್ರಂಥಭಾಷೆಯಾಗಿ ತಿರುಗಿಸಿಬಿಟ್ಟರೆ ಅಚ್ಚುಹಾಕುವುದರಿಂದಲೂ ಮಕ್ಕಳಿಂದ ಕಲಿಸುವುದರಿಂದಲೂ ಇವೇ ನೆಲೆಯಾಗಿ ನಿಂತು ಎತ್ತಲೂ ಹರಡುತ್ತವೆ. ಮುಂದಿನ ಗ್ರಂಥಗಳಿಗೆಲ್ಲಾ ಒಂದೇ ಸಮವಾದ ಭಾಷೆ ಸಿಕ್ಕುತ್ತದೆ. ಅನ್ಯ ಶಬ್ದಗಳನ್ನು ವಿಶೇಷವಾಗಿ ಸೇರಿಸಬಾರದಾದರೂ, ಜನಗಳು ರೂಢಿಗೆ ತಂದ ಮಾತುಗಳನ್ನು ಸಮಯೋಚಿತವಾಗಿ ಒಪ್ಪಿಕೊಳ್ಳಬೇಕು. ಕೈಯಲ್ಲಾದ ಮಟ್ಟಿಗೆ ಮಾತುಗಳನ್ನು ಕಲ್ಪನೆ ಮಾಡಬಾರದು; ಹಾಗೆ ಮಾಡಿದರೂ ಕನ್ನಡ ಮಾತುಗಳನ್ನೇ, ಬಳಸುತ್ತಿರುವ ಸಂಸ್ಕೃತ ಪವಗಳನ್ನೇ ಕೂಡಿಸುವುದು ಅನುಕೂಲ, ರೈಲನ್ನು ರೈಲೆಂದೇ ಕರೆಯುವುದು ಉತ್ತಮ; ಹೊಗೆಬಂಡಿ, ಜೊಗೆಗಾಡಿ ಎನ್ನುವುದು ಮಧ್ಯಮ; ಧೂಮಶಕಟವೆನ್ನುವುದು ಅಧಮ. ಮುಖ್ಯ, ಬರೆಯುವವರು ಕಠಿನ ಪದಗಳಲ್ಲಿ ಕೈವಲ್ಯವುಂಟೆಂದು ಮೋಸಹೋಗದೆ, ಅರ್ಥದಲ್ಲಿ ಬುದ್ಧಿಯನ್ನು ಓಡಿಸಿ ಪ್ರೌಢತನವನ್ನು ತೋರಿಸಿದರೆ ಎಲ್ಲರೂ ಬದುಕಿಕೊಂಡಾರು.

(೨) ಭಾಷೆಯನ್ನು ಈ ತರದಲ್ಲಿ ಸೋಸುವುದಕ್ಕೆ ಉದ್ದೇಶವೇನೆಂದರೆ, ಎಲ್ಲಾ ಜನರೂ ಓದಬೇಕೆನ್ನುವುದೇ. ರಾಜರಿಗೇ ಆಗಲಿ, ಪಂಡಿತರಿಗೇ ಆಗಲಿ, ಬರೆಯುತಕ್ಕ ಕಾಲ ಹೋಯಿತು. ಈಗ ಹೆಂಗಸರು, ಗಂಡಸರು, ಚಿಕ್ಕವರು, ದೊಡ್ಡವರು, ಬ್ರಾಹ್ಮಣರು, ಒಕ್ಕಲಿಗರು, ಎಷ್ಟರೂ ಓದುವಂತೆ ಬರೆಯಬೇಕು. ಇದರಿಂದ ಇನ್ನೂ ಕೆಲವು ಗುಣಗಳು ತಾವಾಗಿಯೇ ಬರುತ್ತವೆ:—ಸುಲಭವಾಗಿ ಬರೆಯುವುದು, ಎಲ್ಲರಿಗೂ ಇಷ್ಟವಾದ ಸಂಗತಿಗಳನ್ನು ತೆಗೆಯುವುದು, ವಿಪರೀತವಾಗಿ ಲಕ್ಷಣದ ಮೇಲೇ ದೃಷ್ಟಿಯಿಡದೆ ಇರುವುದು, ವಿವೇಕವಾಗಿ ಉಪಯೋಗವಾದ ವಿಚಾರಗಳನ್ನೇ ಹರಡುವುದು, ಇವೇ ಮುಂತಾದುವು.

(೩) ಗ್ರಂಥವಿಷಯ ಪ್ರಯೋಜನವಾದ ಅಂಶವಾಗಿರಬೇಕು. ಸಮಾಜದ ಏಳಿಗೆಗೆ ನೆರವಾಗುವಂತೆ ಇರಬೇಕು. ಧರ್ಮವಿಚಾರದಲ್ಲಿ ಮೂರ್ಖತನವನ್ನು ಹೋಗಿಸುವ ಇಂಡಿಯದ ಪೂರ್ವಕಾಲದ ಚರಿತ್ರೆ, ಮತಗಳ ಬೆಳವಳಿಗೆ ಮತ್ತು ಆಗಾಗಿನ ಮಾರ್ಪಾಟುಗಳು, ಒಗ್ಗಟ್ಟನ್ನೂ ರಾಜಭಕ್ತಿಯನ್ನೂ ಹುಟ್ಟಿಸತಕ್ಕ ನೀತಿತತ್ವಗಳು, ಜೀವನಕ್ಕೆ ಸುಖವನ್ನು ತರುವ ವೈದ್ಯ, ನ್ಯಾಯ, ಶಿಲ್ಪ ಮೊದಲಾದ ಕುಶಲಶಾಸ್ತ್ರಗಳು, ಬುದ್ಧಿಯನ್ನು ಕುದುರಿಸಿ ಮೂಢಭಕ್ತಿಯನ್ನು ಕಿತ್ತುಹಾಕುವ ಪ್ರಕೃತಿಶಾಸ್ತ್ರಗಳು, ಇವು ಮೊದಲಾದುವನ್ನು ಸಂಸ್ಕೃತದಿಂದಲೂ ಇಂಗ್ಲಿಷಿನಿಂದಲೂ ಗ್ರಹಿಸಿದ ವಿದ್ವಾಂಸರು ಚಿಕ್ಕವರಿಗೆ ಅವರು ಆಡುವ ಮಾತಿನಲ್ಲಿ ತಿಳಿಸತಕ್ಕದ್ದು.

(೪) ಲಾಭವೇ ಗ್ರಂಥಕ್ಕೆ ಗುರಿಯಲ್ಲ; ಹರ್ಷವೂ ಆಗಿರುವುದರಿಂದ ವಿನೋದವಾಗಿ ಹೊತ್ತು ಕಳೆಯುವುದಕ್ಕೆ ಕಟ್ಟುಕಥೆಗಳನ್ನೂ ಕಾದಂಬರಿಗಳನ್ನೂ, ಸರಸವಾದ ಪ್ರಸಂಗಗಳನ್ನೂ ಬರೆಯಬೇಕು. ಇವಕ್ಕೆಲ್ಲಾ ಇಂಗ್ಲಿಷಿನಲ್ಲಿ ತುಂಬ ಸಹಾಯ ದೊರೆಯುತ್ತದೆ. ಈ ಬಗ್ಗೆ ಮೈಸೂರಿನ ಗ್ರಂಥಮಾಲೆ, ಕರ್ಣಾಟಕ ಚಂದ್ರಿಕೆ, ಧಾರವಾಡದ ವಾಗ್ಭೂಷಣ ಇವು ಮುಂದಾಳಾಗಿ ಹೊರಟವೆ. ಇನ್ನೂ ಅಭಿವೃದ್ಧಿಗೆ ಅವಕಾಶವುಂಟು. ಆದರೆ ಸದ್ಯಕ್ಕೆ, ನನಗೆ ತೋರುವುದರಲ್ಲಿ, ದೊಡ್ಡ ಕವನಗಳನ್ನಾಗಲಿ, ಸ್ವಂತ ನಾಟಕಗಳ

ನ್ನಾಗಲಿ, ಬರೆಯತಕ್ಕದ್ದಲ್ಲ. ಬಾವಿಯಲ್ಲಿ ಸೀನೀರು ಸಿಕ್ಕುತ್ತಿರುವಾಗ ಕಡಲಲ್ಲಿ ಹೋಗಿ ಉಪ್ಪು ನೀರು ಕುಡಿಯತಕ್ಕದ್ದಲ್ಲ. ದೊಡ್ಡತನಕ್ಕೆ ಬೆರಗಾಗಿ ನಮ್ಮ ಯೋಗ್ಯತೆಯನ್ನು ಏಕೆ ಮೀರಬೇಕು? ಅಂದವಾದ ಹೂವು ಬೇರು ಕೊನೆ ಬಲಿತ ಮೇಲೆ ಅರಳುವುವೇ ಹೊರತು, ಬಿತ್ತನವನ್ನು ನೆಟ್ಟ ಬೆಳಗ್ಗೆ ಬಿಡಲಾರದು. ಕವಿ ಎನ್ನಿಸಿಕೊಳ್ಳುವುದಕ್ಕೆ ಎಲ್ಲರಿಗೂ ಆಸೆಯೇ, ಯಾರಿಗಿಲ್ಲ? ಆದರೆ ಅದಕ್ಕೆ ಕಾಲಬೇಕು, ಪ್ರಾಪ್ತಿಬೇಕು, ಬರಿಯ ವೃತ್ತಗಳ ಹೆಣಿಗೆಯೊಂದೇ ಸಾಲದು. ಹಳ್ಳಿಯವರು ಆಡುವ ಗಾದೆ ಸಾಮತಿಗಳನ್ನು ಹಳಗನ್ನಡದಲ್ಲಿ ಕಂದಗಳು ಮಾಡಿ ನೇಯುವುದಕ್ಕಿಂತ ಗಂಭೀರವಲ್ಲವೇ ಮಾಗಿಯ ಕೋಗಿಲೆಯಂತೆ ಬಾಯಿ ಹೊಲಿದುಕೊಂಡಿರುವುದು?

(೫) ಮತ್ತೊಂದು ಭಾಗದಲ್ಲಿ ಗ್ರಂಥ ನಮ್ಮಲ್ಲಿ ಅಪೂರ್ವ—ಹಿರಿಯವರ ಬದುಕುಗಳು. ಹಿಂದೆ ನಮ್ಮಲ್ಲಿ ಎಷ್ಟೋ ಜನ ಆಚಾರ್ಯರೂ, ಕವಿಗಳೂ, ಶೂರರೂ ಇದ್ದರು. ಅವರ ಕಾಲವೇ ತಿಳಿಯದ ಹಾಗೆ ಆಗಿದೆ: ಅವರ ಚರಿತ್ರೆಯೆಂದರೆ ಪೊಳ್ಳು ಹರಟೆಯೂ, ಕ್ಷುದ್ರ ಮಹತ್ವಗಳೂ ಆಗಿದೆ. ಇದನ್ನೆಲ್ಲಾ ಶ್ರಮದಿಂದ ವಿಚಾರಮಾಡಿ ಸರಿಪಡಿಸಬೇಕು. ಸತ್ಯದಿಂದ ಎಂದಿಗೂ ಲೋಪವಿಲ್ಲ; ಅವರು ಬಾಳಿದ ರೀತಿ, ಅವರ ನಡೆನುಡಿಗಳು, ಅವರು ಹಿಡಿದು ಸಾಧಿಸಿದ ಮಹತ್ಕಾರ್ಯಗಳು ಇವೆಲ್ಲಾ ಇದ್ದದ್ದಿದ್ದಂತೆ ತಿಳಿದರೆ ಹುಡುಗರಲ್ಲಿ ಹುರುಡೂ, ಜನರಲ್ಲಿ ಸ್ವದೇಶಪ್ರೇಮವೂ ಆತ್ಮಗೌರವವೂ ಮೊಳಕೆ ಹಾಕುತ್ತವೆ.

(೬) ಹೆಚ್ಚು ಆಡಿದ್ದರಿಂದೇನು? ಹೇಗೆ ಆದಿಯಿಂದಲೂ ಸಂಸ್ಕೃತದ ಶಿಕ್ಷೆಯಲ್ಲೂ, ಸಂಸ್ಕೃತದ ಪೋಷಣೆಯಲ್ಲೂ ಕಾವ್ಯಮಾಲೆಯನ್ನು ಬೆಳಸಿದೆವೊ, ಹಾಗೇ ಈಗ ದೈವಯತ್ನದಿಂದ ಲಭಿಸಿರುವ ಇಂಗ್ಲಿಷಿನ ಶಿಕ್ಷೆಯಲ್ಲೂ, ಇಂಗ್ಲಿಷಿನ ಪೋಷಣೆಯಲ್ಲೂ, ಅದನ್ನು ಬೆಳಸಬೇಕು. ಇಂಗ್ಲಿಷರ ಕಾವ್ಯಮಾಲೆ ಪರಮೋತ್ಕೃಷ್ಟವಾದದ್ದು; ಗ್ರೀಕ್, ಲ್ಯಾಟಿನ್, ಜರ್ಮನ್, ಫ್ರೆಂಚ್, ಸಂಸ್ಕೃತ ಮುಂತಾದ ಭಾಷೆಗಳಿಂದ ಸಾರವನ್ನು ಹೀರಿ ಪುಷ್ಟಿಯಾದದ್ದು. ಇದರ

ಗುಣವನ್ನು ಕಲಿತು, ಇವರ ಐಶ್ವರ್ಯದಲ್ಲಿ ಭಾಗಿಗಳಾಗಿ, ಬೇಕಾದ ರೀತಿಯಲ್ಲಿ ಭಾಷಾಂತರಗಳಿಂದ ಕನ್ನಡದ ಬೊಕ್ಕಸವನ್ನು ತುಂಬಿಟ್ಟರೆ, ಮುಂದೆ ಸ್ವದೇಶಮಾರ್ಗವೂ ವಿದೇಶಮಾರ್ಗವೂ ಕಲೆತು ಒಂದಾಗಿ, ಎರಡರಲ್ಲೂ ಒಗ್ಗದುವು ವಕ್ರವಾದುವು ಬಿಟ್ಟುಹೋಗಿ, ಅತ್ಯುತ್ತಮವಾದ ಕಾವ್ಯಮಾಲೆ ನಮ್ಮಲ್ಲೂ ನಿಲ್ಲುವುದಕ್ಕೆ ಸಂದೇಹ ತೋರುವುದಿಲ್ಲ.

(೭) ಭಾಷಾಂತರವನ್ನು ಹೇಳುತ್ತಿರುವಾಗ ಸಂಸ್ಕೃತವನ್ನು ನಾನು ಮರೆಯುವುದಿಲ್ಲ. ಇದರಲ್ಲಿ ಸಂಸ್ಕೃತ ಪಂಡಿತರು ಧಾರಾಳವಾಗಿ ಕನ್ನಡಿಗರನ್ನು ಉದ್ಧಾರಮಾಡಬಹುದು. ಮತ ವಿಷಯವಾಗೂ, ನೀತಿ ವಿಷಯವಾಗೂ, ಆಚಾರಸಂಸ್ಕಾರಗಳ ವಿಷಯವಾಗೂ ಈಗ ದೇಶದಲ್ಲಿ ಎಲ್ಲೆಲ್ಲೂ ಚರ್ಚೆ ನಡೆಯುತ್ತಿದೆಯಷ್ಟೆ. ಜೀವಕ್ಕೆ ಹೇಗೆ ಕರ್ಮಪಾಶ ಬಿಡುವುದಿಲ್ಲವೋ, ಹಾಗೆ ಏನು ಮಾಡಿದರೂ ಪೂರ್ವದ ಪ್ರಭಾವದಿಂದ ನಾವು ತಪ್ಪಿಸಿಕೊಳ್ಳಲಾರೆವು. ಆದದ್ದರಿಂದ ಏನು ತಿದ್ದುಪಾಟು ಆಗಬೇಕಾದರೂ ಪೂರ್ವಪದ್ಧತಿಯನ್ನು ಸಮಗ್ರವಾಗಿ ಪರಿಶೋಧಿಸಿದಲ್ಲದೆ ಯತ್ನವಿಲ್ಲ. ಇದಕ್ಕಾಗಿ ಸಂಸ್ಕೃತದಲ್ಲಿ ವಿದ್ವಾಂಸರಾದವರು ನಿಸ್ಸಾರವಾದ ಕಾವ್ಯನಾಟಕಗಳ ಭಾಷಾಂತರವನ್ನು ಬಿಟ್ಟು, ಆಳಿದ ಮಹಾಸ್ವಾಮಿಗಳಾದ ಮುಮ್ಮಡಿ ಕೃಷ್ಣರಾಜ ಒಡೆಯರು, ಚಾಮರಾಜ ಒಡೆಯರು, ಇವರ ಹೆಸರಿನಲ್ಲಿ ಭಾಗವತ, ಭಾರತ, ರಾಮಾಯಣಗಳನ್ನು ಪ್ರತಿಯೊಂದು ಮನೆಯಲ್ಲಿಯೂ ಹೆಂಗಸರೂ ಕೂಡ ಓದಿಕೊಳ್ಳುವಂತೆ ಮಾಡಿರುವ ರೀತಿಯಲ್ಲಿ, ಅಮೂಲ್ಯವಾದ ಶ್ರುತಿ, ಸ್ಮೃತಿ, ಉಪನಿಷತ್ತು, ಪುರಾಣಗಳನ್ನೂ, ಆಚಾರ್ಯರ ಭಾಷ್ಯಗಳನ್ನೂ ಅನ್ಯಮತಗಳ ತತ್ವಗಳನ್ನೂ ನಿಷ್ಪಕ್ಷಪಾತವಾಗಿ ಭಾಷಾಂತರ ಮಾಡಿಕೊಟ್ಟರೆ ಜನಗಳ ಜ್ಞಾನೋದಯವೇ ಅಲ್ಲದೆ ಕನ್ನಡ ಕಾವ್ಯಮಾಲೆಯೂ ಸಮೃದ್ಧಿಯಾಗುತ್ತದೆ. ಪ್ರಕೃತದಲ್ಲಿ ನಮ್ಮ ದೇಶಕ್ಕೆ ಇದಕ್ಕಿಂತ ಶ್ರೇಷ್ಠವಾದ ಉಪಕಾರ ನನಗೆ ತೋರುವುದಿಲ್ಲ.

೧೬. ಆರ್ಯರೇ, ಬಿದ್ದುಹೋಗಿರುವ ನಮ್ಮ ಮಾತೃಭಾಷೆಯನ್ನು ತಲೆಯೆತ್ತಿಸುವುದು ಸುಲಭವಾದ ಕೆಲಸವಲ್ಲ; ಅಲ್ಲೊಬ್ಬರು

ಇಲ್ಲೊಬ್ಬರು, ಎರಡು ಪಂಕ್ತಿಯನ್ನು ಗೀಚಿ ಅಚ್ಚಿಗೆ ತರುವುದರಿಂದ ಸಾಗತಕ್ಕ ಕೆಲಸವೂ ಅಲ್ಲ. ಮಾತೃಭಾಷೆಯನ್ನು ಸಾಯಿಸುವ ಮಾತನ್ನು ಇಲ್ಲಿಗೇ ಬಿಟ್ಟುಬಿಡೋಣ. ಈಗ ಎಲ್ಲಾ ರಾಜ್ಯಗಳಲ್ಲೂ ಎಲ್ಲಾ ಜನರಿಗೂ ಓಮುಬರಹವನ್ನು ಕಲಿಸಿ ತಿಳಿವಳಿಕೆಗೆ ದಾರಿಮಾಡಬೇಕೆಂದು ಹೊರಟಿರುತ್ತಾರೆ. ಇದಕ್ಕೆ ಮಾತೃಭಾಷೆಯನ್ನು ಬಿಟ್ಟರೆ ಆಗುವುದಿಲ್ಲ. ಇವಲ್ಲದೆ ಪ್ರಪಂಚದಲ್ಲಿ ಅಭಿಮಾನವುಳ್ಳ ಯಾವ ಜನವೂ ತಮ್ಮ ಭಾಷೆಯನ್ನು ತಾವೇ ಹಳಿದುಬಿಟ್ಟು ತೊರೆಯುವುದಿಲ್ಲ. ಎಲ್ಲೋ ಒಂದು ಕೋಟಿ ಜನ ಆಡುವ ಭಾಷೆ ಎನ್ನುತ್ತೀರೇನೋ ?–ಗ್ರೀಸಿನಲ್ಲಿ, ಅವರಲ್ಲೂ ಅಥೆನ್ಸ್ ಪಟ್ಟಣದಲ್ಲಿ, ಗ್ರೀಕ್ ಕಾವ್ಯಮಾಲೆಯನ್ನು ಬೆಳಸಿದ ಜನ ಎಷ್ಟಿದ್ದರು ? ಅವರ ಕಾವ್ಯಮಾಲೆಯ ವಿಸ್ತಾರವೇನು, ಪ್ರಾಶಸ್ತ್ಯವೇನು ? ಬಹಳ ಹೀನದೆಶೆಯಲ್ಲಿದೆ ಎಂದು ಹೇಳುತ್ತೀರೇನೋ ?–ಐನೂರು ವರ್ಷಗಳ ಹಿಂದೆ ಇಂಗ್ಲಿಷ್ ಕಾವ್ಯಮಾಲೆ ಯಾವ ಸ್ಥಿತಿಯಲ್ಲಿ ಇತ್ತು ? ಉಳಿಯುತ್ತದೆಯೋ ಇಲ್ಲವೋ ಎಂದು ಇದ್ದರು ; ಈಗ ಅವರ ಪ್ರಾಬಲ್ಯಕ್ಕೆ ಆ ಜನರ ಪ್ರಾಬಲ್ಯವೂ ಎಲ್ಲೆಯಿಲ್ಲ. ಆಲದ ಬಿಳಲನ್ನು ನೋಡಿದ್ದೀರಷ್ಟೆ ; ಬಳಲುತ್ತಾ ಗಾಳಿಗೆ ತೂರಾಡುವಾಗ ಉಗುರಿನಲ್ಲಿ ಚಿಗುಟಿ ಹಾಕಬಹುದೆಂದು ತೋರುತ್ತದೆ ; ನೆಲಕ್ಕೆ ಮುಟ್ಟಿಗೆ ತಗಲಲಿ ; ತಾಯಿಮರ ಒಲವು ಬಂದರೆ ಅದಕ್ಕೆ ದೊಡ್ಡ ಊರೆಯಾಗಿ ತಡೆಯುತ್ತದೆ. ನಮ್ಮ ಅದೃಷ್ಟ ನಮ್ಮ ಕೈಯಲ್ಲೇ ಅಡಗಿದೆ. ಬಲದಿಂದ, ಸಾಹಸದಿಂದ ಕೆಲಸಕ್ಕೆ ಹೊಕ್ಕರೆ ಯಾವುದು ಹರಿಯುವುದಿಲ್ಲ ? ಕೆಲಸವೇನೋ ಕಷ್ಟಸಾಧ್ಯವೇ ; ಆದರೆ ವಿಶ್ವಾಸಪಟ್ಟು, ಸರಿಯಾದ ಮಾರ್ಗದಲ್ಲಿ ಶ್ರಮಪಡತಕ್ಕ ಜನ ಒಂದು ಆದರೆ ನಮ್ಮ ಕಾವ್ಯಮಾಲೆಗೂ ಉತ್ತಮದೆಶೆ ಬಂದೇಬರುವುದು. ಆಗ್ಗೆ ಅದು ನಮಗೊಂದು ಕಿರೀಟವಾಗುವುದು ; ಜನರಿಗೆಲ್ಲಾ ಒಂದು ಚಿನ್ನದ ಕಟ್ಟಾಗುವುದು ; ಮಕ್ಕಳಿಗೆ ಆನಂದವನ್ನೂ, ದಿವ್ಯವಾದ ಬೋಧನೆಯನ್ನೂ ಬೀರುತ್ತ, ಬಿತ್ತುತ್ತ, ದೇಶದ ಘನತೆಗೆ ಆಧಾರವಾಗುವುದು. ಆಗ್ಗೆ ಇನ್ನೊಂದುಸಾರಿ, ಹಿಂದೆ ಆರ್ಯಭೂಮಿಯಲ್ಲಿದ್ದ ಋಷಿಗಳೂ, ವೀರರೂ ಜನ್ಮವೆತ್ತುವರು ; ಎತ್ತಿ, ರಾಜ್ಯದಲ್ಲಿ ಧರ್ಮವನ್ನೂ ಶಾಂತಿಯನ್ನೂ ನೆಲೆಗೊಳಿಸುವರು. ಏಕೆಂದರೆ, ಲೋಕವೆಲ್ಲಾ ಬಗ್ಗುವುದು ಶ್ರೇಷ್ಠವಾದ ಬುದ್ಧಿಗೆ ತಾನೇ; ಆ ಬುದ್ಧಿ ತಾವರೆಯ ಹಾಗೆ ಅರಳುವುದು ಕಾವ್ಯರತ್ನದ ಬೆಳಕಿನಿಂದಲೇ.

ಕನ್ನಡಕ್ಕೆ ಒಂದು ಕಟ್ಟು

೧. ಸಾಮಾನ್ಯ ವಿಧಿಗಳು

೧. ಈಗಿನ ಕಾಲದ ವಿದ್ಯಾವಂತರಾದವರು ಇಂಗ್ಲಿಷ್ ವಿದ್ಯೆಯಿಂದ ತಾವು ಪಡೆದ ಉತ್ತಮಜ್ಞಾನವನ್ನು ಕೂಡಿದಮಟ್ಟಿಗೆ ಸಾಮಾನ್ಯ ಜನರೂ ತಿಳಿದುಕೊಳ್ಳುವಹಾಗೆ ಅವರು ಆಡುವ ಭಾಷೆಯಲ್ಲೇ ಹರಡುವುದಕ್ಕೆ ಶಕ್ತರಾಗಿರಬೇಕಾದದ್ದು ನಮ್ಮ ದೇಶದ ಏಳಿಗೆಗೆ ಅವಶ್ಯಕವಾದ ಸೌಕರ್ಯಗಳಲ್ಲಿ ಒಂದಾಗಿದೆ. ಇದಕ್ಕಾಗಿ ಯಾವುದಾದರೂ ವಿಹಿತವಾದ ಮಾರ್ಗದಲ್ಲಿ ಒಂದು ಕಟ್ಟು ಮಾಡಿಕೊಂಡು ವಿದ್ಯಾರ್ಥಿಗಳಿಗೆ ದೇಶಭಾಷೆಯನ್ನು ಬರೆಯುವುದನ್ನು ಕಲಿಸಿಕೊಡಬೇಕು.

೨. ಆ ವಿಹಿತವಾದ ಮಾರ್ಗ ಯಾವುದು ? ರೂಢಿಯಲ್ಲಿರುವ ಭಾಷೆಯನ್ನು ಕ್ರಮಪಡಿಸಿಕೊಳ್ಳುವುದೇ ಅಲ್ಲವೆ? ಕೆಲವರ ಮನಸ್ಸಿನಲ್ಲಿ ಭಾಷೆ ಎನ್ನುವುದು ಓಲೆಯಗರಿಯಿಂದ ಹೊರಟು ಅಚ್ಚಿನ ಮೊಳೆಯಮೂಲಕ ಇಳಿದು ಬರುವಂತೆ ಕಾಣುತ್ತದೆ; ಇವರಿಗೆ ಪುಸ್ತಕದಲ್ಲಿ ಕಣ್ಣಿಗೆ ತೋರುವ ಭಾಷೆ ಅಂದರೆ ಗೌರವ; ಜನರ ಬಾಯಿಂದ ಕಿವಿಗೆ ಬೀಳುವ ಭಾಷೆ ಅಂದರೆ ಧಿಕ್ಕಾರ. ಆದರೂ ಬರೆಯುವ ಭಾಷೆಗೆ ಆಡುವ ಭಾಷೆಯೇ ಜನ್ಮಸ್ಥಾನ. ಕಾವ್ಯವನ್ನು ಮೊದಲು ಬರೆದವನು ಆಡುವ ಭಾಷೆಯಲ್ಲಿ ತಾನೇ ಬರೆದಿರಬೇಕು ? ಇವತ್ತಿನವರೆಗೆ ಕನ್ನಡ ಪುಸ್ತಕವೇ ಇಲ್ಲದಿದ್ದರೆ, ಈಗ ಮೊದಲು ಬರೆಯತಕ್ಕವನೂ ಹಾಗೆ ತಾನೇ ಮಾಡಬೇಕು ? ಹಿಂದಿನ ಭಾಷೆ ಆಗಿನ ಜನಕ್ಕೆ ತಿಳಿಯುತ್ತಿತ್ತು; ಈಗಿನ ಜನಕ್ಕೆ ತಿಳಿಯುವುದಿಲ್ಲ; ಅದರ ವ್ಯಾಕರಣ ಕಷ್ಟ; ಇದಲ್ಲದೆಯೋ, ಅದರ ಶಬ್ದಕೋಶ ಈಗಿನ ಅಭಿಪ್ರಾಯಗಳನ್ನೆಲ್ಲಾ ಹೇಳಲಾರದು. ಆದರೂ ಬಹುಕಾಲದಿಂದಲೂ ಬರೆದು ಬರೆದು ಒಂದು ಕ್ರಮಕ್ಕೆ ಬಂದಿರುವ ಗ್ರಂಥಭಾಷೆ ಇರುವಾಗ, ಈಗಿನ ಗ್ರಂಥಕರ್ತರು ಅದನ್ನು ಧಿಕ್ಕಾರ ಮಾಡುವುದಕ್ಕೂ ಆಗುವುದಿಲ್ಲ. ಅದರಮೇಲೂ ದೃಷ್ಟಿ ಇರಲಿ; ಹೊಸ ಭಾಷೆಯ ಅಕ್ರಮ, ಅಸರೂಪವನ್ನೆಲ್ಲಾ ಅದರಮೇಲಿನ ಗಮನದಿಂದ ಒಂದು ಕ್ರಮಕ್ಕೆ ತರೋಣ. ಈಗಿನ ಆಡುವ ಭಾಷೆಯಲ್ಲಿ ಕ್ರಮವಿಲ್ಲ, ಏಕರೂಪವಿಲ್ಲ; ಪ್ರಾಂತ್ಯಭೇದವಿದೆ, ಮಿಶ್ರವಿದೆ, ಗ್ರಾಮ್ಯವಿದೆ. ಅರ್ಥ, ಕ್ರಮ ಎರಡು ಬೇಕಾದರೂ, ಅರ್ಥ ಮುಂದು, ಕ್ರಮ ಹಿಂದು ; ಆದದ್ದರಿಂದ

ಅರ್ಥವಾಗುವ ಹೊಸಭಾಷೆಯನ್ನೇ ಹಿಡಿದು ಕ್ರಮಕ್ಕೆ ಬರುವಂತೆ ತಪ್ಪು ಭಾಗವನ್ನೆಲ್ಲಾ ಶೋಧಿಸೋಣ. ಎರಡು ಭಾಷೆಗೂ ಮಧ್ಯಮಾರ್ಗವನ್ನು ಹಿಡಿದರೆ ಇದು ಸಾಧ್ಯವಾಗುತ್ತದೆ. ಹೊಸಗನ್ನಡದಲ್ಲಿ ವಚನ ಗ್ರಂಥವನ್ನು ಬರೆಯುವುದಕ್ಕೆ, ಸತ್ತ ಕವಿಗಳೂ ಶಾಸನಕಾರರೂ ಬಲವಾಗಿ ಹಿಡಿದಿರುವ ಮುಷ್ಟಿಯಿಂದ ಭಾಷೆಯನ್ನು ಸಡಿಲಿಸಿ, ಬದುಕಿರತಕ್ಕವರ ಬಾಯಿಯಲ್ಲಿ ಸ್ವತಂತ್ರವಾಗಿ ಉಸಿರಾಡಿ ಜೀವಕಳೆ ತುಂಬಿಕೊಳ್ಳುವಂತೆ ಮಾಡಬೇಕು. ಆದರೆ ಭಾಷೆಯನ್ನು ಸುಲಭಮಾಡುತ್ತೇನೆಂದು, ಅಬದ್ಧ ಮಾಡಬಾರದು; ಗ್ರಾಮ್ಯವನ್ನು ದೂರವೇ ನಿಲ್ಲಿಸಿ, ಭಾಷೆ ಶುದ್ಧವಾಗಿ, ಬಿಗಿಯೂ ಕಟ್ಟೂ ಇರುವಂತೆ ಜಾಗ್ರತೆಯಿಂದ ನೋಡಿಕೊಳ್ಳಬೇಕು.

೩. ಈ ಮಧ್ಯಮಾರ್ಗ ಏನೆನ್ನುವುದು ಮುಂದಟ್ಟಾದರೆ ಒಳ್ಳೆಯದು. ಪೂರ್ವದಿಂದ ಇದುವರೆಗೆ ಬಂದಿರುವ ಭಾಷೆಯ ಶಬ್ದಗಳನ್ನೂ, ಶಬ್ದರೂಪಗಳನ್ನೂ ನೋಡಿದರೆ, ಮೂರು ಬಗೆಯಾಗಿ ಕಾಣುತ್ತವೆ.

(i) ಪೂರ್ವದ ರೂಪ—ಪುಸ್ತಕಗಳಲ್ಲಿ ಇರತಕ್ಕದ್ದು; ಹಳಗನ್ನಡ; ಹೊಸಗನ್ನಡವಾದರೂ, ಹೆಚ್ಚುಕಡಮೆ ಹಿಂದಿನ ವ್ಯಾಕರಣಕ್ಕೇ ಸರಿಹೋಗತಕ್ಕದ್ದು.

(ii) ರೂಢಿಯ ರೂಪ—ಈಗಿನ ಜನರೆಲ್ಲಾ ಆಡತಕ್ಕದ್ದು; ಕೆಲವು ವೇಳೆ ಪೂರ್ವದ ರೂಪಕ್ಕೆ ಸಮವಾಗಿರುತ್ತದೆ; ಮಿಕ್ಕವೇಳೆ, ವಿಧಿಗೆ ಬದ್ಧವಾಗಿ ಹೊಸ ಸೂತ್ರಗಳಲ್ಲಿ ಅಡಕವಾಗುತ್ತದೆ.

(iii) ಗ್ರಾಮ್ಯರೂಪ—ಜನರೆಲ್ಲಾ ಆಡಿದರೂ ವಿಧಿಯನ್ನು ಮೀರಿದ್ದು; ಕಡಮೆ ತಿಳಿವಳಿಕೆ, ಅವಸರ, ಅಸಡ್ಡೆಗಳಿಂದ ಅರೂಪವಾದದ್ದು; ಇಲ್ಲ, ಕೆಲವು ಪ್ರಾಂತ್ಯಗಳಲ್ಲಿ ಮಾತ್ರ ಉತ್ತಮ ಜಾತಿಯವರಲ್ಲಿ ಕೆಲವರು ಮಾತ್ರ, ಕೀಳುಜಾತಿಯವರು ಮಾತ್ರ, ಆಡತಕ್ಕದ್ದು.

ಕೆಲವು ಉದಾಹರಣೆಗಳಿಂದ ಈ ಭೇದ ಸ್ಪಷ್ಟವಾಗುತ್ತದೆ :—

ಪೂರ್ವದ ರೂಪ—ಆದರಿಂದೆ, ಎನಗೆ, ಅಣ್ಣಂಗೆ, ಮಾಡುತ್ತೆ, ನಡೆವ, ಕಾಣದುದು, ಇರುವುದು, ಬರುವೆ, ನಡೆದುದು.

ಪೂರ್ವಕ್ಕೂ, ರೂಢಿಗೂ, ಸಮರೂಪ-ಬಂದ, ಕೊಟ್ಟ, ಮಾಡುವ, ಹೇಳುವ, ನೋಡಿದ, ಕೇಳಿದ, ಹೋಗಿ, ಬೇಡಿ, ಹೊಡೆದು, ಮುರಿದು, ಮರಕ್ಕೆ, ಮರದ, ಮರದಲ್ಲಿ, ಬಂದೆವು.

ರೂಢಿಯ ರೂಪ—ಅವರಿಂದ, ನನಗೆ, ಅಣ್ಣನಿಗೆ, ಮಾಡುತ್ತ, ನಡೆಯುವ, ಕಾಣದ್ದು, ಇರುತ್ತದೆ, ಇವೆ, ಬರುತ್ತೀಯೆ, ನಡೆದದ್ದು.

ರೂಢಿಗೂ, ಗ್ರಾಮ್ಯಕ್ಕೂ, ಸಮರೂಪ—ಇತ್ತು, ಒದ್ದಾಡು, ಕುದ್ದುಕೊ, ಅನ್ನು, ಅಂತ, ಅಂದರೆ, ಯಾರು, ಯಾತಕ್ಕೆ, ಬಗ್ಗೆ, ಆಗ್ಗೆ, ಜೇಗ್ಗೆ, ಕೂತುಕೊ, ಕೂರಿಸು, ಆರಿಸು, ಎಳತಂದು, ಬಳಿಕೊಂಡು, ನೋಯಿತು, ಬೇಯಿತು, ಬಂತು.

ಗ್ರಾಮ್ಯರೂಪ—ನಂಗೆ, ಅಣ್ಣಗೆ, ಮಾಡ್ತ, ನಡೆಯೋ, ಬರೋಕ್ಕೆ, ಬರುತ್ಲ್ಲ, ಬಂದ್ಲು, ಮನೇಲಿ, ಬರ್‍ತೀ, ಒಳ್ಳೇನು, ಕಟ್ಲಿ, ನುಣುಕು, ಕಳ್ಳೆ, ಇರುತ್ತೆ, ಆಯ್ತು, ಬಂದೊ, ಬಿಡಲಿಕ್ಕೆ, ಸಿಗು, ನಡದ್ದು, ಹೊದ್ದು, ಇನ್ನಿ.

ಹೀಗೆ ಇರತಕ್ಕ ನಾನಾ ರೂಪಗಳಲ್ಲಿ ಮಧ್ಯಮಾರ್ಗವೇನೆಂದರೆ, ಅಂತ್ಯದಲ್ಲಿರುವ ಪೂರ್ವರೂಪ, ಗ್ರಾಮ್ಯರೂಪಗಳನ್ನು ಬಿಟ್ಟು, ಮಧ್ಯದಲ್ಲಿರುವ ರೂಢಿಯರೂಪ, ಸಮರೂಪಗಳನ್ನು ತೆಗೆದುಕೊಳ್ಳುವುದು. ಪೂರ್ವರೂಪ ಶುದ್ಧವಾದರೂ ಬಿಟ್ಟು, ರೂಢಿಗೂ, ಗ್ರಾಮ್ಯಕ್ಕೂ ಸಮವಾದ ರೂಪವನ್ನೇ ಹಿಡಿಯುವುದಕ್ಕೆ ಕಾರಣವೇನೆಂದರೆ—ಭಾಷೆಯ ಉಚ್ಚಾರಣೆ ಕೆಲವು ನಿಯಮಗಳನ್ನು ಅನುಸರಿಸಿ ವ್ಯತ್ಯಾಸವಾಗುತ್ತ ಹೋಗುತ್ತದೆ; ಹೀಗೆ ಬಲುಮಟ್ಟಿಗೆ ತೇಮಹೋದ ರೂಪವನ್ನೇ ಜನವೆಲ್ಲಾ ಆಡುತ್ತಿರುವಾಗ, ಪೂರ್ವರೂಪವನ್ನು ಬರೆದರೆ ಏನೋ ವಿಕಾರವಾಗಿಯೂ ಅತಿ ಪಾಂಡಿತ್ಯವಾಗಿಯೂ ಕಾಣುತ್ತದೆ. ಇತ್ತು—ಇದ್ದಿತು: ಬಿತ್ತು—ಬಿದ್ದಿತು; ಬೆಂತು, ಬೇಯಿತು—ಬೆಂದಿತು ; ಕುದ್ದುಕೊ—ಕುದಿದುಕೊಳ್ಳು; ಇವನ್ನು ಹೋಲಿಸಬಹುದು. (ಹಳಗನ್ನಡದಲ್ಲಿ ಕೂಡ ಕೆಲವು ರೂಢಿರೂಪಗಳು ಗ್ರಾಮ್ಯವಾದರೂ ಸೇರಿವೆ: ಶುದ್ಧ—ಆದುದು, ಪೋದುದು, ಆದನ್, ಬಂದನ್, ಬಿಸುಡಲ್ಕೆ, ಆಗಲ್, ಅಜ್ಜಿ, ನಿಲ್ತು, ಬಿಬ್ಬಿಕು: ರೂಢಿ—ಆಯ್ತು. ಪೋಯ್ತು, ಆದೊನ್, ಬಂದೊನ್, ಬಿಸುಡಲಿಕ್ಕೆ, ಆಗಲು, ಅರ್ತಿ. ನಿಂದು, ಬರ್ದುಕು.)

೪. ಇದನ್ನೆಲ್ಲಾ ಒಪ್ಪುವುದಾದರೆ, ಭಾಷೆಯನ್ನು ಈ ರೀತಿ ಸುಲಭಮಾಡಬಹುದಾಗಿ ತೋರುತ್ತದೆ :—ರೂಢಿಭಾಷೆಯನ್ನೇ ಆಧಾರವಾಗಿಟ್ಟುಕೊಳ್ಳುವುದು: ಬಿಟ್ಟುಹೋದ ಪೂರ್ವದ ರೂಪಗಳನ್ನು ಸಾಧ್ಯವಾದಮಟ್ಟಿಗೆ ಬಿಟ್ಟುಬಿಡುವುದು ; ಇನ್ನೂ ಬಳಕೆಯಲ್ಲಿರುವ ರೂಪಗಳನ್ನು

ಉಪಯೋಗಿಸುವುದು; ಹಿಂದೆ ಇಲ್ಲದಿದ್ದರೂ ಈಚೆಗೆ ಹೊಸದಾಗಿ ಹುಟ್ಟಿರುವುಗಳಲ್ಲಿ, ಉತ್ತರವಾಡುವ, ಎಲ್ಲಾ ಕಡೆಯೂ ಸಾಮಾನ್ಯವಾದ, ವಿಧಿಬದ್ಧವಾದ ರೂಪಗಳನ್ನು ಸೇರಿಸಿಕೊಳ್ಳುವುದು; ಅತಿ ಪಾಂಡಿತ್ಯವನ್ನು ಬಿಡುವುದಕ್ಕೆಷ್ಟೋ ಅಷ್ಟು ಹೊರತು, ಮಿಕ್ಕ ಭಾಗದಲ್ಲಿ ಗ್ರಾಮ್ಯವನ್ನೂ, ಸ್ವೇಚ್ಛಾಪ್ರವೃತ್ತಿಯನ್ನೂ ಒಪ್ಪಿಕೊಳ್ಳದೆ ತಡೆಯುವುದು. ಮುಖ್ಯ, ವಿದ್ಯಾರ್ಥಿಗಳು ಸಾಧಾರಣವಾಗಿ ಗ್ರಾಮ್ಯವನ್ನೂ ಪಾಂಡಿತ್ಯವನ್ನೂ ತಿರಸ್ಕರಿಸಿ, ಯಾವಾಗಲೂ ಜನಸಾಮಾನ್ಯಕ್ಕೆ ಬರೆಯುತ್ತಿದ್ದೇವೆಂತಲೇ ಭಾವಿಸುತ್ತಾ, ಜನರು ಆಡುವ ಭಾಷೆಯ ಛಾಯೆಯನ್ನೇ ಹೆಗ್ಗುರುತಾಗಿಟ್ಟುಕೊಳ್ಳಬೇಕೆಂದು ಹೇಳಬಹುದು.

೨. ಶಬ್ದಕೋಶ

೫. ನಮ್ಮ ಅಭಿಪ್ರಾಯವನ್ನು ಮತ್ತೊಬ್ಬರಿಗೆ ಹೇಳುವುದಕ್ಕಾಗಿ ಶಬ್ದಗಳೇ ಹೊರತು, ಅವರ ಕಿವಿಯಲ್ಲಿ ಆರ್ಭಟಮಾಡುವುದಕ್ಕಲ್ಲ: ಆದದ್ದರಿಂದ ಬರೆಯುವವರು ಉಪಯೋಗಿಸಬಹುದಾದ ಶಬ್ದಗಳು ಯಾವುವು, ಉಪಯೋಗಿಸಬಾರದ ಶಬ್ದಗಳು ಯಾವುವು, ಈ ವಿಷಯದಲ್ಲಿ ಕೆಲವು ನಿಯಮಗಳನ್ನು ಮಾಡಿಕೊಳ್ಳಬೇಕು. ಇಲ್ಲಿ ಕೂಡ, ಬಿಡತಕ್ಕ ಭಾಗ ಒಂದಿದೆ ಸೇರತಕ್ಕ ಭಾಗ ಒಂದಿದೆ.

೬. ಪೂರ್ವಕಾಲದ ಕನ್ನಡ ಪುಸ್ತಕಗಳಿಂದ ಸಂಗ್ರಹಿಸಬಹುದಾದ ಶಬ್ದಗಳಲ್ಲಿ ಎರಡು ಜಾತಿಯುಂಟು—ಕನ್ನಡಕ್ಕೆ ಸೇರಿದ ದೇಶ್ಯ; ಸಂಸ್ಕೃತದಿಂದ ಬೆರೆದ ತತ್ಸಮ, ತದ್ಭವಗಳು. ಸಾಮಾನ್ಯ ಜನರಿಗೆ ತಿಳಿವಳಿಕೆಯನ್ನು ಹೆಚ್ಚಿಸುವ ಉದ್ದೇಶದಿಂದ ಬರೆಯತಕ್ಕವರು (ಕೆಲವರು ಯಾವ ಉದ್ದೇಶದಿಂದ ಬರೆಯುತ್ತಿದ್ದಾರೋ ಹೇಳುವುದು ಕಷ್ಟ), ಯಥೇಷ್ಟವಾಗಿ ಪುಷ್ಕಳವಾಗಿರುವ ಈ ಬೊಕ್ಕಸದಿಂದ ಯಾವ ಶಬ್ದಗಳನ್ನು ಮಾತ್ರ ಆರಿಸಿಕೊಳ್ಳಬೇಕೆನ್ನುವ ವಿಷಯದಲ್ಲಿ ಗಮನವಿಡಬೇಕು. ಇಲ್ಲಿ ಕೊಡುವ ನಿಯಮಗಳು ಅವರಿಗೆ ಉಪಯೋಗವಾದಾವು.

(i) ಬಿಟ್ಟುಹೋದ ಹಳಗನ್ನಡ ಶಬ್ದಗಳು, ಶಬ್ದರೂಪಗಳು ಆಗವು. ನಮ್ಮ ಕಾಲದ ಹೊಸಗನ್ನಡ ಪುಸ್ತಕ ಒಂದರ ಇಪ್ಪತ್ತು ಪುಟಗಳಲ್ಲಿ ಈ ರೂಪಗಳು ಇವೆ—ಪಡಿನೋಟ, ಕುಳಿರುಗೊಳ, ಮುಂಗುಡಿ, ಕಡುನೊಂದು, ಹೊಂಪುಳಿ, ಅನುವಿಲ್ಲ, ಬಣ್ಣಿಸು, ಬಂಡುಮಾಡು

ಆರು, ಅದರೊಳು, ಅವನಂ, ಸಿಡುಸುಯ್ದು ನಿರುಕಿಸಿ.

ಆದರೆ ಬಿಟ್ಟು ಹೋಗುತ್ತಿರುವ ಕೆಲವು ಮಾತುಗಳನ್ನು ರೂಢಿಗನುಸಾರವಾಗಿ ಸರಿಯಾದ ಸಂದರ್ಭದಲ್ಲಿ ಉಪಯೋಗಿಸಬಹುದು :— ಅರಿ, ಅರೆ, ಅಲಗು, ಆಳು (=ಮನುಷ್ಯ), ಎಡೆ, ಎರಳು, ಎಣಿಸು (=ಭಾವಿಸು), ಒಲುಮೆ, ಒಸಗೆ, ಓಲಗ (=ಸಭೆ), ಕಡಲು, ಕಡಿವಾಣ, ಕಳಲು, ಕುರಿ (=ಉದ್ದೇಶಪಡು), ಗೆಲವು (=ಹರ್ಷ), ಜರೆ, ತೆರಳು, ನಲಿ, ನುಡಿ, ಪಡೆ (ಗುಂಪು), ಬಿಂಕ, ಮಿರುಗು, ಸವಿ, ಹಲವು, ಹಲುಬು, ಹೊನ್ನು, ಹಳಿ(=ನಿಂದಿಸು), ಹುಸಿ, ಹಗೆ, ಇವು ತಾವಾಗಿ ಜನರ ಬಾಯಿಗೆ ಬರದೆ ಹೋದರೂ ಕೇಳಿದ ಕೂಡಲೇ ಅರ್ಥವಾಗುತ್ತವೆ.

(ii) ಸಾಮ್ಯಭ್ರಮೆಯಿಂದ ಕಲ್ಪನೆ ಮಾಡಿದ ರೂಪಗಳು ಆಗದು :— ಬರುವಿಕೆ, ಇರುವಿಕೆ, ಕೊಡಿಸುವಿಕೆ, ಹುಟ್ಟುವಿಕೆ, ವಾಸಿಸು, ದರ್ಶಿಸು, ಪ್ರಶ್ನಿಸು, ಆಶಿಸು—ಇವು ಹಿಂದೆ ಬಳಕೆಯಲ್ಲಿದ್ದುವೆಂದು ಹೇಳುವುದು ಕಷ್ಟ; ಈಗಂತೂ ಇಲ್ಲ.

(iii) ರೂಢಿಯಲ್ಲಿಲ್ಲದ ಸಂಸ್ಕೃತ ಶಬ್ದಗಳು, ಅರ್ಥಗಳು, ಆಗದು :— ಅಭಿಲಷಿತ, ಅರಾತಿ, ಉಪೋದ್ಘಾತ, ಧರಿತ್ರಿ, ನಭ, ಪರಿಚ್ಛೇದ ಪಾರಾವಾರ, ಬುಧ, ತನೂಜ, ಚಂಡಾಂಶು, ಸಂಗ್ರಾಮ, ಶಿಖಿ; ಇವಕ್ಕಿಂತ ಅಭಿಲಾಷೆ, ಶತ್ರು, ಪೀಠಿಕೆ, ಭೂಮಿ, ಆಕಾಶ, ಅಧ್ಯಾಯ, ಸಮುದ್ರ. ಪಂಡಿತ, ಕುಮಾರ, ಸೂರ್ಯ, ಯುದ್ಧ, ಅಗ್ನಿ-ಇವು ಉತ್ತಮ. ವಿಶ್ವಾಸ, ಅಹಂಕಾರ, ಯಜಮಾನ, ಆತಂಕ, ಮೊದಲಾದ ಶಬ್ದಗಳಿಗೆ ಕನ್ನಡದಲ್ಲಿ ಪ್ರಚಾರವಾದ ಅರ್ಥವೇ ಇರಬೇಕು. ವೃತ್ತದ ಹಿಂಸೆಗಾಗಿ ಕವಿಗಳು ಹೆಣೆದಿರ ತಕ್ಕ ಪರ್ಯಾಯ ಪದಗಳನ್ನು ಮುಖನೋಡದೆ ಕುಯ್ದುಹಾಕಬೇಕು : ರಾಜ, ಪ್ರಭು, ಕಮಲ, ಪದ್ಮ—ಅಭಿಪ್ರಾಯ ಹೊರಪಡುವುದಕ್ಕೆ ಇವು ಸಾಕು; ಜನರು ಉಪಯೋಗಿಸುವುವೂ ಇವೇ. ಗ್ರಂಥವನ್ನು ತೆಗೆದರೆ ಈ ಜಾಡರ ಹುಳುವಿನ ನೂಲಿಗೆ ಕೊನೆಯೇ ಇಲ್ಲ—ನೃಪ, ನೃಪತಿ, ನೃಪಾಲ, ನೃಪಾಲಕ; ನರಪ, ನರಪತಿ ನರಪಾಲ, ನರಪಾಲಕ; ಭೂಪ, ಭೂಪತಿ, ಭೂಪಾಲ,

ಭೂಪಾಲಕ, ಭೂಮಿಪ, ಭೂಮಿಪತಿ, ಭೂಮಿಪಾಲ, ಭೂಮಿಪಾಲಕ ; ಹೀಗೆ ಕಮಲಕ್ಕೆ ಅಬ್ಜ, ಅಬ್ಜಾತ ; ಅಂಬುಜ, ಅಂಬುಜಾತ ; ಅಂಭೋಜ, ಅಂಭೋಜಾತ; ನೀರಜ, ನೀರಜಾತ, ನೀರೇಜ, ನೀರೇಜಾತ ; ವಾರಿಜ, ವಾರಿಜಾತ ; ಪಯೋಜ, ಪಯೋಜಾತ :—ಸಂಸ್ಕೃತ ತಿಳಿಯದವನಿಗೆ ಇದರ ಕೊನೆ ಹತ್ತುವುದಕ್ಕೆ ಶಕ್ತಿ ಇಲ್ಲ.

(iv) ಜನರು ಬಳಸದೆ ಇರುವ ತದ್ಭವ ಆಗದು :—ಅಗ್ಗ, ಅಣೆ, ಇಟ್ಟಿಗೆ, ಎದೆ, ಕೊಡಲಿ, ಗಣೆ, ಗುಡಿ, ಗಂಟು, ಗಾದೆ, ಜೋಗಿ, ದೀವಿಗೆ, ದೆಸೆ, ದೋಣಿ, ನಿದ್ದೆ, ನೊಗ, ಬಂಜೆ, ಬಣ್ಣ, ಬಸವ, ಬಾವಿ, ಬುತ್ತಿ, ಬೂದಿ, ಮುದ್ದು, ಸಂತೆ, ಸಡ್ಡೆ, ಹಕ್ಕಿ, ಹವಣು—ಇವು ಇರಲಿ ; ಅಮರ್ದು, ಆಗಸ, ಉಜ್ಜುಗ, ಗೋವಳ, ಜಗ, ಜಸ, ಜವ್ವನ, ತವಸಿ, ತಾಣ, ತುತಿ, ದೆವಸ, ಸಿಜ್ಜ, ಪಳಿಕು, ಬಕುತಿ, ಬರಿಸ, ಬಸಂತ, ಬಿಜ್ಜೆ, ಮೊಗ, ಸಾಸ, ಹೊತ್ತಗೆ—ಇವು ಬೇಡ. ಇವುಗಳ ಸಂಸ್ಕೃತರೂಪಗಳನ್ನೇ ಈಗ ಜನರು ಹೇಳುತ್ತಾರೆ.

(v) ಕೇವಲ ಸಂಸ್ಕೃತ ಪಾಂಡಿತ್ಯದಿಂದಲೇ ಬರುವ ಅವ್ಯಯಗಳು, ಕ್ರಿಯಾರೂಪಗಳು, ಭಾವನಾಮಗಳು, ಜನರಿಗೆ ಪರಿಚಯವಿಲ್ಲದುವಾದರೆ, ಆಗದು : ರಮಣೀಯ, ರಮ್ಯ, ಶಕ್ಯ, ಲಭ್ಯ ಎನ್ನಬಹುದು; ಲಾಲನೀಯ, ವಂದನೀಯ, ಶೋಚನೀಯ, ಸಂಭಾವನೀಯ, ಎನ್ನಕೂಡದು ; ಊರ್ಜಿತ, ಪ್ರಸಸ್ತ, ಭ್ರಷ್ಟ, ನಷ್ಟ, ಯುಕ್ತ ಎನ್ನಬಹುದು ; ಅವಮಾನಿತ, ಆಕ್ರಂದಿತ, ಉಪಯುಕ್ತ, ಉಪನ್ಯಸ್ತ, ಕೀರ್ತಿತ, ತಿರಸ್ಕೃತ, ಪರಿತ್ಯಕ್ತ, ಪೂರಿತ, ವ್ಯತ್ಯಸ್ತ, ವ್ಯಥಿತ, ವ್ಯಾಕುಲಿತ ಎನ್ನಕೂಡದು ; ಚಾತುರ್ಯ, ಸಾಮರ್ಥ್ಯ, ಐಶ್ವರ್ಯ, ಮಾಧುರ್ಯ, ಸೌಭಾಗ್ಯ, ಇವು ಆಗಬಹುದು; ಆನುಕೂಲ್ಯ, ವೈಪರಿತ್ಯ, ನೈರ್ಮಲ್ಯ, ಬಾಹುಳ್ಯ, ಇವು ಆಗದು. ಹೀಗೆಯೇ, ಬಹುಶಃ, ಪ್ರಾಯಶಃ, ಏತೇನ, ಪರಂತು, ಕರ್ತವ್ಯತಃ, ಮುಖೇನ—ಇವು ಆಗದು. (ಬಹುಶ, ಪ್ರಾಯಶ, ವಿನಹ, ಅಥವ—ಹೀಗೆ ಬರೆದು ಇವು ತದ್ಭವಗಳೆಂದು ಸಾಧಿಸಬಹುದೆ?) ಈ ನಿಯಮಗಳ ಉದ್ದೇಶವೇನೆಂದರೆ—ಮೇಲೆ ಹೇಳಿದಂತೆ

ಭಾಷೆಗೆ ಬಲವಾಗಲಿ ಸೊಗಸಾಗಲಿ ಬರದೆ, ಬರಿಯ ಒಣ ಪಾಂಡಿತ್ಯವನ್ನು ಮಾತ್ರ ತೋರಿಸತಕ್ಕ ಸಂಸ್ಕೃತದ ಹರದವನ್ನೆಲ್ಲಾ ಗುಡಿಸಿ ಎತ್ತಿಹಾಕುವುದೇ.

೭. ಹೀಗೆ ಶುದ್ಧಿಮಾಡಿದಮೇಲೆ, ಶಬ್ದಕೋಶ ಜನರಿಗೆ ಸುಲಭವೂ ಸ್ಪಷ್ಟವೂ ಆಗಿ, ರೂಢಿಭಾಷೆಗೆ ಅನುಕೂಲವಾಗುತ್ತದೆ. ಆದರೆ ವಿದ್ಯಾರ್ಥಿಗಳೂ ಈಗಿನ ಕಾಲದ ಗ್ರಂಥಕಾರರೂ ತಮ್ಮ ವಿದ್ಯೆಯನ್ನು ಸಂಘದಲ್ಲಿ ಹರಡುವುದಕ್ಕೆ ಒದಗುತ್ತದೆಯೋ? ಕಥೆ, ಕವಿತ್ವ ಮೊದಲಾದ ವಿಷಯಗಳಿಗೂ, ಆಚಾರ ವ್ಯವಹಾರ ವಿಷಯಗಳಿಗೂ, ಸಾಕಾದೀತೆಂದು ಹೇಳಬಹುದು. ಪ್ರಕೃತಿಶಾಸ್ತ್ರಗಳ, ಕುಶಲ ಉದ್ಯೋಗಗಳ ವಿಷಯವಾದರೆ, ಅಥವಾ, ಮೇಲೆ ಹೇಳಿದ ವಿಷಯಗಳನ್ನೂ ಹೊಸ ನಾಗರಿಕತೆಯ ಅಭಿಪ್ರಾಯಗಳನ್ನೂ ಪದಾರ್ಥಗಳನ್ನೂ ತಿಳಿಸಬೇಕಾದರೆ, ಖಂಡಿತ ಸಾಕಾಗಲಾರದು. ಇದಕ್ಕೆ ಹೊಸ ಶಬ್ದಗಳನ್ನು ಸೇರಿಸಿಯೇ ತೀರಬೇಕು.

೮. ಭಾಷೆಗೆ ಈ ಹೊಸ ಶಬ್ದಗಳು ದೊರೆಯುವುದು ಹೇಗೆ? ಯಾವ ಬಗೆಯ ಹೊಸ ಶಬ್ದಗಳು ಅದಕ್ಕೆ ಬೇಕು, ಎಷ್ಟು ಬೇಕು? ಈ ಪ್ರಶ್ನೆಗಳಿಗೆ ಕೆಲವರು ಉತ್ತರವನ್ನು ಸರಾಗವಾಗಿ ಒಂದೇ ಮಾತಿನಲ್ಲಿ ಮುಗಿಸುತ್ತಾರೆ– "ಸುಮ್ಮನೆ ಬೇಕಾದುವನ್ನೆಲ್ಲಾ ಸೇರಿಸಿಕೊಳ್ಳುವುದಲ್ಲವೆ" ಎಂದು ಹೇಳಿ. ಸರಿಯೆ, ಸೇರಿಸಲೇನೋ ಬೇಕು. ಆದರೆ ಒಂದು ವಿಷಯ ಮರೆಯಬಾರದು. ಸೇರಿಸುವುದು ಯಾತಕ್ಕೆ? ಸಾಮಾನ್ಯ ಜನರಿಗೆ ಹೊಸ ಸಂಗತಿಗಳನ್ನು ಕಲಿಸುವುದಕ್ಕೆ. ಇಷ್ಟಕ್ಕೇ ನಿಲ್ಲದೆ ಹಿಂದೆ ಸಂಸ್ಕೃತ ಪಂಡಿತರು ಸುಮ್ಮನೆ ತುಂಬುತ್ತಾ ಹೋದರು; ಕೊನೆಗೆ ಜನಕ್ಕೆ ತಿಳಿಯದ ಹಾಗಾಗಿ, ಕನ್ನಡ ಮಾತು ಮುಳುಗಿಹೋಗಿ, ಹೆಚ್ಚು ಸೇರು ಬಸಿದುಹೋಗುವ ಹಾಗೆ ಈಗ ಕಡೆಗು ಹೊಡೆಯಬೇಕಾಗಿ ಬಂದಿದೆ. ಈಗಲೂ ಸುಮ್ಮನೆ ತುಂಬುತ್ತಾ ಹೋದರೆ ಅದೇ ಗತಿಯಾಗುತ್ತದೆ.

ಈ ವಿಷಯ ಸ್ವಲ್ಪ ವಿಚಾರಮಾಡತಕ್ಕದ್ದು.

ಮೊದಲು, ಇತರ ಭಾಷೆಗಳಿಂದ ಶಬ್ದಗಳನ್ನು ಬೆರಸಿಕೊಳ್ಳುವುದು ಅಭಿಪ್ರಾಯವನ್ನು ಭಾಷೆ ಚೆನ್ನಾಗಿ ತಿಳಿಸುವುದಕ್ಕೆ; ಜನಮಂಡಲಿಗೆ ವಿದ್ಯಾವಂತರ ಜ್ಞಾನ ಇಳಿಯುವುದಕ್ಕೆ, ಮಿಕ್ಕ ವಿದ್ಯಾವಂತರಿಗಲ್ಲ.

ಎರಡನೆಯದು, ನಮಗೆ ಈ ಬಗೆಯ ಶಬ್ದಗಳು ಬೇಕು—

(i) ಹೊರಗಿನ ದೇಶಗಳು, ಜನರು, ವ್ಯಾಪಾರದ ಪದಾರ್ಥಗಳು, ಕಂಡುಹಿಡಿದ ಯಂತ್ರಗಳು, ಸೌಕರ್ಯಗಳು, ಇವುಗಳ ಹೆಸರುಗಳು.

(ii) ರಾಜ್ಯಭಾರ, ನ್ಯಾಯ, ಮತ, ಸಂಘ ಇವಕ್ಕೆ ಸಂಬಂಧಪಟ್ಟ ಸಭೆಗಳು, ಕಾರ್ಯಕ್ರಮ, ಪದ್ಧತಿ, ಇವುಗಳನ್ನು ಹೇಳುವ ಶಬ್ದಗಳು.

(iii) ಕಾವ್ಯ, ಕುಶಲವಿದ್ಯೆ, ಶಾಸ್ತ್ರ, ತತ್ವ, ಉದ್ಯೋಗ ಇವಕ್ಕೆ ಸಂಬಂಧಪಟ್ಟ ಭಾವಾರ್ಥಗಳಿಗೆ ಶಬ್ದಗಳು.

ಮೂರನೆಯದು, ಈ ಶಬ್ದಗಳು ನಮಗೆ ಸಿಕ್ಕುವುದು—

(i) ನಮ್ಮ ಜನರಿಂದಲೇ—ಅವರು ಆಗಲೇ ನಿತ್ಯದ ಬಳಕೆಗೆ ಅವನ್ನು ಸೇರಿಸಿಕೊಂಡಿದ್ದರೆ ; ಇಲ್ಲದಿದ್ದರೆ.

(ii) ಪುಸ್ತಕಗಳಿಂದ, ಇಲ್ಲ, ಆ ಭಾಷೆಗಳನ್ನು ಕಲಿತ ನಮ್ಮ ವಿದ್ಯಾವಂತರಿಂದ ; ಯಾಕೆಂದರೆ ಇಂಗ್ಲಿಷ್ ಜನರಿಗೂ ನಮ್ಮ ಜನಕ್ಕೂ ಶಬ್ದಗಳು ಬೆರೆಯುವಷ್ಟು ಬೆರಕೆ ಇಲ್ಲ.

(iii) ಯಾವ ಭಾಷೆಗಳಿಂದ ಅಂದರೆ ಇಂಗ್ಲಿಷ್, ಹಿಂದುಸ್ಥಾನಿ ಇವುಗಳಿಂದ.

ನಾಲ್ಕನೆಯದು, ಹೊಸ ಶಬ್ದಗಳು ಬೇಕಾದ ಹಾಗೆಲ್ಲಾ ಸುಮ್ಮನೆ ಸೇರಿಸಿಕೊಳ್ಳುವುದೇ ಜನರ ಸ್ವಭಾವ : ತಮ್ಮ ಭಾಷೆಯಲ್ಲೇ ಪದಗಳನ್ನು ಕೂಡಿಸಿ ಹೊಂದಿಸಿಕೊಳ್ಳುವುದು ಅಪರೂಪ. ಜನ ಗುಂಪಿಗೆ ಹೀಗೆ ಮಾಡುವುದಕ್ಕೆ ಬೇಕಾದ ಪ್ರಯತ್ನ, ಬುದ್ಧಿ, ಸೌಂದರ್ಯದಲ್ಲಿ ಅಭಿಮಾನ ಇವೊಂದೂ ಇರುವುದಿಲ್ಲ.

ಐದನೆಯದು, ಹೀಗೆ ಸೇರಿಸುವುದು ಸ್ವಭಾವವಾದರೂ, ಗ್ರಂಥ ವಿಷಯದಲ್ಲಿ ಸ್ವಭಾವವಾದ ನಡತೆಯೇ ಯಾವಾಗಲೂ ಸರಿಯೆಂದೂ, ಗುಣವೆಂದೂ ಹೇಳುವುದಕ್ಕಿಲ್ಲ ; ಯಾಕೆಂದರೆ—

(i) ಮನಸ್ಸು ಬಂದಂತೆ ಅನ್ಯಶಬ್ದಗಳನ್ನು ಗಿಡಿದರೆ, ಮಾತೃಭಾಷೆಯ ಶುದ್ಧಿಯೂ, ಸೌಂದರ್ಯವೂ ಕೆಡುತ್ತವೆ. ಗಂಗೆಯನ್ನು ಭೂಲೋಕಕ್ಕೆ ತರುವ ಉತ್ಸಾಹವಿದ್ದರೂ ಮೊದಲು ಭಗೀರಥ ಶಿವನ ಸಹಾಯದಿಂದ ಪ್ರವಾಹವನ್ನು ಸಣ್ಣದು ಮಾಡಬೇಕಾಗ

ಲಿಲ್ಲವೇ ? ಸಂಸ್ಕೃತ ಕನ್ನಡವನ್ನು ಕೊಚ್ಚಿಹಾಕಿದ ಹಾಗೆ, ಕಟ್ಟಿಲ್ಲದೆ ಹೋದರೆ ಇಂಗ್ಲಿಷ್ ಹಿಂದುಸ್ಥಾನಿಯೂ ಕೊಚ್ಚಿ ಹಾಕುವುವು.

(ii) ಕೆಲವು ಶಬ್ದಗಳು ತಾತ್ಕಾಲಕ್ಕೆ ಸೇರಿದ್ದು ಆಮೇಲೆ ಬಿಟ್ಟು ಹೋಗುತ್ತವೆ. ಅನೇಕ ಹಿಂದುಸ್ಥಾನಿ ಮಾತುಗಳು ಈಗ ಸಡಿಲಿಹೋದುವು: ಇಂಗ್ಲಿಷ್ ಮಾತುಗಳೂ ಹೋಗಬಹುದು. ಇಂತಹ ಶಬ್ದಗಳು ಗ್ರಂಥಕ್ಕೆ ಸೇರಿದರೆ ಮುಂದೆ ಅರ್ಥ ವಾಗುವುದಿಲ್ಲ ; ಈ ಮುಂದಾಲೋಚನೆ ಈಗಲೇ ಇರಬೇಕು.

(iii) ಒಂದು ದೇಶಭಾಷೆಯ ಮಾತುಗಳೇ ಎಲ್ಲವೂ ಗ್ರಂಥಕ್ಕೆ ಸೇರುವ ಯೋಗ್ಯತೆ ಇರುವುದಿಲ್ಲ : ಗ್ರಾಮ್ಯ, ಪ್ರಾಂತ್ಯ, ನೀಚ, ಎಂದು ನಿಷೇಧ ಮಾಡುತ್ತೇವೆ. ಬಂದ ಹೊಸ ಶಬ್ದಗಳಿಗೆಲ್ಲಾ ಯಾಕೆ ಮನ್ನಣೆಯನ್ನು ಹಾಕಬೇಕು ? ಒಕ್ಕಲಿಗರನ್ನು ಹೊರಗಿರಿ ಎನ್ನುವರು ಹೊಲೆಯರನ್ನು ದೇವರಮನೆಗೆ ಬಿಡುವುದುಂಟೋ ?

(iv) ಒಂದು ಕನಸಿಗೆ ಬೆಳಗಾಗಲಿಲ್ಲ ; ಒಂದು ಪೆಟ್ಟಿಗೆ ವಿಗ್ರಹವಾಗಲಿಲ್ಲ; ಭಾಷೆಮಾತ್ರ ಒಂದು ಹೆಜ್ಜೆಗೆ ಸಂಪೂರ್ಣವಾದೀತೆ? ನಿಧಾನವಾಗಿ ಬೆಳೆಯಲಿ, ಆತುರವೇನು ? ಹೊಸಮಾತುಗಳನ್ನು ನಿರ್ದಾಕ್ಷಿಣ್ಯ ವಾಗಿ ಪರೀಕ್ಷಿಸುತ್ತಾ ಮೆಲ್ಲಗೆ ಒಗ್ಗಿ ಬಂದಹಾಗೆಲ್ಲಾ ಸೇರಿಸು ಕೊಳ್ಳುತ್ತಾ ಹೋಗೋಣ.

೯. ಈ ವಿಚಾರದಿಂದ ಕೆಲವು ಕಟ್ಟಳೆಗಳು ಹೊರಡುತ್ತವೆ—

(೧) ಹೊಸ ಶಬ್ದದ ಉತ್ಪತ್ತಿಯನ್ನೂ ತಾತ್ಪರ್ಯವನ್ನೂ ಮನಸ್ಸಿನಲ್ಲಿ ಬಿಡಿಸಿ ಗ್ರಹಿಸಿಕೊಂಡು, ಅದೇ ಅರ್ಥವನ್ನು ಪ್ರತಿಯೊಬ್ಬರೂ ತಮ್ಮ ಭಾಷೆಯ ಪದಗಳನ್ನು ಜೋಡಿಸುವುದರಿಂದಲೇ ತಿಳಿಸುವ ಪ್ರಯತ್ನವನ್ನು ಮಾಡಬೇಕು. ಅಂದರೆ, ವ್ಯವಹಾರದಲ್ಲಿರುವ ಕನ್ನಡ ಸಂಸ್ಕೃತ ಶಬ್ದಗಳನ್ನೇ ಕೂಡಿಸಿದರೆ ಬೇಗ ಅರ್ಥವಾಗು ತ್ತವೆ; ಅಮರಕೋಶಕ್ಕೆ ಹೋಗಬಾರದು. (ಉದಾ.—ಮಾಸಾ ಶನ, ಪ್ರಾಚ್ಯಕೋಶಾಲಯ)

ಇದಕ್ಕೆ ಎರಡು ದಾರಿಯುಂಟು :—

(i) ಸಮಾಸ, ಪದಗಳನ್ನು ಕೂಡಿಸುವುದು. ಆಗಲೇ ರೂಢಿಯಲ್ಲಿ

ರುವ ಉದಾಹರಣೆಗಳು-ಒತ್ತುವ ಕಾಗದ, ಗುಂಡುಸೂಜಿ, ಕಬ್ಬಿಣದ ಪೆಟ್ಟಿಗೆ, ಕಲ್ಲಿದ್ದಲು, ಉರುಳುಗೆಡ್ಡೆ, ಕಾಲುಚೀಲ, ಕೈವಸ್ತ್ರ, ಕೈಚೀಲ, ಕೈಮರ, ಕೀಲೆಣ್ಣೆ, ಕೀಲುಮೊಳೆ; ಕೆಂಪು ಜನ, ಸೊಳ್ಳೆಯ ಪರದೆ, ಭೂತಗನ್ನಡಿ ಮಂಜುಗೆಡ್ಡೆ, ಕಾವ್ಯಮಾಲೆ, ಗ್ರಂಥಮಾಲೆ, ಭೂಮಿಶಾಸ್ತ್ರ, ಆಕಾಶಬುಟ್ಟಿ, ಅನಾಥಾಲಯ, ವೈದ್ಯಶಾಲೆ, ಸೀಸದಕಡ್ಡಿ, ಸೀಮೆಯೆಣ್ಣೆ, ಕೈಗಾರಿಕೆ, ಮಾಸ ಪತ್ರಿಕೆ, ಬೆಂಕಿಯಕಡ್ಡಿ, ದೀಪದ ಕಡ್ಡಿ, ಸಿಡಿಮದ್ದು (ವಿದ್ವಾಂಸ ರಿಗಿಂತ ಬೀದಿಯ ಜನ ಇದನ್ನು ಒದಗಿಸಿಕೊಡುವುದು ಹೆಚ್ಚು. ಹಳ್ಳಿಯವರು ಬೈಸಿಕಲ್ಲಿಗೆ ಕಾಲುಗಾಡಿ ಎಂತಲೂ, ವಿದ್ಯುಚ್ಛಕ್ತಿ ಎಂಬ ಬೆಳಕಿಗೆ ತಂತಿಯ ದೀಪ ಎಂತಲೂ ಹೇಳುವುದನ್ನು ಕೇಳಿದ್ದೇನೆ.)

(ii) ಇರುವ ಮಾತುಗಳ ಅರ್ಥವನ್ನು ಹಿಗ್ಗಲಿಸುವುದು—

ಉದಾ—ಕಂಬಿ, ಅಚ್ಚು, ಪತ್ರ, ಪತ್ರಿಕೆ, ಮುಳ್ಳು, ತಂತಿ, ಗಂಟೆ, ಗುಂಡು, ಗುಂಡಿ, ಮದ್ದು, ಕಟ್ಟು, (ಕಾಗದ), ಎಣ್ಣೆ, ಯಂತ್ರ, ಶಾಸ್ತ್ರ, (ಪ್ರಕೃತಿಶಾಸ್ತ್ರ), ನಲ್ಲಿ, ಕೋರಿ, ಸಂಘ.

(೨) ಸರಿಯಾಗಿ ಹೊಂದುವ, ಬೇಗ ಅರ್ಥವಾಗುವ ಶಬ್ದವನ್ನು ಕಲ್ಪನೆಮಾಡುವುದು ಕಷ್ಟವಾದರೆ ಅನ್ಯಶಬ್ದವನ್ನೇ ಸೇರಿಸ ಬಹುದು. ಆದರೆ ಇದಕ್ಕೆ ಕೆಲವು ನಿರ್ಬಂಧಗಳು ಬೇಕು :—

(i) ಶಬ್ದ ತೀರ ಅವಶ್ಯಕವಾಗಿರಬೇಕು ; ಜನರಲ್ಲಿ ಆಗಲೇ ಸಾಮಾನ್ಯವಾಗಿ ಬಳಕೆಯಾಗಿರಬೇಕು : ಗ್ರಂಥಕ್ಕೆ ಯೋಗ್ಯವಾಗಿರಬೇಕು:-ಉದಾ.—ಅಸಲು, ಅಂಬಾರಿ, ಅತ್ತರು, ಇನಾಮು, ಕರಾರು, ಜವಳಿ, ಕಾರ್ಖಾನೆ, ಖಜಾನೆ, ಗಾಡಿ, ಚಂದ, ಜಂಖಾನ, ದಿವಾನ, ಮಸೀದಿ, ರಜ, ಲಾಯ, ಸವಾರಿ; ಎಕರೆ, ಕೋರ್ಟು, ಗೆಜೆಟು, ಚಿಮ್ನಿ, ಪ್ಲೇಗು, ಬೆಂಚು, ಬ್ಯಾಂಕು, ಮೈಲಿ, ರೈಲು ಲಾಯರು, ಕ್ಲಬ್ಬು, ಟೆನಿಸು, ಸಾಬೂನು, ಪೋಲೀಸು, ಫೋಟೋ, ಯೂನಿವರ್ಸಿಟಿ, ಡಿಗ್ರಿ, ಕಾರ್ಡು, ಕಾಫಿ,

ಟೀ, ಗಿಲೀಟು, ಗಳಾಸು, ಪಿಟೀಲು, ಹೋಟೆಲು, ಟಿಕೀಟು.

(ii) ಇಂಗ್ಲಿಷಿಗೂ ಹಿಂದೂಸ್ಥಾನಿಗೂ ಮೇಲಾಟ ಬಿದ್ದಾಗ ಹಿಂದೂಸ್ಥಾನಿಯನ್ನು ತೆಗೆದುಕೊಳ್ಳಬೇಕು ; ಇದು ಹಿಂದಿಯ ಮೂಲಕ ಸಂಸ್ಕೃತಕ್ಕೇ ಮುಕ್ಕಾಲುಪಾಲು ಸೇರುತ್ತದೆ. ಆದರೆ ಹಿಂದೆ ಸೇರಿದ್ದು ಈಗ ಬಿಟ್ಟು ಹೋಗುತ್ತಿರುವ ಮಾತುಗಳು ಕೂಡದು:—ಉದಾ-ಕಸಬು, ಕಚೇರಿ, ಚುನಾವಣೆ, ಇಲಾಖೆ, ಸರ್ಕಾರ, ಕಾನೂನು, ಜರ್ಮೀನು, ಜಹಗೀರು, ದಿವಾಳಿ, ಗಡಿಯಾರ,ಶೀಸೆ, ಗಿರಾಕಿ,ಬಂದೂಕ,ಕಾಗದ, ಡೇರೆ,ಇವಕ್ಕೆ ಇಂಗ್ಲಿಷ್ ಪದಗಳನ್ನು ಉಪಯೋಗಿಸಬಾರದು.

(iii) ಇಂಗ್ಲಿಷ್ ಶಬ್ದ ಸಾಧಾರಣಜನದ ಬಾಯಲ್ಲೂ ಆಗಲೇ ಬಂದಿರಬೇಕು; ಅಂದರೆ, ಕೇವಲ ಗ್ರಂಥದಿಂದಲೇ ತೆಗೆದದ್ದಾಗಬಾರದು, ಕೇವಲ ಭಾವಾರ್ಥಗಳನ್ನೇ ಹೇಳತಕ್ಕದ್ದಾಗಬಾರದು. ಚೆನ್ನಾಗಿ ಹರಡಿದೆ ಎನ್ನುವುದಕ್ಕೆ ಹೆಂಗಸರು ಆಡುವುದೇ ಗೊತ್ತು. ಲಿಟರೇಚರ್, ಸಬ್ಲಿಮಿಟಿ, ಪ್ರಾಪ್ರೋಸಿಷನ್, ರೆಸೊಲ್ಯೂಷನ್, ಕಂಪಲ್ಸರಿ, ಆಪ್ಷನಲ್, ಟೈಂಟೇಬಲ್, ಇನ್ಸ್ಪಿರೇಶನ್, ಟೂರ್ನಮೆಂಟ್, ಷಿವಲ್ರಿ—ಈ ಪದಗಳಿಗೆ ಸಮಾನ ಪದಗಳು ಸಿಕ್ಕುವುದು ಕಷ್ಟವಾದರೂ ಈ ಶಬ್ದಗಳನ್ನು ಗ್ರಂಥಕ್ಕೆ ಸೇರಿಸುವುದಕ್ಕಿಂತ ನಮ್ಮ ಭಾಷೆಯನ್ನೇ ಮೊದಲು ಬಿಟ್ಟುಬಿಡುವುದು ಮೇಲು.

(೩) ಸಾಮಾನ್ಯ ವಿಷಯಗಳನ್ನು ಕುರಿತು ಬರೆಯುವಾಗ ಹೆಚ್ಚು ಕಡಮೆ ಅರ್ಥಕೊಡುವ ಪದವಿದ್ದರೆ, ಜನಗಳು ಬಳಸುತ್ತಿದ್ದರೂ ಅನ್ಯಶಬ್ದವನ್ನು ಉಪಯೋಗಿಸಬಾರದು;—ಉದಾ—ಮಾರ್ಗ, ಬೀದಿ, ದಾರಿ, ರೋಡು, ರಸ್ತೆ; ವಿಧಿ, ಶಾಸನ, ನಿಯಮ,ನಿಬಂಧನೆ, ಕಟ್ಟಳೆ, ನಿರುಕು, ಲಾ, ಕಮಾಂಡ್, ಆರ್ಡರ್, ಕಾನೂನು, ಕಾಯಿದೆ,

ಹುಕ್ಕುಂ, ವಿಚಾರಣೆ, ಪರೀಕ್ಷೆ, ಪರಾಮರ್ಶೆ, ಎಗ್ಸಾಮಿನೇಶನ್, ಟ್ರಯಲ್, ತನಿಖೆ; ಪತ್ರ, ಬಾಂಡು, ದಸ್ತೇವೇಜು ; ಅಂಗಡಿ, ಪೇಟೆ, ಷಾಪು, ಬಜಾರು, ತೀರ್ಪು, ತೀರ್ಮಾನ, ಜಜ್ಮೆಂಟು, ಫೈಸಲು ; ನಾಟಕಶಾಲೆ, ಥಿಯೇಟರ್ ; ಮಠ, ಪಾಠಶಾಲೆ, ಸ್ಕೂಲು, ಪುಸ್ತಕ, ಬುಕ್ಕು.

(೪) ಶಾಸ್ತ್ರ, ತತ್ತ್ವ, ವೃತ್ತಿಗಳು, ಈ ವಿಷಯಗಳನ್ನು ಕುರಿತು ಬರೆಯುವಾಗ ಅನ್ಯಶಬ್ದಗಳನ್ನು ಸೇರಿಸುವುದೇ ಮೇಲು ; ಇಲ್ಲಿ ಹೆಚ್ಚು ಸ್ವತಂತ್ರ ಬೇಕಾಗಿವೆ. ಆದರೆ ಇಲ್ಲಿ ಕೂಡ ಆವಶ್ಯಕವೆಷ್ಟೋ ಅಷ್ಟು ಬಿಟ್ಟು ಸ್ವೇಚ್ಛೆಯಾಗಿ ಹೋಗಬಾರದು.

೧೦. ಒಟ್ಟಿನಾಯಿತು, ವಿದ್ಯಾರ್ಥಿಗಳು ಅತಿಪಾಂಡಿತ್ಯಕ್ಕೆ ಹೋಗುವ ಗ್ರಂಥಶಬ್ದಗಳನ್ನು ಬಿಡಬೇಕು, ಹೊಸಭಾವಗಳನ್ನು ಬಿಡಿಸಿಕೊಂಡು ತಕ್ಕಹಾಗೆ ತಮ್ಮ ಭಾಷೆಯಲ್ಲೇ ಕೂಡಿಸುವುದಕ್ಕಾಗಲಾರದೇ ಎಂದು ನಿಜವಾದ ಪ್ರಯತ್ನ ಮಾಡಿ, ಸಾಗದೆ ಹೋದರೆ, ಆಗ ಕೇವಲ ಆವಶ್ಯಕವಾದ, ಸಾಮಾನ್ಯವಾಗಿ ಅರ್ಥವಾಗುವ, ಹಿಂದುಸ್ಥಾನಿ ಇಂಗ್ಲಿಷ್ ಶಬ್ದಗಳನ್ನು ಮಾತ್ರ ಸೇರಿಸಬೇಕು, ವಿಶೇಷ ಜ್ಞಾನ ವಿಷಯಗಳಲ್ಲಿ ಹೆಚ್ಚು ಸ್ವತಂತ್ರವನ್ನು ವಹಿಸಬಹುದು, ಆರೋಗ್ಯವಾಗಿಯೂ, ಬಲವಾಗಿಯೂ ಇರಬೇಕಾದರೆ ಮನುಷ್ಯ, ತನ್ನ ಅಂಗಗಳನ್ನೂ ಬುದ್ಧಿಯನ್ನೂ ಸರಿಯಾಗಿ ಸಾಧನೆ ಮಾಡುವುದರಿಂದ ಆದೀತೇ ಹೊರತು, ಮುದುರಿಕೊಂಡು ಮಲಗಿ, ತನ್ನ ಪ್ರಕೃತಿಗೆ ವಿರೋಧವಾದ ಔಷಧವನ್ನೂ ಲೇಹ್ಯವನ್ನೂ ನುಂಗುವುದರಿಂದ ಅಷ್ಟು ಆಗುವುದಿಲ್ಲ : ಭಾಷೆಯ ಪಾಡೂ ಹೀಗೇ ಎಂದು ಚೆನ್ನಾಗಿ ನೆನಪಿನಲ್ಲಿಡಬೇಕು.

೩. ವ್ಯಾಕರಣ

೧೧. ವ್ಯಾಕರಣ ವಿಷಯ ಸಾಮಾನ್ಯ ವಿಧಿಗಳ ಕೆಳಗೇ ಸ್ವಲ್ಪಮಟ್ಟಿಗೆ ಹೇಳಿರುತ್ತದೆ. ಇಲ್ಲಿ ಮುಖ್ಯವಾಗಿ ಸಂಧಿ, ವಿಭಕ್ತಿ, ಹೊಸ ಕ್ರಿಯಾರೂಪಗಳು, ಕರ್ಮಣಿಪ್ರಯೋಗ– ಇವುಗಳ ವಿಚಾರದಲ್ಲಿ ಎಲ್ಲರೂ ಬಲ್ಲ ಭಾಗಕ್ಕೆ ಹೋಗದೆ, ಬಿಡಬೇಕಾದ ಹಿಂದಿನ ರೂಪಗಳಿಗೇ ಹೆಚ್ಚು ಗಮನಕೊಟ್ಟು ಪ್ರಸ್ತಾಪ ಮಾಡುತ್ತದೆ.

೧೨. ಸಂಧಿ:—ವಾಕ್ಯವೆಲ್ಲಾ ಒಂದು ಜಡೆಬತ್ತಿಯಾಗಿ ಹೊಸದು

ಕೊಳ್ಳದಹಾಗೆ ನೋಡಿಕೊಂಡು, ಮಾತಾಡುವಾಗ ಕೂಡಿಸುವುದಕ್ಕಿಂತ ಹೆಚ್ಚು ಸಂಧಿಗೆ ಹೋಗಬಾರದು. ನಕಾರ ವಕಾರಾಗಮಗಳನ್ನು ಗ್ರಾಮ್ಯ ವೆಂದು ಗಣಿಸಿಬಿಟ್ಟು, ಲಕಾರಾಗಮವನ್ನು ಒಪ್ಪಿಕೊಳ್ಳಬಹುದು :—ಉದಾ. —ಅವನೇನೆ, ಒಬ್ಬನೇನ, ಅದೇವೆ, ಅವಳೇವೆ; ಅದರಿಂದಲೇ, ಕೊಡುತ್ತಲೇ, ಯಾರಿಂದಲೂ.

೧೩. ವಿಭಕ್ತಿಗಳು :—

(i) ಪ್ರಥಮೆಗೆ—ಪ್ರಕೃತಿರೂಪವೇ ಸರಿ : ಮರ, ಆಟ, ಉಪದೇಶ, ಕುರಿ, ಉಪಕಾರಿ, ಕರು, ಮರೆ, ಕುಶಲ ವಿದ್ಯೆ. ಇದಕ್ಕೆ ಹಿಂದಿನ ಗ್ರಂಥದಲ್ಲಿ ಪ್ರಮಾಣ ಇದೆ. ಮರವು, ಕುರಿಯು, ಕುಶಲವಿದ್ಯೆಯು, ಉಪದೇಶವು ಎಂದು ಯಾರೂ ಹೇಳುವುದಿಲ್ಲ.

(ii) ದ್ವಿತೀಯೆಗೆ—ಅನ್ನು, ಅನ್ನ, ಈ ಎರಡು ಪ್ರತ್ಯಯ ಗಳನ್ನೂ ಒಪ್ಪಬಹುದು. ಕ್ರಿಯೆಗೆ ಮುಂದೆ ದ್ವಿತೀಯೆ ಬಂದಾಗ—ಅನ್ನ ಎನ್ನುವುದೇ ಕೇಳುವುದಕ್ಕೆ ಹಿತ ವಾಗಿರುತ್ತವೆ:—ಉದಾ:—'ನೋಡಯ್ಯ, ಲಕ್ಷ್ಮಣ ಕಾಲಿನಿಂದ ಬಸಿಯುತ್ತಿರುವ ರಕ್ತವನ್ನ.' ಇಲ್ಲಿ ರಕ್ತ ವನ್ನು ಅಂದರೆ ಏನೋ ವಿಕಾರವಾಗಿ ಕೇಳಿಸುತ್ತದೆ.

(iii) ಪಂಚಮಿ—ಕನ್ನಡದಲ್ಲಿ ಇಲ್ಲ. ಸಂಸ್ಕೃತದಮರಿ ಕನ್ನಡ ಎಂದು ಭ್ರಮಿಸಿರುವ ದೆಸೆಯಿಂದ ಇದು ವ್ಯಾಕರಣಗಳಲ್ಲಿ ಸೇರಿದೆ.

(iv) ಷಷ್ಠಿಯಲ್ಲಿ ಎರಡು ರೂಪ ಉಂಟು. ನಾಮಪದಕ್ಕೆ ಹಿಂದೆ—ಅ: ನನ್ನ ಮನೆ, ಗಿಣಿಯ ರೆಕ್ಕೆ, ಮರದ ಬಾಗಿಲು; ಮುಂದೆ ಬಂದರೆ,—ಅದು,—ಅದ್ದು: ಮನೆ ನನ್ನದು, ರೆಕ್ಕೆ ಗಿಣಿಯದು, ಬಾಗಿಲು ಮರದ್ದು, ಹಾಳೆ ಪುಸ್ತಕದ್ದು, ಕೊಡತಿ ಕಬ್ಬಿಣದ್ದು. ಮರದದು, ಪುಸ್ತಕದದು, ಕಬ್ಬಿಣದದು ಎಂದು ಯಾರೂ ಬರೆಯ ಲಾರರು.

೧೪. ಹೊಸ ಕ್ರಿಯಾರೂಪಗಳು—

(i) ಆಖ್ಯಾತ:—ಕನ್ನಡದಲ್ಲಿ ಇರುವುದು ವರ್ತಮಾನ ಭವಿಷ್ಯತ್ತು ಎರಡು ಕಾಲಕ್ಕೂ ಒಂದು ರೂಪ, ಭೂತ ಕಾಲಕ್ಕೆ ಒಂದು ರೂಪ,—ಎರಡೇ ; ಮೂರಿಲ್ಲ.

ಭೂತಕಾಲದಲ್ಲಿ ನಾನು ಬಂದೆ, ಅವನು ಬಂದ, ಎಂದು ಎಲ್ಲರೂ ಆಡುವಹಾಗೆ ಯಾಕೆ ಬರೆಯ ಕೂಡದು? ವರ್ತಮಾನ ಭವಿಷ್ಯತ್ತಿನಲ್ಲಿ ಹೊಸ ರೂಪಗಳೇ ಸರಿ: ಬರುತ್ತೇನೆ, ಬರುತ್ತದೆ, ಮೊದ ಲಾದುವು. ಹಿಂದಿನ ರೂಪಗಳಾದ ಬರುವನು ಮೊದ ಲಾದ ಪ್ರಥಮಪುರುಷರೂಪಗಳನ್ನು ಸಾಧಾರಣವಾಗಿ ಹೊಸಗನ್ನಡದಲ್ಲಿ ಕೃನ್ನಾಮವಾಗಿಯೂ ಕೆಲವು ವೇಳೆ ಭೂತಸಂಭಾವನೆಗೂ ಉಪಯೋಗಿಸುತ್ತಾರೆ; ಹಿಂದಿ ನಂತೆ ಆಖ್ಯಾತವಾಗಿ ಯಾರೂ ಉಪಯೋಗಿಸುವುದಿಲ್ಲ. ಸಾಮಾನ್ಯವಿಧಿಗಳಲ್ಲಿ ಹೇಳಿದಂತೆ ಗ್ರಂಥಭಾಷೆ ಆಡುವ ಭಾಷೆಯ ಛಾಯೆಯಾಗಬೇಕಾದರೆ ಇವನ್ನು ಆ ರೀತಿ ಆಖ್ಯಾತವಾಗಿ ಬರೆಯಕೂಡದಲ್ಲವೆ? ಹಿಂದಿನ ಉತ್ತಮ ಮಧ್ಯಮಪುರುಷರೂಪಗಳು ಈಗ ಇಲ್ಲವೇ ಇಲ್ಲ. ವರ್ತಮಾನ ಭವಿಷ್ಯತ್ತಿನ ಸಂಭಾವನೆಗೂ, ನಿಷೇಧಕ್ಕೂ ಹೊಸ ರೂಪಗಳು: ಬಂದಾನು, ಮಾಡಾನು; ಬರಲಿಲ್ಲ, ಬರುವುದಿಲ್ಲ. ಸರಿಯಾದ ಸಂದರ್ಭಗಳಲ್ಲಿ, ಗಾದೆಗಳಲ್ಲಿ, ಹೇಳ, ಕೇಳ, ಕೊಡ, ಮೊದಲಾದ ಹಿಂದಿನ ರೂಪ ಗಳು. ಈ ರೂಪ ಮಧ್ಯಮಪುರುಷ ಬಹುವಚನದಲ್ಲಿ ವಿಧಿರೂಪದೊಡನೆ ಭ್ರಮೆಯಾಗುತ್ತದೆ (ಕಳೆಯಿರಿ, ಕೇಳಿರಿ.)

(ii) ವಿಧಿ:—ಉತ್ತಮಪುರುಷ ಬಹುವಚನಕ್ಕೆ-ಉವ, ಗ್ರಾಮ್ಯ —ಉವಣ, ಪಾಂಡಿತ್ಯ-ಓಣ, ಸರಿ: ನಡೆಯುವ, ನಡೆಯುವಣ. ನಡೆಯೋಣ, ಮಧ್ಯಮಪುರುಷ ಏಕವಚನ —ಧಾತುವೇ. (ಇಲ್ಲಿ ಜನರು ಆಡುವಂತೆ ಭಾಷೆಯ

ಉಚ್ಚಾರಣೆಯ ವಿಧಿಗೆ ಅನುಸಾರವಾಗಿ, ಎಕಾರಾಂತವನ್ನು ಇಕಾರಾಂತವಾಗಿ ಬರೆಯಕೂಡದೆ ?—ಮರಿ, ತೆಗೆ, ಜರಿ, ಹೊಡಿ, ನಡಿ). ಬಹುವಚನ,—ಇರಿ ; ಆದಕಡೆ —ಇ ; ಬನ್ನಿ, ಬನ್ನಿರಿ ; ಕೇಳಿ, ಕೇಳಿರಿ ; ಹೊಡೆಯಿರಿ, ತಿವಿಯಿರಿ.

(iii) ಅವ್ಯಯಕೃದಂತ :—ಅಲು,—ಅಲಿಕ್ಕೆ ಇವು ರೂಢಿಯಲ್ಲಿಲ್ಲ. ಇದ್ದರೂ, ಗ್ರಾಮ್ಯ ; ಹೊಸರೂಪಗಳನ್ನೇ ಬರೆಯಬೇಕು. ಉದಾ.—ಬರುತ್ತಲು, ಬರುವುದಕ್ಕೆ, ಬರುವುದೂ, ಬರಲಾಗಿ, ಬರ (ಗೊಡಿಸು).

(iv) ಕೃನ್ನಾಮ :—ಹಿಂದಿನ ಆಖ್ಯಾತದ ಪ್ರಥಮಪುರುಷ ರೂಪಗಳು.—ಅವ,—ಉವ ಈ ಪ್ರತ್ಯಯಗಳೂ ಉಂಟು : ಬಂದವಳು, ಬರುವವನು, ಕಳೆಯುವುದು (ಕಳೆವುದು, ತಪ್ಪು). ನಪುಂಸಕ ಏಕವಚನದಲ್ಲಿ—ಉದು, ಹಿಂದಿನ ರೂಪ; ಅದ್ದು, ಈ ಹೊಸ ರೂಪವನ್ನೇ ಬರೆಯಬೇಕು. ಬಂದದ್ದು, ಕಳೆದದ್ದು, ಕಾಣದ್ದು, ಹೇಳಿದ್ದು.

೧೫. ಕರ್ಮಣಿ ಪ್ರಯೋಗ :—ವಾಕ್ಯರಚನೆ ಕನ್ನಡದ ರೂಢಿಯನ್ನು ಮೀರಬಾರದೆಂದು ಹೇಳಬೇಕಾಗಿಯೇ ಇಲ್ಲ. ಇಂಗ್ಲಿಷ್ ಮಾದರಿ ಬರೆಯದ ಹಾಗೆ ವಿದ್ಯಾರ್ಥಿಗಳು ಎಚ್ಚರವಾಗಿರಬೇಕು.—ಅದು ಸುಳ್ಳು ಎಂದು ಹೇಳುವಷ್ಟು ಯಾರೂ ಧೈರ್ಯಶಾಲಿಯಾಗಲಿಲ್ಲ, ನಿಮ್ಮನ್ನು ಕಾಣುವುದಕ್ಕೆ ನನಗೆ ತುಂಬ ಸಂತೋಷವಾಗಿದೆ, ಅವನು ಐಶ್ವರ್ಯವನ್ನು ಉಂಟಾಗಿದ್ದಾನೆ, ನಾನು ಒಂದು ಬಟ್ಟಲನ್ನು ಹೊಂದಿದ್ದೇನೆ—ಇವೆಲ್ಲಾ ನಾಚಿಕೆಗೇಡಾದ ಬರವಣಿಗೆ.

ಇದಕ್ಕಿಂತ ಸಾಧಾರಣವಾಗಿ ಎಲ್ಲರೂ ಕನ್ನಡದ ರೂಢಿಯನ್ನು ಧಿಕ್ಕರಿಸುವುದು ಕರ್ಮಣಿಪ್ರಯೋಗದಿಂದ. ಇದು ಪುಸ್ತಕಗಳಲ್ಲಿ ಎಲ್ಲೆಲ್ಲಿಯೂ ಸಿಕ್ಕುತ್ತದೆ ; ಜನರ ಬಾಯಲ್ಲಿ ಎಲ್ಲೂ ಇಲ್ಲ. ಕೇಶಿರಾಜ ನಾಗವರ್ಮ ಇವರ ಕಾಲದಲ್ಲೇ ಇದು ಇದ್ದ ಹಾಗೆ ಕಾಣುತ್ತದೆ ; ಈಚೆಗೆ ಎಂಟುನೂರು ವರುಷವಾಯಿತು : ಇದುವರೆಗೂ ಪುಸ್ತಕದಲ್ಲಿ ಎಷ್ಟು ಓದಿದರೂ ಜನರು

ಇದರ ಅರ್ಥವನ್ನು ಕಲಿಯಲಿಲ್ಲ. ನಾವೂ ಜನರ ಜೊತೆಗೆ ಚಂಡಿ ಹಿಡಿಯುವುದೇ ನ್ಯಾಯವಲ್ಲವೆ? ಇದೇ ಅರ್ಥವನ್ನು ಕನ್ನಡದಲ್ಲಿ ಬೇರೆ ವಿಧವಾಗಿ ಜನರು ಹೇಳಿಯೇ ಹೇಳುತ್ತಾರೆ:—ಅವನು ಸಂತೋಷಪಟ್ಟನು; ಅವನಿಗೆ ಸುಖವಾಯಿತು; ಅವನು ಇವನಿಂದ ನೂಕಿಸಿಕೊಂಡನು; ಪೆಟ್ಟು ತಿಂದನು. ನಾಚಿಕೆಪಟ್ಟನು; ಪುಸ್ತಕ ಕಳೆದುಹೋಯಿತು; ಇದೇ ನಾನು ಕಟ್ಟಿದ ಮನೆ; ಅವನು ಮಾರಿದ ಪುಸ್ತಕ ಇದೇ; ಮಲಗುವ ಮನೆ: ಕೆಡುವ ಬುದ್ಧಿ. ಕನ್ನಡದ ಮಾತನ್ನು ಆಡುವ ಜನರ ಮನಸ್ಸಿಗೆ ಈ ಕರ್ಮಣಿರೂಪ ಹಿಡಿಸುವುದಿಲ್ಲ; ಇದು ನಮಗೆ ಒಗ್ಗುವುದಿಲ್ಲ; ಇದನ್ನು ಬಿಡುವುದೇ ಉತ್ತಮ.

೧೭. ಈ ನಿಯಮಗಳನ್ನು ವಿದ್ಯಾರ್ಥಿಗಳಿಗೆ ಅನುಕೂಲವಾದೀತೆಂದು ಬರೆದಿವೆ. ಗ್ರಂಥಕರ್ತರು ವಚನದಲ್ಲಿ ಬರೆಯುವಾಗ ಇವುಗಳನ್ನು ಒಪ್ಪಿಕೊಳ್ಳುವುದಾದರೆ ಜನಸಾಮಾನ್ಯಕ್ಕೆ ಉತ್ತಮವೇ. ಆದರೂ ಸ್ವತಂತ್ರರಾದ ಗ್ರಂಥಕರ್ತರಿಗೆ ಮೇಲುಪಂಕ್ತಿಯನ್ನು ಹಾಕುವ ಧೈರ್ಯ ಯಾರಿಗಿದೆ? ಅದರಲ್ಲೂ ಮಹಾಕವಿಗಳಿಗೆ ಬುದ್ಧಿ ಹೇಳುವವರು ಯಾರು? ಭಾಷೆ ಇದೆ, ನಿಮ್ಮಲ್ಲಿ ಶಕ್ತಿ ಇದೆ: ಬರೆಯಿರಿ. ಓದುವುದು ನಮ್ಮಂತ ಸಾಮಾನ್ಯ ಜನದ ಕೈಯಲ್ಲೇ ಇದೆ. ಖಂಡಿತ ಹೇಳುತ್ತೇವೆ, ಕವಿತ್ವದಮೇಲೆ ಕವಿತ್ವವಾಗಿ ನಮಗೆ ಅಜೀರ್ಣವಾಗಿದೆ, ಲಂಘನವೇ ಗುಣವೆಂದು ನಂಬಿದ್ದೇವೆ. ಪಾಂಡಿತ್ಯದ ಮೇಲೆ ಪಾಂಡಿತ್ಯವಾಗಿ ರೋಸಿಹೋಗಿದ್ದೇವೆ; ನಾವು ಬಡವರು, ನಿಮ್ಮ ಕಾಡು ಕಗ್ಗಕ್ಕೆ ದುಡ್ಡು ಹಾಕುವುದಿಲ್ಲ. ನಾವು ಆಡುವ ಮಾತು, ನಾವು ಮೆಚ್ಚುವ ವಿಷಯ, ನಾವು ಏಳಿಗೆಯಾಗುವ ದಾರಿ: ಇದಕ್ಕೆ ನೀವು ಬರುವವರೆಗೂ ನಮಗೂ ನಿಮಗೂ ಗಂಟಿಲ್ಲ: ಎಚ್ಚರವಿರಲಿ. ಮೊನ್ನೆ ಈ ಕನ್ನಡವನ್ನು ಎಲ್ಲೋ ನೋಡಿದೆವು: ಇದು ಯಾವ ದೇವರಿಗೆ ಸೆಲ ಹೇಳಿ:—

"ಶರತ್ಕಾಲದ ಪರಿಷ್ಕೃತವಾದ ಆಕಾಶದಲ್ಲಿ ದೃಷ್ಟಿನಿಕ್ಷೇಪವನ್ನು ಮಾಡಿದುದಾದರೆ, ಆ ಅಗಣ್ಯವಾದ ತಾರಾಪುಂಜದ ಮಧ್ಯೇ ಮಧ್ಯೇ, ಶ್ವೇತನೀಹಾರದಂತೆ, ಆವುದೋ ಒಂದು ಪದಾರ್ಥವು ಅಸ್ಪಷ್ಟವಾಗಿ ಆಗಾಗ ನೇತ್ರವಿಷಯವಾಗುವುದುಂಟು. ದೂರವೀಕ್ಷಣ ಯಂತ್ರ (Telescope)ದ ಪರೀಕ್ಷೆಯಿಂದ ಆ ಪದಾರ್ಥವು ಇನ್ನಷ್ಟು ಪರಿಸ್ಫುಟವಾಗಬಲ್ಲುದು. ಅದೆಲ್ಲವೂ ಇನ್ನೇನೂ ಅಲ್ಲ:—ಕೇವಲ ಸೃಷ್ಟಿಕಾರ್ಯದ ಸಂಚಿತಸಾಮಗ್ರಿ! ಅತಏವ,

ಆ ಸಾಮಗ್ರಿಯಿಂದ, ಪೃಥಿವಿಯಾಗಲಿ, ಸೌರಜಗತ್ತಾಗಲಿ, ಇನ್ನೂ ನಿರ್ಮಾಣ ಮಾಡಲ್ಪಟ್ಟಿಲ್ಲ !! ನೀಹಾರ (Mist) ದಂತೆ ತೋರುವುದೆಂದು ನೀಹಾರಿಕೆ (Nebulae) ಯೆನ್ನುತ್ತಾರೆ !!!"

ನಿಜ, ಕವಿಯ ಸೃಷ್ಟಿಕಾರ್ಯಕ್ಕೆ ಭಾಷೆಯೇ ಸಾಮಗ್ರಿ, ಆದರೆ ಅದ ರಿಂದ ಸ್ಪಷ್ಟವಾದ ಸುಂದರವಾದ ಜಗತ್ತನ್ನು ನಿರ್ಮಾಣಮಾಡುವವರೆಗೂ, ನಿಮ್ಮ ಮಾತೆಲ್ಲ ಮಂಜಿನ ಮಬ್ಬೇ.

ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ*

ಆರ್ಯಮಹಾಶಯರೆ,

ದೇಶಾಭಿಮಾನಿಗಳೂ ಭಾಷಾಭಿಮಾನಿಗಳೂ ತುಂಬಿರುವ ಈ ಮಹಾ ಸಭೆಯಲ್ಲಿ ಅಗ್ರಸ್ಥಾನಕ್ಕೆ ಅರ್ಹನಲ್ಲದ ನನಗೆ ತಾವು ಕೊಟ್ಟಿರತಕ್ಕ ಮರ್ಯಾ ದೆಗೆ ನಾನು ತಲೆಯನ್ನು ತಗ್ಗಿಸಬೇಕಾಗಿದೆ. ತಮ್ಮಲ್ಲಿ ಹಲವರು ದೇಶದ ಏಳಿಗೆಗಾಗಿಯೂ, ಭಾಷೆಯ ಅಭಿವೃದ್ಧಿಗಾಗಿಯೂ ಬಹಳವಾಗಿ ಕೆಲಸ ಮಾಡಿರುತ್ತೀರಿ ; ನಾನು ಮಾಡಿರುವುದು ಅತ್ಯಲ್ಪವಾಗಿರುತ್ತದೆ. ಈಗಲೂ ನನಗೆ ಜ್ಞಾಪಕವಿದೆ—ಮದರಾಸಿನಲ್ಲಿ ವಿದ್ಯಾರ್ಥಿಗಳಾಗಿದ್ದಾಗ, ನನ್ನ ಸ್ನೇಹಿ ತರೂ ನಾನೂ ಸಾಯಂಕಾಲ ಸಮುದ್ರತೀರದಲ್ಲಿ ಮರಳಿನಮೇಲೆ ಕುಳಿತು, ಸಮಾಜದ ಮತ್ತು ಸಾಹಿತ್ಯದ ವಿಷಯಗಳನ್ನು ಚರ್ಚಿಸುತ್ತ, ಹೀಗೆ ಮಾಡ ಬೇಕು, ಹಾಗೆ ಮಾಡಬೇಕು, ಕನ್ನಡನಾಡಿಗೆ, ಕನ್ನಡನುಡಿಗೆ, ನಮ್ಮ ಬಾಳಿಕೆ ಯನ್ನೇ ಕಾಣಿಕೆಯಾಗಿ ಒಪ್ಪಿಸಿಬಿಡಬೇಕು ಎಂದು ಪೌರುಷವನ್ನು ಕೊಚ್ಚಿ ಕೊಳ್ಳುತಿದ್ದದ್ದು. ಕನ್ನಡ ಕಾವ್ಯಗಳನ್ನೆಲ್ಲಾ ಓದಬೇಕು, ಜನರಲ್ಲಿ ಬಳಕೆಗೆ ತರಬೇಕು, ಉಪಾಧ್ಯಾಯನಾಗಿ ವಿದ್ಯಾರ್ಥಿಗಳಲ್ಲಿ ಕನ್ನಡದ ಪ್ರೇಮವನ್ನು ಬಿತ್ತಬೇಕು, ಜನಸಾಮಾನ್ಯಕ್ಕೆ ತಿಳಿವಳಿಕೆಯೂ, ಹೊಸ ನಡವಳಿಕೆಯೂ ಹುಟ್ಟುವಂತೆ ಕಾಲಕ್ಕೆ ತಕ್ಕ ಪುಸ್ತಕಗಳನ್ನು ಬರಿಯಬೇಕು, ಷೇಕ್ಸ್ಪಿಯರಿನ ನಾಟಕಗಳನ್ನೂ, ಗ್ರೀಕರ ರುದ್ರನಾಟಕಗಳನ್ನೂ, ಪ್ಲೇಟೋವಿನ ಸಂವಾದ ಗಳನ್ನೂ, ಕಾರ್ಲೈಲಿನ ಧೀರೋಪದೇಶಗಳನ್ನೂ ಕನ್ನಡಕ್ಕೆ ತರಬೇಕು

---

* ಕಲ್ಬುರ್ಗಿಯಲ್ಲಿ ನಡೆದ ಕರ್ಣಾಟಕ ಸಾಹಿತ್ಯ ಪರಿಷತ್ತಿನ ೧೪ನೆಯ ಸಮ್ಮೇ ಳನದಲ್ಲಿ ಅಧ್ಯಕ್ಷರ ಆರಂಭ ಭಾಷಣ (೧-೬-೧೯೨೮).

ಎಂದಿವೇ ಮೊದಲಾದ ಸವಿಗನಸುಗಳನ್ನು ಕಂಡ ಆ ಯುವಕನ ಆಶೆ ಎಷ್ಟು ! ಉದ್ಯೋಗದ ನಿರ್ಬಂಧಗಳಿಗೂ, ಸಂಸಾರದ ಮನಃಕ್ಲೇಶಗಳಿಗೂ, ಪ್ರಕೃತಿ ಧರ್ಮವಾದ ಅಸಡ್ಡೆ ಸೋಮಾರಿತನಗಳಿಗೂ ತುತ್ತಾಗಿ, ಇದ್ದಬದ್ದ ಅಲ್ಪ ಸ್ವಲ್ಪ ಶಕ್ತಿಯೂ ಕುಂದಿಹೋಗಿ, ಎಣಿಸುವುದಕ್ಕೆ ಹೋದರೆ ಕಾರ್ಯದಲ್ಲಿ ಈಗ ನಡಸಿರುವುದೆಷ್ಟು ! ದೇಶಸೇವೆ, ಭಾಷಾಸೇವೆ, ಇವುಗಳ ಪುಣ್ಯ ಬಯಸಿದವರಿಗೆಲ್ಲಾ ದೊರಕದೆನ್ನುವುದು ಚೆನ್ನಾಗಿ ಅನುಭವಕ್ಕೆ ಬಂದ ಹತಾಶನಿಗೆ ಈ ದಿನ ತಾವು ತೋರಿಸಿರುವ ವಿಶ್ವಾಸಕ್ಕೆ ಒಂದು ಕಡೆ ನಾನು ಹೇಳಿದಂತೆ ತಲೆಯನ್ನು ತಗ್ಗಿಸಬೇಕಾಗಿದೆ; ಆದರೆ ಮತ್ತೊಂದು ಕಡೆ ತಮ್ಮಂತಹ ಮಹಾಜನರ ಸಂಘದಲ್ಲಿ ನಾನೂ ಒಬ್ಬನು ಸೇರಿ ದೀಕ್ಷೆಗೊಂಡದ್ದಕ್ಕಾಗಿ ಹೆಮ್ಮೆಯೂ, ಉತ್ಸಾಹದ ಪುನರುತ್ಥಾನವೂ ಹೃದಯತಲ್ಲಿ ಹೊಮ್ಮುತ್ತಿವೆ. ಈ ಜೀವದಾನಕ್ಕೆ ತಮ್ಮಗಳಿಗೆಲ್ಲಾ ನಾನು ಬಹಳ ಕೃತಜ್ಞನಾಗಿರುತ್ತೇನೆ.

೨. ಮಹಾಶಯರೆ, ಒಂದು ದೇಶದ ಶ್ರೇಯೋಭಿವೃದ್ಧಿಗೆ ಅವಶ್ಯಕವಾದ ಅನೇಕ ಮುಖವಾದ ಸಾಧನಗಳಲ್ಲಿ ಸಾಹಿತ್ಯಕೃಷಿ ಒಂದಾಗಿರುತ್ತದೆ. ಈ ಸಾಹಿತ್ಯ ಪರಿಷತ್ತಿನಲ್ಲಿ ಮುಖ್ಯವಾಗಿ ನಾವು ವಿಚಾರಮಾಡತಕ್ಕದ್ದೂ ಸಾಹಿತ್ಯ ವಿಷಯವೇ ಆಗಿರುತ್ತದೆ. ಒಳ್ಳೆಯ ಸಾಹಿತ್ಯವನ್ನು ಪಡೆದ ಜನಾಂಗದ ಹೃದಯದಲ್ಲಿ ಜ್ಞಾನವೂ, ನಿಷ್ಕಲ್ಮಷವಾದ ಆನಂದವೂ, ಸತ್ಪ್ರೇರಣೆಯೂ ಸಮಾಜದ ಪುನರ್ನಿರ್ಮಾಣದ ಕಾರ್ಯದಲ್ಲಿ ಐಕಮತ್ಯವೂ ಬಲವಾಗಿ ಬೇರೂರುತ್ತವೆ. ಅಂತಹ ಸಾಹಿತ್ಯ, ಅಂತಹ ಪುಸ್ತಕಭಂಡಾರ, ನಮ್ಮಲ್ಲಿ ಎಷ್ಟಿದೆ? ಕನ್ನಡನಾಡಿನಲ್ಲಿ ಅನೇಕ ಜನರು—ಜನಸಾಮಾನ್ಯರು—ಗಂಡಸರು, ಹೆಂಗಸರು, ಮಕ್ಕಳು—ಈಗ ಓದುಬರಹವನ್ನು ಕಲಿಯುತ್ತಿದ್ದಾರೆ; ಮುಂದೆ ಇನ್ನೂ ಹೆಚ್ಚಾಗಿ ಕಲಿಯುವವರಾಗಿದ್ದಾರೆ. ತಮ್ಮೆಲ್ಲರ ಘನೋದ್ದೇಶವೂ ದೇಶದಲ್ಲಿ ಸರ್ವರೂ ಅಕ್ಷರಸ್ಥರಾಗಿ, ವಿದ್ಯಾರ್ಥಿಗಳಾಗಿ, ಜ್ಞಾನಕಾಮರಾಗಿ, ಸತ್ಪ್ರಜೆಗಳಾಗಿ, ದೊಡ್ಡ ಬದುಕನ್ನು ಬದುಕಬೇಕೆಂಬುದೇ ಆಗಿದೆ. ಈ ಸಾಮಾನ್ಯರಾದ ಗಂಡಸರು ಹೆಂಗಸರು ಮಕ್ಕಳಿಗೆಲ್ಲಾ, ವಿರಾಮಕಾಲವನ್ನು ಸದ್ವಿನಿಯೋಗ ಮಾಡುವುದಕ್ಕಾಗಿ, ಸುಲಭವಾದ, ಪ್ರಯೋಜನಕಾರಿಯಾದ, ಶುಚಿಯಾದ, ಹರ್ಷಜನಕವಾದ, ಸದ್ಬೋಧಕವಾದ, ಪುಸ್ತಕಗಳನ್ನು ಎಷ್ಟುಮಟ್ಟಿಗೆ ಒದಗಿಸಿದ್ದೀರಿ? ಓದುವವರು ಕಡಮೆಯಾದರೆ, ಬರೆಯುವವರು ಇನ್ನೂ ಕಡಮೆ. ಒಕ್ಕಡೆ ನಮ್ಮ

ಪುಸ್ತಕವನ್ನು ಕೇಳುವವರೇ ಇಲ್ಲವೆಂಬ ಕೂಗು ; ಒಕ್ಕಡೆ ನಮ್ಮ ಹುಡುಗರಿಗೆ ಓದುವುದಕ್ಕೆ ಸರಿಯಾದ ಪುಸ್ತಕಗಳೇ ಇಲ್ಲವೆಂಬ ದೂರು. ಇದರಮೇಲೆ, ಇಂಗ್ಲಿಷಿನ ಮೇಲೆ ಮತ್ಸರ. ಮತ್ಸರವಿಲ್ಲದಿದ್ದರೂ, ಅಸಮಾಧಾನ, ಅಸಡ್ಡೆ ; ಹೋಗಲಿ, ಇಂಗ್ಲಿಷನ್ನು ಕಲಿತವನು ಕಾಣಬಹುದಾದ ಹೊಕ್ಕು ಬಳಸ ಬಹುದಾದ, ಸಾಹಿತ್ಯದ ರಮಣೀಯವಾದ ಉದ್ಯಾನವನಗಳನ್ನು ಕನ್ನಡ ವನ್ನು ಬಲ್ಲವನು ಕಾಣುವಂತೆ, ಹೊಕ್ಕು ಬಳಸುವಂತೆ ಮಾಡಿರುತ್ತೀರಾ ? ಇಲ್ಲವಾದರೆ, ಬಂಗಾರದ ಬಳೆಯೂ ಇಲ್ಲದೆ, ಹಿತ್ತಾಳೆಯ ಕಡಗವೂ ಇಲ್ಲದೆ, ಹಾಗೂ ಕೆಟ್ಟೆ, ಹೀಗೂ ಕೆಟ್ಟೆ ಎಂಬ ಸ್ಥಿತಿಗೆ ನಮ್ಮ ಮಕ್ಕಳನ್ನು ತಳ್ಳಿದ ಹಾಗೆ ಆಗುವುದಿಲ್ಲವೇ ?

೩. ಒಳ್ಳೆಯದು, ತಾವು ಕೇಳಬಹುದು : ಇದೇನು, ಒಳ್ಳೆಯ ಸಾಹಿತ್ಯವೇ ನಮ್ಮಲ್ಲಿಲ್ಲವೆ ? ಪುರಾತನರ ಪ್ರೌಢ ಸಾಹಿತ್ಯ, ಮಧ್ಯಕಾಲ ದವರ ಸುಲಭ ಸಾಹಿತ್ಯ, ನೂತನರ ರಂಜನ ಸಾಹಿತ್ಯ, ಇವು ನಮ್ಮ ಜ್ಞಾನದಾನವ್ರತಕ್ಕೆ ಸಾಲದೆ ? ಸಾಲದು ; ಕ್ಷಮಿಸಬೇಕು ; ಸಾಲದು. ಹೆಮ್ಮೆಯಿಂದ ತಮ್ಮ ಬೆನ್ನನ್ನು ತಾವು ತಟ್ಟಿಕೊಳ್ಳುವವರು ಬೇಕಾದದ್ದು ಹೇಳಿಕೊಳ್ಳಬಹುದು ; ಹಾಗೆ ಜಂಭ ಹೊಡೆಯುವುದೇ ದೇಶಾಭಿಮಾನ ವೆಂದೂ, ಹಾಗೆ ಹೊಗಳದವರು ದೇಶದ್ರೋಹಿಗಳೆಂದೂ ಭಾವಿಸಿಕೊಳ್ಳ ಬಹುದು. ಆದರೆ ಅನೇಕ ಉತ್ತಮ ಸಾಹಿತ್ಯಗಳನ್ನು ದರ್ಶನಮಾಡಿರುವ, ವಿಶ್ವ ಪ್ರಪಂಚದ ಕವಿಮಹಾನುಭಾವರ ದಿವ್ಯ ಕಾವ್ಯ ತೀರ್ಥಗಳಲ್ಲಿ ಹೃದಯ ವನ್ನು ತೊಳೆದಿರುವ, ವಿಮರ್ಶೆಯ ತಾರತಮ್ಯ ಜ್ಞಾನವಿಲ್ಲದ ಅತಿಶ್ಲಾಘನೆಗೆ ಮನಸ್ಸಾಕ್ಷಿಯೊಪ್ಪಲಾರದ, ನಿರ್ವಂಚನೆಯಾಗಿ ನಿರ್ದಾಕ್ಷಿಣ್ಯವಾಗಿ ನಮ್ಮ ಸಾಹಿತ್ಯವನ್ನು ಕುಲುಮೆಗೆ ಹಾಕಿ, ಒರೆಗಲ್ಲಿನಲ್ಲಿ ಉಜ್ಜಿ, ಪರೀಕ್ಷೆಮಾಡು ವುದು ಕರ್ತವ್ಯವೆಂದು ನಂಬಿರುವ ರಸಜ್ಞರು ಯಾರೂ ಆ ರೀತಿ ಭಾವಿಸರು. ತಾರತಮ್ಯಜ್ಞಾನವುಳ್ಳವರು ಯಾರು ತಾನೆ ಕೀಳನ್ನು ಮೇಲೆಂದೂ, ಸಾಮಾನ್ಯವಾದದ್ದನ್ನು ಉತ್ಕೃಷ್ಟವೆಂದೂ, ಕಳಂಕಮಿಶ್ರವಾದದ್ದನ್ನು ಪರಿ ಶುದ್ಧವೆಂದೂ, ಅರ್ಧ ಪಕ್ವವಾದ ಕಲಾಚಾತುರ್ಯವನ್ನು ಪೂರ್ಣ ಸಂಸ್ಕೃತ ಕಲೆಯ ಪರಮ ಪದವೆಂದೂ ಹೇಳಲಾದೀತು ? ಅದರಲ್ಲಿಯೂ, ತಮ್ಮಂತಹ ಮಹಾ ಪರಿಷತ್ತಿನ ಸಭಿಕರು ನಿಷ್ಪಕ್ಷಪಾತವಾದ ವಿಮರ್ಶೆಯನ್ನು ಕೈಬಿಟ್ಟರೆ ಅದಕ್ಕೆ ಮತ್ತೆಲ್ಲಿ ಆಶ್ರಯ ದೊರೆತೀತು ?

೪. ನವಜೀವನದಲ್ಲಿ ಕಾಲಿಡುತ್ತಿರುವ, ನವದರ್ಶನವನ್ನು ಕೈಕೊಳ್ಳು ತ್ತಿರುವ ಜನಸಾಮಾನ್ಯಕ್ಕೆ ಹಳಗನ್ನಡದ ಮತ್ತು ಬಲುಮಟ್ಟಿಗೆ ನಡು ಗನ್ನಡದ ಕಾವ್ಯಮಾಲೆಯಿಂದ ಅಷ್ಟು ಹೆಚ್ಚಾದ ಪ್ರಯೋಜನವಾಗಲಾರ ದೆಂದು ನಾನು ಶಂಕಿಸುತ್ತೇನೆ. ಒಟ್ಟಿನಮೇಲೆ, ಅದು ಪುರಾತನ ಪ್ರಪಂಚದ ಸಾಹಿತ್ಯ. ಭಾಷೆ, ಕಷ್ಟ; ಹಳಗನ್ನಡ ಹಾಗಿರಲಿ, ಅನಾವಶ್ಯಕವಾದ, ಕನ್ನಡಕ್ಕೆ ಒಂದು ಪುಷ್ಟಿಯನ್ನಾಗಲಿ, ಶಕ್ತಿಯನ್ನಾಗಲಿ, ಸೌಂದರ್ಯವನ್ನಾ ಗಲಿ ಕೊಡದ ನಿಸ್ಸಾರವಾದ ಪುಸ್ತಕದ ಸಂಸ್ಕೃತ ಶಬ್ದಗಳಿಂದ ಹೆಣೆದುಕೊಂಡಿ ರುವ ಸೀಗೆಯ ಮೆಳೆ. ಶೈಲಿ, ಸಾಧಾರಣವಾಗಿ ಕೃತಕ, ನೀರಸ;—ಇನ್ನೂ ರೆಕ್ಕೆ ಬಲಿಯದೆ ಕುಪ್ಪಳಿಸುವ ಹಕ್ಕಿಯ ಮರಿಯ ಹಾಗೆ. ಸಣ್ಣ ಪದ್ಯ ಗಳಲ್ಲಿ ತೊಡರಿಕೊಂಡು ಕತ್ತರಿಸಿ ಬೀಳುವ ಸಣ್ಣ ಪುಟ್ಟ ವಾಕ್ಯಗಳು; ಕೆಲವು ನಿರುಕಾದ, ಆಡುವ ಮಾತಿನ ಮಟ್ಟವನ್ನು ಅಷ್ಟೇನೂ ಮೀರಿ ಏರದ, ವಾಕ್ಯ ರಚನೆ; ಮಾನವನ ವಿಶಾಲವಾದ ಮನೋವೃತ್ತಿಗಳನ್ನು ಛಾಯೆಯಂತೆ ಅನು ಸರಿಸುವ ಪ್ರತಿಭಾವಿಷ್ಟವಾದ ಉದಾತ್ತವಾಣಿಯಲ್ಲ. ನುಡಿಗಳನ್ನು ಮುತ್ತಿ ನಂತೆ ಸೋಸಿ ಆಯುವ, ಮಿತವಾಗಿ ಬಳಸುವ, ಸೈನಿಕವ್ಯೂಹದಂತೆ ಸುಶಿಕ್ಷಿತ ವಾಗಿ ಒಮ್ಮೊನೆಗೆ ನುಗ್ಗುವ, ಬಣ್ಣಗಾರನಂತೆ ಅಲ್ಲಲ್ಲಿ ಬಣ್ಣವನ್ನು ತುಂಬುವ, ಸಮಯೋಚಿತವಾಗಿ ಸಹಜವಾಗಿ ಏರುವ, ಇಳಿಯುವ, ಸಮುದ್ರದ ತೆರೆ ಯಂತೆ ಹರಡಿ ಬೀಸುವ, ಹೊರಳುವ, ತಗ್ಗಿ ಕುಗ್ಗುವ, ಕುಲಸ್ತ್ರೀಯಂತೆ ಅರೆ ಮಾತಾಡುವ, ಮೌನದಿಂದಲೇ ಭಾವವನ್ನು ಸೂಚಿಸುವ, ಜಾತಿವೀರನಂತೆ ಸಂದರ್ಭದಲ್ಲಿ ತಟಕ್ಕನೆ ವೀರಾವೇಶವನ್ನು ತಾಳುವ, ಹಾಗೆಯೇ ಶಾಂತ ವಾಗುವ, ಅಂತರ್ಯವನ್ನು ತೋರಿಸಿ ಮರಳಮೇಲೆ ನಗುನಗುತ ಹರಿಯುವ ಹೊಳೆಯಂತೆ ಸ್ಪಷ್ಟವಾಗಿ ಸ್ವಚ್ಛವಾಗಿ ಹರಿಯುವ, ಅಲ್ಲಲ್ಲಿ ಮೊರೆಯುವ, ದುಮುಕುವ, ಗಂಭೀರವಾಗಿ ತೂಗುವ, ನಲ್ಲೆಯ ಮೆಲ್ನುಡಿಯಂತೆ ಹೃದಯ ವೀಣೆಯ ತಂತಿಗಳನ್ನು ಮಿಡಿದು ಸೋಯಿಸುವ, ನಲಿಯಿಸುವ ಅನಂತಾ ನಂತ ರೂಪಿಯಾದ ಮಹಾವಾಣಿಯಲ್ಲ. ಶಾಸ್ತ್ರ ಶಿಕ್ಷೆಯನ್ನು ಪಡೆದಿರ ಬಹುದು; ಆಡಂಬರವಿರಬಹುದು; ಚಮತ್ಕಾರ, ಚೇಷ್ಟೆ, ಒಲಪು, ಒಯ್ಯಾರ ಎಲ್ಲಾ ಇರಬಹುದು. ಆದರೆ ಎಲ್ಲಾ ಪಾಮರ ರಂಜನೆ, ಒಂದು ಬಗೆಯ ಪಂಡಿತರಿಗೆ ಮಾತ್ರ ರಂಜನೆ. ಕಥೆಯನ್ನು ರಚಿಸುವುದೂ ಅಷ್ಟೆ! ವ್ಯಕ್ತಿ ಗಳನ್ನು ಚಿತ್ರಿಸುವುದೂ ಅಷ್ಟೆ; ರಸ, ಭಾವ ವರ್ಣನೆಗಳನ್ನು ಪ್ರತಿಪಾದಿಸು

ವುದೂ ಅಷ್ಟೆ:—ಏಕನಾದ, ಚರ್ವಿತ ಚರ್ವಣ, ಹರಿದ ಕಾಲುವೆಯಲ್ಲಿ ಪಾಚಿಗಟ್ಟಿ ಹರಿಯುವ ನೀರು. ವಿಷಯವೋ ವೈರಾಗ್ಯ; ವೈರಾಗ್ಯದಲ್ಲಿ ವೈರಾಗ್ಯ ಹುಟ್ಟದಾಗ ಶೃಂಗಾರ:—ಎಂತಹ ಶೃಂಗಾರ! ಭಕ್ತಿ, ಜ್ಞಾನ, ಧರ್ಮ, ನೀತಿ, ಮಾನವ ಪ್ರಪಂಚ, ಪ್ರಕೃತಿ, ಇವೆಲ್ಲಾ ಉತ್ತಮ ಕವಿತಾ ವಿಷಯಗಳೇ ಅಹುದು: ಆದರೆ-ಹೇಳುವ ರೀತಿ? ರಸಪುಷ್ಟಿ? ಸಂಸ್ಕೃತ ಮತ್ತು ಇಂಗ್ಲಿಷ್ ಭಾಷೆಗಳಲ್ಲಿರುವ ಮಹಾ ಮಹಾ ಕವಿಗಳ ಪ್ರತಿಭೆಯೂ, ಕಲ್ಪನಾಶಕ್ತಿಯೂ, ಉದಾತ್ತಭಾವಗಳೂ, ರಸಪ್ರವಾಹವೂ, ಅದ್ಭುತ ಕವಿತಾಸೃಷ್ಟಿಯೂ, ಮನುಷ್ಯಜಾತಿಯ ನಾನಾ ವಿಧವಾದ ಅನುಭವಗಳೂ, ಸಂಕಟಗಳೂ, ಮಹತ್ಪ್ರಯತ್ನಗಳೂ, ನಗೆಯೂ, ಕಣ್ಣೀರೂ, ಸೋಲೂ, ಗೆಲವೂ, ಹೀಗೇ ಸರಿಯೆಂದು ನಿರ್ಣಯಕ್ಕೆ ಸಿಕ್ಕದ ಜೀವದ ರಹಸ್ಯವೂ, ಆಶ್ಚರ್ಯವೂ, ವೈವಿಧ್ಯವೂ, ಸೌಂದರ್ಯವೂ, ಭಯವೂ, ಶಾಂತಿಯೂ, ಮಂಗಳವೂ, ಅಮಂಗಳವೂ, ಆ ಅಮಂಗಳದಿಂದಲೇ ಮಂಗಳವನ್ನು ಹಿಂಡುವ ಆತ್ಮಶಕ್ತಿಯೂ, ಉತ್ತಮ ಸಾಹಿತ್ಯಗಳ ಸಮಕ್ಕೆ ತೂಗಬಲ್ಲುವು ನಮ್ಮ ಪೂರ್ವದ ಸಾಹಿತ್ಯದಲ್ಲಿ ಎಷ್ಟುಮಟ್ಟಿಗೆ ದೊರೆಯಬಹುದು? ಶುದ್ಧ ಕಲಾದೃಷ್ಟಿಯಿಂದ ಸಾಹಿತ್ಯ, ಕಾವ್ಯ, ಎನ್ನಿಸಿಕೊಳ್ಳಬಹುದಾದ ಬರವಣಿಗೆ ನಮ್ಮ ಪೂರ್ವದ ಸಾಹಿತ್ಯದಲ್ಲಿ ಹೇರಳವಾಗಿದೆ ಎಂದು ಎಷ್ಟುಮಟ್ಟಿಗೆ ಧೈರ್ಯವಾಗಿ ಹೇಳಬಹುದು?

೫. ಕರ್ಣಾಟಕ ಭಕ್ತರೆ, ಕ್ಷಮೆಯಿಂದ ಲಾಲಿಸಬೇಕು. ಈ ನ್ಯೂನತೆಗಳನ್ನು ಸಾಮಾನ್ಯವಾಗಿ ಹೇಳಿದೆನೇ ಹೊರತು, ನಮ್ಮ ಸಾಹಿತ್ಯದಲ್ಲಿಯೂ ಇರುವ ಉದ್ದಾಮಕವಿಗಳನ್ನೂ ಸೇರಿಸಿಕೊಂಡು ಹೇಳಲಿಲ್ಲ. ಒಂದೇ ಸಾಹಿತ್ಯದಲ್ಲಿ ಸಂಕುಚಿತದೃಷ್ಟಿಗಳಾಗದೆ, ಹಲವು ಸಾಹಿತ್ಯಗಳ ಉದ್ದಾಮ ಕವಿಗಳನ್ನೆಲ್ಲಾ ನೋಡಿ, ಅನುಭವಿಸಿ, ಸಂಸ್ಕಾರವನ್ನು ಪಡೆಯಬೇಕು ಎಂಬುದಕ್ಕಾಗಿ ಹೇಳಿದೆ. ನಮ್ಮದು, ಆದದ್ದರಿಂದ ಹೆಮ್ಮೆಯದು ಎಂಬ ದುರಭಿಮಾನವನ್ನು ಬಿಡೋಣ. ತಾರತಮ್ಯವನ್ನು ಬಲ್ಲ ವಿಮರ್ಶೆಯನ್ನು ಅಭ್ಯಾಸ ಮಾಡೋಣ. ನೆರೆಮನೆಯ ಮಕ್ಕಳು ಮನೆಯ ಮಕ್ಕಳಿಗಿಂತ ಮುದ್ದಾಗಿದ್ದರೆ, ಹೊಟ್ಟೆ ಉರಿದರೂ, ಅವರ ಚೆಲುವನ್ನು ಒಪ್ಪಿಕೊಳ್ಳೋಣ. ಆಗ್ಗೆ ನಮಗೆ ವಿನೀತರಲ್ಲಿ ಮರ್ಯಾದೆ ಹುಟ್ಟುವುದು. ನಿಜವಾದ ಸೌಂದರ್ಯದ ಸರಿಯಾದ ಪರಿಜ್ಞಾನವುಂಟಾಗುವುದು. ಮದದಿಂದ ಕಣ್ಣು

ಮುಚ್ಚಿ ಹೋಗದೆ, ಎಲ್ಲೆಲ್ಲಿ ದಿವ್ಯಜ್ಯೋತಿ ಪ್ರಕಾಶಿಸುವುದೋ ಅಲ್ಲೆಲ್ಲಾ ಶಿಷ್ಯರಾಗಿದ್ದು ಕೊನೆಗೆ ನಮಗೂ ಗುರುತ್ವ ಲಭಿಸುವುದು. ಕೇವಲ ಮತ ಬೋಧನೆಗಾಗಿ, ಅಥವಾ ಪುರಾಣೇತಿಹಾಸಮಾಹಾತ್ಮ್ಯ ಪ್ರಸಾರಣೆಗಾಗಿ, ಅಥವಾ ಸುಖಪುರುಷರಂಜನೆಗಾಗಿ, ಅಥವಾ ಪಾಂಡಿತ್ಯ ಪ್ರದರ್ಶನಕ್ಕಾಗಿ ಗತಿಸಿಹೋದ ಲೋಕದ ನೂಲೆಳೆಗಳನ್ನು ತೀರ ಹಳೆಯದಾದ ಮಗ್ಗಗಳಲ್ಲಿ ನೆಯ್ದು ನೆಯ್ದು ನೆಯ್ದು ರಾಶಿಹಾಕಿರುವ ಗ್ರಂಥಗಳು ಎಷ್ಟಿದ್ದರೇನು ? ಎಷ್ಟು ಇನ್ನೂ ಅಚ್ಚಾಗದಿದ್ದರೇನು ? ಎಷ್ಟೋ ಉತ್ತಮವಾದ ವ್ಯವಸಾಯಗಳಿಗೆ ವಿನಿಯೋಗಿಸಬೇಕಾಗಿ ಬಂದಿರುವ ಈ ನೂತನ ಕಾಲದಲ್ಲಿ ನಮ್ಮ ಹ್ರಸ್ವ ಜೀವಮಾನವನ್ನು ವಾತ್ಸಲ್ಯದಿಂದ ಪೂರ್ವ ಗ್ರಂಥಗಳಿಗೆ ಅರ್ಪಿಸಿ ಕೃಷಿ ಮಾಡಲು ಅವಕಾಶವುಂಟೆ ? ಹಾಗೆ ಕನ್ನಡದ ಗ್ರಂಥರಾಶಿಯನ್ನೆಲ್ಲಾ ಪರೀಕ್ಷಿಸಿ ನೋಡುವುದಕ್ಕೆ ಪ್ರತಿಯೊಬ್ಬರಿಗೂ ಅವಕಾಶವಾಗದಿದ್ದರೂ, ಪಂಪ, ಪೊನ್ನ, ರನ್ನ, ನಾಗವರ್ಮ, ನಾಗಚಂದ್ರ, ನೇಮಿಚಂದ್ರ, ಜನ್ನ, ಮಧುರ, ರತ್ನಾಕರ, ಬಸವೇಶ್ವರ, ವಚನಕಾರರು, ಹರೀಶ್ವರ, ರಾಘವಾಂಕ, ಸರ್ವಜ್ಞ ಮೂರ್ತಿ, ಚಾಮರಸ, ವಿರೂಪಾಕ್ಷ, ಷಡಕ್ಷರಿ, ರುದ್ರಭಟ್ಟ, ಕುಮಾರವ್ಯಾಸ, ಕುಮಾರವಾಲ್ಮೀಕಿ, ನಿತ್ಯಾತ್ಮಶುಕ, ಲಕ್ಷ್ಮೀಶ, ದಾಸರು, ತಿರುಮಲಾರ್ಯ, ಹೊನ್ನಮ್ಮ—

> ಹೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ ?
> ಹೆಣ್ಣಲ್ಲವೆ ಪೊರೆದವಳು ?
> ಹೆಣ್ಣು ಹೆಣ್ಣೆಂದೇತಕೆ ಬೀಳುಗಳೆವರು
> ಕಣ್ಣು ಕಾಣದ ಗಾವಿಲರು ?

ಎಂದು ಮೊದಲಿಸಿದ ಹೊನ್ನಮ್ಮ—ಇಂತಹ ಪ್ರಸಿದ್ಧ ಕವಿಗಳ ಕಾವ್ಯಗಳನ್ನಾದರೂ ಓದಿ, ವಿಮರ್ಶಿಸಿ, ಪರಸ್ಪರ ಯೋಗ್ಯತಾ ಪಕ್ಷವನ್ನು ನಿರ್ಧರಿಸಿ ಅತ್ಯುತ್ತಮವಾದ ಕಾವ್ಯಗಳನ್ನೂ ಕಾವ್ಯಭಾಗಗಳನ್ನೂ ಸಂಗ್ರಹಿಸಿ, ಸರ್ವತ್ರ ಪ್ರಚಾರಕ್ಕೆ ತರಬೇಕಾದದ್ದು ನಮ್ಮ ಕರ್ತವ್ಯವಾಗಿದೆ. ಹೀಗೆ ಶೋಧಿಸಿದ ಪೂರ್ವ ಸಾಹಿತ್ಯದ ತಿರುಳು ಜನಸಾಮಾನ್ಯಕ್ಕೆ ಉತ್ತೇಜನ ಕೊಡುವುದೇ ಅಲ್ಲದೆ ಹೊಸ ಸಾಹಿತ್ಯವನ್ನು ರಚಿಸತಕ್ಕವರಿಗೂ ಮಾರ್ಗದರ್ಶಿಯಾಗಿ ಫಲ ಪ್ರದಾಯಕವಾಗುತ್ತದೆ.

೬. ಅಂತಹ ಉತ್ತಮ ಕಾವ್ಯಗಳೂ, ಕಾವ್ಯಭಾಗಗಳೂ ಕನ್ನಡ

ವಲ್ಲಿ ಬೇಕಾದಷ್ಟು ಇಲ್ಲದೆ ಇಲ್ಲ. ಈ ವಿಷಯದಲ್ಲಿ ನಾವು ಯಾರಿಗೂ ತಲೆತಗ್ಗಿಸಬೇಕಾಗಿಲ್ಲ: ಅಹೋ ರೂಪಂ ! ಅಹೋ ಧ್ವನಿಃ ! ಎಂದು ಬೆರಗಾಗುವ ಅಸಂಸ್ಕೃತ ಜಳ್ಳು ಜಂಭಕ್ಕೆ ಮಾತ್ರ ನಾವು ತಲೆತಗ್ಗಿಸಬೇಕಾಗಿದೆ ಅಷ್ಟೆ ! ಈಗ ಸುಮಾರು ೩೦ ವರ್ಷಗಳಿಂದ ನಾನು ಕನ್ನಡವನ್ನು ಪ್ರೀತಿಯಿಂದ ಓದುತ್ತಿದ್ದೇನೆ; ನಗುತ ಹೇಳಿದವರು ಕೆಡಹೇಳಿದರು ಎಂಬ ಪ್ರೀತಿಯಿಂದಲ್ಲ; ಬಯ್ದು ಹೇಳಿದವರು ಬದುಕ ಹೇಳಿದರು ಎಂಬ ಪ್ರೀತಿಯಿಂದ. ಉದಾರವಾದ ಸನಾತನಧರ್ಮ, ಉಜ್ವಲವಾದ ಭಕ್ತಿ, ಸಂಸಾರದ ದುಸ್ಸಹವಾದ ದುಃಖ, ಮರಣಪ್ರಲಾಪ, ನಿಸ್ಸಾರವಸ್ತುವಿನಲ್ಲಿ ವೈರಾಗ್ಯ, ವಿಘ್ನಕ್ಕೆ ಜಗ್ಗದ ತಪಸ್ಸು, ಶೌರ್ಯ, ಕಾರುಣ್ಯ, ರಾಗಾವೇಶ, ಕ್ಷಮೆ, ಪ್ರೇಮ, ಮಕ್ಕಳ ಬಯಕೆ, ಪ್ರಕೃತಿಯ ಚೆಲುವು ನೋಟಗಳಲ್ಲಿ ಆನಂದ;-ಇವೇ ಮುಂತಾದ ನಮ್ಮ ಜನಕ್ಕೆ ಸ್ವಾಭಾವಿಕವಾದ, ಸರ್ವಸಾಧಾರಣವಾದ ಅನೇಕ ಲಕ್ಷಣಗಳನ್ನು ಒಹುಸುಖವಾಗಿ ಕಲಾಪ್ರಪಂಚದಲ್ಲಿ ಪ್ರತಿಬಿಂಬಿಸಿರುವುದು ನಮ್ಮ ಕನ್ನಡದಲ್ಲಿ ಬೇಕಾದಷ್ಟಿದೆ. ಏಕೆಂದರೆ, ನಮ್ಮ ಕವಿಗಳಲ್ಲಿ ಪ್ರಮುಖರಾದವರು ಎಷ್ಟೇ ಪಾಂಡಿತ್ಯದ ಹುಚ್ಚು ಹೊಳೆಯ ಸೆಳೆತಕ್ಕೆ ಸಿಕ್ಕಿದ್ದರೂ, ಎಷ್ಟೇ ಶಾಸ್ತ್ರದ ನಿರರ್ಥಕವಾದ ನಿರ್ಬಂಧಗಳಿಗೆ ಕಟ್ಟು ಬಿದ್ದಿದ್ದರೂ, ಎಷ್ಟೇ ಆ ಕಾಲದ ಅಭಿರುಚಿಯ ಸಂಕೇತಗಳಿಗೆ ಅಂಧಪರಂಪರೆಯಾಗಿ ಮನ್ನಣೆಯನ್ನು ತೆತ್ತಿದ್ದರೂ, ಎಷ್ಟೇ ತಮ್ಮ ತಮ್ಮ ಮತಸಿದ್ಧಾಂತಗಳನ್ನು ರಾದ್ಧಾಂತಮಾಡಿ, ವಿಸ್ತರಿಸಿ, ಲಂಬಿಸಿ, ಮರಳುಗಾಡಿನಲ್ಲಿ ಬಾಯಾರಿಕೆಯನ್ನಿಂಗಿಸುವ ಹೊಳೆ ಮುಚ್ಚಿಹೋಯಿತೆಂಬಂತೆ, ತೀರ್ಥಂಕರರ, ಪುರಾತನಭಕ್ತರ, ಅವತಾರ ಪುರುಷರ, ವೀರರ, ನಾಯಕರ, ದಿವ್ಯವಿಗ್ರಹಗಳನ್ನು ಸರ್ವಕಾಲದಲ್ಲಿಯೂ ಸರ್ವರೂ ಮೆಚ್ಚುವಂತೆ ಕಡೆದಿರಿಸಲಾರದೆ ಹೋದರೂ, ಈ ಮತಾಭಿಮಾನಿಗಳಲ್ಲಿ, ಈ ಶಾಸ್ತ್ರಪಕ್ಷಪಾತಿಗಳಲ್ಲಿ, ಈ ಪಂಡಿತರಲ್ಲಿ, ಹೊಟ್ಟೆಯೊಳಗೆ ಒಬ್ಬ ಹುಟ್ಟು ಕವಿ ಅವಿತುಕೊಂಡಿದ್ದದ್ದರಿಂದ, ಆ ಹುಟ್ಟು ಕವಿ ಸರಿಯಾದ, ಸ್ವತಂತ್ರವಾದ, ಸಂಪೂರ್ಣವಾದ ವಿವಿಧ ಮಹಾನುಭವಚೋದಿತವಾದ ಶುದ್ಧ ಕಲಾಜ್ಯೋತಿಯ ಬಿಸಿಲಿನಲ್ಲಿ ಹೊಮ್ಮಿ, ಬೆಳದಿಂಗಳಿನಲ್ಲಿ ಹೂವಾಗಿದ್ದರೂ, ಆ ಒಳಗಿದ್ದ ನಿಸರ್ಗ ಕವಿಯ ಪ್ರಭಾವದಿಂದ, ಶುಷ್ಕವಾದ ಅರಣ್ಯರೋದನದ ನಡುವೆ, ಸಮಯ

ಬಂದಕೂಡಲೇ, ಒಂದುಕ್ಷಣ ಇಲ್ಲಿ ಹೃದಯ ಹಿಗ್ಗಿ, ರಸ ಉಕ್ಕಿ, ಮರು ಭೂಮಿಯಲ್ಲಿ ತಣ್ಣೀರ ಕೊಳ ಊರಿಬಂದಂತೆ, ಸುಗ್ಗಿಯ ಹೊಸ ಮಾವಿನ ಚಿಗುರನ್ನು ಸವಿದ ಕೋಗಿಲೆಯ ಕಂಠ ಇಂಪಾದಂತೆ, ಈ ಪಂಜರವ ಹಕ್ಕಿಗಳು, ಈ ಬಲೆಯ ಜಿಂಕೆಗಳು, ನೆಗೆದು, ನುಡಿದು, ಹಾರಿ, ಹಾಡಿ, ಸರಸ್ವತೀ ಪ್ರಸಾದದ ಪೂರ್ಣ ರಮಣೀಯತೆಯನ್ನು ಸಹೃದಯರಿಗೆ ಅನು ಭವಮಾಡಿಸಿ ಬಿಟ್ಟಿರುವರು.

೭. ಮಹಾಶಯರೆ, ನನ್ನ ಭಾಷಣದಿಂದ ಉಂಟಾಗಿರಬಹುದಾದ ತಮ್ಮಗಳ ಮನಸ್ಸಿನ ಆಯಾಸವನ್ನು ಪರಿಹಾರಮಾಡುವುದಕ್ಕಾಗಿ, ಅಂತಹ ಕವಿಶ್ರೇಷ್ಠರ ಉತ್ತಮ ಕಾವ್ಯಭಾಗಗಳಲ್ಲಿ ಒಂದೆರಡನ್ನು ಓದಿ ಹೇಳಲು ಅಪ್ಪಣೆಯನ್ನು ಬೇಡುತ್ತೇನೆ. ವಿಕ್ರಮಾರ್ಜುನವಿಜಯ, ಗದಾಯುದ್ಧ, ಯಶೋಧರ ಚರಿತ, ಮುಂತಾದ ಉದ್ಗ್ರಂಥಗಳ ಕಥಾರಚನೆಯ ಸ್ವಾರಸ್ಯ ವನ್ನಾಗಲಿ, ಪಂಪನ ಬಾಹುಬಲಿ, ಪಂಪರನ್ನರ ದುರ್ಯೋಧನ, ನಾಗ ಚಂದ್ರನ ರಾವಣ, ಕುಮಾರವ್ಯಾಸನ ಶ್ರೀಕೃಷ್ಣ ಮುಂತಾದ ಪಾತ್ರಗಳ ಸೃಷ್ಟಿಯ ಗಾಂಭೀರ್ಯವನ್ನಾಗಲಿ ಇಲ್ಲಿ ಪ್ರದರ್ಶಿಸುವುದು ಸಾಧ್ಯವಿಲ್ಲ. ಕೆಲವು ಪದ್ಯಗಳನ್ನು ಮಾತ್ರ ಮುಂದಿಡಲು ಸ್ವಲ್ಪ ಕಾಲವನ್ನು ಕೇಳಿ ಕೊಳ್ಳುತ್ತೇನೆ—

ಕವಿತಾಗುಣಾರ್ಣವನಾದ ಪಂಪನು ಅರ್ಜುನನ ತೀರ್ಥಯಾತ್ರೆ ಯನ್ನು ಎಂದಿನಂತೆ ವರ್ಣಿಸಿಕೊಂಡುಬರುತ್ತ, ಆತನು ಬನವಾಸಿ ದೇಶಕ್ಕೆ ಬಂದನೆಂದಕೂಡಲೇ, ತನ್ನ ಹೃದಯದಲ್ಲಿದ್ದ ಕನ್ನಡನಾಡಿನ ಪ್ರೇಮ ವನ್ನೆಲ್ಲಾ ಸುರಿದುಬಿಟ್ಟಿರುವನು. ಇದನ್ನು ನುಡಿಯುವವನು, ಹಾಡುವವನು ಅರ್ಜುನನಲ್ಲ, ಪಂಪ:—

ಸೊಗಯಿಸಿ ಬಂದ ಮಾಮರನೆ, ಕಳ್ತೆಲೆವಳ್ಳಿಯೆ, ಪೂತ ಜಾತಿ ಸಂ
ಪಗೆಯೆ, ಕುಕಿಲ್ವ ಕೋಗಿಲೆಯೆ, ಪಾಡುವ ತುಂಬಿಯೆ, ನಲ್ಲರೊಳ್ಮೊಗಂ
ನಗೆಮೊಗದೊಳ್ ಪಳಂಚಲೆಯೆ ಕೂಡುವ ನಲ್ಲರೆ, ನೋೞ್ಪೊಡಾವ ಬೆ
ಟ್ಟುಗಳೊಳಮಾವ ನಂದನವನಂಗಳೊಳಂ ಬನವಾಸಿ ದೇಶದೊಳ್ ?

ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ
ಳ್ಗಾಗರಮಾದ ಮಾನಸರೆ ಮಾನಸರಂತವರಾಗಿ ಪುಟ್ಟಲೇ
ನಾಗಿಯುಮೇನೊ ತೀರ್ದಪುದೆ? ತೀರದೊಡಂ ಮಱಿದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್.

ತೆಂಕಣಗಾಳಿ ಸೋಂಕಿದೊಡಮೊಳ್ನುಡಿಗೇಳ್ದೊಡಮಿಂಪನಾಳ್ದ ಗೇ
ಯಂ ಕಿವಿವೊಕ್ಕೊಡಂ, ಬಿರಿದ ಮಲ್ಲಿಗೆಗಂಡೊಡಮಾದ ಕೆಂದಲಂ
ಪಂ ಕೆಳೆಗೊಂಡೊಡಂ ಮಧುಮಹೋತ್ಸವಮಾದೊಡಮೇನನೆಂಬೆನಾ
ರಂಕುಸಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ.

ಅಮರ್ದಂ ಮುಕ್ಕುಳಿಪಂತುಟಪ್ಪ ಸುಸಿಲೊಂದಿಂಪುಂ ತಗುಳ್ದೊಂದು ಗೇ
ಯಮುಮಾದಕ್ಕರಗೊಟ್ಟಿಯುಂ. ಚದುರರೊಳ್ಪಾತುಂ ಕುಳಿರ್ಕೋಲ್ಪ ಜೊಂ
ಪಮುಮೇವೇೞ್ಪುದನುಳ್ಳ ಮೆಯ್ಸುಕಮುಮಿಂತೆನ್ನಂ ಕರಂ ನೋಡಿ ನಾ
ಡೆ ಮನಂಗೊಂಡಿರೆ ತೆಂಕನಾಡ ಮೞೆಯಲ್ಕಿನ್ನೇಂ ಮನಂ ಬರ್ಕುಮೇ?

ಇದು ಕನ್ನಡನಾಡಿನ ಜನ್ಮದ ಸುಖವಾಯಿತು; ಮಾನವ ಸಂಸಾರದ ದುಃಖವನ್ನು ಕೇಳಿ : ರನ್ನನು ಹೇಳುತ್ತಾನೆ-

ನೆನೆಯದೆ ಕಾಣದೆ ಕೇಳದೆ
ತನುವಿನ ಬೊಲ್ಲಮೆಯನಱಿದುಮಱಿಯದೆ ತೊಱೆದಿಯಲ್
ಮನಮುಳ್ಳೊಡೆ ಜೀವಕ್ಕೀ
ತನುವಿರೆ ವೈರಾಗ್ಯಕಾರಣಂ ಪೆಱತುಂಟೇ ?

ತನಗಲ್ಲದೊಡಲ್ಗೊಡಮೆಗೆ
ಮನಮಿಟ್ಟಪವರ್ಗ ಮಾರ್ಗಮಂ ಪೊರ್ದದೆ ತ
ನ್ನನೆ ತಾನೆ ನಂಬಿಸುವೊಡಾ
ತ್ಮನಂತು ಪೇೞಾತ್ಮವಂಚಕರ್ ಪೆಱರೊಳರೇ ?

ಮತಿಗೆಟ್ಟು ಜೀವ ಧರ್ಮಾ
ಮೃತಮಂ ಸೇವಿಸದಧರ್ಮಮುಂ ಸೇವಿಸಿ ದು
ರ್ಗತಿಗಿೞಿದೀ ಜವನೆಂಬಱಿ
ಸಿ ತಿಂಬ ದೈವಕ್ಕೆ ಪೋಗಿ ಪಾೞಿಂ ಬಿಡುವಯ್:

ಎನಿತೆನಿತು ಕೞಿದ ಭವಮಂ
ನೆನೆದಪೆ ? ಎನಿತೆನಿತು ಭವದ ಬಂಧುಗಳಂ ನೀಂ
ನೆನೆದಪೆ ? ಎನಿತೆನಿತೊಡಲಂ
ನೆನೆದಪೆ ! ಎಲೆ ಜೀವ ನೀನೆ ಪೇೞ್ ಪವಣೊಳವೇ ?

ಎನಿತಂ ಉಕ್ಕೞಿಗುದಿದಪೆ ?
ಎನಿತಂ ಕಕ್ಕೞಿಗಟಲ್ದಪಯ್ ಜೀವನೆ ? ನೀ
ನೆನಿತಂ ಮಲ್ಕಲಮಱುಗುವೆ ?
ಎನಿತಂ ಸಂಸಾರದೊಳಗೆ ತಿಜ್ಜನೆ ತಿರಿವಯ್ ?

ಕಡೆಯಿಲ್ಲದ ಸಂಸಾರದ
ಕಡೆಗಾಣಲ್ ಬಗೆವೆಯಪ್ಪೊಡೆನ್ನುಕ್ತಿಗೊಡಂ
ಬಡು ಜೀವ, ನಿನ್ನ ಕಾಲಂ
ಪಿಡಿವೆಂ ಧರ್ಮಮನೆ ಮುಗುೞೆ ಬಳ್ವಿಡಿವಿಡಿಯಾ !

ಜನನ ಮೃತಿ ದೇವ ನಾರಕ
ಮನುಷ್ಯ ತಿರ್ಯಗ್ವಿಕಲ್ಪಗತಿಗಳೊಳೆನಸುಂ
ನಿನಗೆ ಸುಖಮಿಲ್ಲ, ನೆಟ್ಟನೆ
ಮನದೊಳ್ ಭಾವಿಪೊಡಸಾರಮೀ ಸಂಸಾರಂ !

ಈ ನಾರಕ ತಿರ್ಯಗ್ಗತಿ
ಗೀ ನರ ಸುರ ಗತಿಗೆ ಪೇಸಿದೆಂ, ದರ್ಶನದಿಂ
ಜ್ಞಾನದಿನೊಪ್ಪುವ ಪರಮ
ಸ್ಥಾನಮನಾಂ ಪಡೆವೆನಕ್ಕೆ ಪಂಚಮಗತಿಯಂ.

ದಿವಸದಿವಸಂಗಳಿಂ ಕುಂ
ದುವುವಲ್ಲದೆ ಬಳೆಯುವಾಯುವುಂ ವಪುವುಂ ಪೆ
ರ್ಚುವುವಲ್ಲವು ವಿಷಯಸುಖ
ಕ್ಕೆವಚತ್ತೆಂ ಪಡದುಕೊಳ್ವೆನಕ್ಷಯಸುಖಮಂ !

ಜೀವನದ ಉತ್ಸಾಹವಾಯಿತು; ಜೀವನದ ಜುಗುಪ್ಸೆಯಾಯಿತು. ವೃತ್ತವಾಯಿತು, ಕಂದವಾಯಿತು. ನಮ್ಮ ಕನ್ನಡದ ಮುದ್ದಾದ ಛಂದಸ್ಸಿನಲ್ಲಿ ಮಗನನ್ನು ಕಳೆದುಕೊಂಡ ಒಬ್ಬ ತಾಯಿಯ ಗೋಳನ್ನು ಕೇಳಿ. ರಾಘವಾಂಕನ ಹರಿಶ್ಚಂದ್ರ ಕಾವ್ಯದಿಂದ ಓದುತ್ತೇನೆ—ಕೆಲವು ಪಙ್ತಿಗಳನ್ನು ಅಲ್ಲಲ್ಲಿ ಬಿಟ್ಟು ಬಿಟ್ಟು.

ಏವೆನೇವೆನೆಲೆ ಮಗನೇ, ಮಗನೇ,
ಸಾವೇಕಾಯಿತ್ತೆಲೆ ಚೆನ್ನಿಗನೇ!
ಇಱಿದೆಯೆಲಾ ಎನ್ನಸು ಸುಕುಮಾರಾ!
ಕೊಱಿದೆಯೆಲಾ ಕೊರಲಸು ಜಿತಮಾರಾ!
ಎತ್ತಣ ಬಬುಸಿಡಿಲೆಱಗಿತೊ ನಿನ್ನ
ಹುತ್ತದ ಹತ್ತಿರಲೊಱಗಿದೆ ಚೆನ್ನ,
ಹಾವು ಹಿಡಿಯೆ ಹಾ ಎಂದೆಯೊ ಕಂದಾ,
ಸಾವಾಗವ್ವಾ ಎಂದೆಯೊ ಕಂದಾ?
ನೊಂದೆನು, ಬೆಂದೆನು, ಕುಂದಿದೆ, ಮಗನೇ
ಕುಂದಿದ್ದೆ, ಕುಗ್ಗಿದೆ, ಮುಗ್ಗಿದೆ ಮಗನೇ!
ರನ್ನದ ಕನ್ನಡಿಯೊಡೆದುದೊ, ದೇವಾ,
ಹೊನ್ನ ಕಳಸ ಕೆಡೆದುದೊ, ಎಲೆ ದೇವಾ,
ಎನ್ನ ಕಡವರಂ ಸೂಱೆಹೋಯ್ತೋ!
ಚಿನ್ನದ ಪ್ರತಿಮೆಯುಸಿರು ಹಾರಿಹೋಯ್ತೋ?
ಅರಿಗೆನ್ನನೊಪ್ಪಯಿಸಿದೆ ಕಂದಾ?
ಅರಯ್ಯದೆ ಹೋಪರೆ ಗುಣವೃಂದಾ?
ಹೆತ್ತ ಹೊಟ್ಟೆಯುರಿಯುತ್ತಿದೆ, ಮಗನೇ,
ಎತ್ತಿದ ತೋಳನು ಕೆತ್ತಿದೆ, ಮಗನೆ,
ಹಾಡುವ ಬಾಯೊಳು ಮಣ್ಣನೆ ಹೊಯ್ದೆ,
ನೋಡುವ ಕಣ್ಣೊಳು ಸುಣ್ಣವ ಹೊಯ್ದೆ!
ಪಾಪಿಯೆನ್ನ ನೀನೊಯ್ಯನೆ ನೋಡಾ,
ಕೋಪವನುಳಿದೊಯ್ಯನೆ ಮಾತಾಡಾ,
ನುಡಿದರೆ ಪಾಪವೆ ಹೆತ್ತವರೊಡನೆ?

ಕಡು ಮುನಿಸೇಕೆಲೆ ಮುಗ ನನ್ನೊಡನೆ !
ಬಾರೈ ಬಹಳ ಸಿರಿಯ ಸಿಂಗಾರಾ,
ಬಾರೈ ಸುಜನ ಜನಕ್ಕಾಧಾರಾ,
ಮುದ್ದುತನದ ಮೋಹದ ಮುಂಗುಡಿಯೇ,
ಎದ್ದಪ್ಪೆನ್ನನು ಎಳಲತೆಗುಡಿಯೇ,
ಏಳೆನ್ನಾನಂದಾಮೃತಶರಧಿ !
ಏಳಖಿಳ ಗುಣಾರ್ಣವ ಕಳಾನಿಧಿ !
ಧರೆಯನಾಳ್ವ ಸಿರಿಯಂ ಕಳೆದಿಂದು,
ಉರಗನ ವಿಷದಗ್ನಿಯೊಳುಱಿ ಬೆಂದು,
ಅಡವಿಯೊಳೀ ಪರಿ ಕೆಡೆವರೆ ವೀರಾ !
ಪ್ರೊಡವಿಯೊಡೆಯನಗ್ಗದ ಸುಕುಮಾರಾ !

ದಯವಿಟ್ಟು ಕೇಳುವುದಾದರೆ, ಇನ್ನೊಂದು ಗೀತವನ್ನು ಓದಿ—ಹಾಡುವುದಕ್ಕೆ ನನಗೆ ಬಾರದು—ನನ್ನ ಮನಸ್ಸನ್ನು ತೃಪ್ತಿಪಡಿಸಿಕೊಳ್ಳುತ್ತೇನೆ. ಮೈಸೂರು ಶ್ರೀಮನ್ಮಹಾರಾಜರಾಗಿದ್ದ ಚಿಕ್ಕದೇವರಾಜ ಒಡೆಯರು ಭಗವಂತನಲ್ಲಿ ಭಕ್ತರ ತಪ್ಪುಗಳನ್ನು ಕುರಿತು ಹೀಗೆ ಬಿನ್ನಹಮಾಡಿಕೊಳ್ಳುತ್ತಾರೆ—ಇದೂ ಕನ್ನಡವುಟ್ಟು.

ತಪ್ಪದಾರದು ?—ತಿಳಿದು ನೋಡೆ,
ತಪ್ಪದಾರದು ?
ತಪ್ಪು ನೆಪ್ಪುಗಳ ವಿಕಲ್ಪಿಸದೆಲ್ಲವ
ಸೊಪ್ಪುಗೆಯ್ದೆನ್ನನೊಲಿದು ಪಾಲಿಸು ಕೃಷ್ಣ !

ಅರಯ್ಕೆ ಮುಗ್ಗಿರಿವಂಧನ ತಪ್ಪೋ ?
ದಾರಿದೋಱುವ ದಂಡಧಾರನ ತಪ್ಪೋ ?
ಮೇರೆಯಱಿಯದೆನ್ನ ಮೇಲಣ ತಪ್ಪೋ ?
ನಾರಾಯಣ ನಿನ್ನ ನಟನೆಯ ತಪ್ಪೋ ?

ತೊಂಡುಮೇವ ಪಸುವಿಂಡಿನ ತಪ್ಪೊ ?
ಕಂಡು ಕಾಯದ ತುಱುಗಾವನ ತಪ್ಪೋ ?

ಗಂಡುಮೀಱುವೆನ್ನ ಗೆಯ್ಮೆಯ ತಪ್ಪೋ?
ಕೊಂಡಾಳುವ ನಿನ್ನ ಕೂರ್ಮೆಯ ತಪ್ಪೋ?

ಬಾಪಿಯ ಬಳಸುವ ಪಸುಳೆಯ ತಪ್ಪೊ?
ತಾ ಪಂದು ತಡೆಯದ ತಾಯಿಯ ತಪ್ಪೊ?
ಈ ವಿಷಯಕೆ ಮುಗ್ಗುವೆನ್ನದು ತಪ್ಪೋ?
ಆವೇಳೆಗಾವುಗೆಯ್ಮದ ನಿನ್ನ ತಪ್ಪೋ?

ಗುಱಿಯ ತಾಕದ ಮೊನೆಗೋಲಿನ ತಪ್ಪೋ?
ಕುಱಿತೆಸೆಯದ ಬೀರಗುವರನ ತಪ್ಪೋ?
ಬಱುಗೆಯ್ಮೆ ಗೆಯ್ವೆನ್ನ ಭಾವದ ತಪ್ಪೋ?
ಅಱಿವುದೋಱಿಸದ ನಿನ್ನಾಟದ ತಪ್ಪೊ?

ಒಡೆಗುಂದುವ ವೀಣೆಯುಲುಹಿನ ತಪ್ಪೋ?
ಬಾಜಿಸುವನ ಕಯ್ಯ ಪವಣಿನ ತಪ್ಪೋ?
ರಾಜ ಶ್ರೀ ಚಿಕದೇವರಾಯನಿಗೊಲಿದ ಶ್ರೀ
ರಾಜಗೋಪಾಲ ನಿರಾಕರಿಸದೆ ಪೇಳು!

ಮಹಾಶಯರೆ, ಈ ಕವನಗಳಲ್ಲಿ ಕಾಣಬರುವ ಭಾಷೆಯ ತಾಲಿತ್ಯ, ವಿಷಯಕ್ಕನುಗುಣವಾದ ಶೈಲಿಯ ಸೌಂದರ್ಯ, ಭಾವರಸಗಳ ವೇಗ, ಲೋಕಾನುಭವದ ಕವಿತೆಯ ಸತ್ಯ ಇವುಗಳನ್ನು ನೋಡಿದರೆ ಇನ್ನು ಕಾವ್ಯ ಕಲೆಯಲ್ಲಿ ಕವಿಯಾದವನು ಮಾಡಬಹುದಾದ ಕೆಲಸವಾದರೂ ಏನು? ಎನ್ನಿಸುತ್ತದೆ.—ದೋಷೈಕ ದೃಷ್ಟಿಯಾದ ನನಗೇ ಎನ್ನಿಸುತ್ತದೆ. ಕನ್ನಡ ಕವಿತ್ವವೆಲ್ಲಾ ಹೀಗೆಯೇ ಇರಬಾರದೆ! ದೋಷಗಳಮೇಲೆ ಎಡವಿ ಎಡವಿ ಬೀಳುವ ನನಗೆ ಯಾವ ಬ್ರಹ್ಮರಾಕ್ಷಸನು "ಸ್ವಲ್ಪಕ್ಕೆ ತೃಪ್ತನಾಗಬೇಡ"—"ಅಸಂತೋಷಃ ಶ್ರಿಯೋಮೂಲಃ" ಎಂದು ಕಿವಿಯಲ್ಲಿ ಊದಿಹೋದನೋ ಕಾಣೆ.

೮. ಅದು ಹೇಗಾದರೂ ಇರಲಿ. ವಿಮರ್ಶೆಯ ಮೂಲಕವಾಗಿ ನಮ್ಮ ಪೂರ್ವಸಾಹಿತ್ಯ ರಾಶಿಯಿಂದ ಉತ್ತಮ ಕಾವ್ಯಗಳನ್ನೂ ಕಾವ್ಯಭಾಗಗಳನ್ನೂ ಶೋಧಿಸಿ ತೆಗೆದು ಕಾವ್ಯಕೋಶಗಳನ್ನು ಸಿದ್ಧಪಡಿಸುವುದೇ ನಮ್ಮ ಪ್ರಥಮ

ಕರ್ತವ್ಯವೆಂದು ನಾನು ತಿಳಿದಿರುತ್ತೇನೆ. ಈ ಉತ್ತಮ ಕಾವ್ಯಕೋಶಗಳಿಂದ ವಿದ್ಯಾರ್ಥಿಗಳ ಮತ್ತು ಲೇಖಕರ ಮನಸ್ಸನ್ನೂ ಕನ್ನಡದ ಪ್ರೇಮವನ್ನೂ ವಿಶಾಲಪಡಿಸಿ, ಮುಂದೆ ಈ ಕಾಲಕ್ಕೆ ತಕ್ಕ ನೂತನ ಸಾಹಿತ್ಯವನ್ನು ನಿರ್ಮಾಣ ಮಾಡತಕ್ಕವು ನಮ್ಮ ಎರಡನೆಯ ಕರ್ತವ್ಯ. ಏಕೆಂದರೆ, ಹಿಂದಿನ ಸಾಹಿತ್ಯವು ಎಷ್ಟೇ ಉತ್ತಮ ಭಾಗಗಳನ್ನು ಒಳಕೊಂಡಿದ್ದರೂ, ನಮ್ಮ ರಕ್ತದಲ್ಲಿ ಕೂಡಿಬಂದು ಎಷ್ಟೇ ನಮ್ಮ ಅಭಿಪ್ರಾಯಗಳಿಗೆ ಒಗ್ಗಿ ಬಂದಿದ್ದರೂ ಅದು ಪುರಾತನ ಪ್ರಪಂಚಕ್ಕೆ ಸೇರಿದ್ದು. ಅಲ್ಲಿ ಹುಟ್ಟಿದ್ದು, ಬೆಳೆದದ್ದು. ನೂತನ ಪ್ರಪಂಚದಲ್ಲಿ ಹುಟ್ಟಿ ಬೆಳೆಯುತ್ತಿರುವ ನಮಗೆ ಬೇಕಾದ ರುಚಿಗಳನ್ನೆಲ್ಲಾ ಸಂಸ್ಕಾರಗಳನ್ನೆಲ್ಲಾ ಅದು ಕೊಡಲಾರದು. ಯಾವ ವೃಕ್ಷದಲ್ಲಿ ಯಾವ ಫಲವನ್ನು ಹುಡುಕುವುದು ? ಈ ನೂತನ ಪ್ರಪಂಚಕ್ಕೆ, ಈ ನೂತನ ಸಮಾಜದ ಅಭಿಲಾಷೆಗಳು, ರುಚಿಗಳು, ಜೀವನ ವ್ಯಾಪಾರಗಳು ಇವುಗಳಿಗೆ, ಅನುಕೂಲಿಸುವಂತಹ ಹೊಸ ಸಾಹಿತ್ಯವನ್ನು ನಿರ್ಮಾಣಮಾಡಿದಲ್ಲದೆ ಕನ್ನಡ ಭಾಷೆಯ ಸೇವೆಗಾಗಲಿ, ಕನ್ನಡದೇಶದ ಏಳಿಗೆಗಾಗಲಿ ನಾವು, ಈ ಪರಿಷತ್ತು, ಸಾಕಾದಷ್ಟು ಶ್ರದ್ಧೆಯನ್ನುವಹಿಸಿ ಋಣವನ್ನು ತೀರಿಸಿದಂತಾಯಿತೆಂದು ನಾನು ಹೇಳಲಾರೆ. ಹಾಗೆ ಮಾಡದಿದ್ದರೆ ಅರ್ಧಕ್ಕೆ ಹೆಚ್ಚಾಗಿಯೇ ನಮ್ಮ ಜವಾಬ್ದಾರಿಯನ್ನು ನಾವು ನಿರ್ವಹಿಸದೆ ಅಸಡ್ಡೆ ಮಾಡಿದಂತಾಗುತ್ತದೆ.

೯. ಈ ಹೊಸ ಸಾಹಿತ್ಯವು, ಹಳೆಯ ಸಾಹಿತ್ಯದ ಸಾರವನ್ನೂ ಸಹಾಯವನ್ನೂ ಸ್ವೀಕಾರಮಾಡಿದರೂ, ಮತಃಪ್ರಸಾರಣೆಗಾಗಲಿ, ಪೂರ್ವ ಕಥಾನುವಾದಕ್ಕಾಗಲಿ ಬರೆಯತಕ್ಕದಲ್ಲ ; ನೂತನ ಜ್ಞಾನಪ್ರಸಾರಣೆಗಾಗಿ, ಪೂರ್ಣ ಕಲಾನುಭವಕ್ಕಾಗಿ, ಉತ್ತಮ ಜೀವನ ಕಾರ್ಯಾರಂಭ ಪ್ರೇರಣೆಗಾಗಿ, ಬರೆಯತಕ್ಕುದು. ಪ್ರಪಂಚದಲ್ಲಿ ತಿಳಿದಿರುವ, ನುಡಿದಿರುವ, ನಡೆದಿರುವ ಉತ್ತಮ ವಿಷಯಗಳೆಲ್ಲವನ್ನೂ ಸಿಂಹಾವಲೋಕನದಿಂದ ತಾನು ಸ್ವಾನುಭವಕ್ಕೆ ತಂದುಕೊಂಡು ಹಾಗೆ ತಿಳಿಯಲಾರದ ಇತರರಿಗೆ ತಿಳಿಸತಕ್ಕುದು. ಇದಕ್ಕೆ ಒಂದು ನಾಡಲ್ಲ, ಒಂದು ಜೀಡಲ್ಲ :—ಇದರ ಮೂಲಮಂತ್ರ— "ಉದಾರಚರಿತಾನಾಂ ತು ವಸುಧೈವ ಕುಟುಂಬಕಂ". ಈ ಹೊಸಮಾರ್ಗದ ಗ್ರಂಥಕರ್ತನು ಸ್ವತಂತ್ರನು ; ಪದ್ಯಕ್ಕಿಂತಲೂ ಹೆಚ್ಚಾಗಿ ಗದ್ಯದಲ್ಲಿ ಕೆಲಸ ಮಾಡುವನು ; ವಿಷಯಕ್ಕೆ ತಕ್ಕ ಶೈಲಿಯನ್ನು ಹೊಂದಿಸಿ ಸರ್ವರೂ ಅರ್ಥ ಮಾಡಿಕೊಳ್ಳುವಂತೆ ಬರೆಯುವನು, ಪ್ರಪಂಚದ ಎಲ್ಲಾ ಸಾಹಿತ್ಯಗಳಿಂದಲೂ

ಮಾದರಿಗಳನ್ನೂ ವಿಷಯಗಳನ್ನೂ ಸ್ವೀಕರಿಸಿ ಯಾವ ಯಾವುದರಿಂದ ಕನ್ನಡಿಗರಿಗೆ ಉಪಯೋಗವುಂಟೆಂದು ತಿಳಿಯುವುದೋ ಅದೆಲ್ಲವನ್ನೂ ಕನ್ನಡಕ್ಕೆ ತಿರುಗಿಸುವನು. ಮತಗಳ ವಾದಪ್ರತಿವಾದಗಳನ್ನು ಬಿಟ್ಟು, ಸರ್ವಸಮಾನವಾದ, ಉದಾರವಾದ ಧರ್ಮಸಾರವನ್ನು ಹರಡುವನು. ಬರಿಯ ಶುಷ್ಕಕಲ್ಪನೆಗಳನ್ನು ಬಿಟ್ಟು, ವಾಸ್ತವಾಂಶಗಳನ್ನೂ, ಜೀವನ ಚರಿತ್ರೆಗಳನ್ನೂ, ಜನಾಂಗಗಳ ಚರಿತ್ರೆಗಳನ್ನೂ, ಮನುಷ್ಯಜಾತಿಯ ಪಾಜ್ಞವಾದ ಅಭ್ಯುದಯವನ್ನೂ ವಿವರಿಸುವನು. ಚಂಪೂ ಮಹಾಕಾವ್ಯಗಳನ್ನು ಹಿಂದಕ್ಕೆ ತಳ್ಳಿ, ಕಾದಂಬರಿಗಳಲ್ಲಿ ಮತ್ತು ಸಣ್ಣ ಕಥೆಗಳಲ್ಲಿ, ತನ್ನ ಕಾಲದ, ಅಥವಾ ಚರಿತ್ರೆ ಸಾಹಿತ್ಯ ಶಾಸನ ಮುಂತಾದ ಆಧಾರಗಳ ಮೇಲೆ ಸಂಗ್ರಹಿಸಿದ ಪೂರ್ವಕಾಲದ, ಜನಜೀವನವನ್ನು ಚಿತ್ರಿಸುವನು. ತನ್ನ ಮತ್ತು ತನ್ನ ಸಮಕಾಲಿಕರ ಮನಸ್ಸಿನ ಘನೋದ್ದೇಶಗಳನ್ನೂ, ಹೃದಯದ ರಸೋದ್ರೇಕಗಳನ್ನೂ ಸಣ್ಣ ಕವನಗಳಲ್ಲಿ ಮತ್ತು ಭಾವಗೀತಗಳಲ್ಲಿ ಮುಂಗಾರು ಮಳೆಯ ಹುಯ್ಯಲಂತೆ ಒಂದು ಕ್ಷಣದಲ್ಲಿ ಸುರಿದುಬಿಡುವನು. ಇವೆಲ್ಲಕ್ಕಿಂತಲೂ ಜನರಿಗೆ ಅತಿಪ್ರಿಯವಾದ, ರಂಗಸ್ಥಳಕ್ಕೆ ಒಪ್ಪುವ, ಮನೋರಂಜಕವಾದ ನಾಟಕಗಳಲ್ಲಿ ಜೀವನದ ಪ್ರತಿಬಿಂಬವನ್ನೂ, ಉದಾತ್ತಚರಿತರಾದ ಮಹಾಪುರುಷರ ಆದರ್ಶವ್ಯಕ್ತಿಗಳನ್ನೂ ಸ್ಫೂರ್ತಿಯಿಂದ ಸೃಷ್ಟಿಸುವನು. ವಿವಿಧ ವಿಷಯಗಳನ್ನು, ಪ್ರಕೃತಿ ಶಾಸ್ತ್ರಗಳ ಸಾರಾಂಶವನ್ನು, ಪ್ರಕೃತಿ ಶಾಸ್ತ್ರಾಭ್ಯಾಸದಿಂದ ಉತ್ಪನ್ನವಾಗುವ ಶಾಸ್ತ್ರೀಯ ಮನೋಭಾವವನ್ನು ಮತ್ತು ತನ್ನ ಇತರ ಸಾಧಾರಣವಾದ ಲೋಕಾನುಭವಗಳನ್ನು ಸ್ವಾರಸ್ಯವಾದ, ಚಿತ್ತಾಕರ್ಷಕವಾದ, ಸಣ್ಣ ಪುಸ್ತಕಗಳಲ್ಲಿಯೂ ಸಣ್ಣ ಪ್ರಸಂಗಗಳಲ್ಲಿಯೂ ತಂದು ತುಂಬುವನು. ಈ ನಮ್ಮ ಹೊಸಲೇಖಕನು ಹಿರಿಯರ ಸೇವೆಯಲ್ಲಿ ಸಣ್ಣ ಮಕ್ಕಳನ್ನು ಮರೆಯುವುದಿಲ್ಲ. "ಮನುಜನಿಗೆ ಮಗು ತಂದೆ" ಎಂಬ ತತ್ವವನ್ನು ಈತನು ಬಲ್ಲನು. ಆದದ್ದರಿಂದ, ಆ ಚಿಕ್ಕಮಕ್ಕಳನ್ನು ತನ್ನ ಕಡೆಗೆ ಒಲಿಸಿಕೊಂಡು, ಅವರಿಗೆ ಬೇಕಾದ, ಪುಟ್ಟದಾದ, ಚಿತ್ರಗಳಿಂದ ಕೂಡಿರುವ, ಮುದ್ದಾದ ಬಾಲಶೈಲಿಯಲ್ಲಿ ಬರೆದಿರುವ ಸಾಹಸ ಕಥೆಗಳು, ಆಶ್ಚರ್ಯ ಕಥೆಗಳು, ದೇಶಸಂಚಾರಗಳು, ಸಮುದ್ರಯಾನಗಳು, ಪ್ರಕೃತಿ ಶಾಸ್ತ್ರದ ಅದ್ಭುತ ನಿರ್ಮಾಣಗಳು, ಭರತಖಂಡದ ಪೂರ್ವಚರಿತ್ರೆಯ ಸಾರಾಂಶ

ಗಳು, ವೀರರ ನೈಜವೃತ್ತಾಂತಗಳು, ಮುಂತಾದುವನ್ನು ಮೊದಲು ಸಿದ್ಧ ಮಾಡುವನು. ಆ ಬಳಿಕ ದೊಡ್ಡವರಿಗೆ ಬೋಧನೆಮಾಡುವುದಕ್ಕೆ ಹೊರಟು, ಕಾಲಗುಣ, ಸಮಾಜದ ನ್ಯೂನತೆಗಳು, ಸಂಸ್ಕರಣದ ಮಾರ್ಗ ಗಳು, ಸಾಧಕಬಾಧಕಗಳು, ಜಾತಿಮತಗಳ, ಪೂರ್ವಪದ್ಧತಿಗಳ ಮತ್ತು ಶಾಸ್ತ್ರವಿಧಿಗಳ ಗುಣದೋಷಗಳು, ಜನಾಂಗಗಳ ಸ್ವಾತಂತ್ರ್ಯ ಸಾಧನೆಯ ತತ್ವಗಳು, ಅದಕ್ಕೆ ಅತ್ಯಾವಶ್ಯಕವಾದ ಸ್ವಾರ್ಥತ್ಯಾಗಬುದ್ಧಿ, ರಾಜ್ಯಭಾರದ ಕ್ರಮಗಳು, ರಾಜಪ್ರಜೆಗಳ ಪರಸ್ಪರಧರ್ಮಗಳು, ಲೋಕದ ಜನಾಂಗಗಳೆಲ್ಲವೂ ಪರಸ್ಪರ ಸೌಹಾರ್ದದಿಂದಲೂ, ಸಹಕಾರ ಬುದ್ಧಿಯಿಂದಲೂ, ಯುದ್ಧದ ಕೆಟ್ಟ ಕನಸು ಬೀಳದ ಅವಿಚ್ಛಿನ್ನಶಾಂತಿಯಿಂದಲೂ, ಭ್ರಾತೃಭಾವದಲ್ಲಿ ವರ್ತಿಸುವಂತೆ ಮಾಡುವುದಕ್ಕೆ ನಡಸಬೇಕಾದ ಪ್ರಯತ್ನಗಳು-ಇವೇ ಮುಂತಾದ ನೂತನ ಪ್ರಪಂಚದ ನೂತನ ಸಮಸ್ಯೆಗಳನ್ನು ವೃತ್ತಾಂತಪತ್ರಿಕೆ ಗಳಲ್ಲಿಯೂ, ಮಾಸಪತ್ರಿಕೆಗಳಲ್ಲಿಯೂ, ಉಪನ್ಯಾಸಗಳಲ್ಲಿಯೂ ಸಣ್ಣ ಪುಸ್ತಕಗಳಲ್ಲಿಯೂ, ಯಾವಾಗಲೂ ಚರ್ಚಿಸುತ್ತಿರುವನು. ಪುರಾತನರ ಜ್ಞಾನಕೋಶವನ್ನು ಮತ್ತೊಮ್ಮೆ ವಿಮರ್ಶಿಸಿ ಜಳ್ಳನ್ನು ತೂರಿ, ಕಾಳನ್ನು ಕಣಜಕ್ಕೆ ತುಂಬಿ, ಉಂಡು, ಮತ್ತೆ ಬಿತ್ತಿ ಹೊಸ ಬೆಳೆಯನ್ನು ನೂರರಷ್ಟು ಹೆಚ್ಚಿಸುವನು. ಈ ಬಗೆಯ ಬರವಣಿಗೆಗಾರನು ನೂತನ ಲೋಕದ ಶಿಶು ; ನೂತನ ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಿತನಾದವನು ; ಇಂಗ್ಲಿಷ್ ಮುಂತಾದ ಪರಭಾಷೆಗಳನ್ನು ಕಲಿಯುವುದು ಒಂದು ಅಶುದ್ಧತೆ ಎಂದು ಬಗೆಯದವನು ; ಅವನ್ನು ಕಲಿತದ್ದರಿಂದ ತನ್ನ ಮಾತೃಭಾಷೆಯನ್ನು ತಿರಸ್ಕರಿಸದವನು ; ತನ್ನ ಜ್ಞಾನವನ್ನು ತಾಯ್ನುಡಿಯ ಮೂಲಕ ತನ್ನ ಜನಕ್ಕೆ ಕೊಡಬಲ್ಲವನು. ತನ್ನ ದೇಶದ, ತನ್ನ ಜನರ ಪೂರ್ವದ ಮಹಿಮೆಗೂ, ಸಂಸ್ಕೃತಿಗೂ, ನ್ಯಾಯ ವಾದ ಭಕ್ತಿಯನ್ನು ಅರ್ಪಿಸಿ, ನೂತನ ಸಂಸ್ಕೃತಿಗೂ, ಮಾಹಾತ್ಮ್ಯಕ್ಕೂ ತಕ್ಕ ಬೆಲೆಯನ್ನು ಕಟ್ಟಬಲ್ಲವನು. ಈತನು ಇಂಗ್ಲಿಷಿನಲ್ಲಿ ಪ್ರವೀಣನಾಗಿರ ಬೇಕೆಂದು ನಾನು ಒತ್ತಿ ಹೇಳುತ್ತಿರುವುದನ್ನು ಒಂದು ತಪ್ಪಾಗಿ ತಾವು ಭಾವಿಸಕೂಡದು. ಇಂಗ್ಲಿಷ್ ಒಂದನ್ನೇ ಅನನ್ಯಭಾವದಿಂದ ಶರಣುಹೋಗ ಬೇಕೆಂದು ನನ್ನ ಭಾವವಲ್ಲ ; ಅದಿಲ್ಲದೆ ಮುಕ್ತಿಯೇ ಇಲ್ಲವೆಂದು ನಾನು ಹೇಳು ತ್ತಿಲ್ಲ. ನಮ್ಮ ದಿವ್ಯ ಸಂಸ್ಕೃತವಿದೆ. ಅದರಿಂದಲೂ ಹೀರಬಹುದಾದ, ತಂದು

ಬೀರಬಹುದಾದ ತಿರುಳು ಅಪಾರವಾಗಿದೆ, ಅನಂತವಾಗಿದೆ. ಆದರೆ ಹಿಂದಿನ ಮಂಜುಗಣ್ಣಿನಿಂದ, ಅಂಧಶ್ರದ್ಧೆಯಿಂದ, ಅಪೂರ್ಣಕಲಾ ಸಂಸ್ಕಾರದಿಂದ ದೊಡ್ಡದು ಮಾಡಿಕೊಂಡು ನಮ್ಮ ಕನ್ನಡವ ಬಯಲಿಗೆ ತಿದ್ದಿಕೊಂಡ ಕಾಲುವೆಗಳನ್ನೇ ಮತ್ತೆ ನಾವು ಈಗ ತಿದ್ದಬೇಕಾಗಿಲ್ಲ. ಎಷ್ಟೋ ಜನ ಘನ ಪಂಡಿತರು ಆ ಕೆಲಸವನ್ನು ಹಿಂದೆ ಮಾಡಿರುವರು; ಈಗಲೂ ಮಾಡುತ್ತಿರುವರು. ಇಂಗ್ಲಿಷ್ ಸಂಸ್ಕಾರದಿಂದ ಅಂಜನ ಹಾಕಿ ತೆರೆತೆಗೆದ ಹೊಸ ಕಣ್ಣಿನಿಂದ, ಹೊಸ ಬೆಲೆಗಳ ತಿಳಿವಳಿಕೆಯಿಂದ, ವಿಮರ್ಶನಮಿಳಿತವಾದ ಶ್ರದ್ಧೆಯಿಂದ, ವೇದಗಳು, ಉಪನಿಷತ್ತುಗಳು, ಇತಿಹಾಸ ಪುರಾಣಗಳು, ದರ್ಶನಗಳು, ಶಾಸ್ತ್ರಗಳು, ಕಲೆಗಳು, ವೈದಿಕ ಬೌದ್ಧ ಜೈನ ವೈಷ್ಣವ ಶೈವ ಧರ್ಮಗಳು—ಇವುಗಳ ಪವಿತ್ರ ಮೂಲಗಳನ್ನು ಪರಿಶೋಧನೆಮಾಡಿ ಹಸಿದು ಕಂಗೆಟ್ಟಿರುವ ನಮ್ಮ ಜನಸಾಮಾನ್ಯಕ್ಕೆ ಶುದ್ಧಾಹಾರವನ್ನು, ದೇಹಪುಷ್ಟಿ, ಆತ್ಮಪುಷ್ಟಿ ಆಗುವ ನಿರ್ಮಲಾಹಾರವನ್ನು ಒದಗಿಸುವುದು ವಿದ್ಯಾವಂತರ ಕರ್ತವ್ಯವಲ್ಲವೆ?—ಪುಷ್ಟಿಗೊಳಿಸುವ ನಿರ್ಮಲಾಹಾರವನ್ನು, ಕಲ್ಲನ್ನಲ್ಲ, ಮರಳನ್ನಲ್ಲ, ಬಾಯಿಯಲ್ಲಿ ಬೂದಿಯಾಗುವ, ಹೊಟ್ಟೆಯಲ್ಲಿ ವಿಷವಾಗುವ ಆಹಾರವನ್ನಲ್ಲ. ಈ ವಿದ್ಯಾವಂತರು ತಾವು ಸಂಸ್ಕೃತದಲ್ಲಿ, ಕನ್ನಡದಲ್ಲಿ, ಪ್ರಾಕೃತದಲ್ಲಿ, ಪಾಳಿಯಲ್ಲಿ, ಇಂಗ್ಲಿಷಿನಲ್ಲಿ, ಗ್ರೀಕಿನಲ್ಲಿ—ಯಾವ ಭಾಷೆಯಲ್ಲಾದರೂ ಸಂಪಾದಿಸಿದ ಜ್ಞಾನವೇನುಂಟೋ, ಶೀಲವೇನುಂಟೋ, ಆನಂದವೇನುಂಟೋ, ಸುಪ್ರೇರಣೆಯೇನುಂಟೋ, ಅದೆಲ್ಲವನ್ನೂ ಅಜ್ಞಾನದಲ್ಲಿ ಮುಳುಗಿ ಜಡರಾಗಿ ಚಲಿಸದಿರುವ ತಮ್ಮ ಅಣ್ಣತಮ್ಮಂದಿರಲ್ಲಿ, ಅಕ್ಕತಂಗಿಯರಲ್ಲಿ, ಹಸುಮಕ್ಕಳಲ್ಲಿ, ಕಡೆಗೆ ಅಜ್ಜ-ಅಜ್ಜಿಯರಲ್ಲಿ—ಅವರೇನು ತೀರ ಕೈಬಿಟ್ಟುಬಿಡಬೇಕಾದವರೆ? ಅವರಿಂದ ನಮಗೆ ಅಡ್ಡಿಯಾಗಲಿ ಬೆಂಬಲವಾಗಲಿ ಬಾರದಿರುವುದೆ?—ಅಜ್ಜ ಅಜ್ಜಿಯರಲ್ಲಿ—"ಸುಲಿದ ಬಾಳೆಯ ಹಣ್ಣಿನಂದದಿ—ಕಳಿದ ಸಿಗುರಿನ ಕಬ್ಬಿನಂದದಿ" ಲಲಿತವಾದ, ಸುಖವಾದ, ಕನ್ನಡದಲ್ಲಿ ಧಾರೆಯೆರೆಯಬೇಕಲ್ಲವೇ? ಮಿತ್ರರಿರಾ, "ಬೆಳೆಯೇನೋ ಬೇಕಾದಷ್ಟಾಗಿದೆ; ಕುಯಲುಗಾರರು ಕಡಿಮೆ". ಬನ್ನಿ, ಜನ್ಮವನ್ನು ತಮ್ಮ ಜನರ ಬೋಧೆಗಾಗಿ ಸಮರ್ಪಣಮಾಡಿದ ಹೊಸ ಬಗೆಯ ದೀಕ್ಷಿತರಾಗಿ. ಪೂರ್ಣವಿದ್ಯರಾಗಿ, ಸ್ವತಂತ್ರಪ್ರಿಯರಾಗಿ. (ಸ್ವತಂತ್ರವೆಂದರೆ ಸ್ವೇಚ್ಛೆಯಲ್ಲ). ಧರ್ಮಕಾಮರಾಗಿ. ಆತ್ಮಸಾಧಕರಾಗಿ. ವ್ಯಕ್ತಿವರ್ಚ

ಸ್ಸುಳ್ಳವರಾಗಿ. ಮಹದ್ದರ್ಶನವುಳ್ಳವರಾಗಿ. ಉದಾರಾನುಭವರಾಗಿ. ಕಲಾಪುತ್ರರಾಗಿ.—ಉದ್ದೇಶ, ವಿಷಯ, ರೀತಿ, ಶೈಲಿ, ಭಾವ, ಛಂದಸ್ಸು.—ಹೊಸದು ಬೇಕಾದರೆ ಹೊಸದು, ಹಳದು ಸಾಕಾದರೆ ಹಳದು,—ನಮ್ಮ ಸಿಂಗರವಾದ, ಮಂಗಳಮಯವಾದ ಕನ್ನಡನಾಡಿನಲ್ಲಿ ಬದುಕಾಗತಕ್ಕುದೇನಿದ್ದರೂ ಎಲ್ಲವನ್ನೂ ಬಳಸಿಕೊಂಡು ಹೊಸಜೀವವನ್ನು ಎಲ್ಲೆಲ್ಲಿಯೂ ತುಂಬಿ ! ಆಗ್ಗೆ, ವಿಶ್ವವಿದ್ಯಾನಿಲಯಗಳೂ, ಪರಿಷತ್ತುಗಳೂ, ಪಂಡಿತವರ್ಯರೂ, ಗ್ರಂಥಕರ್ತರೂ, ದೇಶಬಾಂಧವರೂ ಜನ್ಮವೆತ್ತಿದ್ದಕ್ಕೆ ಸಾರ್ಥಕತೆ ತೋರುವುದು. ಆಗ್ಗೆ ಕನ್ನಡಕ್ಕೆ ಹಿಂದಿನ ಸಾಹಿತ್ಯದ ಸೌಭಾಗ್ಯಕ್ಕಿಂತಲೂ ಮುಂದಿನ ಸಾಹಿತ್ಯವ ಶಕ್ತಿ ಹೆಮ್ಮೆಯ ವಿಷಯವಾಗುವುದು. ಆಗ್ಗೆ ಕನ್ನಡಿಗರು ಇನ್ನೂ ತೇಜಸ್ವಿಗಳಾಗುವರು. ಹಿಂದುಳಿದಿರುವ ಜನಸಾಮಾನ್ಯರ ಮುಸುಕು ಮುಚ್ಚಿರುವ ಜ್ಞಾನವನ್ನೂ ಆತ್ಮಶಕ್ತಿಯನ್ನೂ ಬಿಡುಗಡೆಮಾಡಿದರೆ, ಎಷ್ಟು ಸಾಹಿತ್ಯ ಸಂಪತ್ತು ಹೊರಕ್ಕೆ ಹೊಮ್ಮುವುದೋ ನಾವು ಬಲ್ಲೆವೆ?

೧೦. ಮಹನೀಯರೆ, ನಮ್ಮ ಕನ್ನಡನಾಡು ಚಿಕ್ಕದಿರಬಹುದು ; ನಮ್ಮ ಕನ್ನಡಿಗರು ಸ್ವಲ್ಪ ಜನವಿರಬಹುದು ; ಚರಗವನ್ನು ಚೆಲ್ಲಿದಂತೆ ಚೆದರಿಹೋಗಿರಬಹುದು. ಆದರೆ ಕರ್ಣಾಟಕದ ಪೂರ್ವಚರಿತ್ರೆಯನ್ನೂ, ಪ್ರಕೃತ ಸಾಹಸಗಳನ್ನೂ ನೆನಸಿಕೊಂಡರೆ, ನಮ್ಮ ಪುರೋಭಿವೃದ್ಧಿಯಲ್ಲಿ ಯಾವ ಸಂದೇಹಕ್ಕೂ ಕಾರಣವಿರುವುದಿಲ್ಲ. ಈ ಪುಣ್ಯಕ್ಷೇತ್ರದಲ್ಲಿ ಬೇರೂರಿ, ಆಕಾಶ ಹಬ್ಬಿರುವ ಎಲ್ಲಾ ಪ್ರದೇಶಗಳಿಂದಲೂ ಗಾಳಿಯನ್ನೂ 'ಬೆಳಕನ್ನೂ, ಆಹಾರವನ್ನೂ, ತೇಜಸ್ಸನ್ನೂ ಹೀರಿಕೊಳ್ಳುವ ಉದಾರಹೃದಯವೊಂದನ್ನು ನಾವು ಭದ್ರವಾಗಿ ಕಾಪಾಡಿಕೊಂಡರೆ,-ಅವರನ್ನು ಅನುಕರಿಸುವುದು, ಇವರನ್ನು ಧಿಕ್ಕರಿಸುವುದು, ಒಬ್ಬರ ವೇಷವನ್ನು ತಾಳಿ ಕುಣಿಯುವುದು, ಮತ್ತೊಬ್ಬರ ಮಹಿಮೆಯನ್ನು ಸಹಿಸಲಾರದೆ ಕುಯುಕ್ತಿಗಳನ್ನು ಹೂಡಿ ಆಡಿಕೊಳ್ಳುವುದು—ಈ ಅಸಭ್ಯ ಚೇಷ್ಟೆಗಳನ್ನು, ಮನೋವಿಕಾರಗಳನ್ನು ಬಿಟ್ಟುಬಿಡುವುದಾದರೆ ;—ಸ್ವಪ್ರಕೃತಿ, ಸ್ವಪ್ರತಿಭೆಯನ್ನು ವಿಚಾರಮಾಡಿ ಅರಿತು, ನಮ್ಮ ಆವರಣ, ನಮ್ಮ ಅನುಕೂಲ್ಯವನ್ನು ಮನದಟ್ಟುಮಾಡಿಕೊಂಡು, ನ್ಯೂನತೆಗಳನ್ನು ದೌರ್ಬಲ್ಯಗಳನ್ನು ಪರಿಶೋಧಿಸಿ ತ್ಯಜಿಸಿ, ಸತ್ಯಸಂಧರಾಗಿ, ಋಜುಮಾರ್ಗದಲ್ಲಿ ಕರ್ಮವೀರರಾಗಿ ಮುಂದಕ್ಕೆ ಹೆಜ್ಜೆಯನ್ನಿಡುವ ಪಕ್ಷದಲ್ಲಿ,—ನಮ

ಜನವೂ, ಜನದೊಡನೆ ಸಾಹಿತ್ಯವೂ, ಸಾಹಿತ್ಯದೊಡನೆ ಜನವೂ, ಅಮೂಲ್ಯವಾಗುವುದು, ಅಮೋಘವಾಗುವುದು; ಸತ್ಯ ಪ್ರತಿಷ್ಠಿತವಾಗುವುದು; ಧರ್ಮ ಪ್ರತಿಷ್ಠಿತವಾಗುವುದು. ಆಗ್ಗೆ ಅದರ ಯಶಸ್ಸಿಗೆ ಮಿತಿಯೆಲ್ಲಿ? ಗುಣವಿದ್ದಲ್ಲಿ ಗಾತ್ರವನ್ನು ಯಾರು ನೋಡುವರು? ವೀರ್ಯವಿದ್ದಲ್ಲಿ ವೇಷಭಾಷೆಗಳನ್ನು ಯಾರು ಕೇಳುವರು? ಎತ್ತಕಡೆಯಿಂದ ಶಿಕ್ಷೆಯನ್ನು ಪಡೆದರೂ, ಎತ್ತಕಡೆಯಿಂದ ಬೆಂಬಲವನ್ನು ಬಯಸಿದರೂ, ಜೇನು ಹುಳು ಯಾವ ಹೂವಿನ ಮಕರಂದವನ್ನು ತಂದರೂ ಕೊನೆಗೆ ಎಲ್ಲಾ ತನ್ನ ಜೇನುತುಪ್ಪವನ್ನಾಗಿಯೇ ಹೇಗೆ ಮಾಡಿಕೊಳ್ಳುವುದೋ ಹಾಗೆ ಎಲ್ಲವೂ ಕನ್ನಡವೇ ಆಗಿಹೋದರೆ ಆಗ ಹೊರಗಿನದು ಎಲ್ಲಿ ಬಂತು? ಮೊದಲಿನಿಂದಲೂ ನಮ್ಮ ಕರ್ಣಾಟಕದ ಚರಿತ್ರೆಯೇ ಹೀಗೆಂದು ತೋರುವುದು. ಆರ್ಯಾವರ್ತಕ್ಕೂ, ದಕ್ಷಿಣಾಪಥದ ಸಮುದ್ರದ ಗಡಿಗಳಿಗೂ ಓಡಾಡುವ ರಾಜಮಾರ್ಗವಾಗಿ, ಭಾಷೆ, ಸಂಸ್ಕೃತಿ, ಮತಗಳನ್ನು ತನ್ನಲ್ಲಿ ಯಥೇಷ್ಟವಾಗಿ ಚಲಿಸಿ, ಪಶ್ಚಿಮ ಸಮುದ್ರದ ಎದೆಯಮೇಲೆ ತನ್ನ ಹಡಗುಗಳನ್ನು ತಾಂಡವ ಮಾಡಿಸುತ್ತ, ಪಾರಸಿಕರು ಬ್ಯಾಬಿಲೋನಿಯ ಮತ್ತು ಈಜಿಪ್ಟ್ ದೇಶದ ಜನರು, ಗ್ರೀಕರು, ರೋಮನರು ಮುಂತಾದ ನಾಗರಿಕ ಜನರೊಡನೆ ನಾಗರಿಕತೆಯಿಂದ ವ್ಯವಹರಿಸುತ್ತ; ಐಹಿಕ ವಿಷಯದಲ್ಲಾಗಲಿ, ಪಾರಲೌಕಿಕ ವಿಷಯದಲ್ಲಾಗಲಿ, ಭಾವನಾ ಪ್ರಪಂಚದಲ್ಲಾಗಲಿ ಕಾರ್ಯ ಪ್ರಪಂಚದಲ್ಲಾಗಲಿ ಯಾವುದರಲ್ಲೂ ಅತಿಗೆ ಹೋಗದೆ, ಒಂದೇ ಸಮನಾಗಿ, ಕ್ರಮವಾಗಿ, ಸಮ್ಮಿಳಿತವಾಗಿ ವೃದ್ಧಿ ಹೊಂದುತ್ತ; ಅನೇಕ ಜನಜಾತಿಗಳನ್ನು ತನ್ನ ಸೊಬಗಿನಿಂದ ಸೆಳೆಯುತ್ತ; ಅನೇಕ ರಾಜ ವಂಶಗಳನ್ನು ತನ್ನ ಪರಾಕ್ರಮದಿಂದ ಕೀರ್ತಿವಂತರನ್ನಾಗಿ ಮಾಡುತ್ತ; ಬೌದ್ಧ ಗುರುಗಳು, ಜೈನ ಯತಿಗಳು, ಶ್ರೀ ಶಂಕರಾಚಾರ್ಯರು, ಶ್ರೀ ರಾಮಾನುಜಾಚಾರ್ಯರು, ಶ್ರೀ ಬಸವೇಶ್ವರರು ಇಂತಹ ಪ್ರಧಾನರಾದ ಧರ್ಮ ಸಂಸ್ಥಾಪನಾಚಾರ್ಯರುಗಳಿಗೆ ತನ್ನ ಸಮತಾ ಬುದ್ಧಿಯಿಂದ ಆಶ್ರಯವನ್ನು ನೀಡುತ್ತ; ಶಿಲ್ಪಕಲೆ, ಚಿತ್ರಕಲೆ, ಗಾನಕಲೆ, ಸಾಹಿತ್ಯಕಲೆ ಮುಂತಾದ ಆತ್ಮಸ್ಫುರಣೆಗಳಲ್ಲಿ ಸೌಂದರ್ಯಾನ್ವೇಷಣೆಯನ್ನು ಮಾಡುತ್ತ; ಕಾಲಕ್ಕೆ ತಕ್ಕಂತೆ ಪ್ರಜಾಸಮತೆಯನ್ನು ಪ್ರಜಾಹಿತವನ್ನು ಗುರಿಯಲ್ಲಿಟ್ಟುಕೊಂಡು, ಹೊಸಮತ, ಹೊಸಭಾಷೆ, ಹೊಸಕವನ, ಹೊಸಜೀವ, ಮುಂತಾದ ಹೊಸ

ಆರಂಭಗಳನ್ನು ಉದಾರ ಹೃದಯದಿಂದ ಸ್ವೀಕಾರಮಾಡುತ್ತ; ಒಡೆದು, ಪಾಲಾಗಿ, ಪರಾಕ್ರಾಂತವಾಗಿ, ದುರ್ದಶೆಯಲ್ಲಿರುವಾಗ ಈಗ ಕೂಡ, ಗರ್ವದಿಂದ ಕಾಲೋಚಿತವಾದ ಶ್ರೇಯೋಮಾರ್ಗವನ್ನು ಸೂಚಿಸುವ ನೂತನ ಶಿಕ್ಷಣವನ್ನು ಪಡೆದು, ಸ್ವಲ್ಪ ಕಾಲದಲ್ಲಿಯೇ ನವಚೈತನ್ಯ ಮೂಡಿ, ನಿದ್ರೆಯುಳಿದು, ಮೈಮುರಿದು, ಮಲಗಿದ್ದೆದ್ದ ಸಿಂಹದಂತೆ ಮೇಲಕ್ಕೆ ನೆಗೆದು, ಕೇಸರವನ್ನು ಅಲುಗಿ, ಗರ್ಜಿಸುತ್ತಿರುವ ಈ ಕನ್ನಡನಾಡಿನ ಚರಿತ್ರೆ ಯಾವ ಕನ್ನಡಿಗನಿಗೆ ತಾನೇ ಆತ್ಮಗೌರವವನ್ನೂ, ಆತ್ಮಶ್ರದ್ಧೆಯನ್ನೂ, ಹೊಸ ಹುರುಪನ್ನೂ, ಹೊಸ ಆರಂಬವನ್ನೂ ಹೊಂದಿಸಿಕೊಡಲಾರದು?

೧೧. ಆದುದರಿಂದ, ಕನ್ನಡಿಗರೇ, ಏಳಿ, ಎಚ್ಚರಗೊಳ್ಳಿ, ಆರಂಬ ಮಾಡಿ; ಪೂರ್ವಚರಿತ್ರೆಯ, ವಿಶ್ವವಿದ್ಯಾನಿಲಯದ, ಸಾಹಿತ್ಯ ಪರಿಷತ್ತಿನ, ನೂತನ ಸಾಹಿತ್ಯಕಾರರ, ಉತ್ಸಾಹಪೂರಿತರಾಗಿ ಸೇವಾತುರರಾದ ಯುವಕ ದೇಶವತ್ಸಲರ ಕರ್ಣಾಟಕ ಭಾಷೋಜ್ಜೀವನವನ್ನು ಸದಾಕಾಲದಲ್ಲಿಯೂ ತಮ್ಮ ಘನವಾದ ದಿವ್ಯಚಿತ್ತದಲ್ಲಿ ಪರ್ಯಾಲೋಚಿಸುತ್ತಿರುವ ನಮ್ಮ ಮೈಸೂರು ಶ್ರೀಮನ್ಮಹಾರಾಜರವರ, ಸಾಹಿತ್ಯ ಸಂಸ್ಕೃತಿಗಳ ಕಟ್ಟಿನಿಂದ ಏಕಜನತೆಯನ್ನು ಬಯಸುತ್ತಿರುವ ಸಕಲ ಕರ್ಣಾಟಕರ, ಮಹತ್ಪ್ರೇರಣೆಯಿಂದ, ಮಹತ್ಪ್ರಯತ್ನದಿಂದ ಸಾಧ್ಯವಾಗದ ಕಾರ್ಯ ಯಾವುದು? ಏಳಿ, ಎಚ್ಚರಗೊಳ್ಳಿ, ಆರಂಬಮಾಡಿ. ಹಿಂದೆ ಯೂರೋಪಿನಲ್ಲಿ ರಿನೇಸಾನ್ಸ್ ಎಂಬ ಸಾಹಿತ್ಯದ ಪುನರ್ಜನ್ಮವುಂಟಾದಾಗ, ಒಬ್ಬ ಮಹಾ ಪಂಡಿತನು—"ನಾವು ಸತ್ತವರನ್ನು ಎಬ್ಬಿಸುವುದಕ್ಕೆ ಹೋಗುತ್ತೇವೆ" ಎಂದು ಘೋಷಿಸಿದನು. ನಾವು, ಕನ್ನಡಿಗರು, ಇಂದು, ಸತ್ತವರನ್ನು ಎಬ್ಬಿಸುವುದೇ ಅಲ್ಲ; ಬದುಕಿರುವವರನ್ನೂ ಎಚ್ಚರಗೊಳಿಸುವುದಕ್ಕೆ ಹೊರಟಿರುವೆವು. ಹಿಂದಿನ ಸಾಹಿತ್ಯವನ್ನು ಪ್ರಯೋಜನಕಾರಿಯಾಗಿ ಮಾಡುವುದಕ್ಕೇ ಅಲ್ಲ; ಹೊಸ ಉತ್ತಮ ಸಾಹಿತ್ಯವೊಂದನ್ನು ಸೃಷ್ಟಿಮಾಡುವುದಕ್ಕೆ ಹೊರಟಿರುವೆವು. ಹೊರಟವರು, ವಿಲಾಸವತಿಯ ಕೊರಳಿನ ಪುಷ್ಪಮಾಲಿಕೆಯೇ ಅಲ್ಲ ಸಾಹಿತ್ಯ, ಮಾನವಜೀವನದ ಪುನರ್ನಿರ್ಮಾಣಕಾರ್ಯದಲ್ಲಿ ಬದ್ಧಕಂಕಣನಾಗಿರುವ ವೀರನ ಕೈಯಿನ ಖಡ್ಗವೂ ಅಹುದೆಂದು ತಿಳಿದಿರುವೆವು. "ನಾನು ಬಂದು ಶಾಂತಿಯನ್ನು ತರಲಿಲ್ಲ, ಖಡ್ಗವನ್ನು ತಂದೆನು" ಎಂದು ಕ್ರೂರ ಕಾರುಣ್ಯದಿಂದ

ಸಾರಿದ ಒಬ್ಬ ಮಹಾತ್ಮ ಧರ್ಮಪುತ್ರನ ರಹಸ್ಯವನ್ನು ಹೃದಯಲ್ಲಿಟ್ಟಿರುವೆವು. ಪುರಾತನ ಕರ್ಮವಾಸನೆಯಿಂದ ಆತ್ಮನು ಬದ್ಧನಾಗಿದ್ದರೂ, ಸಂಪೂರ್ಣವಾಗಿ ಬದ್ಧನಲ್ಲ; ಸ್ವತಂತ್ರನು; ಮುಕ್ತಿಗರ್ಹನು; ಹೊಸಕರ್ಮವನ್ನಾರಂಭಿಸಿ ವಿಶ್ವಾತ್ಮಪರಮಾತ್ಮನನ್ನು ತನ್ನಲ್ಲಿ ಅನುಭವಿಸಿ ಸಾಯುಜ್ಯವನ್ನು ಪಡೆಯುವ ಸಹಜವಾದ ಚೈತನ್ಯವುಳ್ಳವನು ಎಂದು ಆರ್ಯರಾದ ನಮ್ಮ ಹಿರಿಯರು ನಮಗೆ ಉಪದೇಶಮಾಡಿದ್ದಾರೆ. ಕನ್ನಡಿಗರಾ, ಏಳಿ, ನಮ್ಮಲ್ಲಿ ಯಾವ ಯಾವ ಭಿನ್ನಾಭಿಪ್ರಾಯಗಳು, ಭಿನ್ನರುಚಿಗಳು ಇದ್ದರೂ, ನಮ್ಮ ನಮ್ಮಲ್ಲಿಯೇ ಅವು ಇರಲಿ. ಹಳೆಯ ಮಾರ್ಗವನ್ನು ಹಿಡಿಯುವವರು, ಹೊಸಮಾರ್ಗವನ್ನು ಹಿಡಿಯುವವರು; ಸಂಸ್ಕೃತಾಭಿಮಾನಿಗಳು, ಆಂಗ್ಲೇಯಾಭಿಮಾನಿಗಳು, ಭಾರತಮಾತೆಯಲ್ಲಿ ವೀರಾವೇಶ ವಾತ್ಸಲ್ಯವುಳ್ಳವರು, ವಿಶ್ವದೃಷ್ಟಿಯ ಸರ್ವಸಮಮೈತ್ರಿಯ ಸಾಧುಸಂತರು—ಯಾರೇ ಆಗಲಿ ಒಬ್ಬರಂತೆ ಒಬ್ಬರಿರುವೆವೆಂಬ ಬೂಟಾಟಿಕೆಯ ನಿರ್ಬಂಧ ಬೇಡ: ಒಬ್ಬರಂತೆ ಒಬ್ಬರಿಲ್ಲವೆಂಬ ಕಿತ್ತಾಟವೂ ಬೇಡ. ನಮಗೆ ಭಗವಂತನು ದಯಪಾಲಿಸಿರುವ ವರಪ್ರಸಾದಗಳನ್ನೂ, ಬಗೆಬಗೆಯಾದ ಶಕ್ತಿರುಚಿಗಳನ್ನೂ, ಕನ್ನಡನಾಡಿಗೆ, ಕನ್ನಡ ನುಡಿಗೆ ಒಮ್ಮನಸ್ಸಿನಿಂದ ಮುಡಿಪು ಕಟ್ಟೋಣ; ಒಮ್ಮೈಯ್ಯಾಗಿ ಅವುಗಳ ಏಳಿಗೆಯಲ್ಲಿ ಏಳಿಗೆಯಾಗೋಣ.

೧೨. ಸಾಹಿತ್ಯ ಕಲಾರಾಧಕರೆ, ಅಗೋ ನೋಡಿ, ಚಲನೆಯಿಲ್ಲದೆ ನಿಂತಿರುವಳು ಕರ್ಣಾಟಕ ಸರಸ್ವತೀದೇವಿ. ತಲೆಯಮೇಲೆ ಭಾರವಾದ ಕಿರೀಟ, ಅಂಗಾಂಗವೆಲ್ಲಾ ತೆರವಿಲ್ಲದೆ ಮುಳುಗಿಹೋಯ್ದಂತೆ ಹೇರಿರುವ ಜವಾಹಿರಿ. ಶಾಸ್ತ್ರನಿಯಮಿತವಾದ ಒಂದು ಬಗೆಯ ನಿಲವಿನ ಭಂಗಿ, ಮುಖದಲ್ಲಿ ಕಲ್ಲಿನಲ್ಲಿ ಕಡೆದ ಏನೋ ಒಂದು ಬಗೆಯಾದ ನಿಂತ ನಿಲವಿನ ನಗೆ, ಹಾಗೇ ನೋಡುವವನ ಕಣ್ಣಿಗೆ ಕಣ್ಣುನೆಟ್ಟು ಮುರುಗುಟ್ಟಿಕೊಂಡು ನೋಡುತ್ತಿದೆ.—ಇಲ್ಲ, ಒಮ್ಮೊಮ್ಮೆ ಆಡುವಂತೆಯೂ ಕಾಣುತ್ತದೆ. ಮೈಯೆಲ್ಲಾ ಮುಸುಕಿನ ದಪ್ಪವಾದ ಹಳೆಯ ಜರತಾರಿಯ ವಸ್ತ್ರ: ಉಸಿರುಬಿಗಿದು ಎದೆ ಹೊಯ್ಯಲಾರಳು:—ಎದೆ ಮಿಡಿಯುತ್ತಿದೆಯೋ? ಬರಿಯ ನಮ್ಮೆದೆಯ ಪದರಾಟವೇಯೋ? ಎಚ್ಚತ್ತಿರುವಳೋ, ನಿದ್ದೆ ಹೋಗುತ್ತಿರುವಳೋ? ಬನ್ನಿ, ಆಕೆಯನ್ನು ಎಚ್ಚರಿಸೋಣ. ಕಿರೀಟವ, ಜವಾಹಿರಿಯ, ಶಿಲ್ಪನಿಯ

ಮದ, ಜರತಾರಿಯ, ಭಾರವನ್ನೂ ಬಿಗುವನ್ನೂ ಬಿಡಿಸೋಣ: ವಿಶ್ವ ವಾಣಿಯ, ದಿವ್ಯವಾಣಿಯ, ಸಂಜೀವನ ಮಣಿಯ ಸ್ಪರ್ಶದಿಂದ ಶಾಪಗ್ರಸ್ತಳಾದ ಶಿಲಾಮೂರ್ತಿಯನ್ನು ಜೀವವುಳ್ಳ ಚೆಲುವೆಯನ್ನಾಗಿ ಮಾಡೋಣ ಆ ಉನ್ನತ ಪೀಠದಿಂದ ಆಗ ಆಕೆ ಇಳಿಯುವಳು, ನಾಡಿನಲ್ಲೆಲ್ಲಾ ಸುಳಿಯುವಳು. ಸ್ವಾತಂತ್ರ್ಯದಿಂದ ಸಹಜವಾಗಿ ಆಕೆಯ ಹೃದಯ ಆಡುವುದು. ಕಣ್ಣು ಒಲಿದ ಹೆಣ್ಣಿನ ಕಣ್ಣ ಬಿನ್ನಾಣವನ್ನೆಲ್ಲಾ ಬೆಳಗಿ ಬೀರುವುದು. ಗಾಳಿಗೆ ಕೆದರಿದ ಕೂದಲು ಕನ್ನಡನಾಡಿನ ಬಯಲುಗಳ ಮೊಲ್ಲೆ ಮಲ್ಲಿಗೆಗಳನ್ನು ಧರಿಸಿ ಕಂಪುಸೂಸುವುದು. ನಗುನಗುತ ಆಕೆ ನಮ್ಮೊಡನಾಡಿಯಾಗಿ, ಮನುಷ್ಯರೊಡನೆ ಮನುಷ್ಯಳಾಗಿ, ದಿವ್ಯಾತ್ಮರೊಡನೆ ದೇವಿಯಾಗಿ, ತಾನೂ ನಲಿದು, ನಮ್ಮನ್ನೂ ನಲಿಸುವಳು. ಆಗ್ಗೆ ಆಕೆಯೂ ಧನ್ಯಳು—ನಾವೂ ಧನ್ಯರು: ತಾಯಿ ಧನ್ಯಳಾದರೆ, ಮಕ್ಕಳೂ ಧನ್ಯರಲ್ಲವೆ?

ದಿವ್ಯ ಮಂತ್ರ*

ಕರ್ಣಾಟಕಭಕ್ತ ಮಹಾಶಯರೆ,

ಹದಿನಾರನೆಯ ಕರ್ಣಾಟಕ ಸಾಹಿತ್ಯಸಮ್ಮೇಳನವು ತಮ್ಮ ಆತಿಥ್ಯದಲ್ಲಿ ನಡೆಯಬೇಕೆಂದು ಆಹ್ವಾನವಿತ್ತ ಮೈಸೂರು ವಿಶ್ವವಿದ್ಯಾನಿಲಯದ ಸಲುವಾಗಿಯೂ, ಆ ವಿದ್ಯಾಪೀಠದ ಪ್ರತಿನಿಧಿಗಳೂ ರಾಜಧಾನಿಯ ಮಹಾಜನರ ಪ್ರತಿನಿಧಿಗಳೂ ವಿಶ್ವಾಸದಿಂದ ಕಲೆತು ಸಹಕರಿಸಿರುವ ಸ್ವಾಗತ ಮಂಡಲಿಯ ಸಲುವಾಗಿಯೂ, ಕರ್ಣಾಟಕದ ಸಮಸ್ತ ಪ್ರಾಂತಗಳಿಂದಲೂ, ಈ ಮಹೋತ್ಸವಕ್ಕೆ ದಯೆಮಾಡಿಸಿರುವ ಮಹನೀಯರಾದ ತಮ್ಮೆಲ್ಲರಿಗೂ ಸುಖಾಗಮನವನ್ನು ಬಯಸುವ ಪುಣ್ಯ ನನಗೆ ಲಭಿಸಿದ್ದಕ್ಕಾಗಿ ನಾನು ಧನ್ಯನು. ಎಷ್ಟು ಶ್ರದ್ಧೆಯಿಂದ ನಾವು ಸೇವೆಮಾಡಿದರೂ, ಅದರಲ್ಲಿ ಇರಬಹುದಾದ ನ್ಯೂನತೆಗಳನ್ನು ಉದಾರಚಿತ್ತರಾದ ತಾವು ಮನಸ್ಸಿಗೆ ತಂದುಕೊಳ್ಳದೆ, ಅಮೋಘವಾದ ತಮ್ಮ ದೇಶಭಕ್ತಿಯನ್ನೂ ಭಾಷಾಭಿಮಾನವನ್ನೂ ಮುಂದಿಟ್ಟುಕೊಂಡು ಸುಪ್ರೀತರಾಗುತ್ತೀರೆಂದು ದೃಢವಾಗಿ ನಂಬಿ

* ಮೈಸೂರಿನಲ್ಲಿ ಸೇರಿದ ಕರ್ಣಾಟಕ ಸಾಹಿತ್ಯ ಪರಿಷತ್ತಿನ ೧೬ನೆಯ ಸಮ್ಮೇಳನದಲ್ಲಿ ಮಾಡಿದ ಸ್ವಾಗತಭಾಷಣ (೫-೧೦-೧೯೩೦).

ದ್ದೇನೆ. ತಾವು ನಮ್ಮ ಊರಿಗೆ ದಯೆಮಾಡಿಸಿರುವ ಕಾಲ ನಮ್ಮೆಲ್ಲರ ದೊಡ್ಡ ಉತ್ಸವಕಾಲ, ನಮ್ಮ ಕನ್ನಡ ನಾಡಿನ ಮುಖ್ಯವಾದ ಹಬ್ಬ, ನವ ರಾತ್ರಿ. ಸರ್ವಕಾಲದಲ್ಲಿಯೂ ಚೇತೋಹಾರಿಯಾದ ನಮ್ಮ ನಗರಲಕ್ಷ್ಮಿ ಈಗಲಂತೂ ಹಬ್ಬದ ಉಡಿಗೆ ತೊಡಿಗೆಗಳಿಂದ ಅಲಂಕೃತಳಾಗಿ, ಹಸನ್ಮುಖಿ ಯಾಗಿ, ಪ್ರಸನ್ನ ಹೃದಯಳಾಗಿ, ಉಜ್ವಲ ಕಾಂತಿಯಿಂದ ಬೆಳಗುತ್ತಿರುವಳು. ಯಾರ ಕೃಪಾಕಟಾಕ್ಷದಿಂದ ನಮ್ಮ ನಗರಿ ಸಾಧಾರಣ ವೈಭವದಿಂದ ಮಹ ದೈಶ್ವರ್ಯಕ್ಕೆ ಏರಿದಳೋ, ಯಾರ ಪೂರ್ಣಕಲಾ ಪ್ರತಿಭೆಯಿಂದ ಆಕೆ ಭವನ ಗಳ ನಗರಿ, ಉದ್ಯಾನಗಳ ನಗರಿ, ಜ್ಯೋತಿರ್ಮಯಿ, ಶಾಂತಿಯ ನೆಲೆಬೀಡು ಎಂಬುದಾಗಿ ಪ್ರಖ್ಯಾತಳಾಗಿರುವಳೋ, ಆ ನಮ್ಮ ಸರ್ವ ಕರ್ಣಾಟಕ ಪ್ರಿಯ ರಾದ ಸರ್ವ ಕರ್ಣಾಟಕ ಪೂಜ್ಯರಾದ, ದಯಾಶೀಲರು, ಆದರ್ಶರಾಜರು, ಪುರಾತನ ನೂತನ ಸಂಸ್ಕೃತಿಸಮನ್ವಯಾಚಾರ್ಯರು, ಕರ್ಮಸಂನ್ಯಾಸಿಗಳು, ರಾಜರ್ಷಿಗಳು ಎಂಬುದಾಗಿ ಸರ್ವತ್ರ ಪ್ರಶಸ್ತರಾದ ನಮ್ಮ ಶ್ರೀಮನ್ಮಹಾ ರಾಜರವರ ಘನ ಸನ್ನಿಧಾನದಲ್ಲಿ ತಾವೆಲ್ಲರೂ ಆನಂದಪೂರಿತವಾದ ಹೃದಯ ವುಳ್ಳವರಾಗಿದ್ದೀರೆಂದೂ, ಉದ್ದೀಪಿತವಾದ ದೇಶಭಾಷಾ ವಾತ್ಸಲ್ಯಗಳುಳ್ಳವ ರಾಗಿದ್ದೀರೆಂದೂ, ಭಾರತಭೂಮಿಯಲ್ಲಿ ಈಗ ಜ್ವಲಿಸುತ್ತಿರುವ ನೂತನ ಜೀವಕಳೆಯನ್ನೂ, ನೂತನ ಧ್ಯೇಯಕಾರ್ಯಶಕ್ತಿಗಳನ್ನೂ ಗಾಂಭೀರ್ಯದೊಡನೆ ಕೂಡಿದ ಒಂದು ಸಂಯಮಶಕ್ತಿಯೊಡನೆ ಸಂಪೂರ್ಣವಾಗಿ ಇಲ್ಲಿಯೂ ಅನು ಭವಿಸಿ, ತಾವೂ ನಾವೂ ಎಲ್ಲರೂ ಒಂದೇ ಎಂಬ ಉದಾರಭಾವನೆಯಿಂದ ಕೂಡಿದವರಾಗಿರುತ್ತೀರೆಂದೂ ನಾನು ನಿಸ್ಸಂದೇಹವಾಗಿ ಹೇಳಬಲ್ಲೆನು.

ಈ ಹೊಸ ಜೀವದ ಮತ್ತು ಹೊಸ ಧ್ಯೇಯದ ಸುಪ್ರೇರಣೆ ಸಾಹಿತ್ಯದಲ್ಲಿಯೂ ತನ್ನ ಪ್ರಭಾವವನ್ನು ತೋರಿಸುವುದು ಸಹಜವೇ ಆಗಿದೆ. ಪುನರುಜ್ಜೀವನವೆಂದು ಕೆಲವರು, ಸುಧಾರಣೆ ಎಂದು ಕೆಲ ವರು, ವಿಪ್ಲವ ಎಂದು ಕೆಲವರು ಈ ಮಾರ್ಪಾಟನ್ನು ಕರೆಯಬಹುದು. ಹೇಗೆ ಕರೆದರೂ ಒಂದು ಜನಪದವೂ, ಒಂದು ಸಾಹಿತ್ಯವೂ ನವ ಯುಗಕ್ಕೆ ಪ್ರವೇಶಮಾಡುವಾಗ ಹಿಂದಿನದರಲ್ಲಿ ಜೀವದಾಯಕವಾದ ಸಾರವನ್ನು ಉಳಿಸಿಕೊಳ್ಳುವುದೂ, ಮಲಿನವಾಗಿ ಜಾಡ್ಯ ಮುಸುಕಿರುವ ಬುದ್ಧಿಯನ್ನು ತಿದ್ದಿ ಹೊಸ ಮಾರ್ಗಕ್ಕೆ ಎಳೆದುಕೊಳ್ಳುವುದೂ, ಕೊಳೆತು

ಕೆಟ್ಟು ಬದುಕಾಗದ, ಕೆಲಸಕ್ಕೆ ಅಡ್ಡಿಯಾಗಿ ಬರುವ ಭಾವಗಳನ್ನು ಕೊಯ್ದು ಹಾಕಿ, ನಿರ್ಮೂಲಮಾಡಿ, ಹೊಸ ನಡತೆಗಳನ್ನು ನೆಡುವುದಕ್ಕೆ ಅವಕಾಶಮಾಡಿಕೊಳ್ಳುವುದೂ ಆವಶ್ಯಕವಾದ ಕ್ರಿಯೆಗಳಾಗಿವೆ. ಕರ್ಣಾಟಕ ದೇಶದಲ್ಲಿ ಈ ನವಚೈತನ್ಯ ಬೇರೂರಿ ಜಾಗ್ರತೆಯಾಗಿ ಬೆಳೆದು ಕಾರ್ಯಕ್ಷೇತ್ರದಲ್ಲಿ ವ್ಯಾಪಿಸಿಕೊಳ್ಳುತ್ತಿದೆ; ಮತ್ತು ಚರಿತ್ರೆ ಕಾರಣವಾಗಿ, ಹೆಚ್ಚು ಸಂಪರ್ಕಕ್ಕೆ ಅವಕಾಶವಿಲ್ಲದಿರುವ ಕರ್ಣಾಟಕ ದೇಶದ ಬೇರೆಬೇರೆ ಪ್ರಾಂತಗಳು ಬೇರೆ ಬೇರೆ ರೀತಿಗಳಲ್ಲಿ ಬೇರೆ ಬೇರೆ ಶಕ್ತಿಗಳೊಡನೆ ಕೆಲಸ ಮಾಡುತ್ತಿದ್ದರೂ, ಎಲ್ಲರ ಧ್ಯೇಯವೂ, ಆಸೆಯೂ, ಗುರಿಯೂ ಒಂದೇ ಆಗಿರುತ್ತದೆ:—ಕನ್ನಡ ಸಾಹಿತ್ಯ ಶ್ರೇಷ್ಠವಾಗಬೇಕೆನ್ನುವುದು; ಕನ್ನಡಿಗರು ಗಣ್ಯತೆಯಲ್ಲಿ ಯಾರಿಗೂ ಹಿಂದಾಗಬಾರದೆನ್ನುವುದು. ಈ ನಾನಾ ಪ್ರಾಂತಗಳನ್ನೂ, ರೀತಿಗಳನ್ನೂ, ಶಕ್ತಿಗಳನ್ನೂ, ಒಂದುಗೂಡಿಸಿ ಸರ್ವ ಕರ್ಣಾಟಕವೂ ಈ ಮಹತ್ಕಾರ್ಯದಲ್ಲಿ ಹೆಮ್ಮೆಯಿಂದಲೂ, ಅಕ್ಕರೆಯಿಂದಲೂ ಭಾಗಿಗಳಾಗಲು ಸಾಧ್ಯವಾದಮಟ್ಟಿಗೂ ಅವಕಾಶವನ್ನು ಕಲ್ಪಿಸಿ ಕೊಡುವುದೇ ನಮ್ಮ ಸಮ್ಮೇಳನದ ಉದ್ದೇಶ. ಈ ಸಮ್ಮೇಳನವು ನಮ್ಮ ಏಕಭಾವದ ಚಿಹ್ನೆ, ಚಿನ್ನದ ಕಟ್ಟು.

ಈ ಸಮ್ಮೇಳನಗಳಿಗೆ ಮೂಲಾಧಾರವಾದ ಕರ್ಣಾಟಕ ಸಾಹಿತ್ಯ ಪರಿಷತ್ತಿನ ನಿರ್ಮಾಪಕರು ಶ್ರೀಮನ್ಮಹಾರಾಜರವರ ಘನ ಸರ್ಕಾರದವರು. ಮೊದಲು, ಸಹಜವಾಗಿ ಈ ಸಮ್ಮೇಳನವು ಮೈಸೂರು, ಬೆಂಗಳೂರು ರಾಜಧಾನಿಗಳಲ್ಲಿ ಸಭೆಮಾಡಿ, ಬಳಿಕ ತನ್ನ ಬೆಳಕನ್ನು ಕನ್ನಡನಾಡಿನಲ್ಲೆಲ್ಲಾ ಬೀರುವುದಕ್ಕೆ ಹೊರಟು, ಪ್ರಧಾನ ನಗರಗಳಾದ ಧಾರವಾಡ, ಬೆಳಗಾಂವಿ, ಬಿಜಾಪುರ, ಬಳ್ಳಾರಿ, ಕಲ್ಬುರ್ಗಿ, ಮಂಗಳೂರು ಮುಂತಾದ ಮಧ್ಯರಾಷ್ಟ್ರದ ಮತ್ತು ಗಡಿಪ್ರಾಂತಗಳ ತೇಜಸ್ಸನ್ನೂ ಸ್ವೀಕರಿಸಿ ಕಳೆತುಂಬುತ್ತಾ, ಮತ್ತೆ ಕರ್ಣಾಟಕದ ಕೇಂದ್ರಸ್ಥಾನವಾದ ಮೈಸೂರು ನಗರಿಗೆ ವಿಶ್ವವಿದ್ಯಾನಿಲಯದ ಅಧಿಕಾರಿಗಳ ಅಭಿಮಾನದಿಂದ ಈ ಸಲ ಬಂದು ಸೇರಿರುವುದು. ಈ ಹದಿನಾರು ವರ್ಷಗಳ ಸಾಧನೆಯನ್ನು ಸಂಕ್ಷೇಪವಾಗಿ ಇಲ್ಲಿ ಪ್ರಸ್ತಾವಿಸಿದರೆ ಅಪ್ರಕೃತವಾಗಲಾರದೆಂದು ಎಣಿಸುತ್ತೇನೆ. ಇದಕ್ಕೆ ಹಿಂದಿನ ಕಾಲದ ಸಾಹಿತ್ಯದ ಚರಿತ್ರೆಯನ್ನೂ ಸ್ವಲ್ಪಮಟ್ಟಿಗೆ ಗಮನಿಸುವುದು ಆವಶ್ಯಕವಾಗಿರುವುದು.

ಸಾಹಿತ್ಯವು ರಾಜಾಶ್ರಯವನ್ನು ಪೂರ್ವದಿಂದಲೂ ಅನುಸರಿಸಿರುವುದು ಎಲ್ಲರೂ ಬಲ್ಲ ವಿಷಯ. ಎಲ್ಲಿ ಪ್ರಬಲವಾದ ರಾಜಾಸ್ಥಾನವೋ ಅಲ್ಲಿ ಪ್ರೌಢಸಾಹಿತ್ಯ. ಸಾರ್ವಭೌಮರು, ಮಹಾಮಂಡಲೇಶ್ವರರು, ಪ್ರಧಾನರು, ದಂಡನಾಯಕರು, ಮುಖ್ಯಮಠಾಧಿಪತಿಗಳು, ಯೋಗಿಗಳು ನೆಲಸಿರುವ ಸ್ಥಳಗಳಲ್ಲಿ ದೇಶದ ಹಿತಚಿಂತಕರಾದ ಪಂಡಿತರೂ, ಕವಿಗಳೂ, ಬಂದು ನೆಗೆಯುವರು. ಸಾಮ್ರಾಜ್ಯಲಕ್ಷ್ಮಿ ಒಂದು ಕಡೆ ಬಹಕಾಲ ನೆಲಸಿರುವಳಲ್ಲವಾದುದರಿಂದ ರಾಷ್ಟ್ರಕೂಟರ ಮತ್ತು ಚಾಳುಕ್ಯರ ಆಧಿಪತ್ಯದಲ್ಲಿ ಉತ್ತರ ಕರ್ಣಾಟಕವೇ ಕನ್ನಡ ಸಾಹಿತ್ಯಕ್ಕೆ ಅಸ್ತಿಭಾರವನ್ನು ಹಾಕುವ ಪುಣ್ಯವನ್ನು ಕಡೆಯಿತು. ಗಂಗರು ಉನ್ನತ ಸ್ಥಿತಿಗೆ ಬಂದಮೇಲೆ ಜೈನರ ಪವಿತ್ರ ಕ್ಷೇತ್ರವಾದ ಶ್ರವಣಬೆಳ್ಗೊಳದ ಅಭ್ಯುದಯದ ದಿವಸಗಳಲ್ಲಿ ದಕ್ಷಿಣ ಕರ್ಣಾಟಕಕ್ಕೂ ಸಾಹಿತ್ಯ ಸೇವೆಯನ್ನು ಮಾಡುವ ಅದೃಷ್ಟ ಒದಗಿತು. ಕಾಲಪರಿವರ್ತನೆಯಿಂದ ಕಳಚೂರ್ಯರು ಉತ್ತರದಲ್ಲಿ, ಹೊಯ್ಸಳರು ದಕ್ಷಿಣದಲ್ಲಿ, ವಿಜಯನಗರದರಸರು ಉತ್ತರದಲ್ಲಿ, ಮೈಸೂರು ಮಹಾರಾಜರು ದಕ್ಷಿಣದಲ್ಲಿ ಪ್ರವೃದ್ಧಿಗೆ ಬಂದ ಬಂದ ಹಾಗೆಲ್ಲಾ ಒಮ್ಮೆ ಇತ್ತಕಡೆ, ಒಮ್ಮೆ ಅತ್ತಕಡೆ ಸಾಹಿತ್ಯದ ತೊಲೆ ತೂಗುತ್ತಿತ್ತು. ಒಟ್ಟಿನಮೇಲೆ ೧೦ನೆಯ ಶತಮಾನದಿಂದ ೧೭ನೆಯ ಶತಮಾನದ ವರೆಗೂ ಸಾಹಿತ್ಯಕ್ಕೆ ಹೆಚ್ಚು ಸೇವೆ ಉತ್ತರ ಕರ್ಣಾಟಕದಿಂದಲೇ ನಡೆಯಿತು; ನಾಗಚಂದ್ರ, ಲಕ್ಷ್ಮೀಶ ಮುಂತಾದ ಚರ್ಚಾಸ್ಪದರಾಗಿರುವ ಕೆಲವು ಕವಿಗಳನ್ನು ಬಿಟ್ಟರೆ ಪಂಪ, ಪೊನ್ನ, ರನ್ನ, ಮಧುರ, ರತ್ನಾಕರ, ಬಸವೇಶ್ವರ, ಹರೀಶ್ವರ, ರಾಘವಾಂಕ, ಚಾಮರಸ, ಭೀಮ, ವಿರೂಪಾಕ್ಷ, ಕುಮಾರವ್ಯಾಸ, ಕುಮಾರ ವಾಲ್ಮೀಕಿ, ನಿತ್ಯಾತ್ಮ ಶುಕ ಮುಂತಾದ ಉದ್ದಾಮ ಕವಿಗಳು ಉತ್ತರ ಕರ್ಣಾಟಕದವರು; ಚಾವುಂಡರಾಯ, ನಾಗವರ್ಮ, ನೇಮಿಚಂದ್ರ, ಜನ್ನ, ಮಲ್ಲಣಾರ್ಯ, ಷಡಕ್ಷರಿ, ರುದ್ರಭಟ್ಟ ಮುಂತಾದವರು ದಕ್ಷಿಣಕರ್ಣಾಟಕದವರು. ಸ್ಥಳದೃಷ್ಟಿಯಿಂದ ಮಾತ್ರ ಈ ವಿಭಾಗವನ್ನು ನಾನು ಹೇಳುತ್ತಿರುವುದು, ಕರ್ಣಾಟಕ ಸೇವಾದೃಷ್ಟಿಯಿಂದಲ್ಲ.

೧೭ನೆಯ ಶತಮಾನದಿಂದೀಚೆಗೆ ವಿಜಯನಗರದ ಸಿಂಹಾಸನವು ಮೈಸೂರು ಮಹಾರಾಜರುಗಳ ವಶವಾದದ್ದು ದಕ್ಷಿಣ ಕರ್ಣಾಟಕಕ್ಕೆ ಸಾಹಿತ್ಯ ಕೃಷಿಗೆ ಹೆಚ್ಚು ಅನುಕೂಲ್ಯ ದೊರಕಿತು. ಈ ಕಾರ್ಯಸಮಾರಂಭದಲ್ಲಿ,

ಮೂವರು ಪ್ರಸಿದ್ಧರಾದ ರಾಜರ ಹೆಸರನ್ನು ಹಿಡಿದು, ಮೂರು ಘಟ್ಟಗಳನ್ನು ವಿಂಗಡಿಸಬಹುದು. ಮೊದಲು, ಚಿಕ್ಕದೇವರಾಜ ಒಡೆಯರ ಕಾಲ ಶ್ರೀರಂಗ ಪಟ್ಟಣದಲ್ಲಿ, ಶ್ರೀ ರಂಗನಾಥಸ್ವಾಮಿಯವರ ಸಾನ್ನಿಧ್ಯದಲ್ಲಿ. ಶ್ರೀರಂಗಪಟ್ಟ ಣದ ಕಾವೇರಿಯ ನೀರನ್ನು ಕುಡಿದು ಬೆಳೆದವನಾದ ನಾನು ಈ ಅಂಶವನ್ನು ಸ್ವಲ್ಪ ಉತ್ಸಾಹಪೂರ್ವಕವಾಗಿ ಬಿನ್ನೈಸಿದರೆ ತಾವು ಮನ್ನಿಸುವವರೇ ಆಗಿ ದ್ದೀರಿ. ಚಿಕ್ಕದೇವರಾಜರ ಪ್ರೇರಣೆಯಿಂದ ಅವರ ಅಚ್ಚುಮೆಚ್ಚಿನ ಗೆಳೆಯರಾದ ತಿರುಮಲಾರ್ಯರ ಸಹಾಯದಿಂದ, ಕನ್ನಡ ಸಾಹಿತ್ಯಕ್ಕೆ ಪ್ರಬಲ ವಾದ ಪ್ರೋತ್ಸಾಹ ಸಿಕ್ಕಿತು; ಹಳಗನ್ನಡ ಗ್ರಂಥಗಳನ್ನು ಸಂಗ್ರಹಿಸಿ ಪ್ರತಿ ಗಳನ್ನು ಮಾಡಿಸಿದರು. ಹಳಗನ್ನಡದಲ್ಲಿ ಕಾವ್ಯಗಳನ್ನು ಬರೆಯಿಸಿದರು ; ತಾವೇ ಬರೆದರು ; ಸನಾತನ ಧರ್ಮದ ತಿರುಳನ್ನೂ, ಶ್ರೀ ವೈಷ್ಣವ ಮತದ ಸಾರ ವನ್ನೂ, ಆಳ್ವಾರ್ ಅವರ ದಿವ್ಯ ಚರಿತ್ರೆಗಳನ್ನೂ ಜನರಿಗೆ ಕನ್ನಡದಲ್ಲಿ ತಿಳಿಸಿ ದರು. ನಾಟಕ—ಹಿಂದಿನ ಸಾಹಿತ್ಯದಲ್ಲಿ ನಮಗೆ ಇದುವರೆಗೆ ದೊರೆತಿರುವ ನಾಟಕ ತಿರುಮಲಾರ್ಯರ ತಮ್ಮ ಸಿಂಗರಾರ್ಯನ 'ಮಿತ್ರವಿಂದಾ ಗೋವಿಂದ' ಎಂಬುದೊಂದೇ—ನಾಟಕವನ್ನು ಮಾಡಿಸಿದರು ; ಚರಿತ್ರೆಯನ್ನು ಶಿಲಾಲೇಖ ಗಳ, ವಂಶಾವಳಿಗಳ ಆಧಾರದ ಮೇಲೆ ಕೂಡಿಸಿದರು ; ಪುರಾಣೇತಿಹಾಸ ಭಗವ ದ್ಗೀತಾದಿಗಳನ್ನು ಕನ್ನಡಗದ್ಯದಲ್ಲಿ ಹೇಳಿದರು. ಎಲ್ಲಾ ಮತದ ಕವಿಗಳಿಗೂ ಆಶ್ರಯವನ್ನಿತ್ತರು. ರಾಣಿವಾಸದ ಊಳಿಗದವಳಾದ ಸಂಚಿಯ ಹೊನ್ನಮ್ಮ ನಿಂದ ಹದಿಬದೆಯ ಧರ್ಮವೆಂಬ ಸಾಂಗತ್ಯವನ್ನು ಹಾಡಿಸಿ ಪೂರ್ವದಲ್ಲಿ ಸ್ತ್ರೀ ಯರೂ ಸಾಹಿತ್ಯಸಾಧಕರಾಗಿದ್ದದ್ದನ್ನು ಸ್ಥಿರೀಕರಿಸಿದರು. ಎರಡನೆಯ ಘಟ್ಟ ವಾಗಿ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲವನ್ನು ಹೇಳಬಹುದು. ಈ ರಾಜರ ಪ್ರೋತ್ಸಾಹದಲ್ಲಿ ಆರ್ಯರ ಅಪಾರವಾದ ಸಂಸ್ಕೃತ ಸಾಹಿತ್ಯ ಸಮು ದ್ರದ ಶಿರೋರತ್ನಗಳಾದ ಭಾರತ, ರಾಮಾಯಣ ಪುರಾಣ ಕಾವ್ಯಗಳನ್ನು ಆಯ್ದು ಕನ್ನಡ ವಚನದಲ್ಲಿ ಕನ್ನಡಿಗರಿಗೆ ಹೃದ್ಗತವಾಗುವಂತೆ ಮಾಡಿದರು. ಚಾಮರಾಜ ಒಡೆಯರ ಕಾಲದಲ್ಲಿ ಈ ಸಂಸ್ಕೃತ ಸಾಹಿತ್ಯದ ಸಂಪಾದನೆಯ ಜೊತೆಗೆ ಮಧ್ಯೆ ಒದಗಿದ ಇಂಗ್ಲಿಷ್ ವಿದ್ಯಾಭ್ಯಾಸ ಸಾಹಿತ್ಯ ಸಂಸ್ಕೃತಿಗಳ ಪ್ರಾಬಲ್ಯದಿಂದ ಹೊಸ ಅಭಿರುಚಿಗಳೂ, ದೃಷ್ಟಿಗಳೂ ಉಂಟಾಗಿ, ಧಾರ್ಮಿಕ ಸಾಹಿತ್ಯದ ಪಕ್ಕದಲ್ಲಿ ಲೌಕಿಕ ಸಾಹಿತ್ಯವೂ ವೃದ್ಧಿಯಾಗುತ್ತ ಬಂತು. ಕಾಳಿ

ದಾಸ ಮುಂತಾದ ಸಂಸ್ಕೃತ ಮಹಾಕವಿಗಳ ನಾಟಕಗಳೂ, ಷೇಕ್ಸ್‌ಪಿಯರ್ ಮುಂತಾದ ಇಂಗ್ಲಿಷ್ ಮಹಾಕವಿಗಳ ನಾಟಕಗಳೂ ಕನ್ನಡವಾದುವು. ಅನೇಕ ವಿದ್ವನ್ಮಣಿಗಳು ಹೊಸ ಸಾಹಿತ್ಯ ಸೃಷ್ಟಿಯಲ್ಲಿ ಬದ್ಧಕಂಕಣರಾದರು. ಪೂರ್ವದ ಶ್ರೇಷ್ಠ ಕಾವ್ಯಗಳು ಪ್ರಕಾಶಕ್ಕೆ ಬಂದುವು. ಮದರಾಸು ಬೊಂಬಾಯಿ ವಿಶ್ವ ವಿದ್ಯಾನಿಲಯಗಳೂ, ಧಾರವಾಡದ ಕರ್ಣಾಟಕ ವಿದ್ಯಾವರ್ಧಕ ಸಂಘವೂ ಕನ್ನಡ ವಿದ್ಯೆಯ ಪ್ರಚಾರಣೆಯನ್ನು ಅವಕಾಶ ಸಿಕ್ಕಿದ ಹಾಗೆಲ್ಲಾ ಹುರಿಗೊಳಿಸುತ್ತ ಬಂದುವು. ಸ್ವದೇಶದವರಾದ ರಾಜರಿಲ್ಲದ ಕಡೆ ಪ್ರಜೆಗಳೇ ಹೆಚ್ಚು ಕಾರ್ಯಭಾರವನ್ನು ವಹಿಸಿದರು. ಮೈಸೂರು, ಮಂಗಳೂರು, ಧಾರವಾಡ ಈ ಪ್ರಾಂತ್ಯದ ಸಾಹಿತ್ಯ ಸೇವಕರು ಏಕೀಭವಿಸಿ ಕೆಲಸಮಾಡಲು ಆರಂಭಿಸಿದರು. ಕನ್ನಡನಾಡು ಸಂಸ್ಕೃತಿಯಲ್ಲಿ ಸಾಹಿತ್ಯದಲ್ಲಿ ಒಂದುಗೂಡುತ್ತ ಬಂತು.

ನಮ್ಮನ್ನಾಳುವ ನಾಲ್ವಡಿ ಶ್ರೀ ಕೃಷ್ಣರಾಜ ಒಡೆಯರ್ ಮಹಾಸ್ವಾಮಿಯವರ ರಾಜ್ಯ ಪರಿಪಾಲನೆಯಲ್ಲಿ ಸಂಸ್ಕೃತ ಇಂಗ್ಲಿಷ್ ವಿದ್ಯೆಗಳಿಗೆ ಇರುವ ಪೋಷಣೆಯೂ ಗೌರವವೂ ಕನ್ನಡಕ್ಕೂ ಶಾಶ್ವತವಾಗಿ ಬಂದು ನೆಲಸಿದುವು. ಪೂರ್ವದ ಆರಂಬಕ್ಕೆಲ್ಲಾ ಸುವೃಷ್ಟಿಯಾಗಿ ಪೂರ್ಣಫಲವನ್ನು ಭೋಗಿಸುವ ದಶೆ ತಿರುಗಿತು. ಸರ್ಕಾರದವರು ಪರಿಷತ್ತನ್ನು ಏರ್ಪಡಿಸಿ ಸಾಹಿತ್ಯ ಕಾರ್ಯವನ್ನು ಒಂದು ನಿಬಂಧನೆಗೆ ತಂದರು. ವಿಶ್ವವಿದ್ಯಾನಿಲಯವೂ ಶಿಕ್ಷಣ ಶಾಖೆಯೂ ಗ್ರಂಥಕರ್ತರಿಗೆ ಪ್ರೋತ್ಸಾಹವನ್ನೀಯುತ್ತಲೂ, ಹಳೆಯ ಗ್ರಂಥಗಳನ್ನು ಪರಿಶೋಧಿಸಿ ಮುದ್ರಣಗೊಳಿಸುತ್ತಲೂ, ನವೀನ ಕಾಲದ ನಡವಳಿಕೆಗೆ ಬೇಕಾದ ರೀತಿಯಲ್ಲಿ ಹೊಸ ಪುಸ್ತಕಗಳನ್ನು ಬರೆಯಿಸುತ್ತಲೂ ಭಾಷಾಭಿವೃದ್ಧಿ ಕಾರ್ಯವನ್ನು ಕೈಗೊಂಡಿರುವರು. ಹಲವರು ದೇಶಭಕ್ತರು ಕಷ್ಟ ನಷ್ಟಗಳನ್ನು ಲಕ್ಷ್ಯಮಾಡದೆ ಮಾಸಪತ್ರಿಕೆ ವೃತ್ತಾಂತಪತ್ರಿಕೆಗಳ ಮೂಲಕ ಕನ್ನಡದ ಶೈಲಿಯನ್ನೂ, ಭಾವಗಳನ್ನೂ, ಚೈತನ್ಯವನ್ನೂ ಹುರುಪುಗೊಳಿಸುತ್ತಿರುವರು. ಎಲ್ಲಕ್ಕಿಂತ ಅತಿಶಯವಾಗಿ ವಿದ್ಯಾರ್ಥಿಗಳು ಕರ್ಣಾಟಕದ ಎಲ್ಲಾ ಭಾಗಗಳಲ್ಲಿಯೂ, ಕಡೆಗೆ ಹತ್ತು ಜನ ಕನ್ನಡ ವಿದ್ಯಾರ್ಥಿಗಳು ಸೇರಿದ ಪರಸ್ಥಳಗಳಲ್ಲಿ ಕೂಡ ಕನ್ನಡ ಸಂಘಗಳನ್ನು ಸ್ಥಾಪಿಸಿಕೊಂಡು ಭಾಷಾಸೇವೆಗೆ ಸಿದ್ಧವಾಗುತ್ತಿದ್ದಾರೆ. ಇಂತಹ ಉತ್ಸಾಹಭರಿತವಾದ ಯುವಕವೀರರ ಕೈಗೆ ಹಿರಿಯರಾದ ಭಾಷಾಪ್ರೇಮಿಗಳ ಕಯ್ಯಿಂದ ಸಾಹಿತ್ಯಜ್ಯೋತಿ ಸಾಗುತ್ತಿದೆ. ಈ ಯುವಕರ

ಸ್ವದೇಶಭಕ್ತಿ, ಸಾಹಸಗಳನ್ನು ನೋಡಿದ ಯಾವ ವೃದ್ಧನಿಗೆ ತಾನೆ ಹೃದಯದಲ್ಲಿ ರಕ್ತ ಮತ್ತೆ ಬಿಸಿಯಾಗಿ ಯೌವನ ಮತ್ತೊಮ್ಮೆ ಚಿಮ್ಮದೆ ಇದ್ದೀತು.

ಮಹಾಶಯರೆ, ಪೂರ್ವಕಾವ್ಯರಾಶಿ ಪ್ರಕಾಶಕ್ಕೆ ಬಂದು ನಮ್ಮಹಿರಿಯರು ಕೂಡಿಸಿಟ್ಟಿದ್ದ ನಿಕ್ಷೇಪ ಹಸ್ತಗತವಾಗಿ, ಸರ್ವರಿಗೂ ಸಮಾನವಾದ ಸಾಹಿತ್ಯವಾಗಿ, ಜೈನಕಾವ್ಯವೇ ಆಗಲಿ, ವೀರಶೈವ ಕಾವ್ಯವೇ ಆಗಲಿ, ಬ್ರಾಹ್ಮಣ ಕಾವ್ಯವೇ ಆಗಲಿ—ಆಗಲೇ ಸಿದ್ಧವಾಗಿರುವ ಕನ್ನಡದ ಬೈಬಲ್ ಜೊತೆಗೆ ಒಂದು ಕ್ರೈಸ್ತಕಾವ್ಯಮಾಲೆಯೂ ಮತ್ತು ಮಹಮ್ಮದೀಯರ ಕಾವ್ಯಮಾಲೆಯೂ ಶೀಘ್ರದಲ್ಲಿಯೇ ನಮ್ಮ ಇತರ ಸಾಹಿತ್ಯವಾಹಿನಿಗಳೊಡನೆ ತಾವೂ ಬಂದು ಕೂಡುವುವೆಂದು ನಾನು ಹಾರೈಸುತ್ತೇನೆ— ಯಾವ ಸಾಹಿತ್ಯದ ಶಾಖೆಯೇ ಆಗಲಿ ಎಲ್ಲವೂ ನಮ್ಮ ಕನ್ನಡವೆಂದೂ, ಆದುದರಿಂದ ನಮ್ಮದೆಂದೂ ಆದರಿಸುವ ಕಾಲ ಇದು. ಎಲ್ಲಾ ಸಂಸ್ಕೃತಿಗಳಲ್ಲಿಯ,ೂ ಎಲ್ಲಾ ಧರ್ಮಗಳಲ್ಲಿಯೂ, ಎಲ್ಲಾ ಕವಿತಾಮಾರ್ಗಗಳಲ್ಲಿಯೂ ವಿಮರ್ಶನಪೂರ್ವಕವಾದ ವಿಶ್ವಾಸವಿಟ್ಟು ಎಲ್ಲಾ ಕಡೆಗಳಿಂದಲೂ ಉತ್ತಮ ಪಕ್ಷವನ್ನು ಸ್ವೀಕಾರಮಾಡುವ ವಿಶಾಲಹೃದಯದ ಕಾಲ ಇದು. ಸಾರ್ವಜನಿಕವಾದ ಉದ್ಯಮಗಳಿಗೂ ಯೋಗಕ್ಷೇಮಗಳಿಗೂ ಪ್ರಾಧಾನ್ಯವನ್ನು ಕೊಟ್ಟು, "ಉದಾರಚರಿತಾನಾಂ ತು ವಸುಧೈವ ಕುಟುಂಬಕಂ" ಎಂಬ ಭಾರತೀಯರ, "ಮಾನುಷಿಕವಾದದ್ದು ಯಾವುದೂ ನನಗೆ ಹೊರಗಲ್ಲ" ಎಂಬ ಪಾಶ್ಚಾತ್ಯರ ಆರ್ಯೋಕ್ತಿಗಳ ತತ್ವವನ್ನನುಸರಿಸಿ ಜಗತ್ತಿನಲ್ಲೆಲ್ಲಾ ಮೈತ್ರಿಯೂ, ಶಾಂತಿಯೂ, ಸಮಾನಧರ್ಮವೂ, ಶ್ರೇಯಸ್ಸೂ ವರ್ಧಿಸಲಿ ಎಂದು ದೀಕ್ಷೆಗೊಳ್ಳುವ ಕಾಲ ಇದು. ಮಲಗಿದ್ದ ಜನರು ಎಚ್ಚತ್ತಿದ್ದಾರೆ; ಹಳೆಯ ಆತ್ಮದಿಂದ ಹೊಸ ಆತ್ಮವನ್ನು ಸೃಷ್ಟಿಮಾಡುತ್ತಿದ್ದಾರೆ; ಸತ್ಯ, ಸೌಂದರ್ಯ, ಸ್ವಾತಂತ್ರ್ಯ, ಸ್ವಾರ್ಥತ್ಯಾಗ, ಸೇವೆ, ಇವೇ ನಮ್ಮ ಜೀವಮಾನದ ದೀಪಿಕೆಗಳೆಂದು ಸಾರುತ್ತಿದ್ದಾರೆ. ಇಂತಹ ಸ್ವರ್ಣಯುಗದಲ್ಲಿ, ಇಂಥ ವಿಶ್ವವ್ಯಾಪಕವಾದ ಆತ್ಮಘರ್ಷಣದಲ್ಲಿ ದಿವ್ಯಜ್ಯೋತಿಗಳು, ಮಹಾ ಮಹಾತ್ಮರು ಅವತರಿಸುವುದು ಏನಾಶ್ಚರ್ಯ ? ಒಬ್ಬ ಮಹಾತ್ಮನಿಂದ ಒಂದು ದೇಶವೇ ಪವಿತ್ರವಾಗಿ ಪೂಜ್ಯಸ್ಥಾನಕ್ಕೆ ಏರುವುದಲ್ಲವೇ ? ಸಾಹಿತ್ಯಪ್ರೇಮಿಗಳಿಗೆ, ಸಾಹಿತ್ಯಸೇವಕರಿಗೆ, ಸಾಹಿತ್ಯಕರ್ತೃಗಳಿಗೆ ನಾನು ವಿನಯಪೂರ್ವಕವಾಗಿ ಬಿನ್ನಹಮಾಡಿಕೊಳ್ಳಬಹುದಾದರೆ, ಹೀಗೆ

ಬಿನ್ನೈಸಿಕೊಳ್ಳ ಬಹುದಲ್ಲವೇ? ಕರ್ಣಾಟಕಮಾತೆಯ ವೀರಪುತ್ರರಿರಾ, ಪುತ್ರಿಯರಿರಾ,

ಓಂ ತತ್ಸವಿತುರ್ವರೇಣ್ಯಂ ।
ಭರ್ಗೋ ದೇವಸ್ಯ ಧೀಮಹಿ ।
ಧಿಯೋ ಯೋ ನಃ ಪ್ರಚೋದಯಾತ್ ॥

ಎಂದು ಸದಾ ಪ್ರಾರ್ಥಿಸಿರಿ. ಈ ದಿವ್ಯಮಂತ್ರ ಏಕದೇಶಕ್ಕೆ ಮಾತ್ರ ಸೇರಿದ್ದಲ್ಲ. ಇಡಿಯ ಜಗತ್ತನ್ನೆಲ್ಲಾ ವ್ಯಾಪಿಸತಕ್ಕ ಸರ್ವ ಸಂಜೀವನ ಮಂತ್ರ. ಭಗವಾನ್ ಸೂರ್ಯದೇವನು ಎಲ್ಲಾ ಕಡೆಯಲ್ಲಿಯೂ ಬೆಳಗುವನು; ಎಲ್ಲರ ಹೃದಯದಲ್ಲಿಯೂ ಹೊಳೆಯುವನು. ಎತ್ತ ಕಡೆಗೂ ಕಣ್ಣು ಮುಚ್ಚಬಾರದು, ಎತ್ತ ಕಡೆಗೂ ಹೃದಯದ ಬಾಗಿಲನ್ನು ಕಿರಿಕಿರಿದು ಮಾಡುತ್ತಾ ಮುಚ್ಚಿಬಿಡಬಾರದು. ನಮ್ಮ ಚಿತ್ತ ಶುದ್ಧಿ, ನಮ್ಮ ಆತ್ಮ ವಿಶಾಲತೆ, ಪೂರ್ಣತ್ವದ ಸಾನ್ನಿಧ್ಯಕ್ಕೆ ಬಂದ ಹಾಗೆಲ್ಲಾ, ನಮ್ಮಿಂದ ಉತ್ತಮಸಾಹಿತ್ಯ, ಉತ್ತಮಸಾಹಿತ್ಯದಿಂದ ಉತ್ತಮಜನ್ಮ ಹೊಮ್ಮುವುದು. ಮಿಲ್ಟನ್ ಮಹಾಕವಿ ತನ್ನ ಅನುಭವದಿಂದ ಹೇಳಿದ್ದಾನೆ.—"ಉತ್ತಮ ಕಾವ್ಯವು ಶ್ರೇಷ್ಠವಾದ ಆತ್ಮದ ಅಮೂಲ್ಯವಾದ ಜೀವಸಾರ" ಎಂದು. ನಮ್ಮ ಹಿರಿಯರು ಹೇಳಿದ್ದಾರೆ—"ಕವಿಗಳು ಋಷಿಗಳು, ದ್ರಷ್ಟ್ರರು" ಎಂದು, ಈ ಉತ್ತಮಪದವಿ ಸುಲಭವಾಗಿ ಸಿಕ್ಕಬಹುದೆ? ಆತುರಪಡಬಾರದು, ಅಹಂಕಾರಪಡಬಾರದು, ಅಸೂಯೆಪಡಬಾರದು; ಶಿಕ್ಷಣವನ್ನು ಪಡೆಯಬೇಕು, ಅಧಿಕಾರವನ್ನು ಪಡೆಯಬೇಕು, ಧೈರ್ಯವನ್ನು ಪಡೆಯಬೇಕು. ಭಗವತ್ಕೃಪೆಯಿಂದ ನಮ್ಮ ಕಯ್ಯಲ್ಲಾದ ಕೈಂಕರ್ಯವನ್ನು ನಮ್ಮ ದೇಶಕ್ಕೇ ಎಂದು ವೀರಭಾವದಿಂದ ನಾನು ಹೇಳುವುದಿಲ್ಲ—ಸಾಧ್ಯವಾದರೆ ಜಗತ್ತಿಗೇ ಮಾಡಬೇಕು. ಅಣ್ಣ ತಮ್ಮಂದಿರಾಗಿ ಎಲ್ಲರೂ, ಜನಕ್ಕೆ ಸೇರಿದ ಸಾಹಿತ್ಯವನ್ನು, ಜನಕ್ಕಾಗಿ, ಜನರಿಂದ ಮಾಡಿಸಬೇಕು.

ಸಮ್ಮೇಳನದ ಪ್ರತಿನಿಧಿಗಳಿರಾ, ಮಾನ್ಯಸದಸ್ಯರಿರಾ ನನ್ನ ಈ ಭಾಷಣದಿಂದ ತಮ್ಮನ್ನು ದಣಿಸಿದೆ. ಮತ್ತೊಮ್ಮೆ ತಮ್ಮೆಲ್ಲರಿಗೂ ಸ್ವಾಗತವನ್ನು ಬಯಸಿ, ಸಮ್ಮೇಳನದ ಕಾರ್ಯಗಳನ್ನು ಸಾಂಗವಾಗಿ ಸುಖವಾಗಿ ನೆರವೇರುವಂತೆ ನಡೆಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಕನ್ನಡದ ಪುನರುಜ್ಜೀವನ*

ಇಂಡಿಯಾದೇಶದಲ್ಲಿ ಈಗ ಒಂದು ಪುನರುಜ್ಜೀವನದ ಕಾಲ. ಎಲ್ಲೆಲ್ಲಿಯೂ ಹೊಸ ಚೈತನ್ಯ, ಹೊಸ ಆಸೆ, ಹೊಸ ಪ್ರಯತ್ನ. ಅದರ ಪರಿಣಾಮವಾಗಿ ದೇಶಭಾಷೆಗಳ ಪುನರುಜ್ಜೀವನ. ಈ ಪುನರುಜ್ಜೀವನದ ಮರ್ಮವೇನು? ಅದು ಯಾವ ಕಡೆ ಹೋಗುತ್ತಿದೆ? ಅದರಿಂದ ಸಾಧಿಸಬೇಕಾದ ಧ್ಯೇಯಗಳೇನು? ವಿಚಾರಮಾಡೋಣ.

" ಪುನಃ ಪುನರ್ಜಾಯಮಾನಾ ಪುರಾಣೀ |
ಸಮಾನಂ ವರ್ಣಮಭಿಶುಂಭಮಾನಾ "॥

ಎಂಬುದಾಗಿ ಉಷಾದೇವಿಯನ್ನು ಕುರಿತು ಋಷಿಗಳು ಹೇಳಿರುವ ಸ್ತೋತ್ರವನ್ನು ತಾವೆಲ್ಲರೂ ಬಲ್ಲಿರಿ. ಅದನ್ನು ನಾವು ಸರಸ್ವತೀದೇವಿಗೂ ಅನ್ವಯಿಸಬಹುದಾಗಿದೆ. ಸರಸ್ವತಿ ಎಂದರೆ ಭಾಷೆ ಸಾಹಿತ್ಯ ಎರಡೂ ಸೇರಿತು; ಬರಿಯ ಸಾಹಿತ್ಯ ಮಾತ್ರವಲ್ಲ: ಯಾವ ಉತ್ತಮ ಭಾಷೆ, ಯಾವ ದಿವ್ಯವಾಣಿ, ಮನೋಹಾರಿಯಾಗಿ ಆನಂದವನ್ನೂ ಶ್ರೇಯಸ್ಸನ್ನೂ ಉಂಟುಮಾಡಬಲ್ಲುದೋ ಅದೂ ಸರಸ್ವತಿಯ ಅಂಶವೇ. ಆದುದರಿಂದ ಭಾಷೆ, ಸಾಹಿತ್ಯ, ಆನಂದ, ಶ್ರೇಯಸ್ಸು ಇವು ನಾಲ್ಕೂ ಸರಸ್ವತೀದೇವಿಯೇ ಸರಿ. ಇವಲ್ಲದೆ ಆಕೆ "ಸಮಾನವರ್ಣ" ಉಳ್ಳವಳು. ಇವಳ್ಕೆ ಯಾವಾಗ್ಲೂ ಒಂದೇ ಬಣ್ಣವುಳ್ಳವಳು. ಆ ಬಣ್ಣ ಅಚಲವಾದ ಶಾಶ್ವತವಾದ ಬಣ್ಣ, ಯಾವಾಗಲೂ ಬದಲಾಯಿಸುವುದೇ ಅಲ್ಲ, ಎಂದು ಅರ್ಥಮಾಡಿದರೂ ಮಾಡಬಹುದು; ಅಥವಾ, ಮರಳಿ ಮರಳಿ ಹುಟ್ಟುತಕ್ಕವಳು, ಹಳಬಳು, ಎಂದಿಗೂ ಕುಗ್ಗದ ಕಾಂತಿಯಿಂದ ಮೆರೆಯುತ್ತಿರುವವಳು ಎಂದು ಅರ್ಥ ಹೇಳಿದರೂ ಹೇಳಬಹುದು. ಇಂಗ್ಲಿಷಿನಲ್ಲಿ ಉಷಾದೇವಿಯನ್ನು 'Dawn' ಎಂದು ಕರೆಯುತ್ತಾರೆ. ದೇಶ ಮುಂದಕ್ಕೆ ಹೋಗಬೇಕೆಂದು ಕೆಲಸಮಾಡುತ್ತಿರುವವರು, ಯಾವುದೋ ಒಂದು ಶಕ್ತಿಯನ್ನು, ಯಾವುದೋ ಒಂದು ಸಾಹಿತ್ಯದ ಗುರಿಯನ್ನು, ನಿರೀಕ್ಷಣೆಮಾಡಿಕೊಂಡಿರುವವರು "The

---

* ಕರ್ಣಾಟಕ ಸಾಹಿತ್ಯ ಪರಿಷನ್ಮಂದಿರದಲ್ಲಿ ತಾ. ೨೬–೪–೧೯೩೫ ರಲ್ಲಿ ಮಾಡಿದ ಉಪನ್ಯಾಸದ ಸಾರಾಂಶ.

Dawn of Renaissance"—ಎಂದರೆ, ಪುನರುಜ್ಜೀವನದ ಉಷಃಕಾಲ ಎಂದು ಹೇಳುತ್ತಾರೆ. ಪುನರುಜ್ಜೀವನ ಎಂದರೆ ಒಂದು ಭಾಷೆಯಲ್ಲಿ, ಒಂದು ಸಾಹಿತ್ಯದಲ್ಲಿ, ಒಂದು ಮನೋಧರ್ಮದಲ್ಲಿ, ಒಂದು ಸಮಾಜದಲ್ಲಿ, ಒಟ್ಟನಮೇಲೆ ಒಂದು ದೇಶದಲ್ಲಿ, ಈ ಉಷಸ್ಸು—ಈ ಸರಸ್ವತಿ ಮೂಡುವುದನ್ನು, ಈ ಬೆಳಕು ಹರಿಯುವುದನ್ನು, ಕಂಡು, ಆನಂದಪಟ್ಟು, ಜೀವನವನ್ನು ದೊಡ್ಡದುಮಾಡಿಕೊಳ್ಳುವುದೇ. ಈ ಉಷಾದೇವಿ ಮರಳಿ ಮರಳಿ ಹುಟ್ಟುವಾಗ ಬರಿಯ ಹಳಬಳು, ಒಂದೇ ಬಣ್ಣವಿಟ್ಟುಕೊಂಡಿರುವವಳು, ಎಂದಿಗೂ ಕುಗ್ಗದ ಒಂದೇ ಕಾಂತಿಯಿಂದ ಮೆರೆಯುವವಳು ಎಂಬುದು ಸರಿಯೇ? ಅಥವಾ ಬಣ್ಣದ ಮೇಲೆ ಬಣ್ಣ ಬದಲಾಯಿಸುತ್ತಾ, ನಾಮರೂಪಗಳು ಬದಲಾಯಿಸುತ್ತಾ, ದೇಹಾಂಗಗಳು ಬದಲಾಯಿಸುತ್ತಾ, ಶೈಲಿಮಾರ್ಗಲಕ್ಷಣಗಳು ಬೇರೆಯಾಗಿದ್ದರೂ, ಅನುಭವದೃಷ್ಟಿಗಳು ಬೇರೆಯಾಗಿದ್ದರೂ ಒಳಸಾರ, ಒಳರಸ, ಒಳಆತ್ಮ ಎಂದೆಂದಿಗೂ ಒಂದೇ ಆಗಿ, ಒಂದೇ ಅಂತಸ್ಸತ್ವವಾಗಿ ನಿಂತಿರತಕ್ಕವಳು ಎಂಬುದು ಸರಿಯೇ? ಈ ಎರಡರಲ್ಲಿ ಯಾವ ಒಂದು ಅರ್ಥಮಾಡಿದರೂ -ಮಾಡಬಹುದಾಗಿದೆ. ಹಾಗಾದರೆ ಕನ್ನಡದ ಪುನರುಜ್ಜೀವನವೆಂದರೆ ಯಾವ ಅರ್ಥಮಾಡೋಣ?

ಪುನರುಜ್ಜೀವನ ಎಂದರೇನು?

ಹಿಂದೆ ಕನ್ನಡನಾಡಿನಲ್ಲಿ ಮಹಾಕವಿಗಳಿದ್ದರು, ಒಳ್ಳೆಯ ಮೇಧಾವಿಗಳೂ ಬುದ್ಧಿವಂತರೂ ಇದ್ದರು; ಕನ್ನಡಕ್ಕೆ ಪ್ರಬಲವಾದ ಆಶ್ರಯವಿತ್ತು; ರಾಜರು, ಮಂತ್ರಿಗಳು, ಸೇನಾಪತಿಗಳು, ಮಠಾಧಿಪತಿಗಳು, ಶ್ರೀಮಂತರು, ದೇಶಭಾಷೋದ್ಧಾರ ಮಾಡಬೇಕೆಂದು ಸಾಹಿತ್ಯಸೃಷ್ಟಿಗೆ ಎದೆಗೊಟ್ಟು ನಿಂತಿದ್ದರು. ಆದುದರಿಂದ ಹಿಂದೆ ಕನ್ನಡ ಉಚ್ಛ್ರಾಯಸ್ಥಿತಿಗೇರಿತು. ಈಗ ಅನೇಕ ಕಾರಣಗಳಿಂದ ಕನ್ನಡ ಅವನತ ಸ್ಥಿತಿಗೆ ಬಂದಿದೆ, ಕುಗ್ಗಿಹೋಗಿದೆ. ಅದರಲ್ಲಿ ಬಲವಿಲ್ಲ: ಅದನ್ನಾಡುವ ಜನರಲ್ಲಿ ಹಲವರಿಗೆ ಅದರಲ್ಲಿ ಪ್ರೇಮವಿಲ್ಲ: ಅದಕ್ಕೆ ಹಾನಿತಟ್ಟದಂತೆ ಅದನ್ನು ಕಾಪಾಡಿಕೊಳ್ಳುವ ಉತ್ಸಾಹವಿಲ್ಲ. ಅವರ ಪ್ರೇಮ, ಅವರ ಉತ್ಸಾಹ ಮತ್ತೆಲ್ಲಿಯೋ ಹೋಗಿದೆ! ಇನ್ನೊಮ್ಮೆ ಕನ್ನಡ ಭಾಷೆಗೂ, ಕನ್ನಡಸಾಹಿತ್ಯಕ್ಕೂ ಶ್ರೇಷ್ಠವಾದ ಸ್ಥಾನವನ್ನು ಕೊಡುವ ಕಾಲ, ಆ ಸುವರ್ಣಯುಗ, ಮರಳಿ ಬಾರದೆ ಎಂದು ಕನ್ನಡದ ಅಭಿಮಾನಿಗಳು

ಹಂಬಲಿಸುತ್ತಿದ್ದಾರೆ. ಈಗ ಮತ್ತೆ ರಾಜಾಶ್ರಯ, ಅದಕ್ಕೂ ಹೆಚ್ಚಾಗಿ ಜನಾಶ್ರಯ ದೊರೆತರೆ ಸಾಹಿತ್ಯದೇವಿ ಕಣ್ಣು ತೆರೆದು ತೇಜಸ್ವಿಗಳಾದ ಕವಿಗಳು ಮತ್ತೆ ಹುಟ್ಟಿದರೆ, ಆ ದಿನ ಬರಲಾಗದೆ, ಹಿಂದಿನ ಶ್ರೇಷ್ಠ ಸಾಹಿತ್ಯವನ್ನು ಕಾಪಾಡಿಕೊಂಡು ಪುನಃ ಸಾಹಿತ್ಯಕಲೆ ಮೇಲಕ್ಕೆ ಏರಲಾರದೆ, ಎಂಬ ಆಸೆ ಆಗಾಗ್ಗೆ ಅವರ ಮನಸ್ಸಿನಲ್ಲಿ ದುಡಿಯುತ್ತಿದೆ. ಇದು ನ್ಯಾಯವಾದುದೇ ತಾನೆ! ಪುನರುಜ್ಜೀವನವೆಂದರೂ ಇದೇ ಅರ್ಥವೇ. ಆದರೆ ಈಗ ಮತ್ತೆ ಮರಳಬೇಕೆಂದು ಬಯಸುತ್ತಿರುವ ಈ ಸಾಹಿತ್ಯ ಹಿಂದೆ ಹೇಗೆ ಇತ್ತೋ, ಹಾಗೆಯೇ, ಅದೇ ಬಣ್ಣವಾಗಿಯೇ ಬಂದು ಕುಳಿತುಕೊಳ್ಳಬೇಕೆ? ಹಾಗೆ ಬರುವುದು ಅಪೇಕ್ಷಿತವೆ? ಅಥವಾ ಆದು ಸಾಧ್ಯವೆ? ಅಲ್ಲ: ನನ್ನ ಮನಸ್ಸಿಗೆ ಅಲ್ಲ. ಪುನರುಜ್ಜೀವನ ಎನ್ನುವುದು ಪುನರುತ್ಥಾನವಲ್ಲ. ಅದೇ ದೇಹವನ್ನು ವಹಿಸಿಬರುವುದಲ್ಲ; ಅದೇ ಬಣ್ಣದಿಂದ ಮೆರೆಯುವುದಲ್ಲ. ಒಂದು ಚೇತನ, ಒಂದು ಆತ್ಮ, ತಾನು ಪಡೆದ ಅನುಭವವನ್ನು, ಸಂಸ್ಕಾರವನ್ನು, ಜೀವ ಪುಷ್ಟಿಯೆಲ್ಲವನ್ನೂ ಸೇರಿಸಿಕೊಂಡು, ಅದರ ಫಲವಾಗಿ ಹೊಸತೊಂದು ಆತ್ಮವಾಗಿ-ಅದೇ ದೇಹವಲ್ಲ, ಅದೇ ಆತ್ಮವಲ್ಲ, ಹೊಸವೊಂದು ಆತ್ಮವಾಗಿ-ಕೂಡಿದ ಮಟ್ಟಿಗೂ ಮೊದಲಿಗಿಂತಲೂ ಪ್ರಬುದ್ಧವಾದ ಆತ್ಮವಾಗಿ, ಹೆಚ್ಚು ಶಕ್ತಿಯಿಂದ, ಹೆಚ್ಚು ಮುಕ್ತಿಯಿಂದ ಕಾಣಿಸಿಕೊಳ್ಳುವುದು. ಪುನರುಜ್ಜೀವನ ಎನ್ನುವುದು ಜೀರ್ಣೋದ್ಧಾರವಲ್ಲ; ಖಿಲವಾಗಿ ಬಿದ್ದುಹೋಗಿರುವುದನ್ನು, ಹೊಳು ಮುಚ್ಚಿಹೋಗಿರುವುದನ್ನು, ಬಿಡಿಸಿ ಸರಿಪಡಿಸಿ, ಮುಂದಿರಿಸುವ ಕೆಲಸವೇ ಅಲ್ಲ. ಹಿರಿಯರು ಕಟ್ಟಿದ ದೊಡ್ಡದೊಂದು ದೇವಸ್ಥಾನ ಸುಂದರವಾಗಿ, ಕಲಾಪೂರ್ಣವಾಗಿ, ಹೃದಯಂಗಮವಾಗಿ ಇದ್ದುದಾದರೆ ಅದನ್ನು ಉಳಿಸಿಕೊಳ್ಳಬಾರದೆಂದಲ್ಲ. ಅವನ್ನು ಉಳಿಸಿಕೊಳ್ಳದಿದ್ದರೆ, ಸರಿಪಡಿಸಿ ಇಟ್ಟುಕೊಳ್ಳದಿದ್ದರೆ, ಹಿರಿಯರಿಗೆ ದ್ರೋಹಮಾಡಿದಹಾಗೆ; ಪಿತೃಋಣವನ್ನು ತೀರಿಸದೆ ಬಿಟ್ಟಹಾಗೆ. ಹಿಂದಿನಿಂದ ಬಂದ ಐಶ್ವರ್ಯವನ್ನು ಸಂಗ್ರಹಮಾಡುವುದು ಆವಶ್ಯಕ. ಯಾವುದು ಬೇರೋ ಅದನ್ನು ಕಡಿದುಕೊಂಡು ಬೆಳೆಯಲು ಹೊರಡತಕ್ಕುದಲ್ಲ. ಹಾಗಾದರೆ, ಪುನರುಜ್ಜೀವನ ಎಂದರೆ ಅರ್ಥವೇನು? ಸಾಮಾನ್ಯವಾಗಿ "Renaissance" ಎಂಬ ಶಬ್ದವನ್ನು ಉಪಯೋಗಿಸುವುದರಲ್ಲಿ, "Dawn of a fresh day" ಎಂಬ ಮಾತಿನಲ್ಲಿ, "ನವೋ

ಭವತಿ ಜಾಯಮಾನಃ” ಎಂಬ ಮಂತ್ರದಲ್ಲಿ, ಯಾವ ನೂತನವಾದ, ಶಾಶ್ವತವಾದ, ಲಕ್ಷಣ ತತ್ತ್ವಭಾವಗಳು ನಮ್ಮ ಮನಸ್ಸಿಗೆ ಬರುತ್ತವೆಯೋ ಅವುಗಳನ್ನೇ ಪುನರುಜ್ಜೀವನ ಎನ್ನುವ ಶಬ್ದದ ವಿಷಯದಲ್ಲಿಯೂ ನಾವು ಇಟ್ಟುಕೊಳ್ಳಬಹುದಾಗಿದೆ. ಅದು ಬರಿಯ ಪುನರುತ್ಥಾನವಲ್ಲ. ಜೀರ್ಣೋದ್ಧಾರವಲ್ಲ. ಅನುಸರಣವಲ್ಲ, ಅನುಕರಣವಲ್ಲ. ಪುನರುಜ್ಜೀವನ ಏನೋ ಒಂದು ಬಗೆಯ ಧೈರ್ಯಕೂಡಿದ ವಿಚಾರ; ಹೊಸ ಹೊಸ ನಿರ್ಮಾಣ; ಮರುಹುಟ್ಟು; ಆಳವಾದ, ಸಮನ್ವಯ—ಹೊಸದು, ಹಳದು, ನಮ್ಮದು, ಹೆರರದು ಎಲ್ಲವನ್ನೂ ಹೊಂದಿಕೆಮಾಡುವುದು. “ಸತ್ಯಸ್ಯ ಸತ್ಯಂ” ಎಂಬಂತೆ, ಸಾಹಿತ್ಯದೊಳಗಿನ ಸಾಹಿತ್ಯ, ಅನೇಕ ಹಳೆಯ ಸಾಹಿತ್ಯಗಳೊಳಗಿನಿಂದ ಮೊಳೆಯುತ್ತಿರುವ ಹೊಸ ಸಾಹಿತ್ಯ. ನಮ್ಮ ಬುದ್ಧಿ ಕುದುರಿದ ಹಾಗೆಲ್ಲಾ, ನಮ್ಮ ಅನುಭವ ವಿಸ್ತಾರವಾದ ಹಾಗೆಲ್ಲಾ, ನಮ್ಮ ಸತ್ಯಜ್ಞಾನ ದರ್ಶನಗಳು ಹೆಚ್ಚಿದಹಾಗೆಲ್ಲಾ ವಿಚಾರಶಕ್ತಿ ಬೆಳೆಯುತ್ತದೆ. ಒಟ್ಟಿನಮೇಲೆ ಹತ್ತು ಲಕ್ಷಣಗಳನ್ನು ಒಳಗೊಂಡ ಒಂದು ಲಕ್ಷಣ, ಹತ್ತು ಸತ್ಯಗಳನ್ನು ಒಳಗೊಂಡ ಒಂದು ಸತ್ಯ, ಹತ್ತು ವಿಚಾರಗಳನ್ನು ಒಳಗೊಂಡ ಒಂದು ವಿಚಾರ, ನಾನಾ ಆತ್ಮಗಳ ಅನುಭವಗಳನ್ನು ಪಡೆದ ಒಂದು ಆತ್ಮ, ಇದು ಪುನರುಜ್ಜೀವನದ ಲಕ್ಷಣವೆನ್ನಬಹುದು. ಯಾವುದೂ ಇಷ್ಟಕ್ಕೇ ನಿಂತಿತೆನ್ನುವ ಭಕ್ತಿಯಿಲ್ಲ: ಹೊಸ ವಿಚಾರಶಕ್ತಿ ಹೊಸವಿಷಯಗಳನ್ನು ತಿಳಿಯಲು ಆಸಕ್ತಿ. ಸಾಮಾನ್ಯವಾಗಿ ವಿಜ್ಞಾನಶಾಸ್ತ್ರದಲ್ಲಿ ಅನೇಕ ಪ್ರಯೋಗಗಳನ್ನು ನಡಸಿ ತಿಳಿದ ವಿಚಾರವನ್ನು ಸಹ ಇದೇ ಸಿದ್ಧಾಂತವೆಂದು ಪಂಕ್ತಿಯೆತ್ತಿ ತೋರಿಸುತ್ತ ಹೋಗುವುದಿಲ್ಲ: ಸರ್ವಸತ್ಯವನ್ನೂ ಕಂಡುಬಿಟ್ಟಿದ್ದೇವೆ, ಇನ್ನು ಕಾಣಬೇಕಾದುದೇನೂ ಇಲ್ಲವೆನ್ನುವುದಿಲ್ಲ. ನಾವು ಕಂಡಿರುವುದಿಷ್ಟು, ನೀವೂ ಪ್ರಯೋಗಮಾಡಿ ನೋಡಿ, ಇದು ನಿಜವಾಗಿದ್ದ ಪಕ್ಷದಲ್ಲಿ ಇದನ್ನೇ ಒಪ್ಪಿಕೊಳ್ಳಿ, ಇಲ್ಲವೇ ನೀವು ಹೊಸದನ್ನು ಕಂಡರೆ ಅದೂ ಸಮ್ಮತವೇ; ಯಾವುದನ್ನೂ ಪ್ರಯೋಗಮಾಡಿ ನೋಡಿ ನಿಜವಾದ ವಿಚಾರವೇನೆಂದು ತಿಳಿಯೋಣ, ಎನ್ನುವರು. ಮನುಷ್ಯನಾದವನು ಒಂದು ಲಕ್ಷಣವನ್ನು ಕೇಳಿದರೆ ಅದರ ಹಿಂದೆ, ಅದರ ಒಳಗೆ, ಇರುವ ಲಕ್ಷಣವೇನು ಎಂದು ತಿಳಿಯಲು ಪ್ರಯತ್ನಿಸುವುದು, ಇದು ಹೀಗೆ ಏಕೆ ಇರಬೇಕು ಮತ್ತೊಂದು ರೀತಿ ಏಕೆ

ಇರಬಾರದು ಎಂದು ಕೇಳುವುದು, ಸಹಜವೇ ಆಗಿದೆ. ಯಾವುದನ್ನೂ ಪ್ರಯೋಗಮಾಡಿ ನೋಡೋಣ. ಸತ್ಯಸ್ಯ ಸತ್ಯಂ! ಯಾವುದು ಸತ್ಯದ ಮೇಲುಮುಸುಕಿನಲ್ಲಿ ಅಡಗಿರುವ ಸತ್ಯದ ತಿರುಳೋ ಅದು ಕೊನೆಗೆ ನಿಲ್ಲಲಿ; ಆಗಿಹೋಯಿತು ಎಂದು ಯಾವುದನ್ನೂ ವಹಿಸಿಕೊಳ್ಳದಿರೋಣ. ಅಂಥ ಶ್ರದ್ಧೆಯನ್ನು ಬಿಟ್ಟು ಸತ್ಯವನ್ನು ಹುಡುಕೋಣ. ಪೇಟೆಯಲ್ಲಿ ಒಂದು ಪದಾರ್ಥವನ್ನು ಕೊಳ್ಳತಕ್ಕವನು ಕೂಡ ಹತ್ತುಕಡೆ ವಿಚಾರಮಾಡುತ್ತಾನೆ. "ಆಚಾರ್ಯದೇವೋಭವ" ಎಂದೇ ನಾವು ಕುಳಿತುಕೊಳ್ಳಬೇಕಾದುದಿಲ್ಲ. ಅರ್ಥವಾದರೂ ಸರಿಯೇ, ಅರ್ಥವಾಗದಿದ್ದರೂ ಸರಿಯೇ, ಹಿರಿಯರು ಹೇಳಿದುದನ್ನು ನಾವೂ ಹೇಳಿಬಿಟ್ಟರೆ ಸಾಕು, ನಾವು ಪಾರಾಗುತ್ತೇವೆ ಎನ್ನುವ ಮನೋಧರ್ಮ ಬೇಡ. ಹಿರಿಯರು ಹೇಳಿದ ಮಾತೂ ಇರಲಿ, ನಾವೂ ವಿಚಾರ ಮಾಡೋಣ, ತಿಳಿದುಕೊಳ್ಳೋಣ, ತಿಳಿದು ನಡೆಯೋಣ, ಎನ್ನುವುದೇ ಪುನರುಜ್ಜೀವನದ ಲಕ್ಷಣ. ಅದರ ದೊಡ್ಡ ಲಕ್ಷಣ, ನಮ್ಮ ಆಚಾರ್ಯರಲ್ಲಿಯೇ ಅಲ್ಲದೆ ಹತ್ತುಮಂದಿ ಇತರ ಆಚಾರ್ಯರಲ್ಲಿಯೂ ಗೌರವ, ಸಹಾನುಭೂತಿ. ಒಂದು ಜೀವದ ಒಳಗಿನ ಬೀಜಕನ್ನು, ಚೈತನ್ಯವನ್ನು, ಚಿಮ್ಮುತ್ತಾ ಹೊಮ್ಮುತ್ತಾ ನಾನಾರೂಪವಾಗಿ ಅದು ಪ್ರವಹಿಸುವಂತೆ ಮತ್ತೆ ಎತ್ತಿ ಹಿಡಿದು ನಿಲ್ಲಿಸುವುದಕ್ಕೆ, ರಕ್ಷಿಸುವುದಕ್ಕೆ,—ಹಿರಿಯರಿಗೆ ದ್ರೋಹ ಮಾಡದೆ, ನಮಗೂ ದ್ರೋಹಮಾಡಿಕೊಳ್ಳದೆ, ಮುಂದೆ ಬರುವ ನಮ್ಮ ಮಕ್ಕಳಿಗೂ ದ್ರೋಹಮಾಡದೆ—ಸಮಾಜವನ್ನು ಮುಂದಕ್ಕೆ ತೆಗೆದುಕೊಂಡು ಹೋಗಿ ಅದರ ಒಳಗಿರುವ ಶಕ್ತಿಯನ್ನು ಪ್ರಚೋದನಗೊಳಿಸುವುದಕ್ಕೆ, ನಮ್ಮಿಂದ ಸಾಧ್ಯವಾದಷ್ಟು ಪ್ರಯತ್ನ ಮಾಡೋಣ; ಇದಕ್ಕೆ ತಕ್ಕ ಶಕ್ತಿಯನ್ನು ಕೊಡು ಶ್ರದ್ಧೆಯನ್ನು ಕೊಡು—ಎಂದೇ ನಾವು ಉಷಾದೇವಿಯನ್ನು, ಸರಸ್ವತೀದೇವಿಯನ್ನು ಪ್ರಾರ್ಥಿಸುವುದು. ಇದೇ ಪುನರುಜ್ಜೀವನ.

ಮಾತೃಭಾಷೆ, ದೇಶಭಾಷೆ

ಇನ್ನು ಇಂಡಿಯಾದೇಶದ ದೇಶಭಾಷೆಗಳ ಪುನರುಜ್ಜೀವನವನ್ನು ಕುರಿತು ವಿಚಾರಮಾಡೋಣ. ದೇಶಭಾಷೆ ಎಂದರೆ ಏನೆಂಬುದು ಎಲ್ಲರಿಗೂ ತಿಳಿದೇ ಇದೆ. ಇಂಗ್ಲಿಷಿನಲ್ಲಿ ಇದನ್ನು "Vernacular, Mother-tongue" ಎಂದು ಕರೆಯುತ್ತಾರೆ. "Vernacular" ಎಂದರೆ ಮನೆಯಲ್ಲಿ,

ನಾಡಿನಲ್ಲಿ ಆಡತಕ್ಕ ಮಾತು ಎಂದು ಅರ್ಥ: ಇದು ನಾಡ ನುಡಿ, ದೇಶ ಭಾಷೆ. "Mother-tongue" ಎಂದರೆ ತಾಯಿ ಆಡುವ ಭಾಷೆ, ತಾಯಿಯಿಂದ ಕಲಿತ ಭಾಷೆ, ತಾಯಿನುಡಿ, ಮಾತೃಭಾಷೆ. ದೇಶದಲ್ಲಿ ಒಂದೇ ಭಾಷೆ ಇದ್ದರೆ, ಅದು ಮಾತೃಭಾಷೆಯೂ ಹೌದು, ದೇಶ ಭಾಷೆಯೂ ಹೌದು. ದೇಶದಲ್ಲಿ ಮಾತೃಭಾಷೆಗಳು ಅನೇಕ ಇದ್ದರೂ ಇರಬಹುದು; ಬೇರೆಬೇರೆ ಭಾಷೆಯನ್ನಾಡುವ ಜನರು ನೆಲಸಿರಲು, ದೇಶಭಾಷೆ ನಾವು ತಾಯಿಯಿಂದ ಕಲಿತ ಭಾಷೆಯಾಗದಿದ್ದರೂ ದೇಶದಲ್ಲಿ ಹೆಚ್ಚು ಜನರು ಉಪಯೋಗಿಸುವ ಭಾಷೆಯಾಗುತ್ತದೆ. ಆಗ ಮನೆಯಲ್ಲಿ, ನಮ್ಮ ಜನರಲ್ಲಿ, ನಾವು ಮಾತೃಭಾಷೆಯನ್ನು ಆಡಿದರೂ, ಹೊರಗೆ, ಜನವ್ಯವಹಾರದಲ್ಲಿ ದೇಶಭಾಷೆಯನ್ನು ಆಡುತ್ತೇವೆ. ಇಲ್ಲದಿದ್ದರೆ ನಿರ್ವಾಹವಿಲ್ಲ. ಈ ಮಹತ್ವವನ್ನು ತಿಳಿದೇ ನಮ್ಮ ಹಿರಿಯರು 'ದೇಶಭಾಷೆ'ಯೆಂದರೇ ಹೊರತು ಮಾತೃಭಾಷೆಯೆನ್ನಲಿಲ್ಲ. ಮುಖ್ಯಾಂಶವೇನೆಂದರೆ, ಮಾತೃಭಾಷೆಯನ್ನಾಗಲಿ, ದೇಶಭಾಷೆಯನ್ನಾಗಲಿ ಕಷ್ಟಪಟ್ಟು ಶಾಲೆಯಲ್ಲಿ ಗುರುವಿನಲ್ಲಿ ಕಲಿತು ಆಡುವುದಿಲ್ಲ. ಹುಡುಗರಿಂದಲೇ ಬೆಳೆಯುತ್ತ ಸುತ್ತ ಮುತ್ತ ಆಡುವ ಜನಗಳಿಂದ ಸರಾಗವಾಗಿ ಕಲಿತು ಆಡುತ್ತೇವೆ. ಕನ್ನಡ ದೇಶದಲ್ಲಿ ಕನ್ನಡವೇ ದೇಶಭಾಷೆ. ನೂರರಲ್ಲಿ ಎಂಬತ್ತು ಜನರಿಗೆ ಇದೇ ಮಾತೃಭಾಷೆಯಾಗಿಯೂ ಇದೆ. ಮನೆಯಲ್ಲಿ, ನಾಡಿನಲ್ಲಿ ಆಡುತಾಡುತ ಕಲಿತು ಬಳಸತಕ್ಕುದು—ವ್ಯಾಕರಣ ಹೇಳಿಸಿಕೊಂಡು ಪ್ರಾರಂಭ ಮಾಡುವುದಲ್ಲ. ಇಂಡಿಯಾದೇಶಕ್ಕೆ ಹೀಗೆ ಒಂದೇ ದೇಶಭಾಷೆ ಇರಲಿಲ್ಲ; ಈಗಲೂ ಇಲ್ಲ. ಇದನ್ನು 'ಒಂದು ದೇಶ' ವೆಂದು ರೂಢಿಯಲ್ಲಿ ಕರೆದರೂ ವಾಸ್ತವವಾಗಿ ಇದು ಒಂದು ದೊಡ್ಡ ಖಂಡ. 'ಛಪ್ಪನ್ನೈವತ್ತಾರು ದೇಶಗಳು' ಎಂದು ಹಿಂದಿನವರು ಹೇಳುತ್ತಿದ್ದರು. ಮುಂದೆ ಸಂಯುಕ್ತ ರಾಜ್ಯಾಂಗ ವ್ಯವಸ್ಥೆ ಏರ್ಪಟ್ಟರೆ, ಆಗ ಇಂಡಿಯಾದೇಶ ಒಂದು ದೊಡ್ಡ ದೇಶವಾಗಿ ಕನ್ನಡ ಮುಂತಾದ ನಾಡುಗಳು ಆ ದೇಶದಲ್ಲಿನ ಒಳದೇಶಗಳಾಗುತ್ತವೆ, ಪ್ರಾಂತಗಳಾಗುತ್ತವೆ. ಪ್ರತಿಯೊಂದು ಒಳದೇಶಕ್ಕೂ ಒಂದು ಸರ್ಕಾರ ಏರ್ಪಡಬೇಕು; ಎಲ್ಲೆಕಟ್ಟು ನಿರ್ಣಯವಾಗಬೇಕು; ದೇಶಭಾಷೆ ಅಡಿಪಾಯವಾಗಬೇಕು. ಒಂದು ಕಾಲದಲ್ಲಿ ಕರ್ಣಾಟಕರಾಜ್ಯ ಪ್ರಬಲವಾದ ಒಂದು ರಾಜ್ಯವೆಂದು ಹೆಸರು ಪಡೆದಿತ್ತು. ಪ್ರಸಿದ್ಧರಾದ ಅನೇಕ ರಾಜರು, ಚಕ್ರವರ್ತಿಗಳು, ಅದನ್ನಾಳುತ್ತಿದ್ದರು.

ಈಗಿರುವ ಕರ್ಣಾಟಕದ ಬೇರೆ ಬೇರೆ ಭಾಗಗಳು ೧೦೦-೧೫೦ ವರ್ಷಗಳಿಂದೀಚೆಗೆ ಏರ್ಪಟ್ಟುವು. ಇವನ್ನು ಒಟ್ಟುಗೂಡಿಸಬೇಕು. ಕರ್ಣಾಟಕವನ್ನು ಮತ್ತೆ ಒಂದು ಪ್ರಾಂತವನ್ನಾಗಿ ಮಾಡಬೇಕು ಎನ್ನುವ ಚಳುವಳಿ ಪ್ರಾರಂಭವಾಗಿ ಸಾರ್ವಭೌಮ ಸರ್ಕಾರದವರೆಗೂ ಕೂಡ ಆಗಲೇ ಮುಟ್ಟಿ, ಅವರೂ ಕೂಡ ಹೀಗೆ ಮಾಡುವುದೇ ನ್ಯಾಯ, ದೇಶಭಾಷೆಯ ಆಧಾರದ ಮೇಲೆ ಪ್ರಾಂತ ನಿರ್ಮಾಣ ಮಾಡುವುದರಿಂದ ಸೌಕರ್ಯವುಂಟು ಎಂಬ ತತ್ವವನ್ನು ಒಪ್ಪಿರುತ್ತಾರೆ. ಕನ್ನಡದ ಬೇರನ್ನು ಕೊಯ್ದು, ಕನ್ನಡನಾಡನ್ನು ಒಂದುಗೂಡಿಸಬಹುದೆ? ನಾಡಿಗೆ ಆಗ ಕನ್ನಡತನವೆಲ್ಲಿ? ಇಂಗ್ಲಿಷಿನಲ್ಲಿಯೋ ಹಿಂದಿಯಲ್ಲಿಯೋ ಕೆಲಸ ನಡೆಯುವ ಹಾಗಾದರೆ ಬೇರೆ ಒಂದು ಕನ್ನಡ ನಾಡೇಕೆ? ಜನಸಾಮಾನ್ಯದಲ್ಲಿ ಇಂಗ್ಲಿಷೋ ಹಿಂದಿಯೋ ಹೆಚ್ಚಿ, ಕನ್ನಡ ಕುಗ್ಗಿದಷ್ಟೂ ಕನ್ನಡನಾಡಿನ ಭಾವವೇ ತೇಲಿಹೋಗುವುದಲ್ಲವೆ? ಹಿಂದೆ ಹಿರಿಯರು ಹಾಗಾಗಗೊಡಲಿಲ್ಲ. ನಾಡಿನಿಂದ ನುಡಿಯೂ, ನುಡಿಯಿಂದ ನಾಡೂ ಬಲವಾದುವು, ಭದ್ರವಾದುವು. ನಾಡನುಡಿ ಉನ್ನತ ಸ್ಥಾನದಲ್ಲಿತ್ತು, ಗೌರವಸ್ಥಾನದಲ್ಲಿತ್ತು. ದೇಶದಲ್ಲಿ ನಡೆಯಬೇಕಾದ ಕಾರ್ಯಗಳೆಲ್ಲವೂ ಆ ಭಾಷೆಯಲ್ಲೇ ನಡೆಯುತ್ತಿದ್ದುವು; ವಿದ್ಯಾಭ್ಯಾಸದ ಭಾಷೆ ಅದು, ರಾಜಕಾರ್ಯ ಸಂಸ್ಥೆಗಳಲ್ಲಿ ಉಪಯೋಗಿಸುವ ಭಾಷೆ ಅದು, ಜನಸಾಮಾನ್ಯದ ಭಾಷೆ ಅದು. ಕನ್ನಡನಾಡಿನ ದೇಶಭಾಷೆ ಕನ್ನಡ ಎಂಬ ಆಧಾರದ ಮೇಲೆಯೇ ಕನ್ನಡನಾಡು ಮತ್ತೆ ಹುಟ್ಟಬೇಕಾಗುತ್ತದೆ.

ರಾಜಭಾಷೆ ರಾಷ್ಟ್ರಭಾಷೆ

ಇಂಡಿಯಾಕ್ಕೆ ಹೀಗೆ ಒಂದು ದೇಶಭಾಷೆ ಬರಲಿಲ್ಲ. ರಾಜರ ಆಶ್ರಯದಿಂದಲೂ, ಮತಾಚಾರಗಳ ಭಕ್ತಿಯಿಂದಲೂ ಸಂಸ್ಕೃತ ಭಾಷೆ ವಿದ್ವನ್ಮಂಡಲಿಯಲ್ಲಿ ರಾಷ್ಟ್ರಭಾಷೆಯಾಗಿ ಗೌರವ ಸ್ಥಾನಕ್ಕೆ ಏರಿತು, ಬಹುಕಾಲ ಭಾರತ ಭೂಮಿಯನ್ನು ಒಂದುಗೂಡಿಸಿತು. ದೇಶಭಾಷೆಗಳ ಮೇಲೆಲ್ಲಾ ಆಧಿಪತ್ಯವನ್ನು ನಡಸಿತು, ಕೆಲವು ಕಾಲ ಪಾರ್ಸಿಭಾಷೆ, ಈಚೆಗೆ ಇಂಗ್ಲಿಷ್ ಭಾಷೆ ಈ ರೀತಿ ರಾಜರ ಭಾಷೆಯಾಗಿಯೂ ರಾಷ್ಟ್ರಭಾಷೆಯಾಗಿಯೂ ಸಂಸ್ಕೃತದ ಸ್ಥಾನಕ್ಕೆ ಬಂದುವು. ಗಣ್ಯರೂ, ವಿದ್ಯಾವಂತರೂ ಆದ ಜನರೆಲ್ಲಾ ಈ ರಾಷ್ಟ್ರಭಾಷೆಗಳನ್ನು ಕಲಿಯುತ್ತಾ ಆಡುತ್ತಾ ರಾಷ್ಟ್ರದಲ್ಲಿ ನಡೆಯುವ ಕೆಲಸಗಳಿಗೆಲ್ಲಾ ಇವನ್ನೇ ಉಪಯೋಗಿಸುತ್ತಾ ಬಂದರು. ಆದರೆ ರಾಷ್ಟ್ರಭಾಷೆಯ ಹೆಸರಿನಲ್ಲಿ ದೇಶಭಾಷೆ

ಯನ್ನು ತಿರಸ್ಕರಿಸಲಿಲ್ಲ, ಕಳೆಯಲಿಲ್ಲ; ಅದಕ್ಕೆ ಬದಲು ಅದನ್ನು ಹೆಚ್ಚಿಸಿದರು; ಪುಷ್ಟಿಗೊಳಿಸಿದರು. ಜನರೆಲ್ಲಾ ರಾಷ್ಟ್ರಭಾಷೆಯನ್ನು ಕಲಿಯಿರಿ, ಎನ್ನಲಿಲ್ಲ; ಮುಂದಾಳುಗಳು, ಮುಖಂಡರು, ಮೇಧಾವಿಗಳು ಮಾತ್ರ ಕಲಿತರು.

ಭಾಷೆಯ ಮಹತ್ವ

ಈಗ ಭಾಷಾದೃಷ್ಟಿಯಿಂದ ಕನ್ನಡ ಮಕ್ಕಳ ಸ್ಥಿತಿ ಏನಾಗಿದೆ ನೋಡಿ. ಕನ್ನಡನಾಡಿನಲ್ಲಿ ಮಾತೃಭಾಷೆಗಳು ಕನ್ನಡ, ತಮಿಳು, ತೆಲುಗು, ಮರಾಠಿ, ಹಿಂದೂಸ್ಥಾನಿ ಮುಂತಾದುವು; ನಾಡಭಾಷೆ ಕನ್ನಡ; ರಾಜಭಾಷೆ, ಮೈಸೂರು ಮಹಾರಾಜರ ಭಾಷೆಯೆಂದರೆ, ಕನ್ನಡ; ಬ್ರಿಟಿಷ್ ಸರ್ಕಾರದನ್ನು ನೆನೆದುಕೊಂಡರೆ, ಇಂಗ್ಲಿಷ್. ರಾಷ್ಟ್ರಭಾಷೆಯೂ ಇಂಗ್ಲಿಷೇ; ಇನ್ನು ಮೇಲೆ ಹಿಂದಿಯಾಗಬೇಕೆಂಬ ಘೋಷಣೆ, ಪ್ರಯತ್ನ. ಹೀಗಾಗಿ ಕನ್ನಡ ಮಕ್ಕಳು ವಿಮರ್ಶಿಸಬೇಕಾಗಿ ಬಂದಿರುವ ಪ್ರಶ್ನೆ—ಯಾವ ಭಾಷೆಯನ್ನು ನಾವು ಬಲವಾಗಿ ಹಿಡಿಯಬೇಕು, ಎಂಬುದು; ನಮ್ಮ ಪುನರುಜ್ಜೀವನಕ್ಕೆ ಯಾವ ಭಾಷೆ ಮಹತ್ವವುಳ್ಳದ್ದು, ಬೆಲೆಯುಳ್ಳದ್ದು ಎಂಬುದು. ಒಳ್ಳೆಯದು: ಈ ತೊಡಕನ್ನು ಬಿಡಿಸುವುದಕ್ಕೆ, ಭಾಷೆಗೆ ಕಾರ್ಯಕ್ಷೇತ್ರವೆಲ್ಲಿ? ಮನುಷ್ಯರ ಜೀವನದಲ್ಲಿ ಅದರ ಮಹತ್ತ್ವ, ಫಲ, ಕಾಣಿಸಿಕೊಳ್ಳತಕ್ಕದ್ದು ಎಲ್ಲಿ? ಎಂದು ವಿಚಾರ ಮಾಡೋಣ. ಭಾಷೆ ನಮ್ಮ ನಿತ್ಯಗಟ್ಟಳೆಯ ವ್ಯವಹಾರಕ್ಕೆ ಉಪಯೋಗವಾಗುವಷ್ಟಾದರೆ ಸಾಕೆ? ಅಥವಾ, ಅದರಿಂದ ಹೆಚ್ಚಾಗಿ ಇನ್ನೇನನ್ನಾದರೂ ನಿರೀಕ್ಷಿಸುವುದಿದೆಯೆ? ಭಾಷೆ, ಅಂಗಡಿಗೆ ಹೋಗಿ ವ್ಯಾಪಾರಮಾಡುವುದಕ್ಕೆ ಮಾತ್ರ ಸಾಧನವಾಗಿರುವ ಪಕ್ಷದಲ್ಲಿ ಯಾವ ಅಶುದ್ಧ ಭಾಷೆಯನ್ನಾಗಲಿ ಇಟ್ಟುಕೊಂಡರೆ ಸಾಕಾಗಿದೆ; ಅಥವಾ ನಾನಾ ಭಾಷೆಗಳು ಸೇರಿರುವ ಒಂದು ಮಿಶ್ರಭಾಷೆಯನ್ನು ಬಳಸಿದರೂ ಸಾಕಾಗಿದೆ! ನಮ್ಮ ಜೀವನದ ನಿತ್ಯಗಟ್ಟಳೆಯ ವ್ಯವಹಾರಕ್ಕೆ ಇಂಥ ಭಾಷೆಯೇ ಇರಬೇಕು, ಹೀಗೇ ಇರಬೇಕು ಎಂಬ ನಿರ್ಬಂಧವೇನೂ ಇಲ್ಲ. ಕೆಲವು ಸಂದರ್ಭಗಳಲ್ಲಿ ಭಾಷೆ ತಿಳಿಯದಿದ್ದರೂ ಅಭಿನಯದಿಂದಲೇ ಕೆಲಸ ಮಾಡಿಕೊಂಡು ಹೋಗಬಹುದು. ರಾಜಭಾಷೆಯಾಗಲಿ ರಾಷ್ಟ್ರಭಾಷೆಯಾಗಲಿ, ಮಾತೃಭಾಷೆಯಾಗಲಿ, ನಾವು ಬಳಸತಕ್ಕ ಯಾವ ಭಾಷೆಯೇ ಆಗಲಿ ಪೇಟೆಗೆ ಹೋಗಿ ವ್ಯಾಪಾರ ಮಾಡುವುದಕ್ಕೆ, ಕಾಗದ ಬರೆಯುವುದಕ್ಕೆ, ಪ್ರತಿ ದಿನದ ಕಾರ್ಯಾಚರಣೆಗೆ, ಒದಗಿದರೆ ಸಾಲದು. ಭಾಷೆಯಿಂದ ಜನರ ಜೀವನ

ಮೇಲ್ಪಟ್ಟು, ಅವರ ವಿಚಾರಶಕ್ತಿ ಹೆಚ್ಚಿ, ಅವರ ಜೀವನದಲ್ಲಿ, ಒಟ್ಟು ಜನಾಂಗದ ಜೀವನದಲ್ಲಿ, ಒದಗಬಹುದಾದ ಸಮಸ್ಯೆಗಳು ಪಾರಾಗಿ ಜನತೆಯೂ ದೇಶವೂ ಸ್ವರ್ಗಪಥಕ್ಕೆ ಹಾರುವ ಪಕ್ಷಿಯಂತೆ ಮೇಲಕ್ಕೆ ಮೇಲಕ್ಕೆ ಹೋಗಲು ಸಾಧಕವಾಗಬೇಕು. ಹಿರಿಯರ, ತೇಜಸ್ವಿಗಳ, ಹಿಂದಿನ, ಮುಂದಿನ ಸಾಹಿತ್ಯವನ್ನು, ಆನಂದವನ್ನೂ ಶ್ರೇಯಸ್ಸನ್ನೂ ಬೀರುವ ಸರಸ್ವತೀ ಪ್ರಸಾದದಿಂದ ಹುಟ್ಟಿದ ಸಾಹಿತ್ಯವನ್ನು, ಒಳಕೊಂಡಿರಬೇಕು. ಭಾಷೆ ಜನಜೀವನದಲ್ಲಿ ಅತ್ಯುತ್ತಮವಾದ, ಅತಿ ಪ್ರಧಾನವಾದ ಒಂದು ಸ್ಥಾನವನ್ನು ಪಡೆದಿದೆ. ಭರತಖಂಡದಲ್ಲಿ ಒಂದು ಭಾಗವಾಗಿರುವ ನಾವು—ಕನ್ನಡಿಗರು-ಯಾವ ಭಾಷೆಯನ್ನು ಎತ್ತಿ ಹಿಡಿಯಬೇಕು? ಸಾವಿರಾರು ವರ್ಷಗಳಿಂದ ನಮ್ಮ ರಕ್ತದಲ್ಲಿ ಬೆರೆತು ನಮ್ಮ ಬೆಳವಣಿಗೆಗೆ ಕಾರಣವಾಗಿ ಒಂದು ಒಳ್ಳೆಯ ದಾರಿಯಲ್ಲಿ ನಮ್ಮನ್ನು ಮುಂದಕ್ಕೆ ತೆಗೆದುಕೊಂಡು ಹೋಗುತ್ತಿರುವ ಕನ್ನಡ ಭಾಷೆಯನ್ನು ನಂಬಿ ಅದನ್ನು ಹಿಡಿಯಬೇಕೆ? ಅಥವಾ, ಬೇರೊಂದು ಭಾಷೆಯನ್ನು, ಬೇರೊಂದು ಸತ್ವವನ್ನು ಬಯಸಿ ಅತ್ತಕಡೆ ಮನಸ್ಸು ಕೊಡಬೇಕೆ? ಯಾವುದು ಉತ್ತಮವೋ ಅದನ್ನು ಮಾಡಲು ಅಡ್ಡಿಯಿಲ್ಲ. ಗಾಳಿ ಬಂದು ತೂರುವಾಗ ಜೊಳ್ಳಾಗಿರುವುದು ಹೋಗುತ್ತದೆ: ಅದಕ್ಕಾಗಿ ವ್ಯಥೆಪಡಬೇಕಾದುದಿಲ್ಲ. ಯಾವುದನ್ನೂ ತೂಕಮಾಡಿ, ವಿಮರ್ಶೆಮಾಡಿ, ಯಾವುದು ಉತ್ತಮ, ಯಾವುದು ಉತ್ತಮವಲ್ಲ, ಯಾವುದು ಹಿತ, ಯಾವುದು ಅಹಿತ, ಎನ್ನುವುದನ್ನು ವಿಚಾರಮಾಡಿ, ಹಿರಿಯರಿಗೂ ದ್ರೋಹಮಾಡದೆ, ನಮಗೂ ಕೆಟ್ಟದಾಗದೆ ಇರುವಂತೆ ಮುಂದಿನ ಏಳಿಗೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಹೇಗೆ ತೀರ್ಮಾನಮಾಡಿದರೂ ಒಪ್ಪತಕ್ಕದ್ದಾಗಿದೆ. ಕನ್ನಡ ಭಾಷೆಯನ್ನು ದೇಶಭಾಷೆಯ ದೃಷ್ಟಿಯಿಂದ ಎತ್ತಿ ನಿಲ್ಲಿಸಬೇಕೆ, ಪುನರುಜ್ಜೀವನ ಸಫಲತೆಯ, ಭಾಷಾಮಹತ್ವದ, ದೃಷ್ಟಿಯಿಂದ ಎತ್ತಿ ನಿಲ್ಲಿಸಬೇಕೆ, ಅಥವಾ ಮತ್ತಾವುದಾದರೂ ದೃಷ್ಟಿಯಿಂದ ಬಿಟ್ಟೇಬಿಡಬೇಕೆ ಎನ್ನವುದನ್ನು ಕನ್ನಡ ಮಹಾಜನರು ಸಾವಧಾನವಾಗಿ ಪರಿಶೀಲನೆಮಾಡಬೇಕು.

ದೇಶಭಾಷೆ—ಹೂಣಭಾಷೆ

ಭಾಷೆಗಳನ್ನು ಇನ್ನೊಂದು ವಿಧವಾಗಿ "classical" ಮತ್ತು "Vernacular" ಎಂದು ಎರಡು ಭಾಗ ಮಾಡಿರುವುದು ಎಲ್ಲರೂ ಬಲ್ಲ ಸಂಗತಿ. "Vernacular" ಎಂದರೆ ದೇಶಭಾಷೆಗಳು: ಈಗ ಜನ

ಸಾಮಾನ್ಯದಲ್ಲಿ ಪ್ರಚಾರದಲ್ಲಿರತಕ್ಕವು. "Classical" ಎಂದರೆ ಶ್ರೇಷ್ಠಭಾಷೆಗಳು, ಹಿಂದೆ ದೊಡ್ಡ ಜನಾಂಗಗಳು ಆಡುತ್ತಿದ್ದ ಭಾಷೆಗಳು : ಅವುಗಳಲ್ಲಿರುವ ಉತ್ತಮ ಸಾಹಿತ್ಯಕ್ಕಾಗಿ ಕಷ್ಟಪಟ್ಟು ನಾವು ಇನ್ನೂ ಕಲಿತು ಗೌರವಿಸುತ್ತಿರುವುವು. ನಮ್ಮಲ್ಲಿ ಸಂಸ್ಕೃತ, ಅರಾಬಿಕ್, ಪರ್ಷಿಯನ್ : ಪಾಶ್ಚಾತ್ಯರಲ್ಲಿ ಗ್ರೀಕ್, ಲ್ಯಾಟಿನ್, ಹೀಬ್ರು ಮುಂತಾದುವು ಇಂತಹ ಶ್ರೇಷ್ಠ ಭಾಷೆಗಳು. ಹಿಂದೆ ಸಣ್ಣ ಸಣ್ಣ ರಾಜ್ಯಗಳಲ್ಲಿ ಒಂದೇ ಜಾತಿ, ಮತ, ರೀತಿ, ನೀತಿ, ಇವುಗಳಿದ್ದು ವ್ಯವಹಾರಕ್ಕಾಗಿ ಒಂದೇ ಭಾಷೆಯನ್ನು ಉಪಯೋಗಿಸುತ್ತಿದ್ದು, ಕಾಲಕ್ರಮದಲ್ಲಿ ಅವರು ಪ್ರವರ್ಧಮಾನಸ್ಥಿತಿಗೆ ಬಂದಹಾಗೆಲ್ಲ ಅವರಲ್ಲಿ ದೊಡ್ಡ ಸಾಹಿತ್ಯ ಹುಟ್ಟಿ ಮತಗ್ರಂಥ, ಧರ್ಮವಿಚಾರ, ಸತ್ಯಾನ್ವೇಷಣ, ಉಪನಿಷತ್ತು, ಪುರಾಣಕಥೆಗಳು, ಇತಿಹಾಸಗಳು, ಚರಿತ್ರೆಗಳು, ನಾಟಕ, ಕಾವ್ಯ, ಮುಂತಾದುವು ನಮ್ಮವರೆಗೂ ಉಳಿದುಬಂದಿವೆ. ಹಾಗಿದ್ದ ಕಾಲದಲ್ಲಿ ಒಂದೊಂದು ಭಾಷೆಯವರೂ ತಮ್ಮ ಭಾಷೆಯೇ ಶ್ರೇಷ್ಠವಾದುದು, ದೇವಭಾಷೆ : ಮಿಕ್ಕೆಲ್ಲರ ಭಾಷೆಗಳೂ ಮ್ಲೇಚ್ಛಭಾಷೆಗಳು, ಹೂಣಭಾಷೆಗಳು ಎಂದು ಕರೆದಿದ್ದಾರೆ. ಈಗ ಕೆಲವು ದಿನಗಳ ಹಿಂದೆ ಒಬ್ಬ ಮಹನೀಯರು ಕನ್ನಡ ಭಾಷೆಯನ್ನು ಹೂಣ ಭಾಷೆಯೆಂದು ಕರೆದು ಅದಕ್ಕೆ ಶಾರದಾತನಯನ ಸಾಕ್ಷ್ಯವಿದೆಯೆಂದು ತೋರಿಸಿರುತ್ತಾರೆ. ಇನ್ನು ಆ ಕಾಲದಲ್ಲಿ ಕೇಳಬೇಕೆ ? ಗ್ರೀಕರು ಪರ್ಷಿಯಾದೇಶದ ಜನರನ್ನು "Barbarians" ಎಂದು ಕರೆದಿದ್ದಾರೆ. ಈಸ್ಕಲಿಸ್ ಎಂಬ ಗ್ರೀಕ್ ಕವಿ ತಾನು ಬರೆದಿರುವ 'ಪರ್ಷಿಯನ್ಸ್' ಎಂಬ ನಾಟಕದಲ್ಲಿ ಒಬ್ಬ ಪರ್ಷಿಯಾದೇಶದವನ ಬಾಯಲ್ಲೇ ಆ ಹೆಸರನ್ನು ಹೇಳಿಸಿಬಿಟ್ಟಿದ್ದಾನೆ. ಈ ಬಗೆಯ ನಡತೆ ಅಜ್ಞಾನದ ಫಲ, ಇಲ್ಲವೇ ಮಿತಿಮೀರಿದ ಸ್ವಜನಾಭಿಮಾನದ ಫಲ. "ಉದಾರ ಚರಿತಾನಾಂ ತು ವಸುಧೈವ ಕುಟುಂಬಕಂ" ಎನ್ನುವಷ್ಟು ವಿಶಾಲವಾದ ಮನೋವೃತ್ತಿ ಎಲ್ಲಿ ! ನಮ್ಮ ಜನವೇ ಜನ, ನಮ್ಮ ಭಾಷೆಯೇ ಭಾಷೆ, ಎನ್ನುವ ಸಂಕುಚಿತ ವೃತ್ತಿ ಎಲ್ಲಿ ! ಇರಲಿ. ಆ ಕಾಲದಲ್ಲಿ ಭಾಷೆಯ ವಿಷಯದಲ್ಲಿ ಜನರಿಗೆ ಈ ಅಭಿಪ್ರಾಯವಿದ್ದುದರಿಂದ ತಮ್ಮ ಭಾಷೆಯ ಮೇಲಿನ ಮಮತೆಯೂ ವಿಶ್ವಾಸವೂ ಒಂದು ವಿಧದಲ್ಲಿ ಹೆಚ್ಚುವುದಕ್ಕೆ ಅವಕಾಶವಾಯಿತು. ಈಚೆಗೆ ಶ್ರದ್ಧೆಯೂ ಅಂಧಶ್ರದ್ಧೆಯೂ ಈ ಮನೋಭಾವವನ್ನು ಹೆಚ್ಚಿಸಿದುವು. ಈ ರೀತಿ ನಮ್ಮ ದೇಶದಲ್ಲಿ ಉಚ್ಚಸ್ಥಾನದಲ್ಲಿ ನಿಂತಿರುವ

ಭಾಷೆ ಸಂಸ್ಕೃತ. ಒಂದು ಕಾಲದಲ್ಲಿ ಇದೇ ಆರ್ಯಾವರ್ತದಲ್ಲಿ ಮಾತೃಭಾಷೆ, ದೇಶಭಾಷೆ, ರಾಜಭಾಷೆ, ರಾಷ್ಟ್ರಭಾಷೆ, ದೇವಭಾಷೆ ಎಲ್ಲಾ ಆಗಿತ್ತು. ನಮ್ಮ ಭಾರತಭೂಮಿಯಲ್ಲಿರತಕ್ಕವರು ಮೋಕ್ಷವನ್ನು ಹೊಂದುವುದು, ಹೊಂದುವೆವೆಂದು ನಂಬಿರುವುದು ಈ ಭಾಷೆಯ ಮೂಲಕ. ಇನ್ನುಳಿದ ಭಾಷೆಗಳು—ಕನ್ನಡ, ತಮಿಳು ಮುಂತಾದ ಭಾಷೆಗಳು—ದೇವಭಾಷಾಭಿಮಾನಿಗಳಿಗೆ ಹೂಣಭಾಷೆಗಳಾದವು. ಸಂಸ್ಕೃತ ಆರ್ಯಭಾಷೆ, ದೇವಭಾಷೆ; ನಮ್ಮ ಪುರಾಣಕಥೆಗಳು, ಮತಗ್ರಂಥಗಳು, ಸಾರಸಿದ್ಧಾಂತಗಳು ಇರುವುದು ಈ ಭಾಷೆಯಲ್ಲಿ; ಕರ್ಮಾನುಷ್ಠಾನಗಳು ನಡೆಯಬೇಕಾದರೆ ಈಗಲೂ ಈ ಭಾಷೆಯಲ್ಲಿ; ಒಟ್ಟಿನ ಮೇಲೆ ಭಗವಂತನು ತನ್ನ ಬೆಳಕನ್ನು ನಮ್ಮಮೇಲೆ ಬೀರಿರುವುದು, ತನ್ನ ಅಮೃತವಾಣಿಯಿಂದ ನಮಗೆ ಮಾರ್ಗ ತೋರಿಸಿರುವುದು, ಈ ಭಾಷೆಯಲ್ಲಿ. ಮಿಕ್ಕ ದೇಶಗಳಲ್ಲಿಯೂ ಹೀಗೆಯೇ; ತಮ್ಮ ತಮ್ಮ ಭಾಷೆ ತಮತಮಗೆ ದೊಡ್ಡದಾಗಿರುತ್ತದೆ. ಯೆಹೂದ್ಯರಿಗೆ ದೇವಭಾಷೆ ಹೀಬ್ರೂ; ದೇವರು ಆ್ಯಡಂ ಮತ್ತು ಈವ್ ಇವರನ್ನು ಸೃಷ್ಟಿಮಾಡಿ ಇಲ್ಲಿಗೆ ಕಳುಹಿಸಿದಾಗ ಅವರೊಡನೆ ಬಂದ ಭಾಷೆ ಇದು. ಈ ಹೀಬ್ರೂ ಭಾಷೆಯೆ ಕಾಲಕ್ರಮದಲ್ಲಿ ರೂಪಾಂತರಹೊಂದಿ, ಈಗ ಆಡತಕ್ಕ ಇತರ ಭಾಷೆಗಳಾಗಿವೆ. ಈಗಲೂ ಈ ಭಾಷೆಗಳನ್ನಾಡುವ ಜನರು ಕೆಲವರಿದ್ದಾರೆ. ಹೀಗೆಯೇ ಗ್ರೀಕ್, ಲ್ಯಾಟಿನ್, ಪರ್ಷಿಯನ್ ಮುಂತಾದ ಭಾಷೆಗಳೆಲ್ಲಾ ಅವರವರಿಗೆ "ದೇವಭಾಷೆ"ಯ ಪೂಜ್ಯ ಸ್ಥಾನದಲ್ಲಿರುತ್ತವೆ.

ಭಾಷೆಗಳ ಮೇಲಾಟ

ಹೀಗೆ ಮಾತೃಭಾಷೆ, ದೇಶಭಾಷೆ, ರಾಷ್ಟ್ರಭಾಷೆ, ದೇವಭಾಷೆ—ಈ ಭಾಷೆಗಳ ಮೇಲಾಟದಲ್ಲಿ ಕನ್ನಡಿಗನು ಯಾವ ಭಾಷೆಯನ್ನು ಹಿಡಿದು ಕೃತಾರ್ಥನಾಗಬೇಕು ಎಂದು ಯೋಚನೆಮಾಡುವಾಗ ಅವನ ಮುಂದೆ ನಾಲ್ಕು ಭಾಷೆಗಳು ಬಂದು ನಿಲ್ಲುತ್ತವೆ: ಮೊದಲನೆಯದು ಸಂಸ್ಕೃತ, ಹಿಂದಿನಿಂದಲೂ ಈ ದೇಶದಲ್ಲಿ ಪೂಜ್ಯಸ್ಥಾನದಲ್ಲಿರುವುದು; ಕನ್ನಡಭಾಷೆಗೆ ಬಹುಕಾಲ ನಾನಾ ಬಗೆಯ ಚೈತನ್ಯವನ್ನು ತುಂಬಿ ನೂತನ ಮಾರ್ಗಗಳನ್ನು ಕಲ್ಪಿಸಿಕೊಟ್ಟಿರುವುದು. ಅನೇಕ ಮಹನೀಯರು ತಮ್ಮ ಜೀವಮಾನವನ್ನೆಲ್ಲಾ ಇದಕ್ಕಾಗಿ ಧಾರೆಯೆರೆದು ಪುಷ್ಟವಾಗಿ ಮಾಡಿರುವ ಭಾಷೆ ಇದು. ಈಗಲೂ

ಕೊಂಡ ಇದರಮೇಲೆ ಹೆಚ್ಚು ವಿಶ್ವಾಸ, ಹೆಚ್ಚು ಮಮತೆ, ಇರುವ ಜನರು ಈ ಭಾಷೆಯಲ್ಲೇ ಮಾತನಾಡಿದರೂ ಆಡಬಹುದಾಗಿದೆ. ಆದ್ದರಿಂದ ಇದನ್ನೆ ಸುಲಭಗೊಳಿಸಿ ಭರತಖಂಡಕ್ಕೆ ಮತ್ತೊಮ್ಮೆ ಏಕೆ ರಾಷ್ಟ್ರಭಾಷೆಯನ್ನಾಗಿ ಏಕೆಮಾಡಬಾರದೆಂದು ಕೇಳಿದರೂ ಕೇಳಬಹುದು. ಆದರೆ, ಎಲ್ಲ ಕನ್ನಡಿಗರೂ ಸಂಸ್ಕೃತಭಾಷೆಯನ್ನೇ ಅಭ್ಯಾಸಮಾಡಿ ಅದರಿಂದಲೇ ಎಲ್ಲಾ ವಿಷಯಗಳನ್ನು ತಿಳಿದುಕೊಳ್ಳುವುದು, ಆ ಭಾಷೆಯಿಂದಲೇ ತಮ್ಮ ಏಳಿಗೆಯನ್ನು ಸಾಧಿಸಿಕೊಳ್ಳುವುದೂ ಎಷ್ಟುಮಟ್ಟಿಗೆ ಸಾಧ್ಯ ? ಇನ್ನು ಎರಡನೆಯದಾಗಿ, ಸದ್ಯದಲ್ಲಿ ಸಂಸ್ಕೃತಕ್ಕಿಂತಲೂ ಕೆಲವು ಬಗೆಗಳಲ್ಲಿ ಒಂದು ಕೈಮೀರಿ ನಮ್ಮ ವಿಶ್ವಾಸವನ್ನು ಪಡೆದಿರುವುದು, ರಾಜಭಾಷೆಯೂ ರಾಷ್ಟ್ರಭಾಷೆಯೂ ಆಗಿರತಕ್ಕ ಇಂಗ್ಲಿಷ್ ಭಾಷೆ. ಇದುವರೆಗೂ ಇದು ಒಂದು ರೀತಿಯಲ್ಲಿ ನಡೆದುಕೊಂಡು ಬಂತು, ದೇಶದಲ್ಲೆಲ್ಲಾ ತಕ್ಕಮಟ್ಟಿಗೆ ಹರಡಿತು, ಅನೇಕರ ಹೃದಯದಲ್ಲಿ ಸ್ಥಾಪಿತವಾಯಿತು; ಒಂದು ರೀತಿಯಲ್ಲಿ ಇದರಿಂದ ನಮಗೆ ಸೌಕರ್ಯವೂ ಸಹಾಯವೂ ಉಂಟಾಯಿತು.—ಪ್ರಾಪಂಚಿಕ ವಿಷಯಗಳಲ್ಲಿ ಮಾತ್ರವೇ ಅಲ್ಲ, ಆತ್ಮ ವಿಚಾರದಲ್ಲಿಯೂ ಎಂದು ಹೇಳಿದರೂ ಹೇಳಬಹುದಾಗಿದೆ. ಈಗ ಭಾರತ ಭೂಮಿಯಲ್ಲಿ ಜ್ವಲಿಸುತ್ತಿರುವ ಹೊಸ ಜೀವನ ಧ್ಯೇಯಗಳೂ ಆದರ್ಶಗಳೂ ಈ ಭಾಷೆಯ, ಈ ಸಾಹಿತ್ಯದ, ಪ್ರೇರಣೆಯಿಂದಲೇ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಈ ಸಂಪರ್ಕ, ಮತ್ತು ಈ ಸಂಪರ್ಕದಿಂದುಂಟಾದ ನಮ್ಮ ಪುರಾತನ ಚರಿತ್ರೆಯ, ಸಂಸ್ಕೃತಿಯ ಜ್ಞಾನ, ಹೆಮ್ಮೆ—ಇವೆಲ್ಲಾ ತಾನೇ ನಮ್ಮ ಪುನರುಜ್ಜೀವನ. ಮೂರನೆಯದು, **ಕನ್ನಡ**: ನಮ್ಮ ಕನ್ನಡ, ನಮ್ಮ ಹಿರಿಯರ ಕನ್ನಡ. ನಮ್ಮ ಮಕ್ಕಳ ಮೊಮ್ಮಕ್ಕಳ ಕನ್ನಡ. ಈ ಭಾಷೆಯ ವಿಷಯದಲ್ಲಿ ತಮಗೆ ತೃಪ್ತಿಯಾಗುವ ಹಾಗೆ, ನನಗೆ ತೃಪ್ತಿಯಾಗುವ ಹಾಗೆ ನಾನೇನು ಹೇಳಬಲ್ಲೆ ? ಈಗ ಈ ಮೂರರ ಜೊತೆಗೆ ನಾಲ್ಕನೆಯದೊಂದು—ಹಿಂದೀ ಭಾಷೆ ಪ್ರವೇಶಮಾಡುತ್ತಿದೆ: ಮೇಲಾಟಕ್ಕೂ ಹೋರಾಟಕ್ಕೂ ನಿಂತಿದೆ. ಈ ಭಾಷೆ ಭಾರತ ಭೂಮಿಯಲ್ಲಿ ರಾಷ್ಟ್ರಭಾಷೆಯಾಗಬೇಕೆಂಬ ಮಾತು ಹೆಚ್ಚು ಹೆಚ್ಚಾಗಿ ಕೇಳಬರುತ್ತಿದೆ. ಇದು ಹಲವರಿಗೆ ಮಾತೃಭಾಷೆಯಾಗಿರಬಹುದು; ಹಲವು ಪ್ರದೇಶಗಳಲ್ಲಿ ದೇಶಭಾಷೆಯಾಗಿರಬಹುದು; ರಾಜ

ಭಾಷೆಯಂತೂ ಸಮ್ಮತವೇ ಇಲ್ಲ. ದೇವಭಾಷೆಯೆಂದು ಭಾರತೀಯರು ಯಾರೂ ಹೇಳುವಹಾಗಿಲ್ಲವೆಂದು ತೋರುತ್ತದೆ. 'ಇಂಗ್ಲಿಷ್ ಭಾಷೆ ಪರಭಾಷೆ, ಕಷ್ಟಭಾಷೆ, ನಮ್ಮ ಸಂಸ್ಕೃತಿಯನ್ನು ಹಾಳುಮಾಡುವ ದುಷ್ಟಭಾಷೆ, ನಮ್ಮ ದಾಸ್ಯದ ಚಿಹ್ನೆ: ಇದನ್ನು ಹೊರಕ್ಕೆ ಅಟ್ಟಿ, ಅದರ ಸ್ಥಾನದಲ್ಲಿ ಹಿಂದಿಯನ್ನು ನಿಲ್ಲಿಸಬೇಕು' ಎಂಬುದು ಕೆಲವರ ಧ್ಯೇಯ. ಇಂಗ್ಲಿಷಿಗೆ ಬದಲು ಹಿಂದಿ ರಾಷ್ಟ್ರಭಾಷೆಯಾಗಬೇಕು, ಭಾರತಭೂಮಿಯೆಲ್ಲಾ ಇದಕ್ಕೆ ಕ್ಷೇತ್ರವಾಗಬೇಕು, ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಇರುವ ಜನರೆಲ್ಲರೂ—ಹೆಂಗಸರು, ಗಂಡಸರು, ಮಕ್ಕಳು ಎಲ್ಲರೂ—ಈ ಒಂದು ಭಾಷೆಯನ್ನಾಡುವವರಾಗಿ ಐಕಮತ್ಯವನ್ನು ಸಂಪಾದಿಸಿ, ರಾಷ್ಟ್ರಕಾರ್ಯಗಳಲ್ಲಿ ಒಂದಾಗಿ ಸೇರಬೇಕು, ಸಂಸ್ಕೃತ ಇಂಗ್ಲಿಷ್ ಮಾಡದ ಕೆಲಸವನ್ನು ಹಿಂದಿ ಮಾಡಬೇಕು ಎಂಬುದು ಅವರ ಆಸೆ! ಅಂತೂ ಈ ನಾಲ್ಕು ಭಾಷೆಗಳು ಈಗ ಕನ್ನಡಿಗರಾದ ನಮ್ಮ ಮುಂದೆ ನಿಂತಿವೆ. ಇವುಗಳಲ್ಲಿ ಯಾವುದನ್ನು ಎತ್ತಿ ಹಿಡಿಯಬೇಕು, ಕನ್ನಡನಾಡಿನಲ್ಲಿ ಮೊದಲನೆಯ ಸ್ಥಾನವನ್ನು ಯಾವುದಕ್ಕೆ ಕೊಡಬೇಕು, ಕನ್ನಡ ಜನರು ಪುನರುಜ್ಜೀವನದಿಂದ ಉದ್ಧಾರವಾಗಬೇಕಾದರೆ, ಕನ್ನಡನಾಡು ಭಾಷಾಪ್ರಾಂತವಾಗಿ ಒಕ್ಕಟ್ಟಾಗಬೇಕಾದರೆ, ಯಾವ ಭಾಷೆಯಿಂದ ಸಾಧ್ಯ, ಎನ್ನುವುದನ್ನು ವಿಚಾರಮಾಡಬೇಕು. ಜನರ ಮುಖಂಡರೂ ಮೇಧಾವಿಗಳೂ ಎಷ್ಟೇ ಭಾಷೆಗಳನ್ನು ಕಲಿಯಲಿ, ಜನಸಾಮಾನ್ಯವೂ, ಸರ್ವಜನವೂ ದೇಶಭಾಷೆಯನ್ನು ಆಡತಕ್ಕದ್ದೇ? ಇಲ್ಲ, ಅದನ್ನು ಕಿತ್ತು ಅದರ ಸ್ಥಳದಲ್ಲಿ ಭಾರತಭೂಮಿಯ ಹೆಸರನ್ನು ಹೇಳಿಕೊಂಡು ದಿಗ್ವಿಜಯಕ್ಕೆ ಬಂದಿರುವ ಬೇರೊಂದು ಭಾಷೆಯನ್ನು ಹೂಡತಕ್ಕದ್ದೇ? ಎಚ್ಚರಿಕೆಯಿಂದ ಯೋಜನೆಮಾಡಬೇಕು.

ಕನ್ನಡನಾಡಿಗೆ ಕನ್ನಡವೇ ಗತಿ

ಸಾಮಾನ್ಯವಾಗಿ ಪ್ರತಿಯೊಬ್ಬರಿಗೂ ತಮ್ಮ ತಮ್ಮ ಭಾಷೆಯ ವಿಷಯದಲ್ಲಿ ಹೆಮ್ಮೆ ಭಕ್ತಿ ಶ್ರದ್ಧೆಗಳು ಇದ್ದೇ ಇರುತ್ತವೆ. ಹೀಗಿರುವುದೇನೂ ತಪ್ಪಾಗಿ ಕಾಣುವುದಿಲ್ಲ. ಆದ್ದರಿಂದ, ಕನ್ನಡದ ಪರವಾಗಿ, ಕನ್ನಡದ ಮೇಲಿನ ಅಭಿಮಾನದಿಂದ, ನಾನು ಒಂದು ಮಾತನ್ನು ಹೇಳಿದ ಪಕ್ಷದಲ್ಲಿ ಅದನ್ನು ಸಂಕುಚಿತ ದೃಷ್ಟಿಯೆಂದು ಯಾರೂ ಹೇಳಬಾರದು: ಆ ಮಾತೇನೆಂದರೆ—

"ಕನ್ನಡ ನಾಡಿಗೆ ಕನ್ನಡವೇ ಗತಿ. ಅನ್ಯಥಾ ಶರಣಂ ನಾಸ್ತಿ." ಸಂಸ್ಕೃತವಲ್ಲ, ಇಂಗ್ಲಿಷಲ್ಲ, ಹಿಂದಿಯಲ್ಲ, **ಕನ್ನಡ.** ಈ ಕನ್ನಡ ಸಾವಿರಾರು ವರ್ಷಗಳಿಂದಲೂ ಬೆಳೆದುಕೊಂಡು ಬಂದಿರುವ ಭಾಷೆ, ಒಂದು ಸಾಹಿತ್ಯದ ವಿಷಯದಲ್ಲಿಯೇ ಆಗಲಿ, ಚರಿತ್ರೆಯ ವಿಷಯದಲ್ಲಿಯೇ ಆಗಲಿ, ಅಥವಾ ಸಂಸ್ಕೃತಿ ಧರ್ಮಕಲೆ ಮುಂತಾದ ಮತ್ತಾವ ವಿಷಯದಲ್ಲೇ ಆಗಲಿ, ಇತರ ಭಾಷೆಗಳವರು ಎಷ್ಟು ಅಭಿಮಾನ ಆಸಕ್ತಿಗಳನ್ನು ತೋರಿಸಬಹುದೋ ಅಷ್ಟೇ ಅಭಿಮಾನವನ್ನೂ ಆಸಕ್ತಿಯನ್ನೂ ಕನ್ನಡಿಗರು ಕನ್ನಡ ಭಾಷೆಯ ವಿಷಯದಲ್ಲಿ ತೋರಿಸುವುದಕ್ಕೆ ಅವಕಾಶವಿದೆಯೆಂದು ನಾನು ನಂಬಿದ್ದೇನೆ. ಕನ್ನಡಭಾಷೆಗೆ ಯಾವ ರೀತಿಯಲ್ಲಿಯೂ ಅಪಾಯ ತಟ್ಟದ ಹಾಗೆ ಕನ್ನಡನಾಡಿನಲ್ಲಿ ಅದಕ್ಕೆ ಪ್ರಧಾನಸ್ಥಾನವನ್ನು ಕೊಟ್ಟು ಭಗವಂತನು ನಮಗೆ ಕೊಟ್ಟಿರತಕ್ಕ ಬಲವನ್ನು—ಧನಬಲವನ್ನು ಮತ್ತು ಬುದ್ಧಿಬಲವನ್ನು, ಎರಡನ್ನೂ—ಅದಕ್ಕಾಗಿ ವಿನಿಯೋಗಿಸುವುದು ಕನ್ನಡಿಗರ ಕರ್ತವ್ಯ ಎಂದು ನಾನು ಭಾವಿಸಿದ್ದೇನೆ. ಇದನ್ನು ಪ್ರತಿಯೊಬ್ಬರೂ ವಿಚಾರಮಾಡಿ ಒಂದು ನೆಲೆಗೆ ಬರಬೇಕಾಗಿದೆ ಏಕೆಂದರೆ, ಪ್ರತಿಯೊಬ್ಬರೂ ಅವರವರ ಭಕ್ತಿ ಶ್ರದ್ಧೆಗಳಿಗನುಸಾರವಾಗಿ ಯೋಚನೆಮಾಡುವುದು ಸಹಜವೇ ಆಗಿದೆ. ಅವರವರ ಸ್ಥಿತಿಗತಿ ಉದ್ದೇಶ ಕಾರ್ಯಕ್ಷೇತ್ರ ಇವಕ್ಕೆ ಆವಶ್ಯಕವಾದಂತೆ, ಅಭಿರುಚಿಗೆ ತಕ್ಕಂತೆ, ಬೇರೆ ಯಾವ ಭಾಷೆಯನ್ನಾದರೂ ಕಲಿಯಬಹುದಾಗಿದೆ. ಭಾಷೆಗಳು ತಿಳಿದಷ್ಟೂ ಮನುಷ್ಯನಿಗೆ ಅಷ್ಟೂ ಅಷ್ಟು ಅನುಭವವೇ, ಜ್ಞಾನವೇ. ಬೇಡವೆಂದು ಹೇಳುವುದು ಹೇಗೆ ? ಇಂತಹ ವಿಷಯಗಳಲ್ಲಿ ಯಾರು ಯಾರನ್ನೂ ಬಲಾತ್ಕಾರಪಡಿಸುವಂತಿಲ್ಲ; ಬಲಾತ್ಕಾರದಿಂದ ಬಂದದ್ದು, ಅಥವಾ ತಡೆದದ್ದು, ಹೆಚ್ಚು ಕಾಲ ಸ್ಥಿರವಾಗಿ ನಡೆಯುವುದೂ ಇಲ್ಲ. ಆದರೆ, ಯಾವ ದೆಸೆಯಿಂದಲೇ ಆಗಲಿ ಕನ್ನಡನಾಡಿನಲ್ಲಿ ಕನ್ನಡ ಭಾಷೆಗೆ ಅಪಾಯತಟ್ಟದಂತೆ ಅದಕ್ಕೆ ಪ್ರಧಾನ ಸ್ಥಾನವನ್ನು ಕೊಟ್ಟುಕೊಂಡು, ಕನ್ನಡಸಾಹಿತ್ಯ ಕನ್ನಡಭಾಷೆ ಇವಕ್ಕೇ ಹೆಚ್ಚು ಮನಸ್ಸುಕೊಟ್ಟು, ಭಗವಂತನು ನಮಗೆ ಅನುಗ್ರಹಿಸಿರುವ ಶಕ್ತಿಯನ್ನು ಕನ್ನಡದ ಮೂಲಕ ಹೆಚ್ಚಿಸಿಕೊಂಡು, ಅದರಿಂದ ಕನ್ನಡನಾಡಿನ ಜನರೆಲ್ಲಾ ಪ್ರಯೋಜನ ಪಡೆಯುವಂತೆ ಮಾಡಬೇಕಾದುದು ಆವಶ್ಯಕವೆಂಬ ನಂಬಿಕೆಯಿಂದ, ಈಗಲೇ ಅಲ್ಲ, ಹಿಂದೆ ಅನೇಕ ವೇಳೆ ನಮ್ಮ ಹಿರಿಯರು

ಅನೇಕ ಯತ್ನಗಳನ್ನು ನಡೆಸಿದ್ದಾರೆ. ರಾಜಾಧಿರಾಜರು ಈ ಭಾಷೆಗೇ ಉತ್ತೇಜನ ಕೊಟ್ಟಿದ್ದಾರೆ. ಪ್ರಸಿದ್ಧರಾದ ಜೈನ, ವೀರಶೈವ, ಬ್ರಾಹ್ಮಣ ಕವಿಗಳೆಲ್ಲಾ ಹಿಂದೆ ಈ ಸೂತ್ರವನ್ನು ಅನುಸರಿಸಿ ನಮ್ಮ ಸಾಹಿತ್ಯವನ್ನು ಬೆಳಸಿದ್ದಾರೆ. ನಮ್ಮ ಶ್ರೀಮನ್ಮಹಾರಾಜರವರ ಮತ್ತು ಶ್ರೀಮದ್ಯುವರಾಜರವರ ಮತ್ತು ಇತರ ಮಹನೀಯರ ಉದಾರವಾದ ಆಶ್ರಯವನ್ನು ಪಡೆದು ಕರ್ಣಾಟಕಸಾಹಿತ್ಯ ಪರಿಷತ್ತು ಕೂಡಿ ಕೆಲಸಮಾಡುತ್ತಿರುವ ದೊಡ್ಡ ಉದ್ದೇಶ ಇದೇ ಆಗಿರುವುದರಿಂದ, ಪರಿಷತ್ತಿನ ಸಂಕಲ್ಪವೇ ಕನ್ನಡದ ಸೇವೆಯಾಗಿರುವುದರಿಂದ, ಈ ಪರಿಷತ್ತು ಕನ್ನಡಕ್ಕಾಗಿ ಕಾದಾಡಿದರೆ ಕನ್ನಡಿಗರು ಯಾರೂ ಮನಸ್ಸಿನಲ್ಲಿ ಕೋಪಮಾಡಬಾರದೆಂದು ವಿನಯದಿಂದ ಬೇಡಿಕೊಳ್ಳುತ್ತೇನೆ. ಪರಿಷತ್ತಿನ ಮುಖ್ಯವಾದ ಕೆಲಸ ಕನ್ನಡದ ಸ್ಥಾನವನ್ನು ಕಾದಿರುವುದು: ಕನ್ನಡದ ಶ್ರೇಷ್ಠತೆಯನ್ನು ಹೆಚ್ಚಿಸುವುದು; ಕನ್ನಡದ ಹೆಚ್ಚು ಹೆಚ್ಚು ಸೇವೆಗೆ ಕನ್ನಡಿಗರನ್ನು ಒಲಿಸುವುದು.

ಒಟ್ಟಿನಮೇಲೆ ನಾನು ಹೇಳಿದ ತತ್ತ್ವವೇನು? ಭಾಷೆಯೆನ್ನುವುದು ನಿತ್ಯಗಟ್ಟಳೆಯ ವ್ಯಾಪಾರಕ್ಕಾಗಿ ಇರುವುದು ಮಾತ್ರವಲ್ಲ. ಅದರ ಮುಖ್ಯ ಕಾರ್ಯ ಒಂದು ಜನಾಂಗವನ್ನು ಸಂಸ್ಕಾರದಲ್ಲಿ ಮುಂದಕ್ಕೆ ತೆಗೆದುಕೊಂಡು ಹೋಗಲು ಸಾಧಕವಾಗುವುದು, ಆನಂದರಸವನ್ನು ಕಲೆಯ ಮೂಲಕ ಹೃದಯಕ್ಕೆ ತುಂಬುವುದು, ಆತ್ಮೋದ್ಧಾರಕ್ಕೆ ಸೋಪಾನವಾಗುವುದು—ಒಂದು ಇಡಿಯ ಜನವನ್ನು: ಅಲ್ಲೊಬ್ಬರನ್ನು ಇಲ್ಲೊಬ್ಬರನ್ನಲ್ಲ; ಕೇವಲ ವಿದ್ಯಾಪಾರಂಗತರನ್ನಲ್ಲ: ಜನಸಾಮಾನ್ಯವನ್ನು: ನಾಡಿನ ಗಂಡಸರು, ಹೆಂಗಸರು, ಮಕ್ಕಳನ್ನು. ಈ ಕೆಲಸ ಕಷ್ಟಪಟ್ಟು ನಮ್ಮ ಬುದ್ಧಿಶಕ್ತಿಯನ್ನೆಲ್ಲಾ ವೆಚ್ಚಮಾಡಿ ಕಲಿಯುವ ಪರಭಾಷೆಯಿಂದ ನೆರವೇರುವುದಿಲ್ಲ. ಯಾವುದು ನಮ್ಮನ್ನು ಬೆನ್ನಟ್ಟಿಬಂದು ರಕ್ತಗತವಾಗಿದೆಯೋ ಅಂಥ ಭಾಷೆಯಿಂದ ಮಾತ್ರವೇ ಇದು ಸಾಧ್ಯ. ಆ ಭಾಷೆ ದೇವಭಾಷೆ. ಈ ತತ್ತ್ವವನ್ನು ಹಿಡಿದು ಹಿಂದಿನಕಾಲದಲ್ಲಿ ಮಹನೀಯರಾದವರು ದೇಶಭಾಷೆಯ ಮೂಲಕ ಜನರನ್ನು ಬದುಕಿಸಬೇಕೆಂದು ಯೋಚನೆಮಾಡಿ ಕನ್ನಡವನ್ನು ಪುಷ್ಟಿಗೊಳಿಸುವುದಕ್ಕೆ, ಕನ್ನಡದ ಜ್ಞಾನಭಾಂಡಾರವನ್ನು ಹೆಚ್ಚಿಸುವುದಕ್ಕೆ, ಸಂಸ್ಕೃತವನ್ನು ಮರೆಹೊಕ್ಕರು. ಅದರ ಮೂಲಕ ಕನ್ನಡ ನಾನಾ ಮುಖವಾಗಿ ಪುಷ್ಟಿಹೊಂದಿತು,

ಅವರಿಗೆ ಸಂಸ್ಕೃತದ ಮೇಲಿದ್ದ ಮಮತೆಯಲ್ಲಿ ಕನ್ನಡದ ಶಕ್ತಿಗೆ ಮೀರಿ ಅದು ಹೊರಲಾರದಷ್ಟು ಹೊರೆ ಅಲ್ಲಿಂದ ಬಂದಿದ್ದರೂ ಬಂದಿರಬಹುದು—ಬಂದಿದೆ; ಆ ಹೆಚ್ಚು ಹೊರೆಯನ್ನು ಇಳಿಸಿ, ಕನ್ನಡವನ್ನು ತಿಳಿಮಾಡಬೇಕೆಂಬುದು ನನ್ನ ಮತ. ಅದು ಹೇಗಾದರೂ ಇರಲಿ, ಅಂತೂ ಒಟ್ಟಿನಮೇಲೆ, ಒಂದು ಕಾಲದಲ್ಲಿ ಕನ್ನಡಭಾಷೆ ಸಂಸ್ಕೃತದ ಮೂಲಕ ಹೊಸ ಚೈತನ್ಯವನ್ನು ಪಡೆಯಿತು. ಒಂದು ಒಂದೂವರೆಸಾವಿರ ವರ್ಷಗಳ ಕಾಲ ಸಂಸ್ಕೃತ ಭಾಷೆಯ ಪ್ರಭಾವ ಕನ್ನಡದಮೇಲೆ ನಡೆಯಿತು. ಆ ಭಂಡಾರದಲ್ಲಿ ತುಂಬಿರತಕ್ಕ ವಸ್ತುಗಳಲ್ಲಿ ತಮ್ಮ ಜನರಿಗೆ ಅಗತ್ಯವಾಗಿ ಕೊಡಬೇಕಾದಂಥವನ್ನು, ಕೊಡಬಹುದಾದಂಥವನ್ನು, ಒಟ್ಟಿನಲ್ಲಿ ಜನರನ್ನು ಮೇಲಕ್ಕೆ ಎತ್ತುವುದಕ್ಕೆ ಯಾವ ವಿಷಯಗಳನ್ನು ತಿಳಿಸಬೇಕೋ ತಿಳಿಸಬಹುದೋ ಅವನ್ನೆಲ್ಲಾ ಅಲ್ಲಿಂದ ತೆಗೆದುಕೊಂಡು ನಮ್ಮ ಹಿರಿಯರ ದೇಶಭಾಷೆಯಾದ ಕನ್ನಡದ ಮೂಲಕ ಜನರಿಗೆ ಕೊಟ್ಟರು.

ಅದರಲ್ಲಿಯೂ ತಿಳಿಗನ್ನಡ, ತಿರುಳ್ಗನ್ನಡ

ಜೈನರು, ವೀರಶೈವರು, ಬ್ರಾಹ್ಮಣ ಮತದವರು ಈ ಮೂರು ಪಂಗಡದವರೂ ಇದೇರೀತಿ ಮಾಡಿದರು. ಇದು ಸುಮಾರು ೯ನೆಯ ಶತಮಾನದಿಂದ ಮೊನ್ನೆ ಮೊನ್ನೆಯವರೆಗೆ ನಡೆದ ಚರಿತ್ರೆಯ ಸಾರವೆಂದು ಹೇಳಬಹುದು. ಜೈನರು ತಮ್ಮ ಧರ್ಮನೀತಿಗಳಿಗೆ ಸಂಬಂಧಪಟ್ಟ ವಿಷಯಗಳನ್ನೂ ಪುರಾಣ ಕಥೆಗಳನ್ನೂ ಕನ್ನಡದಲ್ಲಿ ತಿಳಿಸಿದರು; ಕನ್ನಡ ಒಂದುಪ್ರೌಢಮಾರ್ಗದಲ್ಲಿ ನಡೆಯಿತು. ಹಾಗೆ ಕನ್ನಡವನ್ನು ಎತ್ತಿಹಿಡಿದ ಜೈನಕವಿಗಳಲ್ಲಿ ಒಬ್ಬನು ಕಾಳಿದಾಸನಿಗೆ ನಾನೇನು ಕಡಮೆಯೇ ಎಂದು ಹೇಳಿಕೊಳ್ಳುತ್ತಾನೆ; ಅಷ್ಟುಮಟ್ಟಿಗೆ ನಮ್ಮ ಕವಿಗಳಿಗೆ ಧೈರ್ಯವಿತ್ತು. ಸಂಸ್ಕೃತ ಸಾಹಿತ್ಯದ ಸಾರವನ್ನು ಹೀರಿ ಅದನ್ನೂ ಮೀರಿ ನಾವು ಕೆಲಸಮಾಡಿದ್ದೇವೆ ಎಂಬ ಒಂದು ಹೆಮ್ಮೆ ಅವರಿಗೆ. ಹೀಗೆ, ಬರೆಯತೊಡಗಿದ ಸಾಹಿತ್ಯದಲ್ಲಿ ಅವರು ಒಂದು ಕ್ರಮವನ್ನು, ಒಂದು ರೀತಿಯನ್ನು, ಒಂದು 'ಮಾರ್ಗ'ವನ್ನು, ಹಿಡಿದರು. ಕವಿರಾಜಮಾರ್ಗವೊಂದು ಹುಟ್ಟಿತು; ಕೆಲವು ಕವಿರಾಜರ ಮಾರ್ಗ ಎಲ್ಲಾ ಕವಿಗಳ ರಾಜಮಾರ್ಗವಾಯಿತು; ಸಂಸ್ಕೃತದ ಧಾಟಿ, ರೀತಿ, ಶೈಲಿಗಳನ್ನು ಅದು ಅನುಕರಣಮಾಡಿತು; ಆಡಂಬರಕ್ಕೆ ಸಿಕ್ಕಿತು. ಕವಿಯಾದವನಿಗೆ ಇದೇ ತಕ್ಕದಾರಿ ಇದೇ ಮಾರ್ಗ ಎಂಬ ಭಾವನೆ ಬಲವಾಗುತ್ತ ಬಂತು. ಹಾಗಾದರೆ 'ದೇಶ್ಯ' ಎನ್ನುವುದು ಏನಾಗಬೇಕು? ಕನ್ನಡ

ಏನಾಗಬೇಕು? ಕನ್ನಡಕ್ಕೆ ಮಾರ್ಗ ಶೈಲಿ ರೀತಿ ಯಾವುದೂ ಇಲ್ಲವೆ? ಕನ್ನಡದಲ್ಲಿ ಪ್ರತ್ಯೇಕ ಕ್ರಮವಿಲ್ಲವೆ? ಅದನ್ನು ಅನುಸರಿಸಿ ಬರೆದರೆ ಹೇಗೆ ಕಾಣುತ್ತದೆ? ಅದನ್ನೂ ನೋಡೋಣ ಎಂದು ಸ್ವಲ್ಪ ಜನರು ಪ್ರತಿಭಟಿಸಿದ ಹಾಗೆ ಕಾಣುತ್ತದೆ. ಇದಕ್ಕೆ ನಿದರ್ಶನಗಳು ಅಲ್ಲಲ್ಲಿ ಸಿಕ್ಕುತ್ತವೆ. ಒಬ್ಬ ಕವಿ ಹೇಳುತ್ತಾನೆ :—

ಪೞಗನ್ನಡದೆ ಪುದುಂಗೊಳೆ ।
ಕೊೞಸಕ್ಕದಮಂ ತಗುಳ್ಚಿ ಜಾಣ್ಗಿಡೆ ಮುತ್ತುಂ ॥
ಮೆೞಸುಂ ಕೋದಂತಿರೆ ಪೇ ।
ೞ್ವೞಗವಿಗಳ ಕವಿತೆ ಬುಧರನೆರ್ದೆಗೊಳಿಸುಗುಮೇ ? ॥

ಈತನಿಗೆ ಕನ್ನಡ ಮುತ್ತು : ಸಂಸ್ಕೃತ ಮೆಣಸು. ಪಂಜು ಹಿಡಿದು ಕನ್ನಡವನ್ನು ಹುಡುಕಬೇಕಾದ ಈ ಕವಿತೆಯನ್ನು ತಿಳಿದುಕೊಳ್ಳುವವರು ಯಾರು ? ಭಾಷೆ ಕಷ್ಟವಾದರೇ ಪ್ರೌಢವೋ ? ಎಂದು ಕೇಳಬೇಕಾಯಿತು.

ಮತ್ತೊಬ್ಬ ಕವಿ ಹೇಳುತ್ತಾನೆ :—

ಸಕ್ಕದಮಂ ಪೇೞ್ವೊಡೆ ನೆೞ ।
ಸಕ್ಕದಮಂ ಪೇೞ್ಗೆ ಸುದ ಗನ್ನಡದೊಳ್ ತಂ ॥
ದಿಕ್ಕುವುದೇ ಸಕ್ಕದಮಂ ।
ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ ॥

ಸಂಸ್ಕೃತದಲ್ಲಿ ಶಕ್ತಿಯನ್ನು ತೋರಿಸಬೇಕಾದರೆ ಸಂಸ್ಕೃತದವರಮೇಲೆ ತೋರಿಸಬಹುದಲ್ಲ ! ಬಡಪಾಯಿಗಳಾದ ನಮ್ಮ ಮೇಲೆ ತೋರಿಸಿದರೆ ಹೇಗೆ? ಶುದ್ಧ ಕನ್ನಡದಲ್ಲಿ ಸಂಸ್ಕೃತವನ್ನು ಬೆರಸಬಹುದೇ ? ಅವನ ವೀರಾಭಿಮಾನವನ್ನು ನೋಡಿ ! ಅವನಿಗೆ ಕನ್ನಡ ತುಪ್ಪವಾಯಿತು. ಸಂಸ್ಕೃತ ಎಣ್ಣೆಯಾಯಿತು.

ಹೀಗೆ ಸಂಸ್ಕೃತ-ಕನ್ನಡದ ವಾದ ಬಂದುದರಿಂದಲೇ ಮಾರ್ಗ, ದೇಶಿ ಎಂಬ ಎರಡು ರೀತಿಗಳು ಹುಟ್ಟಿಕೊಂಡುವು. ಆಂಡಯ್ಯನೆಂಬವನು 'ಕಬ್ಬಿಗರ ಕಾವ' ಎಂಬ ಸಂಪೂರ್ಣವಾದ ಒಂದು ಗ್ರಂಥವನ್ನೇ ಸಂಸ್ಕೃತದ ಸಂಪರ್ಕವಿಲ್ಲದೆ ಬರೆಯಲು ಹೊರಟಿದ್ದಾನೆ. ಯಾವ ಭಾಷೆಯ ವಿಷಯದಲ್ಲಿಯೇ ಆಗಲಿ ಇಷ್ಟೇನೂ ಪ್ರತಿಜ್ಞೆತೊಟ್ಟು ಹೊರಡಬೇಕಾದುದಿಲ್ಲವೆಂದು ಕಾಣುತ್ತದೆ. ಇತರ ಭಾಷೆಗಳ ಸಂಪರ್ಕವೇ ಇಲ್ಲದೆ ಬರೆಯುತ್ತೇನೆ ಎನ್ನುವ ವೀರಪಂಥವೂ ಬೇಡ, ಅವನ್ನೇ ಅತಿಯಾಗಿ ಬೆರಸಿ ಕನ್ನಡ ಭಾಷೆಯನ್ನು ಕೊಚ್ಚಿಸುವ ಪರಭಾಷಾ ವ್ಯಾಮೋಹವೂ ಬೇಡ. ಯಾವುದಕ್ಕೂ ಒಂದು ಹದ್ದು ಇದೆ; ಆ ಹದ್ದು ಮೀರಿ

ದರೆ ಅದು ಶಕ್ತಿಯುಳ್ಳ ಪುಷ್ಟಿಯುಳ್ಳ ಭಾಷೆಯಾಗುವುದಿಲ್ಲ. ಬೊಜ್ಜು ಬಲವಲ್ಲ. ಇರಲಿ. ಈಗ ಕನ್ನಡದ ಎದುರಿಗೆ ಸಂಸ್ಕೃತ ಒಂದೇ ಅಲ್ಲ, ಮೂರು ಭಾಷೆಗಳು ನಿಂತಿವೆಯಲ್ಲವೆ? ಸಂಸ್ಕೃತವಾಗಲಿ, ಇಂಗ್ಲಿಷಾಗಲಿ ಹಿಂದಿಯಾಗಲಿ ಅಥವಾ ಈ ಮೂರೂ ಆಗಲಿ, ಕನ್ನಡವನ್ನು ನುಂಗಿದರೂ ನುಂಗಿ ಬಿಡಲಿ, ಕನ್ನಡದಿಂದ ಆಗತಕ್ಕದ್ದೇನು, ಎಂದು ಸುಮ್ಮನೆ ಕೂಡುವುದೇ? ಅಥವಾ ಕನ್ನಡಕ್ಕೂ ಒಂದು ರೂಪವಿದೆ, ಒಂದು ಸಾಹಿತ್ಯವಿದೆ, ಒಂದು ಜೀವವಿದೆ, ಕನ್ನಡದಿಂದ ಮಾತ್ರ ಕನ್ನಡಿಗರಿಗೆ ಸಾಧ್ಯವಾಗತಕ್ಕ ಗುರಿಗಳಿವೆ, ಇದನ್ನು ಉಳಿಸಿಕೊಳ್ಳೋಣ ಇನ್ನೂ ಬೆಳಸಿಕೊಳ್ಳೋಣ ಎಂದು ಕನ್ನಡಕ್ಕಾಗಿ ಭಕ್ತಿಯಿಂದ ದುಡಿಯುವುದೇ? ಇದು ಪ್ರಶ್ನೆ. ಹಿರಿಯರಾದವರು, ದೇಶ ಭಾಷೆಯ ಮರ್ಮವನ್ನು ತಿಳಿದವರು, ಹೀಗೆ ಅನೇಕ ವೇಳೆ ಈ ವಿಚಾರವನ್ನು ಪರಿಶೀಲಿಸಿ ನಮಗೆ ಮೇಲುಪಂಕ್ತಿ ಹಾಕಿದ್ದಾರೆ. ಸಂಸ್ಕೃತಕ್ಕೂ ಕನ್ನಡಕ್ಕೂ ಒಂದು ತೆರದ ವಾದ ಹೀಗೆ ಬಂದಕಾಲದಲ್ಲಿ ದೇಶಿಯೂ ಮಾರ್ಗವೂ ಕಲೆತು ಒಂದು ಮಧ್ಯಸ್ಥಿಕೆಗೆ ಬಂದುವು. ಸಂಸ್ಕೃತದ ಸಾರವನ್ನು ಕನ್ನಡ ಹೀರಿತು; ಆದರೆ ತಾನು ಮಾತ್ರ ಜಗ್ಗಲಿಲ್ಲ. ಇದನ್ನು ಜೈನ ಕವಿಗಳ ಕಾಲದಲ್ಲಿಯೇ ನಾವು ಕಾಣುತ್ತೇವೆ.

ಮುಂದೆ ಶಿವಶರಣರ ಕಾಲದಲ್ಲಿ ಈ ತೆರದ ಪ್ರತಿಭಟನೆ, ಈ ಕನ್ನಡದ ಕೆಚ್ಚು, ಇನ್ನೂ ಹೆಚ್ಚಾಯಿತು. ಬಸವೇಶ್ವರರೇ ಮೊದಲಾದವರು ಇದರಲ್ಲಿ ಮುಂದಾಳುಗಳಾಗಿ ನಿಂತು ಕನ್ನಡಬಾಷೆಯನ್ನೂ ಕನ್ನಡ ಜನರನ್ನೂ ಒಟ್ಟುಗೂಡಿಸಿ ಮೇಲ್ನೆಲೆಯಲ್ಲಿ ನಿಲ್ಲಿಸಬೇಕೆಂದು ಹೊರಟರು. ಅವರಿಗೆ ಅನೇಕ ರಾಜರ ಮತ್ತು ಜನರ ಬೆಂಬಲ ದೊರಕಿತು. ಅಂಥ ರಾಜರೂ ಕವಿಗಳೂ ಬಹು ದೊಡ್ಡ ಕನಸುಗಳನ್ನು ಕಂಡರು; ಕರ್ಣಾಟಕದ ಸತ್ವವನ್ನು, ಕರ್ಣಾಟಕದ ಸಾರವನ್ನು ನಿಲ್ಲಿಸಲು ಪ್ರಯತ್ನಿಸಿದರು. ಧರ್ಮವನ್ನು ಎಲ್ಲರಿಗೂ ಬೀರಿ, ಅಮೃತವನ್ನು ಕುಡಿಸುವಂತೆ ಅದನ್ನು ಅವರಿಗೆ ಕುಡಿಸಬೇಕೆಂದು ಆಶೆಪಟ್ಟು, ಪ್ರೌಢಮಾರ್ಗದಲ್ಲಿ ಪ್ರವಹಿಸುತ್ತಿದ್ದ ಸಾಹಿತ್ಯವನ್ನು ಅದಕ್ಕಾಗಿ ಬೇರೊಂದು ಮುಖವಾಗಿ ತಿರುಗಿಸಿ ಬಿಟ್ಟರು, ಮಾರ್ಪಡಿಸಿಬಿಟ್ಟರು. ಜನರು ಮೇಲಕ್ಕೆ ಏಳಲು ಏನು ಮಾಡಬೇಕು, ಯಾವ ನೆಲದಲ್ಲಿ ಯಾವ ಬೀಜವನ್ನು ನೆಟ್ಟು ಎಷ್ಟು ನೀರನ್ನು ಹಾಕಿದರೆ ಚೆನ್ನಾಗಿ.ಬೆಳೆದೀತು, ಯಾವ ಸಾಹಿತ್ಯದಿಂದ ಕನ್ನಡ ಜನರಉದ್ಧಾರವಾದೀತು ಎಂದು ಯೋಚಿಸಿ ಅವರು ಹೊಸದೊಂದು ಮಾರ್ಗವನ್ನು ಸೃಷ್ಟಿ

ಮಾಡಿದರು. ಓದುವುದಕ್ಕೆ, ಅರ್ಥ ಮಾಡಿಕೊಳ್ಳುವುದಕ್ಕೆ, ಅದು ಎಷ್ಟು ಸುಲಭವಾಗಿರಬೇಕೋ ಅಷ್ಟೂ ಸುಲಭವಾಗಿರುವಂತೆ ಮಾಡಿದರು. ಹೀಗೆ ಹೊರಟ ಸಾಹಿತ್ಯದ ವಿಷಯದಲ್ಲಿ,

ಪಂಡಿತರುಂ ವಿವಿಧಕಳಾ |
ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್ ||
ಕಂಡರ್ ಕೇಳ್ದೊಡೆ ಗೊರವರ |
ದುಂಡುಚಿಯೇ ಬೀದಿವಜಿಕಿಯೆ ಬೀರನ ಕತೆಯೇ ?||

ಎಂದು ಹಾಸ್ಯಮಾಡಿರುವವರೂ ಇದ್ದಾರೆ. ರಗಳೆಯೂ ಒಂದು ಕಾವ್ಯವೇ ಎಂದು ನಕ್ಕವರೂ ಇದ್ದಾರೆ. ಆ ಆಕ್ಷೇಪಣೆಗಾಗಿ, ಹರೀಶ್ವರ ಷಡಕ್ಷರಿ ಮೊದಲಾದ ಕವಿಗಳು ಪ್ರೌಢಚಂಪುವಿನಲ್ಲಿ ಗ್ರಂಥಗಳನ್ನು ಬರೆದೂ ಇದ್ದಾರೆ. ಆದರೆ ಒಟ್ಟಿನಮೇಲೆ ವೀರಶೈವ ಕವಿಗಳು ಜನರ ಮನಸ್ಸನ್ನು ಹೊಕ್ಕು ಅವರಿಗೆ ವಿಷಯ ತಿಳಿಯುವಂತೆ ಮಾಡಲು ವಚನಸಾಹಿತ್ಯ, ಷಟ್ಪದಿ, ತ್ರಿಪದಿ, ಚೌಪದಿ, ಸಾಂಗತ್ಯ ಮೊದಲಾದುವುಗಳನ್ನು ಮಾಡಿಕೊಂಡರು. ಎಂದರೆ ಸಂಸ್ಕೃತವನ್ನು ಅನುಸರಿಸಿಕೊಂಡು ಬಂದ ಕ್ರಮವನ್ನೂ ರೀತಿಯನ್ನೂ ಛಂದಸ್ಸನ್ನೂ ಬದಿಗೊತ್ತಿ ಕನ್ನಡಭಾಷೆ ಯಾವ ಪ್ರವಾಹದ ಯಾವ ಓಟಕ್ಕೆ ಹರಿಯುತ್ತದೆ, ಕನ್ನಡಭಾಷೆಯ ವೈಶಿಷ್ಟ್ಯವೇನು, ಶೈಲಿಯೇನು, ಸತ್ವವೇನು, ಧಾಟಿಯೇನು, ಯಾವ ಛಂದಸ್ಸಿನಲ್ಲಿ ಕನ್ನಡಮಾತು ಎದ್ದು ಕುಣಿಯುತ್ತದೆ ಎನ್ನುವುದನ್ನು ತಿಳಿದು ಅಂಥಾ ತಿರುಳ್ಗನ್ನಡದ, ತಿಳಿಗನ್ನಡದ ಸಾಹಿತ್ಯವನ್ನು ನಿರ್ಮಾಣ ಮಾಡಿಕೊಟ್ಟು ಹೋದರು. ಅವರು ಆರಿಸಿಕೊಂಡ ವಿಷಯಗಳು ಧರ್ಮದ ವಿಷಯ, ನೀತಿ ವೇದಾಂತಗಳ ವಿಷಯ, ಜ್ಞಾನದ ವಿಷಯ, ತಮ್ಮ ಹಿರಿಯರ ಪುರಾಣ ಕಥೆಗಳ ವಿಷಯ ಇವುಗಳೇ. ಜೈನರು ತಮ್ಮ ಗ್ರಂಥಗಳಿಗಾಗಿ ಹಿಂದಿನ ಇತಿಹಾಸಗಳ ಕಥೆಗಳನ್ನು ತೆಗೆದುಕೊಂಡು ತಮಗೆ ಸರಿಹೋಗುವಂತೆ ಅವನ್ನು ಮಾರ್ಪಡಿಸಿಕೊಂಡರು. ವೀರಶೈವರಾದರೊ ಅವನ್ನು ಬಿಟ್ಟೇ ಬಿಟ್ಟರು. ಒಂದು ಪ್ರಯತ್ನವನ್ನು ಕೈಕೊಂಡು ನಡಸುತ್ತಿರುವಾಗ ಅವರವರ ಮನೋಭಾವಗಳು ಮನೋಧರ್ಮಗಳು ಹೇಗೆ ಹೇಗೆ ಇರುತ್ತವೋ ಹಾಗೆತಾನೆ ಅವರು ಕೆಲಸ ನಡಸಬೇಕಾದುದು ? ಅಂತು, ವಿಷಯ ಏನೇ ಇರಲಿ, ಕನ್ನಡದ ವೈಶಿಷ್ಟ್ಯವನ್ನು, ತನ್ನತನವನ್ನು, ಉಳಿಸಿಕೊಂಡು ಎಲ್ಲಕ್ಕೂ ಮುಂದೆ ಅದನ್ನು ಇಟ್ಟುಕೊಂಡು ಈಗ ೭೦೦ ವರ್ಷಗಳ ಹಿಂದೆಯೇ ಅವರು ಕೆಲಸಮಾಡತೊಡ

ಗಿದರು, ಒಂದು ಹೊಸ ಸಂಪ್ರದಾಯವನ್ನೇ ಅವಕ್ಕಾಗಿ ಹುಟ್ಟಿಸಿದರು. ಅವರ ಮನಸ್ಸಂಕಲ್ಪವೆಲ್ಲಾ ಈ ಪದ್ಯದಿಂದ ತಿಳಿಯುತ್ತದೆಯಲ್ಲವೆ?—

ಸುಲಿದ ಬಾಳೆಯ ಹಣ್ಣಿನಂದದಿ |
ಕಳಿದ ಸಿಗುರಿನ ಕಬ್ಬಿನಂದದಿ ||
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ ||
ಲಲಿತವಹ ಕನ್ನಡದ ನುಡಿಯಲಿ |
ತಿಳಿದು ತನ್ನೊಳು ತನ್ನ ಮುಕ್ತಿಯ |
ಗಳಿಸಿಕೊಂಡರೆ ಸಾಲದೇ ಸಂಸ್ಕೃತದೊಳಿನ್ನೇನು? ||

ಇದಾದ ಮೇಲೆ ಮೂರನೆಯದು ಬ್ರಾಹ್ಮಣಸಾಹಿತ್ಯ: ಕನ್ನಡ ಸಾಹಿತ್ಯದ ತ್ರಿವೇಣೀ ಸಂಗಮದಲ್ಲಿ ಮತ್ತೊಂದು ಪ್ರವಾಹ. ದ್ವೈತಿಗಳು ವಿಶಿಷ್ಟಾದ್ವೈತಿಗಳು ಅದ್ವೈತಿಗಳಾದ ಇವರಲ್ಲಿ ವೈದಿಕ ಸಂಪ್ರದಾಯದ ಭಕ್ತಿ ಸಾಹಿತ್ಯ ಹುಟ್ಟಿತು. ವೀರಶೈವರು ಯಾವ ರೀತಿ ತಮ್ಮ ಮತ ತತ್ವಗಳನ್ನು ಜನರಲ್ಲಿ ಬೀರುವುದನ್ನೇ ಮುಖ್ಯವಾಗಿಟ್ಟುಕೊಂಡರೋ ಅದೇ ರೀತಿಯಾಗಿ ಇವರಲ್ಲಿಯೂ ಕೂಡ ದಾಸಕೂಟದವರು ದೇಶದ ನಾನಾ ಭಾಗಗಳಲ್ಲಿ ಸಂಚರಿಸುತ್ತಾ ವಿಷ್ಣುವಿನ ಮಹಿಮೆಗಳನ್ನು ವೈಷ್ಣವ ಮತದ ತತ್ತ್ವಗಳನ್ನು ಜನರಲ್ಲಿ ಬೋಧಿಸತೊಡಗಿದರು. ವೀರಶೈವರಂತೆ ಇವರೂ ಕೂಡ ಕನ್ನಡದ ಕನ್ನಡತನವನ್ನು ಬಿಟ್ಟುಕೊಡಲಿಲ್ಲ. ಭಾಷೆ ಯಾವ ಧಂವಸ್ಸಿಗೆ ಹಿಗ್ಗುತ್ತದೆ ಎನ್ನುವುದನ್ನು ತಿಳಿದವರಾಗಿ ಹೆಂಗಸರಿಗೂ ಮಕ್ಕಳಿಗೂ ಅರ್ಥವಾಗುವ ರೀತಿಯಲ್ಲಿ ಹೆಂಗಸರು ಮನೆಗಳಲ್ಲಿ ಹಾಡಿಕೊಳ್ಳುವ ರೀತಿಯಲ್ಲಿ ಬರೆದು ಜನರಲ್ಲಿ ಜ್ಞಾನವನ್ನು ಬಿತ್ತಿದರು. ಇವರಲ್ಲಿಯೂ ಕೆಲವರು ಚಂಪೂ ಗ್ರಂಥವನ್ನು ಬರೆದವರು ಇದ್ದಾರೆ. 'ಮಾರ್ಗ'ವನ್ನು ಹಿಡಿದು ತಮ್ಮ ಪ್ರೌಢಿಮೆಯನ್ನು ತೋರಿಸಿಯೂ ಇದ್ದಾರೆ. ಆ ನಚ್ಚು, ಆ ಹುಚ್ಚು ಸಂಪೂರ್ಣವಾಗಿ ಅವರನ್ನು ಬಿಡಲಿಲ್ಲ. ಆದರೆ ಅದು ಹಿಮ್ಮೆಟ್ಟುವ, ಇಳಿದು ಹೋಗುವ, ಹೊಳೆ. ಇವರ ಉತ್ತಮ ಕಾವ್ಯಗಳು ಷಟ್ಪದಿ ತ್ರಿಪದಿ ಸಾಂಗತ್ಯ ಮೊದಲಾದುವುಗಳಲ್ಲಿ. ಕನ್ನಡ ಕವಿತೆಯ, ಕನ್ನಡ ಶೈಲಿಯ, ರಸದ, ಧರ್ಮದ, ತಿರುಳೆಂದರೆ ಕುಮಾರವ್ಯಾಸನ ಭಾರತ. ಯಾರೋ ಒಬ್ಬರು ಪಂಡಿತರು ಕುಮಾರವ್ಯಾಸನು ಕನ್ನಡವನ್ನು ಹಾಳುಮಾಡಿದನೆಂದು ಅಭಿಪ್ರಾಯಪಟ್ಟರಂತೆ! ಎಲ್ಲರೂ ಹೀಗೆ ಕನ್ನಡವನ್ನು ಹಾಳುಮಾಡಬಾರದೆ! ಕುಮಾರವ್ಯಾಸನಲ್ಲಿ ಕನ್ನಡ,

ತಿಳಿಗನ್ನಡ, ತಿರುಳ್ಗನ್ನಡ ಗೆದ್ದಿತು. ಇನ್ನು ಅದಕ್ಕೆ ಭಯವಿಲ್ಲ.

ಕನ್ನಡದ ಸಾರಮಂತ್ರ :
ಹೀರಿ ಹೊಮ್ಮುವುದು ; ಮರಳಿ ಮರಳಿ ಪುನರುಜ್ಜೀವನ

ಒಟ್ಟಿನ ಮೇಲೆ ಕನ್ನಡ ಸಾಹಿತ್ಯದಲ್ಲಿ,

" ಕವಿಮಾರ್ಗದೊಳೊಳಪೊಕ್ಕುಂ ।
ನವರಸಮಂ ತೆಱಿಯೆ ನುಡಿದನೆನಸಿದ ಕವಿ ಸ ॥
ತ್ಕವಿಯೆನಿಕುಂ ಗೂಡಾರದ ।
ಕವಿಯಂತಿರೆ ಮುಚ್ಚಿಪೋದ ಕವಿಯುಂ ಕವಿಯೇ ॥"

ಎಂದು ಹೇಳಿ, ಹಾಗೆಯೇ ಬರೆದವರೂ ಇದ್ದಾರೆ; ಒಣಪಾಂಡಿತ್ಯಕ್ಕೆ, ಲಕ್ಷಣಕ್ಕೆ, ಕಟ್ಟುಬಿದ್ದು ಬರಿಯ ವರ್ಣನೆಗಳಲ್ಲಿಯೇ ಮುಳುಗಿ ಕಾವ್ಯದ ಮಗ್ಗವನ್ನು ನೆಯ್ದವರೂ ಇದ್ದಾರೆ; ಕನ್ನಡಿಗರು ಕೂಡಿದ ಸಭೆಯಲ್ಲಿ ಎಲ್ಲರೂ ತಿಳಿಯುವಂತೆ ಲಲಿತವಾದ ಶೈಲಿಯಲ್ಲಿ ಸರಳವಾದ ಛಂದಸ್ಸಿನಲ್ಲಿ ಬರೆದವರೂ ಇದ್ದಾರೆ. ಆದರೆ ಮೊದಲಿನಿಂದಲೂ ಕನ್ನಡ ಸಾಹಿತ್ಯದ ಬೆಳವಣಿಗೆಯನ್ನು ನೋಡಿದರೆ ಒಂದು ರಹಸ್ಯ ಸ್ಪಷ್ಟವಾಗುತ್ತದೆ; ಏನೆಂದರೆ ಕನ್ನಡದ ವೈಶಿಷ್ಟ್ಯ ವನ್ನು ಉಳಿಸಿಕೊಳ್ಳುವುದು ; ಇತರ ಯಾವ ಭಾಷೆಯಿಂದ ಯಾವ ವಸ್ತುವನ್ನು ಯಾವ ಸಾಮಗ್ರಿಯನ್ನು ತೆಗೆದುಕೊಂಡರೂ ಕನ್ನಡದ ಅಚ್ಚಿನಲ್ಲಿ ಅದನ್ನಿಳಿಸಿ ಕನ್ನಡವನ್ನು ಮುಂದುಮಾಡಿ ಅದಕ್ಕೇ ಪ್ರಧಾನ ಸ್ಥಾನವನ್ನು ಕೊಡುವುದು.

ಸಾಹಿತ್ಯ ಬೆಳೆಯಬೇಕಾದರೆ ಬರಿಯ ಲಕ್ಷಣಗಳಿಗೆ, ಸೂತ್ರಗಳಿಗೆ, ಕಟ್ಟುಬಿದ್ದಿರಬೇಕಾದುದಿಲ್ಲ. ಸಾಹಿತ್ಯದಿಂದ ಲಕ್ಷಣ ಸೂತ್ರಗಳೇ ಹೊರತು ಲಕ್ಷಣ ಸೂತ್ರಗಳಿಂದ ಸಾಹಿತ್ಯವಲ್ಲ. ನಮಗೆ ಯಾವುದು ಹೊಂದಿಕೊಳ್ಳುತ್ತದೆಯೋ ನಮ್ಮ ಜನರಿಗೆ ಯಾವುದರಿಂದ ತಿಳಿವಳಿಕೆಯನ್ನೂ ಜ್ಞಾನವನ್ನೂ ಸಾಹಿತ್ಯವನ್ನೂ ಸುಲಭವಾಗಿ ಕೊಡಬಹುದೋ ಅಂತಹ ಲಕ್ಷಣಸೂತ್ರವಿದ್ದರೆ ಇರಲಿ, ಇಲ್ಲದಿದ್ದರೆ ಹೋಗಲಿ. ಇದು ಕನ್ನಡತನದ ಒಳಗುಟ್ಟು, ಒಳಗೆ ಕುಳಿತಿರುವ ಕೆಚ್ಚು. ಇದು ಈಗ ಇಂಗ್ಲಿಷ್ ಸಾಹಿತ್ಯ ಪ್ರಭಾವದಲ್ಲಿ ಹೊರಕ್ಕೆ ಬರುತ್ತಿದೆ ; ವಸಂತದಲ್ಲಿ ಕಣ್ಣಿನಮೇಲೆ ಕಣ್ಣೊಡೆದು ಚಿಗುರುವ ಬಳ್ಳಿಯಂತೆ ಎತ್ತೆತ್ತಲೂ ಹೊರಹೊಮ್ಮುತ್ತಿದೆ. ಈಗ ಒಂದು ಶತಮಾನ

ದಿಂದ ಇಂಗ್ಲಿಷ್ ಸಾಹಿತ್ಯವೊಂದು ನಮ್ಮ ಗಮನವನ್ನು ತನ್ನ ಕಡೆಗೆ ಎಳೆದು ಕೊಳ್ಳುತ್ತಿದೆಯಷ್ಟೆ. ಆ ಸಾಹಿತ್ಯ ಸಂಪರ್ಕ ಹೆಚ್ಚಿದ ಹಾಗೆಲ್ಲಾ ಅಲ್ಲಿರುವ ಭಾವಗಳು ಅಭಿಪ್ರಾಯಗಳು ಪ್ರೌಢವಿಚಾರಗಳು ಅವುಗಳನ್ನು ಪ್ರತಿಪಾದಿಸಿರುವ ರೀತಿ, ಶೈಲಿ, ಮಾರ್ಗ ಇವುಗಳನ್ನು ತಿಳಿದುಕೊಳ್ಳಬೇಕೆಂಬ ಬಯಕೆ ಜನರಲ್ಲಿ ಹೆಚ್ಚುತ್ತಿದೆ. ಇಲ್ಲಿನ ಅನೇಕ ಭಾವಗಳೂ ಶಬ್ದಗಳೂ ನಮ್ಮಲ್ಲಿ ಈಗಾಗಲೇ ಬೆರೆಯುತ್ತಿವೆ. ಬೆರೆಯಲಿ ಬರಲಿ. ನನಗೆ ಇಂಗ್ಲಿಷಿನ ಭೀತಿಯಿಲ್ಲ. ದಾಸ್ಯ, ಪರಭಿಕ್ಷೆ, ಸಂಪ್ರದಾಯಭಂಗ ಮುಂತಾದ ಕೂಗುಗಳು ನನಗೆ ಅರ್ಥವಾಗವು. ಪುನರುಜ್ಜೀವನಕ್ಕೆ, ಸ್ವಾತಂತ್ರ್ಯಕ್ಕೆ, ಹೊಸ ಆತ್ಮಕ್ಕೆ ಪ್ರಳಯವೂ ಬೇಕು, ಸೃಷ್ಟಿಯೂ ಬೇಕು. ಅವಕ್ಕಾಗಿ, ಬಿಡುವುದೂ ಉಂಟು; ಇಡುವುದೂ ಉಂಟು; ಸೇರಿಸುವುದೂ ಉಂಟು. ಹೊಸದನ್ನು ಕಲಿಯುವುದರಿಂದ ದೇಶವೂ ಮುಳುಗುವುದಿಲ್ಲ, ಭಾಷೆಯೂ ಕೆಡುವುದಿಲ್ಲ, ಸತ್ಸಂಪ್ರದಾಯವೂ ಅಳಿಯುವುದಿಲ್ಲ. ಅದರಲ್ಲಿ ಜೀವವಿಲ್ಲದ್ದು ಹೋಗಲಿ, ಬಿಡಿ. ಸಂಸ್ಕೃತವನ್ನು ಜೀರ್ಣಿಸಿಕೊಂಡು ಇಂಗ್ಲಿಷನ್ನೂ ಜೀರ್ಣಿಸಿಕೊಂಡು ಉಳಿದಂತೆ ಉಳಿದು, ಕನ್ನಡವನ್ನು ಉಳಿಸಿ,ಬೆಳಸಿ! ಸಂಸ್ಕೃತದಲ್ಲಿಯೂ ಇಂಗ್ಲಿಷಿನಲ್ಲಿಯೂ ಸಿಕ್ಕದ್ದು ಹಿಂದಿಯಲ್ಲೇನಾದರೂ ಸಿಕ್ಕಿದರೆ ಅದನ್ನೂ ಕೊಳ್ಳಿ.

ಮಹನೀಯರೇ, ತಮ್ಮಲ್ಲಿ ಅನೇಕರು ಉಪಾಧ್ಯಾಯರು; ಚಿಕ್ಕ ಮಕ್ಕಳಿಗೆ ಕಲಿಸತಕ್ಕವರು; ಹಳ್ಳಿಗಾಡಿನಲ್ಲಿ ಬೆಳಕನ್ನೂ ನಂದಾದೀವಿಗೆಗಳನ್ನೂ ಹಚ್ಚತಕ್ಕವರು. ಕನ್ನಡ ಡಿಳ್ಳಿಯ ಭಾಷೆಯಲ್ಲ, ಹಳ್ಳಿಯ ಭಾಷೆ ಎಂದು ಹಳಿಯುವವರು ಹಳಿಯಲಿ. ಸಂತೋಷ. ನಮ್ಮ ಹಳ್ಳಿಯವರ ಭಾಷೆಗಾಗಿ ತಾವು ದುಡಿಯಿರಿ. ಕನ್ನಡನಾಡಿಗಾಗಿ ಕನ್ನಡ ಜನಕ್ಕಾಗಿ ತಾವು ಕನ್ನಡವನ್ನು ಹಿಡಿಯಿರಿ. ಸಾಧ್ಯವಾದರೆ ಸಂಸ್ಕೃತ, ಇಂಗ್ಲಿಷ್ ಈ ಉತ್ಕೃಷ್ಟ ಭಾಷೆಗಳ ಪ್ರಭಾವ, ಪ್ರಚೋದನ, ನಿಮ್ಮ ಹೃದಯವನ್ನು ಹೊಗಲಿ—ಅಲ್ಲಿ ಕನ್ನಡಿಸಿ, ಕನ್ನಡವಾಗಿ, ಕನ್ನಡಿಗರೆದೆಯಲ್ಲಿ ಮರಳಿ ಹುಟ್ಟುವಂತೆ, ಇರುವ ನಿಮ್ಮ ಅಲ್ಪ ಸ್ವಲ್ಪ ಚೈತನ್ಯವನ್ನು ಕನ್ನಡಕ್ಕೆರೆದು, ಕನ್ನಡದ ಸೇವೆಯನ್ನು ಮಾಡಿ, ಧನ್ಯರಾಗಿ. ಇವಕ್ಕೂ ದೊಡ್ಡ ದೊಡ್ಡ ಧ್ಯೇಯಗಳನ್ನು ದೊಡ್ಡ ಮೇಧಾವಿಗಳಿಗೂ ಜಗದುದ್ಧಾರಕರಿಗೂ ಬಿಡಿ. ನಿಮ್ಮ, ನನ್ನ ಜೀವಮಾನದ ತೀರ್ಪು ನಮ್ಮ ಕನ್ನಡ ತಾಯ ಸೇವೆ. ಓ ಕನ್ನಡಿಗರಿರಾ, ನಿಮ್ಮ ಹಿರಿಯರ

ಹೊದೋಟವನ್ನು ಹೊಕ್ಕು, ಹೊಸ ನೇಗಿಲಿನಿಂದ ಆಳವಾಗಿ ಉತ್ತು, ಹೊಸ ಹೊಸ ಹೊಂಬೆಳೆಗಳನ್ನು ಮಾಡಿ! ಕನ್ನಡನಾಡಿನ ಮಕ್ಕಳು ಕನ್ನಡದಿಂದ ಬೆಳೆಯಲಿ! ಕನ್ನಡನಾಡು ಕನ್ನಡದಿಂದ ಕೂಡಲಿ! ಕನ್ನಡ ಬಾಳಲಿ, ಗೆಲ್ಲಲಿ!

ಕನ್ನಡ ಹಬ್ಬ*

ಶ್ರೀ ಬಿ. ಎಂ. ಶ್ರೀಕಂಠಯ್ಯನವರು ತಮಗರ್ಪಿಸಿದ ಹಾರವನ್ನು ಹಾಗೆಯೇ ಕನ್ನಡನಾಡಿನ ಭೂಪಟಕ್ಕೆ ಹಾಕಿ ಮುಂದೆ ಬಂದು, ಈ ರೀತಿ ಭಾಷಣ ಮಾಡಿದರು:

ಕನ್ನಡ ದಾಸನಾದ ನನಗೆ ನಿಮ್ಮ ಆಶೀರ್ವಾದ ಮತ್ತು ಪ್ರೇಮಬಲದಿಂದ ಅನೇಕ ಸಭೆಗಳಲ್ಲಿ ಅಧ್ಯಕ್ಷ ಸ್ಥಾನವನ್ನು ಅಲಂಕರಿಸುವ ಗೌರವ ದೊರೆತಿದೆ. ಆದರೆ, ಈ ದಿನದ ಸಭೆಯಲ್ಲಿ ಕಂಡಷ್ಟು ಶ್ರದ್ಧೆ, ಸಡಗರ, ಉತ್ಸಾಹ, ಕೋಲಾಹಲ ಮತ್ತೆಲ್ಲೂ ನಾನು ಕಂಡಿರಲಿಲ್ಲ. ಕನ್ನಡವನ್ನು ಕಂಡರೆ ಅಕ್ಕರೆ ಮತ್ತು ಗೌರವವುಳ್ಳವರು ಈ ದಿನದ ಆನಂದವನ್ನೂ, ಇದರಿಂದ ಆಗಬಹುದಾದ ಪರಿಣಾಮವನ್ನೂ ಮನಗಂಡಿರಬೇಕು.

ಎಂದು ನಿಲ್ಲಿಸಿ, ಕನ್ನಡನಾಡಿನ ಭೂಪಟವನ್ನು ನಿರ್ದೇಶಿಸಿ, ಈ ರೀತಿ ಮುಂದುವರಿಸಿದರು.

ಇಗೋ ಈ ಕನ್ನಡತಾಯಿ. ಈಕೆಯ ವಯಸ್ಸನ್ನು ನಾವು ಪರೀಕ್ಷಿಸಬೇಕಾಗಿಲ್ಲ. ಕಂಡುಹಿಡಿಯಲೆಳಸಬೇಕಾಗಿಲ್ಲ. ಈ ತಾಯಿ ಬಹುಕಾಲದಿಂದ ಬದುಕಿ ಬಂದಿದ್ದಾಳೆ. ಬಹುಮಂದಿ ವೀರಪುತ್ರರನ್ನೂ, ನಾರೀಮಣಿಗಳನ್ನೂ ಹೆತ್ತಿದ್ದಾಳೆ. ಅನೇಕ ಸಾಧುಸಂತರೂ ರಾಜಸಮ್ರಾಜರೂ ಈ ನಾಡಿನಲ್ಲಿ ಅವತಾರಮಾಡಿದ್ದಾರೆ.

ಕನ್ನಡ ನಾಡಿನಲ್ಲಿ ದಿವ್ಯತೇಜಸ್ಸಿದೆ. ಪಂಪ, ರನ್ನ, ಕುಮಾರವ್ಯಾಸ, ಷಡಕ್ಷರಿ ಮುಂತಾದ ಕನ್ನಡಸಾಹಿತ್ಯ ರತ್ನಗಳನ್ನು ನೀವು ಕೇಳಿದ್ದೀರಿ. ಕನ್ನಡಿಗರಾದ ನೀವು ಯಾರಿಗೂ ತಲೆತಗ್ಗಿಸಬೇಕಾಗಿಲ್ಲ. ತಲೆಯೆತ್ತಿ ನಡೆಯ

---

* ತಾ|| ೧೪-೧೨-೧೯೩೭ ರಲ್ಲಿ ಮೈಸೂರು ನಗರದಲ್ಲಿ, ಆ ನಗರದ ಮತ್ತು ಜಿಲ್ಲೆಯ ಕರ್ಣಾಟಕ ಸಂಘಗಳ ಆಶ್ರಯದಲ್ಲಿ ನಡೆದ 'ಕನ್ನಡ ಉತ್ಸವ' ದ ಅಧ್ಯಕ್ಷಸ್ಥಾನದಿಂದ ಮಾಡಿದ ಭಾಷಣ.

ಬೇಕಾಗಿದೆ. ನಮ್ಮ ತಾಯಿ ಸ್ಥಾಪಿಸಿದ ರತ್ನಸಿಂಹಾಸನ ಇನ್ನೂ ನಡೆದು ಕೊಂಡು ಬರುತ್ತಿದೆ. ಕನ್ನಡನಾಡು ಅನಾಥವಾಗಿಲ್ಲ. ಕನ್ನಡ ನಾಡಿನ ಭಾರವನ್ನು ಹೊತ್ತು ಮೈಸೂರು ನಿಂತಿದೆ, ನಮ್ಮ ನಾಲ್ವಡಿ ಕೃಷ್ಣನ ಮೈಸೂರು!

ಕನ್ನಡಿಗರು ನಮ್ಮ ಹಿಂದಿನವರು ಏನು ಮಾಡಿದರು; ಇಂದಿನವರೇನು ಮಾಡುತ್ತಿದ್ದಾರೆ; ಮುಂದಿನವರೇನು ಮಾಡಬೇಕು—ಎಂಬುದನ್ನು ತಿಳಿದು ವರ್ತಿಸಬೇಕಾಗಿದೆ. ಮುಖ್ಯವಾಗಿ ನಮ್ಮ ಹೆಣ್ಣುಮಕ್ಕಳು ಕನ್ನಡಕ್ಕಾಗಿ ಕೊಂಚ ಕೊಂಚ ಕರುಳನ್ನು ಮರುಗಿಸಿಕೊಂಡು, ಕನ್ನಡ ತಾಯಿಯ ಸೇವೆ ಗಾಗಿ ಕೊಂಚ ಮನಸ್ಸುಮಾಡಿದರೆ, ಕನ್ನಡ ನಾಡಿನ ಮತ್ತು ನುಡಿಯ ಭವಿಷ್ಯಕ್ಕೆ ಯಾವ ಭಯವೂ ಇಲ್ಲ.

ಯಾವ ವಿಶ್ವಮಾತೆಯನ್ನು ನಾವು ಸೇವಿಸಿದರೂ ನಮ್ಮ ಮಾತೆಯನ್ನು ಮಾತ್ರ ಬಿಡುವಂತಿಲ್ಲ. ನಮ್ಮ ತಾಯಿ ಎಷ್ಟೇ ಬಡವೆಯಾದರೂ ಆಕೆ ಯನ್ನು ಕೀಳಾಗದಂತೆ ಮಕ್ಕಳು ನೋಡಿಕೊಳ್ಳಬೇಕು. ವಾಸ್ತವವಾಗಿ ನಮ್ಮ ತಾಯಿ ಬಡವೆಯಲ್ಲ. ಆಕೆಗಾಗಿ ನಾವು ಹೆಮ್ಮೆಯಿಂದಿರಬಹುದಾಗಿದೆ. ಆಕೆಯ ಪಾದಪದ್ಮದ ಮೇಲೆ ಭಕ್ತಿಯಿಂದ, ಪ್ರೀತಿಯಿಂದ ಹೂವಿಟ್ಟು, ಬೇಕಾದರೆ ಪ್ರಪಂಚವನ್ನೇ ಸುತ್ತಿಬರೋಣ. ಯಾವ ಆಕ್ಷೇಪಣೆಯೂ ಇಲ್ಲ.

ಕನ್ನಡವನ್ನು ಕುರಿತು ಹಲವರು ಹಲವಾಗಿ ಆಡುತ್ತಾರೆ. 'ಹಳ್ಳಿಯ ಭಾಷೆ' ಅನ್ನುವವರು ಕೆಲವರು. 'ಅವರಲ್ಲೇನಿದೆ' ಎನ್ನುವವರು ಕೆಲವರು. ಬೆದರಿಸುವವರು ಕೆಲವರು. ಕನ್ನಡತಾಯಿಗೆ ಹಾನಿ ತರವಂತೆ, ಅನ್ಯರ ಮಾತೆ ಯನ್ನು ಸೇವೆಮಾಡುವೆವೆನ್ನುವವರು ಕೆಲವರು. ಇದೂ ಒಂದು ಬುದ್ಧಿವಂತಿ ಕೆಯೆ? ನಮ್ಮ ಮನೆಯಲ್ಲಿ ತಾಯಿಯನ್ನು ಉಪವಾಸವಿರಿಸಿ, ಊರುತ್ಸವಕ್ಕೆ ಹೋಗುವುದೆ? ಪ್ರಪಂಚದ ಉತ್ಸವದಲ್ಲಿ ಮನೆಯನ್ನು ಬರಿದುಮಾಡುವುದೆ? ಕನ್ನಡ ಮಾತೆಯ ಮೂಲಕ ಭಾರತ ಮಾತೆಯನ್ನು ಸೇವಿಸೋಣ. ಕನ್ನಡ ಮಾತೆ ಉದ್ಧಾರವಾದರೆ ಭಾರತ ಮಾತೆಯೂ ವೃದ್ಧಿಯಾಗುತ್ತಾಳೆ.

ಕಡೆಯ ಮಾತಾಗಿ, ನಮ್ಮ ತಾಯಿಯ ಅಡಿಯಲ್ಲಿ ನಿರ್ವಂಚನೆ ಯಿಂದಲೂ ಭಕ್ತಿಯಿಂದಲೂ ಒಂದು ಹೂವು ಹಾಕೋಣ. ಆಮೇಲೆ ಯಾವ ಎಲ್ಲೆಯಲ್ಲಾದರೂ ಇರೋಣ. ಕನ್ನಡ ತಾಯಿಯನ್ನು ಮರೆಯದೆ ಆಕೆಯ

ಮೂಲಕ ಸರ್ವವನ್ನೂ ಸಾಧಿಸೋಣ. ತಾಯಿ ಹೆಮ್ಮೆಪಟ್ಟುಕೊಂಡರೆ ಮಕ್ಕಳು ಬದುಕಿಹೋಗುತ್ತಾರೆ. ಕನ್ನಡತಾಯಿ ನಮ್ಮನ್ನು ಆಶೀರ್ವದಿಸಲಿ. ಆಕೆಯ ವಿಜಯಪತಾಕೆ ಹಾರಲಿ. ಈ ಉತ್ಸವ ಎಲ್ಲೆಲ್ಲೂ ಬೆಳಗಲಿ, ಕನ್ನಡ ನಾಡು ದೊಡ್ಡದಾಗಲಿ.

ಪರಿಷತ್ತಿನ ಧ್ಯೇಯ*

ನನ್ನ ಹಿರಿಯರು ಅನೇಕರು ಈ ಕನ್ನಡದ ಪಂಜನ್ನು ಹೊತ್ತಿಸಿ ಕಾಪಾಡಿಕೊಂಡು ಬಂದು, ಅದನ್ನು ಈಗ ನನ್ನ ಕೈಗೆ ಕೊಟ್ಟಿದ್ದಾರೆ. ಅದರಲ್ಲಿ ಸೇರಿರಬಹುದಾದ ಕಲ್ಮಷವನ್ನು ತಿಳಿದು ಪ್ರಜ್ವಲಮಾಡಿ ಅದನ್ನು ಯಾವ ರೀತಿಯಲ್ಲಿಯೂ ಕೆಡಿಸದಂತೆ ನೋಡಿಕೊಳ್ಳುವುದು, ಸಾಧ್ಯವಾದರೆ ಅದನ್ನು ಮತ್ತಷ್ಟು ಪ್ರಜ್ವಲಿಸುವಂತೆ ಮಾಡುವುದು ನನ್ನ ಪ್ರಯತ್ನ, ಹೆಬ್ಬಯಕೆ. ತಾಯಿಗೆ ಸೇವೆ ಸಲ್ಲಿಸುವುದಕ್ಕೆ ಈ ಒಬ್ಬನ ದುಡಿಮೆ ಸಾಕೆ ? ಕನ್ನಡ ನುಡಿ, ಕನ್ನಡ ಜನ ಒಂದುಗೂಡಬೇಕಾದರೆ, ಮುಂದೆ ಬರಬೇಕಾದರೆ ಎಲ್ಲರಿಗೂ ಮೇಲಾಗಿ ನಿಲ್ಲಬೇಕಾದರೆ, ಒಬ್ಬನ ಕೆಲಸವೇ ಇದು ? ಈಗಾಗಲೇ ಕನ್ನಡಿಗರಲ್ಲಿ ಕನ್ನಡದ ನಂಬಿಕೆ ತಕ್ಕಷ್ಟಟ್ಟಿಗೆ ಬೇರೂರಿದೆ. ಕನ್ನಡದ ಜ್ಯೋತಿಯನ್ನು ಇನ್ನೆಷ್ಟು ದೂರ ಬೆಳಗಬಹುದೆಂಬುದನ್ನು ಅವರಾಗಲೇ ಕಾಣುತ್ತಿದ್ದಾರೆ. ನಮ್ಮ ಹಿರಿಯರು ತೋರಿಸಿದ ದಾರಿಯಲ್ಲಿಯೇ ಹೋಗಿ ನಮ್ಮ ಯೋಚನೆ, ಶಕ್ತಿ, ಮನೋಭಾವ—ಇವುಗಳನ್ನೂ ಅದರೊಂದಿಗೆ ಸೇರಿಸಿಕೊಂಡು ಹೋಗುವುದಾದರೆ ಏನನ್ನು ತಾನೆ ಮಾಡಲಾಗದು? ನಮ್ಮಲ್ಲಿ ಶಕ್ತಿಯಿಲ್ಲವೆ? ಮೇಧಾವಿಗಳಿಲ್ಲವೆ ? ನಮ್ಮ ನಾಡನ್ನು ಮೇಲಕ್ಕೆ ಎತ್ತುವುದರಲ್ಲಿ ನೆರವಾಗುವಂಥ

---

* ಶ್ರೀಮಾನ್ ಬಿ. ಎಂ. ಶ್ರೀಕಂಠಯ್ಯನವರು ಪರಿಷತ್ತಿನ ಉಪಾಧ್ಯಕ್ಷಪದವಿಗೆ ಚುನಾಯಿತರಾದುದಕ್ಕಾಗಿ ಬೆಂಗಳೂರಿನ ಕನ್ನಡ ಸಾಹಿತ್ಯ ಸಮಾಜದ ಆಶ್ರಯದಲ್ಲಿ ಮೈಸೂರು ಸಂಸ್ಥಾನದ ದಿವಾನ್ ಸಾಹೇಬರ ಅಧ್ಯಕ್ಷತೆಯಲ್ಲಿ ತಾ॥ ೨೦-೨-೧೯೩೮ರಲ್ಲಿ ಅಭಿನಂದನ ಸಭೆ ನಡೆದಾಗ ಶ್ರೀಯುವರು ಮಾಡಿದ ಉತ್ತರಪೂರ್ವಕವಾದ ಭಾಷಣ.

ಪುಣ್ಯಾತ್ಮರಿಲ್ಲವೆ ? ಪುಣ್ಯಭೂಮಿ ಅಲ್ಲವೇ ಇದು ? ಶ್ರೀ ವಿದ್ಯಾರಣ್ಯರಂಥ ಮಹನೀಯರು ಹುಟ್ಟಿದ ನಾಡಲ್ಲವೆ? ಸರ್ವಧರ್ಮ ಸಮನ್ವಯಾಚಾರ್ಯರುಗಳಿಗೆ ಎಡೆಕೊಟ್ಟ ನಾಡಲ್ಲವೆ ? ಇದಕ್ಕೆ ನಮ್ಮ ಶ್ರೀಮನ್ಮಹಾರಾಜರಿಗಿಂತಲೂ ಬೇರೊಬ್ಬರ ನಿದರ್ಶನ ಬೇಕೆ ? ಇಂಥಾ ಮಹಾನುಭಾವರು, ವೀರರು, ಕವಿಗಳು, ಶಿಲ್ಪಿಗಳು, ಗಾನವಿಶಾರದರು, ನಯಶಾಲಿಗಳು ಎರಡು ಸಾವಿರ ವರ್ಷಗಳಿಂದ ಮೆರೆಯುತ್ತಾ ಬಂದು, ಎಷ್ಟೋ ಸಾಮ್ರಾಜ್ಯಗಳನ್ನು ಕಟ್ಟಿ ಬಾಳಿದವರಿಗೆ, ಒರಟು ಕಲ್ಲುಗಳನ್ನು ಸಹ ತಮ್ಮ ಕಲೆಯಿಂದ ಮಾತನಾಡಿಸಿರುವವರಿಗೆ, ಚಿನ್ನದ ಕನ್ನಡಿಗರಿಗೆ, ಈಗ ನಾವು ಕೈಕೊಂಡಿರುವ ಕೆಲಸ ಅಷ್ಟು ಅಸಾಧ್ಯವಾದುವೇನೂ ಅಲ್ಲ—ಎಲ್ಲರೂ ಹೊಂದಿಕೊಳ್ಳುವುದೊಂದಾದರೆ.

ಈ ದಿವಸದ ಸಮಾರಂಭದಲ್ಲಿ ಕನ್ನಡ ಸಾಹಿತ್ಯ ಸಮಾಜದ ಅಧಿಕಾರಿಗಳು ಹನ್ನೆರಡು ನೂರು ರೂಪಾಯಿ ಬೆಲೆಯುಳ್ಳ ನಿಧಿಯನ್ನು ಕೆಲವು ಮಹನೀಯರ ಆಜೀವ ಸದಸ್ಯತ್ವದ ರೂಪದಲ್ಲಿ ಪರಿಷತ್ತಿನ ಶಾಶ್ವತ ನಿಧಿಗೆ ಕಾಣಿಕೆಯಾಗಿ ಒಪ್ಪಿಸಿದ್ದಾರೆ. ಅದಕ್ಕೆ ಪ್ರತಿಯಾಗಿ ನಾನು ಅವರಿಗೆ ನನ್ನನ್ನೇ ಕಾಣಿಕೆಯಾಗಿ ಒಪ್ಪಿಸುತ್ತೇನೆ. ಕನ್ನಡ ತಾಯಿಗಾಗಿ ಭಿಕ್ಷೆ ಬೇಡುವ ದಾಸಯ್ಯ ನಾನು ; 'ಮುಂದಕ್ಕೆ ಹೋಗಿ ಬಾ' ಎನ್ನದೆ ನೀವು ಭಿಕ್ಷೆಯನ್ನು ಇಕ್ಕುತ್ತಿದ್ದೀರಿ. ಇದು ಅತ್ಯಾವಶ್ಯಕ. ಅತ್ಯಗತ್ಯ. ಏಕೆಂದರೆ ಕನ್ನಡನಾಡಿನ ಕೆಲಸಕ್ಕೆ, ಕನ್ನಡಜನರ ಕೆಲಸಕ್ಕೆ, ಎಷ್ಟು ಮಂದಿ, ಎಷ್ಟು ಹಣ ಸೇರಿದರೂ ಸಾಲದು. ಕನ್ನಡ ನಾಡಿನಲ್ಲಿ ಹೆಂಗಸರು, ಮಕ್ಕಳು, ಒಕ್ಕಲಿಗರು, ಹಳ್ಳಿಯವರು, ಸರ್ವರೂ, ಯಾರೊಬ್ಬರೇ ಆಗಲಿ, ಯಾವ ಒಂದು ಅಜ್ಞಾನಾಂಧಕಾರದಲ್ಲಿ ಮುಳುಗಿದ್ದಾರೆಯೊ, ಅವರನ್ನೆಲ್ಲಾ ಮೇಲಕ್ಕೆತ್ತಿ, ಸ್ಫೂರ್ತಿಗೊಳಿಸಿ, ಆತ್ಮ ಬೆಳಗಿಸಿ, ಅವರಿಗೆ ಯಾವ ಒಂದು ಧೈರ್ಯ, ಯಾವ ಒಂದು ಕೆಚ್ಚು ಬೇಕೋ ಅದನ್ನು ಹೊಮ್ಮಿಸಿ, ಚಿಮ್ಮಿಸಿ ಈ ಹೊಸ ಪ್ರಕರಣದಲ್ಲಿ ಅವರು ತಲೆಯೆತ್ತಿ ಬಾಳುವ ಹಾಗೆ ಮಾಡಬೇಕಾದರೆ ಕನ್ನಡ ನುಡಿಗೆ, ಕನ್ನಡ ಜನಕ್ಕೆ ಕನ್ನಡಿಗರಲ್ಲಿ ಉದಾರಮನಸ್ಸಿನಿಂದ ಬೆಂಬಲವಾಗಿ ನಿಲ್ಲಲೇಬೇಕು. "ಕನ್ನಡ ನನಗೆ ಮುಂದು, ಅಕ್ಷರಾದವರು ಉಳಿದುದು ಏನಿದ್ದರೂ ಅದರ ಹಿಂದು. ಕನ್ನಡದ ಕಾವಲು ನಾಯಿ ನಾನು ; ಅದಕ್ಕೆ ಕಾವು ತಟ್ಟುವುದಾದರೆ ನಾನು ಬಗಳುವುದುಂಟು ; ಕಚ್ಚುವ ನಾಯಲ್ಲ. ಕೆಲವರು ನನ್ನನ್ನು ಸಂಸ್ಕೃತ ದ್ವೇಷಿಯೆಂದೂ, ಕೆಲವರು

ಹಿಂದೀ ದ್ವೇಷಿಯೆಂದೂ ಬಿರುದು ಕೊಟ್ಟಿರುತ್ತಾರೆ. ಇನ್ನು ಕೆಲವರು ನಾನು ಕನ್ನಡದ ದ್ವೇಷಿಯೆಂದೇ ಹೇಳಿಬಿಟ್ಟಿದ್ದಾರೆ. ಈ ಮಾತುಗಳಿಂದ ನನಗೆ ಅಸಮಾಧಾನವಿಲ್ಲ : ನಿಜವೇ ಎಂದು ಮನಸ್ಸನ್ನು ಶೋಧನೆ ಮಾಡಿಕೊಳ್ಳಲು ಅವಕಾಶ ಮಾಡಿಕೊಳ್ಳುತ್ತೇನೆ. ನಾನು ಯಾವುದರ ದ್ವೇಷಿಯೂ ಅಲ್ಲ. 'ದ್ವೇಷವನ್ನು ದೂರ ಇಟ್ಟು, ಪ್ರೇಮವನ್ನು ನನ್ನಲ್ಲಿ ತುಂಬು' ಎಂದೇ ನಾನು ಭಗವಂತನನ್ನು ನಿತ್ಯವೂ ಪ್ರಾರ್ಥಿಸುವುದು. ಪ್ರೇಮಮಯಿಯಾಗದವನು ಮನುಷ್ಯನಲ್ಲ. ನನ್ನ ಮೂಲಮಂತ್ರ ಇಷ್ಟೆ. ನಮ್ಮ ಮುಂದಾಳುಗಳಿಗೆ, ವಿದ್ಯಾವಂತರಿಗೆ ಕನ್ನಡದಲ್ಲಿ ಇನ್ನೂ ನಂಬಿಕೆ ಸಾಲದು ; ಮನಸ್ಸು ಎತ್ತೆತ್ತಲೋ ಹರಿಯುತ್ತಿದೆ. ಕನ್ನಡವನ್ನು ನಂಬಿ, ಕನ್ನಡವನ್ನು ಕೈಹಿಡಿಯಿರಿ ; ಕನ್ನಡಿಗರನ್ನು ಎಚ್ಚರಿಸಿ ಮುಂದಕ್ಕೆ ನಡಸಿ ; ಕನ್ನಡ ನಾಡನ್ನು ಬೆಳಗಿ. ಇದು ನಮ್ಮ ಗುರಿ, ಇದು ನಮ್ಮ ಸಾಧನೆ.

ಬಿನ್ನಹ : ತಾಯಿಯ ಕೈಂಕರ್ಯಕ್ಕೆ ನಿಲ್ಲಿ

ಕನ್ನಡ ನುಡಿ, ಕನ್ನಡ ನಯ, ಕನ್ನಡ ಜನ, ಒಂದಾಗಬೇಕಾಗಿದೆ, ಮುಂದಾಗಬೇಕಾಗಿದೆ. ಕನ್ನಡನಾಡು ಕೂಡಬೇಕಾಗಿದೆ. ಕನ್ನಡತಾಯಿ ಕರೆಯುತ್ತಿದ್ದಾಳೆ. ಕನ್ನಡಿಗರಾ, ಓಡಿ ಬನ್ನಿ, ಕೂಡಿ ಬನ್ನಿ, ಸರವಾಗಿ.

ಆಳುವವರು, ಹಿರಿಯವರು, ಕಿರಿಯವರು, ಎಲ್ಲ ಕನ್ನಡ ನಾಡಿಗರೂ ಸೇರಿ ಒಂದು ಕೇಂದ್ರಸ್ಥಾನವನ್ನು ಕಟ್ಟಿದರು, ಕನ್ನಡ ತಾಯ ಗುಡಿಯಾಗಿ : ಅದು ಪರಿಷತ್ತು. ಕನ್ನಡ ಬಾವುಟವನ್ನು ನನ್ನ ಹಿರಿಯರು ಎತ್ತಿ ಹಿಡಿದು, ಈಗ ನನ್ನ ಕೈಗೆ ಕೊಟ್ಟಿರುವರು. ಮೈಸೂರಿನಲ್ಲಿಯೂ, ಎಲ್ಲ ಕನ್ನಡನಾಡಿನಲ್ಲಿಯೂ ನನ್ನಲ್ಲಿ ಅಕ್ಕರೆ ಮತ್ತು ನಂಬಿಕೆಯುಳ್ಳವರು,—ಶಿಷ್ಯರು, ಮಿತ್ರರು, ಸಹೋದ್ಯೋಗಿಗಳು, ಹಿತೈಷಿಗಳು,—ನನಗೆ ಬೆಂಬಲವಾಗಬೇಕೆಂದು ಬೇಡುತ್ತೇನೆ. ಯಾವ ಕಾರಣದಿಂದಲಾದರೂ ನಾನು ಯಾರಿಗಾದರೂ ಬೇಡದವನಾಗಿದ್ದರೆ, ನಮ್ಮ ತಾಯ ಭಕ್ತಿಯಲ್ಲಿ ಅದನ್ನು ಮರೆತು, ನನ್ನೊಡನೆ ಕೈಂಕರ್ಯಕ್ಕೆ ನಿಲ್ಲಬೇಕೆಂದು ಬೇಡಿಕೊಳ್ಳುತ್ತೇನೆ.

ಕನ್ನಡವ, ಕನ್ನಡ ಮಕ್ಕಳೆಲ್ಲರ, ಕನ್ನಡ ನಾಡೆಲ್ಲದರ ಏಳಿಗೆಗೆ, ಹಿರಿಯ ಬಾಳಿಕೆಗೆ, ನಲಿವಿಗೆ, ಗೆಲಿವಿಗೆ, ಬನ್ನಿ. ಕನ್ನಡದ ಕಾಣಿಕೆಯನ್ನು ತನ್ನಿ.

ಜನ, ಮನ, ಧನ—ಕೂಡಿಕೊಳ್ಳಿ, ತಾಯನ್ನು ಕಾಪಾಡಿಕೊಳ್ಳಿ, ಮತ್ತೆ ದೊಡ್ಡವಳನ್ನಾಗಿ ಮಾಡಿ. ಭಾರತ ಮಾತೆಗೆ ಆಕೆ ಹಿರಿಯಮಗಳಾಗಿ ಸೇವೆಗೊದಗುವಂತೆ ಮಾಡಿ.

ಸಿರಿಗನ್ನಡಂ ಗೆಲ್ಗೆ ! ಕನ್ನಡ ತಾಯ್ ಬಾಳ್ಗೆ !

ಬೆಂಗಳೂರು, ಬಿ. ಎಂ. ಶ್ರೀಕಂಠಯ್ಯ,
೨೬–೧–೧೯೩೮. ಉಪಾಧ್ಯಕ್ಷ.

ಪರಿಷತ್ತಿನ ಗುರಿಗಳು

ಕನ್ನಡವನ್ನು ಬೆಳಸಿ, ಕನ್ನಡ ನಾಡಿನಲ್ಲೆಲ್ಲಾ ಒಂದು ರೂಪಕ್ಕೆ ತಂದು, ಅದರ ಮೂಲಕ ಕನ್ನಡಿಗರನ್ನೆಲ್ಲಾ ಒಂದುಗೂಡಿಸುವುದು ;

ಈ ಹೊಸ ಕಾಲದಲ್ಲಿ ಕನ್ನಡಿಗರಿಗೆ ಬೇಕಾದ ತಿಳಿವಳಿಕೆಯನ್ನೆಲ್ಲಾ ಕನ್ನಡದಲ್ಲಿ ಕೊಟ್ಟು, ಕನ್ನಡನಾಡಿನ ಮುನ್ನಡೆಗಾಗಿ ಕೆಲಸ ಮಾಡುವುದು ;

ಹಳೆಯ ಸಾಹಿತ್ಯದ ಪ್ರಚಾರ, ಹೊಸಸಾಹಿತ್ಯದ ಪೋಷಣೆ, ವ್ಯಾಸಂಗಗೋಷ್ಠಿ, ಪರೀಕ್ಷೆ, ವಿಮರ್ಶೆ, ಪರಿಶೋಧನೆ ;

ಸಮ್ಮೇಳನ, ವಸಂತೋತ್ಸವ, ಉಪನ್ಯಾಸ, ನಾಟಕ, ಗಮಕ ಕಲೆ, ಜನಸಂಸ್ಕೃತಿ, ವಿನೋದ, ಸ್ಪರ್ಧೆ, ಮಕ್ಕಳ ನಲಿವು ;

ಕನ್ನಡ ಸಂಘಗಳ ಒಕ್ಕೂಟ ಮತ್ತು ಕೈವಾಡದಿಂದ ಊರೂರು ಹಳ್ಳಿಹಳ್ಳಿಗಳಲ್ಲಿ ಬೆಳಕು, ಹುರುಪು, ಹೊಸಬಾಳು, ಹಬ್ಬ ;

ಒಂದು ಮಾತಿನಲ್ಲಿ **ಕನ್ನಡಿಗರ ಪುನರುಜ್ಜೀವನ.**

ಒಟ್ಟನಲ್ಲಿ ಪರಿಷತ್ತು **ಕನ್ನಡಿಗರ ಸಾರ್ವಜನಿಕ ವಿದ್ಯಾಪೀಠ :**

ದೊಡ್ಡ ಕೆಲಸ, ದೊಡ್ಡ ಪ್ರಯೋಜನ. ನೀವು ಬೇಕು—ಈವೊತ್ತೇ ಸದಸ್ಯರಾಗಿ, ಅಭಿಮಾನಿಗಳಾಗಿ, ನಮ್ಮನ್ನು ಹರಸಿ.

ಪರಿಷತ್ತು ಕನ್ನಡ ಮಹಾಜನರ ವಿಶ್ವವಿದ್ಯಾನಿಲಯ ವಾಗಬೇಕು*

ಮಹಿಳೆಯರೇ ಮತ್ತು ಮಹಾಶಯರೇ,

ಹೃದಯವು ಭಾರದಿಂದ ತುಂಬಿದರೆ ಮಾತುಗಳು ಹೊರಸೂಸುತ್ತವೆ. ಈ ದಿನ ಸಾಯಂಕಾಲ ಇಲ್ಲಿಗೆ ದಯಮಾಡಿಸುವುದಕ್ಕೆ ಅವಕಾಶವನ್ನು ಕಲ್ಪಿಸಿ ಕೊಂಡಿರುವುದರಲ್ಲಿ ಸರ್ ಮಿರ್ಜಾ ಇಸ್ಮಾಯಿಲ್‌ರವರು ಮಾತ್ರವೇ ಅಲ್ಲದೆ ತಾವುಗಳೆಲ್ಲರೂ ನಮ್ಮಲ್ಲಿ ಕರುಣವನ್ನು ತೋರಿಸಿದ್ದೀರಿ. ಅವರಲ್ಲಿಯೂ ಅನೇಕ ಕರ್ತವ್ಯಗಳ ಮಧ್ಯದಲ್ಲಿ, ಕಾರ್ಯಕ್ರಮಗಳ ಮಧ್ಯದಲ್ಲಿ ಮತ್ತು ಹಲವು ಆಹ್ವಾನಗಳಿದ್ದೂ ನಮ್ಮಲ್ಲಿ ಕೃಪೆತೋರಿ ಇಲ್ಲಿಗೆ ದಯಮಾಡಿಸಿದ್ದೀರಿ. ಬೆಂಗಳೂರು ನಗರನಿವಾಸಿಗಳಲ್ಲಿ ತೀರ ಸಂಸ್ಕೃತರಾಗಿರುವವರ ಗುಂಪಿಗೆ ಸೇರಿದವರಾದ ತಮ್ಮೆಲ್ಲರ ಮಾರ್ಗದರ್ಶಿತ್ವವೂ ಸಹಾನುಭೂತಿಯೂ ಮತ್ತು ಒತ್ತಾಸೆಯೂ ನಮಗೆ ಅವಶ್ಯವಾಗಿ ಬೇಕು. ಇಲ್ಲಿ ಕೆಲಸಮಾಡುತ್ತಿರುವ ನಾವೆಲ್ಲರೂ ಕೇವಲ ವ್ಯಾಸಂಗ ನಿರತರು; ಸವಿಗನಸುಗಳನ್ನು ಕಾಣುತ್ತಿರುವವರು; ಲೋಕಾನುಭವದಲ್ಲಿ ಬಹುಶಃ ನಾವು ಹಿಂದುಳಿದಿರಬಹುದು, ಬಹುಶಃ ನಾವು ಸರಸ್ವತಿಯ ಅನುಗ್ರಹಕ್ಕೆ ಪಾತ್ರವೇ ಹೊರತು ಲಕ್ಷ್ಮಿಯ ಅನುಗ್ರಹಕ್ಕೆ ಖಂಡಿತವಾಗಿಯೂ ಅಲ್ಲ, ನಾವು ಈ ಪರಿಷತ್ತನ್ನು ಮಹಾಜನರ ವಿಶ್ವವಿದ್ಯಾನಿಲಯವಾಗಿಯೂ, ಮಹಾಜನರ ವಿದ್ಯಾಭ್ಯಾಸ ಖಾತೆಯಾಗಿಯೂ ಪರಿಣಾಮಗೊಳಿಸಬೇಕೆಂದು ಸಂಕಲ್ಪ ಮಾಡಿದ್ದೇವೆ. ಇದು ಅಧಿಕಪ್ರಸಂಗವೆಂದು ಯಾರಿಗೂ ತೋರುವುದಿಲ್ಲವೆಂದು ನಾನು ನಂಬಿದ್ದೇನೆ. ಈ ಉದ್ದೇಶದಿಂದ ನಮ್ಮ ಕರ್ಣಾಟಕ ಸಂಘಗಳನ್ನು ಉಪಯೋಗಿಸಿಕೊಂಡು ಅವುಗಳ ಮೂಲಕ ಕನ್ನಡ ಭಾಷೆಯಲ್ಲಿ ಜನರಿಗೆ ಪೌರ್ವಾತ್ಯ ಪಾಶ್ಚಿಮಾತ್ಯ ಸಂಸ್ಕೃತಿಗಳ ಸಾರತತ್ತ್ವಗಳನ್ನು ಹದವರಿತು ಅನುಗೂಡಿಸಿ ಅರಿವಿನ ಬೆಳಕನ್ನು ಹರಡುವ ಯೋಚನೆಮಾಡಿದ್ದೇವೆ. ಅವರಿಗೆ ತಿಳಿಯುವಂತೆ ನಾನಾ ಸಂಗತಿಗಳನ್ನೂ

---

* ಮೈಸೂರು ಸಂಸ್ಥಾನದ ದಿವಾನ್‌ರವರಾದ ಸರ್ ಮಿರ್ಜಾ ಎಂ. ಇಸ್ಮಾಯಿಲ್‌ರವರ ಗೌರವಾರ್ಥವಾಗಿ ಶ್ರೀ ಶ್ರೀಕಂಠಯ್ಯನವರು ತಾ॥ ೨೭-೨-೧೯೩೮ರಲ್ಲಿ ಪರಿಷನ್ಮಂದಿರದಲ್ಲಿ ಏರ್ಪಡಿಸಿದ್ದ ಸಂತೋಷಕೂಟದಲ್ಲಿ ಮಾಡಿದ ಸ್ವಾಗತ ಭಾಷಣ.

ತಿಳಿಸಿ, ತಾಯ್‌ನುಡಿಯಾದ ಕನ್ನಡಭಾಷೆಯಲ್ಲಿ ಮಾತನಾಡುವವರೆಲ್ಲರೂ ಸ್ವಾತಂತ್ರ್ಯದಿಂದಲೂ ಸುಸ್ಮಾನದಿಂದಲೂ ಒಂದೇ ಕುಟುಂಬದ ಜನರಂತೆ ಒಟ್ಟುಗೂಡಲು ಸಾಧಕವಾಗುವಂತೆ ಕೆಲಸ ನಡಸುವ ಯೋಚನೆ ಮಾಡಿದ್ದೇವೆ. ಪರಿಷತ್ತು ಈ ವಿಧವಾದ ಕಾರ್ಯಕಲಾಪಗಳಿಗೆಲ್ಲ ಕೇಂದ್ರಸ್ಥಾನವಾಗಿದ್ದುಕೊಂಡು ಕನ್ನಡಿಗರ ಸೇವೆ ಮಾಡಬೇಕೆಂಬುದೂ, ಕರ್ಣಾಟಕ ಸಂಘಗಳಿಗೆ ದಾರಿ ತೋರಿಸಬೇಕೆಂಬುದೂ ನಮಗಿರುವ ಹೆಬ್ಬಯಕೆ. ಈ ಮಹತ್ತರವಾದ ಕಾರ್ಯದಲ್ಲಿ ಕೇವಲ ಗೀಳುಹಿಡಿದಿರುವವರೂ ಭ್ರಾಂತರೂ ಉದ್ಯುಕ್ತರಾಗಿದ್ದಾರೆಂಬ ಭಾವನೆಗೇ ಅವಕಾಶವಿಲ್ಲದಿರಲೆಂದು ಕೋರುತ್ತೇನೆ. ದೇಶದ ಮೇಧಾವಿಗಳಲ್ಲಿ ಶ್ರೇಷ್ಠರಾದವರೆಲ್ಲರೂ, ದೇಶದ ಉತ್ಸಾಹಶಾಲಿಗಳಲ್ಲಿ ಶ್ರೇಷ್ಠರಾದವರೆಲ್ಲರೂ ಈ ದೊಡ್ಡ ಕೆಲಸದಲ್ಲಿ ಭಾಗಿಗಳಾಗಬೇಕೆಂಬುದೂ, ನಾಡಿನ ಹಣದ ಭಾರಿ ಭಾರಿ ಮೊಬಲಗುಗಳು ಈ ದೊಡ್ಡ ಕೆಲಸಕ್ಕೆ ವಿನಿಯೋಗವಾಗಬೇಕೆಂಬುದೂ ನಮ್ಮ ಬಯಕೆ. ಕನ್ನಡತಾಯಿ ಮೈಸೂರು ಸಂಸ್ಥಾನದಲ್ಲಿಯೂ, ಮೈಸೂರು ಸಂಸ್ಥಾನದ ಹೊರಗೂ ಇರುವ ಕನ್ನಡ ಕಂದರನ್ನೆಲ್ಲ ಪ್ರೀತಿಯಿಂದ ಕರೆಯುತ್ತಿದ್ದಾಳೆ. ಬನ್ನಿ. ಅವಳ ಸೇವೆಗೆ ಸಿದ್ಧರಾಗಿ, ಅವಳ ಸೇವೆಯಿಂದ ಧನ್ಯರಾಗಿ. ಮುಂದಿನ ಸುಗ್ಗಿಯಲ್ಲಿ ಯಾವ ಬಗೆಯ ಫಲ ದೊರೆಯುವುದೋ ಈಗಲೇ ಹೇಳುವಂತಿಲ್ಲ. ಏಸುಕ್ರಿಸ್ತನು ಹೇಳಿದಂತೆ, 'ಪರಮಾರ್ಥದ ಭಾವಶುದ್ಧಿಯೊಂದು ಬೆಳೆಯಲಿ. ಉಳಿದುವೆಲ್ಲ ತಾವಾಗಿಯೇ ಒದಗುತ್ತವೆ.'

ಐದನೆಯ ವಸಂತ ಸಾಹಿತ್ಯೋತ್ಸವ

ಬೆಂಗಳೂರು, ಏಪ್ರಿಲ್-ಮೇ, ೧೯೩೮

ಸ್ವಾಗತ ಭಾಷಣ

ಕರ್ಣಾಟಕ ಸಾಹಿತ್ಯ ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿಯ ಪರವಾಗಿ, ಈ ವಸಂತ ಸಾಹಿತ್ಯೋತ್ಸವಕ್ಕೆ, ತಮ್ಮೆಲ್ಲರಿಗೂ ಸ್ವಾಗತ ಬಯಸುವುದು ನನ್ನ ಸಂತೋಷದ ಕರ್ತವ್ಯವಾಗಿದೆ. ಈ ಸಂದರ್ಭದಲ್ಲಿ ಒಂದು ಮಾತನ್ನು ನಾನು ಆರಂಭದಲ್ಲಿಯೇ ಆಡಿದರೆ, ತಾವು ಅದನ್ನು ಸಮಾಧಾನಚಿತ್ತದಿಂದ ಲಾಲಿಸುವಿರೆಂದು ನಂಬುತ್ತೇನೆ. ಈಚೆಗೆ ನಾಡಿನಲ್ಲಿ

ಕಾರಣಾಂತರಗಳಿಂದ ಜನರ ಮಸ್ಸಿನಲ್ಲಿ ನೆಮ್ಮದಿ, ಶಾಂತಿ—ಇವು ನಾವು ಬಯಸುವಷ್ಟು ಮಟ್ಟಿಗೆ ಇಲ್ಲವಾಗಿದೆ. ಆದರೂ ಕೂಡ ಈ ಪರಿಷತ್ತು ನಮ್ಮ ಕನ್ನಡತಾಯ ಗುಡಿ, ನಾವು ಈ ಉತ್ಸವವನ್ನು ನಡಸತಕ್ಕದ್ದು ಯಾರೊಬ್ಬರ ಸ್ವಂತ ಸಂತೋಷಕ್ಕಲ್ಲ, ದೇವರ ಗುಡಿಯಲ್ಲಿ ಕಾಲ ಕಾಲಕ್ಕೆ ಪದ್ಧತಿಯ ಪ್ರಕಾರ ಪೂಜೆ ಪುರಸ್ಕಾರಗಳು ನಡೆಯುವ ಏರ್ಪಾಟು ಇರುವಂತೆ, ಈ ಕನ್ನಡತಾಯ ಗುಡಿಯಲ್ಲಿ ಪದ್ಧತಿಯಂತೆ ನಡೆಯಬೇಕಾದ ಪೂಜೆ ಉತ್ಸವಗಳನ್ನು ನಡಸುವುದು ನಮ್ಮ ಕರ್ತವ್ಯವಾಗಿದೆ—ಎಂಬುದನ್ನು ಗಮನಕ್ಕೆ ತಂದುಕೊಂಡು ಈ ಸಮಾರಂಭವನ್ನು ನೇರವೇರಿಸಲು ನಾವೆಲ್ಲ ಇಂದು ಇಲ್ಲಿ ಕೂಡಿದ್ದೇವೆ. ತಾವು ಸಹ ವಿಶೇಷ ಸಂಖ್ಯೆಯಲ್ಲಿ ಸೇರಿ, ನಮ್ಮ ಕರ್ತವ್ಯವನ್ನು ನಡಸಿಕೊಡಲು ಇದೇ ಅಭಿಮಾನದಿಂದ ಕೂಡಿದವರಾಗಿ ಬಂದಿದ್ದೀರಿ ಎಂದು ನಾನು ತಿಳಿದಿದ್ದೇನೆ.

ಪರಿಷತ್ತಿನ ದೊಡ್ಡ ಗುರಿ

ಈಗ ೨೨ ವರ್ಷಗಳ ಹಿಂದೆ ನಮ್ಮ ಕನ್ನಡ ನಾಡಿನ ಹಿರಿಯರೆಲ್ಲ ಸೇರಿ ಈ ಪರಿಷತ್ತನ್ನು ಸ್ಥಾಪಿಸಿದರು. ಇದು ನಮ್ಮ ಶ್ರೀಮನ್ಮಹಾರಾಜರವರ ಕೃಪಾಶ್ರಯದಲ್ಲಿ, ಕನ್ನಡ ಭಾಷೆ, ಕನ್ನಡ ಸಾಹಿತ್ಯ, ಕನ್ನಡ ಸಂಸ್ಕೃತಿ ಇವುಗಳ ಅಭ್ಯುದಯಕ್ಕೆ ಕನ್ನಡ ನಾಡಿಗೆಲ್ಲ ಕೇಂದ್ರಸ್ಥಾನವಾಗಿರಬೇಕೆಂಬ ಉದ್ದೇಶದಿಂದ, ಕನ್ನಡದ ಹಿರಿಯ ಮುಂದಾಳುಗಳು ಇಷ್ಟಪಟ್ಟ ಮೇರೆಗೆ ಈ ಬೆಂಗಳೂರಿನಲ್ಲಿ ಸ್ಥಾಪನೆಯಾಯಿತು. ಹೀಗೆ, ಕನ್ನಡ ಜನ ಉದ್ಧಾರವಾಗಬೇಕು, ಕನ್ನಡ ಜನ ಒಂದು ಹಿರಿಯ ಜನಾಂಗವಾಗಬೇಕು—ಎಂಬ ಒಂದು ದೊಡ್ಡ ಗುರಿಯಿಂದ ಕಟ್ಟಿದ, ಕನ್ನಡಮ್ಮನ ಪವಿತ್ರ ದೇವಾಲಯವ ಈ ಪರಿಷತ್ತು ಆಗಿನಿಂದ ಇದುವರೆಗೆ ದಿನೇ ದಿನೇ ಅಭಿವೃದ್ಧಿಗೆ ಬರುತ್ತಿದೆ. ಅಖಿಲ ಕರ್ನಾಟಕದ ಮಹಾಜನರ ಅಭಿಮಾನ ಇದರಮೇಲೆ ಹೆಚ್ಚು ಹೆಚ್ಚಾಗಿ ಬೆಳೆಯುತ್ತಾ ಬಂದಿದೆ. ಈ ಪರಿಷತ್ತು ಸಾಧ್ಯವಾದ ಮಟ್ಟಿಗೆ, ಎಲ್ಲಾ ಕರ್ನಾಟಕದ ಮಹಾಜನರ ಸೇವೆಯನ್ನು ತನ್ನ ಗಮನದಲ್ಲಿರಿಸಿಕೊಂಡು ಕೆಲಸಮಾಡುತ್ತಾ ಬಂದಿದೆ. ಯಾವ ಉದ್ದೇಶದಿಂದ ಹಿರಿಯರು ಇದನ್ನು ಸ್ಥಾಪನೆ ಮಾಡಿದರೋ ಆ ಉದ್ದೇಶವನ್ನು ಸಾಧಿಸಲು ಎಷ್ಟು ಮಟ್ಟಿಗೆ ಪರಿಷತ್ತು ಕೆಲಸ ಮಾಡುತ್ತಿರುವುದೆಂಬುದನ್ನು ತಾವೆಲ್ಲ ತಿಳಿದವ

ರಾಗಿದ್ದೀರಿ. ಧನ ಜನಸಹಾಯ ಒದಗಿದಷ್ಟು ಮಟ್ಟಿಗೆ, ಸ್ವಲ್ಪವೂ ವಂಚನೆಯಿಲ್ಲದೆ ಪರಿಷತ್ತು ತನ್ನ ಕೈಂಕರ್ಯವನ್ನು ನಿರ್ಮಲಚಿತ್ತದಿಂದ ಮಾಡುತ್ತ ಬಂದಿರುವುದೆಂದು ನಾನು ವಿನಯದಿಂದ ತಮ್ಮಲ್ಲಿ ವಿಜ್ಞಾಪಿಸುತ್ತೇನೆ.

ಮಹಾಪ್ರಭುಗಳ ಆಶ್ರಯ

ನಮ್ಮನ್ನಾಳುವ ಮಹಾಪ್ರಭುಗಳಾದ ಶ್ರೀಮನ್ಮಹಾರಾಜರವರು ಈ ಸಂಸ್ಥೆಗೆ ಮಹಾಪೋಷಕರಾಗಿ, ಇದರಲ್ಲಿ ಹೆಚ್ಚು ಮಮತೆಯನ್ನಿಟ್ಟುಕೊಂಡಿದ್ದಾರೆ. ಇಂಥ ಉತ್ಸವಗಳಲ್ಲಿ ಅವರಿಗಿರುವ ವಿಶೇಷ ಆದರದಿಂದ ಪ್ರತಿ ಸಮಾರಂಭಕ್ಕೂ ದ್ರವ್ಯರೂಪವಾದ ಸಹಾಯವನ್ನು ಕರುಣಿಸುತ್ತ ಬಂದಿದ್ದಾರೆ........ಶ್ರೀಮದ್ಯುವರಾಜರವರು........ಪರಿಷತ್ತಿನ ಈ ಉತ್ಸವದ ಕಾರ್ಯಗಳು ಅತ್ಯಂತ ಯಶಸ್ವಿಯಾಗಿ ನಡೆಯುವಂತೆ ಹಾರೈಸಿ ಸಂದೇಶವನ್ನೂ, ಒಂದು ನೂರು ರೂಪಾಯಿಗಳನ್ನೂ ಕಳುಹಿಸಿ ಕೊಟ್ಟಿದ್ದಾರೆ.

ಶ್ರೀ ಶಾಮರಾಯರವರ ಉಪಕಾರ

ಈ ದಿವಸ ಈ ಅಗ್ರಸ್ಥಾನವನ್ನು ಅಲಂಕರಿಸಿ ನಮ್ಮ ಉತ್ಸವವನ್ನು ಪ್ರಾರಂಭ ಮಾಡಿಕೊಡುವುದಕ್ಕೆ ಒಪ್ಪಿ ದಯಮಾಡಿಸಿರುವ, ರಾಜಕಾರ್ಯ ಪ್ರಸಕ್ತ ರಾವ್ ಬಹದ್ದೂರ್ ಎಂ. ಶಾಮರಾಯರವರು ನಮ್ಮೆಲ್ಲರ ಕೃತಜ್ಞತೆಗೆ ಪಾತ್ರರಾದ ಮಹನೀಯರು. ಶ್ರೀಮಾನ್ ಎಂ. ಶಾಮರಾಯರವರು ಕನ್ನಡದಲ್ಲಿ ಭೀಷ್ಮಾಚಾರ್ಯರ ಹಾಗೆ. ಶ್ರೀಗಳಾದ ಎಂ. ಶಾಮರಾಯರು, ಎಚ್. ವಿ. ನಂಜುಂಡಯ್ಯನವರು ಮತ್ತು ಚ. ವಾಸುದೇವಯ್ಯನವರು—ಇವರುಗಳಿಂದ ಕನ್ನಡದ ಬೆಳವಣಿಗೆಗೆ ಆಗಿರುವ ಸಹಾಯ ಅಮೋಘವಾದುದು. ಕನ್ನಡಕ್ಕೆ ಪ್ರೋತ್ಸಾಹಕೊಟ್ಟು ಅದನ್ನು ಜೀವಂತವಾಗಿರಿಸಿದವರು ಇವರು. ನಾನು ಹುಡುಗನಾಗಿದ್ದ ಕಾಲದಲ್ಲಿ ಕನ್ನಡವನ್ನು ಕೇಳುವವರೇ ಇಲ್ಲವೆಂದು ಹೇಳಿದರೆ ತಪ್ಪಾಗಲಾರದು. ಅಂಥ ಕಾಲದಲ್ಲಿ ಕನ್ನಡಕ್ಕೆ ಧೈರ್ಯಕೊಟ್ಟು ಅದನ್ನು ಕಾಪಾಡಿದವರು, ಮೇಲೆತ್ತಿದವರು, ಶ್ರೀಮಾನ್ ಶಾಮರಾಯರು. ಅವರು ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಗಳಾದ ಮೇಲಂತೂ ಮೈಸೂರು ದೇಶದಲ್ಲಿ ಕನ್ನಡದ ಏಳಿಗೆ ಇವರಿಗೇ ಸೇರಿದ ಕೆಲಸವಾಯಿತು. ಆಗಿನ ಕಾಲದಲ್ಲಿ ಪ್ರಕಟವಾದ ಪುಸ್ತಕಗಳ ಮುನ್ನುಡಿಗಳನ್ನು ನೋಡಿದರೆ, ಆಗಿನ

ಎಷ್ಟು ಪುಸ್ತಕಗಳು ಅವರ ಪ್ರೋತ್ಸಾಹದಿಂದ ಪ್ರಕಟವಾಗಿವೆಯೆಂಬ ಸಂಗತಿ ತಿಳಿಯುತ್ತದೆ. ಆಗ ಕನ್ನಡಕ್ಕೆ ಒಂದು ಸ್ಫೂರ್ತಿಕೊಟ್ಟು ಕನ್ನಡಕ್ಕೆ ನಾಯಕರಾಗಿ ಹೇಗೆ ನಿಂತಿದ್ದರೋ, ಹಾಗೆಯೇ ಇಂದಿಗೂ ಕೂಡ ಅವರು ನಮಗೆಲ್ಲ ನಾಯಕರಾಗಿ ನಿಂತಿದ್ದಾರೆ. ಇಂಥ ವೃದ್ಧಾಪ್ಯದ ವಯಸ್ಸಿನಲ್ಲಿಯೂ ಕೂಡ ಅವರು ಕನ್ನಡ ದೇಶದ ಮಮತೆ ವಾತ್ಸಲ್ಯಗಳಿಂದ ಮಾಡುತ್ತಿರುವ ತಮ್ಮ ಸೇವೆಯನ್ನು ನಿಲ್ಲಿಸಿಲ್ಲ. ಈಗಲೂ ಪುಸ್ತಕಗಳನ್ನು ಬರೆಯುತ್ತಿದ್ದಾರೆ. ಈಚೀಚೆಗೆ ಮೈಸೂರು ದೇಶದ ಚರಿತ್ರೆಯನ್ನು ವಿಸ್ತಾರವಾಗಿ. ಒಂದು ಹೊಸ ದೃಷ್ಟಿಯಿಂದ ವಿಚಾರಮಾಡಿ ಬರೆದಿದ್ದಾರೆ. ಇಂಥವರು ಈ ದಿನ ನಮ್ಮ ಪ್ರಾರ್ಥನೆಯನ್ನು ಲಾಲಿಸಿ ಇಲ್ಲಿಗೆ ದಯಮಾಡಿಸಿದ್ದು ಒಂದು ಪ್ರಸಾದ. ಅವರು ಈ ದಿನದ ಕಾರ್ಯಕಲಾಪಗಳನ್ನು ನಡಸಿಕೊಟ್ಟು ಅನುಗ್ರಹಿಸ ಬೇಕೆಂದು ವಿನಯದಿಂದ ಪ್ರಾರ್ಥಿಸುತ್ತೇನೆ.

ಅರಮನೆ ಗುರುಮನೆಗಳ ಬೆಂಬಲ

ಕನ್ನಡ ಸಾಹಿತ್ಯ ಪರಿಷತ್ತಿನ ಬಲಾಬಲಗಳನ್ನು ಕುರಿತು ಒಂದೆರಡು ಮಾತುಗಳನ್ನು ಹೇಳಲು ಅವಕಾಶ ಬೇಡುತ್ತೇನೆ. ಮಹಾಜನರು. ಸಾರ್ವಜನಿಕರು ಇನ್ನೂ ಸಾಕಾದಷ್ಟು ಎಚ್ಚತ್ತುಕೊಂಡು ಕನ್ನಡವನ್ನು ಕಾಪಾಡಿಕೊಳ್ಳುವ ಕಾಲ ಬರಲಿಲ್ಲ. ಈಗ, ಪರಿಷತ್ತಿಗೆ ಬೆಂಬಲವಾಗಿರುವುವು ಎರಡು: ಅರಮನೆ ಮತ್ತು ಗುರುಮನೆ. ಪರಿಷತ್ತು ಇವನ್ನು ನಂಬಿಕೊಂಡಿದೆ. ಅರಮನೆಯಿಂದ ಎಷ್ಟು ಸಹಾಯವಾಗುತ್ತಾ ಇದೆ, ಅವರು ಎಷ್ಟರಮಟ್ಟಿಗೆ ಪರಿಷತ್ತನ್ನು ಪೋಷಣೆಮಾಡಿಕೊಂಡು ಬಂದಿದ್ದಾರೆ ಎಂಬುದರ ತಮ್ಮೆಲ್ಲರಿಗೂ ತಿಳಿದೇ ಇದೆ. ಶ್ರೀಜಯಚಾಮರಾಜೇಂದ್ರ ಒಡೆಯರವರೂ ಕೂಡ ಈಗಾಗಲೇ ಕನ್ನಡದಲ್ಲಿ ತಮಗಿರುವ ಅತಿಶಯವಾದ ಪ್ರೇಮವನ್ನೂ ಅಭಿಮಾನ ವಿಶ್ವಾಸಗಳನ್ನೂ ತೋರಿಸುತ್ತಿದ್ದಾರೆ....

ಇನ್ನು ಗುರುಮನೆಯ ವಿಚಾರ: ಗುರುಮನೆಯ ಪ್ರೋತ್ಸಾಹವನ್ನು ಕುರಿತು ಕೆಲವು ಮಠಗಳ ಸ್ವಾಮಿಗಳವರನ್ನು ಕಂಡು ಪ್ರಾರ್ಥನೆ ಮಾಡಿಕೊಂಡಿದ್ದೇನೆ. ಕನ್ನಡ ನಿಮಗೆ ಸೇರಿದ್ದು, ಅದರ ಸೇವೆಗೆ ನಿಮ್ಮ ಸಹಾಯ ಸಹಕಾರಗಳು ಅತ್ಯಾವಶ್ಯಕ, ನಿಮ್ಮ ಸಹಾಯವಿಲ್ಲದೆ ಅದು ಬೇಗನೆ ಅಭಿವೃದ್ಧಿ ಹೊಂದಲಾರದು—ಎಂದು ಬಿನ್ನಹ ಮಾಡಿಕೊಂಡದ್ದಾಗಿದೆ. ಹಿಂದಿನ

ಅನೇಕ ಸಾಹಿತ್ಯ ಗ್ರಂಥಗಳಲ್ಲಿ ಮತದ ವಿಷಯವೇ ಬಹಳವಾಗಿದೆ. ಮತ ಪ್ರಚಾರಕ್ಕೆ ಕನ್ನಡ ಬಹು ಸಹಾಯಮಾಡಿದೆ. ಕನ್ನಡ ಮುಂದೆ ಬಂದರೆ ಕನ್ನಡ ಸಂಸ್ಕೃತಿ, ಕನ್ನಡಿಗರ ಧರ್ಮ ಎಲ್ಲವೂ ಮುಂದೆ ಬರುತ್ತದೆ, ಪ್ರಚಾರ ವಾಗುತ್ತದೆ. ಈ ಅರಿಕೆಯನ್ನು ಅವರು ಮನಸ್ಸಿಗೆ ತಂದುಕೊಂಡಿದ್ದಾರೆ. ಇನ್ನು ಮುಂದೆ ಗುರುಮನೆಗಳಿಂದಲೂ, ಕನ್ನಡನಾಡಿನ ಎಲ್ಲಾ ಪ್ರಭು ಗಳಿಂದಲೂ, ಬೆಂಬಲವನ್ನು ಪರಿಷತ್ತು ಪಡೆಯುವುದೆಂದು ನಾನು ನಂಬಿದ್ದೇನೆ.

ಹಿಂದಿನ ಹಿರಿಯರ ಸೇವೆ

ಈ ಪರಿಷತ್ತಿನಲ್ಲಿ ನನಗೆ ಹಿರಿಯರಾದ ಅನೇಕ ಮಹನೀಯರು ಕೆಲಸ ಮಾಡಿ, ಈ ಸಂಸ್ಥೆಯನ್ನು ಒಂದು ಗಣ್ಯವಾದ ಸ್ಥಿತಿಗೆ ತಂದು, ಈಗ ಅದರ ಸೂತ್ರಗಳನ್ನು ನನ್ನ ಕೈಗೆ ಕೊಟ್ಟಿದ್ದಾರೆ. ಇದನ್ನು ನಾನು ನಿಮ್ಮೆಲ್ಲರ ಆಶೀರ್ವಾದ ಬಲದಿಂದ ನಡಸಿಕೊಂಡು ಹೋಗಬೇಕಾಗಿದೆ. ಈ ಸಂಸ್ಥೆಯ ಸೂತ್ರಗಳನ್ನು ಹಿಂದಿನವರು ವಹಿಸಿಕೊಂಡು ದಕ್ಷತೆಯಿಂದ ಕೆಲಸ ಮಾಡಿದ ಸಾಧನೆಯ ಫಲದಿಂದಲೂ, ಸಮ್ಮೇಳನಗಳನ್ನು ನಡಸುವುದು, ಈ ವಸಂತ ಸಾಹಿತ್ಯೋತ್ಸವದಂತಹ ಸಮಾರಂಭಗಳನ್ನು ಹೂಡುವುದು ಮುಂತಾದ ಕಾರ್ಯಗಳಿಂದಲೂ ಕನ್ನಡಿಗರಲ್ಲಿ ಒಂದು ಧೈರ್ಯ, ಐಕಮತ್ಯವುಂಟಾಗಿರು ವುದೆಂಬುದು ತಮ್ಮೆಲ್ಲರಿಗೂ ತಿಳಿದ ವಿಷಯವಾಗಿದೆ. ಪರಿಷತ್ತಿನ ಪುರೋಭಿ ವೃದ್ಧಿಯನ್ನು ಮನಸ್ಸಿಗೆ ತಂದುಕೊಂಡು ಇದಕ್ಕೆ ಬೇಕಾದ ಬಲವನ್ನು ಕೊಡುವ ಮತ್ತು ಕೂಡಿಸಿಕೊಡುವ ಕೆಲಸ ಪ್ರತಿಯೊಬ್ಬ ಕನ್ನಡಿಗನ ಕರ್ತವ್ಯ ವಾಗಿದೆ. ಈ ಕಡೆಗೆ ತಾವು ತಮ್ಮ ಗಮನವನ್ನು ಕೊಡಬೇಕೆಂದು ಬೇಡುತ್ತೇನೆ.

ಕನ್ನಡಜನ, ಕನ್ನಡಮಾತು, ಕನ್ನಡಭಾಷೆ ಸಾಹಿತ್ಯ ಸಂಸ್ಕೃತಿಗಳು ಒಂದು ಎಂಬ ದೊಡ್ಡ ಗುರಿಯನ್ನಿಟ್ಟುಕೊಂಡು ಈ ದಿವ್ಯ ಮಂದಿರದಲ್ಲಿ ಅನೇಕರು ನಾನಾ ದೃಷ್ಟಿಗಳಿಂದ ಕೆಲಸಮಾಡಿದ್ದಾರೆ. ಅವರ ಎಲ್ಲ ಕಾರ್ಯ ಗಳೂ ಅವರು ಕನ್ನಡತಾಯ ಪಾದದಲ್ಲಿ ಹಾಕಿದ ಹೂವುಗಳು. ದೊಡ್ಡ ದೊಡ್ಡ ಸಾಹಿತ್ಯ ಕಾರ್ಯಗಳು, ಮತ ಸಮನ್ವಯ ವಿಚಾರಗಳು—ಎಲ್ಲವೂ ಒಂದು ನಾಗರಿಕ ಜನಾಂಗದಲ್ಲಿ ಶಕ್ತಿಯನ್ನೂ ಅಭಿಮಾನವನ್ನೂ ಹುಟ್ಟಿಸ ತಕ್ಕ ಸಂಗತಿಗಳು. ನಮ್ಮ ಹಿರಿಯರೂ ಮಿತ್ರರೂ ಇಂಥ ಅನೇಕ ಕಾರ್ಯ

ಗಳನ್ನು ನಡಸಿಕೊಂಡು ಹೋಗಿದ್ದಾರೆ. ಕನ್ನಡತಾಯ ಮಕ್ಕಳು ತಾವೆಲ್ಲ ಒಂದು ಜನ ಎಂದೂ, ನಮ್ಮ ಹಿಂದಿನ ಸಾಹಿತ್ಯ, ಚರಿತ್ರೆಗಳನ್ನು ತಿಳಿದರೆ ನಾವು ಯಾವ ಜನಕ್ಕೂ ಕಡಮೆಯಾದವರೆಂದು ಕುಗ್ಗಬೇಕಾಗಿಲ್ಲ ಎಂದೂ ತೋರಿದ್ದಾರೆ, ಸಾರಿದ್ದಾರೆ. ಕನ್ನಡಿಗರೆಲ್ಲ ಐಕ್ಯತೆಯ ಭಾವದಿಂದ ಬೇರೆ ಬೇರೆ ಊರುಗಳಲ್ಲಿ ಕೂಡಿ ಸಮ್ಮೇಳನಗಳನ್ನು ನಡಸಿ, ಕನ್ನಡಿಗರಲ್ಲಿ ಹೊಸ ಚೈತನ್ಯವನ್ನು ಹುಟ್ಟಿಸಿದ್ದಾರೆ. ಈ ಒಕ್ಕೂಟದಲ್ಲಿ ಒಬ್ಬರಲ್ಲೊಬ್ಬರು ಕೈ ಕೂಡಿಸಿ, ಒಬ್ಬರಲ್ಲೊಬ್ಬರು ನಂಬಿಕೆಯಿಟ್ಟು ಕನ್ನಡಿಗರೆಲ್ಲರೂ ನೆರವಾಗುವು ದಾದರೆ, ಈಗ ಹುಟ್ಟಿರುವ ಚೈತನ್ಯ ಹೆಚ್ಚು ಹುರುಪಿನಿಂದ ಕೆಲಸಮಾಡಿ ಇನ್ನೂ ಹೆಚ್ಚಾಗಿ ಕನ್ನಡಿಗರ ಮೇಲ್ಮೆಗೆ ಸಾಧಕವಾಗುತ್ತದೆ.

ಪರಿಷತ್ತಿನ ಮೂರು ಸಮಾರಂಭಗಳು ; ಪ್ರಚಾರ ಕಾರ್ಯ

ನಾವು ವರ್ಷಕ್ಕೆ ಹೀಗೆ ಒಂದು ಸಲ ಕೂಡಿದರೆ ಸಾಲದು ಎಂದು ಭಾವಿಸಿ, ನವರಾತ್ರಿಯ ಕಾಲದಲ್ಲಿ ಕನ್ನಡದ ಹಬ್ಬವೆಂದು ಮೂರು ದಿವಸಗಳ ಹಬ್ಬವನ್ನು ಆಚರಿಸಬೇಕೆಂದು ಪರಿಷತ್ತು ಸೂಚನೆಮಾಡಿತು. ಈ "ಕನ್ನಡದ ಹಬ್ಬ," "ನಾಡಹಬ್ಬ" ನಾಡಿನ ಊರೂರುಗಳಲ್ಲಿ ನಡೆಯು ತ್ತಿರುವುದು ದೊಡ್ಡ ಸಂತೋಷ. ಈ ಸಾಹಿತ್ಯೋತ್ಸವವೂ, ಅದೇ ಉದ್ದೇಶ ದಿಂದಲೇ ಪ್ರೇರಿತವಾದುದು. ಈ ವಸಂತ ಸಾಹಿತ್ಯೋತ್ಸವದಲ್ಲಿ ಕನ್ನಡ ನಾಡಿನ ನಾನಾ ಭಾಗಗಳ ಸಾಹಿತಿಗಳನ್ನು ಬರಮಾಡಿಕೊಂಡು, ಕನ್ನಡದ ಪುರೋಭಿವೃದ್ಧಿಯ ಬಗ್ಗೆ ವಿಚಾರವಿನಿಮಯ ಮಾಡಿಕೊಳ್ಳುವುದು ಪದ್ಧತಿ ಯಾಗಿ ನಡೆದುಕೊಂಡುಬಂದಿದೆ. ಶ್ರೀ ಡಿ. ವಿ. ಗುಂಡಪ್ಪನವರು ಇದನ್ನು ಪ್ರಾರಂಭಮಾಡಿದವರು ; ಅವರು ನಾಲ್ಕು ವರ್ಷ ಇದನ್ನು ನಡಸಿಕೊಟ್ಟಿ ದ್ದಾರೆ. ಈಗ ಅದು ಪದ್ಧತಿಯಾಗಿಬಿಟ್ಟಿದೆ. ಹೇಗೋ ಹಣ ಕೂಡುತ್ತದೆ, ಕೆಲಸ ನಡೆದುಹೋಗುತ್ತದೆ. ಹೀಗೆ ವರ್ಷಕ್ಕೆ ಮೂರು ಬಾರಿ ನಾಡಿನ ಹಿರಿಯರೆಲ್ಲ ಸೇರಿ, ಒಂದು ಗುರಿಯನ್ನಿಟ್ಟುಕೊಂಡು, ಆ ಗುರಿಯನ್ನು ಸಾಧಿ ಸಲು ಎಲ್ಲರೂ ಬೆಂಬಲವಾಗುವುದಕ್ಕೆ ಅನುಕೂಲವಾಗುವಂತೆ ಈ ಸಮಾ ರಂಭಗಳು ನಡೆಯುತ್ತಾ ಇವೆ. ಪ್ರತಿ ವರ್ಷವೂ ಈ ಊರಲ್ಲಿ ಮಾತ್ರ ನಡಸುತ್ತಿದ್ದ ಈ ವಸಂತ ಸಾಹಿತ್ಯೋತ್ಸವವನ್ನು ಈ ಸಾರಿ ಮೈಸೂರಿನ ಒಂದು ಹಳ್ಳಿಯನ್ನು ಮುಟ್ಟಿಸಬೇಕೆಂದೂ, ಉತ್ತರ ಕರ್ನಾಟಕದ ಮುಖ್ಯ

ನಗರವೊಂದರಲ್ಲಿ ನಡಸಬೇಕೆಂದೂ ಸಂಕಲ್ಪ ಮಾಡಿದ್ದೇವೆ. ಪರಿಷತ್ತಿನ ಪ್ರಾರ್ಥನೆಯನ್ನು ಈ ವರ್ಷ ಆನವಟ್ಟಿ ಮತ್ತು ಗದಗು—ಈ ಸ್ಥಳಗಳ ಕನ್ನಡಿಗರು ಮನ್ನಣೆಮಾಡಿ ಈ ಉತ್ಸವವನ್ನು ತಮ್ಮ ಊರುಗಳಲಿಯೂ ನಡಸುವ ಏರ್ಪಾಟುಮಾಡಿರುತ್ತಾರೆ. ಈ ಊರುಗಳ ಕನ್ನಡಿಗರಿಗೆ ಅವರ ಈ ಪ್ರಯತ್ನಕ್ಕಾಗಿ ಪರಿಷತ್ತಿನ ಪರವಾಗಿಯೂ ಮತ್ತು ಸಮಸ್ತ ಕನ್ನಡಿಗರ ಪರವಾಗಿಯೂ ಕೃತಜ್ಞತೆಯನ್ನು ಸಮರ್ಪಿಸುತ್ತೇನೆ.

ಸಮ್ಮೇಳನಗಳನ್ನು ನೆರೆಯಿಸುವುದು, ನಾಡಹಬ್ಬ ವಸಂತ ಸಾಹಿತ್ಯೋತ್ಸವಗಳನ್ನು ನಡಸುವುದು—ಇಷ್ಟು ಮಾತ್ರವೇ ಪರಿಷತ್ತು ಮಾಡುತ್ತಿರುವ ಕೆಲಸವಲ್ಲ. ತನ್ನ ಶಕ್ತಿ ಇರುವಮಟ್ಟಿಗೆ ಪರಸ್ಥಳಗಳಿಗೆ ಹೋಗಿ ಕನ್ನಡ ಪ್ರಚಾರ ಮಾಡುತ್ತಾ ಇದೆ. ಪರಿಷತ್ತಿನ ಪ್ರಮುಖರು ಆಗಾಗ ಅಲ್ಲಲ್ಲಿ ಹೋಗಿ ಉಪನ್ಯಾಸಗಳನ್ನು ಕೊಟ್ಟು ಹೊಸ ಸಂಘಗಳನ್ನು ನೆಟ್ಟುಹಾಕಿ, ಅಂಗ ಸಂಸ್ಥೆಗಳಾಗಿ ಏರ್ಪಡಿಸುತ್ತಿದ್ದಾರೆ. ಪರಿಷತ್ತಿನಲ್ಲಿ ಉಪನ್ಯಾಸಗಳಿಂದಲೂ ಪರಿಷತ್ಪತ್ರಿಕೆಯ ಮತ್ತು ಇತರ ಸಮಯೋಚಿತ ಪತ್ರಗಳ ಪ್ರಕಟನೆಯಿಂದಲೂ ಕನ್ನಡಿಗರಲ್ಲಿ, ಕನ್ನಡದ ವಿಷಯದಲ್ಲಿ, ತಿಳಿವಳಿಕೆ ಹೆಚ್ಚಾಗುವಂತೆ ಪರಿಷತ್ತು ನೋಡಿಕೊಳ್ಳುತ್ತಿದೆ. ಗಮಕಕಲಾಭ್ಯಾಸದ ತರಗತಿ ಎಂದಿನಂತೆ ನಡೆಯುತ್ತಿದೆ. ಈಚೆಗೆ ಒಂದು ವ್ಯಾಸಂಗ ಗೋಷ್ಠಿಯನ್ನು ನಡಸುತ್ತಿದೆ. ವಿರಾಮ ಕಾಲದಲ್ಲಿ ಕನ್ನಡಸಾಹಿತ್ಯದಲ್ಲಿರುವ ಉತ್ತಮ ಗ್ರಂಥಗಳ ಪರಿಚಯ ಮಾಡಿಕೊಳ್ಳಲು ಇಷ್ಟಪಡುವವರು ಆ ಗೋಷ್ಠಿಗೆ ದಯಮಾಡಿಸಬಹುದಾಗಿದೆ. ೧೫ ದಿವಸಕ್ಕೊಂದು ಬಾರಿ ಈ ಗೋಷ್ಠಿಯನ್ನು ನೆರೆಯಿಸಿ ಪಾಠ, ಭಾಷಣ, ಚರ್ಚೆ ಮುಂತಾದುವನ್ನು ನಡಸಬೇಕೆಂದು ಗೊತ್ತುಮಾಡಿಕೊಂಡಿದೆ. ಈ ವ್ಯಾಸಂಗ ಗೋಷ್ಠಿಯಲ್ಲಿ ಕನ್ನಡ ಮಾತ್ರವೇ ಅಲ್ಲದೆ, ತೆಲುಗು ತಮಿಳು ಭಾಷೆಗಳನ್ನು ಕೂಡ ಕಲಿಸುವ ಯೋಚನೆ ಮಾಡಿದೆ. ಕನ್ನಡ ದೇಶದಲ್ಲಿ ನೆಲಸಿರುವ, ತೆಲುಗು, ತಮಿಳು ಭಾಷೆಗಳನ್ನಾಡುವ ಜನರು ಕನ್ನಡಿಗರಾಗಬೇಕು: ಕನ್ನಡಕ್ಕೆ ಹೊಂದಿಕೊಳ್ಳಬೇಕು ; ಅವರ ಹೊಟ್ಟೆಯಲ್ಲಿ ಮುಳ್ಳಾಗಿ ನಿಲ್ಲಬಾರದು. ತಮಿಳು, ತೆಲುಗು ಭಾಷೆಗಳು ಕನ್ನಡಕ್ಕೆ ಅಕ್ಕತಂಗಿಯರು. ಆ ಭಾಷೆಗಳನ್ನು ಮುಖಂಡರು ಕಲಿಯುವುದರಿಂದ ಕನ್ನಡ ಇನ್ನೂ ಪುಷ್ಟಿಗೊಂಡೀತು. ಕನ್ನಡ ದೇಶದಲ್ಲಿ ನೆಲಸಿರುವ ಇತರ ಸೋದರ ಭಾಷೆಗಳವರು ಕನ್ನಡಕ್ಕೆ ಬಲವನ್ನು

ಹೆಚ್ಚಿಸಿಯಾರು. ಕಾರಣಾಂತರಗಳಿಂದ ತೆಲುಗು, ತಮಿಳು, ಮಳಿಯಾಳ, ಮರಾಠಿ, ಹಿಂದುಸ್ಥಾನಿ—ಉರ್ದುಗಳು ಕನ್ನಡ ನಾಡಿನ ಒಳಹೊಕ್ಕಿವೆ. ಈ ಭಾಷೆಗಳ ಪಂಡಿತರನ್ನೂ ಪರಿಷತ್ತಿಗೆ ಗೌರವ ಸದಸ್ಯರನ್ನಾಗಿ ಮಾಡಿಕೊಂಡು ಕೆಲಸ ನಡಸಬೇಕೆಂಬ ಉದ್ದೇಶವಿದೆ. ಅದರಂತೆ ಆಯಾ ವಿದ್ವಾಂಸರಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದೇವೆ. ಅವರಲ್ಲಿ ಕೆಲವರು ಚಂದಾ ಕೊಟ್ಟು ಸದಸ್ಯರಾಗಿರಲು ಕೂಡ ಒಪ್ಪಿದ್ದಾರೆ. ಕೆಲವರು ಸದಸ್ಯರಾಗಿಯೂ ಇದ್ದಾರೆ. ಈ ವ್ಯಾಸಂಗ ಗೋಷ್ಠಿಗೆ ಮಹಾಜನರು ಯಾರಾದರೂ ಬರಬಹುದಾಗಿದೆ. ಹೆಂಗಸರು ಹೆಚ್ಚು ಸಂಖ್ಯೆಯಲ್ಲಿ ದಯಮಾಡಿ ಬಂದು ಈ ಗೋಷ್ಠಿಯ ಉದ್ದೇಶ ಸಫಲವಾಗುವಂತೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಏಕೆಂದರೆ, ಹೆಂಗಸರು ಸಾಹಿತಿಗಳಾಗಬೇಕಾದುದು ಈ ಕಾಲಕ್ಕೆ ಅತ್ಯಾವಶ್ಯಕ.

ಪರಿಷತ್ತಿನ ಹೊಸ ಪ್ರಕಟನೆ: ಕನ್ನಡದ ಬಾವುಟ

ಈ ಸಂದರ್ಭದಲ್ಲಿ ಪರಿಷತ್ತು ಹೊಸದಾಗಿ ಪ್ರಕಟಿಸಿರುವ "ಕನ್ನಡದ ಬಾವುಟ" ಎಂಬ ಪುಸ್ತಕವನ್ನು ಅಧ್ಯಕ್ಷರಿಗೆ ಒಪ್ಪಿಸಿ, ಅವರು ತಮ್ಮ ದಿವ್ಯ ಸಂದೇಶವನ್ನು ಕೊಡುವಾಗ ಅದನ್ನು ಪ್ರಕಟನೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಇದರಲ್ಲಿ ಶಾಸನಗಳಿಂದ ಆರಿಸಿದ ಪದ್ಯಗಳೂ, ಹಳಗನ್ನಡ, ನಡುಗನ್ನಡ, ಹೊಸಗನ್ನಡದ ಕಾವ್ಯಗಳಿಂದ ಆರಿಸಿದ ಭಾಗಗಳೂ ಮತ್ತು ಈಚಿನ ಹೊಸ ಕವಿಗಳ ಕವನಗಳೂ ಸೇರಿವೆ. ಕನ್ನಡನಾಡಿನ ವೈಭವವೇನು, ಕನ್ನಡದಲ್ಲಿ ಯಾವ ಅಭಿಮಾನ ಉಕ್ಕುತ್ತಾ ಇದೆ, ಕನ್ನಡನಾಡು ನುಡಿಗಳ ವಿಷಯದಲ್ಲಿ ಕನ್ನಡಿಗರಿಗೆ ಹಿಂದಿನಿಂದಲೂ ಇದ್ದ ಹೆಮ್ಮೆ, ಈಗಿನ ನವೀನದೃಷ್ಟಿ—ಈ ಎಲ್ಲ ವಿಷಯಗಳೂ ಅದರಲ್ಲಿ ತಿಳಿಯುವಂತೆ ಪ್ರಯತ್ನ ಮಾಡಿದೆ; ನಮ್ಮ ನಾಡಿನ ನಾಡಿ, ಹೃದಯ, ಕಣ್ಣು ಎಲ್ಲಿಸೆ. ಕನ್ನಡದ ಜೀವಾಳವೇನು—ಎಂಬುವನ್ನು ತೋರಿಸಲು ಅಲ್ಲಿ ಪ್ರಯತ್ನಮಾಡಿದೆ, ಈಗಿನ ಹೊಸ ಕವಿಗಳ ಭಾವವೇನು, ಯಾವ ಹೊಸ ಸಾಹಿತ್ಯ ಸಾಮ್ರಾಜ್ಯವನ್ನು ಕಟ್ಟಲು ಅವರು ಧೈರ್ಯತಾಳುತ್ತಿದ್ದಾರೆ ಎಂಬುದು ಅದರ ಹೊಸ ಕವನಗಳಲ್ಲಿ ಎದ್ದು ಕಾಣುತ್ತದೆ. ಹಿಂದಿನಿಂದ ಇಂದಿನವರೆಗೂ ಕನ್ನಡಿಗರು ತಮ್ಮ ನಾಡಿನ ಮತ್ತು ನುಡಿಯ ಬಗೆಗೆ ತಾಳಿದ್ದ ಅಭಿಮಾನ, ಕನ್ನಡ ಕಲಿಗಳ, ಕವಿಗಳ, ಸತಿಯರ,

ದೊರೆಗಳ, ಮಹಾಪುರುಷರುಗಳ ವ್ಯಕ್ತಿತ್ವ ಮತ್ತು ಹಿರಿಮೆ, ಭಾಷೆಯ, ಛಂದಸ್ಸಿನ, ಕ್ರಮವಾದ ಬೆಳವಣಿಗೆ—ಇವನ್ನು ಸ್ಪಷ್ಟವಾಗಿ ತೋರಿಸುವಂತೆ ಶಾಸನಗಳಿಂದಲೂ, ಹಿಂದಿನ ಕಾವ್ಯಗಳಿಂದಲೂ, ನಾಡ ಹಾಡುಗಳಿಂದಲೂ, ಇಂದಿನ ಕವಿತೆಗಳಿಂದಲೂ ಆಯ್ದು ನಾಲ್ಕು ತೆನೆಗಳ ಕಟ್ಟನ್ನು ಈ ಪುಸ್ತಕದಲ್ಲಿ ಕೂಡಿಸಿದೆ. ಮನುಷ್ಯನು ತನ್ನ ಸರ್ವಸ್ವವನ್ನೂ ಯಾವುದಕ್ಕೆ ಒಪ್ಪಿಸಲು ಸಿದ್ಧನಾಗಿರುವನೋ ಅದರ ಕುರುಹು "ಬಾವುಟ". ಕನ್ನಡಿಗರ ಕನ್ನಡ ಮಮತೆ ವಾತ್ಸಲ್ಯಗಳೂ, ಕನ್ನಡ ನಾಡಿನ ಏಕೀಕರಣದ ಸಾಧನೆಯೂ ಚಿಮ್ಮಬೇಕೆಂಬ ಭಾವನೆಯಿಂದ ಈ ಪುಸ್ತಕವನ್ನು ಪ್ರಕಟಿಸಿದೆ.*

ಈ ಸಲದ ಉತ್ಸವ : ಪರಿಷತ್ತಿನಲ್ಲಿ ಸ್ತ್ರೀಯರ ಸ್ಥಾನ

ಸ್ತ್ರೀಯರಲ್ಲಿ ಒಂದು ಬಿನ್ನಹ ಮಾಡಬೇಕಾಗಿದೆ. ನಮ್ಮ ಕಾರ್ಯಕ್ರಮದಲ್ಲಿ ಈ ವರ್ಷ ಪ್ರತಿದಿನವೂ ಅವರಿಗಾಗಿ ಸ್ವಲ್ಪ ಕಾಲವನ್ನು ಮೀಸಲಿಡಲಾಗಿದೆ....ಪ್ರತಿದಿನವೂ ೪ ರಿಂದ ೬ ರ ವರೆಗೆ ಹೆಂಗಸರು ದಯಮಾಡಿಸಿ, ಪರಿಷತ್ತಿನ್ನು ತಮ್ಮದನ್ನಾಗಿ ಮಾಡಿಕೊಳ್ಳಬೇಕು, ಕನ್ನಡಕ್ಕೆ ಅವರ ಬೆಂಬಲ ದೊರೆತು ಕನ್ನಡದ ಮುನ್ನಡೆಗೆ ಅವರ ಸಹಕಾರ ದೊರೆಯಬೇಕು ಎಂಬ ಉದ್ದೇಶದಿಂದ ಮಕ್ಕಳನ್ನೂ ಅವರನ್ನೂ ಸೇರಿಸಿ, ಮಹಿಳೆಯರ ಗೋಷ್ಠಿ ಮತ್ತು ಮಕ್ಕಳ ಕೂಟವನ್ನೂ ಏರ್ಪಡಿಸಿದೆ. ಈ ಭಾಗದ ಕಾರ್ಯಕ್ರಮದಲ್ಲಿ

---

* 'ಕನ್ನಡದ ಬಾವುಟ' ದ ಮುನ್ನುಡಿಯಿಂದ ಈ ಕೆಳಗಿನ ಭಾಗವನ್ನಿಲ್ಲಿ ಉದ್ಧರಿಸಬಹುದಾಗಿದೆ—ಸಂ.

ಕನ್ನಡ ನಾಡು ಎಚ್ಚತ್ತು ಕೂಡಿಕೊಳ್ಳುತ್ತಿರುವ ದೊಡ್ಡ ಸಡಗರದಲ್ಲಿ ಕನ್ನಡ ನಾಡಿನ ಹೆಮ್ಮೆಯನ್ನು ಹಾಡಿರುವ ಕವಿಗಳಿಂದ ಆಯ್ದು ತಿರುಳೊಂದನ್ನು ಹಂಚಬೇಕೆಂಬ ಬಯಕೆ ಬಹುಕಾಲದಿಂದ ಕಡೆದು ಕುದಿಯುತ್ತಿತ್ತು. ಕನ್ನಡ ತಾಯ ಪಾದದಲ್ಲಿ ಹಿಂದಿನ ಹಿರಿಯ ಕವಿಗಳೂ ಈಗಿನ ಕವಿಗಳೂ ಒಪ್ಪಿಸಿದ ಹೂವುಗಳನ್ನು ಬಾಚಿತೆಗೆದು, ಮೂವತ್ತು ವರ್ಷಗಳಿಂದ ನನ್ನ ಎದೆಯಲ್ಲಿ ತುಂಬಿ ಚಿಮ್ಮುತ್ತಿದ್ದುವುಗಳನ್ನು ಇಲ್ಲಿ ದಂಡೆಗಟ್ಟಿದ್ದೇನೆ....ತಾಯಡಿಯ ಹೂವುಗಳಿವು ; ನಾನು ನಾರು : ಕನ್ನಡದ ಸತ್ತ್ವವೂ ತಿರುಳೂ ಪೋಣಿಕೆಯ ಕಣ್ಣು. ಕನ್ನಡಿಗರ ಅದರಲ್ಲೂ ಮಕ್ಕಳ, ಹೆಣ್ಣುಮಕ್ಕಳ, ಒಕ್ಕಲು ಮಕ್ಕಳ ಮೆಚ್ಚುಗೆಯೇ ನಾನು ಎದಿರು ನೋಡುವ ಫಲ. ಅವರಲ್ಲೆಲ್ಲಾ ಕನ್ನಡದ ಹೆಮ್ಮೆ ಹರಡಲಿ. ಅವರಿಂದ ಕನ್ನಡ ಬೆಳಗಲಿ.

ಏಳನೆಯ ಶತಮಾನದಿಂದ ೨೦ ನೆಯ ಶತಮಾನದ ಇಂದಿನವರೆಗಿನ ಕನ್ನಡ, ಬೆಳೆಯನ್ನು (೧) ಶಾಸನಗಳು, (೨) ಪೂರ್ವಸಾಹಿತ್ಯ, (೩) ನಾಡಪದಗಳು,

ಸ್ತ್ರೀಯರು ಹೆಚ್ಚು ಆಸಕ್ತಿ ವಹಿಸಿ, ಇದನ್ನು ಯಶಸ್ವಿಯಾಗಿ ನೆರವೇರಿಸಿಕೊಡಬೇಕೆಂದು ಬೇಡುತ್ತೇನೆ.

ಪರಿಷತ್ತಿಗೆ ಎಲ್ಲರೂ ಬೇಕು

ಮುಖ್ಯವಾಗಿ, ಪರಿಷತ್ತು ಎಲ್ಲ ಕನ್ನಡಿಗರ, ಕನ್ನಡಿಗರ ಪ್ರಭುಗಳ, ಬೆಂಬಲಗಳನ್ನೂ ಸಂಪಾದಿಸಿಕೊಳ್ಳಬೇಕಾಗಿದೆ. ಕನ್ನಡಿಗರು ಎಚ್ಚತ್ತುಕೊಳ್ಳಬೇಕಾಗಿದೆ. ನಮ್ಮಲ್ಲಿ ಇನ್ನೂ ಅನೇಕರು ತಮ್ಮ ಮನಸ್ಸಿನ ಆವೇಶದಲ್ಲಿ ಸಣ್ಣಪುಟ್ಟ ವಿಷಯಗಳನ್ನು ದೊಡ್ಡದು ಮಾಡಿಕೊಂಡು ಅಕಾರಣವಾಗಿ ತೊಂದರೆ ತರುತ್ತಾರೆ. ಕನ್ನಡ ಮಹಾಜನರು ಇಂಥ ಸಣ್ಣ ವಿಷಯದಲ್ಲಿ ಅವರವರಿಗಿರುವ ಅಭಿಪ್ರಾಯ ಭೇದಗಳನ್ನು ಹಾಗೆಯೇ ಮರೆತು, ಒಕ್ಕಟ್ಟಿನಲ್ಲಿ ಕನ್ನಡತಾಯ ರಥವನ್ನು ಬಿಜಯ ಮಾಡಿಸಿಕೊಂಡು ಹೋಗಬೇಕೆಂದು ಪ್ರಾರ್ಥಿಸುತ್ತೇನೆ.

ಪರಿಷತ್ತಿನ ಮುಂದೆ ಇರುವ ಕೆಲಸಗಳು ಬಹಳವಾಗಿವೆ. ಅವುಗಳನ್ನು ನೆರವೇರಿಸಲು ಅದಕ್ಕೆ ಈಗ ಶಕ್ತಿಯಿಲ್ಲ. ಪರಿಷತ್ತಿನ ಶಕ್ತಿ ಬೆಳೆಯುವುದಕ್ಕೆ ತಾವೆಲ್ಲ ಸಹಾಯ ಮಾಡಬೇಕು. ನಮಗೆ ಸದಸ್ಯರಿದ್ದಾರೆ. ಅಭಿಮಾನಿಗಳಿದ್ದಾರೆ. ಆದರೆ ಅವರ ಸಂಖ್ಯೆ ಬಹಳ ಕಡಮೆ. ನಮಗೆ ಸದಸ್ಯರೂ ಅಭಿಮಾನಿಗಳೂ ಇನ್ನೂ ಹೆಚ್ಚು ಹೆಚ್ಚಾಗಿ ಬೇಕು. ಸಹೃದಯರಾದ ಕನ್ನಡ ಪ್ರೇಮಿಗಳು ಪರಿಷತ್ತನ್ನು ತಮ್ಮದಾಗಿ ಮಾಡಿಕೊಂಡು ಸಹಾಯ ಮಾಡಬೇಕು. ಪಂಡಿತರೂ, ವಿದ್ಯಾವಂತರೂ, ವಿದ್ಯಾರ್ಥಿಗಳೂ, ಮಹಿಳೆಯರೂ ಹೆಚ್ಚು ಸಂಖ್ಯೆಯಲ್ಲಿ ಸದಸ್ಯರಾಗಿ ಸೇರಿ, ಪರಿಷತ್ತಿನ ಶಕ್ತಿಯನ್ನು ಹೆಚ್ಚಿಸಬೇಕು.

---

(೪) ಇಂದಿನ ಹೊಸಕವಿತೆ—ಈ ನಾಲ್ಕು ತೆನೆಗಳಲ್ಲಿ ತೋರಿಸಿದ್ದೇನೆ. ಕಾಲಕಾಲದ ಭಾಷೆಯ ಮಾರ್ಪಾಟುಗಳು, ಛಂದಸ್ಸಿನ ಬಗೆ ಬಗೆಯ ಕುಣಿತ, ಕನ್ನಡನಾಡಿನ ಸೊಬಗು, ಹೃದಯ ಧರ್ಮಗಳು, ಮಹಾವ್ಯಕ್ತಿಗಳು, ಜೀವಗುರಿಗಳು, ಬೇರೆಬೇರೆ ಪ್ರಾಂತ ಪ್ರೇಮಗಳು—ಒಂದು ಮಾತಿನಲ್ಲಿ, ಹಿಂದಿನ ಮಹತ್ವದ ಸಂಸ್ಕಾರ ಮತ್ತು ಸಂಸ್ಕೃತಿ, ಇಂದಿನ ಮಹತ್ತ್ವದ ಧ್ಯೇಯ ಮತ್ತು ಯೋಜನೆಗಳು, ನಾಡ ನಾಡಿಯ ಮಿಡಿತ—ನನಗೆ ತಿಳಿದಂತೆ ಯಾವ ಯಾವುದು ಕನ್ನಡ ಬಾವುಟದಡಿಯಲ್ಲಿ ಹೊಮ್ಮಿದ ಎರಡು ಸಾವಿರ ವರ್ಷದ ಜೀವಾಳವೋ ಅದನ್ನೇ ತೆನೆಗಳಾಗಿ ಆಯ್ದು ತೆಕ್ಕೆಮಾಡಿ ಕನ್ನಡಿಗರ ಕೈಗೆ ಒಪ್ಪಿಸಿದ್ದೇನೆ........

ಕನ್ನಡ ಸಾಹಿತ್ಯ ಪರೀಕ್ಷೆಗಳು

ಕನ್ನಡದಲ್ಲಿ ತಮಗಿರುವ ಭಾಷಾಜ್ಞಾನವನ್ನು ಹೆಚ್ಚಿಸಿಕೊಳ್ಳಬೇಕೆಂದಿರುವವರಿಗೂ ಅನಕ್ಷರಸ್ಥರಿಗೂ ಕನ್ನಡದಲ್ಲಿಡ ಪಾಠ ಹೇಳಲು ಅನುಕೂಲವಾಗುವಂತೆಯೂ ಅವರು ಮೊದಲು ವೃತ್ತಪತ್ರಿಕೆಗಳನ್ನು ಓದುವ ಮಟ್ಟಿಗಾದರೂ ಕಲಿತು, ಪತ್ರಿಕೆಗಳನ್ನು ಓದುವವರ ಸಂಖ್ಯೆ ಹೆಚ್ಚಾಗುವಂತೆಯೂ ಸಾಹಿತ್ಯ ಪರೀಕ್ಷೆಗಳನ್ನು ನಡಸಬೇಕೆಂದು ಪರಿಷತ್ತು ಯೋಚಿಸಿ, ೧೯೩೭ ನೆಯ ಮೇ ತಿಂಗಳಲ್ಲಿ ನಡೆದ ವಾರ್ಷಿಕಾಧಿವೇಶನ ಒಂದು ತೀರ್ಮಾನ ಮಾಡಿತು. ಅದು ಈಗ ಒಂದು ರೂಪಕ್ಕೆ ಬರುತ್ತಿದೆ. ವಯಸ್ಸಾದ ಕಾರಣದಿಂದಲೋ ಅಥವಾ ಇನ್ನಾವ ಕಾರಣದಿಂದಲೋ ಶಾಲೆಗೆ ಹೋಗಿ ವಿದ್ಯೆ ಕಲಿಯಲು ಅನುಕೂಲವಿಲ್ಲದೆ ಕನ್ನಡದಲ್ಲಿ ಆಸಕ್ತಿವಹಿಸಿ ಕನ್ನಡ ಕಲಿಯಬೇಕೆಂದಿರುವವರಿಗೆ ಇಂಥ ತರಗತಿಗಳನ್ನೇರ್ಪಡಿಸಿ, ೩-೪ ದರ್ಜೆಯ ತರಗತಿಗಳನ್ನಿಟ್ಟುಕೊಂಡು, ನಮ್ಮ ಕರ್ನಾಟಕ ಸಂಘಗಳಲ್ಲಿ ವಿದ್ಯಾರ್ಥಿಗಳನ್ನು ಶಿಕ್ಷಣಮಾಡಿ, ಪರೀಕ್ಷೆಗಳನ್ನು ನಡಸಬೇಕೆಂದು ಯೋಚನೆಮಾಡಿದೆ. ಈ ಕೆಲಸವನ್ನು ಈ ವರ್ಷವೇ ಪ್ರಾರಂಭಮಾಡಬೇಕೆಂದಿದ್ದೇವೆ.

ಪರಿಷತ್ತಿನ ಈ ಕಾರ್ಯಕಲಾಪಗಳನ್ನು ಯೋಚಿಸಿ ನೋಡಿದವರಿಗೆ ಪರಿಷತ್ತು ಯಾವ ಒಂದು ಸಂಕೋಚ ದೃಷ್ಟಿಯನ್ನೂ ಇಟ್ಟುಕೊಂಡು ಕೆಲಸ ಮಾಡುತ್ತಿಲ್ಲವೆಂಬುದು ಗೊತ್ತಾಗುತ್ತದೆ. ಇಂಥ ಕಾರ್ಯಗಳು ಒಬ್ಬರಿಬ್ಬರಿಂದ ಸಾಧ್ಯವಾಗತಕ್ಕವಲ್ಲ. ಪರಿಷತ್ತು ಎಲ್ಲರ ಶಕ್ತಿಯನ್ನೂ ಸಂಪಾದಿಸಿ, ಕನ್ನಡದ ಸಂಸ್ಕೃತಿ, ಭಾಷೆ, ಸಾಹಿತ್ಯ—ಎಲ್ಲವೂ ಬೆಳೆಯುವಂತೆ, ಹೊಸ ಚೈತನ್ಯ ಕನ್ನಡಿಗರಲ್ಲಿ ಉಂಟಾಗುವಂತೆ ಕೆಲಸಮಾಡಬೇಕಾಗಿದೆ.

ಗ್ರಂಥ ಪ್ರಕಟನೆ

ಇನ್ನು ಗ್ರಂಥ ಪ್ರಕಟನೆಯ ವಿಚಾರ. ಪರಿಷತ್ತು ಅನೇಕ ಪುಸ್ತಕಗಳನ್ನು ಪ್ರಕಟಿಸಬೇಕೆಂಬ ಉದ್ದೇಶವನ್ನಿಟ್ಟುಕೊಂಡಿದೆ. ಹಿಂದೆ ಪರಿಷತ್ತು ಗ್ರಂಥಪ್ರಕಟನೆಯ ವಿಷಯದಲ್ಲಿ ಮಾಡಿರುವ ಕೆಲಸ ತಮಗೆ ತಿಳಿದಿದೆ. ಪರಿಷತ್ತು ಕೈಕೊಂಡು ನಡಸಬೇಕೆಂದಿರುವ ಮುಖ್ಯ ಕಾರ್ಯಗಳಲ್ಲಿ ಗ್ರಂಥ ಪ್ರಕಟನೆಯೂ ಒಂದಾಗಿದೆ. ಆದರೆ ಆ ಕೆಲಸಕ್ಕೆ ತಕ್ಕ ದ್ರವ್ಯ ಸಹಾಯವಿಲ್ಲ. ಆದರೂ ಆ ಕೆಲಸವನ್ನು ಸಾಧ್ಯವಿರುವ ಮಟ್ಟಿಗೆ ಮುಂದುವರಿಸಬೇಕೆಂಬ

ಉದ್ದೇಶದಿಂದ ಈ ವಸಂತಸಾಹಿತ್ಯೋತ್ಸವದ ವೇಳೆಗೆ 'ಕನ್ನಡದ ಬಾವುಟ' ಎಂಬ ಪುಸ್ತಕವನ್ನು ಪ್ರಕಟಿಸಲು ಸಿದ್ಧಮಾಡಿದ್ದೇವೆ. ಕನ್ನಡಿಗರು ಈ ಹೊಸ ಪುಸ್ತಕವನ್ನು ಕೊಂಡು ಓದಿ ಆನಂದಿಸಿ, ಪರಿಷತ್ತನ್ನು ಪ್ರೋತ್ಸಾಹಿಸುವರೆಂದು ನಂಬಿದ್ದೇನೆ. ಇನ್ನೂ ಅನೇಕ ಗ್ರಂಥಗಳನ್ನು ಪ್ರಕಟಿಸಬೇಕೆಂಬ ಉದ್ದೇಶವಿದೆ. ಇದನ್ನು ವರ್ಷದ ಪರಿಷತ್ತಿನ ವರದಿಗಳಲ್ಲಿ ಸೂಚಿಸಿದೆ. ಪರಿಷತ್ತು ಪ್ರತಿ ವರ್ಷವೂ ನಡಸುವ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳ ಸಮುಚ್ಚಯ, ಕನ್ನಡ ನಾಡಿನ ಚರಿತ್ರೆ, ಕನ್ನಡ ಕವಿಗಳ ಕೃತಿಗಳಲ್ಲಿ ಆಯ್ದು ಮಾಡಿದ ಒಂದು ಕವನ ಸಂಗ್ರಹ—ಇವೇ ಮೊದಲಾದುವನ್ನು ಪ್ರಕಟಿಸುವುದು ಆವಶ್ಯಕವೆಂದು ತೋರಿಬರುತ್ತಿದೆ. ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳು ಕನ್ನಡಿಗರಿಗೆ ಬಹು ಸ್ವಾರಸ್ಯವಾದ ಪುಸ್ತಕವಾಗುತ್ತವೆ. ಆ ಮಹನೀಯರ ಮನಸ್ಸಿನಲ್ಲಿ ಯಾವ ಆಸೆ ಆಕಾಂಕ್ಷೆಗಳು ಮೂಡಿದ್ದುವು, ಅವು ಎಷ್ಟುಮಟ್ಟಿಗೆ ಕಾರ್ಯಕಾರಿಯಾಗಿವೆ, ಇನ್ನೂ ಏನೇನು ಆಗಬೇಕಾಗಿದೆ—ಎಂಬುದನ್ನೂ ಕನ್ನಡಭಾಷೆಯ ಇಂದಿನ ಬೆಳವಣಿಗೆಯ ಚರಿತ್ರೆಯನ್ನೂ, ಅವುಗಳಲ್ಲಿ ಕಾಣಬಹುದಾಗಿದೆ. ಕನ್ನಡ ನಾಡಿನ ಸಮಗ್ರ ಚರಿತ್ರೆಯನ್ನು ಬರೆಸುವ ಕಾಲ ಈಗ ಬಂದಿದೆ. ಕನ್ನಡಿಗರು ಯಾವ ರೀತಿ ಮುಂದಕ್ಕೆ ಬಂದರು, ಅವರಲ್ಲಿ ಎಂಥ ಮಹಾನುಭಾವರಿದ್ದರು, ಅವರ ಹಿರಿಯಾಸೆ ಬಯಕೆಗಳು ಏನು? ಅವನ್ನು ಸಾಧಿಸಲು ಅವರು ಮಾಡಿರುವ ಕೆಲಸಗಳು ಯಾವುವು?—ಇವೇ ಮೊದಲಾದ ಎಲ್ಲ ವಿಷಯಗಳನ್ನೊಳಗೊಂಡ ಒಂದು ಸಮಗ್ರ ಕನ್ನಡಜನದ ಚರಿತ್ರೆ ಏಕೀಕರಣಕ್ಕೆ ಬೇಕಾದ ಸ್ಫೂರ್ತಿಯನ್ನು ಕೊಡುತ್ತದೆ. ಕನ್ನಡದ ಹರವು ದಿನ ದಿನಕ್ಕೆ ಹೆಚ್ಚುತ್ತಿದೆ. ಈಚೆಗೆ ನ್ಯಾಯವಿಧಾಯಕ ಸಭೆಯಲ್ಲಿ ಕೂಡ ಕನ್ನಡದಲ್ಲಿ ಭಾಷಣಗಳನ್ನು ಮಾಡುತ್ತಿದ್ದಾರೆ; ಮತ್ತು ಆ ಭಾಷಣಗಳು ಕನ್ನಡದಲ್ಲಿಯೇ ಅಚ್ಚಾಗುತ್ತಿವೆ. ಶ್ರೀಮದ್ಯುವರಾಜರವರು ಹಿಂದೆ ಪರಿಷತ್ತಿಗೆ ೨,೫೦೦ ರೂ. ಗಳನ್ನು ದಾನವಾಗಿ ಕೊಟ್ಟು, ಅದನ್ನು ವಿಜ್ಞಾನ ವಿಷಯದ ಎರಡು ಪುಸ್ತಕಗಳ ಪ್ರಕಟನೆಗೆ ಉಪಯೋಗಿಸಬೇಕೆಂದು ಅಪ್ಪಣೆಕೊಡಿಸಿದ್ದರು. ಆ ನಿಧಿಯಿಂದ ಶ್ರೀ|| ನಂ. ವೆಂಕಟೇಶಯ್ಯಂಗಾರ್ಯರ "ಜ್ಯೋತಿರ್ವಿನೋದಿನಿ" ಮೊದಲನೆಯ ಪ್ರಕಟನೆಯಾಗಿ ಹೊರಬಿದ್ದಿತು. ಈಚೆಗೆ ನಾನು ಶ್ರೀಮದ್ಯುವರಾಜರವರನ್ನು ಸಂದರ್ಶಿಸಿ, ಅವರ ನಿಧಿಯಲ್ಲಿ ಉಳಿದಿರುವ ಹಣವನ್ನು ಈ ಕನ್ನಡ

ನಾಡಿನ ಮತ್ತು ಜನದ ಚರಿತ್ರೆಯ ಪ್ರಕಟನೆಗೆ ಉಪಯೋಗಿಸಲು ಅಪ್ಪಣೆ ಕೊಡಬೇಕೆಂದು ಪ್ರಾರ್ಥಿಸಿದೆ. ಅವರು ಅದಕ್ಕೆ ಒಪ್ಪಿ, ಅಪ್ಪಣೆ ಕೊಟ್ಟಿದ್ದಾರೆ. ನಾನು ಹೇಳಿದ ಇನ್ನೊಂದು ಪ್ರಕಟನೆ 'ಕನ್ನಡಕಾವ್ಯಸಾರ.' ಕನ್ನಡ ಕಾವ್ಯಗಳಲ್ಲಿ ಶಾಶ್ವತವಾಗಿ ಬಾಳಬಹುದಾದ, ಜೊಳ್ಳು ಕಳೆದು ಗಟ್ಟಿಯಾಗಿ ನಿಲ್ಲಬಹುದಾದ, ಲೋಕದ ಕಾವ್ಯಪ್ರೇಮಿಗಳೆಲ್ಲರೂ ಮೆಚ್ಚಬಹುದಾದ ಭಾಗ ಯಾವುವು; ಎಂದೆಂದಿಗೂ ಕನ್ನಡಿಗರ ಅಭಿಮಾನವನ್ನು ಕೆರಳಿಸಿ, ನಾಡ ನುಡಿಯ ಪ್ರಯೋಜನಕ್ಕಾಗಿ ಉಳಿಯುವ ಭಾಗ ಎಷ್ಟು; ನಿಜವಾದ ಸ್ವಾರಸ್ಯ ಎಲ್ಲಿ ಇದೆ—ಇವುಗಳನ್ನು ತೋರಿಸುವ ಒಂದು ಕವನ ಸಂಗ್ರಹವನ್ನು ಮಾಡಿ, ಕನ್ನಡಿಗರ ಮುಂದಿಡಬೇಕೆಂಬ ಉದ್ದೇಶವನ್ನಿಟ್ಟುಕೊಂಡಿದ್ದೇನೆ.

ಪರಿಷತ್ತಿಗೊಂದು ಅಚ್ಚುಕೂಟ

ಇದಕ್ಕೆಲ್ಲ ಮುಖ್ಯವಾಗಿ ಧನಸಹಾಯ ಬೇಕು. ಇದನ್ನು ಸಾಧ್ಯವೆನಿಸಬೇಕಾದರೆ ಪರಿಷತ್ತಿಗೆ ಮುಖ್ಯವಾಗಿ, ಮೊದಲನೆಯದಾಗಿ, ಒಂದು ಅಚ್ಚುಕೂಟ ಇರಬೇಕು. ಕನ್ನಡಕ್ಕಾಗಿಯೇ, ಕನ್ನಡದ ಚಳವಳಿಗಾಗಿಯೇ ಮೀಸಲಾದ ಒಂದು ವಾರಪತ್ರಿಕೆ ಬೇಕು. ಕನ್ನಡದಲ್ಲಿ ವೃತ್ತಪತ್ರಿಕೆಗಳು ಹಲವಿವೆ. ಆ ವೃತ್ತಪತ್ರಿಕೆಗಳವರು ಕನ್ನಡಕ್ಕೆ ವಿಶೇಷ ಸೇವೆ ಸಲ್ಲಿಸುತ್ತಿದ್ದಾರೆ. ಇದಕ್ಕಾಗಿ ನಾನು ಅವರೆಲ್ಲರನ್ನೂ ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ. ಆದರೆ ಕನ್ನಡದ ಹಿರಿಮೆಯನ್ನು ಎತ್ತಿಹೇಳಿ, ಕನ್ನಡ ಪ್ರಚಾರಕ್ಕಾಗಿಯೇ ಮೀಸಲಾದ ಒಂದು ಪತ್ರಿಕೆ ಇರುವುದರ ಆವಶ್ಯಕತೆ ಈಗ ತೋರಿಬರುತ್ತಾ ಇದೆ. ಕನ್ನಡದ ಸುದ್ದಿಗಳನ್ನು ಹರಡಲು, ಕನ್ನಡದ ಹೊಸ ಹೊಸ ಭಾವಗಳನ್ನು ಕನ್ನಡಿಗರಿಗೆ ಅರಿಕೆಮಾಡಿಕೊಡಲು ಒಂದು ಪತ್ರಿಕೆಯನ್ನು ಹೊರಡಿಸಬೇಕೆಂದು ನಮಗೆ ಇಚ್ಛೆ ಇದೆ. ಪರಿಷತ್ತಿಗೆ ಒಂದು ಅಚ್ಚುಕೂಟವಿಲ್ಲದೆ ಪ್ರತಿವರ್ಷವೂ ಸಾವಿರಾರು ರೂಪಾಯಿಗಳನ್ನು ಮುದ್ರಣದ ವೆಚ್ಚಕ್ಕಾಗಿ ಇತರರಿಗೆ ಸುರಿಯುತ್ತಿರುವುದಾಗಿದೆ. ನಮ್ಮಲ್ಲಿ ಧನವಂತರಿಗೇನೂ ಕಡಿಮೆಯಿಲ್ಲ. ಹತ್ತುಮಂದಿ ವರ್ತಕ ಮಹಾಶಯರು ಒಬ್ಬೊಬ್ಬರು ಒಂದೊಂದು ಸಾವಿರ ರೂಪಾಯಿನಂತೆ ಹಾಕಿ ಒಂದು ಅಚ್ಚುಕೂಟವನ್ನು ಒದಗಿಸಿಕೊಟ್ಟರೆ, ಪರಿಷತ್ತು ಕನ್ನಡದ ಸಾಹಿತಿಗಳನ್ನು ಸೇರಿಸಿಕೊಂಡು ಬೇಕಾದ ಕೆಲಸಗಳನ್ನು ಮಾಡಲು ಅವಕಾಶವಾಗುತ್ತದೆ. ಕನ್ನಡದಲ್ಲಿ ಅಭಿಮಾನಿಗಳಾಗಿರುವ ತಾವುಗಳು ಈ ವಿಷಯಕ್ಕೆ ತಮ್ಮ

ತೀರ್ಪುಗಳನ್ನು ಕೊಡುವಿರೆಂದು ನಂಬಿರುತ್ತೇನೆ. ತಮ್ಮಂತಹ ಅಭಿಮಾನಿಗಳೂ ಧನವಂತರೂ ಸೇರಿರುವ ಈ ಸಮಯದಲ್ಲಿ ನಾವು ಏನು ಮಾಡಬೇಕೆಂದಿದ್ದೇವೆ ಎಂಬುದನ್ನು, ನಾಲ್ಕು ಮಾತುಗಳಲ್ಲಿ ಸ್ವಲ್ಪ ಕಾಲವನ್ನು ತೆಗೆದುಕೊಂಡರೂ ವ್ಯರ್ಥವಾಗಲಾರದೆಂದು ಯೋಚಿಸಿ, ತಮ್ಮಲ್ಲಿ ಅರಿಕೆ ಮಾಡಿಕೊಂಡಿದ್ದೇನೆ.

ಅಧ್ಯಕ್ಷರಲ್ಲಿ ಪ್ರಾರ್ಥನೆ

ಇನ್ನು ಈ ದಿವಸದ ಕಾರ್ಯಗಳನ್ನು ನಡಸಿಕೊಡಬೇಕೆಂದು ನಾನು ಶ್ರೀ ಶಾಮರಾಯರವರನ್ನು ಬೇಡುತ್ತೇನೆ. ಶ್ರೀ ಶಾಮರಾಯರವರು ಪರಿಷತ್ತಿನ ಮೂಲಸ್ಥಾಪಕರಲ್ಲೊಬ್ಬರಾಗಿ, ಅಂದಿನಿಂದ ಇದುವರೆಗೂ ತಮ್ಮ ಮೇಲ್ವಿಚಾರಣೆಯಿಂದ ಪರಿಷತ್ತನ್ನು ಬೆಳಸಿಕೊಂಡು ಬಂದಿದ್ದಾರೆ. ನಮ್ಮಲ್ಲಿ ಅವರಿಗೆ ಏನು ನ್ಯೂನತೆ ಕಂಡುಬಂದರೂ ಅವರು ಅದನ್ನು ನಮಗೆ ತಿಳಿಸಿ, ನಮ್ಮನ್ನು ತಿದ್ದಿ, ಸರಿಯಾದ ಮಾರ್ಗದಲ್ಲಿ ನಾವು ನಡೆಯುವಂತೆ ಬುದ್ಧಿವಾದವನ್ನು ಹೇಳಬೇಕೆಂದು ನಾನು ಅವರನ್ನು ಪ್ರಾರ್ಥಿಸುತ್ತೇನೆ. ಈ 'ಕನ್ನಡದ ಬಾವುಟ' ಪುಸ್ತಕವನ್ನು ಪ್ರಕಟಸಬೇಕೆಂದು ಪ್ರಾರ್ಥಿಸುತ್ತೇನೆ. ಈ ಪರಿಷತ್ತಿನ ಗೋಡೆಗಳ ಮೇಲೆ ಹಾಕಿರುವ ಪಟಗಳನ್ನು ನೋಡಿದ್ದೀರಿ. ಕನ್ನಡಿಗರಲ್ಲಿ ಮಹಾವ್ಯಕ್ತಿಗಳಾಗಿರುವ ಹಿರಿಯರ ಚಿತ್ರಪಟಗಳಮೇಲೆ ನಮ್ಮ ದೃಷ್ಟಿ ಬಿದ್ದು, ಅವರ ನೆನಪುಂಟಾಗಿ, ಆ ನೆನಪಿನಿಂದ ಅವರ ಆದರ್ಶದಿಂದ ಅನೇಕ ಒಳ್ಳೆಯ ಕೆಲಸಗಳು ನಡೆಯುತ್ತವೆ. ಅಂಥ ಮಹನೀಯರ ಚಿತ್ರಗಳು ಪರಿಷತ್ತಿಗೆ ಬೇಕು. ಇಂಥ ಕೆಲವು ಚಿತ್ರಗಳಿಗಾಗಿ ಹಲವುಸಲ ಯಾಚನೆಗೆ ಹೋಗಿದ್ದೇವೆ. ಇಲ್ಲಿ ಕಾಣುವ ಕವಿತಿಲಕ ಶ್ರೀ ಅಯ್ಯಶಾಸ್ತ್ರಿಗಳ ಪಟ ಅಂಥ ಯಾಚನೆಯಿಂದ ದೊರೆತದ್ದು. ಶ್ರೀ. ಅಯ್ಯಶಾಸ್ತ್ರಿಗಳ ಪಟವನ್ನು ತಯಾರಿಸಿ ಕೊಡಬೇಕೆಂದು-ಶ್ರೀ ಎಸ್. ಜಿ. ಶಾಸ್ತ್ರಿಗಳನ್ನು ಪ್ರಾರ್ಥಿಸಿದೆವು. ಅವರು ಅದನ್ನು ಮಾಡಿಸಿಕೊಟ್ಟರು. ಕೇಳಿದುದನ್ನು ಕೊಡುವವರ ಬಳಿ ನಮ್ಮ ಕೆಲಸವೇನು ? ಮೇಲಿಂದ ಮೇಲೆ ಕೇಳುವುದು ತಾನೆ. ಹಾಗೆಯೇ ಮತ್ತೊಂದು ಪ್ರಾರ್ಥನೆ ಅವರಲ್ಲಿ ಹೋಯಿತು. ಮೈಸೂರಿನ ವೃದ್ಧಪಿತಾಮಹರಾದ ಶ್ರೀ. ವೆಂಕಟಕೃಷ್ಣಯ್ಯನವರ ಪಟ ಪರಿಷತ್ತಿನಲ್ಲಿರಲಿಲ್ಲ. ವೃದ್ಧಪಿತಾಮಹರೂ, ದಯಾಸಾಗರರೂ, ಕನ್ನಡನಾಡಿಗೆ ತಮ್ಮ ರಕ್ತವನ್ನು ಬಸಿದು ಹೊಸ ಚೈತನ್ಯವನ್ನು ತುಂಬಿದವರಲ್ಲಿ ಒಬ್ಬರೂ ಆದ ಅವರ ಪಟವೊಂ

ದನ್ನು ಕೊಡಬೇಕೆಂದು ಶ್ರೀ. ಶಾಸ್ತ್ರಿಗಳನ್ನು ಪ್ರಾರ್ಥಿಸಿದೆವು. ಅದರ ಫಲವಾಗಿ ಈ ಇನ್ನೊಂದು ಚಿತ್ರವೂ ಬಂದಿದೆ. ನನ್ನ ಮಾನ್ಯ ಅಧ್ಯಕ್ಷರು ಈ ಎರಡು ಚಿತ್ರಗಳ ಅನಾವರಣ ಮಾಡಬೇಕೆಂದು ಬೇಡುತ್ತೇನೆ. ಶ್ರೀಮತಿ ಎ. ಶೇಷಮ್ಮನವರು ಅವರ ಮಕ್ಕಳು ದಿವಂಗತ ಶ್ರೀ. ಇ. ಎ. ಭಾಸ್ಕರರಾಯರ ಸ್ಮಾರಕಕ್ಕಾಗಿ ಪ್ರತಿವರ್ಷವೂ ಒಂದು ಸ್ಪರ್ಧೆಯನ್ನು ಏರ್ಪಡಿಸಲು ಅನುಕೂಲಿಸುವಂತೆ ಒಂದು ಸಾವಿರ ರೂಪಾಯಿ ಚಿಲ್ಲರೆ ಹಣವನ್ನು ಪರಿಷತ್ತಿಗೆ ದಾನಮಾಡಿರುತ್ತಾರೆ. ಶ್ರೀ. ಭಾಸ್ಕರರಾಯರವರು ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳಾಗಿದ್ದಾಗಿನಿಂದಲೂ ಕನ್ನಡದಲ್ಲಿ ಅಸಾಧಾರಣವಾದ ಪ್ರೇಮವನ್ನು ತೋರಿಸುತ್ತಿದ್ದರಲ್ಲದೆ, ಸ್ವತಃ ತಾವೇ ಕೆಲವು ಸಣ್ಣ ಕತೆಗಳನ್ನೂ ಕವನಗಳನ್ನೂ ಬರೆದಿದ್ದರು. ಅವರು ಜೀವಿಸಿದ್ದಿದ್ದರೆ, ಕನ್ನಡಕ್ಕೆ ಒಂದು ದೊಡ್ಡ ಬೆಳಕಾಗುತ್ತಿದ್ದರು. ಆದರೆ ಅದು ದೈವಚಿತ್ತಕ್ಕೆ ಬರಲಿಲ್ಲ. ಆ ಸಾವಿರ ಚಿಲ್ಲರೆ ರೂಪಾಯಿಯಮೇಲೆ ಬರುವ ಬಡ್ಡಿಯಿಂದ ಪ್ರತಿವರ್ಷವೂ ಒಂದು ಸಾಹಿತ್ಯ ಸ್ಪರ್ಧೆಯನ್ನೇರ್ಪಡಿಸಿ, ಅದರಲ್ಲಿ ಮೊದಲಸ್ಥಾನವನ್ನು ಪಡೆದವರಿಗೆ ಒಂದು ಬಹುಮಾನ ಕೊಡಬೇಕೆಂದು ಏರ್ಪಾಟುಮಾಡಿದೆ.

ಹಿಂದಿನ ವರ್ಷಗಳಲ್ಲಿ ಏರ್ಪಡಿಸಿದಂತೆ ಈ ವರ್ಷವೂ ಕೂಡ ೧೯೩೭-೩೮ನೆಯ ಇಸವಿಗಳಲ್ಲಿ ಪ್ರಕಟವಾದ ಕನ್ನಡಪುಸ್ತಕಗಳನ್ನು ಕೂಡಿಸಿ, ಒಂದು ಗ್ರಂಥಪ್ರದರ್ಶನವನ್ನು ಏರ್ಪಡಿಸಿದೆ. ಹಿಂದಿನ ವರ್ಷದಂತೆ ಪರಿಷನ್ಮಂದಿರದ ಎದುರಿಗಿರುವ ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲೆಯ ಕಟ್ಟಡದ ಮಹಡಿಯ ಮೇಲೆ ಆ ಪುಸ್ತಕಗಳನ್ನು ಪ್ರದರ್ಶನಮಾಡಿದೆ. ಈ ಗ್ರಂಥಪ್ರದರ್ಶನವನ್ನು ಶ್ರೀ. ಗುಂಡಪ್ಪನವರು ಮೊದಲು ಮಾಡಿದರು ; ಈಗ ನಾಲ್ಕು ವರ್ಷಗಳ ಕೆಳಗೆ, ಹಿಂದಿನ ೩೦ ವರ್ಷಗಳಲ್ಲಿ ಪ್ರಕಟವಾದ ಎಲ್ಲ ಕನ್ನಡ ಗ್ರಂಥಗಳ ಬಂಡವಾಳ ಏನಿದೆ ಎಂಬುದನ್ನು ಪ್ರದರ್ಶಿಸಿದರು. ಅಂದಿನಿಂದ ಪ್ರತಿವರ್ಷವೂ ಅದನ್ನು ನಡಸಿಕೊಂಡು ಬಂದಿರುವುದಾಗಿದೆ. ಈ ವರ್ಷದ ಪ್ರದರ್ಶನವನ್ನೂ ತಾವು ನೋಡಬೇಕು. ಒಟ್ಟಿನಮೇಲೆ, ೪—೫ ವರ್ಷಗಳಿಂದ ನೋಡಿದ್ದರಲ್ಲಿ, ಪುಸ್ತಕಗಳು ಹೆಚ್ಚು ಹೆಚ್ಚಾಗಿ ಪ್ರಕಟವಾಗುತ್ತಿದ್ದರೂ ಈಗಿನ ಕಾಲದ ನಡವಳಿಕೆಗೆ ಸಾಧಕವಾಗುವ ಪುಸ್ತಕಗಳ ಸಂಖ್ಯೆ ಕಡಿಮೆಯಾಗಿಯೇ ಇದೆ. ಸುಮಾರು ಒಂದು ವರ್ಷದಲ್ಲಿ ೨೫೦—೩೦೦ ಪುಸ್ತಕಗಳು ಪ್ರಕಟವಾಗುತ್ತಿವೆ

ಎಂದು ಹೇಳಬಹುದು. ಮುದ್ರಣವಾದ ಪುಸ್ತಕಗಳ ಸಂಖ್ಯೆ ೨೫೦ ಇದ್ದರೂ ಅವುಗಳಲ್ಲಿ ಗಟ್ಟಿಯಾಗಿ ನಿಲ್ಲುವ ಪುಸ್ತಕಗಳು ಬಹು ಸ್ವಲ್ಪ ಎಂದು ಹೇಳಬಹುದು. ಈ ವರ್ಷ ಪ್ರಕಟವಾದ ಗ್ರಂಥಗಳಲ್ಲಿ ಸುಮಾರು ೧೭೫—೧೮೦ ಪುಸ್ತಕಗಳನ್ನು ಈ ಪ್ರದರ್ಶನದಲ್ಲಿ ಸಂಗ್ರಹಿಸಿ, ಇಟ್ಟಿದ್ದೇವೆ. ಇನ್ನೂ ಅನೇಕ ಪುಸ್ತಕಗಳು ಪ್ರದರ್ಶನಕ್ಕೆ ಬರಲಿಲ್ಲ.

ಕೊನೆಯದಾಗಿ, ಕನ್ನಡದಲ್ಲಿ ನಂಬಿಕೆಯುಳ್ಳ, ನಾನು ಕನ್ನಡದಲ್ಲಿ ನಂಬಿಕೆಯುಳ್ಳ ತಮ್ಮೆಲ್ಲರಿಗೂ ಮತ್ತೊಮ್ಮೆ ಸ್ವಾಗತವನ್ನು ಬಯಸಿ, ಪರಿಷತ್ತನ್ನು ಬಲಪಡಿಸಿರೆಂದು ಬೇಡುತ್ತೇನೆ.

ಕನ್ನಡ ಅಕ್ಷರ ಸಂಸ್ಕರಣ

ಕನ್ನಡ ಬರವಣಿಗೆಯಲ್ಲಿ ಈಗಿರುವ ಅಕ್ಷರ ಸಂಯೋಜನೆಯ ಕ್ರಮ ಹಲವು ದೃಷ್ಟಿಗಳಿಂದ, ಅದರಲ್ಲಿಯೂ, ಮುದ್ರಣ ದೃಷ್ಟಿಯಿಂದ, ಬಲುತೊಡಕಾದ್ದೆಂದೂ ಯಾವ ರೀತಿಯಲ್ಲಾದರೂ ಕೊಂಚಮಟ್ಟಿಗಾದರೂ ತೊಡಕು ಬಿಡಿಸಿ ಸರಳಮಾಡಬೇಕೆಂದೂ ಹಲವರು ಅಭಿಪ್ರಾಯಪಟ್ಟು, ಕರ್ನಾಟಕ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಒಂದು ಸಮಿತಿಯನ್ನು ಏರ್ಪಡಿಸಿ ಆಗಬೇಕಾದ ಮಾರ್ಪಾಟುಗಳ ಪರ್ಯಾಲೋಚನೆಯನ್ನು ಆ ಸಮಿತಿಗೆ ವಹಿಸಿದರು. ಆ ಸಮಿತಿ ಚರ್ಚೆಗಳನ್ನು ನಡಸಿ ಬಲ್ಲವರಿಂದ ಸಲಹೆ ಸೂಚನೆಗಳನ್ನು ತರಿಸಿಕೊಂಡು, ಒಂದು ಅಕ್ಷರ ಸಂಸ್ಕರಣ ಸಮ್ಮೇಳನವನ್ನು ನಡಸಿತು. ಆ ಸಮ್ಮೇಳನ ಕೆಲವು ತೀರ್ಮಾನಗಳಿಗೆ ಬಂತು. ಆ ತೀರ್ಮಾನಗಳು ಇವು.

೧. ಈಗ ರೂಢಿಯಲ್ಲಿರುವ ಕನ್ನಡ ಲಿಪಿಯಲ್ಲಿ ಸಂಸ್ಕರಣ ಆವಶ್ಯಕವೆಂದು ಈ ಕನ್ನಡ ಅಕ್ಷರ ಸಂಸ್ಕರಣ ಸಮ್ಮೇಳನವು ಅಭಿಪ್ರಾಯಪಡುತ್ತದೆ.

೨. ರೋಮನ್ (ಇಂಗ್ಲಿಷ್) ಲಿಪಿಯನ್ನು ಕನ್ನಡಕ್ಕೆ ಸ್ವೀಕರಿಸುವುದು ಈ ಸಮ್ಮೇಳನಕ್ಕೆ ಯುಕ್ತವಾಗಿ ಕಾಣುವುದಿಲ್ಲ.

೩. ದೇವನಾಗರಿ ಲಿಪಿಯನ್ನೇ ಆಗಲಿ ಸ್ವೀಕರಿಸುವುದು ಯುಕ್ತವಾಗಿ ಕಾಣುವುದಿಲ್ಲ.

೪. ಈಗಿನ ಕನ್ನಡಲಿಪಿಯಲ್ಲಿಯೇ ಭಾರತೀಯ ಕ್ರಮವನ್ನು ತಳಹದಿಯಾಗಿ ಇಟ್ಟುಕೊಂಡು ಆವಶ್ಯಕವಾದ ಎಡೆಗಳಲ್ಲಿ ಇತರ ಕ್ರಮಗಳನ್ನು ಅನುಸರಿಸಿ ಸಂಸ್ಕರಣಮಾಡಿಕೊಳ್ಳತಕ್ಕದ್ದು.

೫. ಈಗ ಇರುವ ಅ, ಇ, ಉ, ಋ, ಎ, ಒ–ಈ ಹ್ರಸ್ವಸ್ವರಗಳನ್ನು ಇಟ್ಟುಕೊಂಡು ಅವಕ್ಕೆ ಪಕ್ಕದಲ್ಲಿ ದೀರ್ಘ ಚಿಹ್ನೆಯನ್ನು ಕೊಟ್ಟು ದೀರ್ಘ ಸ್ವರಗಳನ್ನಾಗಿ ಮಾಡಿಕೊಳ್ಳತಕ್ಕದ್ದು.

೬. ಐ, ಔಗಳೂ ಅನುಸ್ವಾರ ವಿಸರ್ಗಗಳೂ ಈಗಿನಂತೆಯೇ ಇರ ತಕ್ಕದ್ದು.

೭. ವರ್ಗೀಯ ವ್ಯಂಜನಗಳಲ್ಲಿ ಹತ್ತು ಮಹಾಪ್ರಾಣಗಳನ್ನು ತೆಗೆದು ಹಾಕಿ ಅವುಗಳನ್ನು ಆಯಾ ಅಲ್ಪಪ್ರಾಣಗಳಿಗೆ ಮಹಾಪ್ರಾಣ ಚಿಹ್ನೆಯನ್ನು ಸೇರಿಸುವುದರಿಂದಲೇ ಸೂಚಿಸತಕ್ಕದ್ದು.

೮. ಹತ್ತು ಅಲ್ಪಪ್ರಾಣಗಳೂ ಐದು ಅನುನಾಸಿಕಗಳೂ ಈಗ ಇರು ವಂತೆಯೇ ಇರತಕ್ಕದ್ದು.

೯. ಯ, ರ, ಲ, ವ, ಶ, ಷ, ಸ, ಹ, ಳ ಇವಿಷ್ಟೂ ಈಗ ಇರು ವಂತೆಯೇ ಇರತಕ್ಕದ್ದು.

೧೦. Anderson, Bank ಮುಂತಾದ ಇಂಗ್ಲಿಷ್ ಪದಗಳಲ್ಲಿ ಕಂಡು ಬರುವ ಸ (z), ಫ (f), ಷ(zh), ಈ ಜಾತಿಯ ಪರಭಾಷಾಧ್ವನಿಗಳನ್ನು ತೋರಿಸಲು ಬೇಕಾಗಿರುವ ಹೊಸ ಚಿಹ್ನೆಗಳನ್ನೂ ಹಳಗನ್ನಡಕ್ಕೆ ಬೇಕಾದ ಱ, ೞಗಳನ್ನೂ ಬಾಲಬೋಧೆಯಲ್ಲಿ ಕಲಿಸುವ ವರ್ಣಮಾಲೆಯಲ್ಲಿ ಸೇರಿಸ ಬೇಕಾದುದಿಲ್ಲ.

೧೧. ಶುದ್ಧ ವ್ಯಂಜನಗಳಲ್ಲಿ ಒಂದೊಂದಕ್ಕೂ ಒಂದೊಂದೇ ರೂಪವನ್ನು ಇಟ್ಟುಕೊಳ್ಳತಕ್ಕದ್ದು; ಎಂದರೆ ಈಗ ಇರತಕ್ಕ ಒತ್ತಕ್ಷರಗಳನ್ನು ಬಿಟ್ಟುಬಿಡ ತಕ್ಕದ್ದು; ಸಂಯುಕ್ತಾಕ್ಷರವನ್ನು ಬರೆಯುವಾಗ ಅದರ ಅಕ್ಷರಗಳನ್ನು ಉಚ್ಚಾ ರಣ ಕ್ರಮದಲ್ಲಿ ಸೇರಿಸಿ ಬರೆಯತಕ್ಕದ್ದು.

೧೨. ಈ ಮಾರ್ಗವನ್ನು ಅನುಸರಿಸಿದ ಸಂಸ್ಕರಣಗಳಲ್ಲಿ ಬೇಕಾಗುವ ಚಿಹ್ನೆಗಳಿಗೆ (ಅಕ್ಷರಗಳಿಗೆ) ಯಾವ ಯಾವ ರೂಪವಿರಬೇಕೆಂಬ ಅಂಶವನ್ನೂ, ಅಲಂಕಾರಾಕ್ಷರರೂಪಗಳನ್ನೂ, ಇಟ್ಯಾಲಿಕ್ಸ್ ಮುಂತಾದ ಅಕ್ಷರರೂಪಗಳನ್ನೂ ಮುಂದೆ ಈ ಭಾಗದಲ್ಲಿ ಪರಿಶ್ರಮವುಳ್ಳ ವಿದ್ವಾಂಸರು ಪರಿಶೀಲಿಸಿ ನಿಶ್ಚಯಿಸ ತಕ್ಕದ್ದು.

ಮೆೀಲೆ ಸುೀಚಿಸಿದ ಕೆಲವು ಮೀರ್‌ಪೀಟುಗಳನ್‌ನು *ಇಲ್‌ಲಿ ಬಳಕೆಗೆ ತಂದಿದೆ:—ಮುಖ್‌ಯವೀಗಿ ಮಾಡಿರುವ ಮೀರ್‌ಪೀಟುಗಳು ಮುೀರು:— (i) ದಿೀರ್‌ಘ ಚಿಹ್‌ನೆಯನ್‌ನು ಎಲ್‌ಲ ಕಡೆಯುೀ ಒಂದೆೀ ರಿೀತಿ ಬರೆಯುವುದು—ಆ=ಅೀ, ಬಾ=ಬೀ, ಕೂ=ಕುೀ ; (ii) ಒತ್‌ತಕ್‌ಷರವನ್‌ನು ಬಿಡಿಸಿ ಪಕ್‌ಕವಲ್‌ಲಿ ಬರೆಯುವುದು—ಕನ್ನಡ=ಕನ್‌ನಡ, ಶ್ರೀ=ಶ್‌ರಿೀ ; (iii) ಎಲ್‌ಲಾ ಮಹೀಪ್‌ರೀಣ ಚಿಹ್‌ನೆಗಳನ್‌ನುೀ ಅಲ್‌ಪಪ್‌ರೀಣ ಚಿಹ್‌ನೆಗಳ ಹೊಕ್‌ಕುಳು ಸಿೀಳಿಯೆ ಮೀಡಿಕೊಳ್‌ಳುವುದು—ಛ=ಚ಼ : ಭ=ಬ಼ ಈ ಸಣ್‌ಣ ಮೀರ್‌ಪೀಟುಗಳನ್‌ನು ತೀಳ್ಮೆಯಿಂದಲುೀ ದುೀರದೃಷ್ಟಿಯಿಂದಲುೀ ನೊೀಡಿ ಎಲ್‌ಲ್ಲರುೀ ಒಪ್‌ಪಿಕೊಂಡು ಆದಷ್‌ಟು ಬೇಗ ಬಳಕೆಗೆ ತಂದರೆ ಎಳೆಯ ಮಕ್‌ಕಳ ಹೊರೆ, ಅಚ್‌ಚುಕುೀಟಗಳ ತೊಡಕು ಆರ್‌ಥಕ ಕರ್‌ಥ ಕಡಮೆಯೀಗುವುದೆಂದು ನಂಬಿದ್‌ದೇನೆ

'ಶ್ರೀ'—'ಶ್‌ರಿೀ'

ಅನುಬಂಧ

ಕನ್‌ನಡದ ಬೀವುಟ

ಎೀರಿಸಿ, ಹೆೀರಿಸಿ, ಕನ್‌ನಡದ ಬೀವುಟ !
ಒೀಹೊ ಕನ್‌ನಡ ನೀಡು, ಅೀಹ ಕನ್‌ನಡ ನುಡಿ !
ಹೆೀರಿಸಿ, ತೊೀರಿಸಿ, ಕೆಚ್‌ಚೆದೆಯ ಬೀವುಟ !
ಗೀಳಿಯಲಿ ಫಟಪಟ, ದೀಳಿಯಲಿ ಚಟಚಟ,
ಉರಿಯಿತೊೀ ಉರಿಯಿತು ಹಗೆಯ ಹಟ ಮನೆ ಮಟ,
ಹೆೀಳ್ ಹೆೀಳ್ ಸುರಿಯಿತು ಹಗೆಯ ಬಿೀಡಕ್‌ಕಟ !
ಬಳ್ ಕನ್‌ನಡ ತೀಯ್ !
ಎೀಳ್ ಕನ್‌ನಡ ತೀಯ್ !
ಅೀಳ್ ಕನ್‌ನಡ ತೀಯ್ !
ಕನ್‌ನಡಿಗರೊಡತಿ ಒೀ ರೀಜೆೀಶ್‌ವರಿ !

* ಈ ಮಾರ್ಪಾಟುಗಳನ್ನು ಅನುಸರಿಸಿ ಅಚ್ಚಾದ ಮೊದಲ ಕೃತಿ ಶ್ರೀಯವರ 'ಕನ್ನಡದ ಬಾವುಟ' ಎಂಬ ಕವಿತೆ. ಅದನ್ನು ಈ ಲೇಖನಕ್ಕೆ ಅನುಬಂಧವಾಗಿ ಉದ್ಧರಿಸುವುದು ಅನುಚಿತವಾಗಲಾರದು.—ಸಂ.

ಮೌರ್ಯ ಕಳಚುರ್ಯರು, ಗಂಗರು, ಕದಂಬರು,
ರಟ್ಟರು ಚಳುಕ್ಯರು, ಹೊಯ್ಸಳರು, ಯಾದವರು,
ಇಳೆಗೆ ಮೇಲಾದವರು, ಬಾಣರು, ಜಾಣರು,
ಕೊಲೆಯ ಕಾಳ್ಕಿಚ್ಚಿಂಗೆ ತಂಪುಮಳೆ ತಳೆದು,
ಚೆಲುವು ನೆಲ ಸಾಲುತ್ತು ಕಲೆಯ ಹೊಂಬೆಳೆಯಿಟ್ಟು,
ನಗಿಸಿದರು ನಾಡನು ಕಡಿದು ಕಗ್ಗಾಡನು,
ಮಾನವನ ದೇವತೆಗೆ ತಂದ ಜಿನಭಕ್ತರು,
ಪಂಪೆಯ ವಿರೂಪಾಕ್ಷ ಪುತ್ರರು, ವಿರಕ್ತರು,
ವೀರನಾರಾಯಣನ ಕೃಪೆಯೊಳಾಸಕ್ತರು,
ಶ್ರೀ ಗೌರಿ ಕಾವಲಿಹ ರಾಯರನುರಕ್ತರು,
ನಮ್ಮ ತಾಯ್ ಮಕ್ಕಳು—
ಬಾಳ ಬೆಳ್ದಿಂಗಳಲಿ ಒಲಿದು ನಲಿದವರು—
ಬೇವೊ ಬೆಲ್ಲವೊ ಬರಲಿ, ಮಲ್ಲಿಗೆಯೊ ಮುಳ್ಳೋ,
ಬಾಸ ಬೆಳಕಿನಲಿ ಮಾಸದಳುಕಿನಲಿ,
ಚೆನ್ನು ಬದುಕನು ಕುಣಿಸಿ, ಒಲಿದು ನಲಿವವರು—
ನಮ್ಮ ತಾಯಣುಗರು,
ಪಂಪನೋ, ರನ್ನನೋ, ಬಸವನೋ, ಮಾಧವನೋ,
ಆ ಅಕ್ಕಮಹದೇವಿ, ನಾರಣಪ, ಚಿಕದೇವ,
ಜಕ್ಕಣ, ಹೊನ್ನಮ್ಮ, ನಮ್ಮಮ್ಮನೆಳೆಯರು,
ಚೆಲುವ ಚೆಲುವೆಯರು—ಚಿನ್ನವ ಚಿಣ್ಣರು,
ಕಲಿಗಳು, ಕಿಡಿಗಳು, ಗಂಡರು, ಮೊಂಡರು,
ನಲಿದೊಲಿದು ಬೆಚ್ಚೆಂದು ನೆಚ್ಚಿಂಗ್ ಮೆಚ್ಚಿಂಗೆ
ಕಿಚ್ಚಿನಲಿ ಹಾಯ್ದು ನಲ್ಲನ ಹಿಡಿದ ಹೆಂಡಿರು,
ಸತಿಗಳು, ಯತಿಗಳು, ವ್ರತಿಗಳು, ಕೃತಿಗಳು—
ಕನ್ನಡದ ಬಾವುಟವ ಹಿಡಿಯದವರಾರು ?
ಕನ್ನಡದ ಬಾವುಟಕೆ ಮಡಿಯದವರಾರು ?
ನಮ್ಮ ಈ ಬಾವುಟಕೆ ಮಿಡಿಯದವರಾರು ?
ಹೇಳಿರೋ ಹೆಸರೊಂದು ನೆನಹಿನಲ್ಲಿ ಸುಳಿದರೆ !

ಹುಡುಕಿರೋ ಹಾಡಿ ತಾನೊಬ್ಬ ಮನೆಗುಳಿದವರೆ !
ಕನ್ನಡದ ನಾಡಲಾ,
ಕನ್ನಡದ ನುಡಿಯಲಾ,
ಕನ್ನಡಿಗನೆಪೆ ಕಳೆದ ತೆನೆಯಲಾ ಕೆನೆಯಲಾ !
ಬೆಳಕು ಹರಿಯಿತು ಏಳಿ,
ತಾಯ ಕರೆ ಕೇಳಿ,
ಏಳಿರೋ, ಏಳಿರೋ, ಬಾಳ ಬಲಿ ಬೇಳಿರೋ
ಎಲ್ಲೊಲುಮೆಯೂ ಕೂಡಿವೊಂದೊಲುಮೆ ತಾಳಿರೊ,
ತಾಯುಳಿಯೆ ನಾನುಳಿದೆ,
ತಾಯಳಿಯೆ ನಾನಳಿದೆ,
ಮನೆ ಕಾಯಿ, ತುರು ಕಾಯಿ, ನಾಡ ಗಡಿ ಗುಡಿ ಕಾಯಿ,
ಕಾಯಲಾರೆಯ, ಸಾಯಿ,
ಎಂದೆಲ್ಲ ಏಳಿರೋ—
ಆಹ ಕನ್ನಡ ನುಡಿ, ಆಹ ಕನ್ನಡ ನಾಡು,
ಹಿರಿಯ ಕನ್ನಡ ಪಡೆ, ಮರಿಯ ಕನ್ನಡ ಪಡೆ,
ಏಳಿರೋ, ಬಾಳಿರೋ,
ಕನ್ನಡದ ಬಾವುಟವ ಹಿಡಿಯಿರೋ, ನಡೆಯಿರೋ !
ಏಳ್ ಕನ್ನಡ ತಾಯ್,
ಬಾಳ್ ಕನ್ನಡ ತಾಯ್
ಆಳ್ ಕನ್ನಡ ತಾಯ್,
ಕನ್ನಡಿಗರೊಡತಿ, ಓ ರಾಜೇಶ್ವರೀ !
ಇಂದಿನದೆ ಹೇಳಿರೋ ಈ ನಮ್ಮ ಬಾವುಟ !
ಕುಂದಿಹುದೆ ನೋಡಿರೋ ಈ ನಮ್ಮ ಬಾವುಟ
ಕಂದದಿದೆ ಇಂದಿಗೂ ಕನ್ನಡದ ಬಾವುಟ !
ಏನೇನ ಕಂಡುವೋ ಬಾನಾಡಿ ಬಾವುಟ !
ಆವುದನು ಕಾಣದೋ ಜೀವ ಕಳೆ ಬಾವುಟ !
ಕನ್ನಡದ ಬಾವುಟಗಳೊಂದಾದ ಬಾವುಟ !

ಎೕರಿಸಿ, ಹೕರಿಸಿ, ತೋೕರಿಸಿ ಬೕವುಟ !
ತೇಲೕಡು, ಮೇಲೕಡು ಒೕಲೕಡು ಬೕವುಟ !
ಚೆಲುವೕಗು, ಗೆಲುವೕಗು ಬಲವೕಗು ಬೕವುಟ !
ಹೊನ್‌ನೕಗಿ ಹೆಣ್‌ಣೕಗಿ, ಹಸನೕದ ಮಣ್‌ಣೕಗಿ,
ಹೊಸಹೊಸತು ಕಣ್‌ಣೕಗಿ, ಬೆಳಕೕಗಿ, ಬೆಳೆಯೕಗಿ,
ಕೂೕಡುತಿಹ ಕನ್‌ನಡದ ಹೊಮ್‌ಮುಗೆಯ ಕೕವೕಗಿ,
ಪರಿಪರಿಯ ಹೊಂಬಗೆಯ ಹೆರಿಗೆಯೕ ನೋೕವೕಗಿ,
ನೕಲುಮುಡಿ ಕೃಷ್‌ಣನಾ ಕಟ್‌ಟೊಲುಮೆ ಹೂೕವೕಗಿ,
ಬೕಳು ಎಲೆ ಬೕವುಟ !
ಬೕಳ್ ಕನ್‌ನಡ ತೕಯ್,
ಎೕಳ್ ಕನ್‌ನಡ ತೕಯ್
ಅೕಳ್ ಕನ್‌ನಡ ತೕಯ್,
ಕನ್‌ನಡಿಗರೊಡತೀ ಒೕ ರೕಜೇಶ್‌ವರೀ !

ಶ್‌ರೀ—

"ಅತಿ ಸರ್ವತ್ರ ವರ್ಜಯೇತ್"*

ಶ್ರೀ ನಾಗರಾಜಯ್ಯನವರೇ ಶ್ರೀ ಶಾಂತರಾಜಪ್ಪನವರೇ. ಮಹಿಳೆಯರೇ, ಮಹನೀಯರೇ,

ಶ್ರೀಮನ್ಮಹಾರಾಜರವರ ಕೃಪಾಪೋಷಣೆಯಲ್ಲಿ, ದಸರಾನುಹೋತ್ಸವ ಸಮಯದಲ್ಲಿ, ಸುಂದರ ನಗರವಾದ ರಾಜಧಾನಿಯಲ್ಲಿ ಸೇರಿರುವ ಈ ಜೈನ ಮಹಾಸಮ್ಮೇಳನದ ಪ್ರಾರಂಭೋತ್ಸವವನ್ನು ಮಾಡುವ ಗೌರವವನ್ನು ನನಗೆ ದಯಪಾಲಿಸಿದ್ದಕ್ಕಾಗಿ ಮೈಸೂರು ಜೈನ ಸಂಘಕ್ಕೂ, ತೀರ್ಥಕ್ಷೇತ್ರ ಸಮಿತಿಗೂ ನಾಗು ಅತ್ಯಂತ ಕೃತಜ್ಞನಾಗಿದ್ದೇನೆ. ಈ ಬಹುಮಾನಕ್ಕೆ ನನ್ನ

* ಮೈಸೂರಿನಲ್ಲಿ ತಾ|| ೨೩-೧೦-೧೯೩೯ ರಲ್ಲಿ ನಡೆದ ಜೈನ ಮಹಾಸಮ್ಮೇಳನದಲ್ಲಿ ಮಾಡಿದ ಪ್ರಾರಂಭೋತ್ಸವ ಭಾಷಣ.

ಹಲವು ಜೈನ ಮಿತ್ರರೂ, ಶಿಷ್ಯರೂ ಕಾರಣರೇ ಹೊರತು ನನ್ನ ಯೋಗ್ಯತೆಯಲ್ಲ. ತಮ್ಮ ಪ್ರೇಮಕ್ಕೆ ಮರುಕಾಣಿಕೆಯಾಗಿ ನನ್ನ ಪ್ರೇಮವನ್ನೊಪ್ಪಿಸಿ, ಜೈನ ಸಮಾಜಕ್ಕೆ ಇಷ್ಟಾದರೂ ಸೇವೆಮಾಡುವ ಅವಕಾಶ ದೊರೆತದ್ದಕ್ಕಾಗಿ ಬಹಳ ಸಂತೋಷಪಡುತ್ತೇನೆ.

ಮಹಾಶಯರೆ, ಹಿಂದೂಸ್ಥಾನದ ಎಲ್ಲಾ ಸಮಾಜಗಳಂತೆ ತಮ್ಮ ಸಮಾಜಕ್ಕೂ ಕವಿದಿದ್ದ ಮಂಕು ಜ್ಞಾನಸೂರ್ಯನ ಉದಯದಿಂದ ಈಗ ಚೆದರುತ್ತಿದೆ. ಎಲ್ಲರೂ ತಕ್ಕಮಟ್ಟಿಗೆ ಎಚ್ಚರವಾಗಿ ಮುನ್ನಡೆಗೆ ಅಣಿಯಾಗುತ್ತಿದ್ದೇವೆ. ಅಖಿಲಭಾರತ ವೀರರೂ, ಪ್ರಾಂತನಾಯಕರೂ, ಸಮಾಜಗಳ ಮುಂದಾಳುಗಳೂ ತಮ್ಮ ತಮ್ಮ ರಾಷ್ಟ್ರವನ್ನು, ನಾಡನ್ನು, ಜನವನ್ನು ಧೈರ್ಯಗೊಳಿಸಿ, ಮಾರ್ಗ ತೋರಿಸಿ, ಮೇಲಕ್ಕೆತ್ತುತ್ತಿದ್ದಾರೆ. ಯಾವ ಪಾಪಕರ್ಮಗಳಿಂದ, ಅಜ್ಞಾನದಿಂದ, ಆಲಸ್ಯದಿಂದ ನಾವು ಸೋತು ಸುಕ್ಕಿದೆವೋ ಆ ಅಶುಭಾಸ್ರವಗಳು ಈಗ ತಡೆಗಟ್ಟಿ, ಹಿಮ್ಮೆಟ್ಟುತ್ತಿವೆ. ಕರ್ಮಕ್ಷಯದಿಂದ ಬಂಧನದೂರವಾಗುತ್ತ, ಮುಕ್ತಿ, ಆನಂದ, ಐಶ್ವರ್ಯ ಹತ್ತಿರ ಬರುತ್ತಿವೆ. ಇಂತಹ ಪುಣ್ಯಕಾಲದಲ್ಲಿ ಜಾಗೃತರಾಗಿ ಕಾರ್ಯಸಾಧನೆ ಮಾಡುತ್ತಿರುವ ತಮ್ಮಂತಹ ಪುರಾತನ ಸಮಾಜದ ಸಮಾರಂಭದಲ್ಲಿ ಭಾಗಿಯಾಗಿ ತಮ್ಮ ಉತ್ಸಾಹದಿಂದ ನಾನೂ ಉತ್ಸಾಹವನ್ನು ತುಂಬಿಕೊಳ್ಳುವುದೆಂದರೆ ನನ್ನ ಭಾಗ್ಯೋದಯವಲ್ಲವೇ ?

ಹಿರಿಯರೆ, ಒಡನಾಡಿಗಳೆ, ಲೋಕದ ನಾಗರಿಕತೆಯ ಶಿಖರದಲ್ಲಿದ್ದ ನಾವು, ವೈದಿಕರೂ, ಜೈನರೂ, ಬೌದ್ಧರೂ ಪರಸ್ಪರ ವಿಮರ್ಶೆಯಲ್ಲಿ ಕಲೆತು ಒಟ್ಟಿಗೆ ಕಟ್ಟಿದ ದಿವ್ಯ ಭಾರತ ಸಾಮ್ರಾಜ್ಯ ಏಕೆ ಬಿರುಕುಬಿಟ್ಟು ಕುಸಿದು ಬಿದ್ದು ಹೋಯಿತು ? ನಮ್ಮ ಪ್ರಿಯ ಜನ್ಮಭೂಮಿ ಬೇಲಿಕೆಟ್ಟು, ನಾಲ್ಕು ದಿಕ್ಕುಗಳಿಂದಲೂ ತೊಂಡು ದನಗಳು ನುಗ್ಗಿ ಮೇದು ತುಳಿದು ಹಾಳುಮಾಡಿದ ತೋಟವಾಯಿತು ? ಏಕೆ ಎಲ್ಲ ಸಮಾಜಗಳೂ ದುಷ್ಷಮಗತಿಗೆ ಇಳಿದುವು ? "ಅತಿ ಸರ್ವತ್ರ ವರ್ಜಯೇತ್" ಎಂಬ ನಾಣ್ಣುಡಿಯನ್ನು ಮರೆತು ನಾವೆಲ್ಲರೂ ಅತಿಮತೀಯರಾದ್ದರಿಂದ ಎಂದು ಹೇಳಬಹುದಲ್ಲವೇ ? ವಿಶಾಲವಾದ ಸತ್ಯ, ಉದಾರವಾದ ಧರ್ಮ, ಕೌಶಲ್ಯವುಳ್ಳ ಲೌಕಿಕ, ಇವಕ್ಕೆ ಕಣ್ಣುಮುಚ್ಚಿ, ನಮ್ಮ ಬಾಳಿನ ಬಾಳೆಯ ಕಂದುಗಳು ತೇಲಿಹೋಗಿ, ನಮ್ಮ ಸಂಘ ಶಕ್ತಿ

ಉಡುಗಿ, ಅತಿ ವೈರಾಗ್ಯದಲ್ಲಿ, ಅತಿ ಲೌಕಿಕದಲ್ಲಿ, ಅತಿಬದ್ಧ ಸಂಪ್ರದಾಯದಲ್ಲಿ ಮುಳುಗಿದ್ದರಿಂದಲ್ಲವೇ? ಹೊಂದೊಡರೂ ತೊಡರಲ್ಲವೇ? ಒಡೆದು, ಒಡೆದು, ಕೈಕಟ್ಟಿ, ಕಟ್ಟಿ, ಕಟ್ಟಿ, ಮಲಗಿದ್ದರಿಂದಲ್ಲವೇ? ಬಂದವರಿಗೆಲ್ಲಾ ದಾಸ್ಯ, ಮನೆಯವರಲ್ಲೆಲ್ಲಾ ಕಲಹ-ಆ ಲೋಕವೂ ಇಲ್ಲ, ಈ ಲೋಕವೂ ಇಲ್ಲ ಎಂಬಂತೆ ತಬ್ಬಲಿಗಳಾದೆವಲ್ಲವೇ? ಸಿಂಹದ ಮರಿಗಳು ಕುರಿಯ ಹಿಂಡಾದೆವಲ್ಲವೇ? ಸಾಕು ಈ ಹುಚ್ಚು, ಇನ್ನು ಸಾಕು ಈ ಬೆಪ್ಪು, ಸಾಕು ಈ ಒಡಕು. ತೆರೆ ಬೀಸಿ ಬಂದು, ಬಿಟ್ಟಮೇಲೆ, ಕೆರೆಯ ಮರಳುಗಳ ನಡುವೆ ನಡುವೆ ಅಲ್ಲೊಂದು ಇಲ್ಲೊಂದು ಸಣ್ಣ ಸಣ್ಣ ಹಳ್ಳಕೊಳ್ಳಗಳಾಗಿ ನಿಂತು, ಮಲಿತು, ಹುಳುತು, ನಾರುತ್ತಿದ್ದ ನೀರು, ಮತ್ತೊಮ್ಮೆ ಹುಣ್ಣಿಮೆ ತಿಂಗಳು ಬೆಳಗಿ ಸೆಳೆಯುತ್ತಲೆ ಕಡಲೆದ್ದು ತುಂಬುನೆರೆಯಾಗಿ ತೆರೆ ಬೀಸಿ ಬರುವಾಗ ಬೇಗ ಬೇಗ ಕೂಡಿಕೊಳ್ಳುವ ಮಹಾ ಸಮುದ್ರದಂತೆ ಕೂಡಿಕೊಳ್ಳುವ: ಎಲ್ಲರ ಬಣ್ಣವೂ, ಎಲ್ಲರ ಸವಿಯೂ, ಎಲ್ಲರ ಸಂಸ್ಕಾರಗಳ ತಿರುಳೂ ಆ ದೊಡ್ಡ ಸಮುದ್ರದಲ್ಲಿ ಬೆರೆಯಲಿ, ಕರಗಲಿ, ಒಂದಾಗಲಿ. ಎಚ್ಚತ್ತ ಜನಪದಗಳು ಒಂದು ಜನಾಂಗವಾಗಲಿ. ಸತ್ಯ, ಧರ್ಮ, ದಯೆ—'ಜೀವದಯೆ ಜೈನ ಧರ್ಮಂ' ಎಂದು ನಮ್ಮ ಜನ್ನನು ಹೇಳಿಲ್ಲವೆ? ಸ್ವಾತಂತ್ರ್ಯ, ಸೌಂದರ್ಯ, ಸದಾಚಾರ, ಸುಖ, ಈ ಭೂಮ್ಯಾಕಾಶಗಳನ್ನು ಕೂಡಿಸುವ ಕಾಮನಬಿಲ್ಲಿನ ಬೆಳಕಿನಲ್ಲಿ, ನಲಿದಾಡುವಂತೆ, ಜಗಕ್ಕೆ ಮಾದರಿಯಾಗುವಂತೆ, ತಮ್ಮ ಬದುಕನ್ನು ತಿದ್ದಲಿ. ಜೀವನದ ಸಂಜೀವನಗಳಾದ ಸತ್ಯ ಧರ್ಮಗಳನ್ನು ಮತ್ತೊಮ್ಮೆ, ದಾರಿಗಾಣದ ಕಗ್ಗತ್ತಲೆಯ ಹೆಗ್ಗಾಡನ್ನಾಗಿ ಮಾಡದೆ, ಸರಳಮಾಡಿ; ಸುಲಭ ಮಾಡಿ, ಸಾರ ರಸಮಾಡಿ; ಕನ್ನಡಮಾಡಿ; ಸರ್ವರಿಗೂ ಊಟವಾಗುವಂತೆ ಒದಗಿಸಲಿ. "ಉತ್ತಿಷ್ಠತ, ಜಾಗ್ರತ, ಪ್ರಾಪ್ಯ ವರಾನ್ ನಿಬೋಧತ"—ಇದು ಋಷಿಗಳ ಸಂದೇಶ.

ಜೈನಮಹಾಶಯರೆ, ತಮ್ಮ ಸಮಾಜದ ಏಳಿಗೆಗಾಗಿ ಕುದಿದು, ಸಾಹಸ ಮಾಡಿ, ಈ ದೊಡ್ಡ ಸಂಘವನ್ನು ಸ್ಥಾಪಿಸಿದ ಕೀರ್ತಿಶೇಷರಾದ ಶ್ರೀಮಾನ್ ವರ್ಧಮಾನಯ್ಯನವರನ್ನೂ, ಅವರ ಕುಟುಂಬದವರನ್ನೂ ಬಲ್ಲ ಹೆಮ್ಮೆ ನನಗುಂಟು. ಅವರು ನೆಟ್ಟ ಸಸಿಯನ್ನು ತಮ್ಮ ಔದಾರ್ಯದ ಜಲವನ್ನೆರೆದು ತಾವು ಬೆಳಸಿಕೊಂಡು ಬಂದಿದ್ದೀರಿ. ಹಿರಿಯರಾದ ಹಲವರು ಜೈನ ಹೆಗ್ಗಡೆ

ಗಳು ಪ್ರತಿವರ್ಷವೂ ತಮ್ಮ ಮಾರ್ಗದರ್ಶಿತ್ವವನ್ನೂ ಬೆಂಬಲವನ್ನೂ ನೀಡುತ್ತಿದ್ದಾರೆ. ತರುಣರು ಪ್ರಬುದ್ಧರಾಗುತ್ತಿದ್ದಾರೆ. ನನ್ನ ಶಿಷ್ಯರೂ ಪರಮ ಮಿತ್ರರೂ ಆದ ಶ್ರೀ. ಲಕ್ಷ್ಮೀಪತಯ್ಯನವರು, ಶ್ರೀ ಧರಣೇಂದ್ರಯ್ಯನವರು ಮುಂತಾದ ಕಿರಿಯ ಸಾಹಸಿಗರನ್ನು ಮುಂದೆಬಿಟ್ಟು, ವಯೋವೃದ್ಧರೂ ಜ್ಞಾನವೃದ್ಧರೂ ಆದ ತಾವು ಸಂಘವನ್ನು ದಿನದಿನಕ್ಕೆ ಬಲಪಡಿಸಿ ಸಮಾಜಸೇವೆ ಮಾಡುತ್ತಿದ್ದೀರಿ. ತಮ್ಮ ಕಾರ್ಯಕಲಾಪಗಳು—ವಿದ್ಯೆಯನ್ನು ಹರಡುವುದು, ಗ್ರಂಥ ಪತ್ರಿಕೆಗಳನ್ನು ಪ್ರಕಟಿಸುವುದು, ಶಾಸ್ತ್ರಜ್ಞಾನ ಹುಟ್ಟಿಸುವುದು, ಧರ್ಮಪ್ರೇಮವನ್ನು ಎದೆ ಮುಟ್ಟಿಸುವುದು, ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವುದು, ಬಡಜನರಿಗೆ ಜೀವನವನ್ನು ಕಲ್ಪಿಸುವುದು, ತೀರ್ಥಯಾತ್ರೆಗಳಿಂದ, ದೇಶ ಸಂಚಾರದಿಂದ ಜನರ ಕಣ್ಣೂ, ಮನಸ್ಸೂ, ಆತ್ಮವೂ ಅರಳುವಂತೆ ಮಾಡುವುದು, ರಾಜಭಕ್ತಿಯ ಅಡಿಪಾಯದಮೇಲೆ ಪ್ರಜಾಶಕ್ತಿಯನ್ನು ಹೆಚ್ಚಿಸುವುದು —ಒಂದು ಮಾತಿನಲ್ಲಿ, ತಮ್ಮ ನಿಬಂಧನೆಗಳಲ್ಲಿ ಹೇಳಿರುವಂತೆ "ಸಕಲ ವಿಧಗಳಲ್ಲಿಯೂ ಸಮಾಜದ ಯೋಗಕ್ಷೇಮ ಮತ್ತು ಪುರೋಭಿವೃದ್ಧಿಗಾಗಿ ಕೆಲಸ ಮಾಡುವುದು"—ಇವೇ ಆಗಿವೆ. ಇಂತಹ ತಮ್ಮ ಕಾರ್ಯಕ್ರಮಕ್ಕೆ ತಮ್ಮವರೇ ಅಲ್ಲ, ಸರ್ವರೂ ತಮ್ಮನ್ನು ಅಭಿನಂದಿಸತಕ್ಕದ್ದಾಗಿದೆ. ಸಹಾಯ ಸಹಾನುಭೂತಿಗಳನ್ನು ನೀಡತಕ್ಕದ್ದಾಗಿದೆ.

ಮಹಾಶಯರೆ, ತಮ್ಮ ಈ ದೊಡ್ಡ ಪ್ರಯತ್ನವನ್ನು ದಯಾಮಯನಾದ ಭಗವಂತನು ಗುರಿಮುಟ್ಟಿಸಲೆಂದೂ, ಈ ದಿವಸ ತಮ್ಮ ಚುನಾಯಿತ ಅಧ್ಯಕ್ಷರಾದ ಶ್ರೀ ಶಾಂತರಾಜಪ್ಪನವರ ಅನುಭವದ ನೇತೃತ್ವದಲ್ಲಿ ಮಹಾಸಮ್ಮೇಳನವ ಕಾರ್ಯಗಳು ಯಶಸ್ವಿಯಾಗಿ ನಡೆಯಲೆಂದೂ ಪ್ರಾರ್ಥಿಸುತ್ತೇನೆ. ಮತ್ತು ಪಂಪ ಮಹಾ ಕವಿಗಳಿಬ್ಬರ ಚೆಲುವು ನುಡಿಗಳಲ್ಲಿ ಈ ಸಭೆಗೆ ಮಂಗಳಾಶಾಸನವನ್ನು ಮಾಡುತ್ತೇನೆ—

> ತ್ರಿದಶೇಂದ್ರ ಮೌಳಿ ಮಣಿಶೋ
> ಣ ದೀಪ್ತಿಗಳ್ ಪುದಿದು ಪೊಳೆವಲಕ್ತಕ ರಸದಿಂ
> ಪುದಿದಂತೊಪ್ಪಿರ್ಪರ್ಹತ್
> ಪದಂಗಳೆಮಗೀಗೆ ತಡೆಯದರ್ಹತ್ ಪದಮಂ ॥
> ನಿತ್ಯಸುಖಮಾತ್ಮರೂಪಮ
> ನಿತ್ಯಸುಖಂ ಮೋಹರೂಪಮೆಂಬ ವಿವೇಕಂ

ಸತ್ಯಸ್ವರೂಪಮುದಱಿಕೊಳ
ಗತ್ಯಂತಾನುಭವ ವಿಭವಮಕ್ಕೆಮಗರುಹಾ ॥

ನನ್ನ ಜೀವದುಸಿರು*

ಶ್ರೀ ಜೈನಮಹಾಸಮ್ಮೇಳನದ ಮಾನ್ಯ ಸದಸ್ಯರೆ, ತಾಯಿಯರೆ, ಹಿರಿಯರೆ,

ಭಾರತಮಾತೆಯ ಧರ್ಮಕಿರೀಟದಲ್ಲಿ ಮಿರುಗುವ ದಿವ್ಯಮಣಿಗಳ ನಡುವೆ, ಒಳ್ಳೆಯ ಬಿಳಿಯ ಹೊಳಪಿನ ಮೂರು ರತ್ನಗಳು ನಮ್ಮವೆಂಬ ಹೆಮ್ಮೆಯುಳ್ಳ ಮಹಾ ಜೈನ ಪರಂಪರೆಯ ಭವ್ಯರಾದ ತಮ್ಮಗಳಿಗೆ ಈ ಬಡಬಂಧುವಿನಲ್ಲಿ ಇಷ್ಟೊಂದು ಅಭಿಮಾನವುಂಟೆಂದು ನಾನು ನೆನಸಿರಲಿಲ್ಲ. ತಮ್ಮ ಪ್ರೀತಿಯ ಹೆಚ್ಚಳದ ಪ್ರವಾಹದಲ್ಲಿ ನಾನು ಕೊಚ್ಚಿಹೋಗದಿರುವುದು ಅದೇ ತಮ್ಮ ಪ್ರೀತಿಯ ತೆಪ್ಪದಮೇಲೆ ತೇಲಿಯೇ ಸರಿ. ಕನ್ನಡಸಾಹಿತ್ಯಕ್ಕೆ ಪ್ರಥಮಾಚಾರ್ಯರಾದ ತಾವು ಕನ್ನಡದ ಕಗ್ಗಲ್ಲುಗಳಲ್ಲೊಂದಾದ ನನ್ನನ್ನು ಯಾವುದೋ ದಿವ್ಯದೃಷ್ಟಿಯಲ್ಲಿ ನೋಡಿ ಕಲಾಪ್ರತಿಮೆಯಾಗಿ ಕಡೆದಿದ್ದೀರಿ. ಕನ್ನಡಿಗರ ಅಕ್ಕರೆ ಎಚ್ಚತ್ತ ಹುರುಪಿನಿಂದ ನನ್ನನ್ನೊಂದು ವಿಗ್ರಹವನ್ನಾಗಿ ಮಾಡಿಕೊಂಡು ಶಕ್ತಿಯನ್ನು ತುಂಬುತ್ತಿದೆ. ಎಲ್ಲಕ್ಕೂ ಹಿರಿದಾಗಿ, ಕರ್ನಾಟಕ ರತ್ನ ಸಿಂಹಾಸನಾಧೀಶ್ವರರೆಂಬ ಬಿರುದನ್ನು ತಾಳಿ, ಕನ್ನಡನಾಡಿನ ಎಲ್ಲಾ ಪಂಗಡಗಳಿಗೂ ಧ್ರುವತಾರೆಯಾಗಿ, ಎಲ್ಲಾ ಬಳಗಗಳ ಆಳವಾದ ಭಕ್ತಿಯನ್ನು ತಮ್ಮ ಕಡೆಗೆ ಸೆಳೆದು, ತಮ್ಮ ಜೀವನ ಸರ್ವಸ್ವವನ್ನೂ ಪ್ರಜೆಗಳ ಮೇಲ್ಮೆಗಾಗಿಯೆ ಮುಡಿಪು ಕಟ್ಟಿ, ಪ್ರಜೆಗಳ ಸಂತೋಷವೇ ತಮ್ಮ ಸಂತೋಷವೆಂದು ತಿಳಿದಿರುವ ಆಳುವ ಮಹಾಸ್ವಾಮಿಯವರು, ಕನ್ನಡಿಗರ ವಯಿರಮುಡಿಗಳು, ನಾಲುಮಡಿಕೃಷ್ಣರು, ತಮ್ಮ ಘನವಾದ ನಿರ್ವ್ಯಾಜಕೃಪೆಯಿಂದ ನನ್ನನ್ನು ಹುಟ್ಟಿ ಬಡವನನ್ನು ಒಬ್ಬ ಮನುಷ್ಯನಾಗಿ ಮಾರ್ಪಡಿಸಿ, ತಮ್ಮ ದೀಕ್ಷಾಕಾರ್ಯದಲ್ಲಿ ಸೇವೆಗೆ

---

* ಮೈಸೂರು ಜೈನ ಅಸೋಸಿಯೇಷನ್ ಸಂಘದ ಆಶ್ರಯದಲ್ಲಿ ದಸರಾ ಮಹೋತ್ಸವ ಸಮಯದಲ್ಲಿ ಮೈಸೂರು ನಗರದಲ್ಲಿ ಸೇರಿದ ಜೈನ ಮಹಾಸಮ್ಮೇಳನದ ಸದಸ್ಯರು ವಿಶ್ವಾಸದಿಂದ ದಯಪಾಲಿಸಿದ ಅಭಿನಂದನ ಪತ್ರಿಕೆಗೆ ಉತ್ತರ (೨೩-೧೦-೧೯೩೯).

ಹೊಡಿ, ಧನ್ಯನನ್ನಾಗಿ ಮಾಡಿದ್ದಾರೆ. ಪ್ಲೇಟೋವಿನ ಆದರ್ಶದಂತಿರುವ ಆ ರಾಜರ್ಷಿಗಳ ಮಹಾಪ್ರಸಾದದಿಂದ, ತಮ್ಮೆಲ್ಲರ ಆಶೀರ್ವಾದದಿಂದ ಅರ್ಹತೆ ಯಿಲ್ಲದವನಾದ ನಾನು ಈ ಪ್ರೀತಿ ವಿಶ್ವಾಸಗಳ ನುಡಿಗಳನ್ನು ಮುತ್ತಿನ ಸೇಸೆ ಯಂತೆ ತಲೆಯಲ್ಲಿಡುತ್ತೇನೆ.

ಹಿರಿಯರೆ, ಕೆಳೆಯರೆ, ಉದಾರಚಿತ್ತರಾದ ತಾವು ನನ್ನ ಸಾಹಿತ್ಯ ಕಾರ್ಯವನ್ನೂ, ಧರ್ಮಾನುರಾಗವನ್ನೂ ಎತ್ತಿಕೊಂಡು, ಮೆಚ್ಚುಗೆಯ ನುಡಿಗಳನ್ನಾಡಿದ್ದೀರಿ. ಕ್ರಾಂತಿಕಾರನೆಂದು ನನ್ನನ್ನು ಕರೆದಿದ್ದೀರಿ. ವಿಶ್ವ ಬಂಧುವೆಂದು ವರ್ಣಿಸಿದ್ದೀರಿ. ಕನ್ನಡದೇವಿಯ ಆರಾಧಕನೆಂದು ಹೆಸರಿಟ್ಟಿ ದ್ದೀರಿ. ಇವೆಲ್ಲವೂ ನನಗೆ ಪ್ರಿಯವಾದುವೇ; ಇವೆಲ್ಲಕ್ಕೂ ತಮಗೆ ನಾನು ತುಂಬ ಋಣಿ. ಕನ್ನಡತಾಯ ಹಾವುಗೆಯನ್ನು ಹೊತ್ತವನೇಲೆ, ನಾನು ಇವೆಲ್ಲವನ್ನೂ ಕೇಳಲೇಬೇಕು. ಸುಂದರಸ್ವಾಮಿಗಳು ಹಾಡಿರುವಂತೆ—

"ಅನ್ನೇ ಉನಕ್ಕಾಳಾಯಿನಿ ಅಲ್ಲೇನನಲಾಮೇ ?"

ಆದರೆ ಒಂದು ಬಿನ್ನಹ: ಬ್ರಾನಿಂಗ್ ಕವಿಯ ಮಾತುಗಳಲ್ಲಿ—

'T is not what man Does which exalts him
but what man Would do.

ಮತ್ತು—

What I aspired to be,
And was not, comforts me.

ಅಂದರೆ—"ಮನುಷ್ಯನು ಮಾಡಿದ್ದಲ್ಲ ಅವನನ್ನು ಶ್ರೇಯಸ್ಸಿಗೆ ಏರಿಸುವುದು, ಅವನು ಮಾಡಬೇಕೆಂದು ಬಯಸಿದ್ದು.—ನಾನು ಏನಾಗಬೇಕೆಂದು ಗುರಿ ಹಿಡಿದೆನೋ ಅದೇ, ನಾನು ಅದಾಗದಿದ್ದರೂ, ನನ್ನ ಸಮಾಧಾನ". ಸಾಧಾ ರಣರಾದ ನನ್ನಂತವರಿಗೆ ಧ್ಯೇಯವೇ ಸಮಾಧಾನ, ತಣಿವು. ವಿಶ್ವದ ಹಿರಿಯ ಕವಿಗಳ, ಹಿರಿಯ ತೀರ್ಥಕರರ, ಹಿರಿಯ ದೇಶಪ್ರೇಮಿಗಳ ಪಾದಪಡಿಯಲ್ಲಿ ಶಿಷ್ಯನಾಗಿ, ಅವರ ಸೇವೆಯಲ್ಲಿ, ಸಹವಾಸದಲ್ಲಿ, ಪ್ರೇಮದಲ್ಲಿ, ಸುಪ್ರೇರಣೆಗೆ ಮನಸ್ಸನ್ನು ಮಾರುಕೊಟ್ಟು, ಆ ಬ್ರಹ್ಮಾನಂದದಲ್ಲಿ ಹೃದಯ ಕಲ್ಮಷವನ್ನು ಆದಷ್ಟು ತೊಳೆಯುತ್ತ, ಮುಗ್ಗರಿಸಿದರೂ ಮೇಲೆ ಏಳುತ್ತ, ವಿಶ್ವಕ್ಷೇತ್ರದಲ್ಲಿ ಕಂಡ ಹೆಬ್ಬೆಳಕನ್ನು ನನ್ನ ಅಲ್ಪ ಸಾಮರ್ಥ್ಯಕ್ಕೆ ತಕ್ಕ ಸಣ್ಣ ಕ್ಷೇತ್ರದಲ್ಲಿ ಹರ ಡುತ್ತೇನೆ. ಡಿಳ್ಳಿ ನನಗೆ ಬಲುದೂರ, ಕನ್ನಡನಾಡಿನ ಹಳ್ಳಿ ನನಗೆ ಸಾಕೆಂದು,

ನನ್ನ ವಿದ್ಯಾಭ್ಯಾಸ ಮುಗಿಯುವುದರೊಳಗೆ ನಾನು ನಿರ್ಧರಿಸಿಕೊಂಡೆನು. ಆಗಿನಿಂದಲೂ ಆ ಕರುಣಾಳು ಬೆಳಕೇ ನನ್ನನ್ನು ನಡಸುತ್ತಿರುವುದು. ಅದೇ ನನ್ನ ದೀಕ್ಷೆ, ನನ್ನ ವ್ರತ, ನನ್ನ ನೋಂಪಿ. ಇದಕ್ಕೆ ಬೇರುಗಳನ್ನು ಎಣಿಸುವುದಾದರೆ ಜೈನ ಸಂಸ್ಕಾರವೂ ನನ್ನ ಬಾಳಿನ ಒಂದು ಬೇರು. ಬೆಳ್ಳೂರು ನಮ್ಮ ತಂದೆಯವರ ಊರು; ಚಿಕ್ಕಂದಿನಲ್ಲಿಯೇ ಶ್ರವಣಬೆಳ್ಗೊಳದ ಗೊಮ್ಮಟಸ್ವಾಮಿಯ ಸೌಮ್ಯ ಮೂರ್ತಿ ಕಣ್ಣಿನಲ್ಲಿ ಕಟ್ಟಿ ಎದೆಯಲ್ಲಿ ನೆಲಸಿತು. ವ್ಯಾಸಂಗ ಕಾಲದಲ್ಲಿ ಷೇಕ್ಸ್‌ಪಿಯರ್, ಕಾರ್ಲೈಲ್ ಮುಂತಾದವರ ಪ್ರಭಾವದೊಡನೆ ಪಂಪ, ರನ್ನ, ನಾಗಚಂದ್ರ, ಜನ್ನ, ರತ್ನಾಕರ ಮುಂತಾದ ಜೈನ ಕವೀಶ್ವರರ ಪ್ರತಿಭೆಯೂ ನನ್ನನ್ನು ಪ್ರಚೋದಿಸಿತು. ಹಲವರು ಜೈನ ಹಿರಿಯರು, ಕಿರಿಯರು ನನ್ನ ಹಿತಚಿಂತಕರು. ನನ್ನ ಜೀವದ ಜೀವಾಳದಲ್ಲಿ ಜೈನಾಂಶವೂ ಸೇರಿದೆ. ಇದೇ ಮಂದಿರದಲ್ಲಿ ಕೆಲವು ವರ್ಷಗಳ ಹಿಂದೆ ಪಂಪಮಹಾಕವಿಯ ಜನ್ಮೋತ್ಸವವನ್ನು ಮಾಡಿದಾಗ, ಅಧ್ಯಕ್ಷಪೀಠವನ್ನು ಅಲಂಕರಿಸಿದ್ದ ಶ್ರವಣಬೆಳ್ಗೊಳದ ಪೂಜ್ಯಸ್ವಾಮಿಗಳು ಈ ರೀತಿ ಅಪ್ಪಣೆಕೊಡಿಸಿದ್ದನ್ನು ನಾನು ಹೇಗೆ ಮರೆಯಲಿ?-"ನಿಮ್ಮ ಜೀವನದಲ್ಲಿ ದುಃಖಗಳುಂಟೆಂದು ಕೇಳಿದ್ದೇವೆ: ಅದನ್ನು ದೇವರು ಚಿನ್ನವನ್ನು ಪುಟಕ್ಕೆ ಹಾಕುವ ಬೆಂಕಿಯೆಂದು ತಿಳಿಯಿರಿ. ಪಂಪನಲ್ಲಿ ನಿಮಗೆ ಅಗಾಧಪ್ರೇಮ. ಆದಿಪಂಪನನ್ನು ಮೆಚ್ಚಿ ಅಭಿನವ ಪಂಪನಾದ; ಪಂಪನನ್ನು ಬೆಳಗಿ ನೀವು ಆಧುನಿಕ ಪಂಪನಾಗಿ" ಎಂದು ಆಶೀರ್ವಾದ ಮಾಡಿದರು. "ಕನ್ನಡಕ್ಕೊಡೆಯನೊರ್ವನೆ" ಎನಿಸಿದ ಆ ಪಂಪನೆಲ್ಲಿ! ಈ ಗಾಂಪನೆಲ್ಲಿ? ಮಹನೀಯರ ಮಾತು ಹೇಗೆ ಸಾರ್ಥಕವಾದೀತು? ಮೈಸೂರು ಜೈನಸಂಘದವರು ಪಂಪಪ್ರಶಸ್ತಿಯ ಗ್ರಂಥವನ್ನು ಹೊರಡಿಸುವುದಾದರೆ, ನನ್ನ ಅಲ್ಪ ಸೇವೆಯನ್ನು ಮಾಡಿ ಹಿರಿಯರ ಮಾತನ್ನುಳಿಸಬೇಕೆಂದು ಕಾದಿದ್ದೇನೆ. ಇದುವರೆಗೆ, ನನ್ನಿಂದೇನಾದರೂ ಕನ್ನಡಕ್ಕೆ ಆಗಿದ್ದಲ್ಲಿ, ಮುಂದೆ ಆಗುವಲ್ಲಿ, ಆ ಶಕ್ತಿಯಲ್ಲಿ ಜೈನಪ್ರಭಾವವೂ ಬೆರೆತಿದೆ ಎಂದು ಬಿನ್ನೈಸಿಕೊಳ್ಳುವುದು ನನಗೆ ಒಂದು ದೊಡ್ಡ ಸಂತೋಷ.

ಇನ್ನೊಂದು ಮಾತು. ನನ್ನನ್ನು ಕ್ರಾಂತಿಕಾರನೆಂದು ಹೇಳುತ್ತೀರಿ. ನಾನು ತುಂಟನಲ್ಲ; ಶಾಂತಿಪ್ರಿಯ. ನನಗೆ ಬೇಕಾದ ಶಾಂತಿ ಸತ್ತದ್ದನ್ನಪ್ಪಿಕೊಂಡು ಬಿದ್ದಿರುವ ಶಾಂತಿಯಲ್ಲ; ಹಳೆಯ ವಸ್ತ್ರವನ್ನು ಬಿಸುಟು ಹೊಸ ಆತ್ಮವಾಗಿ ಮುನ್ನುಗ್ಗುವ ಜೀವನ ಹೋರಾಟದ ಶಾಂತಿ. ನಮ್ಮ ದಿನದಲ್ಲಿ

ನಮ್ಮ ಜನಾಂಗ ಎರಡು ಶಕ್ತಿಗಳ ಹೋರಾಟಕ್ಕೊಳಗಾಗಿದೆ. ಒಂದು, ಪಶ್ಚಿಮದಿಂದ ಬಂದ ಇಂಗ್ಲಿಷ್ ವಿದ್ಯೆಯ ಸೆಳೆತ; ಇನ್ನೊಂದು, ಮತ್ತೊಮ್ಮೆ ಚೇತರಿಸಿಕೊಂಡು ಏಳುತ್ತಿರುವ ನಮ್ಮ ಹಿರಿಯರ ಪುಣ್ಯಾರ್ಜನೆಯಾದ ಭಾರತವಿದ್ಯೆಯ ಹೆಮ್ಮೆ. ಈ ಹೋರಾಟವಲ್ಲಿ ಹೊರಗಿನದನ್ನು ಹೊರಕ್ಕೆ ತಳ್ಳಿ, ನಮ್ಮದನ್ನೇ ನಾವು ಮುಂದಕ್ಕೆ ಬೆಳಸಿಕೊಳ್ಳಬೇಕೆಂಬವರು ಇದ್ದಾರೆ; ಹೆಚ್ಚು ತ್ತಿದ್ದಾರೆ. ಚಿಕ್ಕಂದಿನಿಂದಲೂ ನನಗೆ ಬೇರೊಂದು ನೋಟ, ದರ್ಶನ, ಧ್ಯೇಯ. ಅದೇನೆಂದರೆ, ಎರಡನ್ನೂ ಕೂಡಿಸಿಕೊಳ್ಳುವುದು : ಎರಡು ವಿದ್ಯೆಗಳೂ, ಸಂಸ್ಕಾರ ಗಳೂ, ಶಕ್ತಿಗಳೂ ಒಂದಾಗಿ ಸಾಮರಸ್ಯಕ್ಕೆ ಬರಬೇಕೆನ್ನುವುದು. ಇಂಗ್ಲಿಷ್ ವಿದ್ಯೆ, ಸಾಹಿತ್ಯ ನನ್ನ ಜೀವಕ್ಕೆ ರಸವನ್ನು ತುಂಬಿವೆ; ಕಡೆಗೆ, ಭಾರತದಲ್ಲಿ ಕರ್ಣಾಟಕದಲ್ಲಿ ಪೂಜ್ಯಬುದ್ಧಿಗೆ ಅದೇ ಕಣ್ಣು ತೆರೆದು ಕೊಟ್ಟದ್ದಾಗಿದೆ, ನಾನು ಒಂದು ಕಡೆ ಹೇಳಿಕೊಂಡಿರುವಂತೆ—

"ಕನ್ನಡನುಡಿ, ನಮ್ಮ ಹೆಣ್ಣು,
ನಮ್ಮ ತೋಟದಿನಿಯ ಹಣ್ಣು; ...
ಪಡುವ ಕಡಲ ಹೊನ್ನ ಹೆಣ್ಣು,
ನನ್ನ ಜೀವದುಸಿರು, ಕಣ್ಣು,
ನಲಿಸಿ, ಕಲಿಸಿ, ಮನವನೊಲಿಸಿ
ಕುಣಿಸುತಿರುವಳು....
ಹೀಗೆ ನನಗೆ ಹಬ್ಬವಾಗಿ,
ಇನಿಯರಿಬ್ಬರನ್ನು ತೂಗಿ,
ಇವಳ ಸೊಬಗನವಳು ತೊಟ್ಟು,
ನೋಡಬಯಸಿದೆ;
ಅವಳ ತೊಡಿಗೆ ಇವಳಿಗಿಟ್ಟು
ಹಾಡಬಯಸಿದೆ."

ನಮ್ಮ ಮೈಯಲ್ಲಿ ಹುಟ್ಟಿದ ರೋಗ ನಮ್ಮದಾದರೂ ಕಳೆಯತಕ್ಕ ವಿಷ; ಹೊರಗಿನ ಕಾಡಿನಿಂದ ತಂದ ಮೂಲಿಕೆ, ಹೊರಗಿನದಾದರೂ ರಕ್ತಗತವಾಗ ಬೇಕಾದ ಅಮೃತ. ಕಿಟಕಿಗಳಿಲ್ಲದೆ ಉಸಿರು ಕಟ್ಟಿ ಕೆಟ್ಟದ್ದಾಯಿತು; ಕಿಟಕಿ ಗಳನ್ನು ವಿಶ್ವದ ಎಲ್ಲಾ ದಿಕ್ಕುಗಳಲ್ಲಿಯೂ ತೆರೆದು ಹೊಸಗಾಳಿ, ಹೊಸಬೆಳಕು ತುಂಬಿ ಹೊಸ ಉಸಿರು ಹೊಮ್ಮಲಿ. ಪೂರ್ವ ಪಶ್ಚಿಮ ಎರಡು ಬೇರುಗಳೂ ಹೆಣೆದುಕೊಂಡು ಒಂದು ತಾಯಿಬೇರಾಗಿ ಭಾರತ ಮಹಾವೃಕ್ಷ ಆಕಾಶಕ್ಕೆ ಚಿಮ್ಮಲಿ.

ಜೈನಮಹಾಶಯರೆ, ಹಿಂದೆ ತಾವೂ ಕ್ರಾಂತಿಕಾರರೇ. ಹಳೆಯ ಭಾರತವನ್ನು ಹೊಸ ಭಾರತವನ್ನಾಗಿ ತಿರುಗಿಸಿದವರಲ್ಲಿ ತಮ್ಮ ಹಿರಿಯರೂ ಸಾಹಸಪಟ್ಟವರೇ, ಭಾರತ ಸಂಸ್ಕೃತಿಯ ಮಹಾಮನೆಯಲ್ಲಿ ತಮ್ಮ ಕೆಲಸ ಎಷ್ಟು ಮಹತ್ವದ್ದೆಂಬುದನ್ನು ತಮ್ಮ ದಿವ್ಯ ಧರ್ಮವೂ, ಸಂಸ್ಕೃತ, ಪ್ರಾಕೃತ, ಕನ್ನಡ, ತಮಿಳು, ತೆಲುಗು ಮುಂತಾದ ಸಾಹಿತ್ಯಗಳೂ, ಸತ್ಯಾನ್ವೇಷಣಕ್ಕೆ ಆಯುಧವಾಗಿ ತಾವು ನಿರ್ಮಿಸಿದ ಸ್ಯಾದ್ವಾದದ ಸೂಕ್ಷ್ಮ ವಿಮರ್ಶನಶಕ್ತಿಯೂ, ಅನೇಕ ಪ್ರಾಂತಗಳಲ್ಲಿ ವೈಭವದಿಂದ ಆಳಿ, ಪ್ರಜೆಗಳಲ್ಲಿ ಧರ್ಮಪ್ರಭಾವನೆಮಾಡಿ, ಶಾಂತಜೀವನವನ್ನು ನೆಲೆಗೊಳಿಸಿ, ತಮ್ಮ ಐಶ್ವರ್ಯದ ಕುರುಹುಗಳಾಗಿ ದೇವಾಲಯಗಳನ್ನೂ, ಪ್ರತಿಮೆಗಳನ್ನೂ, ಕಲಾ ಸೌಂದರ್ಯಗಳನ್ನೂ ಬಿಟ್ಟುಹೋಗಿರುವ ರಾಜಮಹಾರಾಜರುಗಳೂ, ಗುರುಗಳೂ, ಯತಿಗಳೂ, ಅಹಿಂಸೆಯೆಂಬ ಪರಮಧರ್ಮಾಚರಣೆಯೂ ವ್ಯಾಪಾರ ವೈಗಾರಿಕೆಗಳ ಮಹೋದ್ಯಮಗಳೂ, ಆಹಾರ ಅಭಯ ಔಷಧ ಶಾಸ್ತ್ರದಾನಗಳೂ,—ಹೀಗೆ ಧರ್ಮ, ಸಾಹಿತ್ಯ, ಚರಿತ್ರೆ, ಕಲೆ, ಸಂಸ್ಕೃತಿ, ದಾನ,—ಎಲ್ಲವೂ ಒಂದೇ ಕೊರಳಿನಿಂದ ಸಾರುತ್ತಿವೆ. ಜೈನ ಸಮಾಜದ ಮಹತ್ವವನ್ನು ಅಭಿನಂದನ ಪತ್ರಿಕೆಯಲ್ಲಿ ತಾವು ಹೇಳಿರುವುದಕ್ಕಿಂತ ಹೆಚ್ಚಾಗಿ ನಾನು ಹೇಳಲರಿಯೆ. ಅದು ಅತಿಶಯೋಕ್ತಿಯಲ್ಲ; ಮಿತವಚನ. ತಮ್ಮ ಘನ ಸಮಾಜ ಹಿರಿಯರ ನೇತೃತ್ವದಲ್ಲಿ ಒಕ್ಕಟ್ಟಾಗಿ, ಪುಣ್ಯಶ್ಲೋಕರಾದ ಶ್ರೀಮಾನ್ ವರ್ಧಮಾನಯ್ಯನವರ ಆಶೋತ್ತರಗಳನ್ನು ಈಡೇರಿಸಿ, ಉತ್ಸರ್ಪಿಣಿ ಕ್ರಮದಲ್ಲಿ ಪ್ರಗತಿ ಸೋಪಾನಗಳನ್ನೇರಿ, ತಮ್ಮ ಸಮಾಜಕ್ಕೇ ಅಲ್ಲ, ಇಡಿಯ ಜನಾಂಗಕ್ಕೇ ಮಾರ್ಗದರ್ಶಕವಾಗಿ, ಶಕ್ತಿದಾಯಕವಾಗಿ ಬಾಳುವಂತಾಗಲೆಂದು ಪಂಚ ಪರಮೇಷ್ಠಿಗಳನ್ನು ಪ್ರಾರ್ಥಿಸಿ, ನನಗೆ ಈ ಪ್ರೀತಿ ವಿಶ್ವಾಸಗಳನ್ನು ತೋರಿದ್ದಕ್ಕಾಗಿ ಅನಂತ ವಂದನೆಗಳನ್ನು ಮತ್ತೊಮ್ಮೆ ತಮ್ಮಲ್ಲಿ ಅರ್ಪಿಸುತ್ತೇನೆ.

ಶ್ರೀಮಾನ್ ಕೌಜಲಗಿ ಶ್ರೀನಿವಾಸರಾಯರು

ಕನ್ನಡನಾಡು ನುಡಿಗಳ ಏಳ್ಗೆಗಾಗಿ ಸುಮಾರು ಅರ್ಧ ಶತಮಾನದಿಂದ ಅತ್ಯಂತ ಶ್ರದ್ಧೆಯಿಂದ ದುಡಿದ, ಪರಿಷತ್ತಿನ ಸಹಾಯಕವರ್ಗದ ಸದಸ್ಯರಾಗಿದ್ದು ಪರಿಷತ್ತಿನ ಕಾರ್ಯಕಲಾಪಗಳಲ್ಲಿ ಬಹಳ ಆಸಕ್ತಿಯನ್ನು ತೋರು

ತ್ತಿದ್ದ, ಬಿಜಾಪುರದ ಕರ್ನಾಟಕಭೂಷಣ ಶ್ರೀಮಾನ್ ಕೌಜಲಗಿ ಶ್ರೀನಿವಾಸ ರಾವ್, ಬಿ.ಎ., ಎಲ್ಎಲ್. ಬಿ. ಅವರು ತಮ್ಮ ೬೭ನೆಯ ವಯಸ್ಸಿನಲ್ಲಿ ಕಳೆದ ತಿಂಗಳು * ೨೨ನೆಯ ತಾರೀಖು ಗುರುವಾರ ಮರಣ ಹೊಂದಿದರೆಂದು ತಿಳಿಸಲು ನಮಗೆ ಬಹಳ ದುಃಖವಾಗುತ್ತದೆ.

ಶ್ರೀಯುತರು ಕಳೆದ ಎರಡುವರ್ಷಗಳಿಂದಲೂ ಪಾರ್ಶ್ವವಾಯು ಬೇನೆಯಿಂದ ನರಳುತ್ತಿದ್ದರು. ಇಳಿವಯಸ್ಸು ; ಜೊತೆಗೆ ಬೇನೆಯ ಮುಲುಕು. ಆದರೂ ಅವರ ಮನಸ್ಸು ಕನ್ನಡದ ಏಳ್ಗೆಯನ್ನು ಕುರಿತು ಸದಾ ಚಿಂತಿಸುತ್ತಾ ಕೊನೆಯವರೆಗೂ ಚಟುವಟಿಕೆಯಾಗಿತ್ತು. ಶ್ರೀಯುತರು ಕನ್ನಡಕ್ಕಾಗಿ ಬದುಕಿದ್ದರು. ಕನ್ನಡಕ್ಕಾಗಿ ಬಾಳಿದರು. ಕನ್ನಡದ ಏಳ್ಗೆಯಚಿಂತೆಯಲ್ಲೇ ಅಳಿದರು.

ಕರ್ನಾಟಕಭೂಷಣ ಶ್ರೀನಿವಾಸರಾಯರು ಲೋಕಮಾನ್ಯರ ಪಟ್ಟಶಿಷ್ಯರಾಗಿ, ಎಳಮೆಯಲ್ಲೇ ನಾಡ ಊಳಿಗಕ್ಕೆ ತಮ್ಮ ಬಾಳನ್ನು ಮುಡಿಪು ಕಟ್ಟಿದವರು. ಹರಿದು ಹಂಚಿಹೋದ ಕನ್ನಡನಾಡನ್ನು ಒಂದುಗೂಡಿಸಿ, ನಾಡಿನ ಏಳ್ಗೆಯನ್ನು ಕಾಣಬೇಕೆಂಬ ಹೆಬ್ಬಯಕೆಯಿಂದ, ತ್ರಿಕರಣಪೂರ್ವಕವಾಗಿ ದುಡಿದವರು. ಈ ದುಡಿಮೆಯಲ್ಲಿ ದಾನಶೂರರಾಗಿ, ತನುಮನಧನಗಳನ್ನು ನಾಡಿಗಾಗಿ ನೀಡಿದವರು. ನಾಡಿನಲ್ಲಿ ನವಚೇತನವನ್ನು ಕೆರಳಿಸಿ, ತಮ್ಮ ವೀರವಾಣಿಯಿಂದ ಜನರನ್ನು ಒಲಿಸಿಕೊಂಡು, ಜನರ ಎಚ್ಚತ್ತ ಸ್ಫೂರ್ತಿ ವಿವೇಕಯುತವಾದ ದಿಕ್ಕಿನಲ್ಲಿ ಹರಿಯಬೇಕೆಂದು ಬುದ್ಧಿ ಹೇಳಿದ ಗುರು.

ಶ್ರೀಯುತರು ಹುಟ್ಟಿದ್ದು ಕಲಾದಗಿಯಲ್ಲಿ. ೧೮೭೩ರಲ್ಲಿ. ಅವರು ತಮ್ಮ ೬೭ವರ್ಷದ ಆಯುಷ್ಯದಲ್ಲಿ ನನಸಾಗಿ ಮಾಡಿಕೊಳ್ಳಬೇಕೆಂದು ತವಕಿಸುತ್ತಿದ್ದ ಕೆಲವು ಕನಸುಗಳನ್ನು ಇಲ್ಲಿ ಸಂಕ್ಷೇಪವಾಗಿ ಹೇಳಬಹುದು. ಈ ಕನಸುಗಳಲ್ಲಿ ಕೆಲವು ನನಸಾದವು : ಕರ್ನಾಟಕ ಏಕೀಕರಣ ಚಳುವಳಿಗೆ ಚಾಲನೆ ಕೊಟ್ಟು, ಕಾಂಗ್ರೆಸ್ಸಿನ ರಾಜಕಾರಣದ ಮಟ್ಟಿಗಾದರೂ ಸ್ವತಂತ್ರ ಕರ್ನಾಟಕದ ಪ್ರಾಂತರಚನೆ ಸಾಧ್ಯವಾದದ್ದು ಇವರ ದುಡಿಮೆಯ ಫಲವಾಗಿ. ವಿಜಯನಗರ ಸ್ಮಾರಕೋತ್ಸವದ ಕಲ್ಪನೆ ಹುಟ್ಟಿದ್ದು ಇವರಿಂದಲೇ ಎನ್ನಬಹುದು

ಇನ್ನು ಶ್ರೀಯುತರ ಎರಡು ಕನಸುಗಳು ಇನ್ನೂ ಕನಸಾಗಿ ಉಳಿದಿವೆ : ನಾನು ಬಿಜಾಪುರಕ್ಕೆ ಎರಡು ಸಾರಿ ಹೋಗಿದ್ದಾಗಲೂ ಈ ಕನಸುಗಳನ್ನು

---

* ಈ ಲೇಖನದ ತಾರೀಖು ೧-೩-೧೯೪೦.

ನನ್ನೊಡನೆ ಅವರು ಆಲೋಚಿಸಿದ್ದು--ಅವರ ಮನೆಯಲ್ಲೊ ಮ್ಮೆ, ತೋಟದಲ್ಲಿ ಅನಾರೋಗ್ಯದಲ್ಲೊಮ್ಮೆ—ನನಗೆ ಯಾವಾಗಲೂ ಸ್ಫೂರ್ತಿಯನ್ನು ಕೊಡುವುದು. ಬ್ರಿಟಿಷ್ ಮತ್ತು ಸಂಸ್ಥಾನ ಕರ್ನಾಟಕಗಳನ್ನು ಮೈಸೂರು ಆಡಳಿತಕ್ಕೆ ಸೇರಿಸಿ, ಮೈಸೂರು ಶ್ರೀಮನ್ಮಹಾರಾಜರವರನ್ನು ಕನ್ನಡ ನಾಡಿಗೆಲ್ಲಾ ಗವರ್ನರನ್ನಾಗಿ ಮಾಡಬೇಕೆಂಬುದು ಅವರ ಮೊದಲನೆಯ ಕನಸು. ಅವರು ೧೯೩೮ರ ಸರ್ವಪಕ್ಷೀಯ ಪರಿಷತ್ತಿನ ಸಮಯದಲ್ಲಿ ಈ ಸೂಚನೆಯನ್ನು ಕೊಟ್ಟಿದ್ದರು. ಈ ಸೂಚನೆಯನ್ನು ಮದ್ರಾಸಿನ ಮುಖ್ಯಮಂತ್ರಿಗಳಾಗಿದ್ದ ಶ್ರೀಮಾನ್ ಚಕ್ರವರ್ತಿ ರಾಜಗೋಪಾಲಾಚಾರ್ಯರು ಮೊನ್ನೆ ಮೊನ್ನೆ ಲಾಯೊಲಾ ಕಾಲೇಜಿನಲ್ಲಿ ಮಾಡಿದ ತಮ್ಮ ಒಂದು ಭಾಷಣದಲ್ಲಿ ಪ್ರಸ್ತಾವಿಸಿ, ಎತ್ತಿಹಿಡಿದಿದ್ದಾರೆ. ಈ ಸೂಚನೆ ಕೈಗೂಡುವ ಸಾಧಕಬಾಧಕಗಳನ್ನು ಕನ್ನಡ ನಾಡಿನ ಹಿತಚಿಂತಕರು ಚರ್ಚಿಸಿ ಒಂದು ನಿರ್ಧಾರಕ್ಕೆ ಬರುವುದು ಅಗತ್ಯವೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

ಮೈಸೂರು ವಿಶ್ವವಿದ್ಯಾನಿಲಯವೇ ಅಖಿಲ ಕರ್ನಾಟಕ ವಿದ್ಯಾಪೀಠವಾಗಬೇಕೆಂಬುದು ಶ್ರೀಯುತರ ಇನ್ನೊಂದು ಹೆಬ್ಬಯಕೆಯಾಗಿತ್ತು. ಈ ವಿಚಾರವಾಗಿ ಅವರು ೧೯೩೯ರಲ್ಲಿ ಮೈಸೂರಿಗೆ ಬಂದಿದ್ದಾಗ ಮೈಸೂರು ಸರ್ಕಾರದವರೊಡನೆ ಮಾತುಕತೆ ನಡಸಿದ್ದರು.

ಹೀಗೆ ಶ್ರೀಯುತರು ತಮ್ಮ ಹೆಬ್ಬಯಕೆಯ ಕಣ್ಣಿಯಿಂದ ಮೈಸೂರನ್ನು ಮಿಕ್ಕ ಕರ್ನಾಟಕಕ್ಕೆ ಕಟ್ಟಿ, ಇಡಿಯ ಕನ್ನಡನಾಡಿನ ಶ್ರೇಯಸ್ಸು ಈ ಒಕ್ಕೂಟವಲ್ಲಿದೆ ಎಂಬುದನ್ನು ಸಾರಿದರು. ಅವರು ರಾಜಕಾರಣ, ಸಾಹಿತ್ಯ, ಸಂಗೀತಕಲೆ, ವೇದಾಂತ, ವ್ಯವಸಾಯ ಮುಂತಾದ ಕ್ಷೇತ್ರಗಳಲ್ಲಿ ನಿಪುಣತೆಯನ್ನು ಸಾಧಿಸಿಕೊಂಡಿದ್ದರು. ಕರ್ನಾಟಕದ ದಿವ್ಯಶಕ್ತಿಗಳಲ್ಲವರು ಅಗ್ರಶಕ್ತಿಯಾಗಿದ್ದರು. ಅವರ ಮರಣದಿಂದ ಕನ್ನಡನಾಡಿಗೆ ಅಪಾರವಾದ ನಷ್ಟ ಸಂಭವಿಸಿದೆ. ಅವರ ಆತ್ಮಕ್ಕೆ ಸದ್ಗತಿಯುಂಟಾಗಲಿ.

ಈ ಸಂಚಿಕೆಯ ಬೇರೊಂದು ಕಡೆಯಲ್ಲಿ ಅವರ ಪರಮಮಿತ್ರರಾದ ಕನ್ನಡಕಲಿ ಶ್ರೀ ಮುದವೀಡು ಕೃಷ್ಣರಾಯರ ಶ್ಲಾಘನಾಪೂರಿತವಾದ ಲೇಖನವನ್ನು ಕೊಟ್ಟಿದೆ. ಆ ಹಿರಿಯರ ಶ್ರದ್ಧಾಂಜಲಿಯೊಡನೆ ನನ್ನದನ್ನೂ ಕೊಟ್ಟು ಅಮರಗಣಕ್ಕೆ ಸೇರಿದ ಶ್ರೀನಿವಾಸರಾಯರಲ್ಲಿ ನನ್ನ ಭಕ್ತಿಪ್ರೀತಿಗಳನ್ನು ಅರ್ಪಿಸುತ್ತೇನೆ.

ಪೂರ್ವದ ಹಳಗನ್ನಡ ಮತ್ತು ತಮಿಳು*

ಕನ್ನಡ ಮೊದಲೊ ತಮಿಳು ಮೊದಲೊ ?

ಕಾಲಕ್ರಮದಲ್ಲಿ ಕನ್ನಡ ನುಡಿಯ ರೂಪಗಳನ್ನು ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ, ಹೊಸಗನ್ನಡ ಎಂದು ನಾಲ್ಕು ವಿಭಾಗಗಳಾಗಿ ಒಡೆಯುವುದು ವಾಡಿಕೆ. ಮುಖ್ಯವಾಗಿ ಹಳಗನ್ನಡ ಹೊಸಗನ್ನಡಗಳು ಹೆಚ್ಚು ಕಾಲವನ್ನು ಹಿಡಿಯುತ್ತವೆ; ನಡುಗನ್ನಡದ ಸಂಧಿಕಾಲ ಬೇಗ ಮುಗಿಯುವ ರೂಪವಾಗಿದೆ. ಈ ನೋಟದಿಂದ ಅದನ್ನು ಪೂರ್ವದ ಹೊಸಗನ್ನಡವೆಂದೂ ಕರೆಯಬಹುದಾಗಿದೆ. ಪೂರ್ವದ ಹಳಗನ್ನಡವೂ ಹೀಗೆಯೇ ಸಂಧಿಕಾಲದ ರೂಪವಾಗಿದ್ದಲ್ಲಿ, ಅದರ ಹಿಂದಿನ ಕನ್ನಡವನ್ನು ಮೊದಲ ಕನ್ನಡವೆಂದು ಕರೆಯಬಹುದು. ಅದಕ್ಕೆ ಹಿಂದೆ ? ಪ್ರಥಮದ್ರಾವಿಡವೇ [Proto-Dravidian] ತಮಿಳೆ ? ತಮಿಳಿನಿಂದ ಕನ್ನಡವೇ ? (ಮಲೆಯಾಳದಂತೆ). ಕನ್ನಡ ಮೊದಲೊ ತಮಿಳು ಮೊದಲೊ ? ಇದು ಪ್ರಶ್ನೆ. ಇದನ್ನು ಒಂದೆರಡು ಯುಕ್ತಿಗಳಿಂದ ಬಿಡಿಸಲು ಯತ್ನಿಸೋಣ.

ಮೊದಲು ನೆನಪಿನಲ್ಲಿಡತಕ್ಕ ಅಂಶ, ಭಾಷೆಯಲ್ಲಿ ಪೂರ್ವರೂಪಗಳೂ ಅವುಗಳ ಮರಿಗಳೂ ಉಳಿದಿರುವುದು. ಇವು ಅವಶೇಷಗಳು, ಹಳೆಯುಳಿಕೆಗಳು. ಇವು ಸಲುವಳಿಯ ಭಾಷೆಯ ಸಾಮಾನ್ಯ ನಿಯಮಗಳಿಂದ ಸಿದ್ಧಿಸುವುದಿಲ್ಲ. ವಿಶೇಷ ನಿಯಮಗಳನ್ನು ಹೇಳಬೇಕಾಗುತ್ತದೆ. ಚರಿತ್ರೆಯ ದೃಷ್ಟಿಯಿಂದ ಹಿಂದಕ್ಕೆ ಹೋಗಿ ಪೂರ್ವಕಾಲದ ಭಾಷೆಯ ರೂಪಗಳಿಂದ ಇವಕ್ಕೆ ವ್ಯುತ್ಪತ್ತಿ ಹೇಳಬೇಕಾಗುತ್ತದೆ. ಇವು ಹಿಂದಿನ ಭಾಷೆ ಅಳಿದಾಗ ಕೂಡ, ನಮಗೆ ಲೇಖನ ದೊರೆಯದಿದ್ದಾಗ ಕೂಡ, ಆ ನಿಂತುಹೋದ ಭಾಷೆಯನ್ನು ಗುರುತಿಸಲು ನೆರವಾಗುತ್ತದೆ.

ಉದಾಹರಣೆಗಾಗಿ : ನೋಹಿ, ಬೆಪ್ಪು, ಕತ್ತಲೆ, ಹೆಮ್ಮೆ—ಇವು ಹೊಸಗನ್ನಡದ ಸಾಮಾನ್ಯ ವಿಧಿಗಳಿಂದ ಸಿದ್ಧಿಸುವುದಿಲ್ಲ. ಹಳಗನ್ನಡ ವ್ಯಾಕರಣಕ್ಕೆ ಹೋಗಿ, ನೋಂಪಿ, ಬೆಳ್ಪು, ಕಟ್ತಲೆ, ಪೆರ್ಮೆ ಈ ಮಾತುಗಳ

---

* ೧೯೪೦ ಮಾರ್ಚಿಯಲ್ಲಿ ತಿರುಪತಿಯಲ್ಲಿ ನಡೆದ ಅಖಿಲಭಾರತ ಪ್ರಾಚ್ಯ ಸಮ್ಮೇಳನದ ಕನ್ನಡ ಶಾಖೆಯಲ್ಲಿ ಇಂಗ್ಲಿಷಿನಲ್ಲಿ ಮಾಡಿದ ಅಧ್ಯಕ್ಷ ಭಾಷಣದ ಅನುವಾದ.

ರೂಪಾಂತರಗಳು, ತಕ್ಕ ಧ್ವನಿ ಮಾರ್ಪಾಟುಗಳಿಂದ [phonetic changes] ಸಿದ್ಧಿಸತಕ್ಕವು ಎಂದು ವಿವರಿಸಬೇಕು. ಹೀಗೇಯೇ—ಅಲ್ಲ, ಇಲ್ಲ, ಸಾಕು, ಬೇಕು, ಹೌದು, ಬಹುದು (ನಡುಗನ್ನಡ—ಅಕ್ಕು, ಬಕ್ಕು) ಇವು ಹೆ. ಗದ ಅಲ್ಲನ್, ಅಲ್ಲಳ್, ಅಲ್ಲಂ ; ಇಲ್ಲನ್, ಇಲ್ಲಳ್, ಇಲ್ಲಂ ; ಸಾಲ್ಗುಂ, ಸಾಲ್ಕುಂ; ವೇಟ್ಕುಂ, ಬೇಟ್ಕುಂ ; ಅಕ್ಕುಂ, ಬರ್ಕುಂ, ಅಪ್ಪುದು, ಬರ್ಪುದು>ಅಪುದು, ಬಪುದು (ನ. ಗ) ಅಹುದು, ಬಹುದು—ಈ ಮಾತುಗಳ ಮಾರ್ಪಟ್ಟ ಉಳಿಕೆಗಳೆಂದು ಹೇಳಬೇಕಾಗುತ್ತದೆ. ಹೀಗೆಯೇ, ಬಂದಾನು, ಮಾಡಿಯೇನು, ಮಾಡೇನು—ಇವು ಹೆ. ಗ. ಬಂದಪನ್, ಮಾಡಿದಪೆನ್—ನ. ಗ: ಬಂದಹನು, ಮಾಡಿಯಹೆನು, ಮಾಡಿಪೆನು— ಇವುಗಳ ಉಳಿಕೆಗಳು.

ಹೊ. ಗದಿಂದ ನ. ಗದ ಮೂಲಕ ಹೆ. ಗಕ್ಕೆ ನಾವು ಹತ್ತುವಂತೆಯೇ ಹೆ. ಗದಿಂದ ಪೂ. ಹೆ. ಗಕ್ಕೆ ಹತ್ತಬೇಕಾಗಿದೆ. ಹೆ. ಗದ ಮತ್ತು ನ. ಗದ ಸಾಹಿತ್ಯ, ಶಾಸನ, ನಮಗೆ ಹೇರಳವಾಗಿ ದೊರೆಯುವುದರಿಂದ ಯಾವ ವ್ಯಾಕರಣ ವಿವರಣೆಯನ್ನೂ ನಾವು ತಾರ್ಕಣೆಯಿಂದ, ರುಜುವಾತಿನಿಂದ ಖಂಡಿತ ಮಾಡಬಹುದು. ಪೂ. ಹೆ. ಗದ ಸಾಹಿತ್ಯ ನಮಗೆ ಉಳಿಯಲಿಲ್ಲ. ನೃಪತುಂಗನು ಹೆಸರಿಸಿರುವ ಕವಿಗಳು ಕಾಲದ ತೆರೆಮರೆಯಲ್ಲಿ ಅಡಗಿದ್ದಾರೆ. ನಮ್ಮ ಲಭ್ಯಕ್ಕೆ ೪-೫ ನೆಯ ಶತಮಾನದಿಂದ ೮-೯ ನೆಯದರ ವರೆಗೆ ಕೆಲವು ಶಾಸನಗಳು ಸಿಕ್ಕಿವೆ. ೨ನೆಯ ಶತಮಾನದ ಒಂದು ಗ್ರೀಕ್ ನಾಟಕದಲ್ಲಿ ಒಂದೆರಡು ವಾಕ್ಯಗಳು ಸಂದೇಹವಾಗಿ ಕನ್ನಡವೆಂದು ಊಹಿಸಲಾಗಿದೆ. ಪೂ. ಹೆ. ಗವನ್ನು ಹಳಗನ್ನಡದ ಸಾಹಿತ್ಯ, ವ್ಯಾಕರಣ, ಶಾಸನಗಳಲ್ಲಿ ಸಿಕ್ಕುವ ಉಳಿಕೆಗಳಿಂದಲೂ, ಶಾಸ್ತ್ರೀಯವಲ್ಲದ ರೂಪಸಿದ್ಧಿಗಾಗಿ ಕೊಟ್ಟಿರುವ ವ್ಯಾಕರಣ ನಿಯಮಗಳಿಂದಲೂ, ತೀರ ಹಳೆಯ ತಮಿಳಿನ ಹೋಲಿಕೆಯಿಂದಲೂ, ದ್ರಾವಿಡ ಭಾಷಾ ಶಾಸ್ತ್ರದ ಸ್ಥೂಲ ನಿಯಮಗಳಿಂದಲೂ ವಿಚಾರಮಾಡಿ ಪುನರ್‌ರಚನೆ ಮಾಡಬೇಕಾಗಿದೆ.

ತೀರ ಹಳೆಯ ಶಾಸನಗಳಲ್ಲಿ ಕಾಣುವ ಒಕ್ಕಲುಳ್, ಸಂದಾನ್, ಸಂದೋನ್, ಎಱ್‌ದಾರ್, ವಿಟ್ಟಾರ್, ಅವರಾ, ಇರ್ವ್ವಿರ್, ಎನೆತು (ತಮಿಳು. ಎನ್ನೈತ್ತು. ಹೆ. ಗ ಎನಿತು) ಇಲ್ಲೆ (ತ. ಇಲ್ಲೈ, ಪಂಪ— ಇಲ್ಲೆಯೋ) ಎಱ್ (=ಇಱ್), ಕಡುಗ, ಪುಟ್ಟಕ್ಕ, ತಪ್ಪಾದೆ ಮುಂತಾದ

ರೂಪಗಳು ಹಳಗನ್ನಡ ಸಾಹಿತ್ಯದಲ್ಲಿ ಅಪೂರ್ವ; ಹಲವು ಇಲ್ಲವೆಂದೇ ಹೇಳಬಹುದು. ಇವು ಪೂ. ಹ. ಗಕ್ಕೆ ಸಾಮಾನ್ಯ; ಹ.ಗಕ್ಕೆ ವಿಶೇಷ, ಉಳಿಕೆ. ಇವು ಸಂಘದ ತಮಿಳಿನ ಹತ್ತಿರಕ್ಕೆ ಹೋಗುತ್ತವೆ. ಕೆಲವು ವೇಳೆ ಅದೇ ಆಗಿರುತ್ತವೆ. (ಸು. ೧-೫ ಶತಮಾನಗಳ ಕಾಲ.) ಕರ್ಮಣಿ ಪ್ರಯೋಗ ಸಂಸ್ಕೃತದ ಅನುಕರಣ, ದ್ರಾವಿಡ ಭಾಷೆಗಳ ರೂಢಿಯಲ್ಲವೆಂದು ತಿಳಿದಿದ್ದೇವೆ; ಆದರೆ ಇದರ ರೂಪ ಸಂಘ ತಮಿಳಿನಲ್ಲಿ ಬೇಕಾದಹಾಗೆ ಬಳಕೆಯಲ್ಲಿದೆ. ಪೂ. ಹ. ಗದ ಶಾಸನಗಳಲ್ಲಿ, ವಡ್ಡಾರಾಧನೆ ಗ್ರಂಥದಲ್ಲಿ ಸಿಕ್ಕುತ್ತದೆ. ನ. ಗದಲ್ಲಿ ಅಲ್ಲಲ್ಲಿ ಕಾಣಿಸುತ್ತವೆ.

ಎಂದು ಕೇಳಲ್ಪಟ್ಟುದಲ್ಲಾ
ಮುಂದೆ ಕಾಣಲ್ಪಟ್ಟುದಲಾ (ಬಸವಪುರಾಣ, ೬೦ . ೨೦)

ನೃಪತುಂಗ ತಪ್ಪಾದೆ ಮುಂತಾದ ರೂಪಗಳನ್ನು ನಿಷೇಧಿಸುತ್ತಾನೆ, ಲಘುವಿರಬೇಕಾದ ಕಡೆ ಗುರು ಬಂದ ದೋಷವೆಂದು ಹೇಳಿ (ತನ್ನ ಕಾಲದ ನೋಟದಿಂದ). ಕೇಶಿರಾಜ ಇರಅಪೆ ಎಂಬ ಅಪೂರ್ವ ಪ್ರಯೋಗವನ್ನು ಎತ್ತಿ ತೋರಿಸಿದ್ದಾನೆ.

ಈ ೪-೮ ಶತಮಾನಗಳ ಶಾಸನಗಳ ವಿಶೇಷ ರೂಪಗಳ ಜೊತೆಯಲ್ಲಿಯೇ ಹ. ಗದ ಸಾಮಾನ್ಯ ರೂಪಗಳೂ ಬರುತ್ತವೆ. ಆದ್ದರಿಂದಲೇ, ಈ ಪೂ. ಹ. ಗವನ್ನು ಸಂಧಿಕಾಲದ ಹ. ಗ ವೆಂದು ಮೇಲೆ ಸೂಚಿಸಿದ್ದು. ಪೂ. ಹ. ಗದ ಈ ವಿಶೇಷ ರೂಪಗಳನ್ನು ಹ. ಗದ ಸಾಮಾನ್ಯ ರೂಪಗಳೊಡನೆ ಹೋಲಿಸಿ ವಿಚಾರಮಾಡೋಣ.

೧. ಎಲ್ಲಾ ಪುರುಷಗಳಿಗೂ, ಕಾಲಗಳಿಗೂ—ನಿಷೇಧರೂಪಗಳಂತೆ—ಸಾಮಾನ್ಯವಾದ ಅಕ್ಕುಂ, ಬರ್ಕುಂ ಎಂಬ ರೂಪಗಳು ಪೂ. ಹ. ಗ: ಅಪ್ಪುದು, ಬರ್ಪುದು, ಇವು ಹ. ಗ.—ಕುಂ, ಗುಂ, ಸ್ವರಕ್ಕೆ ತಿರುಗಿ,—ಉಂ ಎಂದಾಗಿ ತೂಗುಂ ದೊಟ್ಟಿಲ್, ಇಟಿಯುಂ, ಬೊಟ್ತು*: ಎಂಬಲ್ಲಿ ಕಾಣುವಂತಿದ್ದು, ಹೊ. ಗದಲ್ಲಿ ತೂಗೋ ತೊಟ್ಟಿಲು, ಇಳಿಯೋ ಹೊತ್ತು ಎಂಬಂತೆ ಉಚ್ಚಾರವಾಗುತ್ತಿವೆ. ತಮಿಳಿನಲ್ಲಿ ಈ ಉಂ ಪ್ರತ್ಯಯ ಸರ್ವಸಾಧಾರಣ: ವರುಂ, ಇಟಿಯುಂ=ಬರೋ ಇಳಿಯೋ. ಹೊ. ಗ.

*ಕೇಶಿರಾಜನ "ಉಕಾರ ನಡುವೆ ಹೊಕ್ಕಿತು" ಎಂಬ ವಿವರಣೆ ಶಾಸ್ತ್ರೀಯವಾಗಿ ಕಾಣುವುದಿಲ್ಲ.

ವ್ಯಾಕರಣ ಶುದ್ಧಿಗಾಗಿ ಇವು ಬರುವ, ಬೀಳುವ, ತೂಗುವ, ಇಳಿಯುವ— ಹೀಗೆ ಸಾಮಾನ್ಯ ನಿಯಮಕ್ಕೆ ಒಳಪಡುತ್ತವೆ.

೨. ಆಖ್ಯಾತದಲ್ಲಿ ಸರ್ವನಾಮ ಪ್ರತ್ಯಯಗಳು ಹೆತ್ತುವ ಪೂ. ಹೆ.ಗದ ರೂಪಗಳು—ಪಿರಿಯೆನ್, ಒರ್ವೆನ್. ಸಂಬಂಧಯ್ (ಕಾದಂಬರಿ), ನೇರಿದಿರ್, ಹೆ. ಗದಲ್ಲಿ ಪಿರಿಯನೆನ್, ಆನ್ ಪಿರಿಯನ್, ಒರ್ವನೆನ್), ಆನೊರ್ವನ್, ನೇರಿದರಿರ್, ನೀವ್ ನೇರಿದರ್—ಎಂಬಂತೆ ಬದಲಾಯಿಸಿದ್ದುವು.

೩. ಪೂ. ಹ. ಗದಲ್ಲಿ ಆದ ಕಾಲಕ್ಕೆ-ತ, ನಡೆಯುವ ಕಾಲಕ್ಕೆ-ಪ, ಮೊದಬು-ತ್ತ,-ಪ್ಪ ಇವು ಪ್ರತ್ಯಯಗಳಾಗಿದ್ದುವು. (ಉದಾ. ಕಱುತ್ತು). ಹೆ. ಗದ ಹೊತ್ತಿಗೆ ಇವು-ದ,-ವ ಆದುವು ಸಮಯಾನುಸಾರವಾದ ಸಂಧಿ ಕಾರ್ಯದೊಡನೆ: ಉದಾ-ಕುಡುತ್ತ (ತಮಿಳು)=ಕೊಟ್ಟ=ಕೊಟ್ + ತ್ತ. ಮೊದಲು ಕೊಡು ಧಾತು ಎಂಬುದು ಕೋಡು ಎಂಬ ಭಾವನಾಮ ದಿಂದಲೂ ಕಾಣುತ್ತದೆ. ಪೂ. ಹ. ಗ. ಉಣ್ + ಪ, ಎನ್ + ಪ=ಹೆ. ಗ. ಉಣ್ಬ, ಎನ್ಬ ; ನ. ಗ. ಉಂಬ, ಎಂಬ ; ಹೊ. ಗ. ಉಣ್ಣುವ, ಎನ್ನುವ ಹೆ. ಗ. ದಲ್ಲಿ ಸಾಮಾನ್ಯವಾಗಿ ವ, ಬ ಆಗುವುದಿರುವಾಗ ಕೆಲವು ಹಿಂದಿನ ಅವಶೇಷಗಳು ಉಳಿದುವು: ಮಾಟ್ಪಿ, ಬೇಟ್ಪಿ, ನೋಟ್ಪಿ. ೧೦ನೆಯ ಶತಮಾನದ ಕವಿಗಳಲ್ಲಿ ಇನ್ನೊಂದೆರಡು ಇಂತಹ ರೂಪಗಳು ಸಿಕ್ಕುತ್ತವೆ. ಆದರೆ ನೃಪತುಂಗ ಈ ಮೂರು ರೂಪಗಳನ್ನೇ ಒಪ್ಪಿ, ಮಿಕ್ಕವನ್ನು ನಿಷೇಧಿಸಿ ದ್ದಾನೆ: ಕೂಟ್ಪಿ, ಕಾಟ್ಪಿ, ಸೂಟ್ಪಿ ಎನಲಾಗದು ಎಂದು. ಇವೂ ಇಂತಹವೂ ಪೂ. ಹೆ. ಗದ ಅವಶೇಷಗಳು : ಆ ಕಾಲದ ಕವಿ ಪ್ರಯೋಗ ಗಳು : ತಪ್ಪಾದೆ ಎಂಬಂತೆ ಹೆ. ಗದ ಸಾಮಾನ್ಯ ವಿಧಿಗೆ ವಿರುದ್ಧವಾದುವು. ಎಂದರೆ ಜನರ ಬಳಕೆಯಲ್ಲಿ ಬಿಟ್ಟುಹೋಗುತ್ತ ಹೊಸ ಪ್ರಯೋಗಗಳು ಹುಟ್ಟಿಕೊಂಡುವುಗಳು (ಮಾಟ್ + ಪ, ಕೂಟ್ + ಪ=ಮಾಡು + ವ ; ಕೂಡು + ವ), ಬೇಟ್ಪಿ ಎಂಬುದು ನ. ಗಕ್ಕೂ ಉಳಿದು ಬೇಹ ಎಂದು ಇದ್ದು (ಬೇಟ್ಪಿ>ಬೇಪ>ಬೇಹ) ಹೊ. ಗಕ್ಕೆ ನಿಂತುಹೋಯಿತು. ಮಾಹ, ನೋಹ ಎಂದು ನ. ಗಕ್ಕೂ ಬರಲಿಲ್ಲ.

೪. -ದಪ (ಮೊದಲು—ದಪ್ಪ) ಎಂಬ ರೂಪ ಸಾಮಾನ್ಯವಾಗಿ ಸಂಭಾವನಾ ರೂಪ, ಇದನ್ನು ಸಂಸ್ಕೃತದ ಮೂರುಕಾಲಗಳನ್ನು (ದ್ವಿವಚನ

ವನ್ನು ಹುಡುಕಾಡಿದಂತೆ) ಕನ್ನಡದಲ್ಲಿಯೂ ತೋರಿಸಲು ಹೊರಟು, ವರ್ತಮಾನಕಾಲದ ಪ್ರತ್ಯಯವಾಗಿ ವೈಯಾಕರಣಿಗಳು ಹೇಳಿದ್ದಾರೆ.-ನ ಪ್ರತ್ಯಯವನ್ನು ಬರುವ ಕಾಲಕ್ಕೆ ವಿನಿಯೋಗಿಸಿದ್ದಾರೆ. ಆದಿಪುರಾಣ ೬.೭-ಅಗಳುಂ ಕುದಿದಪ ತೃಷ್ಣೆಯುಂ ಕುಸಿದು ಮಾಣಿಸುವ; (೯.೫೭) ತೃಷ್ಣೆ ಪೇೞ್ ಪೋದಪುದೇ ?—ಈ ಪ್ರಯೋಗಗಳನ್ನು ಗಮನಿಸಿ. ಇದು ಹೇಗಾದರೂ ಇರಲಿ. -ದಪ್ಪ, ದಪ ಇವು ದ+ಅಪ್ಪ, ಅಪ. ಎರಡೂ ಕಾಲದ- ದ-ಪ ಇಲ್ಲಾಗಲೇ ಕುಳಿತಿವೆ. ಇವು. -ಅಹ ಆಗಿ ಹಕಾರ ಸ್ವರವಾಗಿರುವುದನ್ನು ಆಗಲೇ ನೋಡಿದ್ದೇವೆ. ಉದಾ: ಪೂ. ಹ. ಗ: ಬಂದಪ್ಪನ್, ಹ. ಗ: ಬಂದಪನ್, ನ. ಗ: ಬಂದಹನು, ಹೊ. ಗ: ಬಂದಾನು.

೫. ಶಿಥಿಲದ್ವಿತ್ವ ಮೊದಲು ಇದ್ದ ಒತ್ತು (Accent) ಮೊದಲನೆಯ ಅಕ್ಷರಕ್ಕೆ (ಉಚ್ಚಾರಣಾಂಶಕ್ಕೆ : Syllable) ಹಿಂದೆ ಸರಿದದ್ದರ ಪರಿಣಾಮವೆಂದು ಹೇಳಬಹುದು. ಹಿಂದಿನ ಪ್ರಯೋಗಗಳಲ್ಲಿ ಕಂಡು ಕೆಲವನ್ನು ನಿತ್ಯವಾಗಿಯೂ (ಉದಾ: ಅಮರ್ದು, ಬರ್ದಿಲಂ) ಮಿಕ್ಕುವನ್ನು ವಿಕಲ್ಪವಾಗಿಯೂ ಇಟ್ಟುಕೊಂಡರು. ನ. ಗ, ಹೊ. ಗ ದಲ್ಲಿ ವಿಶ್ಲೇಷವಾಗಿ ಸಂಯುಕ್ತವ್ಯಂಜನದ ನಡುವೆ ಸ್ವರ ಸೇರಿ ಶಿಥಿಲದ್ವಿತ್ವ ನಿಂತು ಹೋಯಿತು; ಒತ್ತೂ ಮಾಯವಾಯಿತು. ಪೂ. ಹ. ಗ: ಪೊಗ'ೞ್ದನ್ ಹ. ಗ: ಪೊ'ಗೞ್ದನ್, ನ. ಗ, ಹೊ. ಗ: ಹೊಗಳಿದನು. ಪೊಗ'ೞ್ಕೆ, ಪೊ'ಗೞ್ಕೆ, ಹೊಗಳಿಕೆ.

೬. ಗುಣವಾಚಕ ಪ್ರತ್ಯಯ ಮೊದಲು ತ್ತು, ಹ. ಗದಲ್ಲಿ ಸಾಮಾನ್ಯವಾಗಿ-ತು,-ದು. ಉದಾ: ಹ. ಗ. ಅವಶೇಷ, ವಿಶೇಷ—ತೆಱತ್ತು, ಎನಿತ್ತು, ಆರ್ತ್ತು, ಎತ್ತಣ್ತು, ದೊರೆತು, ಒಡೆತು—(ತಮಿಳು ಉಡೈತ್ತು. ಹಾಗೆಯೇ ಮುದಱು=ಮೊದಲ್ತು, ಮೊದಲದು).
ಱ

೭. ಸ್ವರದ ಹಿಂದೆ ವ್ಯಂಜನದ್ವಿತ್ವ ಪೂ. ಹ. ಗ ಸಾಮಾನ್ಯವಲ್ಲ; ಹ. ಗ. ಸಾಮಾನ್ಯ ವಿಧಿ. ಎನೆ, ಎನ್ನದೆ, ಕಳಲ್, ಕಳದೆ (ಕೇಶಿರಾಜ. ೭೧.) ಕಳ್ಳದ (ಆದಿಪುರಾಣ ೬. ೭) ಉಣೆ, ಉಣಲ್, ಉಣಿಸು, ಉಣ್ಣದೆ ಈ ರೂಪಗಳನ್ನು ಹೋಲಿಸಿ. ಹಾಗೆಯೆ, ಪುಲ್, ಹುಲ್ಲು; ತನ್, ತನತು,-ತನಮ್, ತನ್ನದು.

೮. ಕಡೆಯ ನ್, ಮ್ ಇವು ಬರಬರುತ್ತ ಬಿಟ್ಟು ಹೋಗುತ್ತವೆ. ಪೂ. ಹ. ಗ. ಅವನ್ ; ಹ. ಗ. ಅವಮ್ (? ಇದು "ಬಿಂದು"ವಿನ ಭ್ರಮೆಯಿಂದಾದ ಪ್ರಮಾದವೆಂದು ನಮ್ಮ ಮತ; ಸ್ವರದ ಹಿಂದೆ -ನ್. ಅವನಿರದೆ. ಅವಮಿರದೆ ಎಂದು ಏಕಾಗುವುದಿಲ್ಲ?) ನ. ಗ. ಹೊ. ಗ. ಅವನು, ಅವ. ದೇಶಂ, ಆಟಂ, ದೇಶಂಗಳ್, ಆಟಂಗಳ್, ಕರಗಂ ಬೊತ್ತನ್—ಇವು ಮೊದಲು. ಬಳಿಕ, ದೇಶಗಳ್, ಆಟಗಳ್ (ವಿಕಲ್ಪ, ಇವು ಹ. ಗದ ಹೊಸ, ಸಾಮಾನ್ಯ ರೂಪಗಳು). ಕಡೆಗೆ ದೇಶಗಳು, ಆಟಗಳು (ನಿತ್ಯ), ಕರಗಹೊತ್ತ (ನು).

೯. ಪೂ. ಹ. ಗ ದಿಂದ ಬಂದ ಕೆಲವು ಸಮಾಸಗಳ ಸರಿಯಾದ ಸ್ವರೂಪ ತಿಳಿಯದೆ ಕೇಶಿರಾಜ ತಪ್ಪಾಗಿ ಬಿಡಿಸಿರುತ್ತಾನೆ. ಉದಾ: ಅಂಗಯ್ = ಕಯ್ಯ ಅಡಿ. ನಿಜವಾಗಿ ಇದು ಅಗಂ + ಕಯ್ = ಅಗಂಗಯ್, ಗ ಸ್ವರವಾಗಿ ಅಂಗಯ್ ; ಹೀಗೆಯೆ, ಅಂಗಾಲ್, ಅಂಗಳವ್. ಅಗಪಟ್ಟನ್ (ಪಂಪ ರಾಮಾಯಣ ೪. ೮೫)=ಒಳಪಟ್ಟನ್, ಸಿಕ್ಕಿದನು. ತಮಿಳು ಅಗಪಡು. ತಮಿಳಗಂ=ತಮಿಳಕಂ ಎಂಬುದನ್ನು ಕರ್ + ನಾಟ್ + ಅಕಂ, ಕರ್ನಾಟಕಂ ಎಂಬುದರೊಡನೆ ಹೋಲಿಸಿ. ಅಕಂ=ಅಗಂ=ಅಂ—ಕರ್ನಾಟಂ. ಮೈಸೂರು ತಮಿಳಿನಲ್ಲಿ ಅಗಂ = ಅಹಂ= ಹಾಮ್: (=ಮನೆ) ಅಗತ್ತುಕ್ಕು =ಹಾತುಕು. ತಮಿಳಿನಲ್ಲಿ ವೈಯಗಂ, ವಾನಗಂ, ಕಾನಗಂ, ವೈಯಂ, ವನಂ, ಕಾನಂ ಎಂಬ ರೂಪಗಳನ್ನು ನೋಡಿ. ಕುಱು=ಕುಳ್ಳ, ಕಿಱು= ಸಣ್ಣ. ಕೇಶಿರಾಜ ಎರಡನ್ನೂ ಒಂದಾಗಿ ಭಾವಿಸುತ್ತಾನೆ. ಬೆಚ್, ಪಚ್, ಕೆಚ್=ಬಿಸಿ (ದು), ಪಸಿ (ದು), ಕಿಸಿ (ದು). ಇವು ಗುಣವಾಚಕ ಪ್ರಕೃತಿಗಳು. ಬೆಚ್ಚಗೆ+ಹೀಗೆ ಸಮಾಸವನ್ನು ಬಿಡಿಸುವುದು ಶಾಸ್ತ್ರೀಯವಲ್ಲ; ವೆಯ್, ಬೆಯ್‌ನ್, ಚೆಚ್=ಬೆಂ, ಬಿಸಿ, ಬಿಸು ಹೀಗೆ ಧ್ವನಿ ಮಾರ್ಪಾಟಾಗಿರಬೇಕು. ವೆಯಿಲ್=ಬಿಸಿಲ್; ಬೆಮ್, ಬೇಯ್=ಬೇ, ಬೆಂಕೆ, ಬೆಂದ, ಬೆಚ್ಚಗೆ, ಬಿಸಿದು, ಬಿಸಿಯುವು, ಬಿಸುಗದಿರ್, ಬಿಸುಪ್ಪು ಈ ರೂಪ ಸರಣಿ ಬೆಳಕು ಕೊಡುತ್ತದೆ.

೧೦. ಹೀಗೇ ಇನ್ನು ಕೆಲವು ಸಂಗತಿಗಳನ್ನು ಮನಸ್ಸಿಗೆ ತಂದುಕೊಳ್ಳಬಹುದು. ಕಾಮನ್, ಬಂದನ್, ಕಾಮಂ ಬಂದುದು ಎಂಬಲ್ಲಿ ನ್, ಮ್ ಗಳನ್ನು ಬಿಂದುಮಾಡಿಕೊಂಡು ಕಾಮಂ ಎಂದು ಬರೆದು (ಬಿಂದು ಯಾವ)

ಧ್ವನಿ?) ಕಾಮಂ ಎಂಬುದು ಎರಡೂ ಲಿಂಗವೆಂದು ಹೇಳಬಹುದೆ? ಬಂದೆಮ್-ಬಂದೆವು ಎಂಬಲ್ಲಿ ಬಿಂದುವೊಡನೆ ನಾಂ ಬಂದೆಂ ಎಂದು ಬರೆದು. ತಪ್ಪು ಉಚ್ಚರಿಸುವುದಕ್ಕಿಂತ ನಾನ್ ಬಂಡೆನ್, ನಾಮ್ ಬಂದೆಮ್ ಎಂದು ಬರೆದು ಉಚ್ಚಾರಣೆಯಲ್ಲಿ ಪ್ರಮಾದಕ್ಕೆ ಅವಕಾಶಕೊಡದಿರುವುದು ಮೇಲಲ್ಲವೇ ? ತಮಿಳಿನಲ್ಲಿಯೂ ಹೊ. ಗದದಲ್ಲಿಯೂ ಇರುವ-ಅದು ಪ್ರತ್ಯಯ, ಹ. ಗದದಲ್ಲಿ-ಉದು ಆಗಿರುತ್ತದೆ. ಹೊ. ಗದ ಬರ್ಪುದು ಎಂಬುದನ್ನು ಅನುಸರಿಸಿ ಬರುವುದು ಎಂದೇ ಬರೆಯಬೇಕೆ ? ಬರುವದು ತಪ್ಪೆ ? ಸಾದೃಶ್ಯದ (Analogy) ಪರಿಣಾಮವಾಗಿ ಕೇಳಿತು, ಹೇಳಿತು ಎಂಬಂತೆ ಬೇಯಿತು, ಕೊಡಿತು, ಬಿಡಿತು, ಮಿಗಿತು ಎಂದು ಹೇಳುತ್ತಿದ್ದೇವೆ.

ಹಳಗನ್ನಡದಲ್ಲಿರುವ ಅವಶೇಷಗಳಿಂದ ಪೂ. ಹ. ಗದ ಸ್ವರೂಪವನ್ನು ಸ್ವಲ್ಪಮಟ್ಟಿಗೆ ಊಹಿಸಿದ್ದಾಯಿತು. ಈಗ ಅದರ ಧ್ವನಿಗಳು(sounds) ಯಾವುವೆಂದು ವಿಮರ್ಶಿಸೋಣ. ಸ. ಗದಲ್ಲಿ ೞವೂ, ಹೊ. ಗದಲ್ಲಿ ಱವೂ ಬಿಟ್ಟುಹೋದುವೆಂದು ಬಲ್ಲೆವು. ಹ. ಗದ ಕೊನೆಗೇ ೞ ಸಂದೇಹವಾಗಿತ್ತೆಂದೂ, ಕೇಶಿರಾಜನು ೞವುಳ್ಳ ನುಡಿಗಳನ್ನು ಗುರುತಿಸಿ ಪಟ್ಟಿಮಾಡಿದನೆಂದೂ, ಕೆಲವು ಸಂದೇಹವೆಂದು ಹೇಳಿರುವನೆಂದೂ. ಹರಿಹರನು ಇದರ ತೊಡಕೇ ಬೇಡವೆಂದು ಸಾರಿದನೆಂದೂ ಬಲ್ಲೆವು. ೞಱಗಳು ಬಿಡಿಯಾಗಿದ್ದಾಗ ಳ ರ ಗಳಾಗಿ ಪರಿಣಮಿಸಿದುವು; ಒತ್ತಿನಲ್ಲಿದ್ದಾಗ ವಿಶ್ಲೇಷವಾದುವು, ಇಲ್ಲ ಮುಂದಿನ ವ್ಯಂಜನದ ರೂಪಕ್ಕೆ ತಿರುಗಿದುವು. (ಉದಾ : ಮೞೆ=ಮಳೆ ; ಮಱೆ=ಮರೆ; ಬಿೞ್ದ = ಬಿರ್ದ=ಬಿದ್ದ ; ಬಾೞ್ಕೆ=ಬಾಳಿಕೆ; ತೋಱ್ಪ=ತೋರುವ; ತೋಱ್ಕೆ=ತೋರಿಕೆ), ಮಹಾಪ್ರಾಣಗಳು, ಖ,ಶ,ಷ,ಸ,ಹ, ಈ ಧ್ವನಿಗಳು ಸಂಸ್ಕೃತದಿಂದ ಬಂದು ಸೇರಿದುವು. ವ್ಯಾಕರಣಕಾರರು ಮಹಾಪ್ರಾಣಗಳು ಕನ್ನಡದಲ್ಲಿ ಸ್ವಭಾವದಿಂದ ಉಂಟೆಂದು ಹೇಳಿದರೂ ಪ್ರಾಯಶಃ ಇಲ್ಲವೆಂದೂ ಅನುಮಾನಪಟ್ಟರು. ನಿಜತ್ವವೇನೆಂದರೆ, ಇಲ್ಲವೆಂದೇ ಹೇಳಬೇಕು. ಇಲ್ಲದ್ದರಿಂದಲೇ ತದ್ಭವಗಳು ಈ ಸಂಸ್ಕೃತ ಧ್ವನಿಗಳನ್ನು ಅಲ್ಪಪ್ರಾಣಗಳಾಗಿ ತಿರುಗಿಸಿದುವು. ಖ,ಶ,ಷ,ಗಳೂ ಹೀಗೆಯೇ ಕ, ಸ, ಸಗಳಾಗಿ ಉಚ್ಚಾರವಾದುವು. ತಮಿಳಿನಲ್ಲಿ ಇವಕ್ಕೆ ಅಕ್ಷರಗಳು ಬೇಕಾಗಲಿಲ್ಲ, ಕನ್ನಡದಲ್ಲಿ ಅಕ್ಷರಗಳನ್ನು ಮಾಡಿಕೊಂಡರು. ಈ ವಾದಸರಣಿಯಿಂದ, ಪೂ.ಹ.ಗದ, ಸಂಸ್ಕೃತ ಪ್ರಭಾವ, ಪ್ರಾಕೃತ ಸಂಪರ್ಕ ಹೆಚ್ಚಾಗುತ್ತಿದ್ದ ಸಂಧಿ

ಕಾಲದ, ಅಚ್ಚಕನ್ನಡದ ಧ್ವನಿಗಳು (ಉಲಿಗಳು) ಹೀಗಿದ್ದಿರಬೇಕೆಂದು ಊಹಿಸಬಹುದು.

೧೦. ಸ್ವರಗಳು (ಉಸಿರುಗಳು) ; ಅಆ,ಇಈ,ಎಏ,ಉಊ,ಒಓ. (ಐ, ಔಗಳು ಮೊದಲು ಅಯ್, ಅವ್ ; ಏ, ಓ ಇವು ಸಂಸ್ಕೃತದಲ್ಲಿರುವಂತೆ ಕನ್ನಡದಲ್ಲಿ ಸಂಧ್ಯಕ್ಷರಗಳಲ್ಲ.)

೨೩. ವ್ಯಂಜನಗಳು (ಒತ್ತುಗಳು) ;

ಕ, ಗ, ಙ
ಚ, ಜ, ಞ
ಟ, ಡ, ಣ
ತ, ದ, ನ
ಪ, ಬ, ಮ
ಯ, ವ, ರ, ಱ, ಲ, ಳ, ೞ, ಸ

ಪ್ರಮುಖವ್ಯಂಜನಗಳೆಂದರೆ ಕ,ತ,ಪ. ಇವು ನುಡಿಗಳ ಮೊದಲಲ್ಲಿ ಸಂಧಿ ಸಮಾಸಗಳಲ್ಲಿ ಹೆಚ್ಚಾಗಿ ತಲೆಹಾಕಿ, ಮೃದುವಾಗಿ, ಗ, ದ, ಬ ಗಳಾಗುತ್ತವೆ (ಸಾಮಾನ್ಯವಾಗಿ).ದ್ರಾವಿಡ ದೃಷ್ಟಿಯಿಂದ ಈ ಉಲಿಗಳನ್ನು ಮೂರು ವರ್ಗಗಳಾಗಿ ವಿಂಗಡಿಸಬಹುದು. ಇವು ಒಟ್ಟು ೩೩ಪೂ. ಹ. ಗದ, ಹ.ಗದ, ಅಚ್ಚಗನ್ನಡ ಉಲಿಗಳು :

I (i) ಕ, ಗ, ಙ—ಅ,ಆ
(ii) ಚ, ಜ, ಞ—ಯ, ಸ—ಇ, ಈ ; ಎ, ಏ.
II (i) ತ, ದ, ನ—ಱ, ರ, ಲ.
(ii) ಟ, ಡ, ಣ—ೞ, ಳ.
III (i) ಪ, ಬ, ಮ—
(ii) ವ—ಉ, ಊ; ಒ, ಓ,

ಧ್ವನಿ ಮಾರ್ಪಟುಗಳೂ. ಸಂಧಿಕಾರ್ಯಗಳೂ, ಕರ್ಕಶ ವ್ಯಂಜನಗಳು ಮೃದುವಾಗುವುದೂ, ವ್ಯಂಜನ ಸ್ವರವಾಗುವುದೂ, ಅನುನಾಸಿಕ ಮೂಡುವುದೂ— ಈ ವರ್ಗಗಳಲ್ಲಿ, ಈ ಸಾಲುಗಳಲ್ಲಿ. ಹುಟ್ಟುವ ಸ್ಥಳದ ಹತ್ತಿರ ನಾಲಗೆ ಆಡುವುದರಿಂದ. ಹೊರಳುವುದರಿಂದ.

ಹ.ಗದಿಂದ ಪೂ.ಹ.ಗದಿಂದ ಹಿಂದಕ್ಕೆ ನೋಟವನ್ನು ತಿರುಗಿಸಿದರೆ

ಮೊದಲ ಕನ್ನಡದಲ್ಲಿ ೧೦ಸ್ವರಗಳೂ, ೧೭ವ್ಯಂಜನಗಳೂ ಇದ್ದುವೆಂದೂ. ಗಜಡ ದಬ-ಸ, ಇವು ಇರಲಿಲ್ಲವೆಂದೂ ತೋರುತ್ತದೆ. ಹ ಆಮೇಲೆ ಸಂಸ್ಕೃತದಿಂದ ಬಂದು, ಕನ್ನಡದಲ್ಲಿ 'ಪ'ದ ಮಾರ್ಪಾಟಾದಂತೆ, ಕ, ಚ, ತ, ಯ ಇವುಗಳ ಮಾರ್ಪಾಟಾಗಿ ಪೂ. ಹಗದ ಸ ಹುಟ್ಟಿದಂತೆ ತೋರುತ್ತದೆ. ತೆಲುಗಿನಲ್ಲಿ ಚ, ಜ,ಇವುಗಳ ಉಚ್ಚಾರಣೆಯನ್ನು ಗಮನಿಸಿ. ಈ ೨೭ಉಲಿಗಳು ತಮಿಳಿನ ಉಲಿಗಳೇ ಆಗುತ್ತವೆ (ಅದರ ೩೦ರಲ್ಲಿ ಎರಡು ನಕಾರಗಳಲ್ಲಿ ಒಂದನ್ನೂ, ಐ, ಔ ಗಳನ್ನೂ ಬಿಟ್ಟರೆ). ತಮಿಳು ಲಿಪಿ ಏರ್ಪಟ್ಟಾಗ, ಅದರ ಉಲಿಗಳು ಅಷ್ಟೇ ಆಗಿದ್ದ ಪಕ್ಷದಲ್ಲಿ, ಕನ್ನಡದಲ್ಲಿ ತಮಿಳಿನಲ್ಲಿ ಮೊದಲು ೨೭ಮೂಲಧ್ವನಿಗಳೆಂದೂ, ಅವುಗಳು ಸಂಧಿಕಾರ್ಯಕ್ಕೂ ವ್ಯಾಕರಣಕ್ಕೂ ತಳಹದಿಯಾಗಿದ್ದುವೆಂದೂ ಹೇಳಬಹುದು.

ಆ ಕಾಲದ ಸಂಸ್ಕೃತ ಪ್ರಾಕೃತ ತದ್ಭವ ಪದಗಳನ್ನೂ, ಅವುಗಳ ಸಂಸ್ಕೃತ ಧ್ವನಿಗಳನ್ನೂ ಉಳಿದರೆ—ಅಚ್ಚಕನ್ನಡಕ್ಕೂ ತಮಿಳಿಗೂ ಏಕರೂಪ ಕಾಣುತ್ತದೆ; ಅಥವಾ ನಿಸ್ಸಂದೇಹವಾದ ಹೋಲಿಕೆ ಕಾಣುತ್ತದೆ. ಇದರಿಂದ ಈ ಎರಡು ದ್ರಾವಿಡಭಾಷೆಗಳ ಸಂಬಂಧ ಆ ಕಾಲದಲ್ಲಿ, ಆ ಅವಸ್ಥೆಯಲ್ಲಿ, ಏನಾಗಿತ್ತು ಎಂದು ಹೇಳೋಣ ?

ಅವು ಎರಡೂ ಒಂದೇ ಆಗಿದ್ದವು; ಆಮೇಲೆ ಎರಡಾಗಿ ಒಡೆದುವು ಎಂದು ಹೇಳೋಣವೆ ? ಸ್ವಲ್ಪ ಹೆಚ್ಚು ಕಡಮೆ, ಅಶೋಕನ ಕಾಲದಿಂದ (ಸು.ಕ್ರಿ.ಪೂ. ೨೫೦) ಕ್ರಿ. ಶ. ಎರಡನೆಯ ಶತಮಾನದವರೆಗಿನ ಪರಿಸ್ಥಿತಿಯನ್ನು ನಾವು ಗ್ರಹಿಸುವುದಕ್ಕೆ ಪ್ರಯತ್ನ ಪಡುತ್ತಿದ್ದೇವೆ. ತಮಿಳಿನ ತೀರ ಹಳೆಯ ಕಾಲ ಯಾವುದೆಂದು ನಿಷ್ಕರ್ಷೆಯಿಲ್ಲ; ಪುರಾಣಗಳನ್ನು ಬಿಟ್ಟರೆ, ಕೆಲವರು ಕ್ರಿ.ಪೂ. ೨ನೆಯ ಶತಮಾನವೆನ್ನುತ್ತಾರೆ, ಕೆಲವರು ೪, ೫ ನೆಯ ಶತಮಾನವೆನ್ನುತ್ತಾರೆ. ದೊರೆತಿರುವ ತೀರಹಳೆಯ ಕನ್ನಡ ಬರವಣಿಗೆಯೆಂದರೆ ಬೇಲೂರಿನ ಹತ್ತಿರದ ಹಲ್ಮಿಡಿಯ ಶಾಸನ. ಇದನ್ನು ಕಂಡು ಹಿಡಿದ ಡಾ॥ ಕೃಷ್ಣ ಅವರು ಸುಮಾರು ೪೫೦ ರ ಕಾಲವನ್ನು ಹೇಳುತ್ತಾರೆ. ಇದರಲ್ಲಿ ಸಂಸ್ಕೃತ ಆಗಲೇ ಬೆರತಿದೆ; ಈ ಕನ್ನಡ ಮಾತುಗಳಿವೆ—ಆಳೆ, ನಾಡುಳ್, ಅಪ್ಪೋರ್, ಇರ್ವ್ವರಾ, ಪೊಗಟಿ, ಕಾದೆಱಿಂದು, ಪೆತ್ತ, ಬಾಳ್ಗಚ್ಚು, ಕೊಟ್ಟಾರ್, ಕಳ್ದೋನ್, ಕುಱುಂಬಿಡಿವಿಟ್ಟಾರ್, ಅಱಿವೊನ್ಗೆ; ಅರಸನ್

ಎಂಬ ತದ್ಭವವಿವೆ. ಇದು ಪೂ.ಹ.ಗ. ೨ ನೆಯ ಶತಮಾನದ ಗ್ರೀಕ್ ನಾಟಕ ದಲ್ಲಿ ಇರುವುದು ಕನ್ನಡವೋ, ತಮಿಳೋ ಸಂದೇಹವಾಗಿದೆ. ಇರಲಿ. ಇದು ಸಂಧಿಕಾಲದ ಭಾಷೆಯಾದರೆ, ಇದರ ಹಿಂದೆ ಏನು ? ಕನ್ನಡಕ್ಕೂ ತಮಿಳಿಗೂ ಹೆತ್ತ ತಾಯಿಯಾದ ಒಂದು ಕನ್ನಡ-ತಮಿಳು ನುಡಿಯೆ ? ಇಲ್ಲ, ೫೦೦-೮೦೦ ವರ್ಷಗಳ ಚರಿತ್ರೆಯುಳ್ಳ, ತಮಿಳಿನಿಂದ ಬೇರೆಯಾಗಿ, ದ್ರಾವಿಡದ ಹಾಡಿನ ಮಟ್ಟುಗಳನ್ನೂ (ತ್ರಿಪದಿ. ರಗಳೆ, ಅಕ್ಕರ,-ಇವು ಸ್ವಲ್ಪ ಹೆಚ್ಚು ಕಡಮೆ ತಮಿಳಿನಲ್ಲೂ ಇವೆ), ತನ್ನದೆ ಜನಪದ ಸಾಹಿತ್ಯವನ್ನೂ ಉಳ್ಳ ಪೂ.ಹ.ಗವೇಯೇ ? ಆಳುವ ರಾಜರ ಪ್ರಾಕೃತ, ಸಂಸ್ಕೃತಭಾಷೆಗಳಿಗೆ ಅಧೀನವಾಗಿ ರಾಜಭಾಷೆ, ವಿದ್ಯಾಭಾಷೆಯೆನಿಸಿ ತಲೆಯೆತ್ತಲಿಲ್ಲದೆ ಹಳ್ಳಿಗಾಡಿನಲ್ಲಿ ಹುದುಗಿತ್ತೆ ? ೫ನೆಯ ಶತಮಾನದ ಹೊತ್ತಿಗೆ ಸ್ವತಂತ್ರವನ್ನು ಬಯಸಿ ಮುನ್ನುಗ್ಗಿತೆ? ತಮಿಳು ತನ್ನ ಸ್ವದೇಶಿರಾಜರ ಪಾಲನೆಯಲ್ಲಿ ೩-೪ ಶತಮಾನಗಳ ಮುಂಚೆಯೇ ಕೃಷಿಯಾಯಿತೇ ? ಪೂ.ಹ.ಗದ ಕಾಲವೆಷ್ಟು ?

ಪೂ.ಹ.ಗಕ್ಕೆ ಹಿಂದೆ ಕರ್ನಾಟಕ-ತಮಿಳಕ ಪ್ರದೇಶಗಳಲ್ಲಿ ಹರಡಿದ್ದ ಒಂದೇ ಕನ್ನಡ-ತಮಿಳು ನುಡಿಯಿಂದ ಅಕ್ಕತಂಗಿಯರಾಗಿ ಕನ್ನಡವೂ ತಮಿಳೂ ಹುಟ್ಟಲಿಲ್ಲ; ತಮಿಳಿಂದಲೇ ಕನ್ನಡ ಹುಟ್ಟಿತು, ಆಮೇಲೆ ಮಲೆಯಾಳದಂತೆ ; ಆದರಿಂದಲೇ ಪೂ. ಹ. ಗ. ತಮಿಳ ಹತ್ತಿರಕ್ಕೆ ಬಂದು, ಕಡೆಗೆ ತಮಿಳಿನಲ್ಲಿ ಸೇರಿಹೋಗುತ್ತದೆ ಎಂದು ಹೇಳೋಣವೇ ? ಇದು ನಿಜವಾದರೆ, ಒಪ್ಪಲೇಬೇಕು. ಆದರೆ ನಿಜವಾಗಿ ಕಾಣುವುದಿಲ್ಲ. ಮೊದಲು ತೆಲುಗು ಬೇರೆಯಾಗಿ, ತಮಿಳು-ಕನ್ನಡ ಒಂದಾಗಿದ್ದು, ಆಮೇಲೆ ಎರಡಾಗಿ ಒಡೆದುವೆಂಬುದಕ್ಕೆ ಕುರುಹುಗಳು ಸ್ಪಷ್ಟವಾಗಿವೆ. ಉತ್ತರ ಭಾರತದಲ್ಲಿ ದ್ರಾವಿಡ ಬಾಷೆಗಳು ಸಂಸ್ಕೃತ ಪ್ರಾಕೃತಗಳಲ್ಲಿ ಸೇರಿಹೋಗಿ ನಿರ್ನಾಮವಾದುವು. ಸಂಸ್ಕೃತ ಪ್ರಾಕೃತವಾಗಿ ಪರಿಣಾಮ ಹೊಂದಿದ್ದಕ್ಕೆ ಅವು ಕಾರಣಗಳೂ ಇರಬಹುದು. ಮೊಹೆಂಜದಾರೊ ಹರಪ್ಪ ಶೋಧನೆಗಳ ಲಿಪಿಯ ಭಾಷೆ ಯಾವುದೆಂದು ನಿರ್ಧರವಾಗುವವರೆಗೂ ಎಷ್ಟು ಹಿಂದಕ್ಕೆ ದ್ರಾವಿಡ ಹೋಗುತ್ತದೆ ಎಂದು ನಿರ್ಧರಿಸುವ ಹಾಗಿಲ್ಲ. ದಕ್ಷಿಣ ಭಾರತದಲ್ಲಿ ಮರಾಠಿ ಪ್ರದೇಶದಲ್ಲಿಯೂ ಆರ್ಯ ಭಾಷೆ ದ್ರಾವಿಡಭಾಷೆಯನ್ನು ನುಂಗಿತು. ಆದರೆ ಅದಕ್ಕೆ ಕೆಳಗೆ ಆಂಧ್ರವೂ ಕರ್ನಾಟಕ-ತಮಿಳಕವೂ ಎಷ್ಟೇ ಸಂಸ್ಕೃತ ಪ್ರಭಾವಕ್ಕೆ ಒಳಪಟ್ಟರೂ ತೀರ

ಅಳಿಸಿಹೋಗಲಿಲ್ಲ. ಬಹುಕಾಲ ಸತ್ಯ ಮುಚ್ಚಿಹೋಗಿತ್ತು. ಇವೆಲ್ಲಾ ಸಂಸ್ಕೃತ ಜನ್ಯವೆಂಬ ನಂಬಿಕೆಯೇ ಇತ್ತು. ಆದರೆ ಈಗ ದೇಶ್ಯಪದಗಳ, ವ್ಯಾಕರಣ ಪ್ರಕ್ರಿಯೆಗಳ, ವಾಕ್ಯರಚನೆ ರೂಢಿಗಳ ಹೋಲಿಕೆಯಿಂದ, ಹೊಸ ಭಾಷಾಶಾಸ್ತ್ರ ಭಾಷಾಚರಿತ್ರೆಗಳ ಪರಿಶೋಧನೆಯಿಂದ, ಸಂಸ್ಕೃತದಿಂದ ಭಿನ್ನವಾದ ದ್ರಾವಿಡ ಭಾಷಾವರ್ಗಕ್ಕೆ ಸೇರಿದುವೆಂದು ನಿರ್ಧರವಾಗಿದೆ. ಮೊದಲು ತೆಲುಗು ಒಡೆದು, ಆ ಬಳಿಕ ಕನ್ನಡ ತಮಿಳು ಬೇರೆಯಾದುವೆಂದು ಹೇಳಬೇಕಾಗಿದೆ. ಇದನ್ನು ವಿಚಾರಮಾಡೋಣ.

ಉಲಿಗಳು, ನುಡಿಗಳು, ಹೊಸ ನುಡಿಗಳು (ತದ್ಧಿತ), ಸಂಧಿಕಾರ್ಯ ಮುಂತಾದುವು ಪೂ.ಹ.ಗಕ್ಕೂ, ತಮಿಳಿಗೂ ಸಮೀಪವೆಂದು ಕಂಡೆವು. ತೊಲ್‌ಕಾಪ್ಪಿಯವೂ, ನನ್ನೂಲೂ, (ತಮಿಳು ವ್ಯಾಕರಣಗಳು) ನಾಗವರ್ಮನೂ, ಕೇಶಿರಾಜನೂ, ಭಟ್ಟಾಕಳಂಕನೂ ಸಂಸ್ಕೃತದ ಆಶ್ರಯದಲ್ಲಿಯೇ ಬರೆದವರು. ಇವರು ದೇಶ್ಯವಿದೆ, ದ್ರಾವಿಡ ಛಂದಸ್ಸಿದೆ ಎಂದು ಒಪ್ಪಿದ್ದೇ ಆಶ್ಚರ್ಯ. ತಮಿಳು ಕಾವ್ಯದಲ್ಲಿ ಸಂಸ್ಕೃತಪದಗಳು ತೀರಕಡಮೆ ಇರುವುದೂ ಆಶ್ಚರ್ಯ. ಉಲಿಗಳು ೨೭, ಎರಡು ಭಾಷೆಗೂ ಒಂದೇ. ನುಡಿಗಳೂ ಬಲುಮಟ್ಟಿಗೆ ಅವೇ -ಕೆಲವು ಸ್ವಲ್ಪ ಮಾರ್ಪಟ್ಟವೆ. ಹಳೆಯ ತಮಿೞಿಂದ ಹಳೆಯ ಕನ್ನಡಕ್ಕೆ ಮಾತಿಗೆ ಮಾತಿಟ್ಟು ಭಾಷಾಂತರ ಮಾಡಬಹುದು.

ಉದಾ : ಈ ಪದ್ಯ—

ಕುೞಲಿನಿದಿಯಾೞಿನಿದೆನ್ಬ ತಮ್ಮಕ್ಕಳ್
ಮೞಲೈಚ್ಚೊಲ್ ಕೇಳಾದವರ್. (ಕುಱಳ್)

ಹ.ಗದಲ್ಲಿ

ಕೊೞಲಿನಿದು, ವೀಣೆಯಿನಿದೆನ್ಬರ್ ತಮ್ಮ ಮಕ್ಕಳ
ತೊದಲ್ ಚೊಲ್ ಕೇಳದವರ್.

ಎಂದಾಗಬಹುದು. ಯಾೞ್, ಮೞಲೈ ಇವೆರಡು ದೊರೆತಿಲ್ಲ.* ಪೂ.ಹ.ಗದಲ್ಲಿ ಕೇಳಾದವರ್ ಎಂತಲೇ ಹೇಳಬಹುದು. ಇನ್ನೊಂದು ಉದಾ-

ನಾಡಾಗೊನ್ಱೋ, ಕಾಡಗೊನ್ಱೋ
ಅವಲಾಗೊನ್ಱೋ, ಮಿಚೈಯಾಗೊನ್ಱೋ

---

* ಆಣತಿ=ಆೞತಿ=ಗಾನ ; ಆೞಾಟಿಗಂ-ಒಂದು ಪ್ರಬಂಧ—ಈ ನುಡಿಗಳು ಆೞ್ ಎಂಬುದಕ್ಕೆ ಸಂಬಂಧಪಟ್ಟುವೇ ?

ಎವ್ವಱು ನಲ್ಲವರಾಡವ
ರವ್ವಱುನಲ್ಲೈ, ವಾಙು ಯ ನಿಲನೇ (ಪುಱನಾನೂಱು)

ಇದನ್ನು

ನಾಡಾಗೊಂದೋ, ಕಾಡಾಗೊಂದೋ,
ಅವಲಾಗೊಂದೋ, ಮಿಗೆಯಾಗೊಂದೋ,
ಏವಱುನಲ್ಲವರಾಳ್ಗ
ಳಾವಱು ನಲ್ಲಯ್ ಬಾಱ ನೆಲನೇ*

ಎಂದು ಕನ್ನಡಿಸಬಹುದು, (ಅವಲ್=ಹಳ್ಳ, ಅವಲಕ್ಕಿ ಹೋಲಿಸಿ; ಮಿಗೆ= ಎತ್ತರ; ತಿಟ್ಟು; ಮಿಗು ಧಾತುವಿನಿಂದ; ಆಡವರ್=ಆಳ್ಗಳ್, ಮನುಷ್ಯರು).

ಪ್ರತ್ಯಯುಗಳೂ ಸಂಧಿಕಾರ್ಯಗಳೂ ಕನ್ನಡದಲ್ಲಿ ಸರಳ, ಸ್ಪಷ್ಟ, ಮಿತ, ತಮಿಳಿನಲ್ಲಿ ಅಷ್ಟು ಸರಳವಲ್ಲ: ತೊಡಕು; ವಿಕಲ್ಪರೂಪಗಳು ಹೆಚ್ಚು ಬೆಳೆದಿವೆ. ಅನೇಕ ಭಾಗಗಳಲ್ಲಿ ತಮಿಳು ಹಿಂದಿನರೂಪಗಳನ್ನು ಹೆಚ್ಚಾಗಿ ಉಳಿಸಿರುವುದ ರಿಂದ ಅದು ಒಟ್ಟಿನಮೇಲೆ ಕನ್ನಡಕ್ಕೆ ಹಿಂದಿನದು ಎಂಬ ಭ್ರಾಂತಿಯನ್ನು ಹುಟ್ಟಿಸುತ್ತದೆ. ಆದರೆ ತಮಿಳೂ ಹಳದು, ನಡುವಣದು, ಇಂದಿನದು ಎಂಬ ರೂಪಾಂತರಗಳಿಲ್ಲದೆ ಇಲ್ಲ. ಎರಡು ಸಾವಿರ ವರ್ಷಗಳಲ್ಲಿಅದಕ್ಕೂ ಬದಲಾವಣೆ ಗಳುಂಟು. ಕನ್ನಡ ಇನ್ನೂ ಹೆಚ್ಚಾಗಿ ಬದಲಾಯಿಸಿದೆ. ಆದರೆ ಮೊದಲು ಭಾಷಾ ಶಾಸ್ತ್ರದೃಷ್ಟಿಯಲ್ಲಿ ಕನ್ನಡ ತನ್ನ ಸ್ವರೂಪ ಸ್ವಚ್ಛತೆಯಿಂದ ತಮಿಳಿ ಗಿಂತ ಹಳೆಯದು. ಯಾವಾಗಲೂ, ಆಗ್ಗೂ, ತಮಿಳೇ ಕನ್ನಡಕ್ಕಿಂತ ಹಳೆಯ ಸ್ವರೂಪವನ್ನು ತೋರುವುದೆಂದು ಹೇಳುವುದು ಸಾಧ್ಯವಿಲ್ಲ.

ಪೂ.ಹೆ.ಗ ದಿಂದ ಮೊದಲ ಕನ್ನಡವನ್ನು ಬಿಂಬಿಸಿಕೊಂಡು—
ಸುಮಾರು ಕ್ರಿ. ಪೂ. ೬-ಞನೆಯ ಶತಮಾನದಲ್ಲಿ ತೆಲುಗಿಗೆ ತೀರ ಹತ್ತಿರ

---

* ಧಮ್ಮಪದದ

ಗಾಮೇ ವಾ ಯದಿ ವಾರಞ್ಞೇ
ನಿಮ್ನೇ ವಾ ಯದಿ ವಾ ಥಲೇ
ಯತ್ಥಾ ರಹಂತೋ ವಿಹರಂತಿ
ತಂ ಭೂಮಿಂ ರಾಮಣೀಯ್ಯಕಂ.

ಎಂಬ ಪದ್ಯವನ್ನು ಹೋಲಿಸಿ. ತಮಿಳಹಾಡು ಬೌದ್ಧ ಕವಿಯದಿರಬಹುದೆ ?

ಇದ್ದು ಒಂದು ನುಡಿಯಾದ ತಮಿಳು-ಕನ್ನಡದಿಂದ ಎರಡಾಗಿ ಒಡೆಯುವ ಮುಂಚೆ ಅದರ ಸ್ಥಿತಿಯನ್ನು ಕಲ್ಪನೆಮಾಡಿಕೊಳ್ಳಬಹುದು. ಆಗ ಕನ್ನಡದ ನುಡಿಗಳೂ, ವ್ಯಾಕರಣದ ನಿರಿಗಳೂ, ಭಾಷಾಶಾಸ್ತ್ರ ದೃಷ್ಟಿಯಿಂದ ಕನ್ನಡ ದಲ್ಲೇ ಪೂರ್ವರೂಪಗಳಾಗಿಯೂ, ತಮಿಳಿನವು ಅನಂತರದ ರೂಪಗಳಾ ಗಿಯೂ ಸ್ಪಷ್ಟವಾಗಿ ಕಾಣುತ್ತವೆ.

ಇದಕ್ಕೆ ಕೆಲವು ಉದಾಹರಣೆಗಳನ್ನು ದಿಕ್ಪ್ರದರ್ಶನಕ್ಕಾಗಿ ಕೊಡ ಬಹುದು—

ಕು ಕಿ ಲ್-ಕುಯಿಲ್; ವಾಕಿಲ್, ಬಾಗಿಲ್-ವಾಯಿಲ್, ವಾಸಿಲ್; ಪೆಸರ್-ಪೆಯರ್, ಪೇರ್; ಕೆಸಱು-ಚೆಯಱು, ಶೇಱು; ಕೇಳ್ದ-ಕೇಟ್ಟ; ಸೋನ್ತ, ಕಲ್ತ-ಸೋನ, ಕಱ್ಱ; ಬೆಳ್‌ದಿಂಗಳ್-ವೆಣ್‌ಡಿಂಗಳ್; ಉಣ್ಬ-ಉಣ್ಡು; ಪೆರ್ಮೆ-ಪೆರುಮ್ಮೈ; ನೆಲೆ (ಧಾತು:-ನಿಲ್)=ನಿಲ್ಯೈ; ಮನೆ= ಮನ್ಯೈ (ಧಾತು : ಮನ್); ಬಂದುವು (—ದವು)=ವಂದನ; ಗೆಯ್ದ (ಕೆ—) =ಚೆಯ್ದ, ಸೆಯ್ದ; ಕಿವಿ=ಚೆವಿ; ಅಡಿ=ಅಡಿಯ; ನೋಡು, ನಾಡು— ನೋಟ, ನಾಟ=ನೋಕ್ಕು, ನಾಟ್ಟಂ; ಪೆತ್ತ=(ಪೆಱ್ ತ)=ಪೆಱ್ಱ(ಉಚ್ಚಾರಣೆ-ಟ್ರ;) ಒರ್ವನ್, ಒಬ್ಬ=ಒರುವನ್; ಕರ್ಪು, ಕರ್ಬು, ಕಬ್ಬು=ಕರುಂಬು; ನಲ್ಮೆ, ನನ್ನಿ=ನಲನ್, ನನ್ಱಿ, ಮಾಟ್ಕೆ, ಕಾಣ್ಕೆ=ಮಾಟ್‌ಚಿ, ಕಾಟ್‌ಚಿ; ನಣ್ಪು— ನಟ್ಪು; ಕಣ್ಬೊಲನ್=ಕಟ್‌ಪೊಲನ್.

ತಮಿಳು ಎರಡನೆಯ ಅಕ್ಷರವನ್ನು ಮೃದುಮಾಡಿದ ಕಡೆ ಕನ್ನಡ ಈಗಲೂ ಮೊದಲಿನ ಧ್ವನಿಯನ್ನೇ ನಿಲ್ಲಿಸಿಕೊಂಡಿದೆ. ಉದಾ: ನಿಲುಕು, ಬಾಚು, ಒರಟು, ನಡತೆ, ನುಣುಪು.

ಈ ಕುರುಹುಗಳು, ಉಳಿಕೆಗಳು ಕನ್ನಡ ತಮಿಳಿನಿಂದ ಹುಟ್ಟಲ್ಲ. ಕನ್ನಡವೇ ಮೊದಲೆಂದು ತೋರಿಸುತ್ತವೆ.

ಕಡೆಯದಾಗಿ ಒಂದು ಮಾತು. ಡಾ॥ ಕಾಲ್ಡ್‌ವೆಲ್ ಅವರು ತಮ್ಮ ದ್ರಾವಿಡ ಭಾಷೆಗಳ ತುಲನ ವ್ಯಾಕರಣವನ್ನು ಬರೆದು ಇವು ಸ್ವತಂತ್ರ ಭಾಷಾ ವರ್ಗಕ್ಕೆ ಸೇರಿದುವೆಂದು ಸಿದ್ಧಾಂತಿಸಿದ ಈಚೆಗೆ ನಮ್ಮಲ್ಲಿ ಅನೇಕ ವಿದ್ವಾಂಸರು

ಕೆಲಸ ಮಾಡಿದ್ದರೂ ಮುಖ್ಯಾಂಶಗಳಲ್ಲಿ ಶಾಸ್ತ್ರ ಮುಂದುವರಿದಿಲ್ಲ. ಇದಕ್ಕೆ ತೆಲುಗರು, ಕನ್ನಡಿಗರು ತಮಿಳರು ತಮ್ಮ ತಮ್ಮ ಭಾಷೆಗಳಲ್ಲೇ ಅಲ್ಲದೆ ಮಿಕ್ಕ ಸಹೋದರಿ ಭಾಷೆಗಳಲ್ಲೂ ಪಾಂಡಿತ್ಯವನ್ನು ಪಡೆಯದೆ ಇರುವುದೇ ಕಾರಣವೆಂದು ಹೇಳಬಹುದು. ನಿಜಾಂಶಗಳು, ನಿಯಮಗಳು ಯಥೇಷ್ಟವಾಗಿ ಪರಾಮರ್ಶೆಯಾಗದಿದ್ದರೆ ಸತ್ಯ ಹೊರಪಡುವುದಿಲ್ಲ. ಈ ಮೂರು ಭಾಷೆಗಳೂ ಕೂಡುವ ಪೃಷ್ಠಭೂಮಿಯಲ್ಲಿ, ಇವುಗಳ ಉತ್ಪತ್ತಿ ಕಾಲದ ಆದಿಸ್ವರೂಪವನ್ನು, ಅಲ್ಲಿಂದ ಪ್ರಥಮ ದ್ರಾವಿಡದ ವಯಸ್ಸು ಮತ್ತು ಸ್ವರೂಪವನ್ನು ಪರಿಶೋಧನೆಯಿಂದ ತೆಗೆಯಬೇಕಾಗಿದೆ. ಈ ಶಾಸ್ತ್ರ ಬಲವಾದಷ್ಟೂ, ಸಂಸ್ಕೃತೀಕರಣದ ಮುಸುಕನ್ನು ತೆಗೆದು, ಕನ್ನಡದ ಎಳೆಗಳನ್ನು ಬಿಡುಗಡೆ ಮಾಡಿ, ಆ ದಾರಿಯಲ್ಲಿ ಅವರ ಸಹಜ ಸ್ವರೂಪವನ್ನು ಕಂಡು, ಮತ್ತೊಮ್ಮೆ, ಕನ್ನಡ ವ್ಯಾಕರಣವನ್ನು ಸೂತ್ರಿಸಬೇಕಾಗಿದೆ. ಕನ್ನಡ ಬಲು ಸರಳವಾದ ಭಾಷೆ. ಇದರ ಮೇಲೆ ಅನಗತ್ಯವಾದ ಶಾಸ್ತ್ರದ ಭಾರವನ್ನು ಹೊರಿಸಬೇಕಾಗಿಲ್ಲ. ಸಾರ್ವಜನಿಕ ವಿದ್ಯಾಭ್ಯಾಸದ ಕಾಲಕ್ಕೆ ಈ ಭಾಷೆಯ ಬಿಡಿಕೆಯೂ, ಬಿಡುಗಡೆಯೂ ಅತ್ಯಗತ್ಯ.

ಹಿರಣ್ಮಯೇನ ಪಾತ್ರೇಣ ।
ಸತ್ಯಸ್ಯಾಪಿಹಿತಂ ಮುಖಂ ।
ತತ್ ತ್ವಂ ಪೂಷನ್ ಅಪಾವೃಣು ।
ಸತ್ಯಧರ್ಮಾಯ ದೃಷ್ಟಯೇ ॥

ನಮ್ಮ ಕುಲ ಕನ್ನಡ ಕುಲ*

ಪ್ರಪಂಚದ ನಾಗರಿಕ ಜನಾಂಗಗಳಲ್ಲಿ ಒಬ್ಬರಾದ ನಾವು ಅಮರರಾಗಿ ಉಳಿಯಬೇಕು, ಉತ್ತಮ ರೀತಿಯಿಂದ ಬಾಳಬೇಕು. ನಮ್ಮ ನಾಡು ಉಜ್ವಲವಾಗಿ ಬೆಳಗಿ ಸೌಖ್ಯದ ನೆಲೆವೀಡಾಗಬೇಕು. ನಮ್ಮ ಸಲ್ನುಡಿ ಚಿನ್ನದ ಸೊಂಪು ತಳೆಯಬೇಕು. ಇವಕ್ಕೆಲ್ಲ ಸಂಘಬಲವಿರಬೇಕಾದ್ದು ಆವಶ್ಯಕ. ಸಂಘದಲ್ಲಿನ ವ್ಯಕ್ತಿಗಳು ಪರಿಶುದ್ಧ ಮನಸ್ವಿಗಳೂ ಸ್ವಾರ್ಥತ್ಯಾಗಿಗಳೂ ಸಹಕರಿಸಿ ದುಡಿ

* ಎಮ್ಮಿಗನೂರಿನಲ್ಲಿ ೧೯೪೦ರ ಏಪ್ರಿಲ್‌ನಲ್ಲಿ ನಡೆದ ಕರ್ಣಾಟಕ ಸಂಘದ ಪ್ರಾರಂಭೋತ್ಸವ ಭಾಷಣ.

ಯುವವರೂ ಆಗಿದ್ದಲ್ಲಿ ಸಂಘದ ಸ್ಥಿತಿ ಮೇಲ್ಮಟ್ಟಕ್ಕೇರುತ್ತವೆ.

ಯಾರೇ ಆಗಲಿ ನಾಡ—ನುಡಿದೇವತೆಯ ಕೃಪೆ ದೊರಕಿಸುವುದಕ್ಕೆ, ಬಲವನ್ನು ಗಳಿಸುವುದಕ್ಕೆ, ಅಕ್ಕಪಕ್ಕಗಳ ಮುಂದುವರಿದ ಪ್ರಾಂತಗಳವರಂತೆ ತಲೆಯೆತ್ತಿ ಮೆರೆಯುವುದಕ್ಕೆ, ತಮ್ಮ ಪ್ರಾಂತದ ಕೀರ್ತಿಯನ್ನು ದಿಗಂತದ ವರೆಗೆ ಹರಡಿಸುವುದಕ್ಕೆ, ಭಾಷೆಯ ಸೊಂಪು, ಸೌಂದರ್ಯ ಗಾಂಭೀರ್ಯ ಗಳನ್ನು ಉನ್ನತಮಟ್ಟಕ್ಕೇರಿಸುವುದಕ್ಕೆ—ಆ ಮೂಲಕ ಭಾರತಾಂಬೆಯ ಪಾದತಲದಲ್ಲಿ ಕಾಣಿಕೆಯನ್ನರ್ಪಿಸುವುದಕ್ಕೆ ಸಂಘಬಲವೇ ಮೊದಲ ಸಾಧನ ವೆಂದು ಹೇಳದಿರಲಾರರು.

ಕನ್ನಡಿಗರಾದ ನಾವು ಸುಸಂಘಟಿತರಾಗಬೇಕು. ನಮ್ಮ ನಾಡು-ನುಡಿಯ ಸೇವೆ ಸಲ್ಲಿಸಲು ಮುಂದುವರಿಯುವಾಗ ಹಿಂದೂ-ಮುಸಲ್ಮಾನ, ಬ್ರಾಹ್ಮಣ-ಬ್ರಾಹ್ಮಣೇತರ ಎಂಬ ಸಂಕುಚಿತಾಭಿಪ್ರಾಯಗಳನ್ನು ಬದಿಗೊತ್ತಿ ನಮ್ಮ ಕುಲ ಕನ್ನಡಕುಲ, ಗೋತ್ರ-ಸೂತ್ರಗಳೆಲ್ಲವೂ ಕನ್ನಡವೇ, ನಮಗೆ 'ಕನ್ನಡ ಗೆಲ್ಗೆ'-'ಕನ್ನಡ ಬಾಳ್ಗೆ' ಎಂಬುದೇ ನಿತ್ಯವೂ ಪಠಿಸುವ ಪಂಚಾಕ್ಷರ ಮಹಾಮಂತ್ರವೆಂದು ಭಾವಿಸಬೇಕು, ಪ್ರತಿಯೊಬ್ಬ ಕನ್ನಡಿಗನೂ ಕನ್ನಡ ಮ್ಮನ ಪೂಜಾರಿಯಾಗಬೇಕು. ಆಕೆಯ ಆಶೀರ್ವಾದ ಹೊಂದಿ ಭಾರತ ಮಾತೆಯ ಪೂಜೆಗೆ ಮುಂದಡಿಯಿಡಬೇಕು.

'ಒಂದು ಭಾಷೆಯಾಡುವವರೆಲ್ಲ ಒಂದು ಜಾತಿ, ಅವರು ಅಧಿಕ ಸಂಖ್ಯಾಕರಾಗಿ ಎಷ್ಟು ಭೂಭಾಗವನ್ನು ವ್ಯಾಪಿಸಿಕೊಂಡಿರುವರೋ ಅದು ಅವರ ಪ್ರಾಂತ' ಎಂಬ ಭಾವನೆ ನಮ್ಮ ಬಂಧುಗಳಾದ ಬಂಗಾಳ, ಆಂಧ್ರ ಮುಂತಾದ ಪ್ರಾಂತಗಳವರಲ್ಲಿ ಪ್ರಬಲವಾಗಿವೆ. ಆದರೆ ನಮ್ಮ ಕನ್ನಡಿಗರಲ್ಲಿ ಈ ಭಾವನೆ ಇನ್ನೂ ಚೆನ್ನಾಗಿ ಮೂಡಿಲ್ಲ.

ನಮ್ಮ ಭಾಷೆ, ಆ ಮೂಲಕ ನಮ್ಮ ಜನರ ಮನಸ್ಸು, ನಮ್ಮ ರಾಷ್ಟ್ರ, ಉನ್ನತೋನ್ನತ ದೆಸೆಯನ್ನು ಮುಟ್ಟುವುದಕ್ಕೆ ಕರ್ನಾಟಕ ಸಂಘದ ಆವಶ್ಯ ಕತೆಯುಂಟು. ನಮ್ಮ ನಾಡಿನ ಪ್ರಾಚೀನತೆ, ಮಹಿಮೆ—ಕನ್ನಡ ಸಾಹಿತ್ಯದ ಹಿರಿಮೆ—ಲಲಿತಕಲೆಗಳ ಮೇಲ್ಮೆ—ಕನ್ನಡ ಸಂಸ್ಕೃತಿಯ ಒಲ್ಮೆ—ಕನ್ನಡಿಗರ ಜಾಣ್ಮೆ ಇವುಗಳನ್ನು ತಿಳಿದುಕೊಳ್ಳುವುದಕ್ಕೂ ಕನ್ನಡಿಗರ ಒಳಭೇದಗಳನ್ನೂ ಜಾತಿಮತಗಳ ಸಂಕುಚಿತಾಭಿಪ್ರಾಯಗಳನ್ನೂ ಹರಿದು ಅವರ ಹೃದಯ

ಗಳನ್ನು ಒಂದುಗೂಡಿಸುವುದಕ್ಕೂ ಜನರಲ್ಲಿ ನಿರಕ್ಷರತೆಯನ್ನು ಹೋಗಲಾಡಿಸುವುದಕ್ಕೂ, ಧಾರ್ಮಿಕ-ಸಾಮಾಜಿಕ-ರಾಜಕೀಯ ವಿಷಯಗಳಲ್ಲಿ ನವಜ್ಞಾನ, ನವಚೈತನ್ಯಗಳನ್ನುಂಟುಮಾಡುವುದಕ್ಕೂ, ನಮ್ಮ ಈಗಿನ ಕರ್ನಾಟಕ ಸಂಘಗಳು ಬಹಳ ಸಹಕಾರಿಯಾಗುವುವು.

ಪ್ರಕೃತ ಕನ್ನಡನಾಡಿನಲ್ಲಿ ಹಲವಾರು ಕಡೆಗಳಲ್ಲಿ ಕನ್ನಡಿಗರು ಎಚ್ಚತ್ತಿದ್ದಾರೆ. ಅನೇಕ ಹಿರಿಯ ಸಾಹಿತಿಗಳು—ಭಾಷಾಭಿಮಾನಿಗಳು ಜನರ ಬೆಂಬಲಕ್ಕೆ ನಿಂತು ತಕ್ಕ ಸಹಾಯವನ್ನು ಹೃದಯಪೂರ್ವಕವಾಗಿ ನೀಡುತ್ತಿದ್ದಾರೆ. ಆದರೆ ಅಕ್ಕಪಕ್ಕ ರಾಷ್ಟ್ರಗಳವರ ಅತಿಕ್ರಮಣದ ಜೋರಿನಲ್ಲಿ ಕನ್ನಡಿಗರು ಗಟ್ಟಿಯಾಗಿ ಶ್ವಾಸಬಿಡಲೂ ಸಾಧ್ಯವಿಲ್ಲವಾಗಿದೆ. ಗಡಿನಾಡಿನಲ್ಲಿ ವಾಸಿಸುವ ಕನ್ನಡಿಗರ ಸ್ಥಿತಿ ಬಹಳ ಶೋಚನೀಯವಾಗಿದೆ. ಅವರಿಗೆ ತಮ್ಮ ವಿಷಯದಲ್ಲಿ ಇರುವ ಅಜ್ಞಾನ, ಮಾತೃಭಾಷೆಯ ಮೇಲಣ ತಾತ್ಸಾರ ಇವೇ ಈ ಹೀನಸ್ಥಿತಿಗೆ ಕಾರಣ. ಈ ಜಿಲ್ಲೆಯಲ್ಲಿ ಬಹು ಸಂಖ್ಯಾತರ ಮನೆಮಾತು ಕನ್ನಡ. ಇದು ನಿಸ್ಸಂಶಯ. ಆಲೂರು, ಆದವಾನಿ, ರಾಯದುರ್ಗ ತಾಲ್ಲೋಕಿನಲ್ಲಿ ಕನ್ನಡಿಗರು ಅಧಿಕ ಸಂಖ್ಯಾತರಿದ್ದರೂ ಮನೆಮಾತಿನಲ್ಲಿ ಶಿಕ್ಷಣ ಸಿಕ್ಕುವುದು ದುರ್ಲಭ. ಈ ತಪ್ಪಿಗೆ ಅನ್ಯರಾರೂ ಕಾರಣರಲ್ಲ. ನಮ್ಮ ನಿರಭಿಮಾನಿ ಕನ್ನಡಿಗರೇ ಕಾರಣವೆಂದೂ ಧಾರಾಳವಾಗಿ ಹೇಳಬಹುದು. ಹಾಲು ಚೆಲ್ಲಿತು. ನೆಲದಲ್ಲಿ ಬತ್ತಿಹೋಯ್ತು. ಇನ್ನಾದರೂ ಎಚ್ಚತ್ತುಕೊಳ್ಳುವ. ಕನ್ನಡದೇವಿಯ ಸೇವೆಗೆ ಸಿದ್ಧರಾಗುವ. ನಾವು ಯಾವ ದೇಶದಲ್ಲಿರಲಿ—ಎಂತಹ ಕಠಿಣ ಪ್ರಸಂಗಕ್ಕೆ ಗುರಿಯಾಗಿರಲಿ—ಯಾವ ಸ್ಥಿತಿಯಲ್ಲಿರಲಿ, ನಮ್ಮ ನಾಡು-ನುಡಿ ಸಂಸ್ಕೃತಿ ಸ್ವಾತಂತ್ರ್ಯಗಳನ್ನು ಉಳಿಸಿಕೊಳ್ಳಲು ಹೆಣಗಾಡುತ್ತ ಅಮರರಾಗಿ ಬಾಳುವ.

ಭಗವಾನ್ ಬುದ್ಧ*

ಭರತವರ್ಷದಲ್ಲಿ ಬೌದ್ಧಧರ್ಮ ಹುಟ್ಟಿದಕಾಲ ನಿಜವಾಗಿಯೂ ಹೆಮ್ಮೆಯ ಕಾಲ. ಈ ಧರ್ಮ ಇಲ್ಲಿ ಕೆಲವು ಕಾಲ ಸಾಮ್ರಾಜ್ಯಪದವಿಯನ್ನೇ

*ಮೈಸೂರು ಪ್ರಾಂತ ಸಮಿತಿಯ ಆಶ್ರಯದಲ್ಲಿ ತಾ. ೨೯-೬-೧೯೪೧ರಲ್ಲಿ ಪರಿಷನ್ಮಂದಿರದಲ್ಲಿ, ಧರ್ಮಪ್ರವರ್ತಕರ ಉತ್ಸವ ನಡೆದ ಸಂದರ್ಭದಲ್ಲಿ ಮಾಡಿದ ಭಾಷಣ.

ಅನುಭವಿಸಿ ಕೊನೆಗೆ ವೈದಿಕ ಧರ್ಮದವರ ಧಾಳಿಗೀಡಾಗಿ ಕ್ರಮೇಣ ಭಾರತ ವನ್ನು ಬಿಟ್ಟು ಹೊರನಾಡುಗಳಲ್ಲಿ ನೆಲಸಿ, ಈಗಲೂ ಜಗತ್ತಿನ ದೊಡ್ಡ ಧರ್ಮ ಗಳ ಜತೆಗೆ ಅಗ್ರಪಂಕ್ತಿಯಲ್ಲಿ ಶೋಭಿಸುತ್ತಿದೆ.

ಹೀಗೆ ಬೌದ್ಧಧರ್ಮಕ್ಕೆ ಭಾರತದ ತವರು ತಪ್ಪಿಹೋದುದು ಶೋಚ ನೀಯವಾದರೂ, ಹಿಂದೆ ಅದರ ವಿಷಯವಾಗಿ ಇದ್ದ ಅಸಡ್ಡೆ, ಅನಾದರಗಳು ತೊಲಗಿ, ಅದರ ಸಾರವನ್ನು ತಿಳಿಯಬೇಕೆಂಬ ಆಸಕ್ತಿ, ಶ್ರದ್ಧೆ, ಉತ್ಸಾಹ ಗಳು ಹೆಚ್ಚುತ್ತಿವೆ. ಕನ್ನಡದಲ್ಲಿ ಈಗಾಗಲೇ ಬೌದ್ಧಸಾಹಿತ್ಯ ತಕ್ಕಮಟ್ಟಿಗೆ ಬೆಳೆದಿದೆ. ಇನ್ನೂ ಬೆಳೆಯುವ ಲಕ್ಷಣಗಳು ಕಾಣುತ್ತಿರುವುದು ಸಂತೋಷ ವನ್ನುಂಟುಮಾಡುವ ಸಂಗತಿಯಾಗಿದೆ.

ಉಪನಿಷದ್ವಾಕ್ಯಗಳಿಗೂ ಬೌದ್ಧಧರ್ಮಕ್ಕೂ ನಿಕಟಸಂಬಂಧವಿದೆ. ಉಪನಿಷತ್ತುಗಳು ಸಾರುವ ತಿಳಿವು ಬೌದ್ಧಧರ್ಮದಲ್ಲಿ ಇಲ್ಲದೆ ಇಲ್ಲ. ಧರ್ಮ ವನ್ನು ನಂಬಬೇಕು. ತಿಳಿಯಬೇಕು, ನಡೆಯಬೇಕು; ಧರ್ಮವನ್ನು ಹೀಗೆ ನಂಬಿ, ತಿಳಿದು, ನಡೆದರೆ ಬದುಕುವೆವು. ಹಾಗಿಲ್ಲದೆ, ನಂಬಿಯೂ ತಿಳಿಯದೆ, ತಿಳಿದೂ ನಡೆಯದೆ, ನಡೆದರೂ ಡಂಭಕ್ಕಾಗಿ ನಡೆದರೆ ಕೆಡುವೆವು. ಆದ್ದರಿಂದ ಧರ್ಮವನ್ನು ಶ್ರೇಯಸ್ಸಿಗಾಗಿ, ಜೀವಿತವನ್ನು ಉದ್ಧಾರಮಾಡಿಕೊಳ್ಳಲು, ತನ್ನ ಜೀವನವನ್ನೇ ಅಲ್ಲದೆ ನೆರೆಹೊರೆಯವರ, ಒಟ್ಟು ಸಮಾಜದ ಜೀವನ ವನ್ನೇ ಉತ್ತಮಪಡಿಸಲು ಬಳಸಿಕೊಳ್ಳಬೇಕು.

ಉಪನಿಷತ್ತುಗಳ ಕಾಲದಲ್ಲೂ ಬುದ್ಧನು ಉಪದೇಶಿಸಿದ ಕಾಲದಲ್ಲೂ ಶ್ರದ್ಧೆಗೂ ವಿಚಾರಕ್ಕೂ ಘರ್ಷಣೆಯೊದಗಿದಂತೆ ಕಾಣುತ್ತದೆ. ಶ್ರದ್ಧೆಯನ್ನು ನಂಬಿದವರು ಅದರ ಬುಡಕ್ಕೆ ವಿಚಾರ ಕೊಡಲಿಯಾದರೆ ಅದನ್ನು ದೂರ ಮಾಡುತ್ತಿದ್ದರು. ಹಾಗೆಯೇ ವಿಚಾರಕ್ಕೆ ಶ್ರದ್ಧೆ ಅಡ್ಡಿಯಾದರೆ ಅದನ್ನು ಬಿಟ್ಟು ವಿಚಾರವನ್ನೇ ಪಟ್ಟಾಗಿ ಹಿಡಿಯಬೇಕೆಂದು ವಿಚಾರವಾದಿಗಳು ಹೇಳು ತ್ತಿದ್ದರು. ಶ್ರದ್ಧೆಯಾಗಲಿ ವಿಚಾರವಾಗಲಿ ಅತಿರೇಕಕ್ಕಿಟ್ಟುಕೊಳ್ಳುವ ಸಂದರ್ಭ ಗಳು ಬರದಿರುತ್ತಿರಲಿಲ್ಲ. ಆದರೆ ಬುದ್ಧನು ಮಾತ್ರ ಶ್ರದ್ಧೆಗೂ ಹೆಚ್ಚು ಬೆಲೆ ಕೊಡದೆ, ವಿಚಾರವನ್ನೂ ಅತಿರೇಕಕ್ಕೊಯ್ಯದೆ ಮಧ್ಯಮಾರ್ಗವನ್ನು ಹಿಡಿದು ಉಪದೇಶಮಾಡಿ ಧರ್ಮವನ್ನು ಎತ್ತಿಹಿಡಿದನು. "ಕರ್ಮ" "ಜಾತಿ" ಗಳನು ಮೀರಿದನು.

"ಗುರು ಏನಿದ್ದರೂ ಬೆಳಕು ತೋರಿಸುವವನು; ನಡೆಯುವವರು ನೀವು. ನಿಮ್ಮ ಆತ್ಮಕ್ಕೆ ಶರಣರಾಗಿ, ಆತ್ಮದೀಪವನ್ನು ಅನುಸರಿಸಿ, ಪ್ರಮಾದಕ್ಕೆಡೆಗೊಡದೆ ಧರ್ಮದಿಂದ ಬಾಳಿ" ಎಂಬುದು ಬುದ್ಧನ ಉಪದೇಶದ ಸಾರ. ಒಣ ಚರ್ಚೆಗಳಿಗೆ ಆತನು ಆಸ್ಪದ ಕೊಡುತ್ತಿರಲಿಲ್ಲ. ವಾದದಲ್ಲಿ ಕಾವು ಏರಿ ಪರಸ್ಪರ ದ್ವೇಷಾಸೂಯೆಗಳನ್ನು ಕೆರಳಿಸುವ ಚರ್ಚೆಯನ್ನು ತಡೆಯುತ್ತಿದ್ದನು. ಆದ್ದರಿಂದಲೇ ಬುದ್ಧನು "ದೇವರು ಯಾರು? ಪುನರ್ಜನ್ಮವುಂಟೆ?" ಮುಂತಾದ ಪ್ರಶ್ನೆಗಳಿಗೆ ಉತ್ತರಕೊಡದೆ ಮೌನತಾಳಿ, "ಯಾವುದು ಸತ್ಯ, ಯಾವುದು ಧರ್ಮ ಎಂಬುದನ್ನು ತಿಳಿದು, ಕರ್ಮ ಪರಿಣಾಮವನ್ನು ಸರಿಯಾಗಿ ಅರಿತು, ನಿಮ್ಮ ನಿತ್ಯಕರ್ಮದಲ್ಲಿ ಅಹಿಂಸೆಗೆ, ಅನುಕಂಪೆಗೆ ಪ್ರಾಮುಖ್ಯ ಕೊಟ್ಟು ಬಾಳಿ" ಎಂದು ಹೇಳುತ್ತಿದ್ದನು.

ವೈದಿಕ ಪಂಥದವರು ಬೌದ್ಧ ಧರ್ಮಕ್ಕೆ ನಾಸ್ತಿಕ ಮತವೆಂದು ಹೆಸರಿಟ್ಟರು. ಇಡಲಿ. ದಯೆ, ಧರ್ಮ, ಸತ್ಯ ಉಂಟು ಎಂದು ನಂಬಿ ನಡೆಯುವವರೂ ಆಸ್ತಿಕರೇ; ನಡೆಯದವರು ನಾಸ್ತಿಕರೇ, ಏನೇ ನಂಬಿದರೂ. ಭಾರತದಲ್ಲಿ ಸರ್ವರ ಉದ್ಧಾರಕ್ಕಾಗಿ ಧರ್ಮಕ್ಷೇತ್ರದಲ್ಲಿ ನಡೆದ ದೊಡ್ಡ ಕ್ರಾಂತಿಗಳಲ್ಲಿ ಬೌದ್ಧ ಧರ್ಮವೂ ಒಂದು: ಈಚಿನ ಕ್ರಾಂತಿಗಳ ಮೂಲ "ಅಹಿಂಸಾ ಪರಮೋ ಧರ್ಮಃ" ಎಂಬ ಸೂತ್ರದ ಮೇಲೆ ಕಟ್ಟಿದ ಧರ್ಮಗಳಿಗೆ ಚ್ಯುತಿಯಿಲ್ಲ.

ರುದ್ರನಾಟಕ*

ರುದ್ರನಾಟಕವೆನ್ನುವುದು ಗ್ರೀಕ್ ಭಾಷೆಯಲ್ಲಿ ಆರಂಭವಾಗಿ, ಇಂಗ್ಲಿಷ್ ಭಾಷೆಯಲ್ಲಿಯೂ ಪ್ರಸಿದ್ಧವಾಗಿರುವ ಟ್ರಾಜೆಡಿ ಎಂಬ ನಾಟಕರೂಪ. ಸಾಮಾನ್ಯವಾಗಿ ಇದು ನಾಯಕನ ಸಾವಿನಲ್ಲಿ ಕೊನೆಗಾಣುವುದರಿಂದ ಇದಕ್ಕೆ ದುರಂತ ನಾಟಕವೆಂದೂ, ವಿಷಾದಾಂತ ನಾಟಕವೆಂದೂ ಹೇಳುವುದುಂಟು. ಸಂಸ್ಕೃತದಲ್ಲಿ, ಕನ್ನಡದಲ್ಲಿ ಇದು ಅಪೂರ್ವ; ರಂಗಸ್ಥಳದಲ್ಲಿ ಸಾವನ್ನು ತೋರಬಾರದೆಂದೂ, ಅಮಂಗಳದಲ್ಲಿ ನಾಟಕ ಮುಗಿಯಬಾರದೆಂದೂ ನಮ್ಮವರ ಅಭಿಪ್ರಾಯ. ಆದರೂ ಈ ಬಗೆಯ ನಾಟಕ

* ಮೈಸೂರು ಪ್ರಾಂತ ಸಮಿತಿಯ ಆಶ್ರಯದಲ್ಲಿ ತಾ॥ ೧-೨-೧೯೪೧ನೆಯ ಶನಿವಾರ ಸಂಜೆ ಮಾಡಿದ ಪ್ರಾರಂಭ ಭಾಷಣದ ಸಾರಾಂಶ.

ಹೊಸದಾಗಿ ನಮ್ಮ ಸಾಹಿತ್ಯಕ್ಕೆ ಭಾಷಾಂತರವಾಗಿಯೂ, ಸ್ವಕಲ್ಪಿತ ವಾಗಿಯೂ ಈಗ ಸೇರುತ್ತಿದೆ. ಇದರ ಚರಿತ್ರೆಯನ್ನೂ ಲಕ್ಷಣವನ್ನೂ ಹೆಗ್ಗುರುತಾಗಿ ತಿಳಿಯಬಹುದಾಗಿದೆ.

ಟ್ರಾಜೆಡಿ ಎಂದರೆ ಗ್ರೀಕಿನಲ್ಲಿ ಆಡಿನ ಹಾಡು ಎಂದು ಅರ್ಥ ; ಅಜ ಗೀತೆ ಎಂದು ಬೇಕಾದರೆ ಹೇಳಬಹುದು. ಗ್ರೀಕರ ವನಸ್ಪತಿ ವರ್ಗದ, ಮುಖ್ಯವಾಗಿ ದ್ರಾಕ್ಷಾರಸದ ಅಧಿದೇವತೆಯಾದ ಡೈಯೊನಿಸಸ್ (=ದೇವ ಪುತ್ರ) ಎಂಬಾತನ ಸ್ತೋತ್ರರೂಪವಾದ ಗೀತೆಯನ್ನು (=ಡಿಥಿರ್ಯಾಂಬ್) ಆಡಿನ ವೇಷವನ್ನು ಧರಿಸಿದ ಅವನ ಭಕ್ತರು ಹಾಡಿಕೊಂಡು ಕುಣಿಯು ತ್ತಿದ್ದರು. ಆತನ ಹುಟ್ಟು, ಬೆಳವಣಿಗೆ, ವೀರಕಾರ್ಯಗಳು, ವೈರಿಗಳ ಮರಣ ಮುಂತಾದುವನ್ನು ಈ ಸ್ತುತಿ ವಿವರಿಸುತ್ತಿತ್ತು. ಸಾಮಾನ್ಯವಾಗಿ ಪೂರ್ವಿಕರಲ್ಲಿ ದೇವಾಂಶ ಪುರುಷರ ಹುಟ್ಟು, ಮದುವೆ, ಸಾವು—ಇವು ಸಂಸ್ಕಾರ ಕ್ರಿಯೆಗಳಾಗಿ ಪ್ರದರ್ಶನವಾಗುತ್ತಿದ್ದುವು: ಸಮಾಧಿಯ ಬಳಿ ಪಿತೃಗಳ ಪೂಜೆ ನಾಟ್ಯರೂಪವಾಗಿ ನಡೆಯುತ್ತಿತ್ತು. ಸೂರ್ಯನು ಹುಟ್ಟಿ, ಬೆಳೆದು, ಮರೆಯಾಗಿ ಮತ್ತೆ ಕಾಣುವುದು ; ಗಿಡಗಳು ವಸಂತಕಾಲದಲ್ಲಿ ಚಿಗುರಿ, ಚಳಿಗಾಲದಲ್ಲಿ ಎಲೆಯುದುರಿ ನಿರ್ಜೀವವಾಗಿ, ಮತ್ತೆ ಚಿಗುರಿ ಜೀವಕಳೆ ಕೂಡುವುದು :—ಈ ಪ್ರಕೃತಿ ವ್ಯಾಪಾರವನ್ನು ನೋಡಿ, ಮನು ಷ್ಯನೂ ಹುಟ್ಟಿ, ಬೆಳೆದು ಪ್ರಾಯ ಅರಳಿ, ಮುಪ್ಪಾಗಿ, ಸತ್ತು ಪುನರ್ಜನ್ಮ ತಾಳುವನೆಂದು ನಂಬಿ, ಈ ರಹಸ್ಯವನ್ನು ಟ್ರಾಜೆಡಿಗಳಲ್ಲಿ ತೋರುವುದು ವಾಡಿಕೆಯಾಗಿತ್ತು. ಡೈಯೊನಿಸಸ್ ಈ ಜನನ, ಮೃತಿ, ಅಮೃತತ್ವದ ಅಭಿಮಾನದೇವತೆಯೆಂಬ ನಂಬಿಕೆಯಿಂದ ಆತನ ಭಕ್ತರು ಆತನ ಸ್ತೋತ್ರ ಗಳನ್ನು ಹಾಡಿ, ತಾವೂ ಅಮೃತತ್ವವನ್ನು ಪಡೆಯುತ್ತಿದ್ದೇವೆಂದು ನಂಬಿದ್ದರು. ಡೈಯ್ಯೊನಿಸಸ್ಸಿಗೆ ಹಲವು ರೀತಿಯಲ್ಲಿ ಸಾದೃಶ್ಯವುಳ್ಳ, ರುದ್ರಭೂಮಿಗೆ ಅಧಿ ನಾಯಕನಾದ, ಆದರೂ ಮಂಗಳದಾಯಕನಾಗಿ ಭವರೋಗಕ್ಕೆ ಭಿಷಜನಾದ, ನಾಟ್ಯನಾಟಕ ಪ್ರದರ್ಶಕನಾದ ರುದ್ರನ ಹೆಸರಿನಿಂದ ಈ ಬಗೆಯ ನಾಟಕ ವನ್ನು ಕರೆಯಬಹುದೆಂದು ಭಾವಿಸಿ ರುದ್ರನಾಟಕವೆಂದು ನಾನು ಗದಾ ಯುದ್ಧ ನಾಟಕ, ಅಶ್ವತ್ಥಾಮನ್ ಮುಂತಾದ ನಾಟಕಗಳಿಗೆ ಈ ಹೆಸರ ನ್ನಿಟ್ಟೆನು. ಸಂತೋಷದಲ್ಲಿ, 'ವಿಜಯ' 'ಪರಿಣಯ'ಗಳಲ್ಲಿ ಮುಗಿಯು

ವುವು ಹರ್ಷನಾಟಕಗಳು; ಹಾಸ್ಯ ತುಂಬಿರುವುವು ಪ್ರಹಸನಗಳು. ಇವು ಸಾವು ನೋವುಗಳನ್ನು ಬಿಟ್ಟು ಬಾಳಿನ ಮತ್ತೊಂದು ಭಾಗವನ್ನು ತೋರಿಸುವುವು.

ಕ್ರಿ. ಪೂ. ೬-೫ ನೆಯ ಶತಮಾನಗಳಲ್ಲಿ ಅಥೆನ್ಸಿನಲ್ಲಿ ಈ ರುದ್ರ ನಾಟಕಗಳು ಪ್ರಬಲಿಸಿದುವು. ವಂಸತಕಾಲದಲ್ಲಿ, ಬೆಟ್ಟದ ತಪ್ಪಲಲ್ಲಿ ಕೊರೆದ ಮೆಟ್ಟಲುಗಳ ಮೇಲೆ ಸುಮಾರು ೨೦-೩೦ ಸಾವಿರ ಜನ ಸೇರಿ, ನಾಲ್ಕು ದಿನ, ದೇವತಾಸನ್ನಿಧಿಯಲ್ಲಿ ಮತಕಾರ್ಯವಾಗಿ ಈ ನಾಟಕಗಳನ್ನು ಆಡಿಸಿ ನೋಡುತ್ತಿದ್ದರು. ಸ್ತುತಿಗೀತೆ ಸಂಭಾಷಣೆಯಿಂದ ಕೂಡಿ ನಾಟಕ ರೂಪಕ್ಕೆ ತಿರುಗಿತು. ಮೊದಮೊದಲು ಅರ್ಧಕ್ಕೂ ಹೆಚ್ಚಾಗಿ ಮೇಳದ ಗೀತೆಗಳು, ನಾಟ್ಯ; ಸ್ವಲ್ಪ ಸಂಭಾಷಣೆ: ಬರಬರುತ, ಮೇಳ ಕಡಿಮೆಯಾಗುತ್ತ, ನಿಜವಾದ ಸಂಭಾಷಣಾರೂಪವಾದ ನಾಟಕ ಹೆಚ್ಚಾಗುತ್ತ ಬಂತು. ಮೊದಲು ಡೈಯೊನಿಸಸ್ಸಿನ ಕಥೆಗಳು—ಆ ಬಳಿಕ ಪ್ರಸಿದ್ಧ ವೀರರಾಗಿದ್ದು, ದುಃಖಕ್ಕೀಡಾಗಿ ದೈವಹತರಾಗಿ ಅಮರಗಣಕ್ಕೆ ಸೇರಿದ ಇತರ ಮಹಾಪುರುಷರ ಕಥೆಗಳು ನಾಟಕದ ವಸ್ತುಗಳಾದುವು. ಈ ನಾಟಕದಲ್ಲಿ ಅಂಕಗಳ ವಿಭಾಗವಿಲ್ಲ: ತೆರೆಯಿಲ್ಲ; ಸಂಭಾಷಣೆ, ನಾಟ್ಯ (ಮೇಳ); ಸುಮಾರು ೧,೫೦೦ ಸಾಲು ಛಂದೋಬದ್ಧವಾದ ಕಾವ್ಯ: ಮೊಗವಾಡವನ್ನು ಹಾಕಿದ ವೇಷಧಾರಿಗಳು: ಆಕಾಶದ ಕೆಳಗೆ ಬಯಲಾಟ: ಕಾವ್ಯಾನಂದ, ಪುರಾಣವೀರರ ತಾದಾತ್ಮ್ಯ ಭಾವ, ಅವರು ದೇವತೆಗಳಾದ ಅನುಭವಸಿದ್ಧಿ—ಇವು ರುದ್ರನಾಟಕದ ಲಕ್ಷಣಗಳು. ಮಹಾಕವಿಗಳು ಬೆಳಸಿ, ಅರಿಸ್ಟಾಟಲ್ ಎಂಬ ತತ್ತ್ವಜ್ಞನು ವಿವರಿಸಿರುವಂತೆ: ಟ್ರಾಜೆಡಿಯೆಂದರೆ ಒಬ್ಬ ಮಹಾಪುರುಷನ ಕಥೆಯನ್ನು ಕಾರ್ಯರೂಪವಲ್ಲಿ (ಅಂದರೆ ಪಾತ್ರಧಾರಣ, ನಾಟ್ಯ, ಅಭಿನಯ, ಸಂಗೀತ, ನೃತ್ಯಗಳು ಈ ರೀತಿಯಲ್ಲಿ, ಕಣ್ಣುಮುಂದೆ ನಡೆದಂತೆ; ಆಖ್ಯಾನ ರೂಪದಲ್ಲಲ್ಲ) "ಅನುಕರಣ" ಮಾಡತಕ್ಕದ್ದು; ಗಂಭೀರಭಾವವುಳ್ಳದ್ದು, ವೀರ್ಯವುಳ್ಳದ್ದು; ಭಯ ಮತ್ತು ಕರುಣರಸಗಳನ್ನು ಹೊಮ್ಮಿಸತಕ್ಕದ್ದು; ಅವನ್ನು ಉದ್ರೇಕಿಸಿ ಶಮನಗೊಳಿಸತಕ್ಕದ್ದು. ಅಂದರೆ ಒಟ್ಟಿನಮೇಲೆ ಒಬ್ಬ ಪುರಾಣಪುರುಷನ ದುಃಖಮಯವಾದ ಚರಿತ್ರೆ; ಆತನ ಮದದಿಂದಲೋ, ಕರ್ಮದಿಂದಲೋ, ಕ್ರೂರ ವಿಧಿವಿಲಾಸದಿಂದಲೋ,

ತತ್ತ್ವಗಳ ಅಥವಾ ನಾಯಕ, ಪ್ರತಿನಾಯಕರ ಹೋರಾಟದಿಂದಲೋ, ಒಬ್ಬ ವ್ಯಕ್ತಿಯ ಒಳ ಹೋರಾಟದಿಂದಲೋ, ಭಾವೋದ್ರೇಕದಿಂದಲೋ, ಯಾವುದೋ ಒಂದು ಬಗೆಯ ಅವಿವೇಕವೋ, ಅಚಾತುರ್ಯವೋ, ಅನ್ಯಾಯವೋ, ಉಂಟಾಗಿ, ಸಾವಿನಲ್ಲಿ ಪರ್ಯವಸಾನವಾಗಬೇಕು. ಆದರೂ ಮಾನವನ ಗುಣ ಗಾಂಭೀರ್ಯಗಳೂ, ಆತನ ಉದಾತ್ತ ಧ್ಯೇಯಗಳೂ, ಸರಳತೆ ನಿಷ್ಕಾಪಟ್ಯಗಳೂ, ಧೈರ್ಯಸ್ಥೈರ್ಯಗಳೂ, ಛಲಾಭಿಮಾನಗಳೂ ಪ್ರೇಕ್ಷಕರಲ್ಲಿ ಸಹಾನುಭೂತಿಯನ್ನು, ಮೆಚ್ಚುಗೆಯನ್ನು ಉಂಟುಮಾಡಿ ಸತ್ತರೂ ಒಳ್ಳೆಯ ಸಾವು: ಇದೂ ಸಂಸಾರದ ಸತ್ಯ; ದಿಟವಾದ ಜೀವನದ ಚಿತ್ರ; ಈ ಮರಣದ ಧ್ಯಾನಮಾಡಿ ಸ್ಥೈರ್ಯಗೊಳ್ಳೋಣ; ಸ್ಥಿತಪ್ರಜ್ಞರಾಗೋಣ; ಹೀಗೆ ಸತ್ತು ಅಮರನಾದ ಈ ನಾಯಕ; ಇಂತಹ ಗುಣ 'ಮೃತ್ಯುಮುಖಾತ್ ಪ್ರಮುಚ್ಯತೇ'—ಎಂಬ ಗಾಢಾನುಭವದ ಶಾಂತಿ ರುದ್ರ ನಾಟಕದ ಫಲ. ಕಾರ್ಯವೀರರ, ಪಿತೃಗಳ, ದೇವತೆಗಳ ಆರಾಧನೆ: ಪ್ರಯೋಜನ—ದುಃಖಾಂತ, ಮನಶ್ಶಾಂತಿ, ಮೋಕ್ಷ.*

ಭರತಭೂಮಿಯ ಸಂಸ್ಕೃತಿಯಲ್ಲಿ ಈ ಕಸಿಕರದ ಉದಾತ್ತ ಜೀವ ಚಿತ್ರ, ಈ ಜೀವನದ ಗಾಢ ಸಮಸ್ಯೆಗಳ ಆರಯ್ಕೆ, ಈ ಶ್ರೇಷ್ಠ ಸಾಹಿತ್ಯ ಸೃಷ್ಟಿ ಏಕೆ ಇಲ್ಲ? ಲಾಕ್ಷಣಿಕರು ಏಕೆ ಇದನ್ನು ವರ್ಜಿಸಿದ್ದಾರೆ? ನಮ್ಮ ಕವಿಗಳು ಇದನ್ನು ಬಿಟ್ಟೇಬಿಟ್ಟರೆ? ಈಗ ನಾವು ಇದನ್ನು ಆಡಿದರೆ, ಬರೆದರೆ, ಭಾಷಾಂತರಿಸಿದರೆ ತಪ್ಪೆ? ಒಂದು ಹೊಸ ಕಾಂತಿ, ಹೊಸ ಅನುಭವ, ಹೊಸ ಆನಂದ ಈ ರುದ್ರ ನಾಟಕದಿಂದ ಉದಯಿಸುವುದಿಲ್ಲವೆ? ಎಂಬ ಪ್ರಶ್ನೆಗಳು ಏಳುತ್ತವೆ. ಸೂಕ್ಷ್ಮವಾಗಿ ಪರಿಶೀಲಿಸಿದಲ್ಲಿ ನಮ್ಮಲ್ಲಿ ದುಃಖಾನುಭವವಾಗಲಿ, ಮೃತ್ಯುವಿನಲ್ಲಿ ಅಮೃತತ್ವವೂ ದುಃಖಿಮಾನವನಲ್ಲಿ ಆನಂದಮಯ ದೇವತಾಂಶವೂ ಇರುವುವೆಂಬ ಜ್ಞಾನವಾಗಲಿ ಇಲ್ಲವೆಂದಲ್ಲ.

---

*ಬಳಿಕ ಭಾಷಣಕಾರರು ಈಸ್ಕಿಲಸ್ಸಿನ ಪಾರಸಿಕರು (ಚಕ್ರಾಧಿಪತ್ಯದ ಮದ), ಯೂರಿಪಿಡಿಸ್ಸಿನ ಬ್ಯಾಖೈ (ಡೈಯೊನಿಸಸ್ಸಿನ ಭಕ್ತೆಯರ ಭಕ್ತ್ಯಾವೇಶದ ಕ್ರೌರ್ಯ), ಷೇಕ್ಸ್‌ಪಿಯರಿನ ಕಿಂಗ್ ಲಿಯರ್ (ಪ್ರೇಮ ವಿಶ್ವಾಸಗಳು ಹೋದ ಸಮಾಜದ ಘೋರ ವಿನಾಶ), ಇಬ್ಸನ್ನಿನ ಸೂತ್ರದ ಗೊಂಬೆ (A Doll's House—ಸ್ವಾತಂತ್ರ್ಯವಿಲ್ಲದ ಹೆಂಡತಿಯ ಬಾಳು)—ಇವುಗಳಿಂದ ಮೇಲಿನ ಲಕ್ಷಣಗಳನ್ನು ಸಮನ್ವಯ ಮಾಡಿ ತೋರಿಸಿದರು.

ಬೇಕಾದ ಹಾಗೆ, ಹೊರ ಪ್ರಪಂಚಕ್ಕೆ ಸಾಲ ಕೊಡುವಷ್ಟು ಇವೆ. ಕವಿಗಳೂ ಕಾವ್ಯದಲ್ಲಿ ಈ ದುಃಖ ರಹಸ್ಯವನ್ನು ಪ್ರತಿಬಿಂಬಿಸಿಯೆ ಇದ್ದಾರೆ. ಸೀತೆಯ ಜನ್ಮ ಸುಖವಾಗಿತ್ತೆ ? ಪತಿಯಿಂದ ಅಗ್ನಿಪರೀಕ್ಷೆಗೊಳಗಾದಾಗ, ಭೂಮಿಯನ್ನು ಬಾಯಿ ತೆರೆ ಎಂದು ಪ್ರಾರ್ಥಿಸಿದಾಗ, ಆಕೆಯ ಮನೋಭಾವ, ಸನ್ನಿವೇಶ ಮಂಗಳವೇ, ಅಮಂಗಳವೇ, ರುದ್ರನಾಟಕವೇ ಭದ್ರನಾಟಕವೇ ? ಮಹಾಭಾರತ ದುಃಖಪೂರ್ಣವಲ್ಲವೆ ? "ಅಂತೂ ಇಂತೂ ಕುಂತಿಯ ಮಕ್ಕಳಿಗೆ ರಾಜ್ಯವಿಲ್ಲ"—ಇದು ದುರಂತವಲ್ಲವೇ ? ದುರ್ಯೋಧನ ಕರ್ಣರು ಬರಿಯ ನೀಚರೇ, ಪಾಪಿಗಳೇ—ಇವರ ಛಲ, ಇವರ ಅಭಿಮಾನ, ಇವರ ಸಾವು ರುದ್ರನಾಟಕವಲ್ಲವೆ ? ಪಂಪ ರನ್ನರನ್ನು ಕೇಳಿ. ರಾವಣನೂ, ಕರ್ಮವಶದಿಂದ ಕೆಟ್ಟ—ಆದರೂ ಶಲಾಕಾಪುರುಷ, ಮುಂದೆ ಮೋಕ್ಷಗಾಮಿ ಎನ್ನುವ ನಾಗಚಂದ್ರನನ್ನು ಕೇಳಿ. ನಾಯಕನನ್ನು ಬೆನ್ನುಹತ್ತಿ "ಜಯ"ವನ್ನು ಬಯಸುವವರು ಪ್ರತಿನಾಯಕನ ದೃಷ್ಟಿಯಿಂದ ಅವನ ಅಪಜಯವನ್ನು ನೋಡಬಾರದೇಕೆ ? ಗಾಂಧಾರಿ ದುರ್ಯೋಧನನು ಎಲ್ಲಾ ಸರಿ ಎಂದು ತಿಳಿಯಲಿಲ್ಲ; ಆದರೆ ತಾಯಿಯ ಕಣ್ಣಿನಿಂದ, ಬಸಿರಿನಿಂದ, ನೋಡಿ ಕೃಷ್ಣನನ್ನು ಶಪಿಸಿದಳಲ್ಲವೇ ? ಅಸುರರು ಸತ್ತರೆ—ಅವರ ಆತ್ಮಜ್ಯೋತಿ ಪರಂಜ್ಯೋತಿಯನ್ನು ಬಂದು ಕೂಡಿಕೊಳ್ಳುವುದಿಲ್ಲವೇ ?—ಮರ್ತ್ಯವಾದದ್ದು ಸತ್ತು, ಅಮರ್ತ್ಯವಾದದ್ದು ಬಿಡುಗಡೆ ಹೊಂದುವುದಿಲ್ಲವೇ ? ಹರಿಶ್ಚಂದ್ರನ ಕಥೆ ಗೋಳಿನ ನಾಟಕವಲ್ಲವೇ ? ಭಾಸನ ಊರುಭಂಗದಲ್ಲಿ ದುರ್ಯೋಧನನಿಗಾಗಿ ನಮ್ಮ ಮೆಚ್ಚುಗೆ ಉಕ್ಕುವುದಲ್ಲವೇ ? ವ್ಯಾಸನ ಶಕುಂತಲೋಪಾಖ್ಯಾನವನ್ನು ಕಾಳಿದಾಸನು ಒಂದು ರೀತಿ ಮಾರ್ಪಡಿಸಿದನು. ಹಳದರಲ್ಲಿ ಹೊಸದನ್ನು ಕಂಡನು ; ಆದರೆ ದುಃಖ ನಡುವೆ ಬಂದರೂ ಕೊನೆಗೆ ಮಂಗಳ ಮಾಡಿದನು ; ರುದ್ರನಾಟಕವಾಗಿಯೇ ಪರಿಣಮಿಸಬಹುದಾಗಿತ್ತಲ್ಲವೇ ? ರಂಗಸ್ಥಳದಲ್ಲಿ ಸಾವು ನೋಡದಿದ್ದರೆ, ದೂತನ ಮೂಲಕ ಕೇಳಿದರೂ, ಅಮಂಗಳವೇ ಅಲ್ಲವೇ ? ರಾಮವರ್ಮಲೀಲಾವತಿಯಲ್ಲಿ ಸತ್ತ ನಾಯಕ ನಾಯಕಿಯರನ್ನು ತೀರ್ಥ ಚಿಮುಕಿಸಿ ಎಬ್ಬಿಸಿದ ಮಾತ್ರಕ್ಕೇ ಮಂಗಳವೇ ? ಅಮಂಗಳದೊಳಗೇ ಮಂಗಳದೃಷ್ಟಿ ಇದಕ್ಕೂ ದೊಡ್ಡದಲ್ಲವೇ : ಈ ರಹಸ್ಯವನ್ನು ನಮ್ಮವರು ಅರಿಯರೇ ? ರಂಗಸ್ಥಳದಲ್ಲಿ ಸಾವನ್ನು ನೋಡಲು ಹೆದರಿದರೆ—ಬೇಯದ ಒಲೆ ಯಾವುದು ? ಸಾಯದ ಮನೆ

ಯಾವುದು ? ಗೌತಮ ಬುದ್ಧನು ಕಿಸಾಗೋತಮಿಗೆ ಕಲಿಸಿದ ಬುದ್ಧಿಯನ್ನು ನಮ್ಮ ಹೆತದ ಲಾಕ್ಷಣಿಕರು ಕಲಿಯಬೇಕು. ಸಾವನ್ನೂ, ಅಳಲನ್ನೂ, ಆಖ್ಯಾನ ಕಾವ್ಯದಲ್ಲಿ ಓದಿ ಮರುಗುವಂತೆಯೇ ಕಣ್ಣೆದುರಿಗೆ ಕಟ್ಟಿದ್ದನ್ನು ನೋಡಿ ಮರುಗಿ, ಧೀರರಾಗಬೇಕು. ಸಾಹಿತ್ಯವೆಲ್ಲಾ ಮಿಠಾಯಿಯಲ್ಲ; ಕಹಿ ಔಷಧವೂ ಉಂಟು. ರುದ್ರನಾಟಕದ ಭಯ ಮಕ್ಕಳ ಭಯ: ಅವು ಕತ್ತಲೆಗೆ ಹೆದರಿದಂತೆ—ಮೇಲೆ ಮಿನುಗುವುವು ಧ್ರುವತಾರೆಗಳು: ಕತ್ತಲೆಯಲ್ಲೇ ಅವನ್ನು ದೃಷ್ಟಿಸಬೇಕು.

ನಮ್ಮ ಸಂಸಾರ ಅನೇಕ ರೀತಿಯಲ್ಲಿ ಟ್ರಾಜೆಡಿ; ನಮ್ಮ ಜನಾಂಗ ಜೀವನ ಅನೇಕ ರೀತಿಯಲ್ಲಿ ಟ್ರಾಜೆಡಿ; ಟ್ರಾಜೆಡಿಯನ್ನು ಲೋಕದಲ್ಲಿ ಅನುಭವಿಸಿದವರು ಸಾಹಿತ್ಯದಲ್ಲಿ ಆಳವಾದ ದೂರದೃಷ್ಟಿಯುಳ್ಳ ಕವಿಗಳ ಕಣ್ಣಿನಿಂದ ನೋಡೋಣ; ಅನುಭವಿಸೋಣ. ಹೊರಗಿನಿಂದ ಭಾಷಾಂತರ ಮಾಡಿ ನಮ್ಮ ಕೊರತೆಯನ್ನು ತುಂಬಿಕೊಳ್ಳೋಣ: ದೈವೀಪ್ರಸಾದವುಳ್ಳವರು ತಮ್ಮ ಸ್ವಪ್ರತಿಭೆಯಿಂದಲೇ ತುಂಬಲಿ. "ದುಃಖಾಂತ"ವನ್ನು ಕೊಡಲಿ.*

ಸರ್ ಎಂ. ವಿಶ್ವೇಶ್ವರಯ್ಯನವರು †

ಹೊಸ ಮೈಸೂರಿನ ಕಲ್ಪನೆಗೆ ಮತ್ತು ಸ್ಥಾಪನೆಗೆ ಎಲ್ಲ ಬಗೆಯಲ್ಲಿಯೂ ಸ್ಫೂರ್ತಿತುಂಬಿ, ರಾಜ್ಯವನ್ನು ಕಟ್ಟಿದ ಮಹಾನುಭಾವರು ಸರ್ ಎಂ. ವಿಶ್ವೇಶ್ವರಯ್ಯನವರು. ಮೈಸೂರಿನ "ತಾತಯ್ಯ"ನವರು ಹೇಗೆ ವೃದ್ಧ ಪಿತಾಮಹರಾಗಿ (Grand Old Man) ಎಲ್ಲರ ಕೊಂಡಾಟಕ್ಕೆ ಪಾತ್ರರಾಗಿದ್ದರೋ ಹಾಗೆಯೇ ಶ್ರೀ ವಿಶ್ವೇಶ್ವರಯ್ಯನವರೂ ಆಬಾಲವೃದ್ಧರಿಗೆ ಚಿರಪರಿಚಿತರಾದ ಈಗಿನ ವೃದ್ಧಪಿತಾಮಹರು. ಅವರು ಪ್ರಜಾಶಕ್ತಿಯನ್ನು

---

* ಈಗ ಕನ್ನಡದಲ್ಲಿ ರುದ್ರನಾಟಕವನ್ನು ಓದಬೇಕೆನ್ನುವವರು, ಗದಾಯುದ್ಧ ನಾಟಕ, ಅಶ್ವತ್ಥಾಮನ್, ಪಾರಸಿಕರು, ಅಂತಿಗೊನೆ, ಸೂತ್ರದ ಗೊಂಬೆ, ಮಂಡೋದರಿ, ಸೊಹ್ರಾಬ್ ಮತ್ತು ರಸ್ತುಂ ಮುಂತಾದ ಗ್ರಂಥಗಳನ್ನು ನೋಡಬೇಕೆಂದು ಹೇಳಿ ಭಾಷಣವನ್ನು ಮುಗಿಸಿದರು.

† ಶ್ರೀ ವಿಶ್ವೇಶ್ವರಯ್ಯನವರ ೮೧ ನೆಯ ವರ್ಷ ವರ್ಧಂತಿಯನ್ನು ತಾ॥ ೧೫-೯-೧೯೪೧ರಂದು ಪರಿಷತ್ತಿನಲ್ಲಿ ಆಚರಿಸಿದ ಸಮಯದಲ್ಲಿ ಮಾಡಿದ ಭಾಷಣ.

ಬೆಳಸಿದವರು. ತಮ್ಮ ಕಾರ್ಯಕ್ರಮಗಳಿಂದ, ಭಾಷಣಗಳಿಂದ, ಅವರು ಅಧಿಕಾರಿಗಳನ್ನೂ ಅನಧಿಕಾರಿಗಳನ್ನೂ ನಿವೃತ್ತರನ್ನೂ ದೇಶಕಾರ್ಯಕ್ಕೆ ಹೂಡಿದರು. ಅವರು ನಮ್ಮ ನಾಡಿನ ನೆಮ್ಮದಿಗಾಗಿ ಮುನ್ನಡೆಗಾಗಿ ಇಟ್ಟ ಹೆಜ್ಜೆಯನ್ನು ಎಲ್ಲರೂ ಹಿಂಬಾಲಿಸಿದ್ದೇ ಮೈಸೂರಿಗೆ ಇಂದು ಲಭಿಸಿರುವ ಮಾನ್ಯತೆಗೆ ಕಾರಣವಾಗಿದೆ.

ಶ್ರೀ ವಿಶ್ವೇಶ್ವರಯ್ಯನವರು ಮೈಸೂರಿಗೆ ಮಾತ್ರ ಸೇರಿದ ಮಹಾನುಭಾವರಲ್ಲ; ಕನ್ನಡ ನಾಡಿನ ಭಕ್ತರು, ಭಾರತದ ಪ್ರೇಮಿಗಳು, ವಿಶ್ವಮೂರ್ತಿಗಳು (World Figure). ಪ್ರಪಂಚವನ್ನೆಲ್ಲಾ ನೋಡಿ ಬಂದು ನಾವೂ ಹಾಗೆ ಆಗಿ ಹಿರಿಯ ಬಾಳು ಬಾಳಬೇಕೆಂದು ಎಚ್ಚರಿಸಿದರು. ಅವರ ಸೇವೆ ಆರ್ಥಿಕ ಕ್ಷೇತ್ರಕ್ಕೆ ಮಾತ್ರ ಮೀಸಲಾಗಲಿಲ್ಲ. ಜೀವಿತದ ಐಹಿಕ ಪ್ರಗತಿಗಿಂತ ಹೆಚ್ಚಾಗಿ ಮಾನವನಲ್ಲಿ ಅಡಗಿರುವ ಆಧ್ಯಾತ್ಮಿಕ ಸಾಹಸ ಶಕ್ತಿಯನ್ನು ಕುರಿತು ಅವರು ಒತ್ತಿ ಹೇಳಿದರು. (Even more than materialisitic progress in life he stressed the Spirit dwelling in Man). ಬದುಕಿನ ಎಲ್ಲ ಶಾಖೆಗಳಿಗೂ ಹೊಸ ಚೈತನ್ಯವನ್ನು ತುಂಬಿ, 'ಎಲ್ಲಾ ಬಗೆಯ ಬಡತನ ಹೋಗಬೇಕು—ಸಿರಿ ನಲಿಯಬೇಕು' ಎಂದು ನಾಡನ್ನೇ ತಟ್ಟಿ ಎಬ್ಬಿಸಿದರು. ಕನ್ನಡ ನಾಡಿನಲ್ಲಿ ಅವರು ಶಿಲ್ಪಿಸಿದ ಮಹತ್ಕಾರ್ಯಗಳು, ಸಮುದ್ರಗಳು ಅವರ ಸಜೀವ ಪ್ರತಿಮೆಗಳಾಗಿ ಅಚ್ಚಳಿಯದೆ ನಿಂತಿವೆ. ಇಂಥವರಲ್ಲಿ ನಮ್ಮ ಭಕ್ತಿ ಗೌರವಗಳನ್ನು ವ್ಯಕ್ತಪಡಿಸುವುದು ನಮ್ಮ ಕರ್ತವ್ಯ. ಇದರಿಂದ ನಮಗೇ ಶ್ರೇಯಸ್ಸು.

ಸರ್ ವಿಶ್ವೇಶ್ವರಯ್ಯನವರನ್ನು ನಮ್ಮ ಪೂರ್ವ ಕವಿಗಳ ಮಾತಿನಲ್ಲಿ 'ಪಾರ್ವರ್' (Seer) ಎಂದು ಕರೆಯಬಹುದು. ಈ ದೃಷ್ಟಿಯಿಂದ ಅವರು ಸಾಹಿತಿಗಳೇ, ದಾರ್ಶನಿಕರೇ. ಅವರಿಗೆ ಕನ್ನಡದ ಮುನ್ನಡೆಯಲ್ಲಿ ಅಮಿತವಾದ ಅಭಿಮಾನ ಶ್ರದ್ಧೆಗಳಿವೆ. ಅವರ ಕನ್ನಡ ಪ್ರೇಮ ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ವಿಶ್ವವಿದ್ಯಾನಿಲಯಗಳಾಗಿ ಅರಳಿ ನಾಡಿನ ಕಣ್ಣು ತೆರೆಯಿತು. ಅವರು ಕನ್ನಡದಲ್ಲಿ ಭಾವನಾ ಪ್ರಧಾನ ಸಾಹಿತ್ಯದ ಜೊತೆಗೆ ಬದುಕಿ ಪ್ರಯೋಜನಕರವಾದ ವಿಜ್ಞಾನಶಾಸ್ತ್ರ ಸಾಹಿತ್ಯವೂ ಬೆಳೆಯಬೇಕೆಂದು ಪ್ರೋತ್ಸಾಹವಿತ್ತರು.

ಪರಿಷತ್ತು ಅವರ ಪರ್ಯಂತಿಯನ್ನು ಆಚರಿಸುವುದು ಬಹು ಉಚಿತ ವಾಗಿದೆ...

ನನ್ನ ಜೀವಮಂತ್ರ*

ತಮ್ಮ ಅರ್ಪಣೆಯಿಂದ ಈ ಪ್ರೇಮ ಪರಿಮಳದ ಮಾಲೆ ಇನ್ನು ಸ್ವಲ್ಪ ಹೊತ್ತು ನನ್ನ ಕೊರಳಿನಲ್ಲೇ ಇರಲಿ. ಮಿತ್ರರೂ, ಶಿಷ್ಯರೂ (ಶಿಷ್ಯರೂ ಮಿತ್ರರೆ) ಪ್ರೇಮದಿಂದ ನನಗೆ ಅನುಗ್ರಹಿಸಿರುವ ಈ 'ಸಂಭಾವನೆ' ಗ್ರಂಥವನ್ನೂ ಸುಂದರ ವಾದ ಪೆಟ್ಟಿಗೆಯನ್ನೂ ತಮ್ಮೆಲ್ಲರ ಆಶೀರ್ವಾದಗಳನ್ನೂ ಸಂದೇಶಗಳನ್ನೂ ಹೃತ್ಪೂರ್ವಕವಾದ ಕೃತಜ್ಞತೆಯಿಂದ ಸ್ವೀಕರಿಸುತ್ತೇನೆ. ಇವೆಲ್ಲ ತಮ್ಮ ಪ್ರೇಮದ ಫಲ. ಹೃದಯದಲ್ಲಿ ತಮ್ಮೆಲ್ಲರ ವಿಶ್ವಾಸವನ್ನು ತುಂಬಿಕೊಂಡು ಕೊರ ಳಲ್ಲಿ ಅದರ ಕಂಪನ್ನು ಧರಿಸಿ ಸಂತುಷ್ಟನಾಗಿದ್ದೇನೆ.

ಎಲ್ಲಿ ಪ್ರೇಮ ಅರ್ಹತೆಯನ್ನು ಕಾಣುತ್ತದೆಯೋ ಅಲ್ಲಿ ಅರ್ಹತೆಯಿಲ್ಲ ಎಂದು ಹೋರಾಡಿ ಫಲವಿಲ್ಲ, ಕಡೆಗೆ ಪ್ರೇಮವೇ ಗೆಲ್ಲುವುದರಿಂದ. ಆದರೆ ತಾಯ ಸೇವೆಯಲ್ಲಿ ತಾವೆಲ್ಲಾ ನನಗೆ ನೆರವಾಗಿದ್ದೀರಿ. ಧೈರ್ಯ ಕೊಟ್ಟಿದ್ದೀರಿ. ನನ್ನ ಒಳಬಾಳನ್ನು ಮೈತ್ರಿಯಿಂದ ತುಂಬಿದ್ದೀರಿ ಎನ್ನುವುದನ್ನು ನಾನು ಮರೆಯ ಲಾರೆ. ಅರ್ಹತೆಯಲ್ಲಾ ತಮ್ಮದು.

ಶ್ರೀ ಸುಬ್ರಹ್ಮಣ್ಯ ಶಾಸ್ತ್ರಿಗಳೂ ಶ್ರೀ ಗುಂಡಪ್ಪನವರೂ ನನ್ನನ್ನು ಧನ್ಯ ನೆಂದರು. ಹೌದು, ನಾನು ಧನ್ಯ—ಅವರ ಮೈತ್ರಿಯಿಂದ. ಶ್ರೀ ಮೇಕ್ರಿಯವರು ಮುಸಲ್ಮಾನರ ಪರವಾಗಿ ನನಗೆ ವಿಶ್ವಾಸ ಹೇಳಿದರು : ಎಲ್ಲಾ ಧರ್ಮೀಯರೂ ನಾನು ಸಧರ್ಮಿ ಎಂದು ತಿಳಿದಿರುವುದೇ ನನ್ನ ಒಂದು ಧನ್ಯತೆ. ಹಾಗೂ ನಾನು ಧನ್ಯ. ಶ್ರೀಮತಿ ಸೋಫಿಯಾ ವಾಡಿಯಾ ಅವರು ಭಾರತದ ಗುರು ಪರಂಪರೆಗೆ ನನ್ನನ್ನು ಜೋಡಿಸಿದರು. 'ಗುರು'ದೊಡ್ಡ ಹೆಸರು : ನಾವು ಸಂಬಳದ ಉಪಾ ಧ್ಯಾಯರು. ಆದರೆ ವಿದ್ಯಾರ್ಥಿಗಳಿಗೆ, ಅರಿಯದ ನಾಡಜನಕ್ಕೆ ನಾನು ಪಾಠ

---

*ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿ ಸೆಪ್ಟೆಂಬರ್ ೧೩, ೧೯೪೧ ರಲ್ಲಿ 'ಶ್ರೀ' ಯವರ ೫೭ನೆಯ ಹುಟ್ಟಿದ ಹಬ್ಬವನ್ನಾಚರಿಸಿ 'ಸಂಭಾವನೆ'ಯನ್ನು ಒಪ್ಪಿಸಿದಾಗ ಮಾಡಿದ ಭಾಷಣ.

ಹೇಳಿಕೊಟ್ಟು ಶ್ರಮಿಸಿರುವುದು ನಿಜ :—ಅದು ಫಲಿಸಿದ್ದರೆ, ಹಾಗೂ ನಾನು ಧನ್ಯ, ಆಕೆ ಭಾರತೀಯರಾಗಿ ಎಲ್ಲವನ್ನೂ ವಿಶ್ವ ದೃಷ್ಟಿಯಿಂದ ನೋಡಿ ಮಾನವ ಪ್ರಗತಿಯಲ್ಲಿ ಅಚಲವಾದ ಶ್ರದ್ಧೆಯನ್ನಿಟ್ಟು ಕೊಂಡಿದ್ದಾರೆ. ಅವರಿಗಾಗಿ ಇಂಗ್ಲಿಷಿನಲ್ಲಿ ಹೇಳುತ್ತೇನೆ (ಇಂಗ್ಲಿಷ್ ಮಾತಾಡುವುದಿಲ್ಲವೆಂದು ನಾನೇನೂ ಪ್ರತಿಜ್ಞೆಮಾಡಿಲ್ಲ) : She believes in the Brahman, lives in the Brahman and prays and works for the spread of the Brahman. ಕನ್ನಡದ ಕೆಲಸ, ನುಡಿಯ ನಾಡಕೆಲಸ-ಒಂದು ಗುರು ಪರಂಪರೆ. ನನ್ನ ಹಿರಿಯರಿಂದ ನಡೆದು ಬಂದು ನನ್ನ ಮೂಲಕ ನನ್ನ ಶಿಷ್ಯರಿಗೆ ಸಾಗುತ್ತಿದೆ ಈ ಪವಿತ್ರಕಾರ್ಯ. ಈ ಕರ್ತವ್ಯವನ್ನು ನಾನು ಸರಿಯಾದ ಪಾತ್ರನಾಗಿ ನಿರ್ವಹಿಸಿರುವೆನೋ ಹೇಗೋ ; ತಮ್ಮೆಲ್ಲರ ಕೃಪೆಯೇ ನನ್ನ ರಕ್ಷೆ.

ಈ ಸಂದರ್ಭದಲ್ಲಿ ನನ್ನ ಎದೆಯಲ್ಲಿ ಯಾವಾಗಲೂ ಮಿಡಿಯುತ್ತಿರುವ ಒಂದೆರಡು ಹಂಬಲುಗಳನ್ನು ತಮ್ಮಲ್ಲಿ ಹೇಳಿಕೊಳ್ಳಬಹುದೆ ?

ಕನ್ನಡ ಭಾಷೆ ಒಂದು ಪ್ರಾಂತದ ಭಾಷೆಯಾಗಿರಬಹುದು. ಮಹತ್ವದ ಭಾಷೆಗಳ ಮುಂದೆ ಇದೇ ? ಎಂದು ಅದನ್ನು ಕೆಲವರು ಕಡೆಗಣಿಸಬಹುದು. ನಮಗೆ ಅದು ಹೆತ್ತ ತಾಯಿ; ಮಹಾ ವೈಭವದಿಂದ ಬಾಳಿದ ಜನತೆಯ ಉಸಿರು, ಕಣ್ಣು. ಸಣ್ಣದೋ, ದೊಡ್ಡದೋ, ಎಲ್ಲಾ ಭಾಷೆ ಸಾಹಿತ್ಯ ಸಂಸ್ಕೃತಿ ಧರ್ಮಗಳನ್ನೂ ಒಂದುಕಡೆಯಿಂದ ಒಳಹೊಕ್ಕು ಮತ್ತೊಂದು ಕಡೆಯಿಂದ ಹೊರಹೊರಟು, ಎತ್ತರದಲ್ಲಿ ನಿಂತು. ಒಟ್ಟು ನೋಟದಲ್ಲಿ ಅವುಗಳ ಬೆಲೆ ಏನೆಂದು ತೂಗಬೇಕು. ತೂಗಿ ಮನ್ನಿಸಬೇಕು. ಕನ್ನಡ ಬದುಕಿದೆ,-ಬೆಳೆಯುತ್ತಿದೆ. ಅದು ಇಂದಿನ ಆವಶ್ಯಕತೆಗಳಿಗೆಲ್ಲ ಒದಗಿ, ಕನ್ನಡಿಗರ ಜೀವಾಳವಾಗಬೇಕು, ಅವರ ಆತ್ಮವಿಕಾಸಕ್ಕೆ ಆಧಾರವಾಗಬೇಕು. ಕ್ರಾಂತಿಯಾಗಬೇಕು. ಹಳೆಯ ನುಡಿ ಹೊಸದಾಗಬೇಕು. ಗ್ರಾಮ್ಯವಾಗಿಯೇ ನಿಲ್ಲದೆ, ವ್ಯಾಕರಣ ನಿಯಮಕ್ಕೊಳಪಟ್ಟು, ಸಾಹಿತ್ಯ ಸಂಸ್ಕೃತಿಗಳ ಮಟ್ಟಕ್ಕೇರಿ, ಸಾವಿರಾರು ವರ್ಷಗಳಿಂದ ಬೆಳೆದುಬಂದು ಇನ್ನೂ ಬೆಳೆಯುವ ಸ್ವಾತಂತ್ರ್ಯ ಜೀವನವನ್ನುಳ್ಳುವೆಲ್ಲಾ 'ಸಂಸ್ಕೃತ'ಗಳೇ. ಅವು ಜನತೆಗಾಗಿ ಹಬ್ಬಿ (ಪಂಡಿತರಿಗೇ ಅಲ್ಲ) ಬ್ರಹ್ಮಾನುಭವಕ್ಕೆ ಒದಗಬೇಕೆಂಬುದೇ ನನ್ನ ಬಯಕೆ, ಕನ್ನಡ ಹೀಗೆ ಏಳಿಗೆಹೊಂದ ಬೇಕೆಂಬುವೇ ನನ್ನ ದೀಕ್ಷೆ. ಕಲಿಯುವುದೇ ನನ್ನ ಜೀವನದ ಕರೆ ;

ಕಲಿಯುವುದು, ಕಲಿತದ್ದನ್ನು ತಿಳಿಯದವರಿಗೆ ಕಲಿಸುವುದು. ಇದು ಸಣ್ಣದು, ಅದು ದೊಡ್ಡದು ಎಂಬ ಭಾವನೆ ನನಗೆ ಒಲ್ಲದು. ಈ ಪ್ರಪಂಚದಲ್ಲಿ ನಿರ್ದುಷ್ಟವಾದದ್ದು, ಪರಿಪೂರ್ಣವಾದದ್ದು ಯಾವುದೂ ಇಲ್ಲ. ಎಲ್ಲದರಲ್ಲೂ ಒಂದು ಸತ್ವವಿದೆ, ಒಂದು ವೈಶಿಷ್ಟ್ಯವಿದೆ; ಹಾಗೆಯೇ ಕೊರತೆಯಿದೆ, ಕಲ್ಮಷವಿದೆ ಎಂದು ನನ್ನ ಭಾವನೆ. ಕನ್ನಡ ಪ್ರಪಂಚ ಚಿಕ್ಕದೆಂದು ನಾವು ನಮ್ಮ ಆವರಣವನ್ನು ಕೊಂಪೆಯಂತೆ ನಿರ್ಮಿಸಿಕೊಂಡು ಕುಳಿತುಕೊಳ್ಳಬಾರದು. ದೊಡ್ಡದೆಂದು ಮತ್ತೊಂವರ ಅಂಧಾನುಕರಣದಲ್ಲೇ ಸಿಕ್ಕಿಕೊಳ್ಳಬಾರದು. ಕನ್ನಡಿಗರ ದೃಷ್ಟಿ ವಿಶಾಲವಾಗಬೇಕು. ಬೆಳಕು, ಗಾಳಿ ಎಲ್ಲೆಲ್ಲಿಂದ ಬರುವುವೋ ಅಲ್ಲಿಂದೆಲ್ಲಾ ಅವನ್ನು ನಮ್ರತೆಯಿಂದ, ಭಕ್ತಿಯಿಂದ ಸ್ವಾಗತಿಸಿ, ನಮ್ಮ ಸಂಸ್ಕೃತಿಯನ್ನೂ ತೇಜಸ್ಸನ್ನೂ ಬೆಳಸಿಕೊಳ್ಳಬೇಕು. ಒಡಕು ಹುಟ್ಟಿಸುವ ಮೋಟುಗೋಡೆಗಳನ್ನು ಒಡೆದು, ಮುಚ್ಚಿದ ಕಿಟಕಿಗಳನ್ನು ತೆರೆದು ಎಲ್ಲ ದಿಕ್ಕುಗಳಿಂದಲೂ ಆಳವನ್ನೂ ಅಂದವನ್ನೂ ತುಂಬಿಕೊಂಡು ಕನ್ನಡ ಮಹಾ ಕಾವೇರಿಯಾಗಿ ಹರಿಯಬೇಕು, ಕನ್ನಡಿಗರ ಭಾಗ್ಯವಿಧಾತೆಯಾಗಿ ಬೆಳಗಬೇಕು, ಸಂಯುಕ್ತ ಭಾರತಕ್ಕೆ ಚತುರ್ಭುಜವಾಗಿ ನಿಲ್ಲಬೇಕು.

ಈ ಒಂದು ಹೆಗ್ಗುರಿಯನ್ನು ಮುಟ್ಟಬೇಕಾದರೆ ನಮ್ಮ ಮನೋಧರ್ಮ ಹೇಗಿರಬೇಕು? ಮನಸ್ಸು ಕಲ್ಲಾಗಿ ನಿಲ್ಲದೆ ತೆರೆದುಕೊಂಡು ಬೆಳೆಯುತ್ತಿರಬೇಕು. ಏಕಾಂತದೃಷ್ಟಿಯಲ್ಲಿ ನಿಲ್ಲಬಾರದು. ಅಂಧಶ್ರದ್ಧೆಯನ್ನು ಬಿಡಬೇಕು. ಗಟ್ಟಿಯಾವುದು, ಜಳ್ಳು ಯಾವುದು ಎಂಬುದನ್ನು ಅರಿತು ಶಾಶ್ವತವಾದ ಸತ್ಯವನ್ನು ಹುಡುಕುವುದು ನಮ್ಮ ಪರಮಧರ್ಮವಾಗಬೇಕು. ಎಲ್ಲಾ ಸಂಸ್ಕೃತಿಗಳಲ್ಲಿಯೂ, ಎಲ್ಲಾ ಮತಗಳಲ್ಲಿಯೂ, ಎಲ್ಲಾ ಸಾಹಿತ್ಯಗಳಲ್ಲಿಯೂ ಚಿನ್ನವೂ ಉಂಟು; ಹಿತ್ತಾಳೆಯೂ ಉಂಟು; ಜೀವರಸವೂ ಉಂಟು, ಬರಿಯ ಭ್ರಾಂತಿಯ ಕಸವೂ ಉಂಟು. ಹಿತ್ತಾಳೆಯಿಂದ ಚಿನ್ನ ಕೆಟ್ಟೀತು: ಕಸದಿಂದ ರಸ ವಿಷವಾದೀತು. ವಿಮರ್ಶೆಯ ಬೆಂಕಿಯಲ್ಲಿ ಶುದ್ಧಿಯಾದರೆ ಚಿನ್ನವೆಲ್ಲಾ ಕೂಡಿ ಒಂದಾಗುವುವು; ರಸವೆಲ್ಲಾ ಪಾದರಸದ ಬಿಂದುಗಳಂತೆ ಕೂಡಿ ಸಮರಸವಾಗುವುವು. ಕಲ್ಮಷಗಳೆಲ್ಲಾ ಬೇರೆಯಾಗುವುವು: ಅವನ್ನು ಬಿಸಾಡಬಹುದು. 'ಸತ್ಯಮೇವ ಜಯತೇ' 'ಸತ್ಯಾನ್ನಾಸ್ತಿ ಪರೋ ಧರ್ಮಃ.'

ನಮ್ಮ ಬದುಕನ್ನು ಸಂಪದ್ಯುಕ್ತವಾಗಿ ಮಾಡಲು ನಾವು ತುಂಬಿಕೊಳ್ಳ

ಬೇಕಾದ ಅನ್ನು ತಕಲಶಕ್ಕೆ ಬೇಕಾದುದು ಎಂಥ ಧರ್ಮ, ಎಂಥ ಸಾಹಿತ್ಯ, ಎಂಥ ಸಂಸ್ಕೃತಿ ಎಂಬುದನ್ನೂ ನಮ್ಮ ಜನದ ಬದುಕು ನಿಜವಾಗಿ ರಸಭರಿತವಾಗಿ, ಭಾವಪುಷ್ಟವಾಗಿ ಹಿಗ್ಗ ಬೇಕಾದರೆ, ಹಿಂದಿನಿಂದ ಬಂದದ್ದರಲ್ಲಿ ಸಂಗ್ರಹಿಸಬೇಕಾದದ್ದು ಎಷ್ಟು, ತ್ಯಜಿಸಬೇಕಾದದ್ದು ಎಷ್ಟು ಎಂಬುದನ್ನೂ, ಬುದ್ಧಿ ಸ್ವಾತಂತ್ರ್ಯದಿಂದ, ವಿಮರ್ಶಕ ಬುದ್ಧಿಗೆ ಕಡಿವಾಣ ಹಾಕದೆ, ಚೆನ್ನಾಗಿ ವಿಚಾರ ಮಾಡಿಕೊಳ್ಳಬೇಕು. ಒಳ್ಳೆಯ ತೋಟಗಾರನಂತೆ, ಗಿಡವನ್ನು ಸಾಯಿಸದೆ, ಗಿಡವನ್ನು ನಾಶಮಾಡುವ ಒಣ ರೆಂಬೆಗಳನ್ನು (Dead wood) ಕತ್ತರಿಸಿ, ಗಿಡಕ್ಕೆ ಜೀವರಸ ಬರುವಂತೆ ಕಸಿಮಾಡಿ, ಸೊಗಸಾದ ಹೂವು ಹಣ್ಣು ಬಿಡುವಂತೆ ದುಡಿಯಬೇಕು. ಅಪ್ಪ ನೆಟ್ಟ ಮರವೆಂದು ನೇತುಹಾಕಿಕೊಳ್ಳಬೇಕಾದದ್ದಿಲ್ಲ. 'ವಾಸಾಂಸಿ ಜೀರ್ಣಾನಿ ಯಥಾ ವಿಹಾಯ' ಎಂದಂತೆ-ಇದನ್ನೇ ಕಾರ್ಲೈಲ್ '(Old clothes)' ಎಂದು ಹೇಳಿದ-ಉಳಿಯಲಾರದ್ದನ್ನು, ಉಳಿಯಬಾರದ್ದನ್ನು ತ್ಯಜಿಸುವ ಧೈರ್ಯ ನಮ್ಮಲ್ಲಿ ಬೆಳೆಯಬೇಕು.

ಈ ಮನೋಧರ್ಮ ನಮ್ಮ ಬದುಕನ್ನು ಸಂಬಂಧಿಸಿರುವ ಸಾಹಿತ್ಯ, ಧರ್ಮ, ಸಮಾಜರಚನೆ, ರಾಜಕೀಯ ಮುಂತಾದ ಎಲ್ಲ ರಂಗಗಳಿಗೂ ಅನ್ವಯಿಸುತ್ತದೆ. ಪುರಾತನರ ಜ್ಞಾನವನ್ನೂ ನೂತನರ ಜ್ಞಾನವನ್ನೂ ಹೊಂದಿಸಿ, ಇಬ್ಬರ ಅವಿವೇಕವನ್ನೂ ದೂರಮಾಡಿ, ಬುದ್ಧಿಯನ್ನು ಪ್ರೇರಿಸುವ ವಿಶಾಲ ದೃಷ್ಟಿಯನ್ನು ಪಡೆಯುವುದು ಎಲ್ಲರ ಪರಮಕರ್ತವ್ಯವಾಗಿದೆ. ಕಾಲ ಹಿಮ್ಮೆಟ್ಟಲಾರದು ; ಹಿಂದಿನ ಪ್ರಪಂಚ ಮರಳಲಾರದು ; ಅಲ್ಲಿ ಮತ್ತೆ ಹೋಗಿ ನಾವು ಉಸಿರಾಡಲಾರೆವು.

'ಅಸತೋ ಮಾ ಸದ್ಗಮಯ' ಎಂಬ ನಮ್ಮ ಋಷಿಗಳ ಪ್ರಾರ್ಥನೆಯಂತೆ, ಕಾರ್ಡಿನಲ್ ನ್ಯೂಮನ್ನಿನ—'Out of the sahdows and vain imaginations into the truth' ಎಂಬ ಹೊನ್ನುಡಿಯಂತೆ ಇಲ್ಲದುದನ್ನು, ಭ್ರಮೆಯನ್ನು, ಕಲ್ಪನಾ ಪ್ರಪಂಚವನ್ನು ತೊರೆದು ಇರುವುದನ್ನು, ಸತ್ಯವನ್ನು, ವಾಸ್ತವಿಕಲೋಕವನ್ನು ನಾವು ಸೇರಬೇಕು. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣನು (ವಿಮೃಶ್ಯೈತದಶೇಷೇಣ ಯಥೇಚ್ಛಸಿ ತಥಾ ಕುರು) ಎಂದು ಅರ್ಜುನನಿಗೆ ಕೊಟ್ಟ ಬುದ್ಧಿಸ್ವಾತಂತ್ರ್ಯವನ್ನು ನಮ್ಮ ಜೀವನದ ಮೂಲಸೂತ್ರವಾಗಿ ಮಾಡಿಕೊಂಡು, 'ಪ್ರಜ್ಞಾವಾದ'ವನ್ನೇ ಆಡುತ್ತಿರದೆ, ಜಿಜ್ಞಾಸೆಮಾಡಿ,

ಸತ್ಯಾಸತ್ಯವಿವೇಚನೆಯಲ್ಲಿ ತೊಡಗಿ. ನಮ್ಮ ನಾಡನುಡಿಯ ಸರ್ವತೋಮುಖವಾದ ಏಳಿಗೆಗಾಗಿ ಸಂಘಶಕ್ತಿಯನ್ನೂ ಒಕ್ಕಟ್ಟನ್ನೂ ಬೆಳಸಿಕೊಂಡು ಇಲ್ಲಿಯೇ ಮುಕ್ತಿಯನ್ನು ಪಡೆಯಬೇಕು. ಮುಕ್ತಿಯೆಂದರೆ ಇಷ್ಟು ಸ್ಪಷ್ಟ ಅರ್ಥವನ್ನು ಇಟ್ಟುಕೊಳ್ಳೋಣ : ಬಿಡುಗಡೆ ಸ್ವಾತಂತ್ರ್ಯ, freedom, liberation: ಅಜ್ಞಾನದಿಂದ, ಅಸತ್ಯದಿಂದ, ಅಧರ್ಮದಿಂದ, ಪಾಪವಾಸನೆಯಿಂದ ಬಿಡುಗಡೆ; ಇನ್ನೂ ಅತಿಶಯವ ಅರ್ಥವಿದ್ದರೆ ವಿಚಾರ ಮಾಡೋಣ. ಕರ್ಮಯೋಗಕ್ಕೆ ಇಷ್ಟು ಅರ್ಥ ಸಾಕು. ಅಂಧಶ್ರದ್ಧೆಯಿಂದ ಬಿಡುಗಡೆಯನ್ನೂ ಒಂದು ದೊಡ್ಡ ಕೆಲಸಕ್ಕಾಗಿ ಒಕ್ಕಟ್ಟನ್ನೂ, ಧ್ಯೇಯಸಾಧನೆಯಿಂದ ಸೌಖ್ಯವನ್ನೂ ಪಡೆದು, ಸ್ವತಂತ್ರ ಸಂಯುಕ್ತ ಸುಖಮಯ ಭಾರತದಲ್ಲಿ (a free united happy India) ಬಾಳೋಣ ಎಂಬುದೇ ನನ್ನ ಜೀವನದ ರಹಸ್ಯ ; ನನ್ನ ಕನ್ನಡ ಕೆಲಸವ ಗುಟ್ಟು ; ನನ್ನ ಮಿಡಿತ, ಕುದಿತ.

ನನ್ನ ಶಿಷ್ಯರು ನನ್ನನ್ನು ಚೆನ್ನಾಗಿ ತಿಳಿಯಲೆಂದು ಬೆಳಸಿದ ಮಾತು ಇನ್ನು ಸಾಕು.

ಈ ಉತ್ಸವವನ್ನು ನಡಸಿದ, "ಸಂಭಾವನೆ"ಗೆ ಲೇಖನಗಳನ್ನು ಬರೆದ, ಪ್ರೀತಿ ಸಂದೇಶಗಳನ್ನು ಕಳಿಸಿದ, ಸರ್ವರನ್ನೂ ನಾನು ಕೃತಜ್ಞತೆಯಿಂದ ನೆನೆಯುತ್ತೇನೆ. ಅವರಲ್ಲೂ ಉತ್ಸವದ ಸೂತ್ರಧಾರಿಗಳಾಗಿ ಮಿತ್ರರ ಪರವಾಗಿ ಕೆಲಸ ನಡಸಿ ಈ ಉತ್ಸವಕ್ಕೆ ಇಷ್ಟು ಸಡಗರವನ್ನು ತಂದುಕೊಟ್ಟ ನನ್ನ ಮಿತ್ರರಾದ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರು ನನ್ನಲ್ಲಿ ಅಪಾರವಾದ ಪ್ರೇಮವನ್ನಿಟ್ಟಿದ್ದಾರೆ; ನನ್ನ ಕುಂದುಕೊರತೆಗಳನ್ನು ಮನ್ನಿಸಿ ನನ್ನ ರಕ್ಷಣಾದೇವತೆ (Guardian Angel) ಆಗಿದ್ದಾರೆ; ಅವರಿಗೆ ನನ್ನ ಕೃತಜ್ಞತೆಗಳು ನಿಸ್ಸಂಕೋಚವಾಗಿ ಸಲ್ಲತಕ್ಕವಾಗಿವೆ.

ರಾಜಮಂತ್ರ ಪ್ರವೀಣ ಶ್ರೀ ಮಾಧವರಾಯರವರು ತಮ್ಮ ಅಮೋಘವಾದ ಭಾಷಣದಲ್ಲಿ ನನ್ನ ವಿಚಾರವಾಗಿ ಆಡಿದ ವಿಶ್ವಾಸದ ಮಾತುಗಳಿಗೂ ಕನ್ನಡನಾಡಿನ ಒಕ್ಕಟ್ಟಿನ, ಕನ್ನಡನುಡಿಯ ಏಳಿಗೆಯ, ವಿಶಾಲದೃಷ್ಟಿಯ ಕುರಿತು, ನೀಡಿದ ಬೆಂಬಲಕ್ಕೂ ನಾನು ಬಹಳ ಕೃತಜ್ಞನಾಗಿದ್ದೇನೆ. ಅವರು ನಮ್ಮ ನಮ್ಮ ಸ್ನೇಹ ಮೂವತ್ತೈದು ವರ್ಷಗಳದೆಂದು ಹೇಳಿದರು. ಅವರಂತೆ ರಾಜಸೇವಾಸಕ್ತ ಶ್ರೀ ಎ.ವಿ. ರಾಮನಾಥನ್ ಅವರೂ ನನ್ನ ಕೆಳೆಯರೆ. ಇವ

ರಿಬ್ಬರೂ ನನ್ನನ್ನು ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಅದುವಿತಾವು ಮೇಲಕ್ಕೇರಿದರು! ಹೀಗಾಗಿ ನನ್ನ ಕಾರ್ಯ ಕ್ಷೇತ್ರ ಬೇರೆಯಾಯಿತು. ನನ್ನ ತಂದೆಯವರು ನನ್ನನ್ನು ಕುರಿತು, "ನೀನು ನನ್ನ ಹಾಗೆ ವಕೀಲಿ ವೃತ್ತಿಗೆ ಹೋಗಬೇಡ; ಅದು ನನಗೇ ಸಾಕು. ನೀನು ವೈದ್ಯನಾಗು" ಎಂದು ಹೇಳುತ್ತಿದ್ದರು. ವೈದ್ಯರ ಪವಿತ್ರವೃತ್ತಿಯೂ ನನಗೆ ಲಭಿಸಲಿಲ್ಲ. ಎಲಾ ಕಡೆಯೂ ಸೋತವರು ಉಪಾಧ್ಯಾಯವೃತ್ತಿಗೆ ಬರುವರೆಂಬ ಲೋಕೋಕ್ತಿಯಂತೆ ನಾನು ಕಡೆಗೆ ಉಪಾಧ್ಯಾಯನಾದೆ. ಕರುಣಾಳು ಬೆಳಕು ನನ್ನನ್ನು ನನ್ನ ಹೃದಯಕ್ಕೆ ಒಗ್ಗಿದ ಕೆಲಸಕ್ಕೇ ತಂದುಬಿಟ್ಟಿತು. ಉಪಾಧ್ಯಾಯನಾಗಿ ಕನ್ನಡತಾಯ ಕೃಪಾಕಟಾಕ್ಷಕ್ಕೆ ಪಾತ್ರನಾದೆ. ಧನ್ಯನಾದೆ.

ನಾನು ಕನ್ನಡಜನಕ್ಕೆ ಏನಾದರೂ ಸೇವೆಸಲ್ಲಿಸಿದ್ದರೆ, ಅಂಥ ಸಂಪ್ರದಾಯವನ್ನು ಬಿಡಿಸಿ, ಅವರು ವಿಚಾರಪರರಾಗಿ ಸತ್ವಶಾಲಿಗಳಾಗಬೇಕು ಎಂಬ ನನ್ನ ಸಂಕಲ್ಪ ಅಲ್ಪಸ್ವಲ್ಪವಾದರೂ ನೆರವೇರಿದ್ದರೆ, ಅಡಚಣೆ ಬಂದಾಗ ಅವಿಶ್ವಾಸಿಗಳು ಚಂಡಿಸಿದಾಗ, ನಾನು ಚಂಡಿಸಿದ್ದರೆ, ನಿಷ್ಠುರವಾಗಿ ನುಡಿದಿದ್ದರೆ, ತಪ್ಪೋ ನೆಪ್ಪೋ ಎಲ್ಲವೂ ಪರಮಾತ್ಮನಲ್ಲಿ ಅರ್ಪಣ, ಕನ್ನಡತಾಯ ಪಾದದಲ್ಲಿ ಅರ್ಪಣ. ನನ್ನನ್ನು ನೀವೆಲ್ಲರೂ ಕೃಪಾದೃಷ್ಟಿಯಿಂದ ನೋಡಿ ಹರಸಿದ್ದೀರಿ. ಸದ್ಯದಲ್ಲಿಯೇ ನಾನು ಅಧ್ಯಾಪಕವೃತ್ತಿಯಿಂದ ನಿವೃತ್ತನಾಗುವೆನೆಂದು ಶ್ರೀ ರಾಘವಾಚಾರ್ಯರು ನನಗೆ ಜ್ಞಾಪಕಕೊಟ್ಟಿದ್ದಾರೆ. ಹೌದು, ನಿವೃತ್ತನಾಗುತ್ತೇನೆ. ನನ್ನ ಹಿರಿಯರಿಂದ ಪಡೆದಿದ್ದ ಜ್ಞಾನದ ಪಂಜನ್ನು ಇದುವರೆಗೂ ನನ್ನ ಕೈಯಲ್ಲಾದ ಮಟ್ಟಿಗೆ ಹಿಡಿದಿದ್ದೆ. ಅದನ್ನು ತೆಗೆದುಕೊಳ್ಳುವವರನ್ನು ನಿರೀಕ್ಷಿಸುತ್ತಿದ್ದೇನೆ. ನಿವೃತ್ತನಾದ ಮೇಲೂ ದೃಢಕಾಯವಿರುವವರೆಗೆ ನಾನು ಕನ್ನಡನಾಡನ್ನು ಇನ್ನೂ ಹೆಚ್ಚಾಗಿ ಸಂಚರಿಸಿ, ನಾಡಿನ ನಾನಾ ಭಾಗಗಳಲ್ಲಿನ ಹೊಸ ಮಿತ್ರರ ಮನೆಗಳಿಗೆ ನುಗ್ಗಿ ಊಟಗಳ ಸವಿ ಬಯಸುತ್ತಿದ್ದೇನೆ. ಸರ್ವರ ಕರುಣದ ಶಿಶು ನಾನು, ನಾಡತೊತ್ತು. ಹೀಗೆಯೇ ಮುಂದಕ್ಕೂ ನನ್ನನ್ನು ಪ್ರೇಮದಿಂದ ನಡಸಿಕೊಳ್ಳಬೇಕಾಗಿ ಬೇಡುತ್ತೇನೆ. ನನ್ನ ಜೀವಮಂತ್ರವನ್ನು ಉಚ್ಚರಿಸಿ ಕುಳಿತುಕೊಳ್ಳುತ್ತೇನೆ. ಸಿರಿಗನ್ನಡಂ ಗೆಲ್ಗೆ.

"ಋತವೊಂದೆ ಗೆಲ್ಲುವುದು, ಅನೃತವಲ್ತು;
ಅಮೃತವೆನೆ ವಿದ್ಯೆಯೆ, ಅವಿದ್ಯೆಯಲ್ತು;

ವಿಶ್ವಭಾರತಿ ಶರಣು, ಕಿರುತೀರ್ಥವಲ್ತು.
ಸರ್ವ ಜೀವಂಗಳುಂ ಮುಕ್ತಿಯಂ ಕಾಣ್ಗೆ ;
ದೇವರೊಳ್ ಪಗೆವವರ ಕಾಳಗಂ ಮಾಣ್ಗೆ ;
ಸಾವುದೆಲ್ಲಾ ಸತ್ತು, ಬಾನಾಳ್ಕೆ ಪೂಣ್ಗೆ.
ಜ್ಞಾನಧರ್ಮಂಗಳಿಂ ತಣ್ಪಿನಿಳೆ ತಾಳ್ಗೆ ;
ಶ್ರೀಜಯನ್ ನಿಡುಬಾಳಿ ನಮ್ಮನೊಲಿದಾಳ್ಗೆ ;
ಕನ್ನಡಿಗರುಸಿರಾಗಿ ಕನ್ನಡಂ ಬಾಳ್ಗೆ."

ಮೈಸೂರು ಸಂಸ್ಥಾನದ

ಮೊದಲನೆಯ ವಯಸ್ಕರ ಶಿಕ್ಷಣ ಸಮ್ಮೇಳನ

ಬೆಂಗಳೂರು, ೭-೬-೧೯೪೭

ಅಧ್ಯಕ್ಷರ ಸ್ವಾಗತ ಭಾಷಣ

ದಿವಾನ್ ಸಾಹೇಬರವರೆ, ಮಹಿಳೆಯರೆ, ಮಹನೀಯರೆ,

ಮೈಸೂರು ಸಂಸ್ಥಾನದ ಅಕ್ಷರ ಪ್ರಚಾರ ಸಮಿತಿಯವರ ಪರವಾಗಿ ಈ ವಯಸ್ಕರ ಶಿಕ್ಷಣ ಸಮ್ಮೇಳನಕ್ಕೆ ತಮ್ಮೆಲ್ಲರನ್ನು ಸಂತೋಷದಿಂದ ಸ್ವಾಗತಿಸುವುದು ನನಗೊಂದು ದೊಡ್ಡ ಗೌರವವೆಂದು ಎಣಿಸುತ್ತೇನೆ. ನಮ್ಮ ಆಹ್ವಾನವನ್ನು ಮನ್ನಿಸಿ ತಾವು ದಯಮಾಡಿಸಿರುವುದು ನಮ್ಮ ಭಾಗ್ಯ.

ವಿದ್ಯೆಯಿಲ್ಲದವನು ಪಶುವೆಂತಲೂ, ವಿದ್ಯೆಯಿಂದ ಅಮೃತವನ್ನು ಉಣ್ಣಬಹುದೆಂತಲೂ, ಯಾವುದೂ ಜ್ಞಾನಕ್ಕೆ ಸರಿಯಲ್ಲವೆಂತಲೂ ಹಿರಿಯರು ಹೇಳಿದ್ದಾರೆ. ಜ್ಞಾನಕ್ಕೆ ವಿದ್ಯೆಯೂ, ವಿದ್ಯೆಗೆ ಓದುಬರಹವೂ ತಳಹದಿ. ಈಗ ನಾಡಿನಲ್ಲಿ ಎಲ್ಲೆಲ್ಲೂ ಓದುಬರಹವನ್ನು ಹರಡಬೇಕೆಂಬ ಕೂಗು ಕೇಳಿಬರುತ್ತಿದೆ. ನೂರಕ್ಕೆ ೧೦, ೧೫, ೨೦ ಹೀಗೆ ಅಕ್ಷರಸ್ಥರಿದ್ದರೆ ಸಾಲದು; ಬೇಗ ನೂರಕ್ಕೆ ೫೦, ಕಡೆಗೆ ನೂರಕ್ಕೆ ೧೦೦, ಹೀಗೆ ಎಲ್ಲರೂ ವಿದ್ಯಾವಂತರಾಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂಬ ಗುರಿಯನ್ನು ವಿಚಾರಪರರೆಲ್ಲರೂ ಒಪ್ಪಿ, ಕೆಲಸಕ್ಕೆ ಕೈಹಚ್ಚುತ್ತಿದ್ದಾರೆ. ಈ ಚಳವಳಿ ಮೈಸೂರು ಸಂಸ್ಥಾನದಲ್ಲೆಲ್ಲಾ ಹಬ್ಬುತ್ತಿದೆ. ಘನ ಸರ್ಕಾರವೂ ಅಧಿಕಾರಿಗಳೂ, ಪ್ರಜಾನಾಯಕರೂ ಜಿಲ್ಲೆ ಜಿಲ್ಲೆಗಳಲ್ಲಿ, ಪ್ರಮುಖ ನಗರಗಳಲ್ಲಿ, ಈ ದೀಕ್ಷೆಯನ್ನು ವಹಿಸಿ ಕಾರ್ಯ ಮುಂದೆ ಸಾಗಬೇಕೆಂದು ತವಕಿಸುತ್ತಿದ್ದಾರೆ. ಮೈಸೂರು

ಬೆಂಗಳೂರು ನಗರಗಳಲ್ಲಿ ಎರಡು ಮೂರು ವರ್ಷಗಳಿಂದ ವಿಶ್ವ ವಿದ್ಯಾನಿಲಯದ ಕಡೆಯಿಂದಲೂ, ಉತ್ಸಾಹಿಗಳಾದ ನಾಗರಿಕರಿಂದಲೂ ಈ ಪ್ರಚಾರ ಬೆಳೆದು, ಶಿಕ್ಷಣ ಶಾಲೆಗಳೂ ತೆರೆದು, ತಕ್ಕಮಟ್ಟಿಗೆ ಆರಂಭಶೂರತ್ವ ನಡೆದಿದೆ. ಅದು ಅಲ್ಲಿಗೇ ನಿಲ್ಲಬಾರದೆಂದೂ, ಸಂಸ್ಥಾನಕ್ಕೆಲ್ಲಾ ಸಂತತವಾಗಿ ಚಳವಳಿಯೂ, ಕಾರ್ಯಫಲವೂ ಹಬ್ಬಬೇಕೆಂದೂ ನಿರ್ಧರಿಸಿ, ವಿದ್ಯಾಮಂತ್ರಿಗಳಾದ ಶ್ರೀ ಇಸ್ಮಾಯಿಲ್ ಅವರು ಕಾರ್ಯಕರ್ತರನ್ನೆಲ್ಲಾ ಕೂಡಿಸಿ, ಪರ್ಯಾಲೋಚಿಸಿ, ಒಂದು ಸಂಸ್ಥಾನ ಸಮಿತಿ ಇರಬೇಕೆಂಬ ಭಾವನೆಗೆ ಉತ್ತೇಜನ ಕೊಟ್ಟು, ಅದು ಒಂದು ರೂಪಕ್ಕೆ ಬರುವಂತೆ ಪ್ರೋತ್ಸಾಹಿಸಿದರು. ಇದರ ಫಲ ನಮ್ಮ ಸಂಸ್ಥಾನದ ಅಕ್ಷರ ಪ್ರಚಾರಸಮಿತಿ. ಇದು ಈಗ ಅಯ್ದು ತಿಂಗಳು ಕೆಲಸ ಮಾಡಿದೆ. ಸರ್ಕಾರದವರೂ, ಪ್ರಜೆಗಳಲ್ಲಿ ಶ್ರೀಮಂತರೂ, ಜಿಲ್ಲೆ ನಗರ ಸಭೆಗಳೂ ದ್ರವ್ಯಸಹಾಯವನ್ನು ಮಾಡುತ್ತಿವೆ. ಇನ್ನೂ ಹೆಚ್ಚಾಗಿ ಹಣ ಬೇಕಾಗಿದೆ ಎಂದು ಹೇಳಬೇಕಾಗಿಲ್ಲ : ಧನಕ್ಕಿಂತ ಹೆಚ್ಚಾಗಿ ಜನ ಬೇಕಾಗಿದೆ. ಸರ್ಕಾರದವರು ಈ ವರ್ಷ ಸಮಿತಿಗೆ ೧೨,೫೦೦ ರೂಪಾಯಿಗಳನ್ನು ಕೊಟ್ಟಿದ್ದಾರೆ; ಮುಂದಿನ ವರ್ಷಕ್ಕೆ ದಿವಾನ್ ಸಾಹೇಬರವರು ಮೊನ್ನೆ ಪ್ರಜಾಪ್ರತಿನಿಧಿ ಸಭೆಯಲ್ಲಿ ಅಪ್ಪಣೆಕೊಡಿಸಿದಂತೆ ೨೦,೦೦೦ ರೂಪಾಯಿಗಳನ್ನು ಒದಗಿಸಿ, ಆವಶ್ಯಕ ಬಿದ್ದರೆ ಇನ್ನೂ ಹೆಚ್ಚಾಗಿ ಕೊಡುವುದಾಗಿ ಭರವಸೆ ಕೊಟ್ಟಿದ್ದಾರೆ. ಸಮಿತಿಯವರು ರೀತಿ ನೀತಿಗಳನ್ನು ಏರ್ಪಡಿಸಿ, ಅಕ್ಷರಮಾಲೆಯ ಪಟ, ಓದುವ ಮೊದಲ ಪುಸ್ತಕಗಳು. ವಯಸ್ಕರ ತಿಳಿವಳಿಕೆಯ ಪುಸ್ತಕಮಾಲೆ, ಭಂಡಾರ ಮುಂತಾದ ಪ್ರಕಟನ ಕಾರ್ಯವನ್ನು ಕೈಕೊಂಡಿರುತ್ತಾರೆ. ನಮ್ಮ ಸಂಘಟನ ಕಾರ್ಯದರ್ಶಿಗಳಾದ ಶ್ರೀ|| ಎಸ್. ವಿ. ಶ್ರೀನಿವಾಸರಾಯರು ಜಿಲ್ಲಾ ಸಮ್ಮೇಳನಗಳಲ್ಲೂ, ನಗರ ಸಭೆಗಳಲ್ಲೂ ಪ್ರಚಾರಕಾರ್ಯ ನಡಸಿ, ಸಂಸ್ಥಾನಾದ್ಯಂತ ಶಾಲೆಗಳನ್ನು ತೆರೆಯುವಂತೆ ಏರ್ಪಡಿಸುತ್ತಿದ್ದಾರೆ. ಅಕ್ಷರ ಪ್ರಚಾರದ ಎಲ್ಲಾ ಶಾಲೆಗಳೂ ಸಂಸ್ಥೆಗಳೂ, ಸಂಸ್ಥಾನ ಸಮಿತಿಗೆ ಅಂಗವಾಗಿ ಸೇರಿ ಅದರಿಂದ ದ್ರವ್ಯಸಹಾಯವನ್ನು ಪಡೆಯಬಹುದಾಗಿದೆ.

ನಾಡ ಹಿರಿಯರೆ, ತಮ್ಮ ಸಹಾನುಭೂತಿ, ಸಹಾಯ, ಸಲಹೆಗಳಿಂದ ಅಗಾಧವೂ ಅಪಾರವೂ ಆದ ಆದರೆ ಅತ್ಯಗತ್ಯವಾದ ನಮ್ಮ ಕಾರ್ಯದಲ್ಲಿ ನಮಗೆ ಧೈರ್ಯವೂ ಮಾರ್ಗದರ್ಶನವೂ ಉಂಟಾಗುವುದೆಂಬ ನಂಬಿಕೆ

ಯಿಂದ ಈ ಸಮ್ಮೇಳನವನ್ನು ಕರೆದಿರುತ್ತೇವೆ. ಪ್ರಜಾಪ್ರತಿನಿಧಿ ಸಭೆಯ ಈ ಸೇರ್ಪಡೆಯ ಸದವಕಾಶವನ್ನು ಉಪಯೋಗಿಸಿಕೊಂಡಿದ್ದೇವೆ. ತಾವು ಜನತೆಯ ಕೆನೆ. ಆಡಳಿತದ ಮೊನೆ. ವಿದ್ಯಾವಂತರಾದ ಪ್ರಜೆಗಳಮೇಲೆ ಪ್ರಜಾಪ್ರಭುತ್ವ ನಿಂತಿದೆ ಎಂಬುದನ್ನು ಅರಿತವರು. ಅದು ಬರಿಯ ಬಲವಲ್ಲ; ಬರಿಯ ಬಹುಮತವೇ ಅಲ್ಲ; ಹಕ್ಕುಗಳಿಗಿಂತಲೂ ಹೆಚ್ಚಾಗಿ ಜವಾಬ್ದಾರಿಯನ್ನು ಬಯಸುವ ಬಲ್ಲಾಳುಗಳ ಬಾಳಿಕೆಯ ಆಳಿಕೆ. ಇದೇ ನಾಡ ಗುರಿ; ಬೇಗ ಆಗಬೇಕೆಂಬ ಹಂಬಲು. ಆದ್ದರಿಂದ ತಾವೆಲ್ಲರೂ ಇಲ್ಲಿಗೆ ದಯಮಾಡಿಸಿ ಸ್ಫೂರ್ತಿಯನ್ನು ಕೊಟ್ಟಿರುವಂತೆ ತಮ್ಮ ಅನುಭವ ಅಭಿಪ್ರಾಯಗಳನ್ನು ನೀಡಿ ನಮ್ಮ ಕೆಲಸ ಹಗುರಮಾಡಬೇಕೆಂದು ಬೇಡುತ್ತೇನೆ. ತಮ್ಮ ತಮ್ಮ ಸ್ಥಳಗಳಲ್ಲಿ ಈ ದೊಡ್ಡ ಪ್ರಯತ್ನಕ್ಕೆ ಉತ್ತೇಜನ ಕೊಡಬೇಕೆಂದು ಸಮಿತಿಯ ಪರವಾಗಿ ಪ್ರಾರ್ಥಿಸುತ್ತೇನೆ.

ಇನ್ನು, ಮತ್ತೊಮ್ಮೆ ತಮ್ಮೆಲ್ಲರಿಗೂ ಸ್ವಾಗತವನ್ನು ಕೋರಿ, ಈ ಸಮ್ಮೇಳನವನ್ನು ತೆರೆಯುವುದಕ್ಕೆ ದಯವಿಟ್ಟು ಒಪ್ಪಿರುವ ಶ್ರೀ. ಮಾಧವರಾಯರವರಿಗೂ, ಪ್ರೋತ್ಸಾಹ ಭಾಷಣವನ್ನು ಮಾಡಲು ದಯವಿಟ್ಟು ಒಪ್ಪಿರುವ ಶ್ರೀ. ಇಮಾಂ ಅವರಿಗೂ, ಅಕ್ಷರಪ್ರಚಾರದಲ್ಲಿ ಮೊದಲಿಂದಲೂ ಉತ್ಸಾಹವಿಟ್ಟು, ಈ ಸಮ್ಮೇಳನದ ಅಧ್ಯಕ್ಷಪದವಿಯನ್ನು ಅಲಂಕರಿಸಲು ಒಪ್ಪಿರುವ ಶ್ರೀ. ಚಂದ್ರಶೇಖರಯ್ಯನವರಿಗೂ, ಭಾಷಣಮಾಲೆಯ ಮೂಲಕ ತಮ್ಮ ಅಭಿಪ್ರಾಯಗಳನ್ನು ಸೂಚಿಸಲು ಒಪ್ಪಿ ಅನುಗ್ರಹ ಮಾಡಿರುವ ಮಾನ್ಯ ಭಾಷಣಕಾರರಿಗೂ ನಮ್ಮ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

ಈಗ ಶ್ರೀ. ಮಾಧವರಾಯರವರು ತಮ್ಮ ಆರಂಭ ಭಾಷಣವನ್ನು ದಯಪಾಲಿಸಬೇಕಾಗಿ ಅವರನ್ನು ಪ್ರಾರ್ಥಿಸುತ್ತೇನೆ.

ಬೀಳ್ಕೋಡಿಗೆ*

ಕನ್ನಡದ ಕೆಲಸದಲ್ಲಿ ನನಗೆ ನೆರವಾದ ಮಾನ್ಯ ಮಿತ್ರರಿಗೆಲ್ಲ ನನ್ನ ಪ್ರೀತಿಯ ವಂದನೆಗಳು.

* ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷ ಪದವಿಯಿಂದ ಬಿಡುಗಡೆಯಾದಾಗ ಬರೆದದ್ದು.

ಪರಿಷತ್ತಿನ ಉಪಾಧ್ಯಕ್ಷನ ಹೊಣೆಗಾರಿಕೆಯನ್ನು ಇಳುಹುತ್ತ, ಅದನ್ನು ಸರಿಯಾದ ಕೈಯಲ್ಲಿ ಬಿಟ್ಟಿರುತ್ತೇನೆಂದು ಸಂತೋಷಪಡುತ್ತೇನೆ. ಶ್ರೀ. ಶಾಸ್ತ್ರಿಯವರಿಗೆ ಜಯವಾಗಲಿ.

ಪರಿಷತ್ತಿನ ನಮ್ಮ ಆಸೆ, ನೋಟ, ಕನಸು ಬಲು ದೊಡ್ಡದು. ಕನ್ನಡದ ಸಾರ್ವಜನಿಕ ವಿದ್ಯಾಪೀಠ, ಹೊಸ ಕರ್ನಾಟಕವನ್ನು ರೂಪಿಸುತ್ತಿರುವ ಕನ್ನಡ ಮ್ಮನ ಗುಡಿ ಅದು. ಯಾರೊಬ್ಬನ ಸೇವೆಯೂ ಅಲ್ಲಿ ಅಳಿಲ ಸೇವೆಗಿಂತ ಹೆಚ್ಚಾಗದು. ನನ್ನಿಂದಾದಷ್ಟು ದುಡಿದೆನೋ ಇಲ್ಲವೋ ಅನ್ನುವುದು ನನ್ನ ಅಳುಕು.

ಕನ್ನಡಿಗರು ಎಚ್ಚತ್ತಿದ್ದೀರಿ. ಬೇಗ ಒಂದಾಗಿ, ಮುಂದಾಗಿ. ಕರ್ನಾಟಕ ರತ್ನಸಿಂಹಾಸನದ ದಿವ್ಯ ತೇಜಸ್ಸನ್ನು ಎಲ್ಲರೂ ಕೂಡಿ ಬೆಳಸಿ; ನಿಮ್ಮ ಹೆಮ್ಮೆಯ ಒಡವೆಯನ್ನಾಗಿ ಮಾಡಿಕೊಳ್ಳಿ. ಕನ್ನಡ ಬಾವುಟ ಒಂದಾಗಲಿ.

ನನ್ನ ಕನ್ನಡದ ಉರುಬಿನಲ್ಲಿ ಕಾವುನೋವುಗಳಿಗೆ ಎಡೆ ಕೊಟ್ಟಿದ್ದೇನೆ. ಕನ್ನಡಕ್ಕಾಗಿ, ಕನ್ನಡ ನಾಡಿಗಾಗಿ. ಹಟಕ್ಕಲ್ಲ, ನಾನು ಕಂಡ ದಿಟಕ್ಕಾಗಿ. ಮರೆತುಬಿಡಿ, ಮನ್ನಿಸಿಬಿಡಿ : 'ನೆನೆಯದಿರಿ ಹಿಂದಿನದನೆಲ್ಲ.'

ಇನ್ನು ನನ್ನ ಇನಿಯ ಕೆಳೆಯರಿಗೆ, ಹಿರಿಯರಿಗೆ. ಕನ್ನಡನಾಡನ್ನು ಸುತ್ತುವುದು ನನಗೊಂದು ಪವಿತ್ರ ಯಾತ್ರೆಯಾಗಿತ್ತು. ಮೈಸೂರಿನಲ್ಲಿ, ಹೊರಗೆ—ಮಡಕೇರಿ ಮೊದಲು ಬೆಳವಡಿ ಕಡೆಯಾಗಿ-ಯಾರ ಹೆಸರನ್ನು ಹೇಳಲಿ, ಯಾರ ಹೆಸರನ್ನು ಬಿಡಲಿ?—ಜೈನರಲ್ಲಿ, ವೀರಶೈವರಲ್ಲಿ, ಮಾಧ್ವರಲ್ಲಿ, ಶ್ರೀವೈಷ್ಣವರಲ್ಲಿ, ಸ್ಮಾರ್ತರಲ್ಲಿ, ಒಕ್ಕಲಿಗರಲ್ಲಿ, ಮುಸಲ್ಮಾನರಲ್ಲಿ, ಕ್ರೈಸ್ತರಲ್ಲಿ—ಗಂಡಸರು, ಹೆಂಗಸರು, ಸಾಲೆಯ ಮಕ್ಕಳು—ಎಲ್ಲರೂ ನನಗೆ ಒಳ್ಳೆಯಮಾತು ಆಡಿದ್ದೀರಿ; ನಲುಮೆಯ ನಡತೆಯನ್ನು ನಡೆದಿದ್ದೀರಿ; ಬೆನ್ನುತಟ್ಟಿ ಮುಂದೆ ಬಿಟ್ಟಿದ್ದೀರಿ-ಕನ್ನಡದ ಅಣುಗನೆಂದು. ಏನು ಚೆಲುವು ಕನ್ನಡ ನಾಡಿನದು, ಏನು ನಯ ಕನ್ನಡ ಮಕ್ಕಳದು! ನಿಮ್ಮ ಪ್ರೇಮವನ್ನೆಲ್ಲಾ ನನ್ನ ಹೃದಯದಲ್ಲಿ ತುಂಬಿಕೊಂಡಿದ್ದೇನೆ—ಹಿಡಿಯಲಾರದೆ ಅದು ಬಿರಿಯುತ್ತಿದೆ, ದಾಳಿಂಬೆಯ ಹಣ್ಣಿನಂತೆ! ನಾನು ಇದರಲ್ಲಿ ಧನ್ಯ.

ಒಲುಮೆಗಿಂತ ಗೆಲವಿಲ್ಲ. ಒಕ್ಕೂಟಕ್ಕಿಂತ ಬಲವಿಲ್ಲ. ಸಣ್ಣದನ್ನು ದೊಡ್ಡದು ಮಾಡದೆ, ದೊಡ್ಡದನ್ನು ಸಣ್ಣದು ಮಾಡದೆ, ತಾಳ್ಮೆ, ಶಿಸ್ತು, ಅಚ್ಚುಕಟ್ಟು, ಒಕ್ಕೂಟ, ಒಲುವೆ ಇವು ಕಲೆತರೆ ಕನ್ನಡನಾಡಿನ ಮಣ್ಣು

ಹೊನ್ನಾಗುವುದು ; ಬಾಳು ಬಾನಾಗುವುದು.

ಧರ್ಮದ ಹೊಸಹುಟ್ಟು, ಭಾರತದ ಬಿಡುಗಡೆ, ಕರ್ನಾಟಕದ ಒಕ್ಕೂಟ, ಕನ್ನಡದಲ್ಲಿ ವಿಶ್ವಸಂಸ್ಕೃತಿ ಇವು ಎಲ್ಲೆಲ್ಲಿ ಮಿಡಿಯುತ್ತಿವೆ ಅಲ್ಲಿ ನಾನೂ ಮಿಡಿಯುತ್ತಿದ್ದೇನೆ. ನನ್ನ ಬಾಳಿಕೆಯಲ್ಲಿ ಮಿಕ್ಕಿರುವ ದುಡಿತವೂ ಇವಕ್ಕೇ.

ನಮಸ್ಕಾರ.

ಬೀಳ್ಕೊಂಡಿಂ, ಎನಗೆ ಜೀವಾನಂದಮಾಗಿರ್ದರೆಲ್ಲರ್ ಬೀಳ್ಕೊಂಡಿಂ, ನಾನ್ ಪೋಗಿ ಬರ್ಪೆನ್ !

೨೧-೧೨-೪೨ ನಿಮ್ಮ "ಕರುಣದ ಶಿಶು"

ಬೆಂಗಳೂರು. ಬಿ. ಎಂ. ಶ್ರೀಕಂಠಯ್ಯ.

ಮೈಸೂರು ಗಣತಿ (೧೯೪೧)

ಜನಸಾಮಾನ್ಯರಿಗಾಗಿ ಸಂಗ್ರಹ ವರದಿ

"ಅಖಿಲಭಾರತ ಗಣತಿ (ಸೆನ್ಸಸ್) ಒಂದು ಅಪೂರ್ವವಾದ ವಿಶಿಷ್ಟತೆಯಿಂದ ಕೂಡಿದೆ. ಏಕೆಂದರೆ ನಲವತ್ತು ಕೋಟಿ ಜನರ ಬದುಕಿನ ರೀತಿ, ನಾಡಿನ ಏಳಿಗೆಯ ಸ್ಥಿತಿಗತಿಗಳನ್ನು ಅರಿತುಕೊಳ್ಳಬೇಕಾದ ದೊಡ್ಡಕಾರ್ಯ ಪ್ರಜಾವರ್ಗದ ಸಂಪೂರ್ಣ ಸಹಕಾರದಿಂದ ನಡೆಯುತ್ತದೆ. ಪ್ರಪಂಚದ ಇನ್ನಾವ ದೇಶದಲ್ಲಿಯೂ ಈ ರೀತಿಯ ಏರ್ಪಾಟಿಲ್ಲ. ಭಾರತದಂಥ ಇಷ್ಟು ದೊಡ್ಡ ದೇಶದ ಗಣತಿಕಾರ್ಯಕ್ಕೆ ಈಗ ನಡೆಯುತ್ತಿರುವ ಪ್ರಮಾಣದಲ್ಲಿ, ಕೋಟಿಗಟ್ಟಲೆ ಹಣವನ್ನೊದಗಿಸಿಕೊಳ್ಳಬೇಕಾಗುತ್ತಿತ್ತು. ಜನ ಇದನ್ನು ರಾಷ್ಟ್ರಕಾರ್ಯವೆಂದು, ಸಮಾಜ ಸೇವೆಯೆಂದು ಕರ್ತವ್ಯ ಬುದ್ಧಿಯಿಂದ ಸರಕಾರದೊಡನೆ ಸಹಕರಿಸಿ, ಪ್ರೇಮದ ಸೇವೆಯನ್ನು ಸಲ್ಲಿಸಿ ಸ್ವಲ್ಪ ವೆಚ್ಚದಲ್ಲಿ, ಎಂದರೆ ಕೇವಲ ಅರ್ಧಕೋಟಿ ರೂಪಾಯಿ ವೆಚ್ಚದಲ್ಲಿ, ಗಣತಿಕಾರ್ಯವನ್ನು ನಿರ್ವಹಿಸಿದ್ದಾರೆ. ಇಷ್ಟು ಕೆಲಸ ಅಮೆರಿಕದಲ್ಲಿ ನಡೆಯಲು ಖರ್ಚು ಎಂದರೆ ೧೨॥ ಕೋಟಿ ವೆಚ್ಚವಾಗುತ್ತದೆ. ಗಣತಿಕಾರ್ಯದಲ್ಲಿ ಪ್ರಜೆಗಳ ಈ ಪ್ರಧಾನಪಾತ್ರ ಮೊದಲಿಂದ ಭಾರತದಲ್ಲಿ ಸಂಪ್ರದಾಯವಾಗಿ ನಡೆದು ಬರುತ್ತಿದೆ. ಇದು ಭಾರತಕ್ಕೆ ಗೌರವವನ್ನು ತರತಕ್ಕ ಅಂಶವಾಗಿದೆ."

ಎಂಬ ತಾತ್ಪರ್ಯದ ಮಾತುಗಳಿಂದ ಅಖಿಲ ಭಾರತದ ಸೆನ್ಸಸ್ ಕಮಿಷನ ರಾದ ಶ್ರೀ ಯೇಟ್ಸ್, ಸಿ.ಐ.ಇ., ಐ.ಸಿ.ಎಸ್. ಅವರು ಭರತಖಂಡದ ಗಣತಿ ಹೇಗೆ ನಡೆಯುತ್ತಿದೆಯೆಂಬ ವಿಷಯವನ್ನು ಪ್ರಸ್ತಾವಿಸುತ್ತ, ಮೈಸೂರು ಸಂಸ್ಥಾನದ ಸೆನ್ಸಸ್ ಸೂಪರಿಂಟೆಂಡೆಂಟರಾದ ಶ್ರೀ. ಪಿ. ಎಚ್. ಕೃಷ್ಣ ರಾಯರು ಅಖಿಲಭಾರತ ಗಣತಿಯು (೧೯೪೧) ಸಂಬಂಧವಾಗಿ ನಡೆಯ ಬೇಕೆಂದು ನಿರ್ಧಾರವಾಗಿದ್ದ ಸಂಕಲ್ಪವನ್ನೂ ಯೋಜನೆಯನ್ನೂ ಅತ್ಯಂತ ನಿಷ್ಠೆಯಿಂದಲೂ ದಕ್ಷತೆಯಿಂದಲೂ ಕಾರ್ಯರೂಪಕ್ಕೆ ತಂದಿದ್ದಾರೆಂದು ಹೇಳಿ, ಅವರು ಜನಸಾಮಾನ್ಯಕ್ಕಾಗಿ ಪ್ರಕಟಿಸಿರುವ **ಸಂಗ್ರಹ ವರದಿ** ಆಬಾಲವೃದ್ಧರಿಗೂ ಆಕರ್ಷಕವಾಗಿರುವ ರೀತಿಯಲ್ಲಿ ರಚಿತವಾಗಿದೆಯೆಂದೂ, ಈ ಪುಸ್ತಕವನ್ನು ಸಿದ್ಧಗೊಳಿಸುವುದರಲ್ಲಿ ಶ್ರೀ. ಕೃಷ್ಣರಾಯರು ಅಂಕಿ ಲೆಕ್ಕ ಗಳಿಂದ ಕೂಡಿದ, ಜನಸಾಮಾನ್ಯಕ್ಕೆ ಸ್ವಾರಸ್ಯವಾಗಲಾರದ ಒಣವಿವರ ಗಳನ್ನು ರುಚಿಕಟ್ಟಿ, ಎಂಥವರು ಬೇಕಾದರೂ ಕತೆಯಂತೆ ಓದಬಹುದಾದ ಸವಿ ಬರಹವಾಗಿ ಮಾಡಿದ್ದಾರೆಂದು ಹೊಗಳಿದ್ದಾರೆ.

ವಾಸ್ತವವಾಗಿ ಈ ಪುಸ್ತಕವೂ, ಆಧುನಿಕ ಮೈಸೂರಿನ ಮುನ್ನಡೆ ಯನ್ನು ಕನ್ನಡಿಯಲ್ಲಿ ಬಿಂಬಿಸಿದಂತೆ ಅಡಕವಾಗಿ ತೋರಿಸಿರುವಂತೆ ಶ್ರೀಕೃಷ್ಣ ರಾಯರೂ ಮತ್ತು ಅವರೊಂದಿಗೆ ಶ್ರದ್ಧೆಯಿಂದ ದುಡಿದಿರುವ ಗೆಳೆಯರೂ ಅಭಿನಂದನೆಗೆ ಪಾತ್ರರು. ಮುದ್ದಾದ ಅಚ್ಚು, ೧೬ ಸುಂದರವಾದ ಭೂಪಟ ಗಳು, ೫ ನಕ್ಷೆಗಳು (ಬಣ್ಣದವೂ ಸೇರಿ), ೨೩ ಭಾವಚಿತ್ರಗಳು. ಬೆಲೆ ಎಲ್ಲರ ಕೈಗೆ ನಿಲುಕುವಷ್ಟು — ಕೇವಲ ೧ ರೂ. ೮ ಆಣೆ. — ಇದೊಂದು "ಸೊಬಗಿನ ಸುಗ್ಗಿ".

ಇಂಗ್ಲಿಷಿನಲ್ಲಿ ಪ್ರಕಟವಾಗಿರುವ ಕೈಪಿಡಿ ಸದ್ಯದಲ್ಲಿಯೇ ಕನ್ನಡದಲ್ಲೂ ಬರುವುದೆಂದು ಕೇಳಿ ಹರ್ಷಿಸುತ್ತೇವೆ; ಮತ್ತು ಅದರ ಬರವನ್ನು ಎರಡು ಕಾರಣಗಳಿಂದ ಎದುರು ನೋಡುತ್ತಿದ್ದೇವೆ. ಮೊದಲನೆಯದಾಗಿ ಕನ್ನಡ ನಾಡ ಒಂದು ಮುಖ್ಯ ಪ್ರದೇಶದ ಸ್ಥಿತಿಗತಿಗಳು ಕನ್ನಡಿಗರೆಲ್ಲರಿಗೂ ಕನ್ನಡ ದಲ್ಲಿಯೇ ದೊರೆಯುವಂತಹ ಸಂದರ್ಭ ಒದಗುವುದು; ಎರಡನೆಯದಾಗಿ, ಎಷ್ಟು ಮಂದಿ ಮೈಸೂರು ಸೆನ್ಸಸ್ ಕಾರ್ಯಕ್ಕೆ ಖಾಸಗಿಯಾಗಿ ನೆರವಾಗಿ ದ್ದಾರೆಂಬ ಅಂಶ ವರದಿಯಲ್ಲಿ ಸೂಚಿಸಿಲ್ಲ; ಸಾವಿರ ಗಟ್ಟಲೆಯಾಗಬಹುದು

—ಇವರೆಲ್ಲ ತಮ್ಮ ಪ್ರೇಮದ ಸೇವೆಯ ಗುರುತಾಗಿ ಒಂದೊಂದು ಸಂಗ್ರಹ ವರದಿಯನ್ನು ತೆಗೆದಿಟ್ಟುಕೊಳ್ಳುವ ಸಂತೋಷ ಒದಗಿ ಬರುವುದು.

ಈ ಸಂಗ್ರಹ ವರದಿಯ ವಿಷಯವನ್ನು ಸಾಮಾನ್ಯವಿವರಣೆ, ಜನ ಸಂಖ್ಯೆ, ಜಾತಿ ಮತಗಳು, ಭಾಷೆ, ವಿದ್ಯಾಭ್ಯಾಸ ಮತ್ತು ಸಂಸ್ಕೃತಿ, ಆರ್ಥಿಕ ಮತ್ತು ಕಾಯಕ ಸಿತ್ಥಿಗಳು, ಮುಕ್ತಾಯ ಎಂದು ಏಳು ವಿಭಾಗಗಳಲ್ಲಿ ಅಡಕ ಮಾಡಿದ್ದರೂ, ಹಣ್ಣಿಗೆ ಉಂಡಿಗೆ ಹಾಕಿ ತೆಗೆದಂತೆ ಮೈಸೂರಿನ ಜನಜೀವನದ ಸ್ವರೂಪ, ಚೆಲುವು, ನೋವು, ಸಂಕಟ, ಆಶೆ, ಆಕಾಂಕ್ಷೆಗಳನ್ನು ಸುಮಾರು ೨೦೦ ಒಳವಿಭಾಗಗಳಲ್ಲಿ ವಿವರಿಸಲಾಗಿದೆ. ಒಂದೊಂದು ಪುಟ್ಟ 'ಪ್ರಬಂಧ'— "ಸಂಪ್ರದಾಯವಾಗಿ ಲಂಬಿಸಿ ಪ್ರಕಟವಾಗುತ್ತಿದ್ದ ವರದಿ, ಭಾರತ ಗಣತಿಯ ಮುಖ್ಯಾಧಿಕಾರಿಗಳಾದ ಶ್ರೀ. ಯೇಟ್ಸ್ ಅವರ ಸ್ಫೂರ್ತಿ ಸಲಹೆ ಮಾರ್ಗ ದರ್ಶನಗಳ ಫಲವಾಗಿ ಪ್ರಬಂಧದ ಪಾಕಕ್ಕಿಳಿಯಿತು" ಎಂಬುದಾಗಿ ಶ್ರೀಕೃಷ್ಣ ರಾಯರು ವಿನಯದ ಮಾತಿನಲ್ಲಿ ತಮ್ಮ ಪಾಂಡಿತ್ಯಕ್ಕೆ ತೆರೆಯೆಳೆದಿದ್ದರೂ, ಇಂಥ ಉತ್ಕೃಷ್ಟವಾದ ಕೆಲಸ ನಡೆಯಲು ಅನುಭವಿಗಳೂ ವಿದ್ವಾಂಸರೂ ಆದ ಶ್ರೀ ಕೃಷ್ಣರಾಯರ ನೇತೃತ್ವ ಮೈಸೂರು ಗಣತಿಯ ಕಾರ್ಯಕ್ಕೆ ಲಭಿಸಿದ್ದಕ್ಕಾಗಿ ಹರ್ಷಿಸಬೇಕಾಗಿದೆ. ಈ ಸಂದರ್ಭದಲ್ಲಿ ಪರಿಷತ್ತಿನಲ್ಲಿ ಕಳೆದ ವರ್ಷ ನಡೆದ ವಸಂತ ಸಾಹಿತ್ಯೋತ್ಸವ ಸಮಯದಲ್ಲಿ ಅವರು "ನಮ್ಮ ಮೈಸೂರು" ಎಂಬ ವಿಷಯವಾಗಿ ಮಾಡಿರುವ ಪುಟ್ಟ ಉಪನ್ಯಾಸದಲ್ಲಿ ಕಂಡ ಸ್ಫೂರ್ತಿಯ ಕಾವು ಇಲ್ಲಿ ವರದಿಯ ಉದ್ದಕ್ಕೂ ಮಿಂಚುತ್ತ ಪ್ರಜ್ವಲಿಸುತ್ತಿದೆ.

ಅನಕ್ಷರತೆಯನ್ನು ಈಡಾಡಿ, ವಿದ್ಯಾಭ್ಯಾಸವನ್ನು ಹರಡಿ, ವ್ಯವಸಾಯ, ಕೈಗಾರಿಕೆ, ವಾಹನ ಸಂಚಾರ ಸಾಧನಗಳನ್ನು ಉತ್ತಮಪಡಿಸಿ, ಆರ್ಥಿಕ ಸ್ಥಿತಿಯಲ್ಲಿ ಮೇಲ್ಪಾಟು ತಂದು, ನಿರುದ್ಯೋಗವನ್ನು ನಿವಾರಣೆ ಮಾಡಿ, ಉದ್ಯೋಗ ಕ್ಷೇತ್ರವನ್ನು ವಿಸ್ತಾರಗೊಳಿಸಿ—ಹೀಗೆಯೆ ಹಲವಾರು ಬಗೆಯಲ್ಲಿ ನಾಡನ್ನು ಕಟ್ಟಬಯಸಿ ದುಡಿಯುವವರಿಗೆ ಮೊದಲು ಗ್ರಹಿಸಿಕೊಂಡಿರ ಬೇಕಾದ ಅಗತ್ಯದ ಆಧಾರಗಳೆಲ್ಲ (Data) ಇಲ್ಲಿ ಸಿಕ್ಕುತ್ತವೆ.

'ನುಡಿ'ಯ ವಾಚಕರಿಗಾಗಿ ವರದಿಯ ಕೆಲವು ಭಾಗಗಳ ಸಾರಾಂಶ ವನ್ನು ಇಲ್ಲಿ ಕೊಟ್ಟಿದೆ.

೧. ವರದಿಯ ಲಕ್ಷ್ಯ: ಅಖಿಲ ಭಾರತ ಗಣತಿಯ ಒಟ್ಟು

ಚಿತ್ರದ ಒಂದು ಅಂಗವಾಗಿ ಮೈಸೂರನ್ನು ಗಣಿಸಿ, ಮೈಸೂರು ಸಂಸ್ಥಾನ ಬ್ರಿಟಿಷ್ ಅಧಿಕಾರದಿಂದ ಭಾರತೀಯ ಆಳಿಕೆಗೆ ಒಳಪಟ್ಟ ೧೮೮೧ನೆಯ ವರ್ಷದಿಂದ ೧೯೪೧ನೆಯ ವರ್ಷದವರೆಗೆ, ಸಂಸ್ಥಾನದ ಸಂಪತ್ತನ್ನು ಹೆಚ್ಚಿಸಲು, ವಿದ್ಯೆಯನ್ನು ಹರಡಲು, ಆರೋಗ್ಯವನ್ನು ಕಾಯಲು, ಜನರ ಎಲ್ಲ ಬಗೆಯ ಸತ್ವಗಳನ್ನು ಬೆಳೆಸಲು ಸಾಮಾಜಿಕ ಆರ್ಥಿಕ ಕ್ಷೇತ್ರಗಳಲ್ಲೂ ಸಂಸ್ಕೃತಿಯ ರಂಗದಲ್ಲೂ ಎಷ್ಟು ಕಾರ್ಯ ನಡೆದಿದೆ ಎಂಬ ಅಂಶವನ್ನು ವಿವರಿಸಲಾಗಿದೆ. ಈ ವರ್ಷದ ಗಣತಿಯ ಹೊಸ ದೃಷ್ಟಿ ವಿಶೇಷ ಇದು.

೨. **ಮೈಸೂರಿನ ಭಾಷೆ** (ಅನುಚ್ಛೇದ ೯೫-೧೦೬) : ಈ ವಿಭಾಗದಲ್ಲಿ, ಮೈಸೂರ ಹೊರಗಿನ ಕನ್ನಡ ಪ್ರದೇಶವನ್ನು ಹಕ್ಕಿಯ ನೋಟದಿಂದ ನೋಡಿದೆ. ಈ ಬಾರಿ ವರದಿಗೆ ಹೊಸದಾಗಿ ಸೇರಿರುವ ಕರ್ನಾಟಕದ ಭೂಪಟದಲ್ಲಿ (ಪು. ೨೩ಕ್ಕೆ ಎದುರು) ಕೋಲಾರವನ್ನೂ ದಕ್ಷಿಣ ಕನ್ನಡ ಜಿಲ್ಲೆಯನ್ನೂ ಬಿಟ್ಟಿದೆ—ಶೇಕಡ ೫೦ಕ್ಕೆ ಹೆಚ್ಚಾಗಿ ಕನ್ನಡ ಮಾತನಾಡುವವರ ಲೆಕ್ಕವನ್ನು ಕಾರಣವಾಗಿಟ್ಟುಕೊಂಡು. ಆದರೆ ಇಲ್ಲಿಯೂ ಆಡಳಿತದ ಮತ್ತು ವಿದ್ಯೆಯ ಭಾಷೆ ಕನ್ನಡವೇ—ಇವೂ ಬಹುಕಾಲದಿಂದ ಕನ್ನಡ ನಾಡೇ.

ಕೋಲಾರದಲ್ಲಿ ತೆಲುಗು ಮುಖ್ಯಭಾಷೆಯೆಂದೂ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತುಳು ಮುಖ್ಯ ಭಾಷೆಯೆಂದೂ ತೋರಿಸಿ ಹೀಗೆ ಅವೆರಡು ಪ್ರದೇಶಗಳನ್ನು ಕನ್ನಡದ ಗಡಿ ದಾಟಿಸಿರಬಹುದು. ಆದರೆ ಅದೇ ಭೂಪಟದ ಕೆಳಗೆ (ಪುಟ ೨೩) "ಭಾರತದ ಭಾಷೆಗಳ ಭೂಪಟ"ದಲ್ಲಿ ಕೊಟ್ಟಿರುವಂತೆ ಅವೆರಡು ಪ್ರದೇಶಗಳನ್ನೂ ಕನ್ನಡನಾಡಿನಲ್ಲಿ ಸೇರಿಸುವುದು ಸೂಕ್ತವಾಗಿದೆ.

ಇನ್ನು ಜನಸಂಖ್ಯೆಯ ಶೇಕಡಾವಾರು ಅಂಕಿಗಳ ವಿಷಯ: ಬಂದು ತೇಲಿಹೋಗುವ ಜನರ (Floating Population) ಸಂಖ್ಯೆಯನ್ನು ಬಿಟ್ಟು ಮನೆಯಲ್ಲಿ ತಮಿಳು, ತೆಲುಗು, ತುಳು, ಉರ್ದು ಮೊದಲಾದ ಭಾಷೆಗಳನ್ನು ಮಾತನಾಡಿದರೂ, ದೇಶಭಾಷೆಯಾದ ಕನ್ನಡವನ್ನು ತಿಳಿದು ವ್ಯವಹರಿಸಬಲ್ಲ ಜನರ ಸಂಖ್ಯೆಯನ್ನು ಸೇರಿಸಿ ವರದಿಯಲ್ಲಿ ಕೊಟ್ಟಿರುವ ಶೇಕಡಾವಾರು ಸಂಖ್ಯೆಗಳನ್ನು ಸರಿಪಡಿಸುವುದೂ ಸೂಕ್ತವಾಗಿದೆ. ಈಗ ಕೊಟ್ಟಿರುವ ಕನ್ನಡದ ಸಂಖ್ಯೆ ಸೇಕಡ ೭೦ ಆಗ ೯೦ರ ಮೇಲೆ ಆಗಬಹುದು.

೩. ವಿದ್ಯೆ ಮತ್ತು ಸಂಸ್ಕೃತಿ(ಅನುಚ್ಛೇದ ೧೦೭-೧೩೪): ವ್ಯಕ್ತಿಗಳಿಂದಲೂ. ಸಂಸ್ಥೆಗಳಿಂದಲೂ ಈ ಬಗ್ಗೆ ನಡೆಯುತ್ತಿರುವ ಚಟುವಟಿಕೆಗಳನ್ನು ಬಹು ಚೆನ್ನಾಗಿ ವಿವರಿಸಿವೆ. ೫೩ನೆಯ ಪಟ್ಟಿಯಿಂದ ೫೬ನೆಯ ಪಟ್ಟಿಯವರೆಗೆ ಕೊಟ್ಟಿರುವ ಅಕ್ಷರತೆಯ ವಿಷಯವಾದ ಅಂಕಿ ವಿವರಗಳು ಅಕ್ಷರಪ್ರಚಾರ ಕ್ಷೇತ್ರದಲ್ಲಿ ದುಡಿಯುತ್ತಿರುವವರಿಗೆ ಅವರ ಹೊಣೆಯನ್ನು ಜ್ಞಾಪಿಸಿ ಕೆಲಸವನ್ನು ತ್ವರೆಗೊಳಿಸಬೇಕಾದ ಆವಶ್ಯಕತೆಯನ್ನು ಕೂಗಿ ಹೇಳುವಂತಿವೆ.

ಸರ್. ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲಿ ನಾಡು ಹಲವು ದಿಕ್ಕಿನಲ್ಲಿ ಮುಂದುವರಿಯಲು ಬಹುಮುಖವಾದ ಏರ್ಪಾಟುಗಳನ್ನು ಕೈಗೊಳ್ಳಲಾಯಿತಷ್ಟೆ. ಮುಖ್ಯವಾಗಿ ವಿದ್ಯಾಭ್ಯಾಸ, ಆರ್ಥಿಕಕ್ಷೇತ್ರ, ಸಂಸ್ಕೃತಿ ರಂಗಗಳಲ್ಲಿ ತೀವ್ರವಾದ ಕೆಲಸ ಆರಂಭವಾಯಿತು. ಈಚೆಗೆ ಸರಕಾರದ ಹಾಗೂ ಖಾಸಗಿ ಸಂಸ್ಥೆಗಳ ಆಶ್ರಯದಲ್ಲಿ ಇನ್ನೂ ಹೆಚ್ಚಿನ ಕೆಲಸ ನಡೆಯುತ್ತಿರುವುದು ಶುಭ ಚಿಹ್ನೆಯಾಗಿದೆ. ಇತ್ತೀಚಿನ ಬಹುಮುಖ್ಯವಾದ ಪ್ರಯತ್ನಗಳೆಂದರೆ ಕನ್ನಡ ಸಾಹಿತ್ಯಪರಿಷತ್ತಿನ ಸಾಹಿತ್ಯ ಸಂಸ್ಕೃತಿ ಚಟುವಟಿಕೆಗಳು ;ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರೋಪನ್ಯಾಸ ಮಾಲೆಗಳು ಮತ್ತು ಪುಸ್ತಕ ಪ್ರಕಟನೆಗಳು ; ಮೈಸೂರು ಸಂಸ್ಥಾನದ ಅಕ್ಷರಪ್ರಚಾರ ಸಮಿತಿಯ ವಯಸ್ಕರ ವಿದ್ಯಾಭ್ಯಾಸ ಯೋಜನೆ. ಪರಿಷತ್ತು ಜನಸಾಮಾನ್ಯರ ವಿದ್ಯಾಪೀಠವಾಗಬೇಕೆಂಬ ಹೆಬ್ಬಯಕೆಯಿಂದ ಸಾಹಿತ್ಯ ಪರೀಕ್ಷೆಗಳನ್ನು ಮೈಸೂರಿನಲ್ಲಿ ಮಾತ್ರವಲ್ಲದೆ ಇಡಿಯ ಕರ್ನಾಟಕದಲ್ಲಿ ನಡಸುತ್ತ ಜನತೆಯಲ್ಲಿ ತಿಳಿವಳಿಕೆಯ ಮಟ್ಟವನ್ನು ಹೆಚ್ಚಿಸಲು ಪ್ರಯತ್ನಿಸುತ್ತಿರುವುದನ್ನು ಜನ ಅರಿತಿದೆ. ಇವುಗಳನ್ನು ಜ್ಞಾಪಿಸಿ ವರದಿಯಲ್ಲಿ ಶ್ರೀ ಕೃಷ್ಣರಾಯರು ಪರಿಷತ್ತಿನ ಸ್ಥಾಪನೆ (೧೯೧೫), ಅದರ ಬೆಳ್ಳಿಯಹಬ್ಬ (೧೯೪೦), ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ, (೧೯೧೭), ಅದರ ಮೊದಲ ಘಟಿಕೋತ್ಸವ ಕಾಲದಲ್ಲಿ ಆಳಿದ ಮಹಾಪ್ರಭುಗಳಾದ ಶ್ರೀ ಕೃಷ್ಣರಾಜಒಡೆಯರವರು ವಿಶ್ವವಿದ್ಯಾನಿಲಯದ ಮುಂದೆ ಇಟ್ಟ ಎರಡು ದೊಡ್ಡ ಗುರಿಗಳು—(೧) ಕನ್ನಡ ಸಾಹಿತ್ಯಕ್ಕೂ ದ್ರಾವಿಡ ಭಾಷೆಗಳ ಅಧ್ಯಯನಕ್ಕೂ ವಿಶೇಷ ಪ್ರೋತ್ಸಾಹ ; (೨) ಜನಸಾಮಾನ್ಯರಲ್ಲಿ ಭಾಷಣ ಹಾಗೂ ಪುಸ್ತಕ ಪ್ರಕಟನೆಗಳ ಮೂಲಕ ಜ್ಞಾನಪ್ರಸಾರ—.ಈ ಅಂಶಗಳನ್ನು

ಎತ್ತಿಹೇಳಿದ್ದಾರಲ್ಲದೆ, ಶ್ರೀಯುತರ ದೃಷ್ಟಿ ಮೈಸೂರನ್ನು ದಾಟಿ, ಇಡಿಯ ಕನ್ನಡನಾಡ ಮೇಲ್ಮೆಯನ್ನು ಲಕ್ಷಿಸಿದೆ. ಕರ್ನಾಟಕ ಏಕೀಕರಣ ಚಳುವಳಿಗೆ ಪರಿಷತ್ತಿನಿಂದ ದೊರೆತಿರುವ ಪ್ರೋತ್ಸಾಹವನ್ನೂ ಕನ್ನಡಿಗರಲ್ಲಿ ಈಚೆಗೆ ಮೂಡಿ ರುವ "ಕನ್ನಡಕುಲ"ದ ಹೆಮ್ಮೆಯ ಭಾವನೆಯನ್ನೂ ಉಲ್ಲೇಖಿಸಲಾಗಿದೆ.

ಶ್ರೀ ಮುಮ್ಮಡಿ ಕೃಷ್ಣರಾಜಒಡೆಯರ ಕಾಲದಿಂದ ಮೈಸೂರು ಅರಮನೆ ವಿಶೇಷವಾಗಿ ಹೊಸ ಕನ್ನಡ ಸಾಹಿತ್ಯ ಮುಂದುವರಿಯಲು ಪ್ರೋತ್ಸಾಹ ನೀಡುತ್ತ ಬಂದಿದೆ. ಶಿಲ್ಪ ಸಂಗೀತ ಕಲೆಗಳೂ ಏಳಿಗೆ ಪಡೆಯುತ್ತಿವೆ. ವೈಸ್‌ರಾಯ್ ಲಾರ್ಡ್ ಲಿನ್‌ಲಿತ್‌ಗೋ ಅವರು ಹೇಳಿರುವಂತೆ, ಆಳಿದ ನಾಲ್ಮಡಿ ಕೃಷ್ಣರಾಜ ಒಡೆಯರವರು ತಮ್ಮ ಆಳಿಕೆಯಿಂದ, ಪ್ರಜೆಗಳಲ್ಲಿ ಶಾಂತಿ ಸಾಮರಸ್ಯಗಳು ನೆಲೆಗೊಳ್ಳುವಂತೆ ಮಾಡಿ, ಮೈಸೂರಿನ ಸೌಂದರ್ಯವನ್ನೂ ಸೌಭಾಗ್ಯವನ್ನೂ ಹೆಚ್ಚಿಸಲು ಆದರ್ಶವಾದ ಏರ್ಪಾಟುಗಳನ್ನು ಕೈಕೊಂಡರು. ಇವರ ಆದರ್ಶವಾದ ಆಳಿಕೆ ಸ್ವದೇಶದಲ್ಲಿ ಮಾತ್ರವಲ್ಲದೆ ಪರದೇಶಗಳಲ್ಲೂ ಭಾರತ ನರೇಂದ್ರವರ್ಗದ ಪ್ರತಿಷ್ಠೆಯನ್ನು ಹೆಚ್ಚಿಸಿತು. ಶ್ರೀ ಜಯಚಾಮ ರಾಜಒಡೆಯರವರು ಈ ಆದರ್ಶವನ್ನು ನಡಸಿಕೊಡುತ್ತ ಅನುಗ್ರಹಿಸುತ್ತಿ ದ್ದಾರೆ. ಇವರಿಂದ ಕನ್ನಡ ಸಂಸ್ಕೃತಿಯ ಪ್ರತಿನಿಧಿಯಾಗಿ ಮೈಸೂರಿನ ನಯ ಬೆಳೆದು ಹರಡುತ್ತಿದೆ.

ವರದಿಯ ಉದ್ದಕ್ಕೂ ಶ್ರೀ ಕೃಷ್ಣರಾಯರು ಪ್ರಕಟಪಡಿಸಿರುವ ದೇಶಾ ಭಿಮಾನ ಎದ್ದು ಕಾಣುತ್ತಿದೆ. ಮೈಸೂರಿನ ಇದುವರೆಗಿನ ಪ್ರಗತಿಗಾಗಿ ಹೆಮ್ಮೆ, ಇನ್ನೂ ಪ್ರಗತಿ ಹೊಂದಬೇಕೆಂಬ ಹಾರೈಕೆ ಮಿಡಿಯುತ್ತಿವೆ. ಮಲೆನಾಡಿನ ಮತ್ತು ಹಳ್ಳಿಗಾಡಿನ ಅಭಿವೃದ್ಧಿ ಸಾಲದೆಂಬ ಅವರ ನೋವೂ, ಆ ಪ್ರದೇಶವನ್ನು ಮುಂದಕ್ಕೆ ತರಲು ಅವರು ಸೂಚಿಸುವ ಸಲಹೆಗಳೂ, ದೇಶದ ಯಾವ ಭಾಗವೂ ಏಳಿಗೆಯಲ್ಲಿ ಹಿಂದೆ ಬೀಳಬಾರದೆಂಬ ಅವರ ಆಶ ಯಕ್ಕೆ ಒಳ್ಳೆಯ ನಿದರ್ಶನವಾಗಿವೆ. ಒಟ್ಟನಲ್ಲಿ ಯಾವ ದಿಕ್ಕಿನಿಂದಲೂ ಮೈಸೂರಿನ ಮೇಲ್ಮೆಗೆ ಎಷ್ಟುಮಟ್ಟಿನ ಅಡ್ಡಿ ಆತಂಕಗಳೂ ಇರಬಾರ ದೆಂಬುದು ಅವರ ಇಷ್ಟ. ಈ ಸಂದರ್ಭದಲ್ಲಿ ಅವರು ಮೈಸೂರಿಗೆ ಬಂದು ನೆಲಸುವ ಪರಕೀಯರ ಮನೋಭಾವದಲ್ಲಿ ಯಾವ ವ್ಯತ್ಯಾಸ ಆಗಬೇಕೆಂಬ ವಿಷಯವಾಗಿ ಆಡಿರುವ ಮಾತುಗಳು ಗಮನಾರ್ಹವಾಗಿವೆ. ಇಲ್ಲಿ ಹಣ

ಗಳಿಸಿ ಹೊರಗೆ ವೆಚ್ಚಮಾಡುವ ಬುದ್ಧಿಯಿರದೆ, ತಾವೂ ಮೈಸೂರಿನ ಪ್ರಜೆಗಳೆಂದು ಭಾವಿಸಿ ನಾಡ ನುಡಿ ನಡೆಗಳಿಗೆ ಮರ್ಯಾದೆ ಕೊಟ್ಟು, ಅಮೆರಿಕದಲ್ಲಿ ನೆಲಸುವ ಜನ ಮಾಡುವಂತೆ ಹೊಂದಿಕೊಂಡು ಉದಾರವಾಗಿ ವರ್ತಿಸುವುದು ಲೇಸು ಎಂಬುದು ಅವರ ಅಭಿಪ್ರಾಯ. ಇದು ವಲಸೆಹೋಗಿ ನೆಲಸುವವರೆಲ್ಲರಿಗೂ ತಕ್ಕ ಉಪದೇಶವಾಗಿದೆ.

ಸಂಗ್ರಹವರದಿಯ ಈ ಅವಲೋಕನವನ್ನು ಮುಗಿಸುವುದಕ್ಕೆ ಮುಂಚೆ ಒಂದು ಮಾತು. ವರದಿಯಲ್ಲಿ ಉದಾಹರಿಸಿರುವ ನಾಲ್ಮಡಿ ಕೃಷ್ಣರಾಜ ಒಡೆಯರವರ ಕೆಲವು ಮಹಾ ವಾಕ್ಯಗಳೂ (ಉದಾ: ಪುಟ ೪೪, ೪೮, ೫೦) ಶ್ರೀ ಜಯಚಾಮರಾಜ ಒಡೆಯರವರು ಸಿಂಹಾಸನವೇರಿದಾಗ ಪ್ರಜಾಸೇವೆಯನ್ನು ದೀಕ್ಷೆಯಾಗಿ ಭಾವಿಸಿ, ಕೊಟ್ಟ ಸಂದೇಶವೂ (ಪುಟ ೫೦) ನಾಡಿನ ಯೋಗಕ್ಷೇಮವನ್ನು ಚಿಂತಿಸುವವರಿಗೆಲ್ಲ ಧೈರ್ಯವನ್ನೂ ಭರವಸೆಯನ್ನೂ ಕೊಡತಕ್ಕವಾಗಿವೆ ಎಂಬುದನ್ನು ಮರೆಯುವಂತಿಲ್ಲ. ನಾಲ್ಮಡಿ ಕೃಷ್ಣರಾಜ ಒಡೆಯರವರ ಕಾಲದಲ್ಲಿ ಕನ್ನಡ ನಾಡು ನುಡಿಗಳಲ್ಲೂ ಬದುಕಿನ ಇತರ ರಂಗಗಳಲ್ಲೂ ಜಾಗೃತಿಯುಂಟಾಗಿ, ನಾಡನ್ನು ಕಟ್ಟುವ ಕೆಲಸ ಮೊದಲಾಯಿತು. ಆ ಕೆಲಸ ಶ್ರೀ ಜಯಚಾಮರಾಜ ಒಡೆಯರವರ ಕಾಲದಲ್ಲಿ ಅಮೋಘವಾಗಿ ನಡೆದು, ಮೈಸೂರೂ ಇಡಿಯ ಕನ್ನಡನಾಡೂ ಎಲ್ಲಾ ಬಗೆಯಲ್ಲೂ ಮುನ್ನಡೆದು, ನಮ್ಮ ನಾಡು ಹಿಂದಿನ ಹಿರಿಮೆಯನ್ನು ಮತ್ತೆ ಸಾಧಿಸಿ, ಜಗತ್ತಿನ ಒಟ್ಟು ಜೀವನದ ಸೌಂದರ್ಯವೂ ಸಂಸ್ಕೃತಿಯೂ ಸಮೃದ್ಧವಾಗಿ, ಶಾಂತಿ ಸಾಮರಸ್ಯಗಳು ಚಿರಕಾಲ ನೆಲೆಗೊಳ್ಳಲು ತನ್ನ ಪಾಲಿನ ಕಾಣಿಕೆಯನ್ನು ನೀಡಲಿ ಎಂಬುದೇ ಎಚ್ಚೆತ್ತ ಕನ್ನಡನಾಡಿನ ಹಾರೈಕೆಯಾಗಿದೆ. ಈ ಹಾರೈಕೆ ಸಿದ್ಧಿಸಬೇಕೆಂದು ಸರಿಯಾದ ದಾರಿಯಲ್ಲಿ ಕೆಲಸ ಮಾಡಲು ದೀಕ್ಷೆ ವಹಿಸುವವರಿಗೆ ಇಂಥ ಪುಸ್ತಕಗಳು ತಕ್ಕ ವಿವರಾಂಶಗಳನ್ನೂ ಮಾರ್ಗದರ್ಶನವನ್ನೂ ನೀಡುತ್ತವಾದ್ದರಿಂದ ಶ್ರೀ. ಪಿ. ಎಚ್. ಕೃಷ್ಣರಾಯರು ಪ್ರಕಟಿಸಿರುವ ಈ ಗ್ರಂಥವನ್ನು ಇಂಗ್ಲಿಷಿನಲ್ಲಾಗಲಿ ಕನ್ನಡದಲ್ಲಾಗಲಿ ಕನ್ನಡಿಗರೆಲ್ಲರೂ ಕೊಂಡು ಓದಿ ಗುರುತುಮಾಡಿ ಅರಗಿಸಿಕೊಳ್ಳಬೇಕೆಂದು ಆಗ್ರಹದಿಂದ ಸೂಚಿಸುತ್ತೇವೆ.

ಇಡಿಯ ಕರ್ನಾಟಕಕ್ಕೇ ಈ ಅಂಕಿ ಅಂಶಗಳು ದೊರೆಯುವಂತಿಲ್ಲ

ವಲ್ಲಾ ಎಂದು ವಿಷಾದಿಸಬೇಕಾಗಿದೆ. ಆ ಕಾಲ ಎಂದು ಬರುವುದೋ ?

ವಯಸ್ಕ ವಿದ್ಯಾರ್ಥಿಗಳಿಗೆ

ಬೆಳಕು ಒಂದು ವರ್ಷ ತುಂಬಿ ಎರಡನೆಯ ಹುಟ್ಟಿದ ಹಬ್ಬಕ್ಕೆ ನೆರೆದಿದೆ. ಈ ಸಂತೋಷದ ಸಮಯದಲ್ಲಿ ಅಕ್ಷರ ಪ್ರಚಾರ ಸಮಿತಿಯ ಶಾಲೆಗಳ ವಿದ್ಯಾರ್ಥಿಗಳಲ್ಲಿ ನನ್ನದೊಂದು ಬಿನ್ನಹ.

ಓದುಬರಹ ಕಲಿಸುವುದು ಏಕೆ?

ನಮ್ಮ ಸಮಿತಿ ಸಂಸ್ಥಾನದಲ್ಲೆಲ್ಲಾ, ಹೆಚ್ಚಾಗಿ ಹಳ್ಳಿಗಳ ಕಡೆ, ಶಾಲೆಗಳನ್ನು ತೆರೆಯುತ್ತಿದೆ. ಪುಸ್ತಕ ಭಂಡಾರಗಳನ್ನು ಇಡುತ್ತಿದೆ. ಓದುಬರಹ ಕಲಿಸಿ, ಓದುವ ಪುಸ್ತಕಗಳನ್ನು ಅಚ್ಚುಹಾಕಿ, ಪಾಠ ಹೇಳುವವರನ್ನು, ಓದುವ ಮಾರ್ಗ ತೋರಿಸುವವರನ್ನು ತಯಾರುಮಾಡಿ ನೇಮಿಸುತ್ತಿದೆ. ಇವೆಲ್ಲಾ ಏಕೆ ? ಎಲ್ಲರೂ ತಿಳಿದವರಾಗಬೇಕು ಅನ್ನುವ ಪವಿತ್ರವಾದ ಗುರಿಯಿಂದ. ಇದು ಹೊತ್ತು ಹೋಗದ ಒಂದು ಆಟ, ಬೇಡವಾದ ಒಂದು ಬಲವಂತದ ಕಾಟ ಎಂದು ಯಾರೂ ತಿಳಿದಿರಲಾರಿರಿ. ಪ್ರಜೆಗಳಲ್ಲಿ ಪ್ರೇಮವುಳ್ಳ ನಮ್ಮ ಶ್ರೀಮನ್ ಮಹಾರಾಜರವರು ದಿವ್ಯ ಸಂದೇಶದಿಂದ ನಮ್ಮನ್ನು ಪ್ರೋತ್ಸಾಹಿಸುವುದೂ, ಘನ ಸರ್ಕಾರದವರು ಈ ಬಾರಿ ಒಂದು ಲಕ್ಷ ರೂಪಾಯಿ ಸಹಾಯ ನೀಡಿ ನಮ್ಮ ಕೆಲಸಕ್ಕೆ ಬೆಂಬಲ ಕೊಟ್ಟಿರುವುದೂ, ಜಿಲ್ಲಾ ಬೋರ್ಡು ಮುಂತಾದ ಸ್ಥಳ ಸಂಸ್ಥೆಗಳೂ, ಉದಾರ ಮಹನೀಯರೂ ದಾನ ಸಹಾಯ ಮಾಡುತ್ತಿರುವುದೂ ಈ ಜನರ ಓದುಬರಹ ಎಷ್ಟು ದೊಡ್ಡ ಕೆಲಸವೆಂದು ನಿಮಗೆ ಮನದಟ್ಟುಮಾಡಿಕೊಡುತ್ತದೆ. ಇದನ್ನು ನೀವು ಚೆನ್ನಾಗಿ ಅರಿತು ನಮ್ಮ ಕಾರ್ಯವನ್ನು ಆಗಮಾಡಿಸಿ, ನೀವು ಪ್ರಯೋಜನ ಪಡೆದು, ದೇಶದಲ್ಲಿ ಜ್ಞಾನದ ಬೆಳಕು ತುಂಬುವಂತೆ ಮಾಡಬೇಕು. ಹಾಗೆ ಮಾಡುವಿರೆಂದು ನಾನು ನಂಬಿದ್ದೇನೆ.

ನಿಮ್ಮನ್ನು ಬಾಳಿಸಿ ನಾವೂ ಬಾಳಬೇಕು

ನಮ್ಮ ನಾಡಿನಲ್ಲಿ ಹಳ್ಳಿಗಳೇ ಹೆಚ್ಚು. ಹಳ್ಳಿ ಚೆನ್ನಾಗಿ ಬಾಳಿದರೆ, ಸೊಗಸಾದರೆ, ಪಟ್ಟಣದ ಬಾಳೂ ಸೊಗಸೂ ಹಸನೂ ಆಗುತ್ತದೆ. ನಮ

ಗಾಗಿ ಉಳುವವರು ನೀವು: ನೇಯುವವರು ನೀವು; ಕೂಲಿನಾಲಿ ದುಡಿಯುವ ನೀವೇ ನಮ್ಮ ನಾಡಿನ ಸಿರಿಯ ಅಡಿಗಲ್ಲು, ಒರೆಗಲ್ಲು. ನಿಮ್ಮನ್ನು ಬಾಳಿಸಿ ನಾವೂ ಬಾಳಬೇಕೆಂದು ಈ ಪವಿತ್ರ ಸೇಯನ್ನು ನಾವು ಕೈಕೊಂಡಿದ್ದೇವೆ. ನಮ್ಮ ಹಾಗೇ ನಿಮಗೆ ವಿದ್ಯೆಯ ಬಾಗಿಲು ತೆರೆಯಬೇಕು, ಬದುಕು ಚೆಲುವಾಗಬೇಕು, ಎದೆಯಲ್ಲಿ ಧೈರ್ಯ, ಕುಶಲತೆ ಮೂಡಬೇಕು, ಮನಸ್ಸು ನಿರ್ಮಲವಾಗಿ ಸಂತೋಷದಲ್ಲಿ ಓಲಾಡಬೇಕು, ಎಲ್ಲರೂ ಅಣ್ಣ ತಮ್ಮಂದಿರಾಗಿ ತಿಳಿವಳಿಕೆಯಿಂದ ನಮ್ಮ ಕನ್ನಡನುಡಿಯ, ಕನ್ನಡನಾಡಿನ, ಕನ್ನಡ ದೊರೆಗಳ ಕೀರ್ತಿಯನ್ನು ಬೆಳಸಬೇಕು – ಇದೇ ನಮ್ಮ ಆಸೆ, ನಮ್ಮ ಹಂಬಲಿಕೆ. ಓದು ಬರಹ ಕಲಿಯಿರಿ ಓದಿ— ಪತ್ರಿಕೆಗಳಿವೆ, ಪುಸ್ತಕಗಳಿವೆ, ಪುರಾಣಗಳಿವೆ— ಈಗಿನ ಕಾಲದ ಜ್ಞಾನಭಂಡಾರವಿದೆ—ಓದಿ, ತಿಳಿಯಿರಿ, ಬೆಳೆಯಿರಿ. ಸತ್ಪ್ರಜೆಗಳಾಗಿ, ಹಕ್ಕುಬಾಧ್ಯತೆಗಳನ್ನು ಅರಿತು, ದೇಶದ ಅಭಿವೃದ್ಧಿಗೆ, ಸರಕಾರದೊಡನೆ, ಪ್ರಜೆಗಳ ಮುಂದಾಳುಗಳೊಡನೆ, ಭುಜ ಹಚ್ಚಿ ನಿಲ್ಲಿ. ಹಿರಿಯರು ವಿದ್ಯೆಯಿಲ್ಲದವನು ಪಶುವೆಂತಲೂ, ಜ್ಞಾನದಿಂದಲೇ ಮೋಕ್ಷವೆಂದೂ ಹೇಳಿಲ್ಲವೆ? ಕಲಿಯದವರನ್ನು ಕಲಿತವರು ತಂದು ಸೇರಿಸಿ, ಕಲಿತವರು ಮರೆತು ಕೊಳ್ಳದಂತೆ ಓದುವ, ಬರೆಯುವ ಅಭ್ಯಾಸವಿಟ್ಟುಕೊಳ್ಳಿ. ಈಗ ನಮ್ಮಲ್ಲಿ ೧೦೦ಕ್ಕೆ ೧೩ ಮಂದಿ ಅಕ್ಷರಸ್ಥರಿದ್ದಾರೆ. ಇನ್ನು ಹತ್ತು ವರ್ಷದೊಳಗೆ ಹೆಂಗಸರು, ಗಂಡಸರು, ಮಕ್ಕಳು—ವೈಸೂರು ಮಕ್ಕಳು—ಯಾರೂ ನಿರಕ್ಷರಕುಕ್ಷಿಗಳಲ್ಲದಂತೆ ಆಗಬೇಕೆನ್ನುವುದೇ ನಮ್ಮ ಸಮಿತಿಯ ಗುರಿ. ಅದಕ್ಕೆ ನೀವೆಲ್ಲಾ ನೆರವಾಗಿ ಬನ್ನಿ. ನಿಮಗೂ ಒಳ್ಳೆಯದು, ನಾಡಿಗೂ ಒಳ್ಳೆಯದು. ವಿಶ್ವಾಸವಿರಲಿ.

ನಿಮ್ಮ ಅಡಿಯಾಳು
ಬಿ. ಎಂ. ಶ್ರೀಕಂಠಯ್ಯ
(ಸಮಿತಿಯ ಅಧ್ಯಕ್ಷ)

ಶ್ರೀಮಾನ್. ವೆಂಕಣ್ಣಯ್ಯನವರು

ಶ್ರೀಮಾನ್ ವೆಂಕಣ್ಣಯ್ಯನವರು ದಿವಂಗತರಾದುದರಿಂದ ಕನ್ನಡ ನಾಡಿಗೂ ನುಡಿಗೂ ಆಗಿರುವ ನಷ್ಟವನ್ನು ನಾಡಿಗೆ ನಾಡೇ ಸಭೆಸೇರಿ,

ಸಂತಾಪ ಪಟ್ಟು, ವ್ಯಕ್ತಪಡಿಸಿವೆ. ವಿಶ್ವವಿದ್ಯಾನಿಲಯದಲ್ಲಿಯೂ, ಸಾಹಿತ್ಯ ಪರಿಷತ್ತಿನಲ್ಲಿಯೂ, ಅವರ ಮಿತ್ರವರ್ಗದಲ್ಲಿಯೂ ಅವರ ಗುಣಾತಿಶಯ ಗಳನ್ನೂ ಮಹಾ ಪ್ರಭಾವವನ್ನೂ ಅರಿತು ನುರಿತ ನಮಗೆ ಆಡಿ ತೋರುವು ದಕ್ಕೆ ಮಾತೇ ಬಾರದಾಗಿದೆ.

ಆದರೂ ಪ್ರಬುದ್ಧ ಕರ್ಣಾಟಕದ ಬಾಷ್ಪಾಂಜಲಿಯೆಂದು ಒಂದೆರಡು ಮಾತನ್ನು ನಾನು ಆಡಿಯೇ ತೀರಬೇಕಾಗಿದೆ.

ಶ್ರೀ. ವೆಂಕಣ್ಣಯ್ಯನವರು ಶ್ರೀ. ಕೃಷ್ಣಶಾಸ್ತ್ರಿಗಳ ನೆರವಿನಿಂದ ಈ ಪತ್ರಿಕೆಯನ್ನು (ಪ್ರಬುದ್ಧ ಕರ್ಣಾಟಕ) ಆರಂಭಿಸಿ ಬೆಳೆಸಿದರು. ವಿಶ್ವವಿದ್ಯಾ ನಿಲಯದ ಆಶ್ರಯಕ್ಕೆ ಅದು ಸಂದಾಗ, ಅವರು ಪ್ರಮುಖ ಸಂಪಾದಕರಾಗಿ ನಿಂತು, ಅದನ್ನು ವಿಸ್ತರಿಸಿ ಈಗಿನ ಮಟ್ಟಕ್ಕೆ ತಂದರು. ತೆರೆಯ ಹಿಂದೆ ಅವರು ಎಷ್ಟು ದುಡಿಯುತ್ತಿದ್ದರೆಂಬುದನ್ನು ಬಲ್ಲವರೇ ಬಲ್ಲರು. ಲೇಖಕರನ್ನು ಒಂದು ಗೂಡಿಸುವ ಅವರ ಸ್ನೇಹಶಕ್ತಿಯೂ, ಎಳೆಯ ಸಾಹಿತಿಗಳನ್ನೂ ಹುರುಪು ಗೊಳಿಸುವ ಆವರ ಉದಾರ ಹೃದಯವೂ, ಗಟ್ಟಿಯನ್ನಾಯುವ ಅವರ ವಿಮರ್ಶ ಸೂಕ್ಷ್ಮತೆಯೂ, ವೈವಿಧ್ಯವನ್ನು ಪ್ರಚೋದನೆಮಾಡುವ ಅವರ ವಿಶಾಲ ದೃಷ್ಟಿಯೂ ಅನ್ಯಾದೃಶವಾದುವು.

ಕನ್ನಡ ಪ್ರೊಫೆಸರಾಗಿ ಅವರು ನಿಷ್ಕೃಷ್ಟಜ್ಞಾನವುಳ್ಳವರು. ಹಳದರಲ್ಲಿ ಅತಿ ಭಕ್ತಿಯಿಲ್ಲದೆ, ಹೊಸವರಲ್ಲಿ ಅತಿಕ್ರಾಂತಿಗೆ ಹೋಗದೆ, ಮಧ್ಯಮಾರ್ಗಿಗಳಾದ ವರು. ವಿದ್ಯಾರ್ಥಿಗಳಲ್ಲಿ ತಂದೆಯಂತೆ ಹಿರಿಯಣ್ಣನಂತೆ ನಡೆದುಕೊಂಡು ಅವರ ಜ್ಞಾನಾಭಿವೃದ್ಧಿ, ಯೋಗಕ್ಷೇಮ ಸಚ್ಚಾರಿತ್ರಗಳಲ್ಲಿಯೇ ಸದಾ ಗಮನವಿಟ್ಟ ವರು. ಸಹೋಪಾಧ್ಯಾಯರಲ್ಲಿ ಸರಳತೆಯಿಂದ ವರ್ತಿಸಿ ಅವರ ಗೌರವ ಪ್ರೀತಿ ಗಳಿಗೆ ಪೂರ್ಣ ಪಾತ್ರರು.

ಪರಿಷತ್ತಿನ ಕಾರ್ಯ ಸಮಿತಿಯಲ್ಲಿಯೂ, ಅದರ ಎಲ್ಲಾ ಉದ್ಯಮಗಳ ಲ್ಲಿಯೂ ಅವರು ಶ್ರದ್ಧೆಯಿಂದ ಒಮ್ಮನಸ್ಸಿನಿಂದ ಸಹಕರಿಸುತ್ತಿದ್ದರು. ಶ್ರೀ ಡಿ. ವಿ. ಗುಂಡಪ್ಪನವರಿಗೂ ನನಗೂ ಆಪ್ತರೂ, ದೊಡ್ಡ ಧೈರ್ಯವೂ ಆಗಿದ್ದರು. ಕನ್ನಡದ ಚಳುವಳಿಗೆ ಚತುರ್ಭುಜವಾಗಿದ್ದರು. ಸಮ್ಮೇಳನದ ಅಧ್ಯಕ್ಷಪದವಿ ಯನ್ನು ಒಮ್ಮೆ ಅವರು ಅಲಂಕರಿಸಬೇಕೆಂಬ ಆಸೆ ಅನೇಕರಲ್ಲಿತ್ತು. ಆದರೆ ಅವರು ತಮ್ಮನ್ನು ಮುಂದಕ್ಕೆ ತಳ್ಳಿಕೊಳ್ಳುವ ಗುಣವಿಲ್ಲದವರಾದ್ದರಿಂದ ಅದಕ್ಕೆ ಅವ

ಕಾಶ ಕೊಡದೆಹೋದರು.

ಸಾಹಿತಿಗಳಾಗಿ ಅವರು ಹೆಚ್ಚು ಬರವಣಿಗೆ ಬಿಡಲಿಲ್ಲ. ಅವರ ಉದ್ಯೋಗವೆಲ್ಲಾ ಸತ್ಸಂಗಕ್ಕೂ, ಪಾಠಪ್ರವಚನಗಳಿಗೂ, ಕನ್ನಡದ ಕೆಲಸಕ್ಕೂ ವಿನಿಯೋಗವಾಗಿತ್ತು. ಹೆಚ್ಚು ಮಾತು, ಹೆಚ್ಚು ಬರಹ, ಅವರಿಗೆ ಸೇರದು.

ಆದರೂ, ಅವರ ಪಾಂಡಿತ್ಯದ ಮತ್ತು ವಿಮರ್ಶನ ಶಕ್ತಿಯ ರುಚಿಯನ್ನು ಸ್ವಲ್ಪಮಟ್ಟಿಗಾದರೂ ಲೋಕ ಪಡೆಯದೆ ಹೋಗಿಲ್ಲವೆಂಬುದು ನಮ್ಮ ಮನಸ್ಸಿಗೆ ಸ್ವಲ್ಪ ಸಮಾಧಾನ. ಶ್ರೀ ವೆಂಕಟನಾರಣಪ್ಪನವರೊಂದಿಗೆ ಪಂಪ ಭಾರತ ಮತ್ತು ಇಂಗ್ಲಿಷ್–ಕನ್ನಡ ನಿಘಂಟುವಿನ ಕೆಲಸವೂ ನನ್ನೊಡನೆ ಹರಿಶ್ಚಂದ್ರ ಕಾವ್ಯಸಂಗ್ರಹ, ಕರ್ಣಾಟಕ ಕಾದಂಬರೀ ಸಂಗ್ರಹ, ಕನ್ನಡ ಕೈಪಿಡಿ, ಗದುಗಿನ ಭಾರತಗಳ ಸಂಪಾದನೆಯೂ, ತಾವೇ ಸಂಪಾದಕರಾಗಿ ಪ್ರಕಟಿಸಿದ ಬಸವರಾಜದೇವರ ರಗಳೆಯೂ ಅವರ ಸಾಹಿತ್ಯಸೇವೆಗೆ ಹೆಗ್ಗುರುತುಗಳಾಗಿ ನಿಲ್ಲುವುವೆಂದು ನಂಬಿದ್ದೇನೆ.

ಇವಲ್ಲದೆ, ಪರಿಶೋಧನೆಯಲ್ಲಿ ಅವರು ಒಳ್ಳೆಯ ಪ್ರಮುಖತೆಯ ಪ್ರಶ್ನೆಗಳನ್ನೆತ್ತಿ ವಿಚಾರಮಾಡುತ್ತಿದ್ದರು. ಅವರ ಈ ಬಗೆಯ ಪ್ರಾಸ್ತಾವಿಕ ಲೇಖನಗಳು ಕೆಲವೇ ಇದ್ದರೂ, ಅವರ ಆಧಾರಪೂರ್ವಕವಾದ ವಿಚಾರ ಸರಣಿಗೂ, ತೂಕದ ಶೈಲಿಗೂ ನಿದರ್ಶನವಾಗಿವೆ. ಕನ್ನಡದಲ್ಲಿ ಬೌದ್ಧ ಸಾಹಿತ್ಯವಿತ್ತೆ? ನಿಜಾಂ ಕರ್ನಾಟಕದ ಸುರಪುರವೇ ಲಕ್ಷ್ಮೀಶನ ಊರೇ? ಬಿಜ್ಜಳನು ಜೈನನೇ ಈ ಬಗೆಯ ದೊಡ್ಡ ಬೇಟೆಯನ್ನೇ ಅವರು ಹೂಡುತ್ತಿದ್ದದ್ದು. ಈ ಲೇಖನಮಾಲೆ ಪುಸ್ತಕರೂಪದಲ್ಲಿ ಬೇಗನೆ ಹೊರಬೀಳಲೆಂದು ಬಯಸುತ್ತೇನೆ.

ಮುಖ್ಯವಾಗಿ ಸಾಹಿತಿಗಳನ್ನು ತಯಾರುಮಾಡುವುದರಲ್ಲಿ, ಸಾಹಿತ್ಯ ಪ್ರಚಾರದಲ್ಲಿ ಅವರು ಮಗ್ನರಾಗಿದ್ದರೇ ಹೊರತು ತಮ್ಮ ಕೀರ್ತಿಗಾಗಿ ಹಂಬಲಿಸಿದವರಲ್ಲ. ಹಾಗೆ ತೊರೆದವರನ್ನೇ ಹಂಬಲಿಸುವುದಲ್ಲವೇ ಕೀರ್ತಿ ?

ಇನ್ನು ಅವರ ಆಂತರ್ಯಕ್ಕೆ ಸೇರಿದ ಮಿತ್ರರ ಅದೃಷ್ಟವನ್ನು ಏನು ಹೇಳಲಿ? ನನಗಂತೂ ಅವರೊಂದು ಹೆಮ್ಮೆ, ಬೆಳಕು, ಕಾವಲು. ಅವರು ಕಣ್ಮರೆಯಾದರೆಂದು ಕೇಳಿದ ಕಾರಿರುಳಿನಲ್ಲಿ ನನಗೆ ಒಂದು ಪ್ರಾಣ ಹಾರಿತು; ಒಂದು ಕೈ ಮುರಿಯಿತು. ನನ್ನಂತೆ ಒಳಗುದಿ ಕುದಿಯುತ್ತಿರುವ ಕೆಳೆಯರು ಹಲವರು. ನಾವೆಲ್ಲಾ ಈ ಹಡಗು ಮುಳುಗಿ, ಬಡವರು.

ಲೋಕವರಿಯುವಂತೆ ತಾನು ಮಾಡಿದ ಕಾರ್ಯಕ್ಕಿಂತಲೂ ಮನುಷ್ಯ ದೊಡ್ಡವನೆಂದು ಹಿರಿಯರು ಹೇಳಿರುವರು. ಅಂತಹ ಹಿರಿಮೆಯ ಮನುಷ್ಯರು ವೆಂಕಣ್ಣಯ್ಯನವರು. ಅವರ ನೆನಪಾಗಿ ಅವರ ಶಿಷ್ಯರೂ, ಮಿತ್ರರೂ, ನಾಡೂ ಉದಾರ ಸಹಾಯಮಾಡಿ ವಿದ್ಯಾಪೀಠದಲ್ಲಿ ಕನ್ನಡದ ವ್ಯಾಸಂಗಕ್ಕೆ ಉತ್ತೇಜನ ವನ್ನು ಕಲ್ಪಿಸಿ ಕೃತಾರ್ಥರಾಗಲಿ ಎಂದು ಪ್ರಾರ್ಥಿಸುತ್ತೇನೆ.

ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ

II

ಮುನ್ನುಡಿಗಳು ಮತ್ತು ಲೇಖನಗಳು

ಪೀಠಿಕೆ-೨

'ಮುನ್ನುಡಿ'ಗೆ ನಾನಾರ್ಥ. ಕೆಲವರ ಮತದಲ್ಲಿ ಅದು ಕೃತಿ ವಿಮರ್ಶೆ. ವಿಮರ್ಶೆಯೆಂದರೆ, ಮೋಹ ಮತ್ಸರಗಳನ್ನು ತ್ಯಜಿಸಿ, ನಿರ್ದಾಕ್ಷಿಣ್ಯವಾಗಿ ಬೆಲೆ ಕಟ್ಟುವ, ಹೊಣೆಯುಳ್ಳ ಕೆಲಸ; ಅದರಲ್ಲಿ ಗುಣದೋಷಗಳ ಅಕುಟಿಲ ಪ್ರದರ್ಶನ, ತೂಲನ, ತೀರ್ಪು, ಆಗಲೇಬೇಕು. ಇಂಥಾ ಮುನ್ನುಡಿ ಕೃತಿ ಸ್ವಾಮಿಗೆ ಮೆಚ್ಚೆ? ಆದಕ್ಕಾಗಿ ತನ್ನ ವಿರಚನೆಯನ್ನ ಮುನ್ನುಡಿಕಾರನಿಗೆ ಒಪ್ಪಿಸುತ್ತಾನೆಯೆ? ಮುನ್ನುಡಿಕಾರನೂ ಕೂಡ ಹಾಗೆಸಗಲು ಮನ ತರಬಲ್ಲನೆ? ಇನ್ನೊಂದು ಅಭಿಮತವಂತೆ, ಮುನ್ನುಡಿಯೆಂಬುದು ಗ್ರಂಥಕರ್ತನ ಪರಿಚಯ ಮಾಡಿಕೊಡಲು ಸುಲಭವಾದ ಉಪಾಯ. ಅದನ್ನು ಮಾಡಿಕೊಡುವಾಗ ಹೊಗಳಿಕೆ ಅನಿವಾರ್ಯವಾಗಿ, ಔಪಚಾರಿಕವಾಗಿ, ಮಿತಿಯನ್ನು ಮೀರಿದರೂ ಮೀರಿ, ನಡೆದುಹೋಗುತ್ತವೆ. ಮುನ್ನುಡಿ ಕವಿಯನ್ನು ಕುರಿತ ಕೆಲವು ಒಳ್ಳೆಯ ಮಾತಾಗಿ ಪರಿಣಮಿಸುತ್ತದೆ. ಆದ್ದರಿಂದ ಅನೇಕರು ಮುನ್ನುಡಿಗಳನ್ನು ಓದುವುದೇ ಇಲ್ಲ; ಓದಿದರೂ ಲಕ್ಷ್ಯವಿಟ್ಟು ಓದುವುದಿಲ್ಲ; ಹೇಳಿಕೆಗಳನ್ನು ನಂಬಲರ್ಹವಾದ ಸತ್ಯವೆಂದು ಸ್ವೀಕರಿಸುವುದಿಲ್ಲ. ಅದರಲ್ಲೂ "ಶ್ರೀ" ಯವರಂಥಾ ಧಾರಾಳ ಸ್ವಭಾವದವರು, ಪ್ರೀತಿ ಕನಿಕರ ಗಿಡಿದು ತುಂಬಿದವರು, ಕನ್ನಡವೆಂದರೆ ಮೈಮರೆಯುವ ಭಾವೋದ್ರಿಕ್ತ ಭಕ್ತರು, ಮುನ್ನುಡಿಕಾರರೆಂದರೆ ಕೇಳಬೇಕೆ? ಪಾಪ, ಕನ್ನಡದಲ್ಲಿ ಈತ ಬರೆದಿದ್ದಾನಲ್ಲ, ಎಂದು ಅವರಿಗೆ ಲೇಖಕನ ಮೇಲೆ ಅಪಾರ ಮಮತೆ. ಅವರ ನುಡಿಗಳಲ್ಲಿ ಕೆಲವು ಹೆಚ್ಚಿನವಾಗುತ್ತಿದ್ದುದು ನಿಶ್ಚಯ. ಆದರೆ ಅವರ ಮುನ್ನುಡಿಯೆಂದಿಗೂ ಸಾಧಾರಣವಾದ ಸರಕನ್ನು ಉತ್ಕೃಷ್ಟವೆನ್ನುವ ಬೀದಿಕೂಗಿನ ತರವಲ್ಲ. ಏಕೆಂದರೆ, "ಶ್ರೀ"ಯವರ ಒಂದು ಮೃದುವಚನ ಯಾವ ಗ್ರಂಥಕರ್ತನಿಗಾದರೂ ಶ್ರೇಯಸ್ಕರವಾದ ಆಶೀರ್ವಾದ. ಆ ಕಾರಣದಿಂದ ಎಲ್ಲರೂ ನಾನು ಮುಂದೆ, ತಾನು ಮುಂದೆ, ಎಂದು ನುಗ್ಗಿ, ಅವರಿಂದ ಮುನ್ನುಡಿ ಪಡೆಯಲು ಆಟಿಸುತ್ತಿದ್ದುದು. "ಕುಮಾರವ್ಯಾಸ ಪ್ರಶಸ್ತಿ"ಯ ಮುನ್ನುಡಿಗೆ ಹತ್ತೆಂಟು ವರ್ಷ ಕಾದಿದ್ದಾಯ್ತು! ಇನ್ನೊಂದು ದೃಷ್ಟಿಯಲ್ಲಿ, ಮುನ್ನುಡಿ, ಗ್ರಂಥದಲ್ಲಿ ಪ್ರತಿಪಾದಿತವಾದ ವಿಷಯವನ್ನು ಪರಿಶೀಲಿಸಿ, ಒಂದೆರಡು ಮುಖವೇ ತೋರಿ ಬಂದಿದ್ದಗೆ ಉಳಿದ ಎಲ್ಲ

ಮುಖಗಳನ್ನೂ ಲಲಿತವಾಗಿ ತೋರಿಸಿ, ಬಿಟ್ಟು ಹೋದ ಗೂಢಾಂಶಗಳನ್ನು ಸೇರಿಸಿ, ಪೂರ್ತಿಗೊಳಿಸುವ ಅನುಬಂಧ. "ಶ್ರೀ" ಯವರು ಅದನ್ನೂ ಮುದ್ದಾಗಿ ನೆರವೇರಿಸುತ್ತಿದ್ದರು. ಅವರ ಮುನ್ನುಡಿಗೆ ಎರಡು ಭಾಗ: ಒಂದು, ಗ್ರಂಥ ಕರ್ತನ ವೈಯಕ್ತಿಕ ಪ್ರಶಂಸೆ; ಇನ್ನೊಂದು ಗ್ರಂಥದ ವಿಷಯದಮೇಲೆ ಟೀಕ ವ್ಯಾಖ್ಯಾನ. ಮೊದಲನೆಯದರಿಂದ ಒಬ್ಬ ಪುರುಷನಿಗೆ, ತಾತ್ಕಾಲಿಕ ಪ್ರಯೋ ಜನ; ಎರಡನೆಯದು ವಿಸ್ತರ ಕನ್ನಡ ಪ್ರಪಂಚಕ್ಕೆ ಸಂಬಂಧಿಸಿದ್ದು, ಶಾಶ್ವತ ವಾದದ್ದು. ಶ್ರೀಯುತ ಕೂಡಲಿ ಚಿದಂಬರಂರವರು ಈ ವ್ಯತ್ಯಾಸದ ಮರ್ಮ ವನ್ನು ಚೆನ್ನಾಗಿ ಅರಿತು, ಬರಿಯ ವ್ಯಕ್ತಿ ನಿರ್ದೇಶವನ್ನು ಹಿಂಬದಿಗಿಟ್ಟು, ಅಥವಾ ಬಿಟ್ಟುಬಿಟ್ಟು "ಶ್ರೀ"ಯವರು ಕಂಡು, ಪ್ರಶ್ನಿಸಿ, ಜಿಜ್ಞಾಸೆಗೈದ, ಗಾತ್ರದ ಸಮಸ್ಯೆಗಳನ್ನು ಮಾತ್ರ ಮುಂದಿಟ್ಟಿದ್ದಾರೆ. ಸಂಪಾದಕತ್ವದ ಭಾರ ವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದಾರೆ. ಎಂದಮೇಲೆ ಈ ಮುನ್ನುಡಿಗಳೂ ಕನ್ನಡಿಗರಿಗೆ ಒಳ್ಳೆಯ ಗದ್ಯಸಾಹಿತ್ಯವೇ. ಶಿಶುಗೀತವಾಗಲೀ ವಚನಧರ್ಮ ಸಾರವಾಗಲೀ, ನಾಡಪದವಾಗಲೀ, ಸಂಸ್ಕೃತನಾಟಕವಾಗಲೀ, "ಶ್ರೀ"ಯವರು ಹೇಗೆ ವಸ್ತುವಿನ ಒಳಹೊಕ್ಕು, ಅದರಲ್ಲಿನ ಸಾರಾಸಾರವನ್ನು ಹೊಗತಂದು, ದೊಡ್ಡ ದೊಡ್ಡ ಪ್ರಶ್ನೆಗಳನ್ನು, ಮುಖ್ಯವಾಗಿ ಈಗಿನ ಕನ್ನಡನಾಡು ಕಟ್ಟಿ ಕೊಳ್ಳಬೇಕಾದ ಪ್ರಧಾನ ಪ್ರಶ್ನೆಗಳನ್ನು, ಸೂಚಿಸಬಲ್ಲರೆಂಬುದು ಇಲ್ಲಿ ತೆರೆದು ತೋರಿವೆ. ಯಾವ ಅಂಶವಲ್ಲಾದರೂ ಅವರು ಹೇಗೆ ಸಂಸ್ಕೃತಿಯ ಘನತೆ ಯನ್ನು ಕಾಣುತ್ತಿದ್ದರು, ಜನತೆಯ ಪುರೋಭಿವೃದ್ಧಿಗೆ ಹೇಗೆ ಅದನ್ನು ಅನ್ವಯಿಸುತ್ತಿದ್ದರು, ಎಂಬುದು ಅಚ್ಚರಿ ಆನಂದ ಈಯುವ ಸಂಗತಿ. ಈ ಸಂಕಲನದ ಮೂಲಕ ಚಿದಂಬರಂರವರು "ಶ್ರೀ"ಯವರ ಕೀರ್ತಿಯನ್ನು ಸಮರ್ಥಿಸಲು ಸಹಾಯವೆಸಗಿದ್ದಾರೆ; ಕನ್ನಡ ದೇಶಕ್ಕೆ ಹಿತವನ್ನು ಕೋರಿ ದ್ದಾರೆ.

ಎಸ್. ವಿ. ರಂಗಣ್ಣ

ಮೈಸೂರು
ತಾ. ೨೭-೭-೧೯೪೮

ಕೃತಜ್ಞತೆ

"ಶ್ರೀ"ಯವರ ಗದ್ಯ ಸಾಹಿತ್ಯದ ಎರಡನೆಯ ಭಾಗವಾದ ಈ ಸಂಕಲನ ದಲ್ಲಿ ಅವರು (i) ತಮ್ಮ 'ಇಂಗ್ಲಿಷ್ ಗೀತಗಳಿ'ಗೆ ಬರೆದ 'ಅರಿಕೆ'ಯನ್ನೂ (ii) ಹಲವು ಗ್ರಂಥಗಳಿಗೆ ಕೃಪೆಗೈದ ಮುನ್ನುಡಿಗಳಲ್ಲಿ, ನನ್ನ ಕೈಗೆ ನಿಲುಕಿ, ಒಂದಲ್ಲ ಒಂದು ರೀತಿಯಲ್ಲಿ ಗಣ್ಯವೆಂದು ತೋರಿಬಂದವುಗಳನ್ನೂ (iii) ನೃಪ ತುಂಗ ಪಂಪರನ್ನು ಕುರಿತ ಮೂರು ಲೇಖನಗಳನ್ನೂ (iv) ಹೊಯ್ಸಳರನ್ನು ಕುರಿತ ಒಂದು ವಿಚಾರಪರವಾದ ಬರಹವನ್ನೂ ಒಟ್ಟುಗೂಡಿಸಲಾಗಿದೆ. ಮುಖ್ಯ ವಾಗಿ, 'ಶ್ರೀ' ಯವರು ಕವಿಕಾವ್ಯಗಳನ್ನು ಕುರಿತು ಆಗಾಗ್ಗೆ ಉಲ್ಲೇಖಿಸಿವ ವಿಮರ್ಶೆಯ ಮಾತುಗಳನ್ನು ಇಲ್ಲಿ ಒಂದೆಡೆ ತರುವ ಪ್ರಯತ್ನ ಮಾಡಲಾಗಿದೆ.

'ಶ್ರೀ'ಯವರ ಬರಹ ಭಾಷಣಗಳ ಮುಖ್ಯ ಪಲ್ಲವಿ ಕನ್ನಡ ಜನಕ್ಕೆ ಒಳ್ಳೆಯ ಸಾಹಿತ್ಯ ಲಭಿಸಬೇಕೆಂಬುದೇ ಆಗಿತ್ತೆಂದು ನನಗೆ ತೋರುತ್ತದೆ. ಒಳ್ಳೆಯ ಸಾಹಿತ್ಯ ಒಳ್ಳೆಯ ಬದುಕಿನ ಕುರುಹು, ಫಲ, ಅಲ್ಲವೆ? ಆದ್ದರಿಂದ ಈ ಸಂಕಲನವನ್ನೂ 'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ' ಎಂಬ ಹೆಸರಿನಿಂದಲೇ ಕರೆಯುವುದರಲ್ಲಿ ಔಚಿತ್ಯವಿದೆಯೆಂದು ಭಾವಿಸಿದ್ದೇನೆ.

ಇಲ್ಲಿನ ಲೇಖನಗಳಲ್ಲಿ—'ಚಕ್ರವರ್ತಿಯ ಮೆಚ್ಚಿಕೆ,' 'ಕವಿ ಕಂಡ ನಾಡು,' 'ಆದಿ ಕವಿ ಪಂಪ' ಮತ್ತು "ತಮಿಳಿನ 'ಪುಱನಾನೂಱು' ನಲ್ಲಿ ಪೊಯ್ಸಳರು ?" ಈ ನಾಲ್ಕನ್ನು 'ಕನ್ನಡ ನುಡಿ'ಯಿಂದ ತೆಗೆದುಕೊಳ್ಳಲಾಗಿವೆ. ಉಳಿದವುಗಳ ಮೂಲವನ್ನು ಆಯಾ ಲೇಖನದ ಪ್ರಾರಂಭದ ಅಡಿ ಟಿಪ್ಪಣಿ ಯಲ್ಲಿ ಕಾಣಿಸಿದೆ. ಬರಹಗಳನ್ನೆಲ್ಲಾ ಕಾಲಕ್ರಮದಿಂದ ಜೋಡಿಸಿದೆ.

ಈ ಲೇಖನಗಳನ್ನು ಉಪಯೋಗಿಸಿಕೊಳ್ಳಲು ಅವಕಾಶವಿತ್ತ ಸಂಘ, ಸಂಸ್ಥೆ, ಮಹನೀಯರುಗಳಿಗೆ ನಾನು ಋಣಿಯಾಗಿದ್ದೇನೆ. "ತಮಿಳಿನ 'ಪುಱ ನಾನೂಱು'ನಲ್ಲಿ ಪೊಯ್ಸಳರು ?" ಎಂಬ ಲೇಖನದ ಕಡೆ ನನ್ನ ಗಮನವನ್ನೆ ಳೆದು, ಅದರ ಒಂದು ಪ್ರತಿಯನ್ನು ಒದಗಿಸಿಕೊಟ್ಟು ಉಪಕಾರ ಮಾಡಿದವರು ನನ್ನ ಮಿತ್ರರಾದ ಶ್ರೀ ತೀ. ನಂ. ಶ್ರೀಕಂಠಯ್ಯನವರು.

ಶ್ರೀಮಾನ್ ರಂಗಣ್ಣನವರು ತಮ್ಮ ಪೀಠಿಕೆಯಲ್ಲಿ ಸಂಪಾದನ ಕಾರ್ಯ

ವನ್ನು ಕುರಿತು ವಿಶ್ವಾಸದ ಮಾತುಗಳನ್ನು ಆಡಿದ್ದಾರೆ. 'ಶ್ರೀ' ಯವರ ಮುನ್ನುಡಿಗಳಲ್ಲಿನ ವೈಯಕ್ತಿಕ ಪ್ರಶಂಸೆಯ ಮಾತುಗಳನ್ನೆಲ್ಲ ಬಿಟ್ಟು, ಚಿರ ಪ್ರಯೋಜನವುಳ್ಳ, ವಿಶಾಲ ಕನ್ನಡ ಪ್ರಪಂಚಕ್ಕೆ ಸಂಬಂಧಿಸಿದ ವಿಷಯಗಳನ್ನು ಮಾತ್ರ ಉಳಿಸಿಕೊಂಡಿರುವ ಹೊಣೆ ನನ್ನದು. ಲೇಖಕರು ಸಂಪಾದಕರುಗಳು ಈ ಕಾರ್ಯದ ಔಚಿತ್ಯವನ್ನರಿಯುವರೆಂದೂ, ಇದರಿಂದ ತಮಗಾಗಿರಬಹುದಾದ ಅನ್ಯಾಯವನ್ನು ಮನ್ನಿಸುವರೆಂದೂ ನಂಬಿದ್ದೇನೆ.

'ಶ್ರೀ'ಯವರ ಆಶಯವನ್ನು ಗ್ರಹಿಸುವ ಪ್ರಯತ್ನಮಾಡಿ, ಮುನ್ನುಡಿಗಳ ವಿಷಯಕ್ಕೆ ಅನುಗುಣವಾಗಿ ಹೆಸರುಕೊಡುವ ಸಾಹಸ ಮಾಡಿದ್ದೇನೆ.

ಪುಸ್ತಕದ ಪ್ರಕಟನೆಯಲ್ಲಿ ಮೊದಲಿನಿಂದ ಕಡೆಯವರೆಗೂ ನನಗೆ ಸರ್ವ ವಿಧದಲ್ಲಿ ನೆರವಾಗಿ ಅಮೂಲ್ಯವಾದ ಪೀಠಿಕೆಯನ್ನೂ ಬರೆದುಕೊಟ್ಟಿರುವ ನನ್ನ ಗುರುಗಳೂ ಮಿತ್ರರೂ ಆದ ಶ್ರೀಮಾನ್ ಎಸ್. ವಿ. ರಂಗಣ್ಣನವರ ಉಪಕಾರ ವನ್ನು ಸಂತೋಷದಿಂದಲೂ ತುಂಬು ಮನಸ್ಸಿನಿಂದಲೂ ನೆನೆಯುತ್ತೇನೆ. ಪ್ರಕ ಟನೆಗೆ ಅವಶ್ಯವಾದ ಅನುಮತಿಯನ್ನಿತ್ತ 'ಶ್ರೀ'ಯವರ ಪುತ್ರ ಶ್ರೀಮಾನ್ ತಮ್ಮಯ್ಯನವರಿಗೆ ನಾನು ಕೃತಜ್ಞನಾಗಿದ್ದೇನೆ. ಅಚ್ಚುಕಟ್ಟಾಗಿ ಮುದ್ರಿಸಿರುವ ವೆಸ್ಲಿ ಪ್ರೆಸ್ಸಿನ ಅಧಿಕಾರಿಗಳಿಗೆ ನನ್ನ ವಂದನೆಗಳು.

ಈ ಸಂಗ್ರಹಕ್ಕೆ ಅವಶ್ಯವಾಗಿ ಸೇರಬೇಕಾದ ಮುನ್ನುಡಿ ಲೇಖನ ಭಾಷಣ ಗಳು ಯಾವುವಾದರೂ ಇದ್ದರೆ ವಾಚಕರು ದಯಮಾಡಿ ತಿಳಿಸಿದಲ್ಲಿ ಮುಂದಿನ ಮುದ್ರಣದಲ್ಲಿ ಅವನ್ನು ಸೇರಿಸಿಕೊಳ್ಳಲು ಅನುಕೂಲವಾಗುತ್ತದೆ.

ಕೂಡಲಿ ಚಿದಂಬರಂ

ಅರಿಕೆ*

ಯಾರ ಸಂತೋಷಕ್ಕಾಗಿ ಮೊದಲು ನಾನು ಈ ಗೀತಗಳನ್ನು ಬರೆದೆನೋ ಆ ಕಣ್ಣುಗಳು ಬೇಗ ಮುಚ್ಚಿಹೋಗಿ, ಕೆಲವು ವರ್ಷ ಗ್ರಂಥ ನನ್ನಲ್ಲಿಯೇ ಉಳಿದುಕೊಂಡಿತು. ಇದನ್ನು ಬಲ್ಲ ನನ್ನ ಗುರುಗಳು ಕೀರ್ತಿಶೇಷರಾದ ಮ|| ರಾ|| ಬಾಪೂ ಸುಬ್ಬರಾಯರು ಮೂರು ಕವನಗಳನ್ನು ತೆಗೆದುಕೊಂಡು ತಮ್ಮ 'ವಿದ್ಯಾದಾಯಿನಿ'ಯಲ್ಲಿ ೧೯೧೯ನೆಯ ಇಸವಿಯಲ್ಲಿ ಹೊರಪಡಿಸಿದರು; ೧೯೨೧ರಲ್ಲಿ ತಮ್ಮ 'ಗ್ರಂಥಮಾಲೆ' ಯಲ್ಲಿ ಇನ್ನು ಹನ್ನೆರಡು ಗೀತೆಗಳನ್ನು ಅಚ್ಚುಹಾಕಿಸಿದರು. ನನ್ನ ಮಿತ್ರರಾದ ಮ|| ರಾ|| ಡಿ. ವಿ. ಗುಂಡಪ್ಪನವರು ತಾವೇ ಕವಿಗಳಾದ್ದರಿಂದ ಸ್ವಜಾತಿ ಪ್ರೇಮದಿಂದಲೋ ಏನೋ ಮತ್ತೆ ಇಪ್ಪತ್ತುನಾಲ್ಕು ಕವನಗಳನ್ನು ೧೯೨೪ರಲ್ಲಿ ತಮ್ಮ 'ಕರ್ಣಾಟಕ ಜನಜೀವನ' ಪತ್ರಿಕೆಯಲ್ಲಿ ಮುದ್ರಿಸಿಕೊಟ್ಟರು. ಈಗ ಬೆಂಗಳೂರು ಸೆಂಟ್ರಲ್ ಕಾಲೇಜಿನ ಪ್ರಸಿದ್ಧಿ ಹೊಂದಿದ 'ಕರ್ಣಾಟಕ ಸಂಘ'ದ ಅಧಿಕಾರಿಗಳು ವಿಶ್ವಾಸವಿಟ್ಟು ಗ್ರಂಥವನ್ನೆಲ್ಲ ಪುಸ್ತಕ ರೂಪದಲ್ಲಿ ಪ್ರಕಾಶಕ್ಕೆ ತಂದು ನನಗೆ ಪ್ರೋತ್ಸಾಹವನ್ನು ಕೊಟ್ಟಿದ್ದಕ್ಕಾಗಿ ನಾನು ಅವರಿಗೆ ಯಾವಾಗಲೂ ಕೃತಜ್ಞನಾಗಿದ್ದೇನೆ.

ಇಂಗ್ಲಿಷ್ ಕಾವ್ಯಮಾರ್ಗವನ್ನು ಕನ್ನಡಿಗರು ಈ ಸಣ್ಣ ಗ್ರಂಥದಿಂದ ಸ್ವಲ್ಪಮಟ್ಟಿಗೆ ತಿಳಿಯಬಹುದಾಗಿದೆ. 'ಭಾಷಾಂತರಕಾರರು ಕೊಲೆಗಾರರು' ಎಂದು ಪಾಶ್ಚಾತ್ಯರಲ್ಲಿ ಒಂದು ಗಾದೆಯುಂಟು. ಆ ಅಪವಾದವನ್ನು ತಪ್ಪಿಸಿಕೊಂಡಿರುವೆನೆಂದು ನಾನು ತಿಳಿದುಕೊಂಡಿಲ್ಲ. ಆದರೆ, ನನ್ನ ಬುದ್ಧಿಬಲವಿರುವ ಮಟ್ಟಿಗೂ ಮೂಲವನ್ನು ಪ್ರತಿಬಿಂಬಿಸುವ ಕರ್ತವ್ಯವನ್ನೇ ಮುಂದಿಟ್ಟುಕೊಂಡು ಕೆಲಸಮಾಡಿದ್ದೇನೆ. ಕೆಲವು ಕಡೆ ಹೆಸರು, ಭಾವ ಮುಂತಾದುವು ಕನ್ನಡ ಜನಕ್ಕೆ ಹೊಂದಿಕೆಯಾಗುವಂತೆ ಮಾರ್ಪಾಡಾಗಿದ್ದರೂ, ಸಾಮಾನ್ಯವಾಗಿ ಪದಪ್ರಯೋಗ, ಶೈಲಿ, ಛಂದಸ್ಸು, ಭಾವ, ರಸ—ಇವೆಲ್ಲವೂ ಮೂಲಕವಿಯ ವ್ಯಕ್ತಿತ್ವವನ್ನೇ ಅನುಸರಿಸಿವೆ. ಕನ್ನಡದ ಜಾಯಮಾನವನ್ನು ಮೀರದೆ ಎಷ್ಟುಮಟ್ಟಿಗೆ ಛಂದಸ್ಸು ಇಂಗ್ಲಿಷ್ ಛಂದಸ್ಸುಗಳನ್ನು ಹೋಲಬಹುದೋ ಅಷ್ಟು

---

*'ಇಂಗ್ಲಿಷ್ ಗೀತೆಗಳ'ಗೆ ಬರೆದ ಅರಿಕೆ (೧೯೨೬).

ಮಟ್ಟಿಗೂ ಆ ಪದ್ಯಗಳನ್ನು ಕನ್ನಡಕ್ಕೆ ಇಳಿಸುವುದಕ್ಕೆ ಪ್ರಯತ್ನಪಟ್ಟಿರುತ್ತೇನೆ. ಇಂಗ್ಲಿಷ್ ಬಲ್ಲವರು ಇದನ್ನು ತಿಳಿಯುವರು ; ಅಚ್ಚಗನ್ನಡಿಗರು ಈ ಭಾಗದಲ್ಲಿ ಅಸಮಾಧಾನಪಡಬಾರದೆಂದು ನನ್ನ ಪ್ರಾರ್ಥನೆ. ಮುಖ್ಯ,

> ಹೇಳಿದ್ದ ಹೇಳುವರು, ಕೇಳಿದ್ದ ಕೇಳುವರು,
> ಕೇಳಿದ್ದ ಕೇಳಿ ಸುಖಿಸುವರು—ಗುರುಗಳ
> ಹೇಳಿಕೆಯೆ ಬೇರೆ ಸರ್ವಜ್ಞ.

ಎಂಬ ವಚನದಂತೆ, ಸಂಪ್ರದಾಯ ಮಾರ್ಗವನ್ನೇ ಛಲಹಿಡಿಯದೆ, ವಿಶ್ವ ಕವಿತಾ ವಿಷಯಗಳಾದ ಯುದ್ಧ, ಪ್ರೇಮ, ಮರಣ, ದೇಶಭಕ್ತಿ, ದೈವಭಕ್ತಿ, ಪ್ರಕೃತಿಸೌಂದರ್ಯ, ಮಾನವ ಜನ್ಮದ ಸುಖದುಃಖಗಳು, ರಾಗದ್ವೇಷಗಳು, ಪುರುಷಾರ್ಥಗಳು, ಜನ್ಮಾಂತರದ ದರ್ಶನಗಳು ಮುಂತಾದ ಕಾವ್ಯವಸ್ತುಗಳನ್ನು ಇತರ ದೇಶದ ಕವಿಗಳು ಯಾವ ರೀತಿಯಲ್ಲಿ ಪುಷ್ಟಿಗೊಳಿಸಿ ಸಹಜ ಭಾಷೆಯಲ್ಲಿ ಸೌಂದರ್ಯ ರಚನೆಯನ್ನು ಮಾಡಿರುವರೋ ಅವನ್ನೆಲ್ಲ ಶ್ರದ್ಧೆಯಿಂದ ಪರಾಮರ್ಶಿಸಿ, ಧೈರ್ಯವನ್ನೂ ಶಿಕ್ಷಣಬದ್ಧವಾದ ಸ್ವಾತಂತ್ರ್ಯವನ್ನೂ ವಹಿಸಿ ಕನ್ನಡ ಕವಿಗಳು ಹಿಂದಕ್ಕಿಂತಲೂ ಮುಂದೆ ಇನ್ನೂ ಶ್ರೇಯಸ್ಸನ್ನು ತಾಳಲಿ ಎನ್ನುವುದೇ ನಮ್ಮೆಲ್ಲರ ಹಾರೈಕೆಯಾಗಿರತಕ್ಕದ್ದಾಗಿದೆ. ಹೊಸ ಮಾರ್ಗದ ಕವಿಗಳು ಆಗಲೆ ಹಾಡುವುದಕ್ಕೆ ತೊಡಗಿರುವ ನಮ್ಮ ಕಾಲದಲ್ಲಿ ಈ ಮಾತನ್ನು ಒತ್ತಿ ಹೇಳಬೇಕಾಗಿಲ್ಲ.

ಇಲ್ಲಿ ಕೊಟ್ಟಿರುವ ಕವನಗಳೆಲ್ಲಾ ಇಂಗ್ಲಿಷ್ ಕಾವ್ಯಮಾಲೆಯ ನಾಯಕ ರತ್ನಗಳೆಂದು ಆದುಕೊಂಡುವಲ್ಲ. ಉತ್ತಮರಾದ ಕವಿಗಳೂ ಇಲ್ಲಿ ಎಲ್ಲರೂ ಇಲ್ಲ. ಆಗಾಗ್ಗೆ ಓದುತ್ತಿರುವಾಗ ನನ್ನ ಮನಸ್ಸಿಗೊಪ್ಪಿ, ನನ್ನ ಕೈಮೀರದುವಾಗಿ ಕಂಡುಬಂದ ಗೀತಗಳಿವು. ಇಂಗ್ಲಿಷ್ ಕವಿಗಳು ಶೃಂಗಾರರಸವನ್ನು ಹೇಗೆ ಗಂಭೀರವಾಗಿಯೂ, ಸೂಕ್ಷ್ಮವಾಗಿಯೂ,ಸ್ವಾಭಾವಿಕವಾಗಿಯೂ ತೋರಿಸುವರೆಂಬುದನ್ನು ತಿಳಿಸುವುದಕ್ಕಾಗಿ ಆ ಬಗೆಯ ಗೀತಗಳು ಕೊಂಚ ಹೆಚ್ಚಾಗಿ ಬಂದಿವೆ. ಇಂಗ್ಲಿಷ್ ಸಾಹಿತ್ಯ ಸಮುದ್ರದ ಕರೆಯಲ್ಲಿ ತೆರೆಯೆಸೆದ ಈ ಕೆಲವು ಸಣ್ಣ ಚಿಪ್ಪುಗಳಿಂದ, ಆ ದಿವ್ಯರತ್ನಾಕರದ ಲಾವಣ್ಯವೂ, ವಾಸನೆಯೂ, ಘೋಷವೂ, ರುಚಿಯೂ ಸಹೃದಯರ ಅನುಭವಕ್ಕೆ ಬಾರದೆ ಇರಲಾರವೆಂದು ನಾನು ನಂಬಿರುತ್ತೇನೆ.

ರನ್ನ*

ಕನ್ನಡ ಕಾವ್ಯರಾಶಿಯನ್ನು ಹೊರಕ್ಕೆ ತಂದು ಹೆಮ್ಮೆಪಟ್ಟದ್ದಾಯಿತು; ಈಗ ಬೇಕಾಗಿರುವುದು ಅದರ ಯೋಗ್ಯತೆಯನ್ನು ಗೊತ್ತುಮಾಡುವ ವಿಮರ್ಶೆ. ಜಳ್ಳನ್ನು ತೂರಿ, ಕಾಳನ್ನು ತುಂಬಿಕೊಳ್ಳಬೇಕಾಗಿದೆ ಈಗ—ಸಾಹಿತ್ಯಕಲಾ ಪುತ್ರರ ಆತ್ಮ ಪುಷ್ಟಿಗಾಗಿ.

ಇದು ಒಬ್ಬರಿಬ್ಬರ ಕೆಲಸವಲ್ಲ; ಕನ್ನಡದಲ್ಲಿ ಅಕ್ಕರೆ ಒಂದೇ ಇದಕ್ಕೆ ಸಾಧನವಲ್ಲ; ಒಮ್ಮುಖವಾದ ಸಂಸ್ಕಾರವುಳ್ಳವರಿಂದಾಗಲಿ, ಜಾತಿ ಮತಗಳ ವೀರಾವೇಶವುಳ್ಳವರಿಂದಾಗಲಿ ಇದು ನಿರ್ವಹಿಸಬಹುದಾದ ವಿಷಯವಲ್ಲ. ಇದು ಸರ್ವರಿಗೂ ಸೇರಿದ ಸಾಹಿತ್ಯದ ವಿಷಯ; ಸಾಹಿತ್ಯಕಲಾದೃಷ್ಟಿಯಿಂದಲೇ ಈ ವಿಮರ್ಶೆ ನಡೆಯತಕ್ಕದ್ದಾಗಿದೆ. ಎರಡು ಮೂರು ಸಾಹಿತ್ಯಗಳನ್ನಾದರೂ ಚೆನ್ನಾಗಿ ಬಲ್ಲ, ವಿಶಾಲ ರುಚಿಗಳಾದ, ಪೂರ್ವದ ಮತ್ತು ನೂತನ ಕಾಲದ ಅಂತಸ್ಸಾರವನ್ನು ಅನುಭವಕ್ಕೆ ತಂದುಕೊಂಡಿರುವ ಅಖಂಡ ಕರ್ಣಾಟಕದ ವಿದ್ವಾಂಸರೆಲ್ಲರೂ—ಕನ್ನಡ ಸಾಹಿತ್ಯಾಭಿಮಾನಿಗಳಾದ ಹೊರಗಿನವರೂ ಕೂಡ—ಈ ವಿಮರ್ಶೆಯ ಕಾರ್ಯವನ್ನು ಕೈಕೊಳ್ಳತಕ್ಕದ್ದು. ಇಂಗ್ಲಿಷ್ ಬಲ್ಲವರು, ಸಂಸ್ಕೃತವನ್ನು ಬಲ್ಲವರು, ಕನ್ನಡದ, ಇತರ ದ್ರಾವಿಡ ಭಾಷೆಗಳ, ಅಥವಾ ಆರ್ಯಭಾಷೆಗಳ ಸಾಹಿತ್ಯದ ರುಚಿಯನ್ನು ಬಲ್ಲವರು, ಮುಂದೆ ತಮ್ಮ ಜನ್ಮಭೂಮಿಯ ಉತ್ತಮ ದಶೆಯನ್ನು ಕುರಿತು ನಾನಾ ಬಗೆಯ ಅಭಿಪ್ರಾಯಗಳನ್ನೂ ಉದ್ದೇಶಗಳನ್ನೂ ಪರ್ಯಾಲೋಚಿಸುತ್ತಿರುವರು, ನಾನಾ ಮುಖವಾಗಿ, ಹೊಸ ಹೊಸ ರೀತಿಯಲ್ಲಿ, ಶುದ್ಧ ಕಲಾಮಾರ್ಗದಲ್ಲಿ ನಮ್ಮ ಸಾಹಿತ್ಯದ ರಥವನ್ನು ನಡಸಲು ಸಾರಥಿಗಳಾಗಬೇಕೆಂಬ ಉತ್ಸಾಹ ವುಳ್ಳವರು-ಸರ್ವರೂ ತಮ್ಮ ತಮ್ಮ ರಸಜ್ಞತೆಗನುಗುಣವಾದ ದೃಷ್ಟಿಯಿಂದ ಕನ್ನಡದ ಪೂರ್ವದ ಸಾಹಿತ್ಯವನ್ನು ಪರಿಶೀಲನೆಮಾಡಿ ಬೆಲೆ ಕಟ್ಟಬೇಕು. ನಮ್ಮ ಕವಿಗಳಲ್ಲಿ ನಿಜವಾದ ಕವಿಗಳು ಯಾರು ? ಬರಿಯ ಗುಹಾಧ್ವನಿಗಳು ಯಾರು ? ಅಂತಹ ನಿಜವಾದ ಕವಿಗಳಲ್ಲಿ ಪ್ರಧಾನರು ಯಾರು ? ಅವರ

* ಮೈಸೂರು ವಿಶ್ವವಿದ್ಯಾನಿಲಯ ಸಂಘದಿಂದ ೧೯೩೮ರಲ್ಲಿ ಪ್ರಕಟವಾದ 'ರನ್ನ ಕವಿ ಪ್ರಶಸ್ತಿ' ಗೆ ಬರೆದ ಮುನ್ನುಡಿ.

ಕವಿತ್ವದ ಸತ್ತ್ವವೇನು? ಅವರವರಲ್ಲಿ ತಾರತಮ್ಯಗಳೇನು? ಅವರ ಕಾವ್ಯಗಳು ಒಟ್ಟಿನಲ್ಲಾಗಲಿ ಕೆಲವು ಭಾಗಗಳಲ್ಲಿ ಮಾತ್ರವಾಗಲಿ, ಈಕಾಲದ ನಮಗೆ ಎಷ್ಟು ಮಟ್ಟಿಗೆ ಆನಂದವನ್ನು, ಸುಪ್ರೇರಣೆಯನ್ನು, ಕಾವ್ಯಫಲವನ್ನು ಕೊಡಬಲ್ಲವು? ಒಟ್ಟಿನಮೇಲೆ ನಮ್ಮ ಸಾಹಿತ್ಯದ ಗುಣಗಳು ಯಾವುವು? ನ್ಯೂನತೆಗಳು ಯಾವುವು? ಜನಜೀವನಕ್ಕೂ ಸಾಹಿತ್ಯಕ್ಕೂ ಇರತಕ್ಕ ಸಂಬಂಧವೇನು? —ಇವೇ ಮೊದಲಾದ ಅಂಶಗಳನ್ನು ತಿಳಿವಳಿಕೆಯಿಂದ ನಿಷ್ಪಕ್ಷಪಾತವಾಗಿ ವಿಚಾರಮಾಡಿ ಸ್ವಲ್ಪ ಹೆಚ್ಚು ಕಡಮೆ ಒಂದು ನಿರ್ಣಯಕ್ಕೆ ಬರುವುದು ಈಗ ಅತ್ಯವಶ್ಯಕವಾದ ಕೆಲಸವಾಗಿದೆ. ಈ ಕೆಲಸದಲ್ಲಿ ಹೊಕ್ಕು, ಕನ್ನಡಸಾಹಿತ್ಯದ ತಿರುಳನ್ನು ಕನ್ನಡಿಗರೆಲ್ಲರೂ ಸವಿಯುವಂತೆ ಸುಲಭಮಾಡಿಕೊಡುವುದು ಕನ್ನಡನಾಡಿನ ಎಲ್ಲಾ ಪ್ರಾಂತಗಳ ಎಲ್ಲಾ ಸಾಹಿತ್ಯಸೇವಕರ ಮೇಲೆಯೂ ಬಿದ್ದ ಭಾರವಾಗಿರುತ್ತದೆ.

ಇಂತಹ ವಿಮರ್ಶೆಯ ಸಂಗ್ರಹವೊಂದನ್ನು ಬೆಂಗಳೂರಿನ ಕರ್ಣಾಟಕ ಸಂಘದವರು 'ಪ್ರಬುದ್ಧ ಕರ್ಣಾಟಕ'ದ ಸಂಚಿಕೆಯಾಗಿ ಮುದ್ದಣಕವಿಯ ವಿಷಯದಲ್ಲಿ ಪ್ರಕಟಿಸಿರುವರು. ರನ್ನ ಕವಿಯನ್ನು ಕುರಿತ ಈ ಗ್ರಂಥವನ್ನು ಮೈಸೂರಿನ ವಿಶ್ವವಿದ್ಯಾನಿಲಯದ ಸಂಘದವರು ಉದ್ದಾಮ ಪಂಡಿತರ ಸಹಾಯದಿಂದ ಹೊರಡಿಸಿರುತ್ತಾರೆ. ಇದನ್ನು ಸಹೃದಯರು ವಿಶ್ವಾಸದಿಂದ ಸ್ವೀಕರಿಸಬೇಕೆಂದು ಪ್ರಾರ್ಥಿಸುತ್ತೇವೆ. ಮತ್ತು ಹೀಗೆಯೇ ಕನ್ನಡನಾಡಿನ ಸಂಘಗಳೆಲ್ಲವೂ ಮೇಲಾಟವಾಡಿ ನಮ್ಮ ಪ್ರಧಾನ ಕವಿಗಳ ವಿಷಯವಾಗಿ ಒಂದೊಂದು ವಿಮರ್ಶೆಯ ಗ್ರಂಥವನ್ನು ಅನೇಕ ಪಂಡಿತರ ಸಹಕಾರದಿಂದ ಪ್ರಕಟಿಸುವರೆಂದು ಹಾರೈಸುತ್ತೇವೆ. ಆಗ್ಗೆ, ನಮ್ಮ ಸಾಹಿತ್ಯದ ನಿಜ ಸ್ವರೂಪವೂ, ಉತ್ತಮ ಕವಿಗಳ ನಿಜವಾದ ಯೋಗ್ಯತೆಯೂ, ಬಹುಜನ ಸಾಮಾನ್ಯವಾದ ಒಂದು ಸಾಹಿತ್ಯ ಸಿದ್ಧಾಂತವೂ, ಬೋಧಕರಿಗೂ, ವಿದ್ಯಾರ್ಥಿಗಳಿಗೂ, ವಾಚಕರಿಗೂ ದೊರೆತು, ಹಿಂದಿನ ಸಾಹಿತ್ಯದ ಸುಖಾನುಭವಕ್ಕೂ, ಮುಂದಿನ ಸಾಹಿತ್ಯದ ಸುಗಮವಾದ ವ್ಯವಸಾಯಕ್ಕೂ ಅನುಕೂಲವಾಗುತ್ತದೆ.

ಪ್ರಕೃತದಲ್ಲಿ. ರನ್ನ ಕವಿಯ ವಿಮರ್ಶೆಯನ್ನು ಅನೇಕ ವಿದ್ವಾಂಸರು ಅನೇಕ ವಿಧವಾಗಿ ಮಾಡಿರುತ್ತಾರೆ. ರನ್ನ ಕವಿಯ ದರ್ಪವೇನೋ ದೊಡ್ಡದು—

ನೆಗಟ್ದ ಕವಿರತ್ನನಂತೊಳ
ಪುಗುವುದು ಮೊಗ್ಗಾಂಪ್ತಿ ಜಿನಮತಾಂಭೋಧಿಯುಮಂ
ಪುಗದಾಗಮಮಱಿವರ ಬಗೆ
ಪುಗವೆ ಕೆಲರ್ ಕವಿಗಳಾಡಿಪರ್ ತಡಿದಡಿಯೊಳ್ |

ಎಂದೂ,

ಆರಾತೀಯ ಕವೀಶ್ವರ
ರಾರುಂ ಮುನ್ನಾರ್ತರಿಲ್ಲ ವಾಗ್ದೇವಿಯ ಭಂ
ಡಾರದ ಮುದ್ರೆಯನೊಡೆದಂ
ಸಾರಸ್ವತಮೆನಿಪ ಕವಿತೆಯೊಳ್ ಕವಿ ರತ್ನಂ.

ಎಂದೂ,

ರತ್ನ ಪರೀಕ್ಷಕನಾಂ ಕೃತಿ
ರತ್ನ ಪರೀಕ್ಷಕನೆನೆಂದು ಫಣಿಪತಿಯ ಫಣಾ
ರತ್ನಮುಮಂ ರನ್ನನ ಕೃತಿ
ರತ್ನಮುಮಂ ಪರೀಕ್ಷಿಪಂಗೆಂಟೆರ್ದೆಯೇ ?

ಎಂದೂ, ಆತನು ಮಾಡಿರುವ ಸಿಂಹಘರ್ಜನೆಯನ್ನು ಕೇಳಿಯೂ ಆತನ ಕಾವ್ಯಗಳ ಪರೀಕ್ಷೆಗೆ ಕೈ ಹಾಕಿರುವ ಈ ವಿದ್ವಾಂಸರಿಗೆ

"ಆಪರಿತೋಷಾದ್ವಿದುಷಾಂ"

ಎಂಬ ಭಾರತಕವಿ ಸಾರ್ವಭೌಮನ ವಿನಯವಾಕ್ಯೇ ಬೆಂಬಲವಾಗಿರಬೇಕೆಂದು ಊಹಿಸಬೇಕಾಗಿದೆ.

ರನ್ನನು ಮಹಾಕವಿಯೆಂಬುದೂ, ಕವಿತಾಹೃದಯವನ್ನು ಸಂಪೂರ್ಣವಾಗಿ ತಿಳಿದಿದ್ದವನೆಂಬುದೂ ಆತನ ಧೈರ್ಯದಿಂದಲೂ, ಕವಿಸ್ವರೂಪ ನಿರೂಪಣೆಯಿಂದಲೂ ಸ್ಪಷ್ಟವಾಗಿದೆ. ಉತ್ಕೃಷ್ಟವಾದ ಕಾವ್ಯಕ್ಕೆ ಲಕ್ಷಣಗಳಾದ ಉತ್ತಮವಾದ ಕಥೆ, ಕಲ್ಪನಾಚಾತುರ್ಯ, ಸಹಜವಾದ ರೀತಿ, ಘನವಾದ ಶೈಲಿ, ಧರ್ಮ-ಪ್ರಭಾವ, ಉದಾತ್ತ ರಸಾನುಭವ-ಇವುಗಳ ಸ್ವಾರಸ್ಯವನ್ನು ತನ್ನ ವಿವರಣೆಯಿಂದಲೂ, ಪ್ರಯೋಗದಿಂದಲೂ, ಆತನೇ ತೋರಿಸಿಕೊಟ್ಟಿದ್ದಾನೆ. ಸರಸ್ವತಿಯ ಪ್ರೇಮಪುತ್ರರಿಗೂ, ಸರಸ್ವತೀ ದ್ರೋಹಿಗಳಿಗೂ ಇರುವ ಅಂತರವನ್ನು ಆತನು ಹೇಳಿರುವಷ್ಟು ಆವೇಶದಿಂದ ಯಾವ ಕವಿಯೂ ಹೇಳಲಿಲ್ಲ—

ಕವಿಮಾರ್ಗದೊಳಪೊಕ್ಕುಂ
ನವರಸಮಂ ತೆಱತೆಯೆ ನುಡಿದನೆನಿಸಿದ ಕವಿ ಸ
ತ್ಕವಿಯೆನಿಕುಂ ಗೂಡಾರದ
ಕವಿಯಂತಿರೆ ಮುಟ್ಟಿ ಪೋದ ಕವಿಯುಂ ಕವಿಯೇ ?

ಕಾರಕ ಪೂರಕ ವಸ್ತು ವಿ
ಚಾರಕ ನಿಸ್ತಾರಕರ್ಕಳೋಳಿಂಪೆ ಸಭೆಗೊ
ಟ್ಟೋರಂತೆ ನಾಲ್ವರಿರ್ದು ವಿ
ಚಾರಂ ಬೇೞ್ಪಂತೆ ಪೇೞ್ದ ಕೃತಿಯುಂ ಕೃತಿಯೇ ?

ದರವುರಮುಮುಂಟಸುಂಟೆಯು
ಮರೆವೊರಕಸುಮೆನಿಸಿ ತಱತಱಿಂ ನುಡಿದು ಸಭಾಂ
ತರದೊಳ್ ರಂಜಿಪುದೆ ರಸಾಂ
ತರಂಗಳಂ ಮುಟ್ಟೆ ನುಡಿದು ರಂಜಿಸವೇಡಾ ?

ಸರಸತಿಯನಬಲೆಯಂ ಗೋ
ಣ್ಮರಿಗೊಂಡರ್ಥಕ್ಕೆ ಕುದಿದು ಸೋಯಿಸುವವನ
ಕ್ಕರಿಗನೆ ಪಾತಕನಾತನೆ
ಸರಸ್ವತೀ ದ್ರೋಹನವನನಾರ್ ಮುಟ್ಟುವರೋ ?

ಪೊಸದೇಸೆಯಂ ಬೆಡಂಗಂ
ರಸನಘುಟ್ಟೆಯನರ್ಥದೃಷ್ಟಿಯುಂ ಬಗೆವರೊ ಭಾ
ವಿಸುವರೊ ಸಾರಣೆಯಂತಿರೆ
ಕಸಮಂ ಪಿಡಿವರ್ ಕೆಲರ್ ಮಹಾಪುರುಷರ್ಕಳ್ ।

ರನ್ನನು ಸರಸ್ವತಿಯ ರನ್ನನು. ಆತನ ನಿಸರ್ಗ ಕವಿತಾ ಪ್ರಭಾವದೊಡನೆ, ಒಳ್ಳೆಯ ಶಿಕ್ಷೆಯೂ ಆತನಿಗೆ ಲಭಿಸಿತು. ಸಂಸ್ಕೃತದಲ್ಲಿಯೂ, ಕನ್ನಡದಲ್ಲಿಯೂ ಒಳ್ಳೆಯ ಪಾಂಡಿತ್ಯವನ್ನು ಸಂಪಾದಿಸಿದನು. ಆ ಕಾಲದ ಅಧಿಕಾರಿಗಳಲ್ಲಿಯೂ ರಾಜರಲ್ಲಿಯೂ ಗಣ್ಯನಾಗಿ, ಆಶ್ರಯವನ್ನೂ ಬಿರುದುಗಳನ್ನೂ ಪಡೆದನು.

'ಅಜಿತ ಪುರಾಣ'ವೆಂಬ ಧಾರ್ಮಿಕ ಗ್ರಂಥದಲ್ಲಿಯೂ 'ಸಾಹಸಭೀಮ ವಿಜಯ'* ವೆಂಬ ಲೌಕಿಕ ಗ್ರಂಥವಲ್ಲಿಯೂ ತನ್ನ ಮಹತ್ತನ್ನು ತನ್ನ ಹಿಂದೆ ಬಿಟ್ಟು ಹೋಗಿದ್ದಾನೆ. 'ಪರಶುರಾಮಚರಿತೆ' ಎಂಬ ಮೊಟ್ಟಮೊದಲು ಬರೆದ ಗ್ರಂಥ ನಮಗೆ ಸಿಕ್ಕಿಲ್ಲ. ಈ ಮೂರು ಗ್ರಂಥಗಳನ್ನೂ "ರತ್ನತ್ರಯ"ಗಳೆಂದು ಕರೆದಿದ್ದಾನೆ. ಅಜಿತಪುರಾಣದಲ್ಲಿ ತನ್ನ ಮತವಾದ ಜೈನಮತವನ್ನು ಪ್ರತಿಪಾದಿಸಿರುತ್ತಾನೆ. ಇದರಲ್ಲಿ ರನ್ನನ ಕವಿತಾಶಕ್ತಿಗೆ ಸರಿಯಾದ ಅವಕಾಶವಾಗಲಿಲ್ಲ. ವಿಷಯವೂ ಮತಾಭಿಮಾನಿಗಳಲ್ಲದವರಿಗೆ ಅಷ್ಟು ರುಚಿಸಲಾರದು. ಸಾಹಸ ಭೀಮವಿಜಯದಲ್ಲಾದರೊ ಸರ್ವರಿಗೂ ಆದರಣೀಯವಾದ ಮಹತ್ತಾದ ಕಥೆಯೂ, ಮಹಾವೀರನಾಯಕರೂ, ರಸೋತ್ಪಾದನೆಗೆ ಅನುಕೂಲವಾದ ಸನ್ನಿವೇಶಗಳೂ, ಪಂಪನ, ಭಟ್ಟನಾರಾಯಣನ, ಒಂದು ವೇಳೆ ಭಾಸನ ಪ್ರೇರಣೆಯೂ ಒದಗಿ, ರನ್ನನ ಪ್ರತಿಭೆ ಉಕ್ಕಿ ಹರಿದು, ಬಹುಶಃ ಕನ್ನಡದಲ್ಲಿ ಪರಮೋತ್ಕೃಷ್ಟವಾದ ಕಾವ್ಯಗಳಲ್ಲಿ ಒಂದು ಎಂದು ಹೇಳಬಹುದಾದ ಕಾವ್ಯರತ್ನವಾಗಿ ಫಲಿಸಿರುವುದು. ಇದರ ನಾಟಕ ಸಂವಿಧಾನವೂ, ದುರ್ಯೋಧನ ಪಾತ್ರ ಕಲ್ಪನೆಯೂ, ಸಮಯೋಚಿತವಾದ ಭಾವಗಳೂ, ರಸಪ್ರವಾಹವೂ, ಶೈಲಿಯೂ ಅದ್ವಿತೀಯವಾಗಿರುವುವು. ಮೆಚ್ಚಿಸುವುದಕ್ಕೆ ಸುಲಭನಲ್ಲದ ಎಂತಹವನಾದರೂ ಈ ಕಾವ್ಯಕ್ಕೆ ಬೆರಗಾಗಿ, ಇಂತಹ ಕವಿಯನ್ನೂ, ಇಂತಹ ಕಾವ್ಯವನ್ನೂ ಪಡೆದಿರುವ ಕನ್ನಡವು ಧನ್ಯವೆಂದು ಹೇಳದಿರಲಾರನು. ರನ್ನನ ಕೃತಿರತ್ನವನ್ನು ಪರೀಕ್ಷಿಸುವವನಿಗೆ ಎದೆ ಎಷ್ಟು ? ಎಂದು ಕವಿ ಮೂದಲಿಸಿರುವುದು ಕೇವಲ ಗರ್ವದ ಮಾತಲ್ಲವೆಂದು ಈ ಕಾವ್ಯವೆನ್ನಿಸುವುದು.

ಆದರೂ ಈ ಕಾಲದ ವಾಚಕರು ಇಂತಹ ಉತ್ತಮ ಕವಿಯ ಗ್ರಂಥಗಳನ್ನು ಓದುವಾಗ ಕೂಡ ಸ್ವಲ್ಪ ಪರೀಕ್ಷೆ ಮಾಡುವುದು ಅವರ ಕರ್ತವ್ಯ. ನಾವು ಬಹುಮಾನಿಸತಕ್ಕ ಪುರುಷನು ರನ್ನ ಪಂಡಿತನಲ್ಲ, ರನ್ನ ಶಾಸ್ತ್ರಿಯಲ್ಲ, ರನ್ನ ಕವಿ. ಸಾಹಿತ್ಯಶಾಸ್ತ್ರ, ಧರ್ಮಶಾಸ್ತ್ರ, ಮತಸಿದ್ಧಾಂತ ಮುಂತಾದವುಗಳಲ್ಲಿ ಕಾಲಾನುಗುಣವಾಗಿ ಶ್ರದ್ಧೆಯೂ, ರುಚಿಯೂ ಬದಲಾಯಿಸುತ್ತಿರು

---

* 'ಸಾಹಸ ಭೀಮ ವಿಜಯ'ದ ಆಶ್ವಾಸಗಳ ಕಡೆಯ ಗದ್ಯಗಳಲ್ಲಿ "ಚಾಳುಕ್ಯ ಚಕ್ರವರ್ತಿ ಶ್ರೀ ಸಾಹಸ ಭೀಮ ವಿಜಯ"ವೆಂದು ಸ್ಪಷ್ಟವಾಗಿ ಹೇಳಿರುವುದರಿಂದ ಇದೇ 'ಚಕ್ರೇಶ್ವರ ಚರಿತೆ' ಎಂದು ರನ್ನನು ಹೇಳಿರುವ ಗ್ರಂಥವೆಂದು ತೋರುತ್ತದೆ.

ವುದು ಸ್ವಭಾವ. ಒಂದು ರುಚಿಗೆ, ಒಂದು ಶ್ರದ್ಧೆಗೆ ಹಿತವಾದ ವಿಷಯ ಮತ್ತೊಂದು ರುಚಿಗೆ, ಮತ್ತೊಂದು ಶ್ರದ್ಧೆಗೆ ಹಿತವಾಗದಿರಬಹುದು. ರನ್ನನಲ್ಲಿ ಕೂಡ ಒಂದು ಕಾಲಕ್ಕೆ ಸುಂದರವಾದ, ಮತ್ತೊಂದು ಕಾಲಕ್ಕೆ ಅಷ್ಟು ಸುಂದರವಲ್ಲದ, ಅಂಶಗಳಿರಬಹುದು. ಪ್ರಪಂಚದ ಮನುಷ್ಯಮಾತ್ರನಾದ, ಯಾವ ಕವಿಚಕ್ರವರ್ತಿಯಲ್ಲಾಗಲಿ ಕುಂದುಕೊರತೆಗಳಿಲ್ಲವೆಂದಾಗಲಿ, ಕಲಾ ಸೌಂದರ್ಯದ ವಿಷಯದಲ್ಲಿ ತಪ್ಪು ತಿಳಿವಳಿಕೆಗಳಿಲ್ಲವೆಂದಾಗಲಿ, ಸರಿಯಾಗಿರುವ ಕಡೆಗಳಲ್ಲಿ ಕೂಡ ಕವಿತಾಶಕ್ತಿ ತನ್ನ ಗುರಿಯನ್ನು ನೇರವಾಗಿ ಹೋಗಿ ಮುಟ್ಟಿರುವುದೆಂದಾಗಲಿ ಸಾಧಿಸುವುದು ಮೂಢಭಕ್ತಿ. ಇದರಿಂದ ಪ್ರಯೋಜನವಿಲ್ಲ. ಕೊನೆಗೆ ನಿಲ್ಲುವುದು ಅಭಿಮಾನವಲ್ಲ, ಸತ್ಯ.

ಆದುದರಿಂದ ರನ್ನನನ್ನು ಪರೀಕ್ಷೆಮಾಡಿ; ರನ್ನನನ್ನು ಬಿಡದೆ ವಿಮರ್ಶೆಮಾಡಿ. ಆತನ ಕವಿತಾಶಕ್ತಿ ಎಷ್ಟು? ಆತನು ನಿರ್ಮಿಸಿರುವ ಲೋಕ ಯಾವುದು? ಅದರ ಸೌಂದರ್ಯ, ಅದರ ಘನತೆ ಏನು? ಆತನು ಮೂರ್ತಿಗಳಾಗಿ ಕಡೆದಿರುವ ವ್ಯಕ್ತಿಗಳು ಯಾರು? ಅವರ ಜೀವರಹಸ್ಯವನ್ನು ಭೇದಿಸಿ, ಅವರ ಮಾನುಷಾಮಾನುಷ ಸ್ವರೂಪವನ್ನು ಎಷ್ಟುಮಟ್ಟಿಗೆ ನಮ್ಮ ಕಣ್ಣಿಗೆ ಕಟ್ಟಿದ್ದಾನೆ? ಆತನ ಭಾವಗಳು, ಬೋಧನೆಗಳು, ಧರ್ಮ ತತ್ತ್ವಗಳು ಯಾವುವು? ಅವು ಎಷ್ಟುಮಟ್ಟಿಗೆ ಸರ್ವಸಮ್ಮತವಾದುವು? ಉತ್ಸಾಹಜನಕವಾದುವು? ನಮಗೂ ಆತನಿಗೂ ಎಷ್ಟುದೂರ ಸಮಾನದೃಷ್ಟಿ? ಎಲ್ಲಿ ನಾವೂ ಆತನೂ ಒಡೆಯಬೇಕಾದೀತು? ಆತನ ಕಾವ್ಯ ನಿರೂಪಣೆಯ ಕ್ರಮವೇನು? ಆಕಾರವೇನು, ಆತ್ಮವೇನು? ರೀತಿಯೇನು, ಶೈಲಿಯೇನು? ಕನ್ನಡದ ಬಿಗಿಯೇನು, ಸೊಬಗೇನು, ಇಂಪೇನು, ಸೊಂಪೇನು? ರನ್ನನನ್ನು ನಿಲ್ಲಿಸಿ ಪ್ರಶ್ನೆಮಾಡಿ, ಪರೀಕ್ಷೆಮಾಡಿ, ಜಳ್ಳುತೂರಿ, ಕಾಳನ್ನು ತುಂಬಿಕೊಳ್ಳಿ—ಸಾಹಿತ್ಯ ಕಲಾಪುತ್ರರ ಆತ್ಮಪುಷ್ಟಿಗಾಗಿ.

ರನ್ನನನ್ನು ನೆನೆಸಿಕೊಂಡಾಗಲೆಲ್ಲಾ ಆತನ ಕಾವ್ಯಗಳಲ್ಲಿ ಎರಡು ಭಾಗಗಳು ನನ್ನ ಹೃದಯವನ್ನು ತುಂಬಿ, ಕಣ್ಣನ್ನು ಹನಿಗೂಡಿಸುವುವು. 'ಗದಾಯುದ್ಧ'ದಲ್ಲಿ ಸ್ನೇಹಮೂರ್ತಿಯಾದ ದುರ್ಯೋಧನನ ಪ್ರಲಾಪ ಒಂದು, 'ಅಜಿತಪುರಾಣ'ದಲ್ಲಿ ತೀರ್ಥಂಕರನು ಪೂರ್ವಜನ್ಮದಲ್ಲಿ ತನ್ನ ಜೀವಕ್ಕೆ ಮಾಡಿದ ವೈರಾಗ್ಯ ಬೋಧನೆ ಒಂದು. ರನ್ನಕವಿ ಪ್ರಶಸ್ತಿಗೆ ರನ್ನನೇ ಮುನ್ನುಡಿಯನ್ನು

ನುಡಿದು ನಮ್ಮನ್ನು ಮರುಳುಗೊಳಿಸಲಿ !—

ಆನುಂ ದುಶ್ಶಾಸನನುಂ
ನೀನುಂ ಮೂವರೆ ದಲಾತನುಂ ಕೞಿದ ಬೞಿ
ಕ್ಕಾನುಂ ನೀನೆ ದಲೀಗಳ್
ನೀನುಂ ಮುಗುಱ್ಚಿತ್ತು ಪೋದೆ ಅಂಗಾಧಿಪತೀ ।

ಅಱಿಯೆನಿದಂ ನಿನ್ನಿಂದಿನ
ತೆಱನಂ ನೀನೆನಗದೇಕೆ ಮುಳಿದಿರ್ಪೆಯೊ ಮೇಣ್
ಮಱುವಾತುಗುಡದೆ ರವಿಸುತ
ಮಱೆವಿಂದಿರ್ದಪೆಯೊ ಮೇಣ್ ಬೞಲ್ದಿರ್ದಪೆಯೋ !

ನಿನ್ನ ಕೆಳೆಯಂ ಸುಯೋಧನ
ನಸ್ಕೋದನೆ ನುಡಿಯುವಪ್ಪಿಕೊಳ್ಳದೆ ಬೆಸಸೇ
ನೆನ್ನದೆ ಜೀಯೆನ್ನದೆ ದೇ
ವೆನ್ನದೆ ಏಕುಸಿರದಿರ್ಪೆ ಅಂಗಾಧಿಪತೀ ?

ಅನೃತಂ ಲೋಭಂ ಭಯಮುಂ
ಬಿನಿತುಂ ನೀನಿರ್ದ ನಾಡೊಳಿರ್ಕುಮೆ ರವಿನಂ
ದನ ನನ್ನಿ ಚಾಗಮಣ್ಮಂ
ಬಿನಿತರ್ಕಂ ನೀನೆ ಮೊತ್ತ ಪೊವಲಿಗನಾದಯ್ ॥

ನೀನುಳ್ಳೊಡುಂಟು ರಾಜ್ಯಂ
ನೀನುಳ್ಳೊಡೆ ಪಟ್ಟಮುಂಟು ಬೆಳ್ಗೊಡೆಯುಂಟಯ್
ನೀನುಳ್ಳೊಡುಂಟು ಪೀಱಿಗೆ
ನೀನಿಲ್ಲದಿವೆಲ್ಲಮೊಳವೆ ಅಂಗಾಧಿಪತೀ ?

ನಯನದೊಳಮೆರ್ದೆಯೊಳಂ ನಿ
ನ್ನಯ ರೂಪಿರ್ದಪುದು ನಿನ್ನ ಮಾತಿರ್ದಪುದೆ
ನ್ನಯ ಕಿವಿಯೊಳಗಿನನಂದನ
ವಿಯೋಗಮೆಂತಾದುದಯ್ಯ ಎನಗಂ ನಿನಗಂ

ನಿನ್ನಂ ಕೊಂದ ಕಿರೀಟಿಯು
ಮೆನ್ನನುಜನನಿಕ್ಕಿ ಕೊಂಡ ಭೀಮನುಮೊಳನಾ

ನಿನ್ನುಮೊಳಂ ಗಡ ಸಾಲದೆ
ನಿನ್ನಯ ಕೂರ್ಮೆಗಮುದೆನ್ನ ಸೌಧರ್ಮಿಕೆಗಂ ।

ಸೂನುಗಳೞಿವಂ ಪ್ರಿಯಮಿ
ತ್ರಾನುಜರೞಿವಂ ವಿಧಾತ್ರ ! ನೀಂ ಕಾಣಿಸಿ ಇ
ನ್ನೇನಂ ಕಾಣಿಸಲಿರ್ದಪೆ
ನೀನೆನ್ನಂ ಪಾಪಕರ್ಮನಂ ನಿರ್ಗುಣನಂ !

ಈ ದುಃಖ ಕಲ್ಲನ್ನು ಕರಗಿಸುವುದು. ವೈರಾಗ್ಯ ಬೋಧನೆಯೂ ಹಾಗೆಯೇ ಎಂತಹ ಲೋಕಾಭಿಮಾನಿಯನ್ನಾದರೂ ಅಯ್ಯೋ ಎನ್ನಿಸುವುದು. ಅದನ್ನೂ ಕೇಳಿ—

ತನಗಲ್ಲದೊಡಲ್ಗೊಡಮೆಗೆ
ಮನಮಿಟ್ಟಪವರ್ಗ ಮಾರ್ಗಮಂ ಪೊರ್ದದೆ ತ
ನ್ನನೆ ತಾನೆ ನಂಬಿಸುವೊಡಾ
ತ್ಮನಂತು ಪೇೞಾತ್ಮವಂಚಕರ್ ಪೆಱರೊಳರೇ ?

ಸಾರದೆ ಸಾರಮಪ್ಪ ಜಿನಧರ್ಮಮನಾತ್ಮನಸಾರವಪ್ಪುದಂ
ಸಾರಮಿದೆಂದು ನಂಬಿ ತನಗಲ್ಲದುದಂ ತನಗಪ್ಪುದೆಂದು ಕೇ
ದಾರ ವಿಹಾರ ಸೋದರ ಕೃಶೋದರ ಸುಂದರ ದಾರ ದಾರಕೋ
ದಾರ ವಿಮೋಹದೊಳ್ ತೊಡರ್ದು ದಾರುಣ ದುಃಖಮನೆಯ್ದಿರ್ಕುಮೇ ?

ಮುನಿದುಯ್ವ ಜವಂಗಂ ಮಾ
ಯೆನಲಣ್ಮುವರಿಲ್ಲ ಬಗೆಯೆ ನಿನಗಿನ್ನಾರ್ಮಂ
ಜಿನಧರ್ಮಮೊಂದೆ ಜೀವನೆ
ನೆನೆ ಗಡ ಲೋಕತ್ರಯಕ್ಕೆ ದಿನನಂ ಜಿನನಂ !

ಮಱಗೆಟ್ಟು ಜೀವ ಧರ್ಮಾ
ಮೃತಮಂ ಸೇವಿಸದಧರ್ಮಮಂ ಸೇವಿಸಿ ದು
ರ್ಗತಿಗಿೞಿದೀ ಜವನೆಂಬಱಿ
ಸಿ ತಿಂಬ ದೈವಕ್ಕೆ ಪೋಗಿ ಪಾೞಿಂ ಬಿಡುವಯ್ !

ಎನಿತೆನಿತು ಕೞಿದ ಭವಮುಂ
ನೆನೆವಪೆ ! ಎನಿತೆನಿತು ಭವದ ಬಂಧುಗಳಂ ನೀಂ

ನೆನೆದಪೆ ಎನಿತೆನಿತೊಡಲಂ
ನೆನೆದಪೆ ! ಎಲೆ ಜೀವ ನೀನೆ ಪೇೞ್ ಪವಣೊಳವೇ ?

ಎನಿತಂ ಕುಕ್ಕುೞಿಗುದಿದಪೆ ?
ಎನಿತಂ ಕಕ್ಕುೞಿಗೞಿಲ್ದಪಯ್ ? ಜೀವನೆ ನೀ
ನೆನಿತಂ ಮಮ್ಮಲಮಱುಗುವೆ ?
ಎನಿತಂ ಸಂಸಾರದೊಳಗೆ ತಿಱ್ರನೆ ತಿರಿವಯ್ ?

ಕಡೆಯಿಲ್ಲದ ಸಂಸಾರದ
ಕಡೆಗಾಣಲ್ ಬಗೆವೆಯಪ್ಪೊಡೆನ್ನುಕ್ತಿಗೊಡಂ
ಬಡು ಜೀವ ನಿನ್ನ ಕಾಲಂ
ಪಿಡಿವೆಂ ಧರ್ಮಮನೆ ಮಗುೞ್ಚಿ ಬಲ್ವಿಡಿವಿಡಿಯಾ

ಜನನ ಮೃತಿ ದೇವ ನಾರಕ
ಮನುಷ್ಯ ತಿರ್ಯಗ್ವಿಕಲ್ಪಗತಿಗಳೊಳೆನಸುಂ
ನಿನಗೆ ಸುಖಮಿಲ್ಲ ನೆಟ್ಟನೆ
ಮನದೊಳ್ ಭಾವಿಪೊಡಸಾರಮೀ ಸಂಸಾರಂ

ಈ ನಾರಕ ತಿರ್ಯಗ್ಗತಿ
ಗೀ ನರಸುರಗತಿಗೆ ಪೇಸಿದೆಂ ದರ್ಶನದಿಂ
ಜ್ಞಾನದಿನೊಪ್ಪುವ ಪರಮ
ಸ್ಥಾನಮನಾಂ ಪಡೆವೆನಕ್ಕೆ ಪಂಚಮಗತಿಯಂ

ಶಿಷ್ಟ ಜನಾಶಿಷ್ಟಂ ಬಹು
ಕಷ್ಟಂ ಬಹುದುಷ್ಟಮುಷ್ಟಕರ್ಮಾಗ್ನಿ ಪರಿ
ಪ್ಲುಷ್ಟಂ ಹಾ ಹಾ ಧಿಕ್ ಛೀ
ಕಷ್ಟಮವಶ್ಯಂ ನಿಕೃಷ್ಟಮೀ ಸಂಸಾರಂ.

ದಿವಸದಿವಸಂಗಳಿಂ ಕುಂ
ದುವುವಲ್ಲದೆ ಬಳೆಯನಾಯುವುಂ ವಪುವುಂ ಪೆ
ರ್ಚುವುವಲ್ಲವು ವಿಷಯಸುಖ
ಕ್ಕವಚತ್ತಿಂ ಪಡೆದುಕೊಳ್ವೆನಕ್ಷಯಸುಖಮಂ

ಅಂಗಜನ ಸುಖದ ಸಾಮ್ರಾ
ಜ್ಯಂಗಳ್ ಶಾರೀರ ಮಾನಸಾಗಂತುಕ ದುಃ
ಖಂಗಳನೆ ಮಾಳ್ಪುವದಱಿಂ
ಹಿಂಗುವೆನಿನ್ನೆನಗೆ ಜಿನನ ಚರಣಂ ಶರಣಂ.

ಈ ವೈರಾಗ್ಯ ಘೋಷಣೆಗೆ ಜೈನರದೇ ಅಲ್ಲ, ಅಖಿಲ ಭಾರತೀಯರ ಹೃದಯಗಳೂ ಕಂಪಿಸುವುವು, ಅನುಕಂಪಿಸುವುವು—ನಿಕೃಷ್ಟಮಿಾ ಸಂಸಾರಂ ಅಸಾರಮಿಾ ಸಂಸಾರಂ! ನಿಕೃಷ್ಟವಾದುವೂ, ಅಸಾರವಾದುವೂ ಸಂಸಾರದಲ್ಲಿಲ್ಲವೆಂದಲ್ಲ; ಆದರೆ ಸಂಸಾರವೇ ನಿಕೃಷ್ಟವೆ? ಸಂಸಾರವೇ ಅಸಾರವೆ? ದುರ್ಯೋಧನನಂತಹ ಮೈತ್ರಿಯೂ, ವೀರ್ಯವೂ, ದುಃಖವೂ ನಿಕೃಷ್ಟವೆ? ಅಸಾರವೆ? ವೈರಾಗ್ಯವೊಂದೇ ಸಾರವೆ? ಇದರಲ್ಲಿ ರನ್ನನ ಮಾತೇ ಕಡೆಯ ಮಾತೆ? ರನ್ನನ ದರ್ಶನವೇ ಕಡೆಯ ದರ್ಶನವೆ? ಯಾರು ಬಲ್ಲರು? ತತ್ವದಲ್ಲಿ ಇದು ಹೇಗಾದರೂ ಇರಲಿ; ಕಾವ್ಯದಲ್ಲಿ ಎಲ್ಲಿ ತರೋಣ ನಾವು ಇಂತಹ ಬರವಣಿಗೆಯನ್ನ!

ಜನಪದ ಸಾಹಿತ್ಯ*

'ಪಂಡಿತರುಂ ವಿವಿಧಕಳಾ
ಮಂಡಿತರುಂ ಕೇಳತಕ್ಕ ಕೃತಿಯಂ ಕ್ಷಿತಿಯೊಳ್
ಕಂಡರ್ ಕೇಳ್ವೊಡೆ ಗೊರವರ
ದುಂದುಚಿಯೇ ಬೀದಿವರೆಂಪ ಬೀರನ ಕತೆಯೇ ?”

ಎಂದು ಮಧುರಕವಿ ಜನಪದಸಾಹಿತ್ಯವನ್ನು ಹಾಸ್ಯಮಾಡಿರುವನು. ಶಾಸ್ತ್ರಬಲದಿಂದಲೂ, ಸಂಸ್ಕೃತ ಪ್ರತಿಭೆಯಿಂದಲೂ ರಚಿತವಾದ ಪ್ರೌಢಸಾಹಿತ್ಯವೇ ಸಾಹಿತ್ಯವೆಂದೂ, ಹಳ್ಳಿಗಳಲ್ಲಿಯೂ, ಬೀದಿಗಳಲ್ಲಿಯೂ, ಮನೆಗಳಲ್ಲಿಯೂ, ಜನಸಾಮಾನ್ಯರು ಹಾಡಿಕೊಳ್ಳುವ ಹಾಡುಗಳು ಸಾಹಿತ್ಯವಲ್ಲವೆಂದೂ ಇಂತಹ ಪಂಡಿತರ ಭಾವನೆ. ಈ ಅಭಿಪ್ರಾಯದ ಪ್ರಕಾರ ಆದಿಯಲ್ಲಿ ದೇವತಾ

---

* ಧಾರವಾಡದ 'ಜಯಕರ್ನಾಟಕ ಗ್ರಂಥಮಾಲೆ'ಯ ಚತುರ್ಥಪುಷ್ಪವಾದ 'ಗರತಿಯ ಹಾಡು' ಸಂಗ್ರಹಕ್ಕೆ ಬರೆದ ಪ್ರಸ್ತಾವನೆ. ಇದು ೧೯೩೧ರಲ್ಲಿಯೆ ಸಿದ್ಧವಾಗಿದ್ದರೂ 'ಗರತಿಯ ಹಾಡಿ'ನ ಎರಡನೆಯ ಮುದ್ರಣದಲ್ಲಿ (ಜುಲೈ ೧೯೩೭) ಬೆಳಕಿಗೆ ಬಂತು.

ಪ್ರೇರಣೆಯಿಂದ ಹುಟ್ಟಿದುದೇ ಕವಿತಾವಾಣಿ; ಅದು ಋಷಿಗಳಲ್ಲಿಯೂ ಮಹಾ ಕವಿಗಳಲ್ಲಿಯೂ ಕಾಣುವುದು. ಆ ಬಳಿಕ ಸರಸ್ವತೀ ಪ್ರಸಾದವಿಲ್ಲದ ಬರಿಯ ದುರಾಶೆಯ ದುಷ್ಕರ್ಮಿಗಳಲ್ಲಿ ತಲೆದೋರುವುದು ಅದರ ಆಭಾಸ. ಕಟ್ಟಕಡೆಗೆ ಕಾಣಿಸಿಕೊಂಡು, ಜನಗಳು ಹಾಡಿ ನಲಿಯುತ್ತಿರುವ ಬಡಹಾಡಂತೂ ಕವಿತ್ವವೇ ಅಲ್ಲ.

ಈ ಅಭಿಪ್ರಾಯಕ್ಕೆ ವಿರೋಧವಾಗಿ ಕವಿತ್ವದ ಮೂಲವನ್ನೂ, ಆದಿ ಚರಿತ್ರೆಯನ್ನೂ ಪರಿಶೋಧಿಸಿದತಜ್ಞರು ಹೇಳುವುದೇನೆಂದರೆ—ಮೊದಲು ಹುಟ್ಟಿದುದು ಜನವಾಣಿ: ಅದು ಬೆಳೆದು, ಪರಿಷ್ಕೃತವಾಗಿ ವೃದ್ಧಿಯಾದುದು ಕವಿವಾಣಿ. ಜನವಾಣಿ ಬೇರು: ಕವಿವಾಣಿ ಹೂವು. ಕಾಡುಜನರೂ, ಒಕ್ಕಲಿಗರೂ, ಹೆಂಗಸರೂ, ಮಕ್ಕಳೂ—ಶಾಸ್ತ್ರಕಾವ್ಯಗಳ ಪರಿಚಯವೇ ಇಲ್ಲದ ಜನಸಾಮಾನ್ಯರೆಲ್ಲರೂ ಹಾಡಿನ ಮಟ್ಟನ್ನು ಎಂದರೆ ಅಷ್ಟುಮಟ್ಟಿಗೆ ಛಂದಸ್ಸನ್ನು ಬಲ್ಲರು. ಹಿಂದಿನಿಂದ ಬಂದ ಹಾಡನ್ನು ತಲೆಮೊರೆಯಾಗಿ ಕಲಿತು ಹೇಳುವುದಲ್ಲದೆ, ಹೊಸ ಹಾಡನ್ನೂ ಕಟ್ಟಬಲ್ಲರು. ಆದಿಕಾಲದಲ್ಲಿ ಇನ್ನೂ ಕವಿತ್ವವೂ ಶಾಸ್ತ್ರವೂ ಶೈಶವದ ದಶೆಯಲ್ಲಿದ್ದಾಗ, ಹಳ್ಳಿಯಲ್ಲಿ, ಹೊಲದ ಕಣದಲ್ಲಿ, ಹಬ್ಬ-ಹುಣ್ಣಿವೆಗಳಲ್ಲಿಯೂ ಸುಖದುಃಖದ ಸಂದರ್ಭಗಳಲ್ಲಿಯೂ ಜನರು ಸೇರಿ ತಮ್ಮ ರಸಭಾವಗಳನ್ನು ಹಾಡಿಕೊಂಡು ಕುಣಿಯುತ್ತಿದ್ದರು. ಕುಣಿತದ ಹೆಜ್ಜೆಗಳೇ ತಾಳ; ಹಾಡಿನ ಅಭಿನಯವೇ ಕುಣಿತ. ಇದೇ ಜನರ "ಆಟಪಾಟ." ಕುಯಿಲು, ಕುಡಿತ, ಕೋಲಾಟ, ಬೇಟೆ, ಮದುವೆ, ಸಾವು, ಕಾಳಗದ ಸೋಲು ಗೆಲವುಗಳು, ಬಾಳಿಕೆಯ ಕಷ್ಟಸುಖಗಳು, ವೀರರ ಸಾಹಸಕಾರ್ಯಗಳು, ದೈವಾನುಭವ, ದೈವಭಕ್ತಿ ಇವೇ ಮೊದಲಾದ ಎಲ್ಲರೂ ಬಲ್ಲ ವಿಷಯಗಳನ್ನು ಕುಣಿಯುತ್ತಾ ಹಾಡು ಕಟ್ಟುತ್ತಿದ್ದರು. ಹೆಂಗಸರೂ, ಕೆಲಸಗಾರರೂ ಕೆಲಸದ ಬಳಲಿಕೆಯನ್ನು ಈ ಹಾಡಿನ ರಾಗದಲ್ಲಿ, ಈ ಗೀತದ ಆನಂದದಲ್ಲಿ ಮರಸುತ್ತಿದ್ದರು. ಕುಟ್ಟುವಾಗ, ಬೀಸುವಾಗ, ಮಗುವನ್ನು ತೂಗುವಾಗ, ಮದುವೆಗಾಗಿ ನಲಿಯುವಾಗ, ಸಾವಿಗಾಗಿ ಅಳುವಾಗ, ಭಾರವನ್ನೆತ್ತುವಾಗ, ಬಂಡಿಯನ್ನು ಹೊಡೆಯುವಾಗ, ದೋಣಿಯನ್ನು ನಡೆಸುವಾಗ, ಕಾಳಗದ ಸಾಧನೆಗಳನ್ನು ಅಭ್ಯಾಸಮಾಡುವಾಗ, ಹೆಂಗಸರೂ ಗಂಡಸರೂ ಈ ಹಾಡುಗಳನ್ನು ಹೇಳುತ್ತಿದ್ದರು; ಕಟ್ಟುತ್ತಿದ್ದರು. ಹೀಗೆ ನೃತ್ಯದ

ಉಲ್ಲಾಸವನ್ನು ಪ್ರಕಾಶಗೊಳಿಸುತ್ತಾ, ಉದ್ಯೋಗದ ಆಯಾಸವನ್ನು ಪರಿಹಾರಮಾಡುತ್ತಾ, ಆಗ್ಗೆ ಏಳುವ ಉಸಿರಿಗೆ ತಕ್ಕಹಾಗೆ ರಾಗವನ್ನು (ಛಂದಸ್ಸನ್ನು) ಹೊಂದಿಸುತ್ತಾ, ಜನರ ಸರ್ವಸಾಧಾರಣವಾದ ಮನೋಭಾವವನ್ನು ವಿಶದಗೊಳಿಸುತ್ತಾ, ಹುಟ್ಟಿದುವು ಈ ಹಾಡುಗಳು; ಮತ್ತು ಈ ಹಾಡಿನ "ಮರಿ"ಗಳು.

ಪ್ರತಿಯೊಂದು ಭಾಷೆಯಲ್ಲಿಯೂ ಬಹು ಪುರಾತನ ಕಾಲದಿಂದಲೂ ಇಂತಹ ಹಾಡುಗಳು ಉಂಟು. ಇವುಗಳ ಸರಣಿಯನ್ನನುಸರಿಸಿ, ಯಾರೋ ಒಬ್ಬನು ತಾನೊಬ್ಬ ಕವಿ ಎಂಬ ಪೃಥಗ್ಭಾವವಿಲ್ಲದೆ ಜನಕ್ಕಾಗಿ, ಜನರ ನಡುವೆ ಜನರಭಾವವನ್ನು ಹಾಡಿ, ಹಾಗೇ ದೇಶದಲ್ಲೆಲ್ಲಾ ಹಬ್ಬಿಕೊಂಡು, ತಲೆಯಿಂದ ತಲೆಗೆ ನಡೆದುಬರುತ್ತಾ, ಪುಸ್ತಕಕ್ಕೆ ಏರದೆ (ಆಗಿನ್ನೂ ಬರೆವಣಿಗೆಯಿಲ್ಲ), ಬಾಯಿಪಾಠದಲ್ಲಿಯೇ ಕಾಲಕ್ಕೆ ತಕ್ಕಂತೆ ಮಾತುಗಳೂ ಭಾಷೆಯೂ ಸರಿಹೋಗುತ್ತಾ, ಛಂದಸ್ಸು ಮಾತ್ರ ರಾಗದಲ್ಲಿ ಉಳಿದು ಕೆಡದೆ ಈ ಹಾಡುಗಳು, ಈ "ಪಳಮೆ"ಗಳು, ಈ ಜನಪದ ಸಾಹಿತ್ಯವು ಬದುಕಿ ಬಂದಿದೆ. ಇವುಗಳ ಛಂದಸ್ಸು ಬಹು ಸಹಜ, ಸರಳ; ಭಾಷೆಯೂ ಸಹಜ, ಸರಳ; ಆಡುವ ಮಾತು, ಹಾಡುವ ಮಟ್ಟು. ಅದರೂ ಜನಗಳ ಹೃದಯದಿಂದ ಸಂತೋಷದ ಅಥವಾ ದುಃಖದ ಸಮಯದಲ್ಲಿ ನೇರವಾಗಿ ಉಕ್ಕಿಬಂದ ಕಾರಣದಿಂದ ಇವುಗಳಲ್ಲಿ ಒಂದು ಸೊಗಸೂ, ಒಂದು ಕಾಂತಿಯೂ, ಒಂದು ರಮಣೀಯತೆಯೂ ಮೆರೆಯುವುವು, ಮಕ್ಕಳ ತೊದಲು, ಇನಿಯಳ ಲಲ್ಲೆ, ತೆಂಗಾಳಿಯ ತೀಟ, ಮಲ್ಲಿಗೆಯ ಕಂಪು, ಬೆಳದಿಂಗಳ ತಂಪು—ಮುಂತಾದ ಉಪಮಾನಗಳು ಕೃತಕ ಕವಿತ್ವಕ್ಕಿಂತಲೂ ಈ ಹಾಡುಗಳಿಗೆ ಹೆಚ್ಚಾಗಿ ಒಪ್ಪುತ್ತವೆ.

ಈ ಹಾಡುಗಳು ಒಂದೊಂದು ಬಿಡಿ ಪದ್ಯಗಳಾಗಿ ಯಾವುದಾದರೂ ಒಂದು ಭಾವವನ್ನೋ ಸನ್ನಿವೇಶವನ್ನೋ ತಿಳಿಸುವುದೇ ಹೆಚ್ಚು. ಆದರೆ ಹಲವು ಪದ್ಯಗಳಲ್ಲಿ ಕಥೆ, ಭಾವವಿವರಣೆ, ಆಟಪಾಟ, ಬೇಟೆ ಕಾಳಗಗಳ ವರ್ಣನೆ, ಒಗಟುಗಳ ಮೇಲಾಟ, ಕುಡಿತದ ಆರಾಟ ಮುಂತಾದುವನ್ನೂ ಹೇಳುವುದುಂಟು. ನಾಗರಿಕತೆಯ ಕಾಲದಲ್ಲಿ ಇತಿಹಾಸ ಪುರಾಣಗಳ ಸಾರವನ್ನು ಜನರ ಮಟ್ಟಕ್ಕಿಳಿಸುವುದೂ, ಚರಿತ್ರೆಯಲ್ಲಿ ನಡೆದ ಮರೆಯಲಾಗದ ಸಂಗತಿಗಳನ್ನು ಜನರ ನೆನಪಿನಲ್ಲಿ ನಿಲ್ಲಿಸುವುದೂ, ಭಕ್ತಿ ಜ್ಞಾನ ವೈರಾಗ್ಯ

ಗಳನ್ನು ಮನೆಮನೆಗೂ ಬೀರುವುದೂ ಈ ಜನಪದ ಸಾಹಿತ್ಯದ ಕೆಲಸ. ಜನರಿಂದ ಹುಟ್ಟಿ ಜನರಲ್ಲಿಯೇ ಪಳಗಿ, ಜನರ ಪ್ರೇಮವನ್ನು ಸೂರೆಗೊಂಡು, ಜನರ ಜೀವನದ ಸಾರವನ್ನೂ ಹೆಂಗಸರ ಮಧುರ ಕಂಠದ ಗಾನವನ್ನೂ ಸುರಿಸುವ ಈ ಸಾಹಿತ್ಯವನ್ನು ಒಣಕವಿಗಳೂ ಅಹಂಕಾರಮುಗ್ಧರಾದ ಪಂಡಿತರೂ ಅಲ್ಲಗಳೆಯಬಹುದೇ ಹೊರತು ನಿಸರ್ಗ ಕವಿಗಳೂ ರಸಜ್ಞರೂ ಜನತಾವತ್ಸಲರೂ ಎಂದಿಗೂ ತಿರಸ್ಕರಿಸಲಾರರು. ಒಂದು ವೇಳೆ ಋಷಿಮೂಲ ನದಿ ಮೂಲಗಳನ್ನು ಯಾವ ಶ್ರದ್ಧೆಯಿಂದ ಪೂಜಿಸುವರೋ ಅವೇ ಶ್ರದ್ಧೆಯಿಂದ ಈ ಸಾಹಿತ್ಯ ಪ್ರವಾಹ ಮೂಲವನ್ನು ಪೂಜ್ಯಭಾವದಿಂದ ಕಾಣುವರು.

ಜನಪದಸಾಹಿತ್ಯವನ್ನು ಮಾತ್ರ ಉಳ್ಳ ಒಂದು ಜನಕ್ಕೆ ಆ ಸಾಹಿತ್ಯದ ಮಟ್ಟವನ್ನು ಮೀರಿ ಉತ್ತಮ ಕಾವ್ಯಗಳಿಂದ ಶೋಭಿತವಾದ ಸಾಹಿತ್ಯವನ್ನುಳ್ಳ ಜನರ ಸಂಪರ್ಕ ಉಂಟಾಗುವ ಸಂದರ್ಭ ಬಂದಾಗೆಲ್ಲಾ, ಆ ಅನ್ಯಸಾಹಿತ್ಯದ ಸೌಂದರ್ಯಕ್ಕೂ, ಗಾಂಭೀರ್ಯಕ್ಕೂ ಮರುಳಾಗಿ, ರಾಜಿಕ, ಸಾಮಯಿಕ ಕಾರಣಗಳಿಂದ ಆ ಸಾಹಿತ್ಯಕ್ಕೂ, ಸಾಹಿತ್ಯ ಶಾಸ್ತ್ರಕ್ಕೂ ಶರಣುಹೋಗಿ, ಅದರ ಕಾಂತಿಯನ್ನೂ , ಬಲವನ್ನೂ ಸ್ವೀಕರಿಸುವುದಕ್ಕೆ ಪ್ರಯತ್ನಿಸುವುದು ಸ್ವಾಭಾವಿಕವಾಗಿದೆ. ಹಿಂದೆ ಕನ್ನಡ—ಸಂಸ್ಕೃತದ ಸಮ್ಮೇಳನದಲ್ಲಿ ಹೀಗೆ ನಡೆಯಿತು. ಈಗ ಕನ್ನಡ—ಇಂಗ್ಲಿಷ್ ಸಾಹಚರ್ಯದಲ್ಲಿ ಹೀಗೆ ನಡೆಯುತ್ತಾ ಇದೆ. ಇದು ತಪ್ಪೆಂದಾಗಲಿ, ಕೆಳಗಿನ ಮಟ್ಟದ ಸಾಹಿತ್ಯವೇ ಉತ್ಕೃಷ್ಟವೆಂದಾಗಲಿ ಹೇಳಬೇಕೆಂದಲ್ಲ. ಆದರೆ ತನ್ನದನ್ನು 'ದೇಶ್ಯ'ವೆಂದು ಧಿಕ್ಕರಿಸಿ, ಅನ್ಯಮಾರ್ಗದಲ್ಲಿಯೇ ಸ್ವೇಚ್ಛೆಯಾಗಿ ಮದಿಸಿ ತಿರುಗುತ್ತಾ ಇದ್ದು, ಕಡೆಗೆ ನವೀನತೆಯ ಕುತೂಹಲವೂ ಸಾಮರ್ಥ್ಯವೂ ಕಾಲಕ್ರಮದಲ್ಲಿ ಹಳಸಿ, ಯಾವ ನಿಜವಾದ ಸತ್ವವೂ ಇಲ್ಲದೆ, ಜನರಿಂದ ದೂರವಾಗಿ ಸಾಹಿತ್ಯವು ನಿಸ್ಸಾರವಾಗುವುದು, ತೇಜೋಹೀನವಾಗುವುದು, ಸಣ್ಣ ಪಂಡಿತ ಸಂಸ್ಥೆಗಳಲ್ಲಿ ಮಾತ್ರ ಪ್ರೋಷಿತವಾಗುವುದು. ಆಗ ಮತ್ತೆ ಹಳೆಯ ಸಾಹಿತ್ಯದ ಪುನರುತ್ಥಾನವಾಗುವುದು. ಮತ್ತೆ ಸಹೃದಯರು ತವರುನಾಡಿನ, ತಾಯಿಹಾಡಿನ ಹಾಲನ್ನು ಕುಡಿದು ಸಜೀವರಾಗಬೇಕೆಂದು ಹಿಂತಿರುಗುವರು. ಜನರೊಡನೆ ಜನವಾಗುವರು. ಆ ಭಾಷೆ, ಆ ಛಂದಸ್ಸು, ಆ ಜೀವ ಮತ್ತೆ ಹೊಳಪುಗೂಡಿ ಹೆಮ್ಮೆಗೇರುವುವು.

ಸಾಹಿತ್ಯದ ಏಳಿಗೆಯ ಕಾಲದಲ್ಲೆಲ್ಲಾ ಪ್ರಪಂಚದ ಎಲ್ಲಾ ಕಡೆಯಲ್ಲಿಯೂ ಹೀಗೆಯೇ ಆಗಿದೆ; ಆಗುತ್ತಿದೆ.

ಕನ್ನಡದಲ್ಲಿ ಇಂತಹ ಕಾಲ ಒದಗಿರುವಾಗ, ಕನ್ನಡ ಕವಿತೆ ತನ್ನ ಅಳತೆಯನ್ನೇ ಅಲ್ಲ, ಆಳವನ್ನೂ ಕೂಡಾ ಕಂಡುಕೊಳ್ಳುತ್ತಿರುವಾಗ, ಸಂಸ್ಕೃತ ಇಂಗ್ಲೀಷ ಸಾಹಿತ್ಯಗಳ, ಇತರ ಸಾಹಿತ್ಯಗಳ, ಸರಿಯಾದ ಸಂಸ್ಕಾರದ ಜೊತೆಗೆ ಕನ್ನಡದ ಪ್ರೌಢ ಸಾಹಿತ್ಯದ ವ್ಯಾಸಂಗದ ಜೊತೆಗೆ, ಕನ್ನಡದ ಮತ್ತು ಇತರ ಸಾಹಿತ್ಯದ ಜನಪದ ಸಾಹಿತ್ಯವನ್ನೂ ಪರಾಮರ್ಶಿಸುವುದು ಅತ್ಯಾವಶ್ಯಕವಾದ ಕರ್ತವ್ಯ. ನವನಾಗರಿಕತೆಯ ಹೊಡೆತದಲ್ಲಿ, ಪ್ರೌಢಸಾಹಿತ್ಯದ ತಿರಸ್ಕಾರದಲ್ಲಿ ಈ ಜನಪದ ಸಾಹಿತ್ಯ ಉಳಿಯುವುದೇ ಕಷ್ಟವಾಗಿದೆ. ನಾಶವಾಗುವುದಕ್ಕೆ ಮೊದಲೇ ಇದನ್ನು ಕಾಪಾಡಿಕೊಳ್ಳುವುದು ಕನ್ನಡಿಗರ ಕರ್ತವ್ಯ. ಸಾಹಿತ್ಯಾಭಿಮಾನಿಗಳೂ, ದೇಶವತ್ಸಲರೂ ಶ್ರದ್ಧೆಯಿಂದ ಮೂಲೆ ಮೂಲೆಗಳಿಂದಲೂ ತಮ್ಮ ತಮ್ಮ ಕಡೆಯಲ್ಲಿರುವ ಹಾಡುಗಳನ್ನು ಸಂಗ್ರಹಿಸುತ್ತಾ ಬಂದರೆ ಶೀಘ್ರದಲ್ಲಿಯೇ ಕನ್ನಡನಾಡಿನ ಹಾಡುಗಳೆಲ್ಲಾ ಒಂದುಗೂಡಿ ಒಂದು ದೊಡ್ಡ ಜನಪದ ಸಾಹಿತ್ಯಕೋಶವಾಗುವುದು. ಆಗ ಆ ಸಾಹಿತ್ಯವನ್ನೆಲ್ಲಾ ಆಮೂಲಾಗ್ರವಾಗಿ ಪರಿಶೋಧಿಸಿ, ಅದರ ಸ್ವರೂಪವನ್ನು ನಿರ್ಣಯಿಸಿ, ಇವುಗಳ "ಸತ್ಯ-ಸೌಂದರ್ಯ-ಸುಖ"ಗಳನ್ನು ಅನುಭವಿಸಿ, ಇವುಗಳ ವರ್ಚಸ್ಸು ಹೊಸ ಸಾಹಿತ್ಯದಲ್ಲಿ ಮೂಡುವಂತೆ ಮಾಡಬಹುದು. ಇವುಗಳ ಛಂದಸ್ಸನ್ನು ತಮಿಳು, ತೆಲುಗು, ಕೊಡಗು, ತುಳು ಮುಂತಾದ ಭಾಷೆಗಳ ಛಂದಸ್ಸುಗಳೊಡನೆ ಹೋಲಿಸಿ, ದ್ರಾವಿಡಭಾಷೆಗಳ ಮೂಲ ಛಂದಸ್ಸಿನ ರಹಸ್ಯವನ್ನು ಅರಿಯಬಹುದು. ಆ ತಳಹದಿಯ ಮೇಲೆ ಹೊಸ ಛಂದಸ್ಸುಗಳನ್ನು ಕಲ್ಪಿಸುತ್ತಿರುವವರೂ ಈ ರಹಸ್ಯವನ್ನು ಅರಿತೇ ಕೆಲಸಮಾಡುತ್ತಿರುವರು.

ಈಗಾಗಲೇ ಎಷ್ಟೋ ಹಾಡುಗಳನ್ನು ಸಂಗ್ರಹಿಸಿ ಅವುಗಳ ಒಂದು ಭಾಗವನ್ನು "ಗರತಿಯ ಹಾಡು" ಎಂಬ ಹೆಸರಿನಲ್ಲಿ ಪ್ರಕಟಗೊಳಿಸುವ ಗೆಳೆಯರ ಗುಂಪಿನವರ ಉದ್ಯಮವು ಶ್ಲಾಘಿಸತಕ್ಕುದಾಗಿದೆ. ಈ ಜನಪದ ಸಾಹಿತ್ಯದ ವಿಷಯವಾಗಿ ಕನ್ನಡನಾಡಿನಲ್ಲೆಲ್ಲಾ ಉಪನ್ಯಾಸಮಾಡಿ, ಅದರ ಸ್ವಾರಸ್ಯವನ್ನೂ ಪ್ರತಿಭೆಯನ್ನೂ ವಿಶದಪಡಿಸಿ, ಈ ಗ್ರಂಥದ ಅತ್ಯುಜ್ವಲವಾದ ಮುನ್ನುಡಿಯಿಂದ ಅದರ ಮರ್ಮವನ್ನೆಲ್ಲಾ ಪ್ರಕಾಶಪಡಿಸಿ ಶ್ರೀಮಾನ್

ಬೇಂದ್ರೆಯವರು ಮಾಡಿದ ಉಪಕಾರಕ್ಕಂತೂ ಕನ್ನಡಿಗರು ಎಷ್ಟು ಕೃತಜ್ಞರಾಗಿದ್ದರೂ ತೀರದು.

'ಕನ್ನಡ ಗ್ರಂಥಮಾಲೆ'*

ಕನ್ನಡ ಸಾಹಿತ್ಯವನ್ನು ಅಭಿವೃದ್ಧಿಪಡಿಸಬೇಕೆಂಬ ಘನೋದ್ದೇಶದಿಂದ ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರಿಗಳು ಒಂದು "ಕನ್ನಡ ಪ್ರಕಟನ ಸಮಿತಿ"ಯನ್ನು ನಿಯಮಿಸಿ, ಪ್ರತಿವರ್ಷವೂ ಪ್ರಸಿದ್ಧರಾದ ಗ್ರಂಥಕರ್ತರನ್ನು ನಿಷ್ಕರ್ಷಿಸಿ ಅವರಿಂದ ಗ್ರಂಥಗಳನ್ನು ಪ್ರಕಟನೆಗೆ ಸಿದ್ಧಪಡಿಸುವುದಕ್ಕೆ ತಕ್ಕ ಏರ್ಪಾಡನ್ನು ಮಾಡಿರುತ್ತಾರೆ.

ಈ ಗ್ರಂಥಗಳು ಎರಡು ಬಗೆಯವು :—

(೧) ಈ ನವೀನಕಾಲಕ್ಕೆ ಬೇಕಾದ ಮತ್ತು ಜನಸಾಮಾನ್ಯಕ್ಕೆ ಜ್ಞಾನವನ್ನು ಹರಡಬಲ್ಲ ಸಾಹಿತ್ಯ, ಕಲೆ, ವಿಜ್ಞಾನ, ತತ್ವ, ಚರಿತ್ರೆ, ಧರ್ಮ, ನೀತಿ, ಸಂಸ್ಕೃತಿ ಮುಂತಾದ ವಿಷಯಗಳನ್ನು ಲಲಿತವಾದ ಹೊಸಗನ್ನಡ ಶೈಲಿಯಲ್ಲಿ, ವಿವಾದಾಸ್ಪದವಲ್ಲದ ಸಿಷ್ಕೃಷ್ಟವಾದ ರೀತಿಯಲ್ಲಿ ತಿಳಿಸತಕ್ಕುವು. ಇವು ಸ್ವತಂತ್ರ ಗ್ರಂಥಗಳಾಗಿರಬಹುದು, ಸಂಕಲನಗಳಾಗಿರಬಹುದು.

(೨) ಕನ್ನಡದ ಪೂರ್ವದ ಸಾಹಿತ್ಯವನ್ನು ಜನರಲ್ಲಿಯೂ ವಿದ್ಯಾರ್ಥಿವರ್ಗದಲ್ಲಿಯೂ ಹೆಚ್ಚು ಪ್ರಚಾರಕ್ಕೆ ತರುವುದಕ್ಕಾಗಿ, ಉತ್ತಮ ಕಾವ್ಯಗಳ ಸಂಗ್ರಹಗಳು. ಇವು ವಿದ್ಯಾರ್ಥಿಗಳ ಪಾಠಕ್ಕೆ ಅನುಕೂಲವಾಗಿರಬೇಕು; ಮೂಲಪ್ರತಿಗಳನ್ನು ಪರಿಶೋಧಿಸಿದ ಶುದ್ಧ ಪಾಠವನ್ನು ಒಳಕೊಂಡು, ಪೀಠಿಕೆ, ಶಬ್ದಕೋಶ, ಆವಶ್ಯಕವಾದ ಟಿಪ್ಪಣಿಗಳೊಡನೆ ಕೂಡಿರಬೇಕು.

* * * *

---

*ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆಗೆ ಬರೆದ ಮುನ್ನುಡಿಯಿಂದ (೧೯೩೧).

ನಮ್ಮ ಪ್ರೌಢಕಾವ್ಯಗಳು ಸಾಧಾರಣವಾಗಿ ಬಹಳ ವಿಸ್ತಾರವಾಗಿರುವುದರಿಂದ ಅವುಗಳಲ್ಲಿ ಬಹು ಸ್ವಲ್ಪಭಾಗವನ್ನು ಮಾತ್ರ ಪರೀಕ್ಷೆಗಳಿಗೆ ಪಠ್ಯಭಾಗವಾಗಿ ಇಡುವ ಪದ್ಧತಿ ರೂಢಿಗೆ ಬಂದಿದೆ. ಸಾಮಾನ್ಯ ಜನರಂತೂ ಈ ಕಾವ್ಯಗಳನ್ನು ಓದುವುದೇ ಅಪೂರ್ವ. ಇದು ವ್ಯಸನಕರವಾದ ಸಂಗತಿ. ಒಂದು ಕಾವ್ಯದ ಸೊಗಸನ್ನು, ಒಬ್ಬ ಕವಿಯ ಕವಿತಾಶಕ್ತಿಯನ್ನು ತಿಳಿಯಬೇಕಾದರೆ ಕಾವ್ಯವನ್ನು ಸಂಪೂರ್ಣವಾಗಿ ಓದಬೇಕು; ಇಲ್ಲ, ಉತ್ತಮ ಭಾಗಗಳೆಲ್ಲವನ್ನಾದರೂ ನೋಡಬೇಕು. ಈ ಸಮಷ್ಟಿದೃಷ್ಟಿ ಸಾಧ್ಯವಾಗುವಂತೆ, ಪಾಠಕ್ಕೆ ಪ್ರಮಾಣ ಅತಿಮೀರದಂತೆ, ಕಾವ್ಯಗಳನ್ನು ಅದರದರ ಸ್ವಭಾವಕ್ಕೆ ಉಚಿತವಾಗಿ ಸಂಗ್ರಹಿಸಿದರೆ ವಿದ್ಯಾರ್ಥಿಗಳಿಗೂ ಸಾಮಾನ್ಯ ಜನಕ್ಕೂ ಹಿತಕರವೂ ಪ್ರಯೋಜನಕರವೂ ಆಗಬಹುದೆಂಬ ನಂಬಿಕೆಯಿಂದ ಈ ಸಂಗ್ರಹಗಳನ್ನು ಮಾಡುತ್ತದೆ. ಇದರಲ್ಲಿ ಮುಖ್ಯಗಮನ—ಕಥಾಸರಣಿ ಕೆಡಬಾರದು; ಒಟ್ಟು ಕಥೆಯ ಸ್ವಾರಸ್ಯಕ್ಕೆ, ಪಾತ್ರನಿರೂಪಣಕ್ಕೆ ಭಂಗ ಬರಬಾರದು; ಅವಶ್ಯವಾದ ವರ್ಣನೆಯ ಮತ್ತು ವಿವರಣೆಯ ಸಾರ ಬಿಟ್ಟುಹೋಗಬಾರದು; ಎಲ್ಲಕ್ಕಿಂತ ಪ್ರಾಧಾನ್ಯವಾದದ್ದು, ಕವಿಯ ವ್ಯಕ್ತಿತ್ವಕ್ಕೆ, ಆತನ ವಿಶೇಷ ಪ್ರತಿಭೆಗೆ ಲೋಪ ಬರಕೂಡದು. ಇಷ್ಟನ್ನೂ ಸಾಧಿಸುವುದು ಸಂಗ್ರಹಕಾರನ ಕರ್ತವ್ಯ; ಆದರೆ ಕಷ್ಟ:—ನಿಸ್ಸಾರವಾದ, ಚರ್ವಿತ ಚರ್ವಣವಾದ ಭಾಗಗಳನ್ನು ಮನಃಕ್ಲೇಶವಿಲ್ಲದೆ ಬಿಟ್ಟರೂ, ಆತನು ಆಗಾಗ್ಗೆ ಧರ್ಮಸಂಕಟಕ್ಕೆ ಸಿಕ್ಕದೆ ಇರಲಾರನು. ಯಾವ ಸುಂದರವಾದ ಪ್ರಕರಣವನ್ನು ಉಳಿಸಿಕೊಳ್ಳಲಿ, ಈ ಭಾವವನ್ನೂ ಚಮತ್ಕಾರವನ್ನೂ ಹೇಗೆ ಬಿಡಲಿ. ಎಂದು ಆತನು ತನ್ನೊಡನೆಯೇ ಹೋರಾಡದೆ ಇರನು. ತನ್ನ ಸಂಸ್ಕಾರವನ್ನೂ ಅಭಿರುಚಿಯನ್ನೂ ಪ್ರಮಾಣವಾಗಿಟ್ಟುಕೊಂಡರೂ, ತನ್ನ ಸಂಗ್ರಹ ಬಹುಜನ ಸಮ್ಮತವಾಗಬೇಕೆನ್ನುವುದನ್ನು ಮರೆಯನು. ಕೊನೆಗೆ ಸಹೃದಯರ ಕರುಣೆಗೆ ಸಂಗ್ರಹಕಾರನು ಶರಣನು.

* * * *

ನಾಗಚಂದ್ರ*

೧

ನಾಗಚಂದ್ರ ಕವಿ ಕನ್ನಡವಲ್ಲಿ ನನ್ನ ಮೊದಲನೆಯ ಒಲುಮೆ; ಧಾರವಾಡ ನಗರದಲ್ಲಿ ನನ್ನ ಕನ್ನಡ ತೊಳಲಿನ ಮೊದಲನೆಯ ಮಾತು. ಈ ಎರಡು ನೆನಪುಗಳು ಉಕ್ಕಿ, ಪ್ರೊಫೆಸರ್ ಸಾಸನೂರವರು ತಮ್ಮ ಕರ್ನಾಟಕ ಸಂಘದಿಂದ ಹೊರಡುವ "ಅಭಿನವಪಂಪ"ನನ್ನು ಕುರಿತ ವಿಮರ್ಶಾತ್ಮಕ ಗ್ರಂಥಕ್ಕೆ ಒಂದು ಚಿಕ್ಕ ಮುನ್ನುಡಿಯನ್ನು ಬರೆಯಬೇಕೆಂದು ಹೇಳಿದೊಡನೆಯೇ, ಪರಮಾನಂದದಿಂದ ನಾನು ಒಪ್ಪಿದೆನು. ನಾಗಚಂದ್ರನಲ್ಲಿ ಭಕ್ತಿ, ಧಾರವಾಡದ ಮಿತ್ರರ ಸಾಹಿತ್ಯ ಬಾಂಧವ್ಯ, ವಿಮರ್ಶಕ ಮಹಾಶಯರ ಪುಷ್ಪಮಾಲೆಯ ಜೊತೆಗೆ ನಾನೂ ಒಂದೆರಡು ಬಿಡಿ ಹೂವುಗಳನ್ನು ಸಲ್ಲಿಸುವ ಅವಕಾಶ, ಇವುಗಳ ಉತ್ಸಾಹದಲ್ಲಿ ಈ ಮುನ್ನುಡಿ ಸ್ವಲ್ಪ ಲಂಬಿಸಿದರೆ ವಾಚಕರು ಮನ್ನಿಸಬೇಕಾಗಿ ಪ್ರಾರ್ಥನೆ.

ಈ ಗ್ರಂಥದಲ್ಲಿ ಇಡಿಯ ಕನ್ನಡನಾಡಿನಲ್ಲೆಲ್ಲಾ ಸುಪ್ರಸಿದ್ಧರಾದ ಐವರು ಮಹನೀಯರ ಪ್ರಾಜ್ಞವಿಮರ್ಶೆಗಳಿರುವುವು. ಇವರು ಕುಶಲಿಗಳಾದ ಇತಿಹಾಸಪರಿಶೋಧಕರು, ವರಕವಿಗಳು, ವಾಗ್ಮಿಗಳು, ಮಾನ್ಯಪಂಡಿತರು; ಅಭಿನವ ಪಂಪನ ಕಾಲ, ಆತನ ಗ್ರಂಥಗಳು ರಚಿತವಾದ ವರ್ಷಗಳು, ಆತನ ಜೀವನ ಚರಿತ್ರೆ, ಕಾಲ ಸನ್ನಿವೇಶಗಳು—ಜೈನಧರ್ಮದ ಮುಖ್ಯ ಸಾರಾಂಶ—ಕೃತಿ ರತ್ನಗಳಾದ ಮಲ್ಲಿನಾಥಪುರಾಣ ಮತ್ತು ರಾಮಚಂದ್ರ ಚರಿತ ಪುರಾಣಗಳ ರಸೋತ್ಪಾದಕ ವಿಮರ್ಶೆ—ಕವಿಯ ವ್ಯಕ್ತಿಗುಣಪ್ರದರ್ಶಕವಾದ ವರ್ಣನೆ, ಶೈಲಿ—ಇಂತಹ, ನಾಗಚಂದ್ರನ ಗ್ರಂಥವ್ಯಾಸಂಗಕ್ಕೆ ಅತ್ಯಾವಶ್ಯಕವಾದ ವಿಷಯಗಳನ್ನು ಪರಾಮರ್ಶಿಸಿ ಸಾಹಿತ್ಯಾಭಾಸಿಗಳಿಗೆ ಮಾರ್ಗವನ್ನು ತೋರಿಸಿದ್ದಾರೆ. ಉತ್ತಮ ಕನ್ನಡ ಕವಿಗಳನ್ನೆಲ್ಲಾ ಈ ರೀತಿ ಕನ್ನಡನಾಡಿನ ಬೇರೆಬೇರೆ ಕಡೆಯ ಪಂಡಿತರು ಒಂದುಗೂಡಿ, ಸಹಕರಿಸಿ, ಕಾವ್ಯವ್ಯಾಸಂಗವನ್ನು ಸುಲಭಪಡಿಸಿ, ಕನ್ನಡಿಗಳ ಪ್ರೇಮಕ್ಕೆ ಪಾತ್ರ

---

* ಧಾರವಾಡದ ಕರ್ಣಾಟಕ ಕಾಲೇಜ ಕರ್ಣಾಟಕಸಂಘದಿಂದ, ೧೯೩೪ರಲ್ಲಿ ಪ್ರಕಟವಾದ "ಅಭಿನವಪಂಪ" ಎಂಬ ಗ್ರಂಥಕ್ಕೆ ಬರೆದ ಮುನ್ನುಡಿ.

ರನ್ನಾಗಿ ಮಾಡಬೇಕೆಂದು ಬಯಸುತ್ತಿದ್ದವರು ಇಂತಹ ಗ್ರಂಥಗಳು ಒಂದರ ಮೇಲೊಂದು ಇದುವರೆಗೆ ಹುಟ್ಟಿರುವುವೇ ಅಲ್ಲದೆ ಮುಂದೆ ಇನ್ನೂ ಬೇಗ ಬೇಗ ಮುಂದುಬರಲೆಂದು ಹಾರೈಸುವರು. ಆಗಲೇ ಬಂದಿರುವುವು— "ಮುದ್ದಣ", ರನ್ನ, ಲಕ್ಷ್ಮೀಶ; ಈಗ ನಾಗಚಂದ್ರ; ನನಗೆ ತಿಳಿದ ಮಟ್ಟಿಗೆ ಸಿದ್ಧವಾಗುತ್ತಿರುವುವು ಕುಮಾರವ್ಯಾಸ, ಷಡಕ್ಷರಿ, ಸರ್ವಜ್ಞ ಮೂರ್ತಿ, ಆದಿಪಂಪ. ಸಾಹಿತ್ಯಲಕ್ಷಣವನ್ನು ಸಾಮಾನ್ಯವಾಗಿ ಶಾಸ್ತ್ರ ರೂಪದಲ್ಲಿ ಹೇಳುವುದು ಇರಲಿ—ಅಗತ್ಯವಾಗಿ ನಮಗೆ ಬೇಕಾಗಿರುವುದು ವ್ಯಕ್ತಿವಿಮರ್ಶೆ, ರಸಾನುಭವ, ನಿಷ್ಕೃಷ್ಟವಾದ ಕಾವ್ಯ ಪರಿಜ್ಞಾನ. ಇಂತಹ ಅಗತ್ಯಕಾರ್ಯದಲ್ಲಿ ಒಂದು ಹೆಜ್ಜೆಯನ್ನು ಮುಂದಿಟ್ಟ ಧಾರವಾಡದ ಕರ್ನಾಟಕ ಕಲಾಶಾಲೆಯ ಕರ್ನಾಟಕ ಸಂಘವನ್ನೂ, ಸಹಕರಿಸಿ ಸೇವೆಯನ್ನು ಅರ್ಪಿಸಿದ ವಿದ್ವನ್ಮಣಿಗಳನ್ನೂ ಕನ್ನಡಿಗರೆಲ್ಲಾ ಅಭಿನಂದಿಸತಕ್ಕದ್ದಾಗಿದೆ.

೨

ನಾಗಚಂದ್ರನ ಎರಡು ಕಾವ್ಯಗಳನ್ನೂ, ಈ ವಿಮರ್ಶೆಗಳನ್ನೂ ಓದಿದವನ ಮುಂದೆ ಕವಿಯ ಯಾವ ಮೂರ್ತಿ ಎದ್ದು ನಿಲ್ಲುತ್ತದೆ? ನಾಗಚಂದ್ರನ ಪುರುಷಸ್ವರೂಪವೇನು? ಆಳ್ಕೆಯೇನು? ತಂದೆ, ತಾಯಿ, ಕುಲ, ಗೋತ್ರ, ಅಧಿಕಾರ, ರಾಜಾಸ್ಥಾನ, ಕಾಲ, ಗ್ರಂಥವರ್ಷ---ಇವು ಒಂದೂ ಆತನ ಬಾಯಿಂದ ಹೊರಟಿಲ್ಲ; ಉದಾಸೀನಭಾವವಿರಬಹುದು. ಹೆಸರು ನಾಗ; ಚಂದ್ರ—ಮುದ್ದಾದ ಹೆಸರು; ಪ್ರಿಯವಾದ ಬಿರುದು, ಅಭಿನವಪಂಪ; "ಕನ್ನಡಕ್ಕೊಡೆಯನೊರ್ವನೆ" ಆದ ಆದಿಪಂಪನಲ್ಲಿ ಅಮಿತವಾದ ಭಕ್ತಿ; ಒಳಗೆ ಆತನ ಸಮಕ್ಕೆ ಬರಲಾರೆನೇ ಎಂಬ ಒಂದು ನಂಬಿಕೆಯ ಚಿಮ್ಮುಗೆ. ಜಿನೋಪಾಸನೆ, ಕಲೋಪಾಸನೆ—ಇವು ನಿತ್ಯಾನುಷ್ಠಾನ. ಕಾವ್ಯಗಳನ್ನು

> ಕಥೆ ಜಿನಚರಿತಮೆ. ಕವಿ ಜನ
> ಕಥೆಯಂ ಪೇಳ್ದವನೆ,* ರಾಜವಿಟಚೋರಕಥಾ।

---

* ಈ ವಾಕ್ಯದಿಂದ ಮಲ್ಲಿನಾಥಪುರಾಣಕ್ಕೆ ಮುಂಚೆ ಒಂದು ಜಿನಪುರಾಣವನ್ನು ಬರೆದಿರಬಹುದೆಂಬ ಊಹೆಗೆ ಸಾಕಾದಷ್ಟು ಅವಕಾಶ ಉಂಟೆ?

ಹೇಳುವುದು—"ಶುಭಧ್ಯಾನಾರ್ಥಿಯೆನ್" (ರಾ. ೧. ೩೮). ಎರಡೂ ಪುರಾಣಗಳೇ—

ಕಥೆ ಕಥೆಯೆ, ಕವಿ ಕವಿಯ್ಯೆ, ತ
ತ್ಕಥೆಯಂ ಪೇೞ್ದಪ್ರಶಸ್ತಮಂ ಪುಟ್ಟಿಸುಗುಂ॥ (ಮಲ್ಲಿ. ೧. ೫೦)

ಜಿನಚರಿತವೇ ಕಥೆ—ಜಿನಕಥೆಯನ್ನು ಹೇಳಿದವನೇ ಕವಿ—ಮಿಕ್ಕುವೆಲ್ಲಾ ಅಪ್ರಶಸ್ತ.

ಪಂಪರಾಮಾಯಣದಲ್ಲಿಯೂ ಇದೇ ಸಿದ್ಧಾಂತ—ಒತ್ತಿ ಒತ್ತಿ ಹೇಳುವುದು—

"ರಾಗದ್ವೇಷನಿಬಂಧಮಪ್ಪ ಕೃತಿಯಂ....ಪೇೞ್ದ ಖಿಲಮಂ
ರಾಗಾವಿಲಂ ಮಾೞ್ಪ ವಿದ್ಯಾಗರ್ವಗ್ರಹಪೀಡಿತರ್
....ಬಿತ್ತಿ ಬೆಳೆವಂತಕ್ಕುಂ ವಿಷೋದ್ಯಾನಮಂ" (ರಾ. ೧.೩೪)

ಪೊಗೞ್ದು ಮಹಾತ್ಮರುಜ್ಜ್ವಲಮೆನಿಪ್ಪ ಗುಣಂಗಳನುಜ್ಜ್ವಲಪ್ರಸಿ
ದ್ಧಿಗೆ ಪೊಲನಾಗಮುಜ್ಜ್ವಲಿಸಿದಪ್ರತಿಮಪ್ರತಿಭಾವದಿಂ,
ಪೊಗೞ್ದು ದುರಾತ್ಮರಂ ಮೊಗದೊಳಿರ್ದುಗುಳಿಂ ಪೊಱಗಿಕ್ಕಲಾದ ನಾ
ಲಗೆಯವನೆತ್ತು ನಾಲಗೆಯೊಳೋದಿದವಂ ಕೃತಿಯೇ ಕೃತಾರ್ಥನೇ ?
(ರಾ.೧.೩೫)

ನಾಯಕನನ್ಯನಾಗೆ ಕೃತಿ ವಿಶ್ರುತಮಾರ್ಗದುದಾತ್ತ ರಾಘವಂ
ನಾಯಕನಾಗೆ ವಿಶ್ರುತಮೆನಿಪ್ಪುದು ವಿಸ್ಮಯಕಾರಿಯಲ್ತು, ಕಾ
ಲಾಯಸದಿಂ ವಿನಿರ್ಮಿಸಿದ ಕಂಠಿಕೆ ಕಾಂಚನಮಾಲೆಯಂತುಪಾ
ದೇಯಮೆನಿಕ್ಕುಮೇ ! ವಿಷಯಮೊಪ್ಪದೊಡಾವುದುಮೊಪ್ಪಲಾರ್ಕುಮೆ?
(ರಾ. ೧. ೩೭.)

ಕಾವ್ಯದಲ್ಲಿ ವಿಷೋದ್ಯಾನವನ್ನು ಬೆಳೆಯಬಾರದು. ಉಜ್ವಲ ಪ್ರತಿಭೆಗೆ ಮಹಾತ್ಮರ ಗುಣಗಾನವೇ ಸಿದ್ಧಿ. ವಿಷಯ ಒಪ್ಪದಿದ್ದರೆ ಯಾವುದೂ ಒಪ್ಪಲಾರದು. "ರೀತಿ"ಯ ಬೆಲೆಯನ್ನು ನಮ್ಮ ಕವಿ ಅರಿಯನೆಂದಲ್ಲ: "ವಿಷಯ"ದ ಬೆಲೆಯನ್ನು ಇನ್ನೂ ಚೆನ್ನಾಗಿ ಅರಿತಿದ್ದನು.

ಈ "ಉದಾತ್ತ" ಭಾವದಲ್ಲಿ—"ಉದಾತ್ತ" ಎಂಬುದು ನಾಗಚಂದ್ರನಿಗೆ ಬಹು ಪ್ರಿಯವಾದ ಶಬ್ದ— ಈ ಧರ್ಮಪ್ರಭಾವನೆಯ ಭರದಲ್ಲಿ, ತನ್ನ

ವೈಭವದ ಒಂದು ಮಾತು ನಮ್ಮ ಪುಣ್ಯಕ್ಕೆ ಹೊರಟುಬಂದಿದೆ: ಬಿಜಾಪುರದಲ್ಲಿ ಒಂದು ಜೈನ ಬಸದಿಯನ್ನು ಕಟ್ಟಿಸಿದನೆನ್ನುವುದು—

ನಿಜವಿಭವೋದಯಂ ಸಫಳಮಾಯ್ತೆನೆ ಮಲ್ಲಿಜಿನೇಂದ್ರಗೇಹಮಂ
ವಿಜಯಪುರಕ್ಕಳಂಕರಣಮಾಗಿರೆ ಮಾಡಿಸಿ....(ರಾ. ೧೪. ೨೯೭.)*

ಕಲೋಪಾಸನೆ ಜಿನೋಪಾಸನೆಯ ಬೆನ್ನೆಳಲು—ಯಾವಾಗಲೂ ವಿಭವಕ್ಕೆ—ಕಲೆಗೆ—"ಪ್ರಶಸ್ತ" ಯಾವುದು? "ವಿಶ್ರುತ" ಯಾವುದು, "ಸಫಲ" ಯಾವುದು ಎಂಬ ಚಿಂತನೆಯೇ:—

ಮನ್ನಿಸುಗೆ ಕೃತಿಗೆ ಸೌಭಾ
ಗ್ಯೋನ್ನತಿಯಂ ಸುಕವಿ ಪಂಪನಾದಿಪುರಾಣಂ
ಪೊನ್ನನ ಶಾಂತಿಪುರಾಣಂ,
ರನ್ನನ ಕೃತಿರತ್ನಮೆನಿಸಿದಜಿತಪುರಾಣಂ. (ಮಲ್ಲಿ. ೧.೨೫)

—ಈ ವಿನಯ.

ರಸಮಂ ನಾಲಗೆ, ಕವಿತಾ
ರಸಮಂ ಕವಿ, ಕುಸುಮರಸಮುನಳಿಮಾಳೆ, ಸುಧಾ
ರಸಮಂ ಸುರರಕ್ಷಯ ಸುಖ
ರಸಮಂ ಪರಮಾತ್ಮನಱಿವನುೞಿದವರಱಿಯರ್! (ಮಲ್ಲಿ ೧.೨೫.)

—ಈ ಕವಿತೆಯ, ಆತ್ಮದ, ರಸಜ್ಞಾನ.

ಧರೆ ಪೊಗೞೆ ವೀತರಾಗನ
ಚರಿತದೊಳವಡಿಸಿ ಸಕಲರಸಮಂ, ಕವಿತಾ
ಪರಿಣತಿಯಂ ಮೆಱೆದೀ ಕಾ
ವ್ಯರಸಾರ್ಣವಪೂರ್ಣಚಂದ್ರನಭಿನವಪಂಪಂ.

---

*ಈಲೇಖಕನು ಹೋದ ವರ್ಷ ಬಿಜಾಪುರಕ್ಕೆ ಹೋಗಿದ್ದಾಗ ಅಲ್ಲಿ ಈ ಬಸದಿ ಇರುವುದೇ ಎಂದು ವಿಚಾರ ಮಾಡಿದನು. ಯಾವ ಸಂಗತಿಯೂ ತಿಳಿಯಲಿಲ್ಲ.

ಜಿನಪತಿಗಂ, ಜಿನಮುನಿಗಂ,
ಜಿನಾಗಮಕ್ಕಂ, ಜಿನಾಧಿಪತಿಭವನಕ್ಕಂ
ಜಿನಗುಣಸಂಪತ್ತಿಗಮ್——ಎಜಿ
ಪನೆಜಿಗನುಱಿದವರ್ಗೆ ನಾಗಚಂದ್ರಕವೀಂದ್ರಂ. (ಮಲ್ಲಿ.೧.೩೯–೪೦)

—ಈ ಕಾವ್ಯಪ್ರತಿಭೆಯ ಪರಮಾತ್ಮಾರ್ಪಣ.

ತನ್ನ ವಿಷಯವಾಗಿ ಇನ್ನೇನನ್ನೂ ತಾನೇ ಹೇಳದಿದ್ದರೂ ಬಿಜಾಪುರದ ಪ್ರಾಂತದಲ್ಲಿ ದೊರೆತ ಒಂದು ಶಾಸನದಿಂದಲೂ, ಮುಖ್ಯವಾಗಿ ಪುಣ್ಯಕ್ಷೇತ್ರವಾದ ಶ್ರವಣಬೆಳ್ಗೊಳದಲ್ಲಿರುವ ಶಾಸನಗಳಿಂದಲೂ, ದೋರಸಮುದ್ರದ ಆಸ್ಥಾನದ ಕಂತಿಹಂಪರ ಸಮಸ್ಯೆಯ ಜನಪ್ರತೀತಿಯಿಂದಲೂ, ನಾಗಚಂದ್ರನ ಹೆಸರಿನ ನರುಗಂಪು ಉತ್ತರ ಕರ್ಣಾಟಕವಲ್ಲಿಯೇ ಅಲ್ಲ, ನಮ್ಮ ಮೈಸೂರಿನ ತಂಗಾಳಿಯಲ್ಲಿ ಕೂಡ ಬೀಸಿ ಬರುತ್ತಿದೆ. ಆತನ ರಾಜಾಶ್ರಯವನ್ನು ಕಂಡೆವೋ, ಕಾಣಲಿಲ್ಲವೋ, ಮೂರ್ತಿ ಹೊಳೆದು ಮಾಯವಾಗುತ್ತದೆ—ಜಿನಗುರುಗಳ ಆಶ್ರಯವಂತೂ, ನಿಸ್ಸಂಶಯವಾಗಿ, ಸ್ಥಿರವಾಗಿ, ಮನಸ್ಸಿನಲ್ಲಿ ಬೇರೂರುತ್ತದೆ.

ಶ್ರೀಗಂ ಪರಮಾತ್ಮಪದ
ಶ್ರೀಗಂ, ನೆಲೆ ಧರ್ಮಮೆಂದು, ಧರ್ಮಧ್ಯಾನೋ
ದ್ಯೋಗಂ ಕೈಮಿಗೆ, ವಿಷಯ ವಿ
ರಾಗಮನಂ, ಸುಖದಿನಿರ್ದನಭಿನವಪಂಪಂ ! (ಮಲ್ಲಿ. ೧.)

ನಾಗಚಂದ್ರನ ಆತ್ಮದಲ್ಲಿ ಧರ್ಮ ಮುಂದು : ಅವಳಿ ಜವಳಿಯಾಗಿ ಕವಿತೆ ಅದರ ಹಿಂದು.

೩

ನಾಗಚಂದ್ರನ ಕವಿತಾದೀಕ್ಷೆಯ ಪ್ರಥಮಫಲ—ಬೇಗ ಮಿಡಿಯಾಗಿ ಹಣ್ಣಾದ ಮೊದಲನೆಯ ಹಣ್ಣು—ಮಲ್ಲಿನಾಥ ಪುರಾಣ. "ವಿದ್ವಜ್ಜನ ಸಭೆಯೊಳ್ ಮಾನ್ಯಂ" (ಮಲ್ಲಿ. ೧. ೪೧.), "ಚತುರ ಕವಿ ಜನಾಸ್ಥಾನ ರತ್ನಪ್ರದೀಪಂ" (೪೩) "ಸಾಹಿತ್ಯ ಸರ್ವಜ್ಞಂ" (೬೯) "ಸಾಹಿತ್ಯ ವಿದ್ಯಾಧರಂ" (೨. ೮೦). "ನಾಗಚಂದ್ರ ವಿಬುಧಂ" (ರಾ. ೧೬. ೯೮). "ಪಂಡಿತ ಮಂಡಲಿ

ಮೆಚ್ಚಿ ಸೇರ್ಪುವೆತ್ತಿರಲವಿರೋಧಮಾಗೆ" (೯೭) ಕೃತಿಯನ್ನು ಹೇಳಬೇಕು. "ಆನ್ಯರ್ ಪೇಟ್ದಂದದಿಂ ಅದ್ಯತನನುಂ" (೯೮) ಹೇಳಬೇಕು—"ಪ್ರಸಿದ್ಧ ಕವಿ ಪದ್ಧತಿಯಿಂ" (ಮಲ್ಲಿ. ೧೪. ೫೪). ನಮ್ಮ ನೂತನ ಭಾಷೆಯಲ್ಲಿ ಹೇಳುವುದಾದರೆ, ಸಾಹಿತ್ಯವಿದ್ಯೆಯ ಪರೀಕ್ಷೆಯನ್ನು ಕೊಟ್ಟು, ಉತ್ತಮ ಪಟ್ಟಾಂಕಿತನಾಗಿ, ಮಹಾಮಹೋಪಾಧ್ಯಾಯನೆಂಬ ಬಿರುದಿಗೆ ಅಧಿಕಾರಿಯಾದವನು ಹಿಂದಿನ ಸಾಹಿತ್ಯದ ಮೇಲೆ ತನ್ನದೊಂದು "ಕೈ" ತೋರಿಸಲೇ ಬೇಕು. "ಹೇಯ" ಯಾವುದು, "ಉಪಾದೇಯ" ಯಾವುದು ಪೂರ್ವಿಕರ ಸಂಪ್ರದಾಯದಲ್ಲಿ, ಆತ್ಮಗುಣ, ಧರ್ಮಗುಣ, ಕಾವ್ಯಗುಣಕ್ಕನುಸಾರವಾಗಿ, ತನ್ನ ಮನೋಧರ್ಮಕ್ಕನುಸಾರವಾಗಿ, "ಸ್ವ" ಧರ್ಮ, ಶ್ರೇಯಸ್ಸನ್ನು ಪಡೆವ ಮಾರ್ಗ ಯಾವುದು, ಎಂಬ ನೆಸಹುಗಳಿಗೆ ಅವಕಾಶವಿಲ್ಲ—"ಕಾಲಿಡಲು ತೆರಹಿಲ್ಲ". ಹಿಂದಿನ ಕವಿ-ರಾಜಮಾರ್ಗದಲ್ಲಿ ತಾನೂ ನಿಂತು, ಕವಿತೆಯ "ಮಗ್ಗ"ವನ್ನು ನೆಯ್ಯುವ "ಚತುರಕವಿ"ಯಾಗಬೇಕು.

ಇದ್ದ ನೂಲು ಸ್ವಲ್ಪ. ಚಾವುಂಡರಾಯನು ಹೇಳಿರುವಂತೆ—"ವೈಶ್ರವಣನೆಂಬರಸಂ ಜಲದ ಕಾಲದೊಳ್ ರಮಣೀಯ ಪ್ರದೇಶಂಗಳಂ ನೋಡಲೆಂದು ಪೋಗಿ ಬರುತ್ತುಂ ಪೆರ್ಗಾಳಿಯ ಕೋಳೊಳ್ ಕೆಡದಿರ್ದ ವಟವೃಕ್ಷಮುಂ ಕಂಡು ನಿರ್ವೇಗದಿಂ ಮಗಂಗೆ ರಾಜ್ಯಮಂ ಕೊಟ್ಟು ಶ್ರೀ ನಾಗಯತಿಗಳ ಪಕ್ಕದೆ ಧರ್ಮಮಂ ಕೇಳ್ದು" ತಪಸ್ಸು ಮಾಡಿ, ಅಹಮಿಂದ್ರನಾಗಿ, ಕುಂಭರಾಜನಿಗೂ ಪ್ರಭಾವತೀ ದೇವಿಗೂ ಮಗನಾಗಿ ತೀರ್ಥಕರನಾಗಿ ಹುಟ್ಟಿ, ತೊರೆದು, ದೀಕ್ಷೆಯನ್ನು ವಹಿಸಿ—"ಮಲ್ಲಿನಾಥಸ್ವಾಮಿ ಮುಕ್ತಿಗೆ ಸಂದರ್" ಇದು ಕಥೆ: ಜಿನಭಕ್ತನಿಗೂ ಸರಿ, ಕವಿತಾಪದ್ಧತಿಯನ್ನು ಪ್ರದರ್ಶಿಸುವವನಿಗೂ ಸರಿ. ಇದರ ಮೇಲೆ ಇನ್ನೂ ಪ್ರಾಯಃ ಕವಿತ್ವ ದುಡುಕುತ್ತಿದೆ—ಜಿನಧರ್ಮ ಕಡಿವಾಣವನ್ನು ಸೆಳೆಯುತ್ತಿದೆ: ಒಟ್ಟು ಕಟ್ಟು, ಉತ್ತರಾರ್ಧ, ತತ್ತ್ವ: ಪೂರ್ವಾರ್ಧ, ರಕ್ತ ಕುದಿಯುತ್ತಿರುವುದು, "ವಿಷಯ ಸುಖ"ಗಳ ಚಿತ್ರ; ಚಿತ್ರದ ಮೇಲೆ ಚಿತ್ರ, ಬಣ್ಣದ ಮೇಲೆ ಬಣ್ಣ, ರಾಗದ ಮೇಲೆ ರಾಗ, ಭೋಗದ ಮೇಲೆ ಭೋಗ :—ಚರ್ವಿತ ಚರ್ವಣ !

ಫುಲ್ಲಶರಂ ಬಸಂತದ ಪುಗಿಲ್, ನೆಱೆದಿಂಗಳ ತಣ್ಪಸಿಲ್, ಮುಗುಳ್
ಮಲ್ಲಿಗೆ, ಬಂದಮಾವಲೆವ ತೆಂಕಣಗಾಳಿ, ವಿಪಂಚಿಯಿಂಚರಂ,

ನಲ್ಲಳ ಲಲ್ಲೆ, ಕೋಗಿಲೆಯ ಬಗ್ಗಣೆ, ತುಂಬಿಯ ಗೇಯಮೆಂಬಿನಂ,
ಬಲ್ಲವರಂ ಮನಂಗೊಳಿಸುಗುಂ ಕೃತಿ ಸತ್ಕೃತಿ ನಾಗಚಂದ್ರನಾ ॥
(ಮಲ್ಲಿ. ೧. ೪೪.)

ಈ ಗ್ರಂಥ "ಸತ್ಕೃತಿ"ಯೇ ಸರಿ—ಉತ್ಕೃಷ್ಟ ಕೃತಿಯೂ ಆಹುದೇ? ಮೊದಲನೆಯ ಪಂಕ್ತಿಯ ಕವಿಗಳ ಮೊದಲನೆಯ ಪಂಕ್ತಿಯ ಕಾವ್ಯಗಳಲ್ಲಿ ಸೇರುವುದೇ? "ರಾಮಾಯಣ"ವಿರದಿದ್ದರೆ ನಾಗಚಂದ್ರನು ಈ ಮಲ್ಲಿನಾಥ ಪುರಾಣದಿಂದಲೇ ಉತ್ತಮ ಕವಿಸ್ಥಾನಕ್ಕೆ ಸಲ್ಲುತ್ತಿದ್ದನೇ? ಭಿನ್ನರುಚಿಯಾದ ಲೋಕದಲ್ಲಿ ನಿಷ್ಕರ್ಷಿಸಿ ಹೇಳುವುದು ಹೇಗೆ?

ಈ ಗ್ರಂಥದ ಪ್ರಶಸ್ತಿಯನ್ನು ನಾನು ಕೈಗೊಳ್ಳಬಾರದು. ನನ್ನ ಮಾನ್ಯ ಮಿತ್ರರೂ ಸರಸಕವಿಗಳೂ ಆದ ಬೇಂದ್ರೆಯವರು ಅದನ್ನು ಸಂಪೂರ್ಣವಾಗಿ ನಿರ್ವಹಿಸಿದ್ದಾರೆ. ಅವರ ಒಂದು ವಾಕ್ಯವನ್ನು ಇಲ್ಲಿ ಎತ್ತಿ ಬರೆಯುತ್ತೇನೆ.—"ಮಲ್ಲಿನಾಥವು ಮೂರ್ತಿಶಿಲ್ಪ; ಚರಿತಪುರಾಣವು ವಾಸ್ತುಶಿಲ್ಪ": ಅವರ ಟೀಕೆಯನ್ನೂ ಸೇರಿಸುತ್ತೇನೆ—"ಮಲ್ಲಿನಾಥ ಪುರಾಣವು ಹತ್ತೆಂಟು ಎಸಳಿನ ಹೂವು ಅರಳಿವಂತೆ; ರಾಮಚಂದ್ರಚರಿತಪುರಾಣವು ಸಾವಿರ ಕಂಬದ ಬಸ್ತಿಯನ್ನು ಕಟ್ಟಿದಂತೆ."

ಕಾವ್ಯದ ಮಗ್ಗದಲ್ಲಿ ಅರ್ಧನೆಯ್ಗೆ ಸಂಸಾರ ಸುಖ ಸಾಮ್ರಾಜ್ಯ, ೧-೮ ಆಶ್ವಾಸಗಳು; ೯ರ ಮಧ್ಯ, ತಿರುವು, ಸುಖದ ಬಳ್ಳಿಗೆ ಕೊಡಲಿಯ ಪೆಟ್ಟು:—

ಸಿಡಿಲೆಂಬ ಜವನ ಕೊಡಲಿಯ
ಕಡುವೊಯ್ಲಿಂ ನೆಗೆದ ಬೇರ್ಗಳೊಡನೆ ನೆಲಂ ಬಾ
ಯ್ವಿಡೆ ಬೆಟ್ಟು ಕೆಡೆವ ತೆಱದಿಂ
ಕೆಡೆದಾಲಮನಿದಿರೊಳವನಿಪಾಳಂ ಕಂಡಂ. (ಮಲ್ಲಿ. ೯. ೫೫.)

ಅಲ್ಲಿಂದಾಚೆಗೆ (೯–೧೪) ಧರ್ಮಸಾಮ್ರಾಜ್ಯಸುಖ. ಚತುರಕವಿಯ ಚಾತುರ್ಯ ಹಿಮ್ಮೆಟ್ಟಿ, "ಆಟಕಾಱರ ಜೋಹ"ವನ್ನು ಕಳೆದಿಟ್ಟು, ನಾಗಚಂದ್ರನ ಹೃದಯದಿಂದ ಆಳವಾದ, ಗಂಭೀರವಾದ ಆತ್ಮಸ್ವರ ಏಳುತ್ತದೆ. ಕೇವಲ ಕವಿತ್ವದ ಬಣ್ಣದೆಳೆ ಹೋಗಿ, ಪರಮಸುಖದ, ನಿಶ್ಚಲದರ್ಶನದ, ವಿಮಲರತ್ನತ್ರಯದ ಚಿನ್ನದೆಳೆ ಹೊಮ್ಮುತ್ತದೆ. ಎಷ್ಟು ಆಳ, ಎಷ್ಟು ಗಂಭೀರ

ವೆಂದರೆ—ಈ ವೈರಾಗ್ಯದ, ಜಿನಸ್ತುತಿಯ ಪದ್ಯಗಳೇ ಉತ್ಕೃಷ್ಟ ಕವಿತೆಯಾದ ರಾಮಚಂದ್ರಚರಿತಪುರಾಣಕ್ಕೂ ಸಾಕಾಗುತ್ತವೆ. ಅವುಗಳಿಗೆ ಬೇರೆಯಾದ, ಹೊಸತಾದ, ಚೆಲುವಾದ ವಾಣಿ ನಾಗಚಂದ್ರನಿಗೆ ಬೇಡ. ಅಲ್ಲಿಗೆ ಅವನು ತಣಿದನು.

ಸುತ ನಮ್ಮನ್ವಯದೊಳ್ ಪುರಾತನದ ಜಗದ್ವಿಖ್ಯಾತಭೂನಾಥರೀ
ಸ್ಥಿತಿಯಿಂ ರಾಜ್ಯಸುಖಂಗಳೊಳ್ ತಣಿದು, ತತ್ತ್ವಾಭ್ಯಾಸವಿಶ್ರಾಂತ ಜೀ
ವಿತರಾದರ್, ಮಱೆದೀ ಕುಳಕ್ರಮಮುನಾನಿಂತಿರ್ದು, ಸನ್ಮಾರ್ಗ ಪ
ದ್ಧತಿಯಂ ಹಾಸ್ಯರಸಪ್ರವಾಹಭರದಿಂ ಪ್ರಕ್ಷಾಳಿತಂ ಮಾಳ್ಪೆನೇ ?
(ಮಲ್ಲಿ. ೯. ೮೯; ರಾ. ೬. ೮೧.)

ಮದನಫಣಿನಿರ್ವಿಷೀಕರ
ಣ ದಿವ್ಯಮಂತ್ರಸ್ವನಂ, ಜರಾಮರಣಶಿಲಾ
ವಿದಳನ ಟಂಕಧ್ವನಿ ಪೊ
ಣ್ಮದತ್ತು ಮುನಿ ಪರಸೆ ಧರ್ಮವೃದ್ಧಿ ನಿನಾದಂ.
(ಮಲ್ಲಿ. ೯. ೧೨೯; ರಾ. ೬. ೨೮.)

ಅರವಿಂದ ಸ್ಮೇರವಾಸ್ಯಂ ತಿಳಿಪೆ ಹೃದಯಸಂಶುದ್ಧಿಯಂ, ಮಾನಸಂ ಶಾಂ
ತರಸಾಧೀನಂ ಸಮಾಧಾನಮನಱಪೆ, ತಪಸ್ತಪ್ತಮುಕ್ತಪ್ತಕಾರ್ತ
ಸ್ವರಶಾಖಾಲೀಲೆಯಂ ಪಾಳಿಸೆ ತನು, ನಯನಂ ಕಾಟ್ಪುರಂ ಮಾಡ ಕಾರು
ಣ್ಯರಸಸ್ರೋತಂಗಳಿಂ, ಲೋಕಮನೆಱಗಿಸಿದಂ ಬಾಳಚಂದ್ರ ವ್ರತೀಂದ್ರಂ.
(ಮಲ್ಲಿ. ೧೦. ೧೩೩; ರಾ. ೧. ೧೭.)

ಮದನಪತತ್ರಿ ನಿನ್ನ ದೆಸೆಗಾಣದು, ಮೋಹಮಹಾಹಿ ನಿನ್ನನ
ಣ್ಮದು, ಕಲುಷಾನಳಂ ನಿಜದಯಾರಸದಿಂ ಮಸಿಯಾಯ್ತು, ಪಾಪಮಿ
ಲ್ಲದ ಪಯಣಕ್ಕೆ ನಿನ್ನ ನುಡಿ ಸಂಬಳಮಾಯ್ತೆನೆ, ಪೆಣ್ಣ ಮಣ್ಣ ಮೋ
ಹದ ಪರಮಾತ್ಮರತ್ತಿರಲಿ, ನೀನೆ ಜಗತ್ಸ್ತುತನಯ್ ಜಿನೇಶ್ವರಾ.
(ಮಲ್ಲಿ. ೧೨. ೧೭೭; ರಾ. ೫. ೯.)

ಜಿನಾಷ್ಟಕವೂ (ಮಲ್ಲಿ. ೧೦. ೧೨೦-೭; ರಾ. ೭. ೪೦-೭), ಪರಿನಿರ್ವಾಣ

ಕಲ್ಯಾಣದ ಗ್ರಂಥಾಂತ್ಯವೂ (ಮಲ್ಲಿ. ೨೪. ೧೫೪-೨೬೩; ರಾ. ೧೬.೭೮-೮೨) ಎರಡರಲ್ಲೂ ಒಂದೇ. ಪ್ರಾಯದ ಕವಿತೆಯ ಅಂತರ್ವಾಣಿಯೂ ವಯಸ್ಸಿನ ಕವಿತೆಯ ಅಂತರ್ವಾಣಿಯೂ ಹೀಗೆ ಒಮ್ಮಿಡಿ ಮಿಡಿಯುತ್ತವೆ !—

ಮೆಚ್ಚೆಗಡ, ಮುಳಿಯೆಗಡ, ಬಗೆ
ಬೆಚ್ಚಿರೆ, ಬೇಱಾಗೆ ನಿನ್ನ ಪದದೊಳ್, ಮನುಜಂ
ಗುಚ್ಚ ಗತಿ ನೀಚಗತಿವಡೆ
ವಚ್ಚರಿ ಕಣ್ದೆಱೆವ ತೆಱನನಱಿಪೆನಗರ್ಹಾ !

ನಿತ್ಯ ಸುಖಮಾತ್ಮರೂಪಮ
ನಿತ್ಯ ಸುಖಂ ಮೋಹರೂಪಮೆಂಬ ವಿವೇಕಂ
ಸತ್ಯಸ್ವರೂಪಮದಱಿಕೊಳ
ಗತ್ಯಂತಾನುಭವ ವಿಭವಮಕ್ಕೆನಗರ್ಹಾ !

ಒಂದು ಸಣ್ಣ ವ್ಯತ್ಯಾಸ—ದೊಡ್ಡ ವ್ಯತ್ಯಾಸವೇ. ಪೂರ್ವಕಾವ್ಯದಲ್ಲಿ ಪ್ರಾರ್ಥನೆ ತನಗೆ; ಉತ್ತರಕಾವ್ಯದಲ್ಲಿ ತನಗೂ ಸರ್ವಜೀವಗಳಿಗೂ ! "ಅಱಿಪೆಮಗರ್ಹಾ" "ವಿಭವಮಕ್ಕೆಮಗರ್ಹಾ !"

ಶ್ರೀಜಿನಪತಿ ಪದಕಮಳ ವಿ
ರಾಜಿತಮಂ ಸಿದ್ಧಸೇಸೆಯಂ ತಳೆದನಿಳಾ
ಪೂಜಿತಚರಿತಂ ಸಕಳಕ
ಳಾ ಜನ್ಮಾವಾಸನೆನಿಸಿದಭಿನವಪಂಪಂ ! (ಮಲ್ಲಿ. ೧೧. ೧.)

೪

ಈಗ "ಪಂಪರಾಮಾಯಣ"ದ "ವಾಸ್ತುಶಿಲ್ಪ"—"ಸಾವಿರ ಕಂಬದ ಬಸದಿ." ಶ್ರೀ ಪೂಜಾರರವರು ಜೈನಧರ್ಮದ ಸಾರಾಂಶವನ್ನೂ, ರಾಮಚರಿತ ಪುರಾಣದ ಮಹತ್ವವನ್ನೂ ಚೆನ್ನಾಗಿ ವಿವರಿಸಿದ್ದಾರೆ. ಜೈನ ಸಂಪ್ರದಾಯದ ಸಂಸ್ಕೃತ ರಾಮಾಯಣಗಳ ಕಥೆಯನ್ನು ಸ್ಪಷ್ಟವಾಗಿ ಮಾತೃಕೆಗಳಿಂದ ತೋರಿಸಿಕೊಟ್ಟಿದ್ದರೆ ಇನ್ನೂ ಪ್ರಶಸ್ತವಾಗಿತ್ತು. ಏಕೆಂದರೆ ಮೂಲವನ್ನು ಹೋಲಿಸಿ ಕವಿಯ ವ್ಯಕ್ತಿತ್ವವನ್ನೂ, ಸ್ವಂತ ಕೈವಾಡವನ್ನೂ ಅರಿಯುವುದು

ಸುಲಭ; ಇಲ್ಲದಿದ್ದರೆ ಆತನ ಸಂಸ್ಕರಣಕಾರ್ಯ ನಮಗೆ ಗೋಚರಿಸುವುದಿಲ್ಲ.

ಕನ್ನಡದಲ್ಲಿರುವ ಚಾಮುಂಡರಾಯಪುರಾಣದ ಕಥೆಯ ಪ್ರಸಕ್ತಭಾಗವನ್ನು ಹೀಗೆ ಸಂಗ್ರಹಿಸಬಹುದು.* "ಶ್ರೀಮುನಿ ಸುವ್ರತ ಭಟ್ಟಾರಕರ ತೀರ್ಥಸಂತಾನದೊಳ್ ಎಂಟನೆಯ ಬಲದೇವ ವಾಸುದೇವರಪ್ಪ ರಾಮ ಲಕ್ಷ್ಮಣರ ಚರಿತಂ....ಜಂಬೂದ್ವೀಪದ ಭರತಕ್ಷೇತ್ರದ ಕಾಶಿ ವಿಷಯದ ವಾರಣಾಸಿ ಪುರಮನಾಳ್ವ ದಶರಥಮಹಾರಾಜಂಗಂ ಅಪರಾಜಿತಾ ದೇವಿಗಂ.... ಸುಮಿತ್ರೆಗಂ...." ರಾಮಲಕ್ಷ್ಮಣರು ಹುಟ್ಟುವರು. ದಶರಥನು ಸಗರನ ರಾಜಧಾನಿಯಾದ ಸಾಕೇತವನ್ನು ಹೊಕ್ಕು, ಭರತ ಶತ್ರುಘ್ನರನ್ನು ಪಡೆಯುವನು. "ರಾಮಲಕ್ಷ್ಮಣರ್ಗೆ ದಶಕಂಧರ ವಂಶದಿಂ ವಿಜಯಕಾರಣಂ ಪ್ರಕೃತಮಾಗಿರ್ಪಿನಂ, ಇತ್ತ ಮಿಥಿಳಾಪುರದೊಳ್ ಜನಕನೆಂಬರಸಂಗಂ ವಸುಧಾದೇವಿಗಂ ಸೀತೆಯೆಂಬಳ್ ಮಗಳಾಗೆ"....ಯಜ್ಞವನ್ನು ಕೈಕೊಂಡು ಜನಕನಿರಲು, ಸೇನಾಪತಿ "ರಾಮಲಕ್ಷ್ಮಣರ ಪ್ರಭಾವಮನಲ್ಲಿ ತೋರ್ಪುದೊಳ್ಳಿತ್ತೆನೆ, ದಶರಥಂ ಪರೀಕ್ಷಿಸಿ ನೆಗಳ್ವೆಮೆಂದು" ಪುರೋಹಿತನನ್ನು ಕೇಳುವನು, ಆತನು "ಎಂಟನೆಯ ರಾಮಕೇಶವರ್, ಪ್ರತಿವಾಸುದೇವಂ ರಾವಣನೆಂಬೊಂ, ...ಮಣಿಮತಿಯೆಂಬೊಳ್ ವಿದ್ಯೆಯುಂ ಸಾಧಿಸಲೆಂತಿರ್ದಳಂ ಕಂಡು ಮೋಹವಶಗತನಾಗಿ ವಿದ್ಯಾಸಿದ್ಧಿಗೆ ವಿಘ್ನಂ ಮಾಳ್ಪುದುಂ....ನಿನ್ನಮಗಳಾಗಿ ನಿನಗೆ ವಧಾರ್ಥಮಪ್ಪೆನಕ್ಕೆಂದು ನಿಧಾನಂ ಗೆಯ್ದು ಮಂಡೋದರಿಯ ಗರ್ಭದಿಂದವತರಿಸು"ವಳು. ಮಂಡೋದರಿ ಮಂದಸಿನಲ್ಲಿಕ್ಕಿ ಮಿಥುಳಾನಗರದ ಪರೇತವನದಲ್ಲಿ ಹೂಳಿಸಲು, ಯಜ್ಞಕ್ಕೆ ನೆಲವನ್ನು ಶೋಧಿಸುವಾಗ ಸಿಕ್ಕಿ, ಸೀತೆಯೆಂಬ ಹೆಸರನ್ನು ಪಡೆಯುವಳು. "ಜನಕನ ಯಜ್ಞ ಪ್ರಪಂಚಮಂ ದಶಗ್ರೀವಂ ಕೇಳ್ದು ಬಾರದನ್ನೆಗಂ ರಾಮಂಗೆ ಸೀತೆಯಂ ಕುಡುಗುಂ" ಎಂದು ಹೇಳುವನು. ಅದರಂತೆ ವಿವಾಹವಾಗುವುದು. ದಶರಥನು "ರಾಮಂಗಧಿರಾಜಮಣಿಮಕುಟಮುಂ ಕವಿಮು, ಲಕ್ಷ್ಮಣಂಗೆ ಯುವರಾಜ "ಪಟ್ಟಮುಂ ಕಟ್ಟಿ" ವಾರಣಾಸಿಯಲ್ಲಿ ರಾಜ್ಯಭಾರ ಮಾಡುವಂತೆ ಇರಿಸುವನು. ಅಲ್ಲಿ

---

* ಮೈಸೂರು ಯೂನಿವರ್ಸಿಟಿ, ಓರಿಯಂಟಲ್ ಲೈಬ್ರರಿ. ಕೈಬರೆಹದ ಪುಸ್ತಕ (K. A. 66, ಪುಟಗಳು, ೨೯೨, ೩೩೮).

ಅವರು "ಅರಸುಗೆಯ್ಯುತ್ತಿರ್ಪಿನಂ" ರಾವಣಂ ಲಂಕಾದಿಷ್ಠಾನಮುಪ್ಪ ದಕ್ಷಿಣ ಭರತತ್ರಿಖಂಡಕ್ಕೆಲ್ಲಮಧಿಪನೆಂಬಭಿಮಾನದಿಂ ಇರಲು. ನಾರದನು "ನಿನ್ನನು ಅದೆ" ರಾಮನಿಗೆ ಜನಕನು ಸೀತೆಯನ್ನು ಕೊಟ್ಟನು; "ಆಕೆ ನಿನಗೆ ಯುಕ್ತಳ್" ಎಂದು ಹೇಳುವನು. ರಾವಣನು "ಮನೋಜತಾಪಮೊದವಿ" "ಭೂಮಿಗೋಚರಂಗೆ ಸ್ತ್ರೀರತ್ನಮೇವುದೆಟಿದು ತರ್ಪೆನೆಂದು ನುಡಿಯೆ....ನಾರದಂ ಅವರ್ಗಭಿವೃದ್ಧಿಕಾಲಂ, ಅವರೊಳ್ ವಿಗ್ರಹಂಗೈಯ್ವುದು ನಿಮಗೊಳ್ಳಿತಲ್ತು" ಎಂದು ನುಡಿಯುವನು. ರಾವಣನು ಮುಳಿದು ಶೂರ್ಪನಖಿಯನ್ನು ಸೀತೆಯನ್ನು ಒಡಂಬಡಿಸಿ ತಾರೆಂದು ಕಳುಹಿಸುವನು. ಅವಳು ವಾರಣಾಸಿಯ ಚಿತ್ರಕೂಟೋದ್ಯಾನಕ್ಕೆ ಹೋಗಿ, ಮುದುಕಿಯ ವೇಷವನ್ನು ತಾಳಿ ಸೀತೆಗೆ ಬೋಧಿಸಿ ನೋಡಿ, ಅವಳ ಶೀಲಕ್ಕೆ ಮೆಚ್ಚಿ ಹಿಂದಿರುಗಿ ಬಂದು ರಾವಣನಿಗೆ ಬುದ್ಧಿ ಹೇಳುವಳು. ರಾವಣನು ಕೇಳದೆ, ಮಾರೀಚನೊಡನೆ ಪುಷ್ಪಕವಿಮಾನವನ್ನೇರಿ ವಾರಣಾಸಿಗೆ ಬಂದು ಮಾಯಾಮೃಗವ್ಯಾಜದಿಂದ ಸೀತೆಯನ್ನು ಅಪಹರಿಸುವನು. ಲಂಕಾವನದಲ್ಲಿ ಸೀತೆ ಅನಶನವ್ರತವನ್ನು ತಾಳುವಳು. ರಾಮನು ದುಃಖಿಸುತಿರಲು ದಶರಥನಟ್ಟಿದ್ದ ದೂತನು ಬಂದು ಪುರೋಹಿತನಿಂದ ರಾವಣನು ಸೀತೆಯನ್ನು ಕದ್ದುಕೊಂಡು ಹೋದನೆಂಬುದನ್ನು ತಿಳಿದೆವೆಂದು ಹೇಳುವನು. ಅಲ್ಲಿಗೆ ಭರತ ಶತ್ರುಘ್ನರೂ, ಸುಗ್ರೀವ ಹನುಮಂತರೂ ಬಂದು ಸೇರುವರು. ಸುಗ್ರೀವನು ನಾರದರಿಂದ ಎಲ್ಲವನ್ನೂ ತಿಳಿದು ರಾಮನಿಗೆ ಸಹಾಯಮಾಡಿ, ತನ್ನ ರಾಜ್ಯವನ್ನು ಪಡೆಯಬೇಕೆಂದು ಬಂದೆನೆಂದು, ವಾಲಿಯ ಕಥೆಯನ್ನು ತಿಳಿಸುವನು. ಹನುಮಂತನು ಮುದ್ರಿಕೆಯನ್ನುಕೊಂಡು ಗಗನ ಗಾಮಿನೀ ವಿದ್ಯೆಯಿಂದ ಲಂಕೆಗೆ ಹೋಗಿ ಸೀತೆಯನ್ನು ಸಮಾಧಾನ ಮಾಡಿ ಬರುವನು. ಮಂಡೋದರಿಯೂ ಮಗಳೆಂದು ತಿಳಿದು ಸಂತೈಸುವಳು. ಮತ್ತ ಅಯೋಧ್ಯಾ ನಗರಿಯಿಂದ ರಾಮನು "ವಿಭೀಷಣನಂ ನಮಗೆ ಮಾಟ್ಪುದು ; ಆತಂ ನಮಗಾಗೆ ರಾವಣನ ಲಕ್ಷ್ಮಿಯೆ ನಮಗಾದಳ್" ಎಂದು ಹನುಮಂತನನ್ನು ಕಳುಹಿಸುವನು. ವಿಭೀಷಣನ ಬುದ್ಧಿವಾದ ; ರಾವಣನ ಕೋಪ ; ಲಕ್ಷ್ಮಣನಿಂದ ವಾಲಿಯ ವಧೆ ; ಕಿಷ್ಕಿಂಧದಲ್ಲಿ ಬೀಡು ; ಲಂಕೆಯ ಮುತ್ತಿಗೆ. ಹನುಮಂತನು ಲಂಕೆಗೆ ನುಗ್ಗಿ ರಾವಣನನ್ನು ಹೊರಡಿಸುವುದಕ್ಕೆ ಲಂಕೆಯನ್ನು ಸುಡುವನು. ಅದಕ್ಕೆ ಮುಂಚೆಯೇ ಹೊರಗೆ ಹೋಗಿದ್ದ ರಾವಣನು ವಿದ್ಯೆಯನ್ನು ಸಾಧಿಸಿ

ಬಂದು ಯುದ್ಧಮಾಡಿ ಲಕ್ಷ್ಮಣನ ಚಕ್ರದಿಂದ ಮಡಿಯುವನು. ರಾಮನು ವಿಭೀಷಣನಿಗೆ ಪಟ್ಟವನ್ನು ಕಟ್ಟಿ ದಿಗ್ವಿಜಯಮಾಡಿ, ಚಕ್ರವರ್ತಿಯಾಗಿ, "ಶಿವ ಗುಪ್ತ ಕೇವಲಿಗಳಂ ಬಂದಿಸಿ ಧರ್ಮಮಂ ಕೇಳ್ದು" "ಸಮ್ಯಕ್ತ್ವಾದಿಗಳಲ್ಲದೆ ಧರ್ಮಾನುರಾಗ ಮಾತ್ರಂ ಕೆಲವು ಕಾಲಮಿರ್ದು ಭರತಶತ್ರುಘ್ನರಂ ಸಾಕೇತ ದೊಳಿರಿಸಿ, ತಾಮಿರ್ವರುಂ ವಾರಣಾಸಿಗೆ ಪೋಗಿ ಸುಖಮಿರ್ದು," ಲಕ್ಷ್ಮಣನು ಸಾಯಲು ಅಜತಂಜಯನಿಗೆ ಪಟ್ಟವನ್ನು ಕಟ್ಟಿ, ತಾನೂ ಸೀತೆಯೂ ದೀಕ್ಷೆ ಯನ್ನು ಸ್ವೀಕರಿಸುವರು. ಸುಗ್ರೀವಾದಿಗಳೂ ತಪಸ್ಸನ್ನು ಕೈಕೊಳ್ಳುವರು. "ರಾಮಮುನಿಯಂ, ಅಣುಮನುಂ ಮುಕ್ತಿಗೆ ಸಂದರ್". ಸೀತೆ ಅಚ್ಯುತಕಲ್ಪ ದಲ್ಲಿ ಹುಟ್ಟಿದಳು. "ಲಕ್ಷ್ಮಣನುಂ ನರಕದಿಂ ಬಂದು ಕ್ರಮದಿಂ ಮೋಕ್ಷಗಾಮಿ ಯಪ್ಪಂ."

ನಾಗಚಂದ್ರನು ಸಂಸ್ಕೃತ, ಕನ್ನಡ ರಾಮಾಯಣಗಳು ಯಾವ ಯಾವು ವನ್ನು ನೋಡಿ, "ಗೌತಮಂ ಗಣಾಗ್ರಣಿ ಮಗಧಾಧಿಪಂಗೆ ಪೇಳ್ದುದನ್ ಅಪೂರ್ವಮೆನೆ "ಅಭಿವರ್ಣಿಸಿದನೋ (ರಾ.೧.೪೦). ಮತ್ತು "ಪಿರಿದೆನಿಸಿರ್ದ ರಾಮಕಥೆಯುಂ ತಿಳಿದಾಗಿರೆ....ನೇರ್ಪುವೆತ್ತಿರಲ್ ಅವಿರೋಧಮಾಗೆ" ಹೇಳಿ ದನೋ–ಇಟ್ಟುಕೊಂಡದ್ದೇನೋ ಬಿಟ್ಟಿದ್ದೇನೋ, ಹೊಸದಾಗಿ ಸೇರಿಸಿದ್ದೇನೋ —ಈ ಅಂಶಗಳನ್ನು ಚೆನ್ನಾಗಿ ಪರಿಶೋಧಿಸಬೇಕು. ಆಗ್ಗೆ ಆತನ ಕಥಾರಚ ನೆಯ ಶಕ್ತಿ ಹೊರಪಡುವುದು.

ಸದ್ಯಕ್ಕೆ ಈ ಕಾವ್ಯದಲ್ಲಿ ಹಾಸುಹೊಕ್ಕಾಗಿರುವ ಜೈನಭಕ್ತಿ ಜ್ಞಾನ ವೈರಾಗ್ಯಗಳ ವಾತಾವರಣವನ್ನಾಗಲಿ, ಅತಿಯಾದ ಶೃಂಗಾರಸಲೋಲುಪ್ತಿಯ ಅಭಾವವನ್ನಾಗಲಿ. ಮಿತವಾದ ಹಿತವಾದ ವರ್ಣನಾಸಂಪತ್ತಿಯನ್ನಾಗಲಿ, ತಿಳಿಯಾದ, ಬಿಗಿಯಾದ, ಇಂಪಾದ ಕನ್ನಡ ನುಡಿಗಳ ಸರಳ ಸಹಜ ಶೈಲಿಯ ನ್ನಾಗಲಿ, ವಿಚಾರ ಮಾಡುವುದಕ್ಕೆ ನಾನು ಅವಕಾಶವನ್ನು ಬೇಡುವುದಿಲ್ಲ. ನಾಗಚಂದ್ರನ ಚರಿತ್ರದೃಷ್ಟಿಯನ್ನು ಕುರಿತು ಒಂದೆರಡು ಮಾತು ಹೇಳಿ, ಆತನ ಪಾತ್ರಸೃಷ್ಟಿಯ ಉದಾತ್ತಭಾವವನ್ನು ತೋರಿಸುವುದಕ್ಕೆ ರಾವಣನ ಪಾತ್ರದ ವಿವರಣೆಯೊಂದನ್ನು ಮಾಡುತ್ತೇನೆ. ರಾವಣನು ದುಷ್ಟ, ಲೋಕ ಕಂಟಕ, ಪರಾಂಗನಾಸಕ್ತ ! ಇದು ಆ ಹೆಸರಿಗೆ ಅಂಟಿಬಂದ ಮಾತು; ಆತನಿಗೆ "ಸುಣ್ಣ ಬಳಿಯುವ ಆವಶ್ಯಕತೆಯೇನೂ ಇಲ್ಲ. ಆದರೂ "ಮಸಿ" ಬಳಿಯುವ

ಕಾರ್ಯವೇ "ಕಲಾಕರ್ಮ"ವೆಂಬ ಭಾವ ನಾಗಚಂದ್ರನಿಗೆ ಇದ್ದಂತೆ ಕಾಣು ವುದಿಲ್ಲ. ಆತನದು "ಉದಾತ್ತ" ಪ್ರಕೃತಿಯಲ್ಲವೆ? ದಯಾರ್ದ್ರ ಹೃದಯ ವಲ್ಲವೆ ?

ನಾಗಚಂದ್ರನು ಕಲೋಪಾಸಕ, ಜಿನೋಪಾಸಕ. ಆದರೂ ಲೌಕಿಕ ಜ್ಞಾನವನ್ನೂ ವೈಭವವನ್ನೂ ನೋಡಿದವನು. ತನ್ನ ಕಾಲದ ದೇಶಸ್ಥಿತಿಯನ್ನೂ ರಾಜನೀತಿಗಳನ್ನೂ, ರಾಜಿಕಪುರುಷರ ಗುಣಾವಗುಣಗಳನ್ನೂ ಮನಸ್ಸಿನಲ್ಲಿಯೇ ವಿಮರ್ಶೆ ಮಾಡಿದವನು. ಚಕ್ರಾಧಿಪತ್ಯಗಳ ಏಳುಬೀಳುಗಳನ್ನೂ, ಕಾಲವಶ ದಿಂದ, ಕರ್ಮವಶದಿಂದ, ಎಂತೆಂತಹ ಮಹಾಪುರುಷರೂ ಉರುಳಿಹೋಗಿರುವು ದನ್ನೂ ಅನುಭವಕ್ಕೆ ತಂದುಕೊಂಡನು. ಶ್ರೀರಾಮನನ್ನು, ಧರ್ಮಪುರುಷನನ್ನು ರಾಮಜಿನನನ್ನು ಸ್ತೋತ್ರಮಾಡುವ ಪುರಾಣದಲ್ಲಿ, ಪ್ರತಿ ವಾಸುದೇವನಾದ, ಶಲಾಕಾ ಪುರುಷನಾದ, ಮುಂದೊಮ್ಮೆ ಮೋಕ್ಷಕ್ಕೆ ಸಲ್ಲುವವನಾದ ರಾವಣನ ವ್ಯಕ್ತಿಯನ್ನು ನಿಷ್ಪಕ್ಷಪಾತದಿಂದಲೂ, ಸಮಾಧಾನ ಚಿತ್ತದಿಂದಲೂ, ಕಾರುಣ್ಯ ದೃಷ್ಟಿಯಿಂದಲೂ ಸೃಷ್ಟಿಸಿದ್ದಾನೆ. ರಾವಣನೆಂದರೆ ಅಸಹ್ಯಪಟ್ಟುಕೊಳ್ಳುವುದು ಕರ್ತವ್ಯವೆಂದು ಭಾವಿಸುವವರು. ಈ ಸಹಾನುಭೂತಿಯ ಸೌಂದರ್ಯಕ್ಕೆ ಸ್ವಲ್ಪ ಚಿತ್ತವನ್ನು ಕೊಡಬೇಕು. ಪಂಪನ ದುರ್ಯೋಧನ, ರನ್ನನ ದುರ್ಯೋಧನ ಅಭಿನವಪಂಪನ ರಾವಣ ಇವರು ಮೂವರೂ ಉಗ್ರಪ್ರಕೃತಿಗಳು, ರುದ್ರನಾಟ ಕದ ನಾಯಕರು, ಕನ್ನಡ ಕಾವ್ಯಗಳಲ್ಲಿ ಕಲಾ ದೃಷ್ಟಿಯಿಂದ ಅತ್ಯುನ್ನತ ಪಾತ್ರ ಗಳು ; ಉದಾತ್ತರ ಹೃದಯದಲ್ಲಿ ಉದ್ಭವವಾದವರು. ಸಂಪ್ರದಾಯವೂ, ಶಾಸ್ತ್ರವೂ ಬಿಗಿಕಟ್ಟಾದ ಸಮಾಜದಲ್ಲಿ ಈ ಸೃಷ್ಟಿ ಆಶ್ಚರ್ಯಕರ—ಆದರೆ ಪ್ರಪಂಚದ ಮಹಾಕವಿಗಳೆಲ್ಲಾ ಒಂದೇ ಹುಟ್ಟೆಂದು ತೋರಿಸುವ ಶುಭಚಿಹ್ನೆ.

ಕವಿಯ ಕಣ್ಣಿನಲ್ಲಿ, ಉತ್ತರಭಾರತದಲ್ಲಿ ಅಯೋಧ್ಯೆ ಅಥವಾ ಕೋಸಲ. ಅಲ್ಲಿ ಆಳುವವರು ಸೂರ್ಯವಂಶದ ರಾಜರು. ಅವರಲ್ಲಿ ಅನರಣ್ಯನೆಂಬವನು ರಾವ ಣನು ಮಾಹಿಷ್ಮತಿಯ ರಾಜನನ್ನು ಗೆದ್ದನೆಂದು ಕೇಳಿ ಒಂದು ತಿಂಗಳ ಮಗು ವಾದ ದಶರಥನಿಗೆ ಪಟ್ಟವನ್ನು-ಕಟ್ಟಿ ದೀಕ್ಷೆಗೊಳ್ಳುವನು. (ರಾ. ೧.೭೩-೭೬). ಎತ್ತಿಕೊಳ್ಳುತ್ತಲೇ ಪ್ರತಿನಾಯಕನ ದಿಗ್ವಿಜಯದ ಮಾತು. ವಿದೇಹ ಅಥವಾ ಮಿಥಿಲದಲ್ಲಿ ರಾಜ ಜನಕ ; ದಶರಥನ ಮಗ, ಜನಕನ ಮಗಳು ಇವರಿಂದ ರಾವಣನು ಸಾಯುವನೆಂಬ ಒಂದು ಭವಿಷ್ಯದ್ವಾಣಿ. ಅದನ್ನು ತಪ್ಪಿಸಲು

ವಿಭೀಷಣನು ಕೊಲೆಗಾರರನ್ನು ಕಳುಹಿಸಿದರೆ ನಾರದರ ಎಚ್ಚರಿಕೆಯಿಂದ ತಂದೆಗಳಿಬ್ಬರೂ ತಪ್ಪಿಸಿಕೊಳ್ಳುವರು. ಇದು ನೈಮಿತ್ತಿಕಾದೇಶ—

ಏನುಂ ತೊದಳಿಲ್ಲಿದುವೆ ಶಿ
ಲಾ ನಿಕ್ಷಿಪ್ತಾಕ್ಷರಂ, ವಿಭೀಷಣ, ರಣದೊಳ್
ಜಾನಕಿಯ ದೊಸಱಿಂ ಲಂ
ಕಾನಾಥಂ ದಾಶರಥಿಯ ಕಯ್ಯೊಳ್ ಮಡಿಗುಂ. (೩.೨೩)

ಅದಕ್ಕೆ ವಿಭೀಷಣನು ಮನುಷ್ಯಬುದ್ಧಿಯನ್ನು ಉಪಯೋಗಿಸಿ—

ಕಾರಣ ವಿಘಟನಮೆ ಕಾರ್ಯವಿಘಟನಮಕ್ಕೇ ? (೩.೨೪)

ಎಂದು ದಶರಥ ಜನಕರ ಮರಣವನ್ನು ಹೂಡುವನು. ಆದರೆ—

ಕೊಲಲಾರ್ಪರೆ ಸಾಯದರಂ
ಲಲಾಟದೊಳ್ ವಿಧಿಯ ಬರೆದ ಲಿಪಿ ಜಲಲಿಪಿಯೇ ? (೩.೩೧)

ರುದ್ರನಾಟಕದ ಮೊದಲ ಬೀಜ, ವಿಧಿ. ರಾವಣನ ದಿಗ್ವಿಜಯದ ಮಾತೂ ಆಯಿತು ; ವಿಧಿಯ ವಿಲಾಸವನ್ನೂ ಕೇಳಿದ್ದಾಯಿತು.

ಮಧ್ಯಭಾರತದಲ್ಲಿ ರಥನೂಪುರ, ಚಕ್ರವಾಳಪುರ, ವಿದ್ಯಾಧರ ಅಥವಾ ಖೇಚರ ರಾಜರ ರಾಜಧಾನಿ. ಇದರ ರಾಜನಾದ ಇಂದ್ರನು ದಕ್ಷಿಣ ಭರತ ಚಕ್ರವರ್ತಿ. ಇನ್ನೂ ಕೆಳಗೆ ಕಿಷ್ಕಿಂಧ. ಇದರ ರಾಜರಿಗೂ ರಾವಣನ ವಂಶಕ್ಕೂ ಮೈತ್ರಿ ಬಾಂಧವ್ಯ. ದಕ್ಷಿಣ ಸಮುದ್ರದಲ್ಲಿ ಲಂಕಾದ್ವೀಪ. ಲಂಕೆಯ ಭೀಮ ರಾಕ್ಷಸನು (ಇವನು ರಾಕ್ಷಸನಲ್ಲ, ಆ ವಂಶದ ಹೆಸರು ಅದು) ರಥನೂಪುರದ ತೋಯದ ವಾಹನನನ್ನು ಪತ್ತು ತೆಗೆದುಕೊಳ್ಳುವನು. ಕಿಷ್ಕಿಂಧದ ರಾಜರು ವಾನರಧ್ವಜರು, (೧೦.೧೧೭ ವಚನ) ವಾನರ ವಂಶದವರು. ವಾನರರಲ್ಲ. ಈ ರಾಜರ ಮನೆತನಗಳಲ್ಲಿ ಒಮ್ಮೆ ಬಾಂಧವ್ಯವೂ, ಒಮ್ಮೆ ಯುದ್ಧವೂ ನಡೆಯುತ್ತಿರುತ್ತದೆ. ರಾವಣನು ಇಂದ್ರನನ್ನು ಗೆದ್ದು, ಸುಗ್ರೀವನ ತಂದೆಯನ್ನು ಕಿಷ್ಕಿಂಧೆಯಲ್ಲಿ ರಾಜನನ್ನಾಗಿಸುವನು. ಅವನ ಮಗ ವಾಲಿ ರಾವಣನಿಗೆ ತನ್ನ ತಂಗಿಯನ್ನು ಕೊಡಲಿಷ್ಟವಿಲ್ಲದೆ ಸನ್ಯಾಸಿಯಾಗುವನು. ರಾವಣನು "ಮದಾಂಧಂ, ಧರ್ಮಾನುಗನಲ್ಲಂ, ಉದ್ಧತಂ" (೧೦. ೧೭೦-೧).

ಆದಱಿಂದಾತಂಗಾನೀ
ಯದೆ ಕೂಸಂ, ಕಾಳಗಕ್ಕೆ ಮೆಯ್ದುರೆ, ಪಲ ಕಾ
ಲದ ರಾಕ್ಷಸವಾನರ ವಂ
ಶದ ನಣ್ಪಿನ್ನಿಂದಮುಱಿದುದೆಂಬುದು ಲೋಕಂ (೧೦.೧೭೨)

ಪಾತಾಳಲಂಕೆಯ ರಾಜನಾದ ಖರನು ರಾವಣನ ಮೈದುನ, ಚಂದ್ರನಖಿಯ (ಶೂರ್ಪನಖಿಯಲ್ಲ) ಗಂಡ ; ಗಡಿಪ್ರಾಂತದ ಸರ್ವಾಧಿಕಾರಿ. ಈ ಗಡಿಗಾಳಗದಿಂದಲ್ಲವೆ ರಾಮರಾವಣರ ಕಲಹಕ್ಕೆ ಆರಂಭ ? ಹನುವರ ದ್ವೀಪದ ಅರಸು ಹನುಮಂತನು ಸುಗ್ರೀವನ, ಮತ್ತು ರಾವಣನ ಮನೆಯ ಹೆಣ್ಣುಮಕ್ಕಳನ್ನು ಮದುವೆಯಾಗಿ ಇಬ್ಬರಿಗೂ ಬೇಕಾದವನು. ಈ ರೀತಿ ಲೋಕಚರಿತ್ರೆಯ ನಡವಳಿಕೆಗೆ ತಕ್ಕಂತೆ ಚಕ್ರವರ್ತಿ ರಾವಣನ ಮತ್ತು ಅವನ ಆಶ್ರಿತರಾಜರ ಸಂಬಂಧಗಳನ್ನು ಕವಿ ಚಿತ್ರಿಸಿರುವನು.

೧೧ನೆಯ ಆಶ್ವಾಸದಲ್ಲಿ ರಾಮಲಕ್ಷ್ಮಣರಿಗೆ ಜಾಂಬೂನದನು ರಾವಣನ ಪರಾಕ್ರಮವನ್ನೂ, ಮಿತ್ರಸಂಪತ್ತಿಯನ್ನೂ, ವಿದ್ಯಾವೈಭವವನ್ನೂ, ಉತ್ಕೃಷ್ಟ ಗುಣಚಾರಿತ್ರಗಳನ್ನೂ ವಿಶದವಾಗಿ ವರ್ಣಿಸುವನು. ರಾವಣನು ಹುಟ್ಟಿದಾಗ ಪಿತ್ರಾರ್ಜಿತವಾದ ರಾಜ್ಯ ತಪ್ಪಿಹೋಗಿ ಇಂದ್ರನ ಕೈಕೆಳಗೆ ವೈಶ್ರವಣನ ಸ್ವಾಧೀನದಲ್ಲಿರುತ್ತದೆ. ಭೀಮರಾಕ್ಷಸನಿಂದ ಮನೆತನಕ್ಕೆ ಬಂದ "ನವಮುಖ ರತ್ನಭೂಷಣದ ಮಾಣಿಕಂಗಳೊಳಾತನ ಮುಖಂ ಪ್ರತಿಬಿಂಬಿಸೆ ದಶಮುಖನೆಂದು" ಆತನಿಗೆ ಹೆಸರಿಡುವರು. ಆತನು ತಮ್ಮಂದಿರಾದ ಭಾನುಕರ್ಣ ವಿಭೀಷಣರೊಡನೆ ತಪಸ್ಸುಮಾಡಿ "ವಿದ್ಯೆ"ಗಳನ್ನು ಸಾಧಿಸುವನು. ವೈಶ್ರವಣನನ್ನು ಸೋಲಿಸಿ, ಮಂಡೋದರಿಯನ್ನು ಮದುವೆಯಾಗಿ, ಇಂದ್ರ, ಯಮ, ವರುಣ, ನಳಕೂಬರ ಸಹಸ್ರಬಾಹು ಮುಂತಾದ ಖೇಚರರಾಜರನ್ನು ಗೆಲ್ಲುವನು. ವಾಲಿ ತಪಸ್ಸು ಮಾಡುತ್ತಿದ್ದ ಪರ್ವತದ ಮೇಲೆ ತನ್ನ ವಿಮಾನ ನಿಂತುಹೋಗಲು ರೋಷದಿಂದ ಪರ್ವತವನ್ನು ಎತ್ತುವುದಕ್ಕೆ ಹೋಗಿ, ಸಿಕ್ಕಿ, ಮೊರೆಯಿಟ್ಟು ರಾವಣನೆಂಬ ಹೆಸರನ್ನು ಪಡೆಯುವನು. ಲಂಕೆಯಲ್ಲಿ ದಕ್ಷಿಣ ಭರತಚಕ್ರವರ್ತಿಯಾಗಿ ಆಳುತ್ತಿರುವನು.

ಕದನಕ್ಷೋಣಿಯೊಳೋಡಿದರ್ ಮಡಿದರೆಂಬೀವಾರ್ತೆಯುಂ ಕಂಡರೆಂ
ದುದನೇಗೊಂಡರಿಳೇಶರೆಂಬ ಸುಡಿಯುಂ ಭೂಭಾಗದೊಳ್ ಕೇಳಲಾ
ದುದು, ಗೆಲ್ದರ್ ಸರಿಗಾದಿದರ್ ಪಗೆವರೆಂಬೀ ವಾರ್ತೆಯುಂ ಕೇಳಲಾ
ಗದವಂ ವರ್ತಿಸಿದಿನ್ ಬಳಿಕ್ಕೆನೆ ಜಗದ್ವಿದ್ರಾವಣಂ ರಾವಣಂ.

(೧೦.೨೨೬.)

ಇಲ್ಲಿ ಮತ್ತೊಂದು ಆದೇಶ ತಲೆ ಹಾಕುತ್ತದೆ. ಸಿದ್ಧಶೈಲವನ್ನು ಎತ್ತ

ಬಲ್ಲವನು ರಾವಣನನ್ನು ಕೊಲ್ಲುವನೆಂದು ಜಾಂಬೂನದನು ಕೇಳಿರುವನು. ಲಕ್ಷ್ಮಣನು—ಸೀತೆಯನ್ನು ಕದ್ದಾಗಲೇ ಅವನ ಶೌರ್ಯ ತಿಳಿಯಿತು ;

ರಾಮರಾವಣರ ಬಲ್ಪಂ ಮೆಲ್ಪುಮುಂ ಕಾಣಲಪ್ಪುದು ಘಟ್ಟೋತ್ತಿ
ಱವಲ್ಲಿ. ದಿಟ್ಟದೊಲೆಯಿಂ ತೂಗಿಂ ಸಣಕ್ಷೋಣಿಯೊಳ್ (೧೦.೨೩೨).

ಎಂದು ಧಿಕ್ಕರಿಸಿ, ಸಿದ್ಧಶೈಲವನ್ನೆತ್ತುವನು ! (೧೧. ೭-೮)

ಹೀಗೆ ಮಹಾ ಚಕ್ರವರ್ತಿಯ, ಜಗದ್ವಿದ್ರಾವಣನ ಬೆನ್ನಿನಲ್ಲಿ ಕಾದಿದೆ ವಿಧಿ !

ರಾವಣನ ರಾಜನೀತಿ ತನ್ನ ಗೆದ್ದ ಆಶ್ರಿತ ರಾಜರನ್ನು ಮರ್ಯಾದೆಯಿಂದ ಕಂಡು ಬಾಂಧವ್ಯವನ್ನು ಬೆಳಸಿ ಅವರನ್ನು ಭೀತಿಯಲ್ಲಿಟ್ಟುಕೊಂಡಿರುವುದರಲ್ಲಿ ಕಾಣುವುದು. ಉದಾಹರಣೆಗಾಗಿ, ಇಂದ್ರ, ಸಹಸ್ರಬಾಹುಗಳನ್ನು ಮತ್ತೆ ಸಿಂಹಾಸನವನ್ನೇರಿಸಿದುದಲ್ಲದೆ : ವರುಣನಿಗೆ ಹೇಳುವುದು ನೋಡಿ :

ಕಲಿಸಾವಂ, ಪಿಡಿವಡೆವಂ,
ಕಲಹದೊಳಿದು ಭಂಗಮಲ್ತು; ನೀನ್ ಮುನ್ನಿನವೋಲ್
ನೆಲಸಿರ್ಪುದು ನಿಜರಾಜ್ಯದೊ
ಳೊಲವಿಂದೆಂದೊಸೆದು ವರುಣನಂ ಮನಿಸಿದಂ. (೧೦.೨೨೦)

ಮನ್ನಿಸಿ, ಅವನ ಮಗಳನ್ನು ಮದುವೆಯಾಗುವನು.

"ರಾಜಾನೋ ಬಹುವಲ್ಲಭಾಃ". ರಾವಣನು ಎಷ್ಟೋ ಮಂದಿ ರಾಜ ಕುಮಾರಿಯರನ್ನು ಮದುವೆಯಾಗುವನು. (ರಾಮನೂ, ಈ ಕಾವ್ಯದಲ್ಲಿ). ಮಂಡೋದರಿ ಪಟ್ಟಮಹಿಷಿ. ರಾವಣನು ಅನಂತವೀರ್ಯಕೇವಲಿಗಳಿಂದ ಪರ ವಧೂವಿರತಿವ್ರತವನ್ನು ಸ್ವೀಕರಿಸಿರುವನು ; (೯. ೧೪೯,೧೧೪.) ಪರಿಪಾಲಿಸು ತ್ತಿರುವನು : ಇದನ್ನು ಕವಿ ನಳಕೂಬರನ ಪತ್ನಿ ಉಪರಂಭೆಯ ವೃತ್ತಾಂತ ದಲ್ಲಿ ಚೆನ್ನಾಗಿ ಒತ್ತಿ ಹೇಳಿರುವನು. (೧೦. ೧೮೭—೧೯೬). ರಾವಣನು ನಳಕೂಬರನ ಊರನ್ನು ಮುತ್ತುವನು. ರಾವಣನ ಕೀರ್ತಿಯನ್ನು ಕೇಳಿ ಮೋಹಗೊಂಡಿದ್ದ ಉಪರಂಬೆ ಕೋಟೆಯ ರಹಸ್ಯವನ್ನು ತನ್ನನ್ನು ಒಲಿ ದರೆ ತಿಳಿಸುವುದಾಗಿ ಹೇಳಿಕಳುಹಿಸಲು ರಾವಣನು "ಪೞಿಯುಂ ಪಾಪ ಮುಮಪ್ಪುದುಶ್ಚರಿತ್ರಮನೇವೆನೆಂದು ನಿಶ್ಚಯಿಸಿ, ವಿಭೀಷಣಂಗಱಿಪುವುದುಂ, ಆತಂ ವಿದ್ಯಾಪ್ರಾಕಾರಮಂ ಕಿಡಿಸುವಂತುಟಂ ಪ್ರತಿವಿದ್ಯೆಯನಾಕೆಯಂ ಬರಸಿ ಪುಸಿದು ನಂಬಿಸಿ ಕಲ್ತುಕೊಳ್ವುದೆನೆ, ರಾವಣಂ ಆಕೆಯಂ ತಾಯೆಂದು

ವಕ್ರೋಕ್ತಿಯಿಂ ನುಡಿವುದುಂ” ಆಕೆ ಬಂದು, ಕೋಟೆಯನ್ನು ಹಿಡಿದಮೇಲೆ,

“ರಾವಣಂ ರಹಸ್ಯದಿಂದಾಕೆಯುಂ ಕರೆದು, ನೀನ್ ವಿಶುದ್ಧಕುಲದ ಕುಶಧ್ವಜಂಗಂ ಮಧುಕಾಂತೆಗಂ ಪುಟ್ಟಿದುದಱಿಂ ನಿಜಕುಲಾಚಾರಮಂ ಬಗೆದು ಶೀಲಪರಿಪಾಲನಂ ಮಾಳ್ಪುದು; ಅಂತಲ್ಲದೆಯುಂ ನೀನೆನಗೆ ವಿದ್ಯೋಪದೇಶಂಗೆಯ್ದುದಱಿಂ ಗುರುವಾವೆ; ಪೆರತೇನುವುಂ ಬಗೆಯದೆ ನಳಕೂಬರನೊಳ್ ಕೂಡಿ ಸುಖಮಿರೆಂದಾಕೆಯ ದುಷ್ಪರಿಣಾಮುಮಂ ಪತ್ತುವಿಡಿಸಿ—

ನಳಕೂಬರನುಮನಾ ಕ್ಷಣ
ದೊಳೆ ಬರಿಸಿ ನಿಜಾಗ್ರತನಯನಿಂದಗಿಯಿಂದ
ಗ್ಗಳಮೆನೆ ಮನ್ನಿಸಿ ಭಯಮಂ
ಕಳದಿತ್ತಂ ಭೃತ್ಯಪದವಿಯಂ ದಶವದನಂ.” (೧೦.೧೯೬)

ಈ ರಾವಣ ಚಕ್ರವರ್ತಿ ರಾಜತಂತ್ರಜ್ಞನೂ ಅಹುದು, ಶೌಚವ್ರತನಿಷ್ಠನೂ ಅಹುದು!

ಆದರೂ ಯಾವ ಗಳಿಗೆಗೆ ಹೇಗೊ ಮಾನವ ಪ್ರಕೃತಿ! ಯಾವ ಸೂಕ್ಷ್ಮದಲ್ಲಿ ಯಾವ ವಿಷಕ್ರಿಮಿಯೋ, ಕಾಲವೂ, ಕರ್ಮವೂ, ವಿಧಿಯೂ ಕಾದಿರುವಾಗ! ಜಾನಕಿಯ ದೂಸಱಿಂ ಸಿದ್ಧಶೈಲಮನೆತ್ತಿದ ದಾಶರಥಿಯಿಂದ (ಲಕ್ಷ್ಮಣನಿಂದ) ಮಡಿವೇ ತೀರಬೇಕಲ್ಲವೆ ರಾವಣ? ವಿಧಿ ರಾಮನನ್ನೂ, ಲಕ್ಷ್ಮಣನನ್ನೂ, ಸೀತೆಯನ್ನೂ, ರಾವಣನನ್ನೂ ಹತ್ತಿರ ಹತ್ತಿರಕ್ಕೆ ತಳ್ಳುತ್ತಿತ್ತು. ಏಕೆಂದರೆ, ಇಷ್ಟುಹೊತ್ತಿಗೆ ಕೈಕೆಯ ವರಕ್ಕಾಗಿ ರಾಮನು ವನವಾಸಕ್ಕೆ ಬಂದಿದ್ದನು.

ಒಂದು ದಿನ ವರ್ತಮಾನ ಬರುತ್ತದೆ ರಾವಣನ ಆಸ್ಥಾನಕ್ಕೆ—ಖರನಿಂದ; ತಪಸ್ಸು ಮಾಡುತ್ತಿದ್ದ ತನ್ನ ಮಗ, ರಾವಣನ ಸೋದರಳಿಯ, ಶಂಭುಕನನ್ನು ರಾಮಲಕ್ಷ್ಮಣರು ಕೊಂದರೆಂದು; ಚಂದ್ರನಖಿಗೆ ಅಪಮಾನ ಮಾಡಿದರೆಂದು; ಕಾಳಗವಾಗಿ ಖರನ ಸೇನೆ ಹಿಮ್ಮೆಟ್ಟುತ್ತಿರುವುದೆಂದು—ಚಕ್ರವರ್ತಿಯ ಸಹಾಯ ಕೂಡಲೇ ಬೇಕೆಂದು. ಹೊತ್ತಿತು ಬೆಂಕಿ! ರಾವಣನನ್ನು ರಾಗಾಂಧ ಪಶುವನ್ನಾಗಿಮಾಡಿ ಸುಟ್ಟುಬಿಡುವ ಬೆಂಕಿ:

“ರಾವಣಂ ಖರದೂಷಣರಟ್ಟಿದ ಸುದ್ದಿಯಂ ಕೇಳ್ದು, ಶಂಭುಕನ ಸಾವಿಂಗಱಲ್ದು, ಕಡುಮುಳಿದು, ಸಂವರ್ತ ಸಮಯದ ಸಮುದ್ರದಂತೆ ಕದಡಿ, ...ದುರ್ಜಯಂ....ಕದನ ಮದೋದ್ಧತಂ.... ಎಟ್ಟನ್ ಅಸ್ತಮಿತ ಪುಣ್ಯ

ದಶಾನನನ್ ಆ ದಶಾನನನ್". ಅಸ್ತಮಿತ ಪುಣ್ಯದಶಾನನ—ಈ ಕವಿಯ ಭಾವಗರ್ಭಿತವಾದ, ಸಮಯೋಚಿತವಾದ, ಅನುಕಂಪಾಪೂರಿತವಾದ ಮುತ್ತಿನ ಮಣಿಯಂತಹ ಮಾತನ್ನು ನೋಡಿ. ಹತ್ತು ಕಟ್ಟುವಕಡೆ ಒಂದು ಮುತ್ತು ಕಟ್ಟು ಎನ್ನುವುದು ಇಂತಹ ಪ್ರತಿಭೆಗೇ ಅಲ್ಲವೆ?

ಪ್ರಳಯಕಾಲದ ಸಮುದ್ರದಂತೆ ಕದಡಿದ ರಾವಣ! (ತನಗೇ ಪ್ರಳಯ!) ಹಾರಿದ: ಪುಷ್ಪಕ ವಿಮಾನದಲ್ಲಿ ದಂಡಕಾರಣ್ಯಕ್ಕೆ! ಕಂಡ! "ತಣ್ಬುೞಲ ತಾಣದೊಳ್ ಬಿಱಿಸಿಡಿಲ ಬೞಿವಿಡಿದು ಪೊಳೆವ ಕುಡುಮಿಂಚಿನಂತೆ ಬಲ ಭದ್ರನ ಕೆಲದೊಳಿರ್ಪ ಸೀತೆಯಂ." ವಿಧಿಯ ಕೆಲಸ ಮುಗಿಯಿತು: ಯಾವ ವಿಷಕ್ರಿಮಿಯನ್ನು ಗುರುಗಳು ದಿವ್ಯಜ್ಞಾನದಿಂದ ಕಂಡು ವ್ರತ ಶಿಕ್ಷೆಯನ್ನು ದಯಪಾಲಿಸಿದ್ದರೋ ಆ ವಿಷಬೀಜ ಚೇತರಿಸಿಕೊಂಡಿತು!—

ಬಲೆ ದೃಷ್ಟಿಗೆ, ವಜ್ರದ ಸಂ
ಕಲೆ ಹೃದಯಕ್ಕೆನಿಸ ರೂಪವತಿ ಜಾನಕಿ ಕ
ಣ್ಬೊಲದೊಳಿರೆ, ಪದ್ಮಪತ್ರದ
ಜಲಬಿಂದುವಿನಂತೆ ಚಲಿತಮಾದುದು ಚಿತ್ತಂ. (೯. ೭೬)

ಇಷ್ಟು ದಿವಸದ ವ್ರತವೂ ಒಂದು ಕ್ಷಣದಲ್ಲಿ ಬೂದಿಯ ಹೋಮವಾಯಿತು. ಇದುವರೆಗೂ ದಕ್ಕದಿದ್ದವನನ್ನು ಕಾಮನು ದಕ್ಕಿಸಿಕೊಂಡನು.

ಶೃಂಗಾರಸಮುದ್ರಮಂ ಕಡೆಯೆ ಹೃದ್ಭವನ್ ಉದ್ಭವೆಯಾದಳೆಂದು ಕ
ಣ್ಣಾರೆ ದಶಾಸ್ಯನೀಕ್ಷಿಸಿದನ್ ಈಕ್ಷಿಸಿ ಕಣ್ಣಿಱಿದಾರೆ ಮನ್ಮಥನ್:
ಪಲರುಂ ವಿದ್ಯಾಧರಸ್ತ್ರೀಯರುಮಸುರಿಯರುಂ ಮಾನವಸ್ತ್ರೀಯರುಂ ತ
ಮ್ಮೊಲವಿಂ ಮೇಲ್ವಾಯ್ದೊಡಂ ಮುಂಬಗೆಯದ ಬಗೆಯೇನಾದುದೆಂದುದ್ಧತಂ ಮೂ
ದಲಿಸುತ್ತುಂ ರೂಪಿನೊಳ್ ಮಚ್ಚರಿಸುವನೆನಗೆಂದೆ ಬನಂಬುಟ್ಟುವನ್ನಂ
ಪಲಕಾಲಕ್ಕೇಸುವೆತ್ತಂ ದಶಮುಖನೆನುತುಂ ಮನ್ಮಥಂ ಮಾಣದೆಚ್ಚಂ
ಎಂತಾನುಂ ನಿನ್ನ ಸೌಂದರ್ಯದಿನೆನಗೊಳಗಾದಂ ದಶಗ್ರೀವನೆಂದಾ
ಕಾಂತಾರತ್ನಕ್ಕೆ ವೈದೇಹಿಗೆ ಮಕುಟತಟದ್ರತ್ನದಿಂದಘ್ಯ್ರಮಿತ್ತಂ. (೯. ೮೭. ೪)

ಈ ವಿಷಮಸ್ಥಿತಿಗೆ ಕವಿಯೂ ಆಶ್ಚರ್ಯ ಹೊಂದಿ ಸಂತಾಪಪಡುವನು—

ವಿಹಿತಾಚಾರಮನನ್ವಯಾಗತ ಗುಣಪ್ರಖ್ಯಾತಿಯಂ ದುಷ್ಪನಿ
ಗ್ರಹ ಶಿಷ್ಟಪ್ರತಿಪಾಲನಕ್ಷಮತೆಯಂ ಕೈಗಾಯದನ್ಯಾಂಗನಾ
ಸ್ಪೃಹೆಯಿಂ ತಾಳ್ದಿದನತ್ತ ಕಾಲವಶದಿಂ ಲಂಕೇಶ್ವರಂ! ವಿಸ್ಮಯಾ
ವಹವಲ್ತಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಟದೇ! (೮೬)

ಈ ಪದ್ಯಗಳಲ್ಲಿ ಇಟ್ಟಿರುವ ರಾವಣನ ಗುಣಸ್ಥಾನವನ್ನು ನೋಡಿ.

ಬಳಿಕ ರಾವಣನು ತನ್ನ ಅವಲೋಕಿನೀ ವಿದ್ಯೆಯನ್ನು ಬರಮಾಡುವನು—ಕೆಟ್ಟಕೆಲಸಕ್ಕೆ.

ಆತ್ಮಸತ್ವಗುಣಹಾನಿಯೆ ಸೂಚಿಸದೇ ವಿನಾಶಮಂ? (೮೬)

ಆ ವಿದ್ಯೆ—

ಅನ್ನೆಯದಿಂ ನಡೆವವರಂ
ನೀನ್ ನಿಯಮಿಸುವೈ, ದಶಾಸ್ಯ, ಪೆಱನಾವಂ ನಿ
ನ್ನನ್ ನಿಯಮಿಸುವಂ, ಮುನ್ನೀರ್
ಬೆನ್ನೀರೆನೆ ಬೆರಸಲಣ್ಣ ತಣ್ಣೀರೊಳವೇ। (೯೨)

ಎಂದು ಬುದ್ಧಿ ಹೇಳಿದರೂ ಕೇಳ!

ಬಿದಿಯಂ ಮೀಱುಗುಮೆ ಪೆಱರ ಪೇೞ್ದುಪದೇಶಂ! (೯೪)

ಈ। ತನಕಯ್ಯೊಳವಲ್ತು ಪುರಾ। ತನ ಕರ್ಮಾಯತ್ತವಲ್ತೆ ದೇಹಿಗಳೆಸಕಂ. (೯೬)

ಎಂದು ವಿದ್ಯಾದೇವತೆ ತಿಳಿದು, ಒಂದು ಕೂಗಿನಿಂದ ರಾಮನು ಲಕ್ಷ್ಮಣನ ಹತ್ತಿರ ಹೋಗುವಂತೆ ಮಾಡುವುದು. ರಾವಣನು ಸೀತೆಯನ್ನು ಹಿಡಿಯುವನು.

ದೋಷಿ ಪಿಡಿವಂತೆ ದಿವ್ಯದ
ಕಾಸಿದ ಕುಱುವಂ, ಕಡಂಗಿ ಕಾಳೋರಗನಂ
ಕೂಸು ಪಿಡಿವಂತೆ, ಪಿಡಿದಂ
ಸಾಹಿಗಸವಿವೇಕಿ, ಸೀತೆಯಂ, ದಶಕಂಠಂ (೧೦೧)

ರತ್ನಜಟಿ ಎಂಬ ಅರಸು ಆಕಾಶಕ್ಕೆ ಹಾರಿ ವಿಮಾನವನ್ನು ಅಡ್ಡಗಟ್ಟಲು ಅವನ ತಂದೆಯಾದ

ಅರ್ಕಜಟಿಯ ನಣ್ಪಂಗವನೊಳ್
ಕಾದದೆ ಕೆರುಣಿಸಿ ವಿದ್ಯಾ
ಚ್ಛೇದಂ ಗೆಯ್ದಂ ನಿರಂಕುಶಂ ದಶಕಂಠಂ (೧೪೬)

ಲಂಕೆಗೆ ಹೋಗುತ್ತಾ, ತಡೆಯಲಾರದೆ,

ಕಣ್ಗಳ್ ಕೀಱಿ ಸರ್ವಾಂಗಮುಂ!
ತೆಗೆದಾಲಂಗಿಸೆ,....ಧೈರ್ಯಂಗೆಟ್ಟು ಮೇಲ್ವಾಯ್ವ ಚೇ!
ಷ್ಟೆಗೆ ಪೌಲಸ್ತ್ಯನುಮೊತ್ತು ಗೊಟ್ಟನೆನಲಾರಂ ದರ್ಪಕಂ ದಂಡಿಸಂ? (೧೮೪)

"ಆಗಳವನಱಿಪಿಸಲಱಿಗೆಯ್ತ್ತುಕ್ಕೆ ಸೀತೆ ಸ್ವೈರಿಸದೆ ನೀನೆನ್ನಂ ನೋಂಕಿದೊಡೆ ನಾಲಗೆಗಿಟ್ಟು ಸಾವೆನೆಂದು ಪರಿಚ್ಛೇದಿಸಿ ನುಡಿಯೆ ದಶಾಸ್ಯನೋಸರಿಸಿ ಮಹಾಸತಿಯ ಶೀಲದಳವನಱಿಯನಪ್ಪುದಱಿಂ, ಅನಂತವೀರ್ಯ ಕೇವಲಿಗಳಿತ್ತ ಪರವಧೂ ವಿರತಿ ವ್ರತ ಪರಿಪಾಲನವೆನಗರಿದಾದುದೆನೆ, ನಿಸರ್ಗರಾಗಿಗಳಪ್ಪ ಪೆಂಡಿರ ಪರಿಣಾಮಂ ಎಲ್ಲಿವರಂ ನಡೆವಪ್ಪುದು ? ಈಕೆಯನಾವ ತೆಱದೊಳಮೊಡಂಬಡಿಸುವುದಾವ ಗಹನಂ ! ಎಂದು ತನ್ನಂ ತಾನೆ ಸಂತಯಿಸುತ್ತುಂ"—

ಬಂದು ಲಂಕೆಯ ಉದ್ಯಾನಭವನದಲ್ಲಿ ಸೀತೆಯನ್ನಿಟ್ಟು, ಕಾಮತಾಪದಿಂದಲೂ, ಸೇಡು ತೀರಿಸದೆ ಓಡಿಬಂದ ಪರಾಕ್ರಮಹಾನಿಯ ಅವಮಾನದಿಂದಲೂ ಹಂಬಲಿಸುತ್ತಾನೆ (೧೫೪). ಮಂಡೋದರಿಗೆ ಹೇಳಿಕೊಳ್ಳಲು ನಾಚುತ್ತಾನೆ. ಅವಳು ಊಹಿಸಿದ ಮೇಲೆ—

> ಅಱಿವುದ ವಾರ್ತೆಯಲ್ತು ನಿನಗೆನ್ನ ನೆಗೞ್ತಿಯ ವಾರ್ತೆ, ನೀನೆಮ್ಮುನ್ನಱಿದ ಬಱಿಕ್ಕದಂ ನಿನಗೆ ವಂಚಿಸಲಾಗದು. ತಂದೆನಿಂದು ಮುಂದಱಿಯದೆ ಸೀತೆಯಂ.... (೧೬೦)

ಎಂದು ಹೇಳಿ ಇಷ್ಟಪ್ರಾಪ್ತಿಯಾಗದಿದ್ದರೆ, "ಸಾವು ಸಮನಿಸುಗುಂ ಎನೆ ದಶಾನನನ ದಶಾವಸ್ಥೆಯುಂ ಕಂಡು ಮಂಡೋದರಿ ಭಯಂಗೊಂಡು

> ಅಚಿರ ಪ್ರಭೆಯುಂ ಪೆಂಡಿರ
> ಕುಚಿತ್ತಮುಂ ಕ್ಷಣದಿನಗ್ಗಳಂ ನಿಲ್ಕುಮೆ....
> ಆಕೆಯನೊಡಂಬಡಿಸಲಾನೆ ಸಾಲ್ವೆಂ।" (೧೬೧-೨)

ಎಂದು ಸಮಾಧಾನಪಡಿಸುವಳು. ಇಂತಹ ಹೆಂಡತಿಯಿಂದ ಕಣ್ಣು ತೆರೆಯುವುದೇ ? ಹುಚ್ಚು ಬಿಡುವುದೆ ?

ಮಂಡೋದರಿಯ ಮಾತಿಗೆ ಸೀತೆ 'ಮನದೊಳೆ ಕನಲ್ದು' ಹೇಳುತ್ತಾಳೆ—

> ಇದು ಪುಂಶ್ಚಲೀಸ್ತ್ರೀಜಲ್ಪಂ, ಕುಲವಧುವರ ಮಾತಲ್ತು, ನಿಮ್ಮಂದಿಗರ್ ವಂಶದ ಕೇಡಂ ನೋಡದೊಳ್ಪಂ ಬಗೆಯದೆ, ಪಱಿಗಂ ಪಾತಕಕ್ಕಂ ಭಯಂಗೊಳ್ಳದೆ ಪೇೞಿರ್, ಪೊಲ್ಲಮಾತಂ ನುಡಿವಿರಿದು ಮನಂನೋಟ್ಟಿ ಸಂಕಲ್ಪಜಲ್ಪಂ, ಮದಧೀಶಂ ರಾಮಚಂದ್ರಂಪೊಱಗೆನೆ ಪೆಱರೇಮಾತೊ ಜಾತಾನುಜಾತರ್. (೯.೧೭೦)

ರಾವಣನು ಬಂದು ಚಕ್ರಾಧಿಪತ್ಯದ ಸೌಖ್ಯವನ್ನು ತೋರಿಸಿ, ರಾಮನನ್ನು ಜರೆದರೆ—

ಗುಣಹಾನಿಯಿಂದಧೋಗತಿ,
ಗುಣದಿಂ ಸ್ವರ್ಗಾಪವರ್ಗ ಸುಖಮಕ್ಕುಮೆನಲ್
ಗುಣಹೀನನ ಸಿರಿಯಿಂದಂ
ಗುಣಿಗಳ ಬಡತನಮೆ ನಾಡೆಯುಂ ಲೆಸಲ್ತೇ! (೧೮೨)

ಎಂದು ಧಿಕ್ಕರಿಸುವಳು. ರಾವಣನಿಗೋ ಪ್ರೀತಿ ಹೆಚ್ಚಾಗುವುದು—

ಬಿಡೆನುಡಿಯೆ ಸೀತೆ, ಮುಳಿಸಿನ
ಪಡೆಮಾತಂತಿರ್ಕೆ, ರಾವಣಂಗೊಲವು ಪದಿ
ರ್ಮಡಿಸಿತ್ತಪ್ರಾಪ್ತಿರಸಂ
ಬಡೆಗುಂ ವೈಷಯಿಕ ಸುಖದೊಳಿದು ವಿಸ್ಮಯಮೇ! (೧೯೬)

ವಿಭೀಷಣನು ರಾತ್ರಿ ಸೀತೆ ಶೋಕಿಸುವ ಸ್ವರವನ್ನು ಕೇಳಿ "ನೈಮಿತ್ತಿಕಾದೇಶಮಂ ನೆನೆದು" ರಾವಣನಿಗೆ ಬುದ್ಧಿ ಹೇಳುವನು. ಸುಗ್ರೀವ ಹನುಮಂತರು ರಾಮನನ್ನು ಸೇರಿ, ಹನುಮಂತನನ್ನು ರಾಯಭಾರಿಯಾಗಿ ಕಳುಹಿಸುವರು. ಜಾಂಬೂನದನು ಹೇಳುತ್ತಾನೆ:

ನಯಮಂ ತಮಗೞಿಪಿದೊಡ
ನ್ನಯಮಂ ಬಿಡದನ್ನರಿಲ್ಲ, ರಾಗಾದಿಗಳೀಂ
ನಿಯತಂಗಳೆ? ಕನ್ನಡಿಯಂ
ಪ್ರಯತ್ನದಿಂ ಬೆಳಗೆ ಪತ್ತುವಿಡದೆ ಕಲುಂಬಂ? (೧೧. ೨೦.)

ವಿಭೀಷಣನು "ಶುದ್ಧಾಚಾರಂ, ವಿಚಾರಪರಂ," ನಾವು ರಾವಣನ ನಂಟರು, ಮೊದಲು ಸಂಧಿಗೆ ಪ್ರಯತ್ನಪಡಬೇಕು. ಆದರಂತೆ ಹೋಗಿ ಹನುಮಂತನು ವಿಭೀಷಣನನ್ನು ಕುರಿತು—

"ಶೌಚದಗ್ಗಳಿಕೆಯಂ....ಕೊಂಡಾಡುಪೀ ರಾವಣಂ"—
ಎಣಿಸದೆ ತನ್ನ ಶೌಚಗುಣಮುಂ ವ್ರತರಕ್ಷಣಮುಂ ಪರಾಂಗನಾ
ಪ್ರಣಯಮನಪ್ಪುಕೈಯೆ ಶರಣಾಗತರಕ್ಷಣದಕ್ಷನಪ್ಪ ದ
ಕ್ಷಿಣ ಭರತತ್ರಿಖಂಡ ಧರಣೀಪತಿ, ದಾನವ ಚಕ್ರವರ್ತಿ, ರಾ
ವಣನಿದನಾಗದೆನ್ನದೊಡೆ ನಿನ್ನ ನೆಗೞ್ತಿಗೆ ಬನ್ನಮಾಗದೇ (೧೧.೭೭-೮.)

ಎಂದು ಆಕ್ಷೇಪಿಸಲು, ವಿಭೀಷಣನು—

"ಆಗದಿದೆಂದಾನಿದನಱಿಪದುದಾಸೀನದಿಂ ಮುನ್ನಮೇನಿರ್ದೆನೆ?
ಎನ್ನಯ....ಪೇೞ್ದುದಂ ಕೇಳನೆ!....ಅನ್ನತ್ಯಾಗದೊಳೆ ದೇವಿ

ಕುಲಮುಂ ವ್ರತಮುಂ | ತನ್ನುನ್ನತಿಯುಂ ಕಾದೊಡ | ಮಿನ್ನುಂ
ವೈರಾಗ್ಯಮಾಪುದಿಲ್ಲೆನ್ನಗ್ರಜನೊಳ್ ॥.... ಮತ್ತಮುಟ್ಟಟ್ಟಿಯುಟ್ಟುತಿರ್ದಪಂ."
(೮೦-೮೨)

ಎಂದು ವ್ಯಥೆಪಡುವನು.

ಹನುಮನಿಗೂ ರಾವಣನಿಗೂ ಮಾತು ನಡೆಯುವುದು. ರಾವಣನು ಕಿಡಿಕಿಡಿಯಾಗಿ—

ಮುಸುಳೆ ನಿಜಾನ್ವವಾಯ, ಮಹಿಮೋನ್ನತಿ, ನಾಣ್ಮಡೆವೋಗೆ ಪಾಟಿಯುಂ
ಪಸುಗೆಯುಮೆನ್ನ ಮುನ್ನಣಿಯುನಿಂದಗಿಯೊಳ್ ಸಮುಕಕ್ಷ್ಯನಾಗೆ ರ
ಕ್ಷಿಸಿಮುಮನೇನುಮಂ ಬಗೆಗೆ ತಾರದೆ, ಲಜ್ಜೆಯನೊಕ್ಕು, ಬಿಟ್ಟು ಮಾ
ನಸಿಕೆಯನಿಂತು ಭೂಚರರ್ಗೆ ಖೇಚರ ನೀಂ ಚರನಾಗಿ ಬರ್ಪುದೇ !
ಉಪಕೃತಿಯಂ ನೆನೆಯದೆ ನೀ
ನಪಕೃತಿಯನೊಡರ್ಚಿದೈ ದುರಾತ್ಮನೆ, ರಿಪುಭೂ
ಮಿಪರೊಳೊಡಗೂಡಿದೈ, ದ್ರೋ
ಹ, ಪೆಂಪುಗಿಡೆ ದಂಡಿಸಲ್ಕೆವೇಟ್ಟಪೆ ನಿನ್ನಂ. (೧೩೬-೭)

ಹೆಚ್ಚು ಮಾತೇಕೆ ?—ವಿಭಿಷಣನೂ ಶತ್ರುಗಳನ್ನು ಸೇರಿದನು : ತನ್ನ ಬುದ್ಧಿವಾದವೆಲ್ಲಾ ವ್ಯರ್ಥವಾಗಿ, ರಾವಣನಿಂದ ತಿರಸ್ಕೃತನಾಗಿ, ತನ್ನ ಪುಣ್ಯ ಕರ್ಮಾನುಸಾರವಾಗಿ, (೧೨.೫೨-೭೬)

ಬಗೆ ದೆಸೆಬಿದ್ದಂ ಪರಿವುದು
ಬಗೆಯುಂ ಬಗೆದಂತೆ ಪರಿಯಲೀಯದೆ, ಪಿರಿಯಂ
ತೆಗೆವುದು ಪಟ್ಟುಪ್ಪೊರ್ದದ ಬ
ಟ್ಟಗೆ, ನಿಜದಿಂದಾರ ಬಗೆಗಳುಂ ನೇರಿದುವೇ ? (೫೪)

ಎಂದು ಅಣ್ಣನಿಗೆ ಸಹಾನುಭೂತಿಯಿಂದ ಬುದ್ಧಿ ಹೇಳಿ.

ಇನ್ನು ಕೊನೆಯ ದೃಶ್ಯ : ಈ ರುದ್ರನಾಟಕವಲ್ಲೆಲ್ಲಾ ಅತಿ ಹೃದಯ ದ್ರಾವಕವಾದ ಸನ್ನಿವೇಶ :—(೧೪.೮೨-೧೦೬.). ಹನುಮನೊಬ್ಬ ದ್ರೋಹಿ, ವಿಭೀಷಣನೊಬ್ಬ ಅಂಜುಕುಳಿದ್ರೋಹಿ. ಎಲ್ಲರೂ ಹೋಗಲಿ. ಯುದ್ಧ : ಸೋಲದ ಮೇಲೆ ಸೋಲು, ಮಕ್ಕಳು, ತಮ್ಮ, ನಂಟರು ಯಾರೂ ಇಲ್ಲ. ಶಾಂತಿಜಿನೇಶ್ವರನ ದೇವಾಲಯದಲ್ಲಿ ಅರ್ಚನೆಮಾಡಿಸಿ, ಜಪಮಾಡಿ, ಉಪ ಸರ್ಗಗಳನ್ನು ಸಹಿಸಿ, ಬಹುರೂಪಿಣೀ ವಿದ್ಯೆಯನ್ನು ಸಾಧಿಸಿದರೆ ಆ ವಿದ್ಯೆ

ಲಕ್ಷ್ಮಣ, ರಾಮ ಇಬ್ಬರುಳಿದು ಉಳಿದವರನ್ನು ಉಳಯಲೀಯೆ ! ಎನ್ನುವಳು. ಆಹ ! ವಿಧಿಯೇ !

ಕಡೆಯಸಲ ರಾವಣನು ಸೀತೆಯನ್ನು ಒಪ್ಪಿಸುವುದಕ್ಕೆ ಬರುವನು : ತಾನೇ ಪರಿಶುದ್ಧನಾಗಿ ಹಿಂದಿರುಗುವನು. ಈ ವೈರಾಗ್ಯ ಪ್ರಕರಣವನ್ನು ನಾಗಚಂದ್ರನ ದಿವ್ಯವಾಣಿಯಲ್ಲೇ ಕೊಡದಿದ್ದರೆ ಯಾರಿಗೂ ತೃಪ್ತಿಯಾಗದು. (೧ಳ. ೧೦೭-೧೧೯).

ಸಮಧಿಕರಾರ್ ಜಗತ್ರಯದೊಳಿನ್ನೆನಗೆನ್ನೊಳಿದಿರ್ಚುವನ್ನರಾರ್
ಸಮರದೊಳೆಂದು, ತನ್ನ ಭುಜದಂಡಮನೀಕ್ಷಿಸಿ, ಜಾನಕೀ ಮುಖಾ
ಬ್ಜಮನವಲೋಕಿಸಲ್ ಕರಮೆ ಕಾತರನಾಗಿ, ವಿಯಚ್ಚರಾಧಿಪಂ
ಪ್ರಮದವನಕ್ಕೆ ಬಂದನರಲಂಬುಗಳಿಲ್ಲದ ಕಾಮನೆಂಬಿನಂ.

ಅಂತು ಭೋಂಕನೆ ಬರ್ಪ ರಾವಣನ ಗಂಡಗಾಡಿಯಂ ಕೆಲದೊಳಿರ್ದ ಖಚರ ಕಾಂತೆಯರ್ ಸೀತಾದೇವಿಗೆ ತೋರ್ಪುದುಂ—

ರಾವಣನ ರೂಪು ಸೀತಾ
ದೇವಿಗೆ ತೃಣಕಲ್ಪಮಾಯ್ತು, ಪತಿಭಕ್ತಿಯೊಳಾ
ರೀ ವನಿತೆಯತೆಱದಿಂ ಸ
ದ್ಭಾವಮನೊಳಕೊಂಡ ಪುಣ್ಯವತಿಯರ್ ಸತಿಯರ್ !
ಏನಂ ಕೇಳ್ದಪೆನೊ ರಘು
ಸೂನುವ ಲಕ್ಷ್ಮಣನ ಪೊಲ್ಲವಾರ್ತೆಯನಿನ್ನೆಂ
ದಾ ನಳಿನಾನನೆ ಬರ್ಪ ದ
ಶಾನನನಂ ಕಂಡು ತಾಳ್ದಿದಳ್ ತಲ್ಲಳಮುಂ.

ಅಂತು ತಲ್ಲಳಿಸುತಿರ್ದ ಮಾನಿಸಿಯುನೆಯ್ದೆವಂದು, ದಶಾನನ ನಿಂತೆಂದಂ—ಬಹುರೂಪಿಣೀವಿದ್ಯೆ ಸಾಧಿತಮಾದುದು. ಇನ್ನೇನೆನಗಸಾಧ್ಯಮಪ್ಪ ಮಱು ವಕ್ಕಮಿಲ್ಲ. ನಿನ್ನ ನಚ್ಚಿನ ರಾಮನ ದೆಸೆಯಂ ಬಿಟ್ಟು, ಎನಗೊಡಂಬಟ್ಟು. ಸಾಮ್ರಾಜ್ಯಸುಖಮನನುಭವಿಸೆನೆ, ಸೀತೆ ವಿಹ್ವಲೀಭೂತ ಚಿತ್ತೆಯಾಗಿ—

ಕರುಣಿಸುವೊಡೆನಗೆ, ದಶಕಂ
ಧರ, ಧುರದೊಳ್ ರಘುತನೂಜನಾಯುಃಪ್ರಾಣಂ
ಬರೆಗಂ ಬಾರದಿರೆನುತುಂ,
ಧರಿತ್ರಿಯೊಳ್ ಮೆಯ್ಯನೊಕ್ಕು ಮೂರ್ಛೆಗೆ ಸಂದಳ್.

ಜಾನಕಿ ಮೂರ್ಛಿತೆಯಾಗೆ ದ
ಶಾನನನನುಕಂಪೆಪುಟ್ಟೆ ಕರುಣಿಸಿ ತನ್ನಂ
ತಾನೆ ಪಳಿದುಳಿದು ಕರ್ಮಾ
ಧೀನ ಸಮುತ್ಪನ್ನ ದುರಘದುಷ್ಪರಿಣತಿಯಂ.
ಕದಡಿದ ಸಲಿಲಂ ತಿಳಿವಂ
ಪದೆ, ತನ್ನಿಂ ತಾನೆ ತಿಳಿದ ದಶವದನಂಗಾ
ದುದು ವೈರಾಗ್ಯಂ ಸೀತೆಯೊ
ಳುದಾತ್ತನೊಳ್ ಪುಟ್ಟದತ್ತೆ ನೀಲೀರಾಗಂ !
ಪತ್ತುವಿಡಿದಿರ್ದನೇ ರವಿ
ಪತ್ತಿದ ಸಂಧ್ಯಾನುರಾಗಮಂ, ಮನದೞಿಪಿಂ
ದೆತ್ತಾನುಂ ಪೊಲ್ಲೆನಿಪುದ
ನತ್ತಮನಾಚರಿಸಿ ಪತ್ತುವಿಡದಿರ್ದಪನೇ !

ಅಂತು ಮನಮೊಳೊಗೆದ ಕಾರುಣ್ಯರಸಮೆ ಸೀತೆಯೊಳಾದನುರಕ್ತತೆಯಂ ಕರ್ಚಿಕಳೆವುದುಂ, ಸ್ವಭಾವ ಪರಿಣತಿಯೊಳ್ ನಿಂದು, ಸ್ವಕೀಯಾಪ್ತಪುರುಷ ಪರಿಷಜ್ಜನಕ್ಕಿಂತೆಂದಂ—

ಗುಣಪರಿಪಾಲನಾರ್ಥಮೆನಗಂ ಬಗೆದೋಱಿದಳಿಲ್ಲ, ದಿವ್ಯ ಭೂ
ಷಣ ವಸನಾಂಗರಾಗಮುಮನೊಲ್ಲದೆ, ಖೇಚರ ರಾಜಲಕ್ಷ್ಮಿಯಂ
ತೃಣಸಮನಾಗೆ ಭಾವಿಸಿದಳೀ ಸತಿಯುಂ ಮೊದಲಾಗೆ, ಪೌರುಷ
ಪ್ರಣಯಿಯೆನಿಂತಪೇಕ್ಷಿಸುವೆನೇ ಗುಣಹಾನಿಯನೆನ್ನ ಪಾಪದಿಂ !

ಇವರಂ, ಪ್ರಾಣಪ್ರಿಯರಂ,
ನೆವಮಿಲ್ಲದೆ, ಕರ್ಮವಶಮೆ ನೆವಮೆನೆ ಕಂದ
ರ್ಪ ವಿಮೋಹದಿಂದಗಲ್ಚಿದೆ
ನವಿವೇಕಿಯೆನೆನ್ನ ಕುಲದ ಪೆಂಪೞಿವಿನೆಗಂ ।
ರಾಮನನಗಲ್ಚಿ ತಂದಾ
ನೀ ಮಾನಿನಿಗಿನಿತು ದುಃಖಮಂ ಪುಟ್ಟಿಸಿದೆಂ
ಕಾಮವ್ಯಾಮೋಹದಿನಾ
ಶಾಮುಖಮಂ ಪುದಿಯೆ ದುರ್ಯಶಃಪಟಹರವಂ,

ಎನಗೆ ವಿಭೀಷಣಂ ಹಿತಮನಾದರದಿಂದಮೆ ಪೇಳೆಲ್ಕೆ, ಕೇಳದಾ
ತನನವಿನೀತನೆಂ, ಗಜಱಿ ಗರ್ಜಿಸಿ ಬಯ್ದನುಜಾತನಂ ವಿನೀ
ತನನಱೆಯಟ್ಟಿ, ದುರ್ವ್ಯಸನಿಯೆಂ, ಕಲಿದೆಂ, ವ್ಯಸನಾಭಿಭೂತನಾ
ವನುಮನುರಾಗವೇಗದೆ ಹಿತಾಹಿತ ಚಿಂತೆಯನೇಕೆ ಮಾಡುಗುಂ !
ಜಸದಲವಂ, ಪರಾಭವದ ಪತ್ತುಗೆಯುಂ, ದೊರೆವೆತ್ತ ತಮ್ಮ ಮಾ
ನಸಿಕೆಯ ಕೇಡನ್, ಉನ್ನತಿಯ ಬನ್ನಮುನ್, ಅನ್ಯಭವಾನುಬದ್ಧಮ
ಪ್ಪಸುಗತಿಯುಂ, ಸುಹೃಜ್ಜನದ ಬೇವಸಮಂ, ಜನತಾಪವಾದಮಂ
ವ್ಯಸನಿಗಳಾರುಮೆತ್ತಲಱಿವರ್ ವಿಷಯಾಸವಮತ್ತಚೇತಸರ್ ?

ಎಂದು ಉದ್ವೇಗ ಪರನಾಗಿ ನುಡಿದಾತ್ಮಗತದೊಳಿಂತೆಂದು—

ಇರದುಯ್ದೀಗಳೆ ಕೊಟ್ಟೊಡೆನ್ನ ಕಡುಪುಂ, ಕಟ್ಟಾಯುಮಂ, ಬೀರಮುಂ,
ಬಿರುದುಂ, ಬೀಸರಮುಕ್ಕು ಮೋಸರಿಸಿದಂತಾಗಿರ್ಕುಮಂತಾಗದಂ
ತಿರೆ ದೋರ್ಗರ್ವಮನಿರ್ವಲಂ ಪೊಗಲ್ವಿನಂ, ಸೌಮಿತ್ರಿಯುಂ ರಾಮನುಂ
ವಿರಥರ್ ಮಾಡಿ ರಣಾಗ್ರದೊಳ್, ಪಿಡಿದುತಂದಾಂ ಕೊಟ್ಟಪೆಂ, ಸೀತೆಯಂ.

ಎಂದು ನಿಶ್ಚಯಿಸಿ ನಿಜನಿವಾಸಕ್ಕೆ ವಂದಂ.

ಇಂಥ ಬರವಣಿಗೆ ಕನ್ನಡಸಾಹಿತ್ಯದಲ್ಲಿ ಅಪೂರ್ವ. ಪದ, ಅರ್ಥ, ಭಾವ, ರಸ, ಮನುಷ್ಯ ಹೃದಯಜ್ಞಾನ, ಔದಾರ್ಯ, ಸೀತೆಯ, ರಾವಣನ ಉದಾತ್ತ ಚಿತ್ರ,—ಎಲ್ಲಕ್ಕೂ ಮೇಲೆ ಧರ್ಮದೃಷ್ಟಿ, ಒಂದು ನುಡಿ ಬಿಡದ ಹಾಗೆ, ಒಂದು ನುಡಿ ಸೇರಿಸದ ಹಾಗೆ ಕನ್ನಡದ ಸಂಸ್ಕೃತದ ಶಬ್ದವಿನ್ಯಾಸ, ಸರಳ, ಗಂಭೀರ, ನಾಟಕೀಯ ಶೈಲಿ, ವೃತ್ತ ಕಂದ ವಚನಗಳ ಸಮುಕಟ್ಟು. ಎಲ್ಲಾ ಹದಿಮೂರೇ ಪದ್ಯ !

ರಾವಣನಿಗೆ ಉಳಿದಿರುವುದು ಇನ್ನು ಸಾವೊಂದು. ದುಶ್ಶಕುನಗಳನ್ನು ಕಂಡು ಬೆದರಿ ಮಂಡೋದರಿ "ಸೀತೆ"ಯನ್ನೀಯೆ ದಲು—

ರೋಷಾವೇಶದಿಂ ರಾವಣಂ
ನೀನಿಲ್ಲಿಂ ತೊಲಗೆಂದು ಚಪ್ಪರಿಸಿದಂ ಮಂಡೋದರೀದೇವಿಯಂ !

(೧೪.೧೨೩)

ರಣರಂಗದಲ್ಲಿ ಲಕ್ಷ್ಮಣನ ಚಕ್ರ ವಿಧಿನಿಯಮಿತ ಕಾರ್ಯವನ್ನು ಪೂರೈಸಿತು—"ಕೈಲಾಸಮಂ ತೂಗಿದ ಗಂಡ"ನನ್ನು "ಕೋಟಿಕಶಿಲೆಯನ್ನೆತ್ತಿದ ಮಹಾಸತ್ವಂ ಸುದರ್ಶನ ಚಕ್ರದಿಂದಿಡುವುದುಂ"—

ಹೃದಯಂ ಸೀತಾನಿಮಿತ್ತಂ ಮನಸಿಜನಿಸೆ ಪಂಚೇಷುವಿಂ ಭಿನ್ನಮಾಗಿ
ರ್ದುದಱಿಂ. ಲಕ್ಷ್ಮೀಧರಂ ಕೋಪದಿನಿಡೆ ಪೆಱತೇಂ ಚಕ್ರರತ್ನಕ್ಕೆ ಪಾಡಾ

ದುದೆನಲ್. ನಟ್ಟುರ್ಚಿ ಬೆನ್ನಿಂ ಪೊಱಮಡೆ; ವಿಗತಪ್ರಾಣನಾ ದಾನವೇಂದ್ರಂ, ತ್ರಿದಶೇಂದ್ರಂ ವಜ್ರದಿಂದಿಟ್ಟೊಡೆ ನಡುಗೆ ನೆಲಂ ಬೀೞ್ವಂತೆ ಬಿೞ್ದಂ (೧೮೯)

ಶಾಂತಮಸ್ತು !

ಜಯ, ಜಿತವೃಜಿನ, ಜಿನೇಶ್ವರ,
ದಯಾನದೀಪುಳಿನರಾಜಹಂಸ, ಭವಾಂಭೋ
ಧಿಯ ತಡಿಯನೆಯ್ದಿ ನಿಮ್ಮಂ
ನಯ ನಿಕ್ಷೇಪಪ್ರಮಾಣಪಾತ್ರದಿನರ್ಹಾ !
ನೇವಾಳವೆಂದು ಕೆಲಬರ್
ಪಾವಂ ಪಿಡಿವಂತೆ, ದೇವ, ನೀನಲ್ಲದರಂ
ದೇವರಿವರೆಂದು ಪಿಡಿದಿ
ನ್ನೀ ವಿಧಿವಟ್ಟಪರೊ ಮೋಹಮೂರ್ಛೆಯಿನರ್ಹಾ !
ನಿನಗೆ ರಸವೊಂದೆ ಶಾಂತಮೆ,
ಜಿನೇಂದ್ರ, ಮನಮಾ ರಸಾಂಬುನಿಧಿಯೊಳಗವಗಾ
ಹನಮಿರ್ದು, ಮಿಕ್ಕ ರಸಮಂ
ಕನಸಿನೊಳಂ ನೆನೆಯದಂತು ಮಾಡೆಮಗರ್ಹಾ. (ರಾ.೭.೪೦-೨).

ಚಾಮರಸನ ಪ್ರಭುಲಿಂಗ ಲೀಲೆ*

....ಚಾಮರಸನ ಪ್ರಭುಲಿಂಗ ಲೀಲೆ ಮತಗ್ರಂಥವಾದರೂ ಕನ್ನಡ ಸಾಹಿತ್ಯದಲ್ಲಿ ಅತ್ಯುತ್ತಮವಾದ ಕಾವ್ಯಗಳಲ್ಲಿ ಒಂದಾಗಿದೆ. ಸಾಹಿತ್ಯದೃಷ್ಟಿಯಿಂದ ಮುಖ್ಯವಾಗಿ ವಿದ್ಯಾರ್ಥಿಗಳು ಈ ಕಾವ್ಯ ಪರಿಚಯವನ್ನು ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ಇದನ್ನು ಸಂಗ್ರಹಿಸಿದೆ. ವಿಷಯ ಸಂಯೋಜನೆಯಲ್ಲಿಯೂ, ಕಥಾರಚನೆಯ ಕೌಶಲ್ಯದಲ್ಲಿಯೂ, ಪಾತ್ರನಿರೂಪಣೆಯಲ್ಲಿಯೂ, ಸರಳ ಸಹಜರೀತಿ ಶೈಲಿಗಳಲ್ಲಿಯೂ ಚಾಮರಸನ ಕವಿತಾಮಾರ್ಗ ಉತ್ಕೃಷ್ಟವಾದುದು. ಈ ಕಾವ್ಯ ಸೌಂದರ್ಯಗಳನ್ನು ಸರ್ವರೂ ರುಚಿ

---

* ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆಯ ೩ನೆಯ ಪುಸ್ತಕವಾದ 'ಪ್ರಭುಲಿಂಗ ಲೀಲೆಯ ಸಂಗ್ರಹ'ದ ಮುನ್ನುಡಿಯಿಂದ. (೧೯೩೪)

ನೋಡಿ ಆನಂದಪಡಬಹುದಾಗಿದೆ. ಮತಗ್ರಂಥವಾದುದರಿಂದ ಸಿದ್ಧಾಂತ ಬೋಧನೆಯೂ, ಧರ್ಮೋಪದೇಶವೂ ಈ ಕಾವ್ಯದಲ್ಲಿ ಉಂಟು. ಇವೂ ಕೂಡ ಉದಾತ್ತ ಭಾವವುಳ್ಳ, ವಿಶಾಲ ಹೃದಯವುಳ್ಳ, ವಿವಿಧ ಮತಗಳ ನಾಮ ರೂಪಾಂತರಗಳಿಂದ ವಿಮುಖರಾಗದ ಎಲ್ಲಾ ಧರ್ಮಾಭಿಮಾನಿಗಳಿಗೂ ಆದರಣೀಯವಾಗಿವೆ....

ರವೀಂದ್ರನಾಥ ಠಾಕೂರರು*

* * *

ಭರತವರ್ಷದ ಮಹತ್ವವನ್ನು ಸುಸಂಸ್ಕೃತರಾದ ಪಾಶ್ಚಾತ್ಯರಲ್ಲಿ ಹರಡಿದ ಮಹಾನುಭಾವರಲ್ಲಿ ಈ ಗ್ರಂಥದ ನಾಯಕರಾದ ರವೀಂದ್ರನಾಥ ಠಾಕೂರರು ಒಬ್ಬರು....

ಶ್ರೀ ಠಾಕೂರರು ಭರತ ಭೂಮಿಗೇ ಅಲ್ಲ, ಇಡಿಯ ವಿಶ್ವಕ್ಕೇ ಅಲಂಕಾರ ಪ್ರಾಯರು, ಆದರ್ಶ ಪುರುಷರು. ಮೂಡಣ ಮತ್ತು ಪಡುವಣ ಧರ್ಮ ಸಂಸ್ಕೃತಿ ನಾಗರಿಕತೆಗಳ ಸಾರವನ್ನೂ ಆಳವನ್ನೂ ಚೆನ್ನಾಗಿ ವಿಮರ್ಶಿಸಿ, ಸಮತಾಬುದ್ಧಿಯಿಂದ ಎರಡರ ಗುಣಗಳನ್ನೂ ಐಕ್ಯಮಾಡಿ ವಿಶ್ವಜನರನ್ನು ಮುಂದುವರಿಸಬೇಕೆಂಬುದೇ ಇವರು ಕೈಗೊಂಡ ದೀಕ್ಷೆ. ಸಂಕುಚಿತ ಹೃದಯವೆಂಬುದು ಇವರಲ್ಲಿಲ್ಲ. ಭಾರತ ಜನಾಂಗದ ಮಹಿಮೆ, ಕೀರ್ತಿ, ಸ್ವಾತಂತ್ರ್ಯಗಳಿಗೆ ಇವರು ಹೆಮ್ಮೆಗೊಳ್ಳುವರು, ಹೋರಾಡುವರು, ಬಿರುದುಸಿರಿಗಳನ್ನು ತೊರೆಯಲು ಸಿದ್ಧರಾಗಿರುವರು. ಪಾಶ್ಚಾತ್ಯರ ಶಕ್ತಿ, ಸಾಹಸ, ವಿಜ್ಞಾನ ಮತ್ತು ರಾಜಕ ಬಲ, ಸಾಮಾಜಿಕ ಶಿಕ್ಷಣ, ಒಳಗೆ ಅಡಗಿ ಕುಳಿತಿರುವ ಧರ್ಮವಾತ್ಸಲ್ಯ....ಇವುಗಳನ್ನೂ ಸಂತೋಷಚಿತ್ತದಿಂದ ಹೊಗಳತಕ್ಕವರು, ಭಾರತೀಯರ ಸಾಧನಕ್ಕೆ ಗುರಿತೋರತಕ್ಕವರು. ಇಬ್ಬರ ದೋಷಗಳನ್ನು ಮತ್ಸರವೂ ಇಲ್ಲದೆ, ದಾಕ್ಷಿಣ್ಯವೂ ಇಲ್ಲದೆ ಖಂಡಿಸತಕ್ಕವರು. ಈ ಸಮತಾಬುದ್ಧಿಯಿಂದ, ನಿಷ್ಪಕ್ಷಪಾತದೃಷ್ಟಿಯಿಂದ ಇವರು ವಿಶ್ವದ ಪ್ರಜೆಗಳಾಗಿ, ವಿಶ್ವದ ಹಿತವನ್ನೇ ಚಿಂತಿಸತಕ್ಕವರಾಗಿ, ಎಲ್ಲದರಲ್ಲಿಯೂ ವಿಶ್ವ ಭಾವನೆ

---

*ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆಯ ೬ನೆಯ ಪುಸ್ತಕವಾದ 'ರವೀಂದ್ರನಾಥ ಠಾಕೂರರು' ಎಂಬ ಪುಸ್ತಕದ ಮುನ್ನುಡಿಯಿಂದ. (೧೯೩೫)

ಯುಳ್ಳವರಾಗಿದ್ದಾರೆ. ಇವರ ಅತಿ ಪ್ರಿಯವಾದ ಕಾರ್ಯವೆಂದರೆ ಇವರು ಶಾಂತಿ ನಿಕೇತನದಲ್ಲಿ ಸ್ಥಾಪಿಸಿರುವ ವಿಶ್ವಭಾರತಿ ಎಂಬ ವಿಶ್ವವಿದ್ಯಾನಿಲಯ. ವಿಶ್ವ, ಭಾರತಿ, ಶಾಂತಿ—ಈ ಮೂರು ಮಾತುಗಳು ಇವರ ಬಾಳಿಕೆಯ ರಹಸ್ಯ. ಶಾಂತಿಯಲ್ಲಿ, ಸರಸ್ವತಿಯಿಂದ ಜ್ಞಾನವನ್ನು ಪಡೆದು, ವಿದ್ಯೆ ಬುದ್ಧಿಗಳನ್ನು ಶುದ್ಧಿಮಾಡಿ, ಸಮಾಜಗಳನ್ನೆತ್ತಿ, ಲೋಕವನ್ನೆಲ್ಲಾ ಅಣ್ಣತಮ್ಮಂದಿರಂತೆ ಒಂದೂಗೂಡಿಸಿ ಧರ್ಮಜೀವನದಲ್ಲಿ, ಕಲೋಪಾಸನೆಯಲ್ಲಿ, ಸಾತ್ತ್ವಿಕ ಸ್ಪರ್ಧೆಯಲ್ಲಿ, ಪ್ರತಿಯೊಬ್ಬ ಮಾನವನೂ ತನ್ನ ಆತ್ಮವನ್ನು ಪರಿಪೂರ್ಣಗೊಳಿಸಿ ಆನಂದಪಡಬೇಕೆಂಬುದೇ ಇವರ ಬೋಧನೆ—ನಡೆದು ತೋರಿಸಿಕೊಟ್ಟ ಸಂದೇಶ.

ಹೋರಾಟ ಚೀರಾಟಗಳಿಂದಲ್ಲ, ಇಂತಹ ಹಿರಿಯರನ್ನು ಹೆತ್ತುದರಿಂದಲೇ ಭರತಮಾತೆಯು ಹೆಸರು ಮತ್ತೆ ಜಗದ್ವ್ಯಾಪಿಯಾಗುತ್ತಿದೆ; ಜಗದ್ವಂದ್ಯವಾಗುತ್ತಿದೆ. "ಸಹ ನಾವವತು; ಸಹ ನೌ ಭುನಕ್ತು; ಸಹವೀರ್ಯಂ ಕರವಾವಹೈ; ತೇಜಸ್ವಿನಾವಧೀತಮಸ್ತು; ಮಾ ವಿದ್ವಿಷಾವಹೈ—ಓಂ ಶಾಂತಿ ಶ್ಶಾಂತಿ ಶ್ಶಾಂತಿಃ" ಎಂಬ ಪ್ರಾರ್ಥನೆಗೆ ಮತ್ತೆ ಸಾರ್ಥಕತೆಯೂ ಜೀವಕಳೆಯೂ ಕೂಡುತ್ತಿವೆ....

....ಅವರಂತಹ ಮಹಾತ್ಮರು ಭಾರತ ಭೂಮಿಗೆ ಸದಾ ನಾಯಕರಾಗಿ ಬರುತ್ತಿರಲಿ.

ಕನ್ನಡದ ತೇರು*

ಶ್ರೀಮಾನ್ ಪುಟ್ಟಪ್ಪನವರ ಕವನಗಳನ್ನು ಓದಿ ಆನಂದಪಡದ ಕನ್ನಡಿಗನಿರಲಾರನು. ಅವರ 'ಕಿಂದರಿಜೋಗಿ'ಯನ್ನು ಹಾಡದ ಚಿಕ್ಕ ಮಕ್ಕಳಿಲ್ಲ. 'ತಾನಾಜಿ'ಯ ವೀರರಸಕ್ಕೆ ಕಾವೇರದ ಎಳೆಯರಿಲ್ಲ; ಮಲೆನಾಡಿನ ದಿವ್ಯ ಸೌಂದರ್ಯವನ್ನೂ ಶಾಂತಗಾಂಭೀರ್ಯವನ್ನೂ ಎದೆಗೊಳ್ಳದ ಹಿರಿಯರಿಲ್ಲ.

* * *

---

*'ಕನ್ನಡ ಕಾವ್ಯಮಾಲೆ'ಯ ಮೊದಲನೆಯ ಪುಸ್ತಕವಾದ 'ಕಿಂದರಿಜೋಗಿ ಮತ್ತು ಇತರ ಕಥನ ಕವನಗಳಿ'ಗೆ ಬರೆದ ಮುನ್ನುಡಿಯಿಂದ. (೧೯೩೬)

ಈಗ, ಹೊಸದಾಗಿ, ಶಿವಮೊಗ್ಗೆಯಲ್ಲಿ† "ಕನ್ನಡ ಕಾವ್ಯಮಾಲೆ"ಯ ಪ್ರಕಟನೆಯ ಉದ್ದೇಶದಿಂದ "ಕಾವ್ಯಾಲಯ" ಎಂಬ ಬೇರೊಂದು ಸಂಸ್ಥೆ ಏರ್ಪಟ್ಟಿದೆ. ಕನ್ನಡಿಗರಿಗೆ ಸುಲಭಕ್ರಯದಲ್ಲಿ ಒಳ್ಳೆಯ ಗ್ರಂಥಗಳನ್ನು ಒದಗಿಸುವುದು ಇದರ ಗುರಿ. ಪುಟ್ಟಪ್ಪನವರ ಗ್ರಂಥಗಳೇ ಇದರ ಮೊದಲನೆಯ ಆಧಾರ. ಈ "ಕಾವ್ಯಾಲಯ"ದ ಮುದ್ರಣಗಳು ಕನ್ನಡಿಗರಿಗೆ ಇಷ್ಟವಾಗುವುವೆಂದೂ, ಅವರು ಅವಕ್ಕೆ ಉತ್ತೇಜನ ಕೊಡುವರೆಂದೂ ನಾನು ನಂಬಿದ್ದೇನೆ.

ಕನ್ನಡಿಗರು ಒಂದು ಸಂಗತಿಯನ್ನು ಮರೆಯಬಾರದೆಂದು ನನ್ನ ಬಿನ್ನಹ. ಈ ಕ್ರಾಂತಿಯುಗದಲ್ಲಿ ಕನ್ನಡ ಕೊಚ್ಚಿಹೋಗುವ ಸಂಭವವುಂಟು. ನಮ್ಮ ಹಿರಿಯರು ಕನ್ನಡ ದೇವಿಯನ್ನು ತೇರಿನಲ್ಲಿ ಬಿಜಯಮಾಡಿಸಿ ಭಕ್ತಿ ಕಾಣಿಕೆಗಳನ್ನು ಸಲ್ಲಿಸಿದರು. ಈಗ ರಥ ಇಕ್ಕಟ್ಟಿನಲ್ಲಿ ಬಂದು ನಿಂತಿದೆ; ಮುಂದಕ್ಕೆ ಎಳೆಯುವುವೇ, ಇದ್ದಲ್ಲಿ ಬಿಟ್ಟು ತೆರಳುವುವೇ—ಈ ಪ್ರಶ್ನೆ ಕನ್ನಡಿಗರಲ್ಲಿ ಮಿಡಿಯುತ್ತಿದೆ. ಪೂರ್ವಕಾಲದ ರಾಜರು, ಮಠಾಧಿಪತಿಗಳು, ಶ್ರೀಮಂತರು ತಾಯಿಗೆ ಹೊಂದೊಡಿಗೆಯನ್ನು ತೊಡಿಸಿ, ಹೊಮ್ಮುಡಿಯನ್ನು ತಲೆಯಲ್ಲಿಟ್ಟು, ಕೈಗೆ ಹೊಂಗೋಲನ್ನು ಕೊಟ್ಟರು. ಈಗ ಐವತ್ತು ವರ್ಷಗಳಿಂದ ಇಂಗ್ಲಿಷ್ ವಿದ್ಯಾಭ್ಯಾಸದ ಫಲವಾಗಿ ಹೊಸ ಚೈತನ್ಯ, ಹೊಸ ದೇಶಾಭಿಮಾನ, ಭಾಷಾಭಿಮಾನಗಳು ಚಿಗುತು ಹೊಸ ಜೀವನಕ್ಕೆ ತಕ್ಕಂತೆ ಜನತೆಗೆಲ್ಲಾ ತಕ್ಕ ಸಾಹಿತ್ಯ ಸೃಷ್ಟಿ ನಡೆಯುತ್ತಿದೆ. ಆದರೆ ಕನ್ನಡಿಗರಿಗೆ ಒಂದು ಕಟ್ಟಿಲ್ಲ. ಒಂದು ದೃಷ್ಟಿಯಿಲ್ಲ. ಕನ್ನಡಿಗರು ಒಡೆದಿದ್ದಾರೆ; ಒಡಕು ಬೆಳೆಯುತ್ತಲೂ ಇದೆ: ವಿದ್ಯೆಯಲ್ಲಿ, ಜ್ಞಾನಪ್ರಚಾರದಲ್ಲಿ, ಸಾಹಿತ್ಯದಲ್ಲಿ, ಕನ್ನಡ ದೇಶದ ಎಲ್ಲಾ ಕಾರ್ಯಸ್ಥಾನಗಳಲ್ಲಿ ಕನ್ನಡಕ್ಕಿರಬೇಕಾದ ಪ್ರಧಾನ ಸ್ಥಾನವನ್ನು ಕೊಡಬೇಕೆಂದು ಹೋರಾಡುವವರು ಕೆಲವು ಮಂದಿ ಮಾತ್ರ. ಕನ್ನಡನಾಡಿಗೆ ಕನ್ನಡವನ್ನು ಬಿಟ್ಟು ಗತಿಯಿಲ್ಲ; ಕನ್ನಡ ನುಡಿಯನ್ನು ಬಿಟ್ಟು ಕನ್ನಡನಾಡು ಮತ್ತೆ ರೂಪುಗೊಳ್ಳುವಂತಿಲ್ಲ ಎಂಬ ಜೀವಾಳವನ್ನು ಜನವಿನ್ನೂ ಚೆನ್ನಾಗಿ ಮನದಟ್ಟುಮಾಡಿಕೊಂಡಿಲ್ಲ. ಇಂತಹ ದುರ್ದೆಸೆಯಲ್ಲಿ ಕನ್ನಡಿಗರಿಗಾಗಿ ಕನ್ನಡದಲ್ಲಿ ಆಕರ್ಷಣೆ

† "ಕಾವ್ಯಾಲಯ"ಸಂಸ್ಥೆ ಈಗ ಹಲವು ವರ್ಷಗಳಿಂದ ಮೈಸೂರು ನಗರದಲ್ಲಿ ಕೆಲಸ ಮಾಡುತ್ತಿರುವುದು ಕನ್ನಡಿಗರಿಗೆ ತಿಳಿದ ವಿಷಯ—ಸಂ.

ಮಾಡುವ ಪುಸ್ತಕಗಳನ್ನು ಬರೆಯುವವರೂ, ಅಚ್ಚಿಟ್ಟು ಒದಗಿಸುವವರೂ ಕನ್ನಡಿಗರ ಹಿತ ಚಿಂತಕರು. ಅವರಿಗೆ ಕನ್ನಡಿಗರು ಬೆಂಬಲವಾಗಿ ನಿಲ್ಲಬೇಕು.

........"ಕಾವ್ಯಾಲಯ"ದ ಸೇವಾಶಕ್ತಿಯೂ ಕನ್ನಡಿಗರ ಕನ್ನಡದ ಭಕ್ತಿಯೂ ವರ್ಧಿಸಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

ಇಬ್ಸನ್*

"ಸ್ವತಂತ್ರ ಕಾವ್ಯವನ್ನು ಬರೆಯಬಲ್ಲ ಮಹನೀಯರು ಎಲ್ಲಿಯೋ ಕೆಲವರು ; ಮಿಕ್ಕವರಿಗೆ ಭಾಷಾಂತರವನ್ನು ಮಾಡಿ ಉತ್ತಮ ಸಾಹಿತ್ಯವನ್ನು ತಮ್ಮ ದೇಶದಲ್ಲಿ ನಾಟ ಹಾಕುವುದಕ್ಕಿಂತ ಬೇರೆ ಘನವಾದ ಕಾರ್ಯ ಯಾವುದು ?" ಎಂಬುದಾಗಿ ಕಾರ್ಲೈಲ್ ಒಂದುಕಡೆ ಹೇಳಿರುತ್ತಾನೆ. ಕವಿತಿಲಕರ ಪುತ್ರರಾದ ಶ್ರೀವರ್ಮಾ ಎಸ್. ಜಿ. ಶಾಸ್ತ್ರಿಗಳು ಈ ತತ್ವವನ್ನು ಅನುಸರಿಸಿ ತಮ್ಮ ಮಿತ್ರರಿಂದ ಭಾಷಾಂತರವನ್ನು ಮಾಡಿಸಿ, ತಾವೂ ಅದೇ ಕಾರ್ಯದಲ್ಲಿ ತೊಡಗಿ,"ಸಾಕ್ರಟೀಸನ ಮರಣ" ಎಂಬ ಗ್ರಂಥವನ್ನು ಪ್ಲೇಟೊವಿನ ಸಂವಾದಗಳನ್ನು ಆಧಾರವಾಗಿ ಉಳ್ಳ ಒಂದು ನಾಟಕವನ್ನು ಹಿಡಿದೂ, "ಆರ್ಯಕ" ಎಂಬ ಈ ಗ್ರಂಥವನ್ನು ಯೂರೋಪಿನ ಆಧುನಿಕ ನಾಟಕ ಸಾಹಿತ್ಯಕ್ಕೆ ಮೂಲಪುರುಷನೆಂದು ಹೇಳಬಹುದಾದ ಇಬ್ಸನ್ ಕವಿಯ "ಹೆಲ್ಗೆಲಂಡಿನ ವೀರರು" ಎಂಬ ನಾಟಕವನ್ನು ಹಿಡಿದೂ ಪ್ರವರ್ತಿಸಿರುತ್ತಾರೆ.

ಹೆನ್ರಿಕ್ ಇಬ್ಸನ್ (೧೮೨೮-೧೯೦೬) ಎಂಬಾತನು ನಾರ್ವೆ ದೇಶದ ಸುಪ್ರಸಿದ್ಧನಾದ ಕವಿ ಮತ್ತು ನಾಟಕಕಾರ. ಬಡತನದಲ್ಲಿ ಬೆಳೆದು, ವಿದ್ಯಾಭ್ಯಾಸ ಮಾಡಿ ತನ್ನ ಹತ್ತೊಂಭತ್ತನೆಯ ವರ್ಷದಲ್ಲಿ ಈತನು ಗ್ರಂಥರಚನೆಗೆ

---

* "ಸೂತ್ರದ ಬೊಂಬೆ" (ಹೆನ್ರಿಕ್ ಇಬ್ಸನ್ನಿನ "Doll's House" ಎಂಬ ನಾಟಕದ ಕನ್ನಡ ಅನುವಾದ. ಶ್ರೀವರ್ಮಾ ಎಸ್. ಜಿ. ಶಾಸ್ತ್ರಿಗಳಿಂದ ರಚಿತವಾಗಿ ೧೯೩೬ ರಲ್ಲಿ ಪ್ರಕಟವಾದದ್ದು) ಗೆ ಬರೆದ ಮುನ್ನುಡಿ.

ಆರಂಭಿಸಿದನು. ಬಳಿಕ ಒಂದು ನಾಟಕ ಸಂಘಕ್ಕೆ ಸೇರಿ, ಅವರಿಗೆ ಆಡುವುದಕ್ಕೆ ನಾಟಕಗಳನ್ನು ಬರೆಯುತ್ತ, ೧೮೫೮ರಲ್ಲಿ "ಹೆಲ್ಗೆಲಂಡಿನ ವೀರರು" ಎಂಬ ಐತಿಹಾಸಿಕ ನಾಟಕದಿಂದ ಮೊದಲು ಪ್ರಸಿದ್ಧಿಗೆ ಬಂದನು. ಈ ನಾಟಕದಲ್ಲಿ ತಮ್ಮ ಪೂರ್ವಿಕರ ಶ್ರೇಷ್ಠವಾದ ಇತಿಹಾಸಗಳ ಸಮುದ್ರಯಾನದ ಜೀವನ ಚಿತ್ರವನ್ನೂ, ಕ್ರೌರ್ಯ ಶೌರ್ಯಗಳನ್ನೂ, ಮಾನಾಭಿಮಾನಗಳನ್ನೂ ಪ್ರತಿ ಬಿಂಬಿಸಿರುತ್ತಾನೆ. ಇದರ ರಚನಾ ಕೌಶಲ್ಯವೂ, ಪಾತ್ರನಿರೂಪಣವೂ, ರಸೋದ್ವೇಗವೂ ಪ್ರಶಂಸಾರ್ಹವಾಗಿವೆ. ಇಬ್ಸನ್ ಕವಿಯ ಐತಿಹಾಸಿಕ, ರಂಜನ ಮತ್ತು ಕವನ ನಾಟಕಗಳಲ್ಲಿ ಇದರ ಜೊತೆಗೆ "ಬ್ರಾಂಡ್" (೧೮೬೬), "ಪಿಯರ್ ಗ್ಯೆಂಟ್" (೧೮೬೭) "ಎಂಪರರ್ ಮತ್ತು ಗ್ಯಾಲಿಲಿಯನ್" (೧೮೭೩) ಎಂಬುವೂ ಸೇರುತ್ತವೆ. ಇವುಗಳಲ್ಲೆಲ್ಲಾ ಪುರಾತನ ಚರಿತ್ರೆ, ವೀರಕಥೆ, ಮನೋಹರವಾದ ಕವನ, ಯೋಗ್ಯವಾದ ಸನ್ನಿವೇಶ, ತೀಕ್ಷ್ಣವಾದ ಆನಂದ, ಶೋಕ, ಸಾಹಸಗಳ ಉಲ್ಲಾಸ; ಸ್ಥಿರಧ್ಯೇಯಗಳುಳ್ಳ ಪ್ರಪಂಚ—ಇವು ಸುಂದರವಾದ ಛಂದಸ್ಸಿನಲ್ಲಿ ಪ್ರದರ್ಶಿತವಾಗಿವೆ.

ಈ ತರದ ರಂಜನ ನಾಟಕಗಳಿಗಿಂತಲೂ ಹೆಚ್ಚು ಪ್ರಾಶಸ್ತ್ಯವನ್ನು ಇಬ್ಸನ್ ಕವಿಗೆ ತಂದುವು ಅವನ ಸಾಮಾಜಿಕ ಗದ್ಯ ನಾಟಕಗಳು. ಇಬ್ಸನ್ನಿನ ಬಡತನದ ಮತ್ತು ನಿರಾದರಣೆಯ ಕಾಲದ ಮನಃಕ್ಲೇಶವೂ, ಸಮಾಜದಲ್ಲಿದ್ದ ಅನೇಕ ನ್ಯೂನತೆಗಳ ಮತ್ತು ಪ್ರಬಲ ದೋಷಗಳ ಪೂರ್ಣಾನುಭವವೂ, ಸಮಾಜ ಸಂಸ್ಕರಣಕ್ಕಾಗಿ ನಾಟಕದ ಮೂಲಕ ಜನಜೀವನವನ್ನು ಪ್ರತಿ ಬಿಂಬಿಸಬೇಕೆಂಬ ಕರ್ತವ್ಯಜ್ಞಾನವೂ ಈ ಸಾಮಾಜಿಕ ನಾಟಕಗಳ ಪ್ರೇರಕಗಳಾಗಿವೆ. ಇಂತಹ ನಾಟಕಗಳಲ್ಲಿ ಮುಖ್ಯವಾದುವು ಯಾವುವೆಂದರೆ—ಸಮಾಜ ಸ್ತಂಭಗಳು (Pillars of Society, 1877) ಬೊಂಬೆಯ ಮನೆ (A Dolls' House, 1879) ಪ್ರೇತಗಳು (Ghosts, 1881) ಜನಗಳ ಶತ್ರು(An Enemy of the People. 1882)ರಾಜಶಿಲ್ಪಿ (The Master Builder, 1892). ಈ ನಾಟಕಗಳಲ್ಲಿ ಸೌಂದರ್ಯಸಾಕ್ಷಾತ್ಕಾರದಿಂದ ಆನಂದವುಕ್ಕಿ ಹಾಡುವ ಕವಿಗೆ ಪ್ರತಿಯಾಗಿ, ಸಮಾಜವ್ಯಕ್ತಿಗಳ ದುಷ್ಟತನ ನೀಚತನಗಳಿಂದ ಹೃದಯದಲ್ಲಿ ಜುಗುಪ್ಸೆಯೂ ಆಗ್ರಹವೂ ಕನಲಿ, ಕೆಂಡವಾಗಿ, ಮರ್ಮೋದ್ಘಾಟನೆಯಿಂದ ಕೆಟ್ಟುದನ್ನು ನಿರ್ಮೂಲ ಮಾಡಿ,

ಒಳ್ಳೆಯದನ್ನು ಜನಗಳ ಮನಸ್ಸಿನಲ್ಲಿ ಬಿತ್ತಬೇಕೆನ್ನುವ ಸಮಾಜ ಸುಧಾರಕನ ಉಗ್ರಮೂರ್ತಿ ಕಾಣಬರುತ್ತದೆ. ಛಂದಸ್ಸಿನ ಬದಲು ಗದ್ಯ; ರಸಾತ್ಮಕ ವಾಕ್ಯಕ್ಕೆ ಬಳಕೆಯ ಮಾತು; ಎದೆಯನ್ನುಬ್ಬಿಸುವ ವಿಶಾಲ ವಾತಾವರಣದ ಸ್ಥಾನದಲ್ಲಿ ಸಂಕುಚಿತ ಪ್ರದೇಶ, ಸಂಕಟದುಬ್ಬಸ; ಅದ್ವಿತೀಯ ವೀರ ಸುಂದರ ಮೂರ್ತಿಗಳಿದ್ದ ಕಡೆ ಸಾಧಾರಣ ಜನರ, ಕ್ಷುದ್ರಪುರುಷರ ವಿಷಾದಜನಕವಾದ ಛಾಯೆಗಳು—ಇವು ಇಬ್ಸನ್ನಿನ ಎರಡನೆಯ ತರದ ರಂಗಸ್ಥಳದಲ್ಲಿ ಬಂದು ಕುಣಿಯುತ್ತವೆ.

೧೯೦೮ರಲ್ಲಿ ಇಬ್ಸನ್ನಿನ ಎಪ್ಪತ್ತನೆಯ ಹುಟ್ಟಿದ ಹಬ್ಬದ ದಿವಸ ಆತನಿಗೆ ಪ್ರಪಂಚದ ಎಲ್ಲಾ ಭಾಗದ ಸಾಹಿತಿಗಳಿಂದಲೂ ಅಭಿನಂದನಗಳೂ, ಬಹುಮಾನಗಳೂ ಬಂದು ಸುರಿದುವು. ೧೮೯೯ರಲ್ಲಿ ನಾರ್ವೆ ರಾಜಧಾನಿ ಕ್ರಿಶ್ಚಿಯಾನಿಯದ ಜನಾಂಗದ ನಾಟಕ ಮಂದಿರದ (National Theatre) ಮುಂದೆ ಕಂಚಿನ ವಿಗ್ರಹವೊಂದು ಸ್ಥಾಪಿತವಾಯಿತು. ೧೯೦೬ ರಲ್ಲಿ ಯೂರೋಪಿನ ನಾಟಕ ಪ್ರಪಂಚವನ್ನೇ ದುಃಖದಲ್ಲಿ ಮುಳುಗಿಸಿ ಇಬ್ಸನ್ನನು ದಿವಂಗತನಾದನು.

ಇಬ್ಸನ್ನಿನ ನಾಟಕಗಳನ್ನೂ ನಾಟಕ ಕವಿಗಳಲ್ಲಿ ಈತನ ಸ್ಥಾನವನ್ನೂ ಕುರಿತು ಇನ್ನೂ ಚರ್ಚೆಗಳು ನಡೆಯುತ್ತಲೇ ಇವೆ. ಕೆಲವರಿಗೆ ರಂಜನ ಕವನದಲ್ಲಿ, ಕೆಲವರಿಗೆ ರುದ್ರನಾಟಕದಲ್ಲಿ, ಕೆಲವರಿಗೆ ಪ್ರಹಸನದಲ್ಲಿ, ಕೆಲವರಿಗೆ ಸಾಮಾಜಿಕ ಚಿತ್ರದಲ್ಲಿ, ಕೆಲವರಿಗೆ ನೀತಿಧ್ಯೇಯಗಳಲ್ಲಿ, ಕೆಲವರಿಗೆ ಸಹಜಸೃಷ್ಟಿಯಲ್ಲಿ-ಹೀಗೆ ಒಬ್ಬೊಬ್ಬರಿಗೆ ಒಂದೊಂದು ಬಗೆ ಅಭಿರುಚಿ ಇರುತ್ತದೆ. ಅಹಂಕಾರ, ಬೂಟಾಟಿಕೆ, ಮುಚ್ಚಿಮಾಡಿದ ಪಾಪದ ಫಲ ಮಕ್ಕಳಲ್ಲಿ ಒಡೆದು ಮೂಡುವ ರೀತಿ, ಹೆಂಗಸರು ವ್ಯಕ್ತಿ ಸ್ವಾತಂತ್ರ್ಯವಿಲ್ಲದೆ ನಿರ್ಬಂಧ ಜೀವನದಲ್ಲಿ ಸಿಕ್ಕಿ ಬೊಂಬೆಗಳಾಗಿರುವುದರ ಪರಿಣಾಮ: ಧರ್ಮ ಮಾಡುವುದಕ್ಕೆ ಹೋದರೆ ಕರ್ಮ ಕಟ್ಟಿಕೊಳ್ಳುವುದು—ಜನಗಳ ಸ್ವಾರ್ಥಪರತೆಯಿಂದ; ಪೂರ್ವಕಾಲದ ಸಂಸ್ಕೃತಿಗೂ ಈ ಕಾಲದ ಸಂಸ್ಕೃತಿಗೂ ಉಂಟಾಗುವ ಸ್ಪರ್ಧೆ—ಇವೇ ಮುಂತಾದ ಭಾವಚಿತ್ರಗಳು ಇಬ್ಸನ್ನಿನ ನಾಟಕಗಳಲ್ಲಿ ತುಂಬಿವೆ. ನಾನು "ಬೋಧಕನಲ್ಲ; ಸಮಾಜದ ರೋಗಕ್ಕೆ ಚಿಕಿತ್ಸೆಯನ್ನು ಮಾಡಲಾರೆ, ಆದರೆ ಅವುಗಳನ್ನು ಪರಿಶೀಲಿಸಿ ರೋಗದ ಸ್ವಭಾವವೆಂತಹುದು ಎಂದು ಕಂಡುಹಿಡಿಯುವುದಕ್ಕೆ

ಪ್ರಯತ್ನಪಟ್ಟಿದ್ದೇನೆ” ಎಂದು ಇಬ್ಸನ್ ಹೇಳಿದ್ದಾನೆ. ಕಥಾಸಂವಿಧಾನದಲ್ಲಿಯೂ, ಸ್ವಾಭಾವಿಕವಾದ ಸಾರವತ್ತಾದ ಸಂವಾದದಲ್ಲಿಯೂ, ವಿಮರ್ಶನಬುದ್ಧಿಯನ್ನು ಹುಟ್ಟಿಸುವುದರಲ್ಲಿಯೂ ಈತನ ನಾಟಕಗಳು ಶ್ಲಾಘ್ಯವಾಗಿವೆ ಎಂದು ಎಲ್ಲರೂ ಒಪ್ಪುತ್ತಾರೆ. ಗ್ರೀಕರು ಮೂವರು, ಷೇಕ್ಸ್‌ಪಿಯರ್, ಕಾಳಿದಾಸ—ಇವರ ಮಟ್ಟಕ್ಕೆ ಇಬ್ಸನ್ ಏರಬಲ್ಲನೇ ಎಂಬುದು ಸಂಶಯ ವಿಷಯ. ಅದು ಹೇಗಾದರೂ ಇರಲಿ; ನಾಟಕ ಕಲೆ ಯೂರೋಪಿನಲ್ಲಿ ಕ್ಷೀಣದೆಶೆಗೆ ಬಂದಿದ್ದಾಗ ಅದನ್ನು ತಲೆಯೆತ್ತುವಂತೆ ಮಾಡಿ, ಈಗಿನ ನಾಟಕಕಾರರಿಗೆ ಮಾರ್ಗದರ್ಶಕನಾಗಿ, ಸಮಾಜ ಸುಧಾರಣೆಯ ಕಡೆಗೆ ಆಲೋಚನಾಪರರ ಬುದ್ಧಿಯನ್ನು ಸೆಳೆದ ಕೀರ್ತಿ ಇಬ್ಸನ್ನನಿಗೆ ಶಾಶ್ವತವಾಗಿ ಸಲ್ಲತಕ್ಕದು.

ಇಂತಹ ಉದ್ದಾಮ ಕವಿಯ ಪರಿಚಯವನ್ನು ಕನ್ನಡಿಗರಿಗೆ ಮಾಡಿಕೊಟ್ಟ ಶ್ರೀನಿವಾಸ ಶಾಸ್ತ್ರಿಗಳಿಗೆ ನಾವೆಲ್ಲರೂ ಋಣಿಗಳು. ಇಬ್ಸನ್ ಕವಿಯ ಉತ್ತಮ ನಾಟಕಗಳೆಲ್ಲವನ್ನೂ ಇವರು ನಮಗೆ ಭಾಷಾಂತರಿಸಿಕೊಡಬೇಕೆಂದು ನಾವು ಅವರನ್ನು ಪ್ರಾರ್ಥಿಸುವುದಕ್ಕೆ ಅವರು ಈ ಒಳ್ಳೆಯ ಕೃತಿಯಿಂದ ನಮಗೆ ಧೈರ್ಯವನ್ನು ಕೊಟ್ಟಿದ್ದಾರೆ. ಅಲ್ಲೊಂದು ಗ್ರಂಥ, ಇಲ್ಲೊಂದು ಗ್ರಂಥವನ್ನು ಪರಿವರ್ತಿಸುವುದಕ್ಕಿಂತಲೂ, ಅಥವಾ ಒಂದೇ ಗ್ರಂಥಕ್ಕೆ ಅನೇಕರು ಕೈಹಾಕುವುದಕ್ಕಿಂತಲೂ, ನಮ್ಮ ಗ್ರಂಥಕಾರರು ಯಾವನಾದರೂ ಒಬ್ಬ ದೊಡ್ಡ ಕವಿಯನ್ನು ಆಯ್ದು, ಆತನ ಗ್ರಂಥಮಾಲೆಯಲ್ಲಿ ಪಾಂಡಿತ್ಯವನ್ನು ಸಂಪಾದಿಸಿ, ತಮ್ಮ ಜೀವಮಾನವನ್ನೇ ಆತನಿಗೆ ಧಾರೆಯೆರೆದು, ಆತನ ಗ್ರಂಥಗಳನ್ನೆಲ್ಲಾ ಕನ್ನಡಿಗರಿಗೆ ಅರ್ಪಿಸುತ್ತ ಬಂದರೆ ಎಷ್ಟೋ ಉಪಕಾರವಾದೀತು! ಜೊವೆಟ್ ಪ್ಲೇಟೋವಿಗೆ ಹೀಗೆ ತನ್ನ ಜೀವಮಾನವನ್ನು ಅರ್ಪಣ ಮಾಡಿದನು. ಕೀರ್ತಿಶೇಷರಾದ ವೆಂಕಟಾಚಾರ್ಯರು ಬಂಕಿಂಚಂದ್ರನಿಗೆ ಹೀಗೆ ತಮ್ಮ ಸರ್ವಶಕ್ತಿಯನ್ನೂ ವಿನಿಯೋಗಿಸಿದರು. ಭಾಷಾಂತರ ಕೀಳು ಕೆಲಸವಲ್ಲ; ಸುಲಭವಾದ ಕೆಲಸವೂ ಅಲ್ಲ; ನಿರರ್ಥಕವಾದ ಕೆಲಸವೂ ಅಲ್ಲ. ಒಟ್ಟಿನ ಮೇಲೆ ಕನ್ನಡ ಸಾಹಿತ್ಯವೆಲ್ಲಾ ಸಂಸ್ಕೃತ ಸಾಹಿತ್ಯದ ಭಾಷಾಂತರವಲ್ಲವೆ ? ಆದುದರಿಂದಲೇ ಭಾಷಾಂತರಕ್ಕೆ ತಮ್ಮ ಬಾಳನ್ನು ಮುಡಿಪುಕಟ್ಟಿದವರೂ ಕೃತಾರ್ಥರಾದ “ದಾಸರೇ” ಎಂದು ನಂಬಿ ಆರಂಭದಲ್ಲಿ ಹೇಳಿರುವ ವಾಕ್ಯವನ್ನು ಕಾರ್ಲೈಲ್ ನುಡಿದದ್ದು.

ಸಂಸ್ಕೃತ ನಾಟಕಗಳು*

೧

ನಾಟಕಪ್ರೇಮಿಗಳು ಸಾಧಾರಣವಾಗಿ ಪ್ರಪಂಚದ ಮೂರು ಮುಖ್ಯ ನಾಟಕ ಸಾಹಿತ್ಯಗಳನ್ನು ನೋಡಬೇಕು. ಅವು ಯಾವುವೆಂದರೆ—ಸಂಸ್ಕೃತ, ಗ್ರೀಕ್ ಮತ್ತು ಇಂಗ್ಲಿಷ್. ಈ ಗ್ರಂಥದಲ್ಲಿ ಸಂಸ್ಕೃತ ನಾಟಕದ ಉತ್ಪತ್ತಿ ಮತ್ತು ಚರಿತ್ರೆಗಳನ್ನೂ ನಾಟಕ ಕವಿಗಳ ಕಾಲ ಜೀವನಚರಿತೆ ಮತ್ತು ವಿಮರ್ಶೆಗಳನ್ನೂ ಸಾಧ್ಯವಾದಷ್ಟು ಸಂಕ್ಷೇಪವಾಗಿ ತಿಳಿಸಿದೆ. ಮುಂದೆ, ಸಿದ್ಧ ವಾಗಿರುವ ನನ್ನ 'ಗ್ರೀಕ್ ನಾಟಕವನ್ನು' ಪ್ರಕಾಶಪಡಿಸುತ್ತದೆ. ಅದನ್ನು ಹಿಂಬಾಲಿಸಿ 'ಇಂಗ್ಲಿಷ್ ನಾಟಕ'ದ ಮೇಲೆ ಒಂದು ಗ್ರಂಥವನ್ನು ಹೊರಡಿ ಸುವ ಯೋಚನೆ ಇದೆ. ಈ ಮೂರು ಗ್ರಂಥಗಳಿಂದ ಕನ್ನಡ ಜನರು ನಾಟ ಕದ ಸ್ವರೂಪ ವಿಸ್ತಾರ ಶಕ್ಯತೆಗಳು ಏನೆಂಬುದನ್ನು ತಾರತಮ್ಯಜ್ಞಾನದಿಂದ ತಿಳಿದುಕೊಳ್ಳಲೂ ನಾಟಕೀಯತೆಯ ನಿಜಸ್ವಭಾವವನ್ನು ಕಂಡುಕೊಂಡು ಆನಂದಿಸಲೂ ನೆರವಾದೀತೆಂದು ಆಸೆಪಡಬಹುದಾಗಿದೆ.

ಗ್ರೀಕ್ ನಾಟಕ ಕಾಲಕ್ರಮದಲ್ಲಿ ಮೊದಲು ಬರುತ್ತದೆ. ಕ್ರಿಸ್ತಪೂರ್ವ ೫ನೆಯ ಶತಮಾನದಲ್ಲಿ, ಪಾರಸಿಕರ ಸೋಲಿನಿಂದ ಜೀವಕಳೆಯೇರಿದ ಅತ್ಯ ಭ್ಯುದಯ ಕಾಲದಲ್ಲಿ, ಪೆರಿಕ್ಲೀಸಿನ ಹೊನ್ನಿನ ಯುಗದ ರಾಜ್ಯಭಾರದಲ್ಲಿ, ಅಥೆನ್ಸಿನ ದಿವ್ಯನಗರಿಯಲ್ಲಿ ಹೊಮ್ಮಿ ಅರಳಿ, ಹಿರಿಯರಾದ ಮೂವರ ಪ್ರತಿಭೆ ಯಿಂದ ಪ್ರಕಾಶಿಸಿ, ಈ ನಾಟಕಪುಷ್ಪ ಬಹುಬೇಗ ಉದಿರಿಹೋಯಿತು. ಈಸ್ಖಿಲಸ್, ಸಾಫೋಕ್ಲೀಸ್, ಯೂರಿಪೀಡೀಸ್—ಇವರು ಗ್ರೀಕರುದ್ರನಾಟಕ ಗಳ (Tragedy) ರತ್ನತ್ರಯಗಳು. ಗ್ರೀಕರ ಯುದ್ಧವಿಜಯವನ್ನು ಸಾರುವ ಈಸ್ಖಿಲಸಿನ 'ಪಾರಸಿಕರು ಎಂಬ ನಾಟಕ ಕನ್ನಡದ ರಂಗಸ್ಥಲದಲ್ಲಿ ಈಗಾ ಗಲೇ ನಾಟ್ಯಮಾಡಿದೆ. ಈಸ್ಖಿಲಸಿನ ನಾಟಕಗಳು ೭, ಸಾಫೋಕ್ಲೀಸಿನವು ೭, ಯೂರಿಪೀಡೀಸಿನವು ೧೯; ಇವುಗಳ ಜೊತೆಗೆ ಪ್ರಹಸನ (Comedy)

---

* ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆಯ ೧೦ನೆಯ ಪುಸ್ತಕ ವಾದ "ಸಂಸ್ಕೃತ ನಾಟಕಗಳು" ಎಂಬ ಗ್ರಂಥಕ್ಕೆ ಬರೆದ ಮುನ್ನುಡಿ. (೧೯೩೭)

ಗಳನ್ನು ಬರೆದಿರುವ ಅರಿಸ್ಟೋಫೇನೀಸ್ ಇವನ ನಾಟಕಗಳು ೧೧—ಹೀಗೆ ಒಟ್ಟು ಉಳಿದಿರುವ ಗ್ರೀಕ್ ನಾಟಕಗಳು ೪೪. ಇವು ಗ್ರೀಕ್ ನಾಟಕದ ಕಾಯ, ಲಕ್ಷ್ಯ. ೪ನೆಯ ಶತಮಾನದ ತತ್ತ್ವಜ್ಞಾನಿಗಳ ಶಿರೋಮಣಿಗಳಾದ ಪ್ಲೇಟೋ ಮತ್ತು ಆತನ ಶಿಷ್ಯ ಅರಿಸ್ಟೋಟಲ್—ಇವರಿಬ್ಬರೂ ಈ ನಾಟಕಗಳ ಚರಿತ್ರೆ ಮತ್ತು ಗುಣಪರಿಶೀಲನೆಗಳನ್ನು ಗಮನಿಸಿದ್ದಾರೆ. ಕವಿತಾವೇಶದಿಂದಾಗುವ ಸೃಷ್ಟಿಯ ಸೌಂದರ್ಯವನ್ನು ಬಲ್ಲವನಾದರೂ ಪ್ಲೇಟೋ ತತ್ತ್ವದೃಷ್ಟಿಯ ಆವೇಶದಲ್ಲಿ ನಾಟಕ ಪ್ರಪಂಚ ಮಿಥ್ಯಾಪ್ರಪಂಚವೆಂದೂ ರಾಗದ್ವೇಷಾದಿ ಮನಸ್ಸಿನ ಚಾಂಚಲ್ಯಗಳನ್ನು ಪ್ರತಿಬಿಂಬಿಸಿ ಮನಷ್ಯನ ಚಾರಿತ್ರಶುದ್ಧಿಗೆ ಅಡ್ಡಿ ಬರುವುದರಿಂದ ಉತ್ತಮ ರಾಜ್ಯದಲ್ಲಿ ನಾಟಕಕ್ಕೂ ಕಾವ್ಯಕ್ಕೂ ಬಹಿಷ್ಕಾರ ಹಾಕಬೇಕೆಂದೂ ಅಭಿಪ್ರಾಯಪಟ್ಟಿದ್ದಾನೆ—"ಕಾವ್ಯಾಲಾಪಾಂಶ್ಚ ವರ್ಜಯೇತ್" ಎಂದು ನಮ್ಮವರು ಹೇಳಿದಂತೆ. ಈ ದೃಷ್ಟಿಯನ್ನು ಪ್ರತಿಭಟಿಸಿ, ನಾಟಕದ ಅನುಕರಣದ 'ಆಟ' ಮಿಥ್ಯೆಯ ಮತ್ತು ಮಾಯೆಯ ಮೂಲಕ ಜೀವನದ ಸತ್ಯವನ್ನು ತಿಳಿಸುವ ದಿವ್ಯಕಲೆಯೆಂದೂ, ರಾಗದ್ವೇಷ ಮುಂತಾದ ಮಾನವ ಹೃದಯದ ಪರಿವರ್ತನೆಗಳನ್ನು ಎತ್ತಿ ತೋರಿಸುವುದರಿಂದ ನೋಟಕರಲ್ಲಿ ಈ ಭಾವಗಳನ್ನು ಹೊಮ್ಮಿಸಿ, ರಸಗಳನ್ನು ಕೆರಳಿಸಿ, ವೈದ್ಯನು ಮದ್ದಿಕ್ಕಿ ಪ್ರವೃತ್ತಿಯನ್ನುಂಟುಮಾಡಿಸಿ ಕಲ್ಮಷವನ್ನು ಕಳೆಯುವಂತೆಯೇ ನಾಟಕ ಕವಿಯೂ ಚಿತ್ತಶುದ್ಧಿಯನ್ನುಂಟುಮಾಡಿ, ಜನರನ್ನು ತಮ್ಮ ಅಲ್ಪವಾದ ಸ್ವಾರ್ಥ ಪ್ರಪಂಚದಿಂದ ಹೊರಕ್ಕೆಳೆದು, ಮಹಾಪುರುಷರ ದೊಡ್ಡ ಬಾಳಿನ ಅಮೋಘವಾದ ಸುಖದುಃಖ ಪ್ರವಾಹದಲ್ಲಿ ಮಿಾಯಿಸಿ, ಆನಂದವನ್ನೂ ಅನುಕಂಪವನ್ನೂ ಸಹಾನುಭೂತಿಯನ್ನೂ ಪಾಪಭೀತಿಯನ್ನೂ ವಿಶ್ವಪ್ರೇಮವನ್ನೂ ಕಲಿಸತಕ್ಕ ತತ್ತ್ವಜ್ಞಾನಿಯೇ ಸರಿ, ಬೋಧಕನೇ ಸರಿ ಎಂದೂ ಅರಿಸ್ಟೋಟಲ್ ಕಾವ್ಯವನ್ನೂ ನಾಟಕವನ್ನೂ ಸಮರ್ಥಿಸಿದ್ದಾನೆ—ನಮ್ಮವರು "ನಾನೃಷಿಃ ಕುರುತೇ ಕಾವ್ಯಂ" ಎಂದು ಹೇಳಿರುವಂತೆ. ಗುರುವಿನ ತಕ್ಕ ಶಿಷ್ಯ! ಗ್ರೀಕ್ ನಾಟಕವಿಮರ್ಶೆಗೆ, ಯೂರೋಪಿನ ಸಾಹಿತ್ಯವಿಮರ್ಶೆಗೆ ಅಡಿಗಲ್ಲು, ಮೂಲಾಧಾರ, ಅರಿಸ್ಟೋಟಲಿನ 'ಕಾವ್ಯಮೀಮಾಂಸೆ' (*Poetics*). ಈ ಸಣ್ಣ ಗ್ರಂಥದಲ್ಲಿ ಗ್ರೀಕ್ ನಾಟಕದ ಉತ್ಪತ್ತಿ,: ಸ್ವರೂಪ,

ರುದ್ರನಾಟಕ ಮತ್ತು ಪ್ರಹಸನಗಳ ಲಕ್ಷಣ, ನಾಟಕದಲ್ಲಿ ಮೇಳ, ನಾಟ್ಯ, ಗೀತ (chorus, ಗ್ರೀಕ್ ನಾಟಕದ ವೈಶಿಷ್ಟ್ಯ)—ಇವುಗಳ ಸ್ಥಾನ, ಕಾರ್ಯ (Action, Fable or Plot), ಪಾತ್ರ ರಚನೆ (Characterization), ಶೈಲಿ, ಇತಿಹಾಸ ಕಾವ್ಯಕ್ಕೂ (Epic) ರುದ್ರನಾಟಕಕ್ಕೂ ಪರಸ್ಪರ ತಾರತಮ್ಯ—ಈ ಅಂಶಗಳನ್ನು ಬಹು ಸೂಕ್ಷ್ಮರೀತಿಯಲ್ಲಿ ಚರ್ಚಿಸಿದ್ದಾನೆ. ಆತನ ಹೇಳಿಕೆಯಂತೆ ರುದ್ರನಾಟಕ ಘನವಾದ, ಉದಾತ್ತವಾದ, ಗಂಭೀರವಾದ ಕಾರ್ಯದ ಅನುಕರಣ; ಕಥನವಲ್ಲ, ನಟನ, ಅಭಿನಯ; ಕಾರ್ಯ ಸಂಪೂರ್ಣವಾಗಿರಬೇಕು; ತಕ್ಕ ಗಾತ್ರವುಳ್ಳದ್ದಾಗಿರಬೇಕು. ಮೇಳದ ಗೀತಗಳು, ಪಾತ್ರಗಳ ಸಂವಾದಗಳು ಸುಂದರವಾದ ಶೈಲಿಯಲ್ಲಿರಬೇಕು. ಸಹಾನುಭೂತಿಯಿಂದ ಕನಿಕರವನ್ನೂ ಭಯವನ್ನೂ ಎಬ್ಬಿಸಿ, ಈ ರಸಗಳನ್ನು ಪರಿಶುದ್ಧಿಗೊಳಿಸಬೇಕು. ರುದ್ರನಾಟಕದಲ್ಲಿ ಮನುಷ್ಯಸ್ವಭಾವದ ಆಳವನ್ನು ನೋಡಬಹುದು; ರುದ್ರನಾಯಕನು ಮಹಾ ಪುರುಷನಾಗಿ ಅನೇಕ ಸದ್ಗುಣಗಳಿಂದ ನಮ್ಮ ಮೆಚ್ಚುಗೆಯನ್ನೂ ಸಹಾನುಭೂತಿಯನ್ನೂ ಪಡೆದವನಾಗಿ, ಯಾವುದೋ ಒಂದು ದೋಷದಿಂದ, ಲೋಪದಿಂದ, ಮದದಿಂದ, ಕ್ರೂರವಿಧಿಯಿಂದ ಕಷ್ಟಕ್ಕೊಳಗಾಗಿ ಸತ್ತುಹೋಗುವನು. ಆತನ ಗತಿಯನ್ನು ನೋಡಿ ಭಯವೂ, ಪೂಜ್ಯತೆಯನ್ನು ನೋಡಿ "ಅಯ್ಯೋ ಪಾಪ" ಎಂಬ ಮರುಕವೂ ಉಂಟಾಗುವುವು.

ಅಥೆನ್ಸ್ ರಾಜ್ಯ ನಾಶವಾದ ಮೇಲೆ ಅಲೆಕ್ಸಾಂಡರ್ ಮಹಾವೀರನ ವಿಜಯಗಳ ಪರಿಣಾಮವಾಗಿ, ಅಲೆಕ್ಸಾಂಡ್ರಿಯ ಪಟ್ಟಣ ಗ್ರೀಕ್ ನಾಗರಿಕತೆಯ ಕೇಂದ್ರವಾಯಿತು (ಕ್ರಿ. ಪೂ. ೩ನೆಯ ಶತಮಾನದಿಂದ). ಅಲ್ಲಿ ಅನೇಕ ವಿದ್ವಾಂಸರು ಸೇರಿ ಸಾಹಿತ್ಯ ಮಥನಮಾಡಿ ವ್ಯಾಕರಣ, ಛಂದಸ್ಸು, ಅಲಂಕಾರ ಮುಂತಾದ ಶಾಸ್ತ್ರಗಳನ್ನೂ ಹೊಸ ಸಾಹಿತ್ಯರೂಪಗಳನ್ನೂ ಬೆಳಸಿದರು. ಆದರೆ ಇದು ಒಟ್ಟಿನ ಮೇಲೆ ಲಕ್ಷಣಯುಗ, ಸೃಷ್ಟಿಯುಗವಲ್ಲ. ಆಗ ಆರಿಸ್ಟಾಟಲಿನ ಉದಾತ್ತ ತತ್ತ್ವಗಳು ಕಣ್ಮರೆಯಾಗಿ, ಪಾಂಡಿತ್ಯದ ಕೂದಲು ಸೀಳಿಕೆ ಬಲವಾಗಿ, ಗ್ರೀಕ್ ಸಾಹಿತ್ಯ ಸೂರ್ಯ ಅತಿಚರ್ಚೆಯ ಮಂಜಿನ ಮಬ್ಬಿನಲ್ಲಿ ಮುಳುಗಿಹೋಯಿತು.

ಅಂದರೆ ಸಂಜೆಗೆಂಪಿನ ಬೆಳಕು ಇಷ್ಟುಹೊತ್ತಿಗೆ ಸಾಮ್ರಾಜ್ಯವನ್ನು ಕಟ್ಟುತ್ತಿದ್ದ ರೋಮ್ ನಗರಕ್ಕೆ ಹಬ್ಬಿತು, ಗೆದ್ದ ರೋಮನ್ ಜನಕ್ಕೆ ಸೋತ

ಗ್ರೀಕ್ ಜನರು ಗುರುಗಳಾದರು. ತತ್ತ್ವ ಕಲೆ ಸಾಹಿತ್ಯ ನಾಗರಿಕತೆ ಎಲ್ಲದರಲ್ಲಿಯೂ ಗ್ರೀಕರ ಪಡಿಯಚ್ಚಾದರು ರೋಮನರು. ಗ್ರೀಕ್ ರುದ್ರನಾಟಕ ಮತ್ತು ಪ್ರಹಸನಗಳನ್ನು ಭಾಷಾಂತರಮಾಡಿ, ರೂಪಾಂತರಮಾಡಿ, ಸಂಕಲಿಸಿ, ಅನುಕರಿಸಿ, ಲ್ಯಾಟಿನ್ ನಾಟಕ ತೃಪ್ತಿಹೊಂದಿತು. (ಕ್ರಿ. ಪೂ. ೨ನೆಯ ಶತಮಾನ—ಕ್ರಿ. ಶ. ೧ನೆಯ ಶತಮಾನ). ಈ ಲ್ಯಾಟಿನ್ ನಾಟಕ ಸತ್ತು ಮತ್ತೆ ೧೬ನೆಯ ಶತಮಾನದ ಯೂರೋಪಿನ ಪುನರುಜ್ಜೀವನದಲ್ಲಿ ಮಾರ್ಗದರ್ಶಿಯಾಯಿತು.

ಅಲೆಕ್ಸಾಂಡರಿನ ವಿಜಯಯಾತ್ರೆ ಪೂರ್ವಕ್ಕೂ ವ್ಯಾಪಿಸಿತ್ತು; ಪಾರಸಿಕರನ್ನು ಸೋಲಿಸಿ, ಭಾರತಭೂಮಿಗೆ ಅಡಿಯಿಟ್ಟು, ಸಿಂಧು ಪ್ರಾಂತವನ್ನು ವಶಪಡಿಸಿಕೊಂಡಿತು—ಕ್ಷಣಕಾಲಮಾತ್ರ. ಆದರೆ ಅದರ ಪರಿಣಾಮವಾಗಿ ಗ್ರೀಕರು (‘ಯವನ’ರೆಂದು ನಮ್ಮಲ್ಲಿ ಪ್ರಸಿದ್ಧ) ವಾಯುವ್ಯ ಪ್ರಾಂತದಲ್ಲಿ, ಉಜ್ಜಯಿನಿಯವರೆಗೆ ಮತ್ತೆ ರಾಜ್ಯಕಟ್ಟಿ, ಸುಮಾರು ಮೂರು ಶತಮಾನಗಳು ಆಳಿದರು. ಯವನಾಚಾರ್ಯರ ಪರಿಚಯ ನಮಗೂ ತಕ್ಕಮಟ್ಟಿಗೆ ಆದ ಹಾಗಿದೆ. ಈ ಕಾಲದಲ್ಲಿ ‘ಹೆಲೆನಿಸಮ್’ ಎಂಬ ಗ್ರೀಕ್ ಕಲೆ ಸಾಹಿತ್ಯ ತತ್ತ್ವ ಶಾಸ್ತ್ರಗಳನ್ನೊಳಕೊಂಡ ನಾಗರಿಕತೆ ನಮ್ಮ ಭಾರತೀಯರ ಮೇಲೆಯೂ ಪ್ರಭಾವವನ್ನು ಬೀರಿರಬಹುದೇ? ಎಂಬ ವಿಚಾರ ಚರಿತ್ರಪರಿಶೋಧಕರಲ್ಲಿ ಹುಟ್ಟುವುದು ಸಹಜವಾಗಿದೆ. ಈ ದೃಷ್ಟಿಯಲ್ಲಿ ಸಂಸ್ಕೃತ ನಾಟಕದ ಮೇಲೆಯೂ (ಇದು ಈಗ ಸಿಕ್ಕಿರುವ ಮಟ್ಟಿಗೆ ಸುಮಾರು ಕ್ರಿಸ್ತಶಕ ೧ನೆಯ ಶತಮಾನದಿಂದ ಆರಂಭವಾಗುವುದರಿಂದ) ಗ್ರೀಕ್ ನಾಟಕದ ಪ್ರಭಾವ ಬಿದ್ದಿರಬಹುದೇ ಎಂಬ ಚರ್ಚೆಗೆ ಅವಕಾಶವುಂಟು. ಈ ವಿಷಯವನ್ನು ಈ ಗ್ರಂಥದಲ್ಲಿ ಚರ್ಚಿಸಿದೆ.

ಸಂಸ್ಕೃತ ನಾಟಕ, ೧-೬ನೆಯ ಶತಮಾನಗಳಲ್ಲಿ ಉಚ್ಛ್ರಾಯ ಸ್ಥಿತಿಯಲ್ಲಿದ್ದು ಕ್ರಮವಾಗಿ ಕ್ಷೀಣವಾಗುತ್ತ ಸುಮಾರು ೮-೧೧ನೆಯ ಶತಮಾನಗಳ ಹೊತ್ತಿಗೆ ಖಿಲವಾಗಿ ಹೋಯಿತು. ಆಮೇಲೆ ನಾಟಕಗಳನ್ನು ಪಂಡಿತರು ಬರೆಯುತ್ತಲೇ ಇದ್ದರೂ ಅದು ಕೇವಲ ಅಂಧಾನುಕರಣ, ಕೂಳೆ ಬೆಳೆ. ಗ್ರೀಕರ ಅಲೆಕ್ಸಾಂಡ್ರಿಯ ಸಾಹಿತ್ಯದಂತೆ ಲಕ್ಷಣ ಬಂಧನದ್ದು; ಚಮತ್ಕಾರ ಶಬ್ದಾಡಂಬರ ಪ್ರದರ್ಶನದ್ದು. ಸೃಷ್ಟಿಶಕ್ತರಾದ, ಪ್ರತಿಭಾಪೂರ್ಣರಾದ, ಸ್ವಲ್ಪ

ಲಕ್ಷಣದ ಸಂಪ್ರದಾಯಕ್ಕೆ ಕಟ್ಟುಬಿದ್ದರೂ ಸ್ವಾತಂತ್ರ್ಯದ ತೇಜಸ್ಸುಳ್ಳವರಾದ ಕಾಳಿದಾಸಾದಿ ನಾಟಕಕವಿಗಳ ನಾಟಕವೇ ಸಂಸ್ಕೃತದ ಉತ್ತಮ ನಾಟಕ. ಇದರಲ್ಲಿ ಎದ್ದು ಹೊಳೆಯುವುವು ಅಶ್ವಘೋಷನ ಬುದ್ಧದೇವನ' ಉಪದೇಶಗಳ ಪ್ರಚಾರ; ಭಾಸನ ವೈದಿಕಶ್ರದ್ಧೆ, ಅವನ ವೀರ್ಯ, ಸರಳತೆ, ನಾಟಕೀಯತೆ; ಶೂದ್ರಕನ ಬೌದ್ಧ ವೈದಿಕ ಮಿಶ್ರವಾದ ಸಾಮಾಜಿಕ ಚಿತ್ರ, ಗ್ರೀಕ್ ಛಾಯೆ; ಕಾಳಿದಾಸನ ಪರಿಪೂರ್ಣತೆ, ಸೌಂದರ್ಯದರ್ಶನ, ಭೋಗ ಶೃಂಗಾರ, ವೇದಾಂತತತ್ತ್ವ, ಸಂಸಾರ ರಹಸ್ಯ, ಸಾತ್ವಿಕ ಪ್ರೇಮ; ಅಲ್ಲಲ್ಲಿ ಕೃತಕತೆ. ಏಕೆಂದರೆ, ಇಷ್ಟು ಹೊತ್ತಿಗೆ ಸಂಸ್ಕೃತನಾಟಕಸೂರ್ಯ ಆಕಾಶದ ಮಧ್ಯಕ್ಕೆ ಏರಿ ಇಳಿಮುಖವಾಗಲಾರಂಭಿಸಿತು. ಕಥಾರಚನ ಗೀತ ಕವನಗಳಲ್ಲಿ ನಿಸ್ಸೀಮನಾದ ಕಾಳಿದಾಸನ ಕೈಯಲ್ಲಿ ನಾಟಕಕ್ಕೂ ಈ ಕಾವ್ಯ ಗೀತ ಗುಣಗಳು ಹಬ್ಬಿ ನಾಟಕೀಯತೆ ಭಾಸನಿಗಿಂತ ಸ್ವಲ್ಪ ಕಡಮೆಯಾಯಿತು. ಈಚೆಗೆ ವಿಶಾಖದತ್ತನ ಚರಿತ್ರನಾಟಕದ ರಾಜಕೀಯ ತಂತ್ರಗಳೂ, ಕಾಳಿದಾಸನ ಮಾದರಿಯಲ್ಲಿ ಹರ್ಷನ ಶೃಂಗಾರ ನಾಟಕಗಳೂ (ಸ್ವಲ್ಪ ಬೌದ್ಧ ನಾಟಕದ ಸೋಂಕೂ), ಭವಭೂತಿಯ ಕರುಣರಸದ ಅಸಾಧ್ಯ ಪ್ರವಾಹವೂ ಅದ್ಭುತ ಚಿತ್ರಗಳೂ ಜಟಿಲತೆಯೂ, ರಸಜ್ಞರು ಕಲೆಯ ರಹಸ್ಯ 'ಅತಿ' ಯಲ್ಲಲ್ಲವೆಂದು ಸೂಚಿಸಿದರೆ—"ಉತ್ಪತ್ಸ್ಯತೇಽಸ್ತಿ ಮಮ ಕೋಽಪಿ ಸಮಾನ ಧರ್ಮಾ, ಕಾಲೋಹ್ಯಯಂ ನಿರವಧಿರ್ವಿಪುಲಾಚ ಪೃಥ್ವೀ" ಎಂಬ ಕೆಚ್ಚೂ ಕಂಡುಬರುತ್ತವೆ. "ಆಪರಿತೋಷಾದ್ ವಿದುಷಾಂ ನ ಸಾಧು ಮನ್ಯೇ ಪ್ರಯೋಗ ವಿಜ್ಞಾನಂ" ಎಂಬ ವಿನಯವಾಕ್ಕಿಗೂ ಈ ದರ್ಪಕ್ಕೂ ಇರುವ ಅಂತರವೇ ನಾಟಕಕಲೆ ಎಷ್ಟು ದೂರ ಬಂದಿತೆಂಬುದಕ್ಕೆ ನಿದರ್ಶನ. ಬಳಿಕ ಕ್ಷೇಮೀಶ್ವರನ 'ಚಂಡಕೌಶಿಕ', ಭಟ್ಟನಾರಾಯಣನ 'ವೇಣೀ ಸಂಹಾರ', ಕೃಷ್ಣಮಿಶ್ರನ ವೇದಾಂತ ಜಿಜ್ಞಾಸೆಯ 'ಪ್ರಬೋಧ ಚಂದ್ರೋದಯ'—ಇವು ಹೊಸ ಹೊಸ ಉಪಾಯಗಳಿಂದ 'ನವೀನತೆ'ಯನ್ನು ಅರಸಿಕೊಂಡು ಹೋಗಿ ಉತ್ತಮ ಸ್ಥಾನದಲ್ಲಿಲ್ಲದಿದ್ದರೂ, ಗೌರವಕ್ಕೆ ಆಸ್ಪದವಾಗಿವೆ.

ಆ ಬಳಿಕ ನಾಟಕಗಳು ಸಾಮಾನ್ಯ ಚಂಪೂಕಾವ್ಯಗಳ ಬಣ್ಣವನ್ನು ಹೊತ್ತು, ಭಾಣ ಪ್ರಹಸನಗಳನ್ನು ಚಪ್ಪರಿಸುತ್ತ "ಪರಿಣಯ" "ವಿಜಯ" ಗಳನ್ನು ಹೆಣೆಯುತ್ತ, ಅನಂಗನನ್ನೂ ಲಂಬೋದರನನ್ನೂ ಅಧಿದೇವತೆಗಳಾಗಿ

ಉಪಾಸನೆಮಾಡಿ, 'ರಸಿಕ', 'ರಸಿಕತೆ' ಎಂಬ ಶಬ್ದಗಳನ್ನು ಪ್ರಚಾರದಲ್ಲಿರುವ ಅರ್ಥಕ್ಕೆ ತಂದುಬಿಟ್ಟುವು.

ಈ ಗ್ರಂಥದ ಅನುಬಂಧದಿಂದ ಸುಮಾರು ೬೫೦ ನಾಟಕಗಳ ಹೆಸರು ಕಾಣಬಂದರೂ ಸಂಸ್ಕೃತದ ಉತ್ತಮನಾಟಕಗಳ ಸಂಖ್ಯೆ ಸುಮಾರು ೪೦-೫೦; ಉತ್ತಮ ಕವಿಗಳು ೮-೧೦. ಈ ನಾಟಕ ಲಕ್ಷ್ಯಗಳ ಮೇಲೆ ಲಕ್ಷಣ ಗ್ರಂಥಗಳು ಹುಟ್ಟಿವೆ; ಅದನ್ನು ಅನುಸರಿಸಿ ನಾಟಕಗಳೂ ಕಟ್ಟಿವೆ. ಈ ಲಕ್ಷಣಗಳ ಸಾರವೇನು ? ಯಾವ ರೀತಿಯಲ್ಲಿ ಇವು ವಿಶ್ವದೃಷ್ಟಿಯಲ್ಲಿ ಮಿಳಿತವಾಗುವುವು ಎಂದು ತಿಳಿಯಲೆಳಸುವ ಸಂಸ್ಕೃತ ನಾಟಕ ವಿದ್ಯಾರ್ಥಿಗಳು ಗ್ರೀಕ್ ಲಕ್ಷ್ಯ ಲಕ್ಷಣಗಳನ್ನು ಸಂಸ್ಕೃತದವುಗಳೊಡನೆ ಹೋಲಿಸಿ ವಿಮರ್ಶೆಮಾಡಿಕೊಳ್ಳಬೇಕು. ಮತ್ತು ಆಮೇಲೆ ೧೬ ನೆಯ ಶತಮಾನದಿಂದ ಬೆಳೆದ ಯೂರೋಪಿನ, ಮುಖ್ಯವಾಗಿ ಷೇಕ್ಸ್‌ಪಿಯರ್ ಪ್ರಧಾನವಾದ ಇಂಗ್ಲಿಷ್ ನಾಟಕದ, ಲಕ್ಷ್ಯಲಕ್ಷಣಗಳನ್ನೂ ದೃಷ್ಟಿಸಬೇಕು.

ಸಂಸ್ಕೃತ ನಾಟಕಗಳ ವಿಷಯದಲ್ಲಿ ಹಲವು ಪ್ರಶ್ನೆಗಳು ತಲೆದೋರಬಹುದು. ಗ್ರೀಕ್ ನಾಟಕದ ಸಂಸರ್ಗವುಂಟೇ? ಎಂಬುದೊಂದು. ಇಲ್ಲವೆಂದು ವಿದ್ವಾಂಸರು ನಿರ್ಧರಿಸಿದ್ದಾರೆ; ಆದರೆ ಇನ್ನು ವಿಚಾರಕ್ಕೆ ಅವಕಾಶವೇ ಇಲ್ಲವೆಂದು ಹೇಳಬಹುದೇ ? ಸಂಸ್ಕೃತ ನಾಟಕ ರಾಜಾಸ್ಥಾನಗಳಲ್ಲಿ ವ್ಯವಹಾರದಲ್ಲಿ ಬಿಟ್ಟುಹೋಗಿದ್ದ ಭಾಷೆಯಲ್ಲಿ (ಮುಖ್ಯವಾಗಿ), ಆಡುವ ಭಾಷೆಯನ್ನು ಬಿಟ್ಟು ಕಲಿತ ಭಾಷೆಯಲ್ಲಿ ಬರೆದ ಕವಿಗಳಿಂದ, ಅಲ್ಲೊಂದು ಇಲ್ಲೊಂದು ಸ್ಥಾನಾಂತರ ಕಾಲಾಂತರಗಳಲ್ಲಿ ಉತ್ಪನ್ನವಾದುದ್ದು, ಅಲ್ಲೊಮ್ಮೆ ಇಲ್ಲೊಮ್ಮೆ ಪ್ರದರ್ಶನವಾದದ್ದು. ಗ್ರೀಕ್ ಇಂಗ್ಲಿಷ್ ನಾಟಕಗಳಂತೆ ಇದು ಸಾರ್ವಜನಿಕ ನಾಟಕಶಾಲೆಯಲ್ಲಿ, ಜನಾಂಗ ಸಂಪರ್ಕದಲ್ಲಿ ಬೆಳೆದ ಹಾಗೆ ಕಾಣುವುದಿಲ್ಲ. ಜನಜೀವನದಲ್ಲಿ ಬಯಲಾಟ, ಭಾಗವತರಾಟ, ಮೂಕಾಭಿನಯ, ನಾಟ್ಯ, ಗೀತ ಮುಂತಾದವು ಸಾರ್ವತ್ರಿಕವಾಗಿ ಭರತಭೂಮಿಯಲ್ಲಿ ಕಂಡುಬಂದರೂ, ಈವೊತ್ತಿಗೂ ಉಳಿದಿದ್ದರೂ, ದೇಶಭಾಷೆಗಳಲ್ಲಿ ನಾಟಕ ಸಾಹಿತ್ಯ ಪೂರ್ವದಿಂದ ಬಂದದ್ದು ಬಹು ಅಪೂರ್ವ. ಇದರ ರಹಸ್ಯವೇನು ? ಆಡುವ ನಾಟಕಕ್ಕಿಂತಲೂ ಓದುವ ನಾಟಕವೇ ಹೆಚ್ಚು. ಅದಕ್ಕೇ ನಾಟಕಕ್ಕೆ ಪ್ರತಿಭಾಶಾಲಿಗಳಾದ ಪೂರ್ವಕವಿಗಳಲ್ಲಿ ಹೊರತು, ನಾಟಕೀಯತೆಗಿಂತಲೂ ಕಾವ್ಯಗುಣವೇ

ಹೆಚ್ಚಾಗಿ ಪಸರಿಸಿಕೊಂಡಿತೆಂದು ಕಾಣುತ್ತದೆ. ಗ್ರೀಕರು ತಮ್ಮ ಪುರಾಣಗಳಿಂದ ಮಹಾವೀರರ, ದೇವಾಂಶಸಂಭೂತರ, ದೇವತೆಗಳ, ಕಥೆಗಳನ್ನು ಎತ್ತಿ ಮತಾಚರಣಸಂಬಂಧವಾದ ಜಾತ್ರೆ ಹಬ್ಬಗಳಲ್ಲಿ ನಾಟಕವನ್ನು ಪ್ರಯೋಗಿಸಿದಂತೆಯೇ, ಭರತಭೂಮಿಯಲ್ಲಿಯೂ ರಾಮಾಯಣ, ಭಾರತ, ಭಾಗವತ (ಜೊತೆಗೆ ಬೃಹತ್ಕಥೆ—ಇದರ ಉತ್ಪತ್ತಿ ಎಲ್ಲಿ?)—ಈ ಮುಖ್ಯವಾದ ಆಕರಗಳಿಂದ ನಾಟಕ ವಸ್ತುವನ್ನು ತೆಗೆದುಕೊಂಡು ಮತಾಚರಣದಲ್ಲಿ ಪ್ರಯೋಗಿಸಿದರು. ರಾಮ, ಕೃಷ್ಣ, ಪಾಂಡವರು, ಕೌರವರು, ಹರಿಶ್ಚಂದ್ರ ಮುಂತಾದ ಪಾತ್ರಗಳು (ಸ್ವತಂತ್ರಕಾಲದಲ್ಲಿ ಕವಿಗಳು ಅಲ್ಪಸ್ವಲ್ಪ ಮಾರ್ಪಾಟು ಮಾಡಿದ್ದರೂ) ಒಟ್ಟಿನ ಮೇಲೆ ತಮ್ಮ ಆಕರಗಳ ಕಾಂತಿಯಿಂದ ಜನರ ಮನಸ್ಸಿನಲ್ಲಿ ಹೆಚ್ಚಾಗಿ ಬೆಳಗುತ್ತವೆಯೇ ಹೊರತು ನಾಟಕ ಕವಿಗಳ ಪಾತ್ರರಚನೆಯಿಂದ ಅಷ್ಟು ಬೆಳಗುತ್ತಿಲ್ಲ. ಷೇಕ್ಸ್‌ಪಿಯರ್ ಕವಿಯ ಪ್ರಸಿದ್ಧ ಪಾತ್ರಗಳು ತಮ್ಮದೇ ಒಂದು ಜೀವಕಳೆಯಿಂದ ಸರ್ವಜನಾಂಗದ ಭಾವನಾಪ್ರಪಂಚದಲ್ಲಿ ಪ್ರತಿಬಿಂಬಿಸುವಂತೆ ಭಾರತೀಯರ ಚಿತ್ತದಲ್ಲಿ ಸಂಸ್ಕೃತ ನಾಟಕದ ಪಾತ್ರಗಳು ಸ್ಥಳವನ್ನು ಪಡೆದಿರುವುವೇ? ಕಾಳಿದಾಸನ ಶಕುಂತಲೆಯನ್ನು ಬಿಟ್ಟರೆ, ಅವನ ದುಷ್ಯಂತ ಕೂಡ ಅಷ್ಟು ವರ್ಚಸ್ಸಿನಿಂದ ಕಡೆದ ಬಿಂಬವೇ? ಭವಭೂತಿಯ ಸೀತೆ ಹೇಗೆ? ಈ ಸರಣಿಯಲ್ಲಿ ಯೋಚನೆ ಮಾಡುವವರಿಗೆ ದೇಶಭಾಷೆಗಳಲ್ಲಿ ಸಂಸ್ಕೃತದ ಉತ್ತಮ ನಾಟಕಗಳು ಪುನರ್ಜನ್ಮ ಪಡೆದು ಸಾರ್ವಜನಿಕವಾದ ಈ ಕಾಲದ ನಾಟಕಗಳಲ್ಲಿ ಆಡಿ, ಜನರ ಹೃದಯಕ್ಕೆ ಇಳಿಯಬೇಕಾಗಿದೆ ಎಂದು ತೋರಬಹುದು.

ಲಕ್ಷಣ ಪ್ರಪಂಚದಲ್ಲಿ ಕೂಡ ಜನರ ಮನೋಭಾವ ಹೇಗೆ? ಕೃಷಿ ಎಷ್ಟು? ಯೂರಿಪಿಡೀಸ್, ಷೇಕ್ಸ್‌ಪಿಯರ್, ಮುಂತಾದ ಕವಿಗಳ ಮೇಲಿರುವಷ್ಟು ತರಂಗ ತರಂಗವಾದ ವಿಚಾರ ಮತ್ತು ವಿಮರ್ಶೆ ನಮ್ಮ ಕಾಳಿದಾಸ ಭವಭೂತಿಗಳ ಮೇಲೆ ಹಿಂದಿನ ಪಾಂಡಿತ್ಯಲೋಕದಲ್ಲಿ ಉಂಟೆ? ಸಾಧಾರಣ ವ್ಯಾಖ್ಯಾನ ಸೂತ್ರಗಳಲ್ಲದೆ ವ್ಯಕ್ತಿಪ್ರೇಮದಿಂದ ಹುಟ್ಟಿದ ವಿಮರ್ಶೆಗಳಿರುವುವೇ?

ಭಾಸೋ ಹಾಸಃ ಕವಿಕುಲಗುರುಃ ಕಾಳಿದಾಸೋ ವಿಲಾಸಃ |
ಕಾವ್ಯೇಷು ನಾಟಕಂ ರಮ್ಯಂ ನಾಟಕೇಷು ಶಕುಂತಲಾ |
ತತ್ರಾಪಿ ಚ ಚತುರ್ಥೋಂಕಃ ತತ್ರ ಶ್ಲೋಕಚತುಷ್ಟಯಂ ||

ಉತ್ತರೇ ರಾಮಚರಿತ್ರೇ ಭವಭೂತಿರ್ವಿಶಿಷ್ಯತೇ |
ಮುರಾರೇಸ್ತೃತೀಯಃ ಪಂಥಾಃ ||

ಎಂಬಂಥ ಎಲ್ಲೋ ಒಂದೆರಡು 'ವಚನ'ಗಳು ಕಿವಿಯ ಮೇಲೆ ಬೀಳಬಹುದು. ಆಳವಾದ ವಿಚಾರವೆಲ್ಲಿ?

ಆಕಾರದ ಬೆಳವಣಿಗೆಯನ್ನು ನೋಡಿದರೆ ಗ್ರೀಕ್ ನಾಟಕದ ರೂಪ, ಆರಂಭಕಾಲದ, ಮೇಳ ತೊಡಂಕೊಂಡ, ಸಂವಾದ; ಸಂಸ್ಕೃತದ ನಾಟಕ ಕೆಲವು ನಿರ್ಬಂಧಗಳನ್ನು ಬಿಟ್ಟರೆ (ಈಗ ಬಿಡುತ್ತಾ ಇದ್ದಾರೆ) ನಾಟಕದ ಪೂರ್ಣರೂಪ; ಇಂಗ್ಲಿಷ್ ನಾಟಕ ಇದಕ್ಕೆ ಮುಂದಾಗಿ ಹೆಚ್ಚು ಹೋಗಿಲ್ಲ. ಗ್ರೀಕ್ ನಾಟಕದ ಅರ್ಧ ನಾಟಕೀಯತೆ ಸಂಸ್ಕೃತನಾಟಕದಲ್ಲಿ (ಇಂಗ್ಲಿಷ್ ನಾಟಕ ಹುಟ್ಟುವ ಕಾಲಕ್ಕೆ ಬಹು ಮುಂಚೆ) ಪೂರ್ಣವಾಗಿ ನಾಟಕದ ಪೂರ್ಣಾಕಾರವನ್ನು ಸಾಧಿಸಿಕೊಂಡಿತೆಂದು ಹೇಳಬಹುದು. ಪ್ರತಿಪಾದಿತ ವಿಷಯಗಳನ್ನು ನೋಡಿದರೆ ಭಾರತೀಯ ಜನಾಂಗದ ಕಲ್ಯಾಣಗುಣಗಳನ್ನೂ ದಿವ್ಯದರ್ಶನಗಳನ್ನೂ ಪ್ರತಿಬಿಂಬಿಸಿ, ಉದಾತ್ತವಾದ ಬೋಧನಾವೇಶಗಳನ್ನೊಳಗೊಂಡು, ಅವರ ಭಕ್ತಿ, ಅವರ ಧರ್ಮಪ್ರೇಮ, ಅವರ ಸಾತ್ತ್ವಿಕ ಪ್ರವೃತ್ತಿ, ಅವರ ಕುಟುಂಬಪ್ರೇಮ, ಅವರ ಕರುಣ, ಅವರ ಗಾಂಭೀರ್ಯ, ವಿನೋದ, ಲೀಲೆ, ಅವರ ಕಲೆಗಳು (ಕೆಲವು ವೇಳೆ ವಿಡಂಬನ)-ಇವೆಲ್ಲವನ್ನೂ ಸಂಸ್ಕೃತನಾಟಕ ಅನುಭವಕ್ಕೆ ತಂದುಕೊಟ್ಟಿರುವುದು. ಕೊನೆಯ ಮಾತಾಗಿ, ಪ್ರಪಂಚದ ನಾಟಕಗಳಲ್ಲಿ ಅತ್ಯುನ್ನತಸ್ಥಾನದಲ್ಲಿ, ಅಗ್ರಪಂಕ್ತಿಯಲ್ಲಿ, ಇಡಬಹುದಾದ ನಾಟಕಗಳು ನಮ್ಮ ಸಾಹಿತ್ಯ ಭಂಡಾರದಲ್ಲಿವೆಯೆಂದು ನಾವು ಹೆಮ್ಮೆಪಡಬಹುದು. 'ಸ್ವಪ್ನವಾಸವದತ್ತ' 'ಪ್ರತಿಮಾನಾಟಕ' 'ಪಂಚರಾತ್ರ' 'ಶಾಕುಂತಲ' 'ಮೃಚ್ಛಕಟಿಕ', 'ಉತ್ತರ ರಾಮಚರಿತ' ಮುಂತಾದ ನಾಟಕಗಳು ಪ್ರಪಂಚದ ನಾಟಕಗಳಲ್ಲಿ ಒಂದು ಪ್ರತಿಭೆ, ಒಂದು ವೈಶಿಷ್ಟ್ಯ, ಒಂದು ರಮ್ಯತೆ, ಒಂದು ಪ್ರಸಾದ, ಒಂದು ಶಾಂತಿಯನ್ನು ಅವುಗಳ ಮೋಹನ ಶಕ್ತಿಗೆ ಒಳಪಟ್ಟವರ ಹೃದಯದಲ್ಲಿ ತುಂಬುತ್ತವೆ.—ನಾಟಕ ಮಣಿಗಳು ಅವು; ಜೀವಕಣಿಗಳು. ಎಚ್ಚೆತ್ತು ವಿಜೃಂಭಿಸುತ್ತಿರುವ ಈಗಿನ ಭರತಖಂಡದಲ್ಲಿ ಅವು ಪುನರುತ್ಥಾನವಾಗಿ, ಹೊಸ ದೃಷ್ಟಿಯಿಂದ, ವಿಶಾಲ ಹೃದಯದಿಂದ ಅಭ್ಯಾಸವಾಗಿ, ಭಾರತದ ಪುನರುಜ್ಜೀವನದ ಉನ್ನತ ಪ್ರಗತಿಗೆ ಪ್ರಚೋದಕಗಳಾಗುವುವೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

೨

ಮೇಲೆ ಹೇಳಿದ ಮೂರು ನಾಟಕಸಾಹಿತ್ಯಗಳ ಅನುಭವದಿಂದ ನಾಟಕಕ್ಕೆಲ್ಲಾ ಸಾಮಾನ್ಯವಾದ ಕೆಲವು ಅಂಶಗಳನ್ನು ಇಲ್ಲಿ ಸೂಚಿಸಬಹುದು—

(೧) **ನಾಟಕದ ಸ್ವರೂಪ** (Nature)—ನಾಟಕ ಆಟ, ನೋಟ; ರೂಪಕ, ದೃಶ್ಯ; ಡ್ರಾಮ, ಪ್ಲೇ; ಮಾಡಿದ್ದು, ಆಡಿದ್ದು, ತೋರಿದ್ದು. ಇದಕ್ಕೆ ಮೊದಲು ಬೇಕಾದದ್ದು ರಂಗಸ್ಥಳ, ಸ್ಟೇಜ್, ಥಿಯೇಟರ್. ಬಯಲಾಟದಂತೆ, ಈ ಸ್ಥಳ ಒಂದು ಬಯಲಾಗಬಹುದು. ಗ್ರೀಕ್ ನಾಟಕದಂತೆ, ಬೆಟ್ಟವಲ್ಲಿ ಕೊರೆದು ಮೆಟ್ಟಿಲು ಮೆಟ್ಟಿಲಾದ ದುಂಡು ಜಾಗವಾಗಬಹುದು. ಮೇಲೆ ಆಕಾಶ, ಕೆಳಗೆ ಒಂದು ಅಟ್ಟ. ರಾಜಭವನದಲ್ಲಿ ತೆರೆ ನೇಪಥ್ಯ (ವೇಷಗೃಹ) ಉಪಕರಣಗಳಿಂದ ಕೂಡಿದ ನಾಟಕ ತೊಟ್ಟಿಯಾಗಿರಬಹುದು. ಸಾರ್ವಜನಿಕ ನಾಟಕಶಾಲೆಯಾಗಬಹುದು. ಕೆಲವು ಕಾಲ, ವೇಷಭೂಷಣಗಳ, ಚಿತ್ರ ವಿಚಿತ್ರಗಳ ವೈಭವಕ್ಕೆ ಆಸೆ ಹುಟ್ಟಬಹುದು. ಬೇಸರವಾದರೆ ಸರಳತೆಯ ಸ್ವಲ್ಪ ಸಲಕರಣೆಗಳಿಂದ ನಾಟಕವಸ್ತು, ರಸ, ಅಭಿನಯ ಮಾತ್ರದಿಂದ ಆಕರ್ಷಣ ಮಾಡಲು ಮಾರ್ಪಡಬಹುದು. ದುಷ್ಯಂತನು ರಾಜವೈಭವವನ್ನು ಬಿಟ್ಟು ಋಷ್ಯಾಶ್ರಮವನ್ನು ಭಕ್ತಿಯಿಂದ ಹೊಕ್ಕಂತೆ.

(೨) **ನಾಟಕದ ಉತ್ಪತ್ತಿ, ಜೀವಾಳ** (Origin and Essence) ನಾಟಕ ಹುಟ್ಟಿದ್ದು ದೇವತೆಗಳ, ಸತ್ತು ಅಮೃತಗಣಕ್ಕೆ ಸೇರಿದ ಮಹಾ ಪುರುಷರ ಆರಾಧನೆಯಲ್ಲಿ; ವರ್ಷದ ಜಾತ್ರೆಗಳು ಮರಳಿದಾಗ; ಕೃಷಿ ದೇವತೆಯ ಮಳೆ ಬೆಳೆಗಳನ್ನು ಕೊಡುವ ಶಕ್ತಿಯ ತರ್ಪಣಕ್ಕಾಗಿ (ತೃಪ್ತ್ಯರ್ಥವಾಗಿ) ಮಾಡುವ ವ್ರತಾಚರಣೆಯಲ್ಲಿ; ಇವರ ಆವರಣ ಮತಾವರಣ, ಜನರು ಸೇರಿದ ಜಾತ್ರೆಯಲ್ಲಿ, ಅರ್ಚಕರು ಪುರೋಹಿತರು ಯಾಗಮಾಡಿ, ಬಲಿಕೊಟ್ಟು, ದೇವತಾಸ್ತುತಿಯನ್ನು ನೆರವೇರಿಸಿ, ಯಾವುದಾದರೂ ಒಂದು ಅಧಿದೇವತೆಯ ಇಲ್ಲವೇ ವೀರನ ಹುಟ್ಟು, ಬೆಳವಳಿಗೆ, ಮದುವೆ, ಕಷ್ಟಸುಖಗಳು, ಸಾಹಸ ಕಾರ್ಯಗಳು, ಅದ್ಭುತಗುಣಗಳು, ಸಾವು, ಪುನರುತ್ಥಾನ—ಇವುಗಳನ್ನು ಭಕ್ತಿಯಿಂದ ವೇಷಧರಿಸಿ, ಆ ದೇವತೆಯೋ, ವೀರನೋ ತಾವು ಎಂಬಂತೆ ನಟಿಸಿ (ಅನುಕರಣಮಾಡಿ) ಕುಣಿದು, ಹಾಡಿ, ಆಡಿ, ತೋರಿಸಿ, ಕೊನೆಯಲ್ಲಿ ಮಳೆ ಬೆಳೆ ಆಗಲಿ, ದೇವರು ನಮ್ಮನ್ನು ಕಾಪಾಡಲಿ, ಐಶ್ವರ್ಯವನ್ನೋ ಮುಕ್ತಿ

ಯನ್ನೋ ಕೊಡಲಿ, ರಾಜರು ಧರ್ಮದಿಂದ ಆಳಲಿ, ಪ್ರಜೆಗಳಿಗೆಲ್ಲಾ ಮಂಗಳವಾಗಲಿ ಎಂದು ಪ್ರಾರ್ಥಿಸಿ ಮುಗಿಸುತ್ತಿದ್ದದ್ದು. ಇದರಲ್ಲಿ ನಾಯಕನಿಗೂ ನಾಯಕಿಗೂ ಮದುವೆಯೂ ನಾಯಕ ಪ್ರತಿನಾಯಕರ ಘರ್ಷಣವೂ ಮುಖ್ಯ; ಅದೇ ನಾಟಕದ ಜೀವಾಳ. ಈ ಮತಕಾರ್ಯದಿಂದ ಜನಕ್ಕೆ ಫಲಪ್ರಾಪ್ತಿ, ಆನಂದ. ಈ ಮುಖ್ಯ ಜೀವಾಳ ಎಲ್ಲಾ ನಾಟಕಗಳಲ್ಲಿಯೂ ಇಂದಿಗೂ ಉಳಿದು ಬಂದಿದೆ. ಆದರೆ ಮತಾಚರಣೆಯ ಕೋಶ ಬಿದ್ದುಹೋಗಿ ಒಳತಿರುಳಾದ ಒಂದು ಉದಾತ್ತಾನುಭವವೂ ಅಭಿನಯ ಕಲೆಯೂ ಅರಳುತ್ತಾ ಬಂದಿವೆ. ಹಾಡು ಕುಣಿತಗಳು, ಬಣ್ಣ ಮೊಗವಾಡಗಳು ಮೊದಲಿದ್ದಂತೆ ಆಮೇಲೆ ಇಲ್ಲ. ಮೇಳ, ಗೀತ, ನಾಟ್ಯ—ಇವು ನಾಟಕದ ಒಂದು ಅಂಗವಾಗಿ ಉಚಿತ ಸ್ಥಳಗಳಲ್ಲಿ ಬರಬಹುದು, ಬರದೆ ಇರಬಹುದು.

(೩) **ನಾಟಕದ ಆಕಾರ** (Form)—ಮೇಳ ಗೀತದ ಕುಣಿತದಿಂದ ಆರಂಭವಾಗಿ, ಮೇಳದ ಸಂಗೀತಕ್ಕೆ ಸಂವಾದವನ್ನು ಸೇರಿಸಿಕೊಂಡು ದೂತ ಮೊದಲಾದವರ ಕಥನಕ್ಕೆ ತಕ್ಕ ಮಟ್ಟಿಗೆ ಪ್ರಾಧಾನ್ಯಕೊಟ್ಟು, ತೋರಲಾಗದುದನ್ನು ಅಥವಾ ತೋರಬಾರದೆಂಬ ಭಾವವುಳ್ಳದ್ದನ್ನು (ಕೊಲೆ ಮುಂತಾದವು) ಆಖ್ಯಾನರೂಪವಾಗಿ, ವಿಷ್ಕಂಭಾದಿರೂಪವಾಗಿ, ಹೇಳಿ ತಿಳಿಸಿ, ಪಾತ್ರಪೋಷಣೆಯನ್ನು ನಡಸುತ್ತ, ಕಡೆಗೆ ನಾಟಕೀಯತೆಯೆಂದರೆ ವ್ಯಕ್ತಿಗಳ ಸಂವಾದ, ಪಾತ್ರಗಳ ಮಾನವ ಸ್ವಭಾವ, ನೋಡತಕ್ಕದ್ದರ ಪ್ರಧಾನತೆ, ಹೇಳತಕ್ಕದ್ದರ ಅಭಾವ—ಈ ರೀತಿ ಪ್ರಗತಿಯನ್ನು ನಾಟಕದ ಆಕಾರ ಹೊಂದಿರುತ್ತದೆ. ಮೊದಲಿಂದ ಕಡೆಯವರೆಗೂ ಒಂದೇ ಒಂದು ದೃಶ್ಯ; ಇಲ್ಲ, ವಿರಾಮಕ್ಕಾಗಿ ವಸ್ತು ವಿಭಾಗವನ್ನನುಸರಿಸಿ, ಅಲ್ಲಲ್ಲೆ ತೆರೆ (ಅಂಕ) ಒಂದು, ಎರಡು, ಐದು, ಏಳು, ಹದಿನಾಲ್ಕು—ಮುಖ್ಯವಾಗಿ, ನಾಟಕ ಸ್ವಾರಸ್ಯವಾದ ಕಥೆಯನ್ನು, ಚಿತ್ರವನ್ನು, ದೃಶ್ಯದ ಮೇಲೆ ದೃಶ್ಯ ತೋರುತ್ತ, ಮುಕ್ತಾಯದಲ್ಲಿ ಪರಿಣಾಮವನ್ನುಂಟುಮಾಡುವುದಾಗಿ ಏರ್ಪಟ್ಟದೆ.

(೪) **ನಾಟಕದ ವಾಹಕ** (Medium)—ದೇವತಾಂಶವಾದ ಉದಾತ್ತವಸ್ತುಗಳನ್ನುಳ್ಳ ಮತ್ತು ಮೇಳ ಗೀತ ನಾಟ್ಯಗಳಿಂದ ಕೂಡಿದ ನಾಟಕ ಸ್ವಾಭಾವಿಕವಾಗಿ ಛಂದಸ್ಸಿನ ಲಯವನ್ನು ಹೊಂದಿಕೊಂಡಿರುತ್ತದೆ. ಆಮೇಲೆ ಗೀತಹೋಗಿ, ಬರಿಯ ಛಂದಸ್ಸು. ಆಮೇಲೆ ನಾಟಕೀಯತೆ

ಹೆಚ್ಚುತ್ತ, ಲೋಕಸಹಜವಾದ ಗದ್ಯ, ಛಂದಸ್ಸು ಮತ್ತು ಗದ್ಯದ ಮಿಶ್ರ, ಕೊನೆಗೆ ಲೋಕಸ್ವಭಾವ ಸಮಾಜ ಚಿತ್ರಗಳನ್ನೇ ಆಶ್ರಯಿಸಿರುವ ಈಗಿನ ನಾಟಕಗಳಲ್ಲಿ ಛಂದಸ್ಸು ಅಸ್ವಾಭಾವಿಕವೆಂದು ಬರಿಯ ಗದ್ಯ ಪ್ರಯೋಗ ಬಳಕೆಗೆ ಬಂದಿರುತ್ತದೆ. ಈ ವಿಚಾರದಲ್ಲಿ ಗ್ರೀಕ್ ನಾಟಕ ಬರಿಯ ಛಂದಸ್ಸೇ; ಸಂಸ್ಕೃತನಾಟಕ ಗದ್ಯದ ಹಾಸು, ಪದ್ಯದ ಹೊಕ್ಕು; ಇಂಗ್ಲಿಷ್ ನಾಟಕ ಮಿಶ್ರಣದಲ್ಲಿ ಆರಂಭವಾಗಿ ಈಗ ಬರಿಯ ಗದ್ಯಕ್ಕೆ ಇಳಿದಿದೆ. ನಾಟಕಕ್ಕೂ ಕವಿತೆಗೂ (Drama and Poetry) ಸಂಬಂಧವಿರಬೇಕೇ ಬೇಡವೇ ಎಂಬ ಪ್ರಶ್ನೆಯೂ ಇಲ್ಲಿ ಏಳುತ್ತದೆ.

(೫) **ನಾಟಕದ ವಿಷಯ, ವಸ್ತು, ಉದ್ದೇಶ** (Matter, Fable, Myth, Purpose, Aim)—ಇವು ಮೊದಲ ಮತಾಚರಣೆಯ ಆವರಣದಲ್ಲಿ ಬೆಳೆದದ್ದಾದುದರಿಂದ ಮತದ ನಂಬಿಕೆಗಳನ್ನೂ ದೇವತೆಗಳ ಮತ್ತು ಮಹಾಪುರುಷರ ಕಥೆಗಳನ್ನೂ ಆಶ್ರಯಿಸಿತು. ಗ್ರೀಕ್ ಮತ್ತು ಸಂಸ್ಕೃತ ನಾಟಕಗಳಲ್ಲಿ ಇದನ್ನು ಹೆಚ್ಚಾಗಿ ಕಾಣಬಹುದು. ಸ್ವಾಭಾವಿಕವಾಗಿ, ಡಯೊನಿಸಸ್, ಪ್ರೊಮೆಥಿಯಸ್, ಜ್ಯೂಸ್, ಅಥೀನ, ಯೂಲಿಸಿಸ್, ಏಜಾಕ್ಸ್, ಅಗಮೆಮ್ನಾನ್, ವಿಷ್ಣು, ರುದ್ರ, ಕೃಷ್ಣ, ರಾಮ, ಮಹಾಭಾರತದ ವೀರರು ಮುಂತಾದವರೇ ನಾಯಕರು. ಅವರ ಸುಖದುಃಖಗಳು, ಅವರ ಮಾಹಾತ್ಮ್ಯ, ಅವರ "ಆಟ—ಪಾಟ—ಮಾಟ"ಗಳ ಅನುಭವದಿಂದ ಉಂಟಾಗುವ ಶ್ರೇಯಸ್ಸು, ಆನುಷಂಗಿಕವಾಗಿ ಕಲಾಕೌಶಲ್ಯದ ಆನಂದ – ಇವೇ ರುದ್ರ ನಾಟಕಗಳ, ಉದಾತ್ತ ನಾಟಕಗಳ, ಪೂಜ್ಯ ನಾಟಕಗಳ ವಸ್ತು ಮತ್ತು ಫಲ. ಇವುಗಳ ಜೊತೆಗೆ ಕಾಮನ ಹಬ್ಬ ಮುಂತಾದ ಪ್ರಸಂಗಗಳಲ್ಲಿ ಅಶ್ಲೀಲವಾದ, ವಿಡಂಬನ ಪೂರಿತವಾದ, ಸ್ತ್ರೀ ಪುರುಷ ಸಂಯೋಗ ವಿಚಾರವಾದ, ಹಾಸ್ಯ ಪ್ರಧಾನವಾದ ನಾಟಕಗಳು—ಇವು ದೇವತಾಪ್ರೀತ್ಯರ್ಥವಾಗಿಯೇ, ಜನರ ಶ್ರೇಯಸ್ಸು ಮತ್ತು ಸಂತೋಷಗಳಿಗಾಗಿಯೇ. ಏಕೆಂದರೆ ಈ ಸಂಯೋಗ ಪ್ರತಾನುಭವವಿಲ್ಲದೆ ಲೋಕದಲ್ಲಿ ಉತ್ಪತ್ತಿ ಇಲ್ಲ; ಬೆಳೆ ಬೆಳೆಯದು; ಗಿಡ ಹಣ್ಣು ಕೊಡದು; ಹೆಂಗಸರು ಹೆರರು; ಗಂಡಸರು ಮಕ್ಕಳನ್ನು ಪಡೆದು ಸ್ವರ್ಗಕ್ಕೆ ಹೋಗರು. ಮೂರನೆಯದಾಗಿ, ಅಪೂರ್ವವಾಗಿ ಪ್ರಸಿದ್ಧ ಚಾರಿತ್ರಕ ವಿಷಯ. ಗ್ರೀಕ್‌ನಾಟಕದಲ್ಲೂ ಸಂಸ್ಕೃತನಾಟಕದಲ್ಲೂ ಇವು ಮೂರೂ

ಉಂಟು. ರುದ್ರನಾಟಕ ಸಂಸ್ಕೃತದಲ್ಲಿ ನೈಜವಾಗಿಯೇ ಒಮ್ಮೆ ಇದ್ದು ನಿಷೇಧಿಸಲ್ಪಟ್ಟಂತೆ ಊಹಿಸಬಹುದಾಗಿದೆ. ರುದ್ರನಾಟಕದ ವಿಷಯವೂ ರಸೋತ್ಪಾದನೆಯೂ ಧರ್ಮ ಗಾಂಭೀರ್ಯವೂ ಯಥೇಷ್ಟವಾಗಿ ಇವೆ.

ಕಾಲಾಂತರದಲ್ಲಿ ಮನುಷ್ಯ ನಾಗರಿಕತೆ ಬೆಳೆದಹಾಗೆಲ್ಲಾ ಬುದ್ಧಿ ವಿಚಾರ ಜ್ಞಾನವಿಕಾಸಗಳು ಹಬ್ಬಿದ ಹಾಗೆಲ್ಲಾ, ನಾಟಕದ ಮತಭಾವ ಹಿಂಗುತ್ತ, ಕಲಾಭಾವ ಹೆಚ್ಚುತ್ತ ಜೀವನಚಿತ್ರಗಳನ್ನು, ಮಹಾವೀರರ ಉದಾತ್ತ ಗುಣಗಳನ್ನು ಕೇವಲ ಲೌಕಿಕ, (secular) ಒಂದೊಂದು ಸಲ ಲೋಕಾಯತ, ದೃಷ್ಟಿಯಿಂದಲೇ ಪ್ರದರ್ಶಿಸುವುದು ಆರಂಭವಾಯಿತು. ನಾಟಕದ ಆಕಾರವೂ ಬದಲಾಯಿಸಿತು ; ರೀತಿ ಆತ್ಮಗಳೂ ಬದಲಾಯಿಸಿದುವು. ಪುರಾಣ ಕಥೆಗಳು ಹಿಮ್ಮೆಟ್ಟಿದುವು ಅಥವಾ ಹಾಸ್ಯಕ್ಕೊಳಗಾದುವು ; ಕವಿಗಳ ಕಲ್ಪನಾ ಪ್ರಪಂಚ ದೊಡ್ಡದಾಗುತ್ತ ಬಂತು ; ಹಾಸ್ಯ ಮತ್ತು ಶೃಂಗಾರ ರಸಗಳ ಆಕರ್ಷಣೆ ಹೆಚ್ಚಿತು. ಪ್ರಕರಣಗಳು, ಪ್ರಹಸನಗಳು, ಭಾಣಗಳು, ವಿಡಂಬನಗಳು ಪ್ರಬಲವಾದುವು; ಬೃಹತ್ಕಥೆಯಂಥ ಪ್ರಸಿದ್ಧಕಥಾಸಂಗ್ರಹಗಳೂ ಸ್ವಂತ ಕಲ್ಪನೆಗಳೂ ನಾಟಕಕ್ಕೆ ಆಕರಗಳಾದುವು. ಮೇಧಾವಿಗಳು, ಸಮಾಜ ಸಂಸ್ಕಾರಕರು, ತಮ್ಮ ಅಭಿಪ್ರಾಯಗಳನ್ನೂ ಸಮಾಜ ಸಮಸ್ಯೆಗಳನ್ನೂ ಚಿತ್ರಿಸುವುದು ಕೂಡ ನಾಟಕಕ್ಕೆ ವಿಷಯವಾಯಿತು. ಹೊತ್ತು ಹೋಗುವುದಕ್ಕೆ, ವಿನೋದಕ್ಕೆ, ಹರ್ಷಕ್ಕೆ, ವಿಚಾರಕ್ಕೆ ನಾಟಕ ಪ್ರಯೋಜನಕಾರಿಯಾಯಿತು. ಪುರಾಣ, ಪುಣ್ಯಕಥೆ, ವ್ರತಫಲ, ಮುಕ್ತಿ, ಶ್ರೇಯಸ್ಸು—ಇವು ಹಿಂದಾದುವು, ಮರೆಯಾದುವು.

(೬) **ನಾಟಕವಿಮರ್ಶೆ**—ಉತ್ತಮ ನಾಟಕಗಳ ಸೃಷ್ಟಿಕಾರ್ಯವನ್ನು ತತ್ತ್ವಜ್ಞರೂ ರಸಜ್ಞರೂ ಪರಿಶೀಲಿಸಿ ಲಕ್ಷಣಗಳನ್ನು ನಿರೂಪಿಸಿದರು. ಕೆಲವು, ಸರ್ವಸಮಾನವಾದ, ವಿಶ್ವವ್ಯಾಪಕವಾದ ಮುಖ್ಯ ತತ್ತ್ವಗಳು. ಬೇಕಾದಷ್ಟು (ಬೇಡವಾದಷ್ಟೋ?) ಸಣ್ಣ ಪುಟ್ಟ ನಿಬಂಧನೆಗಳು: ಮಹಾಕವಿಗಳು ಬಂದು ಮುರಿದುಹಾಕಿದಂತಹವು. ಸ್ಥಳೈಕ್ಯ, ಕಾಲೈಕ್ಯ, ಕಾರ್ಯೈಕ್ಯ. ರುದ್ರನಾಟಕದಲ್ಲಿ ಹಾಸ್ಯ ಬೆರೆಯುಬಹುದೇ ? ವಿಧವಿಧ ವಿಂಗಡಣೆ—ನಾಟಕ ನಾಟಿಕೆ, ತ್ರೋಟಕ ಸಟ್ಟಕ, ರೂಪಕ ಉಪರೂಪಕ, ನಾಯಕ ನಾಯಿಕಾ ಭೇದಗಳು, ನಾಂದಿ ವಿಷ್ಕಂಭಕ, ಭರತವಾಕ್ಯಗಳು, ಭಾಷೆ—ಎಷ್ಟೋ ವಿಷಯಗಳಲ್ಲಿ ಸೂತ್ರಗಳು ಮೂರು ಸಾಹಿತ್ಯಗಳಲ್ಲಿಯೂ ಹುಟ್ಟಿಕೊಂಡುವು;

ಬೇರಿನಿಂದ, ತಾಳಿನಿಂದ ದೊಡ್ಡ ಕೊಂಬೆಗಳಾಗಿ, ಕವಲುಗಳಾಗಿ ಬರಲಾಗಿ ಸೊರಗಿ ಹೋದುವು. ಒಟ್ಟಿನ ಮೇಲೆ ನಾಟಕದ ಸ್ವರೂಪದ, ನಾಟಕೀಯತೆಯ ಮುಖ್ಯ ಲಕ್ಷಣಗಳನ್ನು, ಜೀವಾಳವನ್ನು ಅರಿಸ್ಟೋಟಲಿನ 'ಕಾವ್ಯ ಮೀಮಾಂಸೆ'ಯಲ್ಲಿಯೂ ಭರತನ 'ನಾಟ್ಯಶಾಸ್ತ್ರ'ದಲ್ಲಿಯೂ, ಈಸ್ಕಿಲಸ್, ಕಾಳಿದಾಸ, ಷೇಕ್ಸ್‌ಪಿಯರ್ ಮುಂತಾದ ಮಹಾಕವಿಗಳ ನಾಟಕ ಸೃಷ್ಟಿಯಲ್ಲಿಯೂ, ನೂತನ ಯೂರೋಪಿನ ವಿಮರ್ಶೆಯಲ್ಲಿಯೂ ತಿಳಿಯಬಹುದು. ಬೇರೆ ಬೇರೆ ಜನಾಂಗಗಳ ಅವರವರ ಪ್ರತಿಭೆ ಮತ್ತು ಜೀವನಗಳಿಗನುಸಾರವಾಗಿ, ಪೌರಾಣಿಕ, ಗಂಭೀರ, ರುದ್ರನಾಟಕ (tragedy), ಹರ್ಷ ನಾಟಕ (comedy), ಪ್ರಹಸನ farce), ಚರಿತ್ರ ನಾಟಕ (historical play), ಸಾಮಾಜಿಕ ನಾಟಕ (social play, problem play)—ಈ ಅಚ್ಚುಗಳಲ್ಲಿ, ದೇವತೆಗಳ, ಮಹಾಪುರುಷರ, ಸಾಮಾನ್ಯ ಜನರ ಜೀವನಚಿತ್ರಗಳನ್ನು ವ್ಯಕ್ತಿಮಹತ್ವವನ್ನು, ಗುಣಗಳ ಉತ್ಕೃಷ್ಟತೆ ನ್ಯೂನತೆಗಳನ್ನು, ಮಾನವ ಜನ್ಮದ ಸುಖದುಃಖಗಳನ್ನು, ಧೈರ್ಯ ಸಾಹಸಗಳನ್ನು, ಸೋಲು ಗೆಲುವುಗಳನ್ನು, ಮದುವೆ ಸಾವುಗಳನ್ನು, ಧಾರ್ಮಿಕ ರಾಜಕ ಸಾಮಾಜಿಕ ಜ್ಞಾನೋತ್ತೇಜನಕ್ಕೂ ಆನಂದ ವಿನೋದಗಳಿಗೂ ವರಕವಿಗಳು ಧಾರೆಯೆರೆದಿದ್ದಾರೆ. ವಾಸ್ತವಿಕವಾದ ಅಥವಾ ಕಲ್ಪಿಸಿಕೊಂಡ ಜೀವನ ಚಿತ್ರವನ್ನು ಕೇಂದ್ರೀಕರಿಸಿ ಕಥೆ ಕಟ್ಟುವುದು, ಕಥೆಗೆ ಜೀವಾಂಗ ರಚನೆಯ ಐಕ್ಯವನ್ನು ಕೊಡುವುದು, ಕಥೆಯನ್ನು ಕಥನಕ್ಕಿಂತಲೂ ಸಾಧ್ಯವಾದ ಮಟ್ಟಿಗೆ ದೃಶ್ಯವಾಗಿ ತೋರಿಸುವುದು, ಕಾರ್ಯದಿಂದ ಪಾತ್ರವನ್ನೂ ಪಾತ್ರದಿಂದ ರಸವನ್ನೂ ಹೊಂದಿಕೆಗೊಳಿಸುವುದು, ನಾಟಕದ ಅಚ್ಚನ್ನು ಸಾಧ್ಯವಾದ ಮಟ್ಟಿಗೂ ಸರಳತೆಗೆ ಎಳೆಯುವುದು, ಭಾಷೆಯನ್ನು (ಛಂದಸ್ಸಾಗಲಿ, ವಿಶೇಷವಾಗಿ ಗದ್ಯವಾಗಲಿ) ಸ್ವಾಭಾವಿಕತೆಯ ಭ್ರಾಂತಿ ಹುಟ್ಟುವಂತೆ ಪಳಗಿಸುವುದು, ಮಾನವ ಹೃದಯದ ಮತ್ತು ವ್ಯಕ್ತಿತ್ವದ ತೊಡಕುಗಳು, ಆಳಗಳು, ವಿವರಗಳು, ಕೆಟ್ಟದು ಒಳ್ಳೆಯದು ಬೆರಕೆಯಾದದ್ದು, ತಾನರಿತದ್ದು, ತನ್ನನ್ನು ತಾನೇ ಅರಿಯದೆ ನಡೆದುಬಿಟ್ಟು ನುಡಿದುಬಿಟ್ಟು ಆಶ್ಚರ್ಯಪಡತಕ್ಕದ್ದು : ಎಲ್ಲಾ ರಹಸ್ಯ, ಎಲ್ಲಾ ವಿಚಿತ್ರ, ಎಲ್ಲಾ ರಸ, ಎಲ್ಲಾ ಸಾಹಸ, ಎಲ್ಲಾ ಪೂರ್ವವಾಸನೆ, ಎಲ್ಲಾ ಭವಿಷ್ಯದ್ ಧ್ಯೇಯಸಾಧನೆ, ಆಸೆ, ಭಯ, ಅಳಲು, ನಗೆ,

ಒಲವು, ಮುರಿವು, ಅಳುಕು, ಎದುರುಬೀಳು, ಒಳಗಿನ ಹೊರಗಿನ ಹೋರಾಟ, ಎದೆಯ ತಣ್ಣನೆಯ ತಂಪು—ಇವೆಲ್ಲವನ್ನೂ ಅನುಕರಿಸುವುದು, ಎಂದರೆ ಪುನಸ್ಸೃಷ್ಟಿಮಾಡಿ ಅನುಭವಕ್ಕೆ ತಂದುಕೊಡುವುದು : ತಾದಾತ್ಮ್ಯ, ತಲ್ಲೀನತೆಯನ್ನುಂಟುಮಾಡುವುದು—ತನ್ನ ಅಮೋಘವಾದ ದರ್ಶನವನ್ನು ಉತ್ತಮನಾಟಕದಲ್ಲಿ ರೂಪುಕೊಟ್ಟು ಉತ್ತಮ ನಟರ ಮೂಲಕ ಕಣ್ಣಿಗೆ ಕಟ್ಟಿ ಆನಂದಗೊಳಿಸುವುದು. ಚಿತ್ತ ಶುದ್ಧಿಗೊಳಿಸುವುದು, ಅನುಭವವೈಶಾಲ್ಯವನ್ನುಂಟುಮಾಡುವುದು, ಬದುಕನ್ನು ಹಿಗ್ಗಿಸುವುದು : ಈ ಪುಣ್ಯಫಲವನ್ನು ದೊರಕಿಸಿದರೆ ಸಣ್ಣ ಪುಟ್ಟ ಕಟ್ಟು ನಿಟ್ಟುಗಳನ್ನು ಮೀರಿ ಮುರಿದರೂ ಮಹಾಕವಿಗಳು ಧನ್ಯರು. ಅಂತಹ ನಾಟಕಗಳನ್ನು ನೋಡಿ (ಓದಿ ?) ಆನಂದ ಪಟ್ಟವನೂ ಧನ್ಯನು. ಏಕೆಂದರೆ ಮಾನವ ಜನ್ಮದುಃಖ ಈ ಆನಂದದಲ್ಲಿ ತೊಳೆದು ಹೋಗುವುದು : ಅಮೃತತ್ವ ಇಲ್ಲಿಯೇ ಕೈಗೂಡುವುದು.

ಚಕ್ರವರ್ತಿಯ ಮೆಚ್ಚಿಕೆ

ಕನ್ನಡದ ಜಯಭೇರಿಯನ್ನು, ನಾವು ಬಲ್ಲಮಟ್ಟಿಗೆ, ಮೊದಲು ಮೊಳಗಿಸಿ ಕನ್ನಡ ನಾಡಿನ ಮತ್ತು ಕನ್ನಡ ನುಡಿಯ ಹೆಮ್ಮೆಯನ್ನೂ, ಕನ್ನಡಿಗರ ಹಿರಿಮೆಯನ್ನೂ ಲೋಕಕ್ಕೆ ಸಾರಿದವನು ಒಬ್ಬ ದೊಡ್ಡ ಚಕ್ರವರ್ತಿ. ಕನ್ನಡ ನಾಡಿನ ಒಕ್ಕಟ್ಟಿಗೂ, ಕನ್ನಡ ಸಾಹಿತ್ಯದ ಮೇಲ್ಮೆಗೂ ರಾಜಮಾರ್ಗವನ್ನು ತೋರಿಕೊಟ್ಟವನು ಆ ಮಹಾನುಭಾವನು. ಆತನು ರಾಷ್ಟ್ರಕೂಟ ಸಮ್ರಾಜನಾದ, ಅಮೋಘವರ್ಷನೀತಿನಿರಂತರ, ಸರಸ್ವತೀತೀರ್ಥಾವತಾರ ಮುಂತಾದ ಬಿರುದುಗಳಿಂದ ಶೋಭಿಸುವ ನೃಪತುಂಗ. ಈತನು ಕ್ರಿ.ಶ. ೮೧೪ ರಿಂದ ೮೭೭ರ ವರೆಗೆ ಮಾನ್ಯಖೇಟದಲ್ಲಿ (ಈಗ ಮಾಲ್‌ಖೇಡ) ಆಳಿ ರಾಜ್ಯಾಧಿಕಾರವನ್ನು ತೊರೆದು ಜೈನಸನ್ಯಾಸಿಯಾಗಿ ಮುಕ್ತಿಮಾರ್ಗವನ್ನು ಹಿಡಿದನು.

ನಮ್ಮ ಸಾಹಿತ್ಯದಲ್ಲಿ ಇದುವರೆಗೆ ಸಿಕ್ಕಿರುವ ಗ್ರಂಥಗಳಲ್ಲಿ ಈತನ ಕವಿರಾಜ ಮಾರ್ಗವೇ ಮೊದಲನೆಯದು. ಕೆಲವರು ಇದನ್ನು ಈತನ ಆಸ್ಥಾನ ಕವಿಯೊಬ್ಬನು ಈತನ 'ಅನುಮತ'ದಿಂದ ಬರೆದನೆಂದು ಊಹಿಸುತ್ತಾರೆ. ಹೇಗಾದರೂ ಈ ಗ್ರಂಥಕ್ಕೆ ರಾಜಮುದ್ರೆಬಿದ್ದಿದೆ ; ಬರೆವ ಕೈ ಯಾವುದೇ ಆಗಲಿ, ಒಳ ಆತ್ಮ ನೃಪತುಂಗನದು.

ಆತನು ಕನ್ನಡ ನಾಡಿನ ವಿಸ್ತೀರ್ಣವನ್ನು ಹೀಗೆ ಹೇಳುತ್ತಾನೆ—

ಕಾವೇರಿಯಿಂದಮಾ ಗೋ
ದಾವರಿವರಮಿರ್ದ ನಾಡದಾ ಕನ್ನಡದೊಳ್
ಭಾವಿಸಿದ ಜನಪದಂ....
ಅದರೊಳಗಂ ಕಿಸುವೊಳಲಾ,
ವಿದಿತಮಹಾಕೊಪಣನಗರದಾ, ಪುಲಿಗೆರೆಯಾ,
ಸದಭಿಸ್ತುತಮಪ್ಪೊಂಕುಂ
ದದ, ನಡುವಣ ನಾಡೆ, ನಾಡೆ, ಕನ್ನಡದ ತಿರುಳ್.

ಅಂದರೆ ಕಾವೇರಿಯಿಂದ ಗೋದಾವರಿಯವರೆಗೆ ಹಬ್ಬಿರುವುದು ಕನ್ನಡ ನಾಡು ; ಅದರಲ್ಲಿಯೂ ಕಿಸುವೊಳಲು, ಕೋಪಣ, ಪುಲಿಗೆರೆ, ಒಂಕುಂದ ಈ ಊರುಗಳ ನಡುವೆ ಇರುವ ನಾಡು ಕನ್ನಡದ ತಿರುಳು.

ಕನ್ನಡಿಗರನ್ನು ಹೀಗೆ ಮೆಚ್ಚಿ ಅವರಿಗೆ ಪ್ರಶಸ್ತಿ ಪತ್ರಿಕೆಯನ್ನು ಕೊಟ್ಟಿದ್ದಾನೆ—

ಪದನರಿದು ನುಡಿಯಲುಂ, ನುಡಿ
ದುದನಾರಯಲುಂ, ಆರ್ಪರಾ ನಾಡವರ್ಗಳ್,
ಚದುರರ್ ನಿಜದಿಂ, ಕುರಿತೋ
ದದೆಯುಂ ಕಾವ್ಯಪ್ರಯೋಗಪರಿಣಮತಿಗಳ್.
ಕುರಿತವರಲ್ಲದೆ ಮತ್ತಂ
ಪೆರರುಂ ತಂತಮ್ಮ ನುಡಿಯೊಳೆಲ್ಲಂ ಜಾಣರ್
ಕಿರುಮಕ್ಕಳುಂ ಆ ಮೂಗರು
ಮರಿಪಲ್ಕರಿವರ್ ವಿವೇಕಮಂ ಮಾತುಗಳಂ

ಕನ್ನಡನಾಡಿನವರು ಸೊಗಸಾಗಿ ಮಾತಾಡಬಲ್ಲರು, ಆಡಿದ್ದನ್ನು ಒರೆ ಹಚ್ಚಬಲ್ಲರು, ಹುಟ್ಟುತ ಜಾಣರು, ಆವೇ ಕೆಲಸವಾಗಿ ಓದದೆಯೂ ಕಾವ್ಯ ಸಾರವನ್ನು ಹಿಡಿಯುವವರು, ಮಕ್ಕಳು ಮೂಗರು ಕೂಡ ವಿವೇಕವನ್ನು ಹೇಳ ಬಲ್ಲರು. ಕನ್ನಡಿಗರಲ್ಲಿ, ತನ್ನ ಪ್ರಜೆಗಳಲ್ಲಿ, ಏನು ಪ್ರೇಮ, ಏನು ಅಭಿಮಾನ, ನಮ್ಮ ಚಕ್ರವರ್ತಿಗೆ !

ಈ ಜನರ, ಈ ಹಿರಿಯದಾದ ನಾಡಿನ, ನುಡಿಯನ್ನು ಮೆರುಗು ಗೊಳಿಸಿ, ಒಂದುಗೂಡಿಸಿ, ದಿವ್ಯ ಸಾಹಿತ್ಯದಲ್ಲಿ ನಿಲ್ಲಿಸಲು ಆತನ ಅಕ್ಕರೆ ಆರ್ತಿ ಎಷ್ಟು ! ಮುಕ್ತಿಯ ಸೋಪಾನವಲ್ಲವೇ ಕಾವ್ಯ ?

ಪಾಪಮಿದು ಪುಣ್ಯಮಿದು ಹಿತ
ರೂಪಮಿದಹಿತಪ್ರಕಾರಮಿದು, ಸುಖಮಿದು ದುಃ
ಖೋಪಾತ್ತಮಿದೆಂದರಿಪುಗು
ಮಾ ಪರಮ ಕವಿ ಪ್ರಧಾನರಾ ಕಾವ್ಯಂಗಳ್.

ಪಾಪ ಇದು, ಪುಣ್ಯ ಇದು, ಹಿತ ಇದು, ಸುಖ ಇದು, ದುಃಖ ಇದು ಎಂದು ಆ ಪರಮ ಕವೀಶ್ವರರ ಕಾವ್ಯಗಳು ಅರುಹುವುವು. (ಹಳಗನ್ನಡಕ್ಕೆ ಹೆದರಬೇಡಿ, ಪ್ರಿಯವಾಚಕರಿರಾ : ಕೊಂಚ ಅಭ್ಯಾಸವಾದರೆ ದೊಡ್ಡ ಬೊಕ್ಕಸಕ್ಕೆ ನಿಮಗೆ ಬೀಗದಕೈ ಅದು.)

ಪ್ರಾಂತದ ದೇಶಿಗಳಿಗೆ ತೊಡರುಬೀಳದೆ ಕನ್ನಡ ನೆಟ್ಟಗೆ ಒಳ್ಳೆಯ ತಿರುಳು ಕನ್ನಡವಾಗಿರಬೇಕು ; ಗಂಭೀರವಾಗಿರಬೇಕು.

ದೋಸಮಿನಿತೆಂದು ಬಗೆದು
ದ್ಭಾಸಿಸಿ ತರಿಸಂದು ಕನ್ನಡಗಳೊಳೆಂದುಂ
ವಾಸುಗಿಯುಮರಿಯಲಾರದೆ
ಬೇಸರುಗುಂ ದೇಶಿ ಬೇರೆ ಬೆರ ಬೇರಪ್ಪುದರಿಂ

ಕೆಲವರು 'ಪಳಗನ್ನಡಮಂ ಪೊಲಗೆಡಿಸಿ ನುಡಿವರ್'—ಹಾಗೆ ಮಾಡಬಾರದೆಂಬುದು ನೃಪತುಂಗನ ಕಟ್ಟು. ಶೈಲಿ, ನಡೆ, ಹೇಗಿರಬೇಕು ? ಕೇಳಿ—

ನುಡಿಗಳೊಡಂಬಡಲ್ ಬಗೆದವೊಲ್ ಬಗೆಯಂ ಮಿಗಲೀಯದೊಂದೆ ನಾ
ಳ್ನುಡಿಯುಬೆಡಂಗೆ ಕನ್ನಡದ ಮಾತಿನೊಳ್, ಆ ವಿಕಟಾಕ್ಷರಂಗಳೊಳ್
ತೊಡರದೆ, ಸಕ್ಕದಂಗಳ ಪದಂ ಪವಣಾಗಿರೆ, ಮೆಲ್ಪುವೆತ್ತು ದಾಂ
ಗುಡಿವಿಡುವಂತೆ ನೀಳ್ದು ನಿಲೆ ಪೇಳ್ವುದು ನೀತಿನಿರಂತರಕ್ರಮಂ.

ಬಗೆಯೂ ನುಡಿಯೂ ಹೊಂದಿಕೊಳ್ಳಲಿ ; ನಾಡ ನುಡಿಯ ಬೆಡಗೇ ಕನ್ನಡದ ಮಾತಿನಲ್ಲಿ ಸೇರಿಕೊಳ್ಳಲಿ ; ಗಡುಚಿಲ್ಲದೆ ಮೆಲುವಾಗಿ ಬಳ್ಳಿ ಹಬ್ಬುವಂತೆ ಹಬ್ಬಲಿ ; ಸಂಸ್ಕೃತ ಹವಣಿನಲ್ಲಿ, ಮಿತಿಯಲ್ಲಿ, ಇರಲಿ. ಹೆಚ್ಚು ಮಾತು ಎಚ್ಚರಿಕೆ !

ಕಾವ್ಯಲಕ್ಷ್ಮಿ ಸರ್ವಾಂಗ ಸುಂದರಿಯಾಗಿರಲು, ದೋಷವನ್ನು ಸೋಸಿ ತಗೆಯಿರಿ ; ವರ್ಣನೆ, ಅಲಂಕಾರ (ಸುಮಾರು ೩೫-೪೦ ಸಾಕು), ರಸ, ಧ್ವನಿ—ಇವುಗಳನ್ನು ಉಚಿತವಾಗಿ ಬಳಸಿ. ಹಿಂದಿನ ಹಿರಿಯ ಕವಿಗಳನ್ನು ನೆನೆದು ಅವರ ಶಕ್ತಿಯನ್ನು ತುಂಬಿಕೊಳ್ಳಿ. (ಹಿಂದಿನ ಕೆಲವು ಗದ್ಯಪದ್ಯ ಕವಿ

ಗಳ ಹೆಸರನ್ನೂ ಒಂದು ರಾಮಾಯಣದಿಂದ ಉದಾಹರಣೆಗಳನ್ನೂ ಎತ್ತಿ ಕೊಟ್ಟಿದ್ದಾನೆ—ಈ ಶ್ಲೋಕವನ್ನು ನೋಡಿ :

ತಾರಾ ಜಾನಕಿಯುಂ ಪೋಗಿ ತಾರಾ ತರಳನೇತ್ರೆಯುಂ
ತಾರಾಧಿಪತಿ ತೇಜಸ್ವಿ ತಾರಾದಿವಿಜಯೋದಯಾ.

ಯಾರಿಗಾದರೂ ಜೀವನದ ಮೂಲ ಮಂತ್ರವಾಗಬಹುದಾದ, ಅದರಲ್ಲೂ ಕನ್ನಡಕ್ಕಾಗಿ ಹೋರಾಡುತ್ತಿರುವವರಿಗೆ ಧೈರ್ಯವನ್ನು ಕೊಡಬಲ್ಲ ನೀತಿನಿರಂತರನ ಈ ನೀತಿವಾಕ್ಯವನ್ನು ಮರೆಯದಿರೋಣ—

ಮಿಗೆ ಪಳಿವರೆನ್ನನೆನ್ನದೆ,
ಪೊಗಳ್ವರ್ ನೆರೆದೆಲ್ಲರೆನ್ನನೆನ್ನದೆ, ತನ್ನೊಳ್
ಬಗೆದುಭಯಲೋಕಹಿತದೊಳ್
ನೆಗಳೆ, ಜನಂ ಪಳಿಗೆ ಪೊಗಳ್ಗೆ ತನಗೇನದರೊಳ್ !

ಅಂದು ಚಕ್ರವರ್ತಿಯ ಆಶೀರ್ವಾದ ; ಇಂದು ನಮ್ಮನ್ನಾಳುವ ರಾಜರ್ಷಿಗಳ ಉದಾರ ಘೋಷಣೆ : ಕನ್ನಡ ಗೆದ್ದೇ ಗೆಲ್ಲುವುದು. ೪.೧೦.೧೯೩೮

ಕವಿ ಕಂಡ ನಾಡು

ಚಕ್ರವರ್ತಿಯ ಕಣ್ಣು ನಾಡನ್ನು ಕಟ್ಟಿ, ಮಂದಿಯನ್ನು ಒಂದುಗೂಡಿಸಿ ನಾಡನುಡಿಯನ್ನು ಹಸನು ಮಾಡಿ ಅದರಿಂದ ಪುಣ್ಯದ ಬೆಳೆಯನ್ನು ತೆಗೆಯುವಂತೆ ರಾಜಮಾರ್ಗವನ್ನೇರ್ಪಡಿಸುವುದರ ಮೇಲೆ. ಕವಿಯ ಕಣ್ಣೋ ? ರವಿ ಕಾಣದ್ದನ್ನು ಕಂಡು, ಆನಂದದಿಂದ ಉಬ್ಬಿ, ಮಣ್ಣನ್ನು ಹೊನ್ನು ಮಾಡಿ ಜನರ ಹೃದಯದಲ್ಲಿ ಅಮೃತವನ್ನು ತುಂಬುವುದು. ಕವಿಯಿಲ್ಲದ ನಾಡು ಕುರುಡು ನಾಡು. ಕವಿ ಕಣ್ಣು ಕೊಟ್ಟ ನಾಡು ಬಿಡುಗಣ್ಣರ ಬೀಡು.

ಅದೋ ಪಂಪ ! ಕಪ್ಪು ಬಾನ ಕೆಳಗೆ ಕನ್ನಡನಾಡ ಸಿರಿಯನ್ನು ಹಾಡುತ್ತಿದ್ದಾನೆ. ಜಲಜಲನುಕ್ಕಿ ಹರಿಯುವ ಕಾಲುವೆ, ಕಾಲುವೆಯಲ್ಲಿ ಸೊಕ್ಕಿ ಬೆಳೆಯುವ ಹೊಸ ನೆಯ್ದಿಲ ಹೂವು, ನೆಯ್ದಿಲ ಸೊಕ್ಕುಗಂಪನ್ನು ಬೀರುತ್ತ ಕೆಂದೆನೆಗೆ ಜೋಲುವ ನೆಲ್ಲು, ಆ ತೆನೆಗೆ ಹಾಯುತ್ತಿರುವ ಗಿಳಿಗಳ ಬಳಗ, ಹೆಚ್ಚಗೆ ಹಬ್ಬಿ ಬೆಳೆಯಿಂದ ಬಾಗಿದ ಕೈ ಹೊಲ, ಕೈಹೊಲವನ್ನು ಬಳಸಿದ ಹೂವು ತುಂಬಿದ ಹೂಗೊಳ, ಹೂಗೊಳಗಳನ್ನು ಬಳಸಿದ ಸುಂದರ ನಂದನ

ವನಗಳು, ಅವನ್ನು ಬಳಸಿ ಸುತ್ತಾಡುವ ದುಂಬಿ. ತಂಬೆಲರಿಗೆ ಹಾರುವ ಭೂಲಕ್ಷ್ಮಿಯ ಕುಂತಳ ! ಯಾವ ನಾಡನ್ನು ಸರಿಮಾಡುವುದು ಈ ನಾಡಿಗೆ ? ಒಪ್ಪಿ ತೋರಿ ಸಿರಿ ನೋಡುವುದು ಎಲ್ಲೆಲ್ಲಿಯೂ ಇಲ್ಲಿ. ಅಡವಿಯೇ, ಲಲಿತ ವಿಚಿತ್ರ ಪತ್ರಫಲ ಪುಷ್ಪದಿಂದ ಕೂಡಿ ಸೊಕ್ಕಿದಾನೆಯನ್ನು ಬೆಳೆಯುವುದು ; ಹೊಲವೇ, ನುಳಿತಾಯಿ ಕಾಪಾಡಿ ಸುಗಂಧ ಹೊಮ್ಮಿದ ಸೆಲ್ಲನ್ನು ಬೆಳೆಯುವುದು ; ರಮ್ಯನಂದನವನಗಳೇ ಪ್ರೇಮಿಗಳಿಗೆ ಬೇಟವನ್ನು ಬೆಳೆಯುವುದು ;—ಈ ನಾಡಿನಲ್ಲಿ ನಾಡ ಕಾಡ ಬೆಳಸು.

ಅವಲರುಂ ಪಣ್ಣುಂ ಬೀ
ತೋವವು ಗಡ ಬೀಯವಲ್ಲಿ ಮಲ್ಲಿಗೆಗಳುಂ ಇ
ಮ್ಮಾವುಗಳುಂ ಎಂದೊಡಿನ್ ಪೆಜ
ತಾವುದು ಸಂಸಾರಸಾರ ಸರ್ವಸ್ವಫಲಂ !

ಯಾವ ಹೂವೂ ಹಣ್ಣೂ ಬೀತುಹೋಗವು ; ಮಲ್ಲಿಗೆಗಳೂ, ಇಮ್ಮಾವೂ ಅಲ್ಲಿ ಬೀಯವು ; ಎಂದಮೇಲೆ ಬೇರೆ ಏನಿದೆ ಸಂಸಾರಸಾರ ಸರ್ವಸ್ವಫಲ ?

ಇನ್ನೂ ಕೇಳಿ ನಮ್ಮ ಚೆಲುವ ಕನ್ನಡನಾಡ ಸಿರಿಯನ್ನ—

ಮಿಡಿದೊಡೆ ತನಿಗರ್ಬುರಸಂ
ಬಿಡುವುವು, ಬಿರಿದೊಂದು ಮುಗುಳ ಕಂಪಿನೊಳ್ ಮೊಗಂ
ಗಿಡುವುವು ತುಂಬಿಗಳ್, ಅಟ್ಕಮೆ
ವಡುವುವು ಕುಡಿದೊಂದು ಪಣ್ಣ ರಸದೊಳ್ ಗಿಳಿಗಳ್ ।

ಹದವಾದ ಕಬ್ಬುಗಳು ಮಿಡಿದರೆ ರಸಬಿಡುತ್ತವೆ. ಬಿರಿವ ಒಂದು ಮೊಗ್ಗಿನ ಕಂಪೇ ಸಾಕು, ಮೊಗಗೆಡುತ್ತವೆ ತುಂಬಿಗಳು ! ಒಂದೇ ಒಂದು ಹಣ್ಣು ಸಾಕು, ರಸ ಕುಡಿದು, ಅರಗಿಸಿಕೊಳ್ಳಲಾರದೆ ಅಜೀರ್ಣಪಡುತ್ತವೆ ಗಿಳಿಗಳು ! ಆಹ ! ಏನು ಬೆಳೆ, ಏನು ಹೊರವು, ಏನು ಹುಲುಸು !

ಸುತ್ತಿಱಿದ ರಸದ ತೊಱೆಗಳ್;
ಮುತ್ತಿನ ಮಾಣಿಕದ ಪಲವುಮಾಗರಮೆ, ಮದೋ
ನ್ಮತ್ತ ಮದಕರಿ ವನಂಗಳ್,
ಸುತ್ತಲುಂ ಆ ನೆಲದ ಸಿರಿಯುಸೇನಂ ಪೊಗೞ್ವೆಂ

ಎಲ್ಲಿ ನೋಡಿ, ಸುತ್ತಿಱಿದ ರಸದ ತೊರೆಗಳೆ ; ಮುತ್ತಿನ ಮಾಣಿಕದ

ಹಲವು ತೋಡು ಬೀಡುಗಳೆ ; ಸೊಕ್ಕಿ ಹುಚ್ಚು ಹಿಡಿದಂತೆ, ಮದದಾನೆಗಳು ನುಗ್ಗುವ ಕಾನುಗಳೆ :—ಆ ನೆಲದ ಸಿರಿಯನ್ನು ಏನೆಂದು ಹೊಗಳಲಿ !

ಮಳೆ, ಹೊಳೆ, ಕಾಡಬೆಳೆ ನಾಡಬೆಳೆ—ಇಂದಿಗೂ ಕನ್ನಡನಾಡ ಸಿರಿ ಪಂಪ ಕಂಡದ್ದೇ ನಾವು ಕಾಣುವುದೂ ಅಲ್ಲವೆ ? ಬೆಳೆಯಲಿ ಒಂದು ಹತ್ತಾಗಿ. ಹತ್ತು ನೂರೆಸಳಾಗಿ ಕನ್ನಡನಾಡು !

* * * *

ಕನ್ನಡ ನಾಡಿನ ಹೂವುಗಳೋ ! ಮೈಸೂರಿನ ಕೋಟೆಯಲ್ಲಿ ನಾವು ಹುಡುಗರಾಗಿದ್ದಾಗ ನೋಡಿದ್ದ ಹೂವಿನಂಗಡಿ ಸಾಲು, ಈಗಲೂ ಯಾವ ಹಳ್ಳಿ ಯಾವ ಊರಲ್ಲಾದರೂ ಚೆಲುವೆಯರು ಕಟ್ಟಿ ಮಾರುವ, ಬಿಡಿತೋರುವ, ಮುಡಿ ಹೇರುವ ಅರಳುಗಳು !—ತಡೆಯಿರಿ, ಪಂಪನನ್ನು ಕೇಳುವ ಎಲ್ಲೋ ಉತ್ತರದೇಶದಲ್ಲಿ ಯಾವನೋ ಭರತನಂತೆ, ತನ್ನ ಮೇಳದಾಕೆಗಳ ಕೂಡ ಯಾವುದೋ ವನವನ್ನು ಹೊಕ್ಕನಂತೆ ಹಿಮದ ಬೆಟ್ಟದ ತಪ್ಪಲಲ್ಲಿ ! ಎಲಾ ಪಂಪ, ನಿಜ ಹೇಳು—ದಿಟ ಹೇಳಿದರೂ ಒಪ್ಪುತೇವೆ—ಸುಳ್ಳು ಹೇಳಿದರೂ ಒಪ್ಪುತೇವೆ—ಮಾಟಗಾರ ನೀನು, ಆಟಗಾರ ನೀನು: ಕನ್ನಡನಾಡಿನ ಹೂವುಗಳನ್ನು ಎದೆಯಲ್ಲಿ ಹುದುಗಿಸಿಟ್ಟುಕೊಂಡು ನಾಲಗೆಯ ತುದಿಯಲ್ಲಿ ಉತ್ತರದೇಶವೆಂದು ಹೊರಳಿಸುತ್ತಿಲ್ಲವೇನಯ್ಯಾ ನೀನು-ಹೇಳು, ಹೇಳು, ಬಲ್ಲೆವು ನಾವು.

> ಕೊಳಗಳ, ಮರಗಳ, ಲತೆಗಳ
> ಫಳಪ್ರಸೂನಂಗಳೊದವಿನೋಳ್, ಪಕ್ಷಿಗಣಂ
> ಗಳ ಪುದುವಿನೊಳ್ ಅಱುಂ ಋತು
> ಗಳ ಚೆಲ್ವಂ ಕಾಣಲಾದುದಾ ನಂದನದೊಳ್.

ಆಗಲಿ, ಆಗಲಿ, ಮುಂದೆ—

> ಪಸುರ್ ನನೆಯೊಳಿಡಿದ ಮಲ್ಲಿಗೆ—

ಹಸುರು ಮೊಗ್ಗೊ, ಇಡಿದಿದೆಯೋ, ಆಗಲಿ, ಮುಂದೆ—

> ನನೆಯಿಂ
> ಮುಸುಕಿದ್ದ, ತಳಿರಂ ಪೇಱುದ
> ಪೊಸಮಾವುಗಳಿಂ ಬಸಂತಮೆಸೆದಪುದಿದಱಿೞೊಳ್.

ಹಾಗೆ ಬಾ, ಕನ್ನಡ ನುಡಿಗಳು ಬರಲಿ—ಹುರುಳಾದ, ತಿರುಳಾದ, ಇಂಪಾದ,

ಸೊಂಪಾದ, ತಾಯಾದ, ತವರಾದ, ನಮ್ಮ ಕನ್ನಡನುಡಿಗಳು ಬರಲಿ—ನೀನಲ್ಲದೆ ಯಾರಣ್ಣ ಕನ್ನಡಕ್ಕೊಡೆಯ ? ಸುರಿ, ನಿನ್ನ ಬೊಕ್ಕಸವನ್ನ !

ಪಾದರಿ ಪೂತುವು ತೋರಿದು
ವಾದುವು ಮಲ್ಲಿಗೆಗಳ್, ಎಯ್ದೆ ಪಣ್ತುವು ಮಾವು

ಏನಣ್ಣಾ, ಮಾವು, ಮಲ್ಲಿಗೆ : ಮಲ್ಲಿಗೆ; ಮಾವು—ಅಲ್ಲಿಗೇ ಬರಬೇಕೋ ನೀನು ಬಳಸಿಕೊಂಡು, ನೆನಸಿಕೊಂಡು ?

'ತಳಿರೊಳ್ಗೊಂಬಿನೊಳ್ ಊಳ್ವ ಕೋಕಿಳಕುಳಂ'—ಅಯ್ತು, ಕೋಗಿಲೆ: ಪೂಗೊಂಬಿನೊಳ್ ಪಾಡುತಿರ್ಪಳಿವೃಂದಂ—ಓಹೋ, ದುಂಬಿ! —'ತುಱುಗಿರ್ದ ಒಲ್ಮಿಡಿಯ ತೂಗುಂಗೊಂಬಿನೊಳ್ ಪಾಯ್ದು ಬಂಡುಳಿಸುತ್ತಿರ್ಪ ಶುಕಾಳಿ'—ಗಿಳಿ—'ತಮ್ಮ ಬೆಸದಿಂ ತಂತಮ್ಮ ಠಾಣಾಂತರಂಗಳೊಳಿರ್ದಂಗಜ ತಂತ್ರದಂತೆಸೆವಿನಂ, ಚೆಲ್ವಾದುವಿಮ್ಮಾವುಗಳ್', ತಳಿಗೊಂಬು—ಕೋಗಿಲೆ; ಪೂಗೊಂಬು—ದುಂಬಿ; ತೂಗುಂಗೊಂಬು-ಗಿಳಿ : ತಮ್ಮ ತಮ್ಮ ತಾಣಗಳಲ್ಲಿ ಮನ್ಮಥನ ಕೆಲಸವನ್ನು ತಾವು ತಾವು ನಡಸುತ್ತಿವೆಯೋ ಇಮ್ಮಾವಿನಲ್ಲಿ ? ಬೇರೆ ಮರಗಳಿಲ್ಲವೋ ಇವಕ್ಕೆ ?

ತಳಿರೊಳ್ ನೀನೆ ಬೆಡಂಗನೈ ನನೆಗಳೊಳ್ ನೀನ್ ನೀಱನೈ ಪುಷ್ಪಸಂ
ಕುಳದೊಳ್ ನೀನೆ ವಿಳಾಸಿಯೈ ಮಿಡಿಗಳೊಳ್ ನೀನ್ ಚೆಲ್ವನೈ ಪಣ್ತ ಪ
ಣ್ಗಳಿಸೋವೋ ಪೆಱತೇನೋ ನೀನೆ ಭುವನಕ್ಕಾರಾಧ್ಯನೈ ಭೃಂಗಕೋ
ಕಿಳಕೀರಪ್ರಿಯ ಚೂತರಾಜ ತರುಗಳ್ ನಿನ್ನಂತೆ ಚೆನ್ನಂಗಳೇ।

ವಹವ್ವಾ ! ಮಹಾ ಕವಿ, ನೀನೆ ಬೆಡಂಗನ್ನೈ, ನೀನ್ ನೀಱನ್ನೈ, ನೀನೆ ವಿಳಾಸಿಯ್ಯೈ, ನೀನ್ ಚೆಲ್ವನ್ನೈ, ನೀನೇ ಭುವನಕ್ಕಾರಾಧ್ಯನ್ನೈ, ಕರ್ನಾಟಕ ಸೌಂದರ್ಯಪ್ರಿಯ, ಕವಿರಾಜ, ಕವಿತಾ ಗುಣಾರ್ಣವ, ಕವಿಗಳ್ ನಿನ್ನಂತೆ ಚೆನ್ನಗಳೇ !

ವಿರಹಿಗಳಂ ತೆರಳ್ಚಿ ತುಱುವಲ್ಲಿಗೆ ನೀನ್ ನೆರಮೆನ್ನೊಳಕ್ಕೆ ನೀನ್
ಬರೆ ಭುವನಂಗಳೊಳ್ ನೆಗೞ್ದುದೀ ಮಧುಮಾಸಮುಮ್, ಈಬನಕ್ಕೆ ನೀನ್
ಅರಸನೆ, ಎನ್ನ ರಾಜ್ಯವಿಭವಕ್ಕೆಲೆ ನೀನೆ ದಳೆಂದು ಬಂದ ಮಾ
ಮರನನೆ ಮಾಱುಸೂೞ್ ಪಿಂದುಮಕ್ಕೆಱ ನಿನ್ ಬಲವಂದನಂಗಜನ್.

ಅಗಲಿದ ಇನಿಯರನ್ನು ತುಳಿಯುವುದಕ್ಕೆ ಕಾಮುನಿಗೆ ಬಂದ ಮಾವಿನ ಮರ ನೆರವಾಗಬೇಕು; ಮಾವು ಬಂದರೆ ಲೋಕಕ್ಕೆ ಮಧುಮಾಸವೂ

ಬಂದೀತು; ಈ ವನಕ್ಕೆ ಮಾವೇ ಅರಸು; ನನ್ನ ರಾಜ್ಯವೈಭವಕ್ಕೆ ನೀನೇ ಸರಿ ಎಂದು ಮನ್ಮಥ ಮೂರುಸಾರಿ ಪ್ರದಕ್ಷಿಣೆ ಮಾಡಿದನಂತೆ ಪ್ರೀತಿಯಿಂದ!

ಅಂತಃಪುರ ಸ್ತ್ರೀಯರು ವನದಲ್ಲೆಲ್ಲಾ ಸುಳಿದಾಡಿ, ಹೊನ್ನೆಯರಳು, ಸುರಗಿಯ ಮುಗುಳು, ಪೊಗಡೆಯ ಹೂವು, ಇರುವಂತಿ, ಅದಿಮುರ್ಗೆ, ಜಾಜಿ, ಮೊಲ್ಲೆ—

ಪುಲ್ಲಶರಂಗಿಸುವೆಡೆಗಿವೆ
ನಲ್ಲುಂಬುಗಳೆನಿಸಿ ತುಱುಗಿ ಮಲರ್ದಲರ್ದೆಸೆವೀ
ಮೊಲ್ಲೆಯುಮ್, ಒಲಿಸಿದ ನಲ್ಲರ
ಲಲ್ಲೆಯುಮ್, ಆರಾರ ಮನಮುಮನ್ ಸೋಲಿಸವೇ!

ಪಾದರಿ, ಸುರಹೊನ್ನೆ—

ಎಸಳ್ಗಳನೆಂಟ್ಟಿ ಕಂಡರಿಸಿ ಮುತ್ತಿನೊಳ್, ಅಲ್ಲಿ ಸುವರ್ಣಚೂರ್ಣಮನ್
ಪಸರಿಸಿ ಕೇಸರಾಕೃತಿಯೊಳ್, ಅಲ್ಲಿಗೆ ಕರ್ಣಿಕೆಯಂದಮಾಗೆ ಕೀ
ಲಿಸಿ ಪೊಸತಪ್ಪ ಮಾಣಿಕದ ಸುಣ್ಬರಲನ್ ಮಧುಮನ್ಮಥಂಗೆ ಬ
ಣ್ಣಿಸಿ ಸಮೆದಂತೆ ತೋಱುವುದು ಪೂಗಳೊಳೇನ್ ಸುರಹೊನ್ನೆ ಚೆನ್ನನೋ!

ಕಣಿಗಲೆ, ಸಂಪಗೆ—

ಪಡೆದೊಡೆ ಕಂಪಂ ಬಣ್ಣಂ
ಬಡೆಯವು ಬಣ್ಣಮನೆ ಪಡೆದುವಪ್ಪೊಡೆ ಕಂಪಂ
ಪಡೆಯವು ಉಳಿದಲರ್ಗಳ್ ಎರಡುಮನ್
ಒಡವೆಳೆದೀ ಚಂಪಕಕ್ಕೆ ಪೂಗಳ್ ದೊರೆಯೇ?

ಕೇದಗೆ, ಚೆನ್ನೈದಿಲು, ಬಕುಳ, ಗೊಜ್ಜಗೆ (ಸೇವಂತಿಗೆ)–ಇದ್ದಬದ್ದ ಹೂವುಗಳನ್ನೆಲ್ಲಾ ಕೊಯ್ದರಂತೆ. 'ಭಿನ್ನರುಚಿಗಳಾಗಿ ತಂತಮ್ಮ ಮೆಚ್ಚಿದಿಚ್ಚೆಯ ಪೂಗಳನೆ' ಪೊಗಟ್ಟಿರಂತೆ.

ಮಲ್ಲಿಗೆ, ಮಾವು: ಮಾವು, ಮಲ್ಲಿಗೆ! ಮಲ್ಲಿಗೆಯನ್ನು ಪಂಪನೇ ಹೊಗಳಲಿ.

ಮಗಮಗಿಸಲ್ಕೆ ಮಂದಯಿಸಿ ದಿಕ್ತಟಮನ್ ಬಳಸಲ್ಕೆ ಪೀರ್ವ ತುಂ
ಬಿಗೆ ತಣಿಪಲ್ಕೆ ನಮ್ಮ ಜಸಮನ್ ಬೆಳಗಲ್ಕೆ ಇವೆ ಸಾಲ್ಗುಮೆಂದು ತ

ಳ್ತಗಲದಲಂಪಿನಿನ್ ಮಧುಮನೋಭವರಿರ್ವರುಮ್ ಆಟ್ತ್ರಿವಟ್ಟು ಮ
ಲ್ಲಿಗೆಗೆ ಬಸಂತದೊಳ್ ಬಯಸಿ ಮಾಡಿದರಲ್ಲದೆ ಪಟ್ಟ ಬಂಧಮನ್.

ಸೊಡರ ಬೆಳಗಿನೊಳ್ ಕೊರಗುವ ಜಾಜಿಯನ್ ತುಂಬಿಂಗೊಳ್ ಪಗೆಗೊಂಡ ಸಂಪಗೆಯನ್
ಮುಡಿಯೆ ಸೊಗಯಿಸಿದದಿರ್ಮುತ್ತೆಯಲರನ್ ಮುಸಿಯೊಳ ಸಮನಾದ ಗೊಜ್ಜುಗೆಯನ್
ನುಡಿಯಲಕ್ಕುಮೆ ಪೂಗಳ ಲೆಕ್ಕಮನೆಂದೆಯ್ದೆ ಕಾಮನೊಡ್ಡೋಲಗದೊಳ್
ಮುಡಿಗೆಯಿಕ್ಕಿಯುಂ ಕೈಯನೆತ್ತಿ ಪೊಗೞ್ದಂ ತಣಿಯನೆ ಮದನನುಂ ಮಲ್ಲಿಗೆಯನ್

ಪರೆಯೆ ಪಸುರ್ಪು, ಬೆಳ್ಪಡರೆ ಬಲ್ಮುಗುಳೊಳ್ ಪೊರೆದೋಱಿ ತಂಬೆಲರ್
ಪೊರೆಪೊರೆಯಂ ಸಡಿಲ್ಚೆ ನಡುಪೊಂಗಿರೆ ಮಲ್ಲಿಗೆಗಳ್ ವಸಂತದೊಳ್
ಬಿರಿದೊಡೆ ನಲ್ಲರನ್ ನೆನೆದು ನಲ್ಲರ ಮೆಲ್ಗೆರ್ದೆಗಳ್ ನಿರಂತರಂ
ಬಿರಿವುವದೆಂತೋ । ಮಲ್ಲಿಗೆಗೆ ನಲ್ಲರ ಮೆಲ್ಲೆರ್ದೆ ಮೇಳಗೊಂಡುದೋ ।

ಅದೇನು ತುಂಬಿಕೊಂಡಿದ್ದನೋ ಪಂಪ ಕನ್ನಡನಾಡ ಚೆಲುವನ್ನ ಎದೆಯಲ್ಲಿ, ಬನವಾಸಿಯನ್ನು ಹೊಗಳುವಾಗ ಉಕ್ಕಿ ಹರಿದುಹೋಗುತ್ತದೆ, ಎದ್ದೆದ್ದು ಅಲೆಯಾಗಿ ಚಿಮ್ಮುತ್ತದೆ, ಆತನ ಅಭಿಮಾನ, ದೇಶಭಕ್ತಿ, ಒಲುಮೆ, ಹೆಮ್ಮೆ—ನೃಪತುಂಗನ ಕನ್ನಡನಾಡಿನ ಹರವಿನ ಸೊಬಗಿನ, ಅಮೋಘ ಶಾಸನದಂತೆಯೇ, ಪಂಪನ ಈ ನಾಲ್ಕು ಪದ್ಯಗಳ ಕನ್ನಡನಾಡಿನ ಶ್ರೇಷ್ಠತೆಯ ಘೋಷಣೆ—ಇವನ್ನು ಪ್ರತಿಯೊಬ್ಬ ಕನ್ನಡಿಗನೂ, ಕನ್ನಡಿತಿಯೂ, ಕನ್ನಡ ದೆಳೆಯ ಮಗುವೂ, ಎದೆಯಲ್ಲಿ ಹದಿದಿಟ್ಟುಕೊಳ್ಳಬೇಕು ಜೀವನದ ವಿಕಾಸವನ್ನು ಇದರ ಕಾಂತಿಯಲ್ಲಿ, ಹೊಂಬೆಳಕಿನಲ್ಲಿ ಸಾಧಿಸಿಕೊಳ್ಳಬೇಕು.

ಸೊಗಯಿಸಿ ಬಂದ ಮಾಮರನೆ, ತಳ್ತೆಲೆವಳ್ಳಿಯೆ, ಪೂತ ಜಾತಿ ಸಂ
ಪಗೆಯೆ, ಕುಕಿಲ್ವ ಕೋಗಿಲೆಯೆ, ಪಾಡುವ ತುಂಬಿಯೆ, ನಲ್ಲರೊಳ್ಮೊಗಂ
ನಗೆಮೊಗದೊಳ್ ಪಳಂಚಲೆಯೆ ಕೂಡುವ ನಲ್ಲರೆ, ಸೋಲ್ಪೊಡಾವ ಬೆ
ಟ್ಟುಗಳೊಳಂ ಆವ ನಂದನವನಂಗಳೊಳಂ, ಬನವಾಸಿ ದೇಶದೊಳ್.

ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ
ಳ್ಗಾಗರಮಾದ ಮಾನಸರೆ ಮಾನಸರ್ ಅಂತವರಾಗಿ ಪುಟ್ಟಲೇ

ನಾಗಿಯುಮೇನೊ ತೀರ್ದಪುದೆ, ತೀರದೊಡಂ ಮಱಿದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್.

ತೆಂಕಣಗಾಳಿ ಸೋಂಕಿದೊಡಮ್, ಒಳ್ನುಡಿಗೇಳ್ದೊಡಮ್ ಇಂಪನಾಳ್ದ ಗೇ
ಯಂ ಕಿವಿವೊಕ್ಕಡಮ್, ಬಿರಿದಮಲ್ಲಿಗೆಗಂಡೊಡಮ್, ಆದಕೆಂದಲಂ
ಪಂ ಗೆಡೆಗೊಂಡೊಡಮ್ ಮಧುಮಹೋತ್ಸವಮಾದೊಡಂ, ಏನನೆಂಬೆನ್ ಆ
ರಂಕುಸಮಿಟ್ಟೊಡಂ, ನೆನೆವುದೆನ್ನ ಮನಂ ಬನವಾಸಿ ದೇಶಮನ್.

ಅಮರ್ದಂ ಮುಕ್ಕುಳಿಪಂತುಟಪ್ಪ ನುಡಿಗೊಂದಿಂಪುಂ, ತಗುಳ್ದೊಂದು ಗೇ
ಯಮುಮ್, ಅವಕ್ಕರಗೊಟ್ಟಯುಂ ಚದುರರೊಳ್ವಾತುಂ ಕುಳಿರ್ ಕೋೞ್ಪ ಜೊಂ
ಪಮುಮ್, ಏವೇೞ್ಪುದನುಳ್ಳ ಮೆಯ್ಸುಕಮುಮ್, ಇಂತೆನ್ನನ್ ಕರಂ ನೋಡಿ ನಾ
ಡೆ ಮನಂಗೊಂಡಿರೆ ತೆಂಕನಾಡ ಮಱಿಯಲ್ಕಿನ್ನೇನ್ ಮನಂ ಒರ್ಕ್ವಮೇ.

ಕನ್ನಡನಾಡನ್ನು ಕಣ್ತುಂಬ, ಎದೆ ತುಂಬ, ನೋಡಿಕೊಂಡು, ಹೋಗಲಾರದೆ ಹೋದ ಅರ್ಜುನ ತಮ್ಮೂರಿನಿಂದ ನೆನೆಸಿಕೊಳ್ಳುವನಂತೆ ಹೀಗೆ :- ಈಗ ಮಾದರಿಯ ಮೈಸೂರನ್ನು ಲೋಕದ ಎಲ್ಲಾ ಕಡೆಗಳಿಂದಲೂ ಬಂದು ಬಂದು, ನೋಡಿನೋಡಿ, ನೆನೆಸಿಕೊಳ್ಳುತ್ತಿರುವಂತೆ ಚಕ್ರವರ್ತಿಗಳು, ಬಡವರು, ಮರೆಯಲಾರದೆ. ಎಲ್ಲಿ ಹುಟ್ಟಿ, ಎಲ್ಲಿ ಸೇರಿ, ಪಂಪ ನೆನೆಸಿಕೊಳ್ಳುತ್ತಿದ್ದನೋ! ಅದೇ ತೊಳಲಿಕೆ—ಮಾವಿನಮರ, ಮಲ್ಲಿಗೆ; ಕೋಗಿಲೆ, ತುಂಬಿ; ಬೆಟ್ಟ, ಹೊಲ, ನಂದನವನ; ನಲ್ಲರೋ ನಲ್ಲರು; ಎಲ್ಲೆಲ್ಲೂ ನಲ್ಲರು; ತ್ಯಾಗವೋ, ಭೋಗವೋ, ಸಾಹಿತ್ಯವೋ, ಸಂಗೀತವೋ, ಗೋಷ್ಠಿಯೋ, ಸಮ್ಮೇಳನಗಳೋ, ಏಸು ಜನ! ಹಾಗಿದ್ದರಲ್ಲವೇ ಮನುಷ್ಯ! ಹಾಗಲ್ಲವೇ ಕನ್ನಡ ಮಂದಿ; ಅಂತಹ ಮನುಷ್ಯರಾಗಿ ಸುಮ್ಮನೆ ಹುಟ್ಟಲಿಕ್ಕಾದೀತೇನಣ್ಣಯ್ಯ? ಆಗುವುದಿಲ್ಲ. ಬಹುಜನ್ಮದ ಪುರಾಕೃತಪುಣ್ಯ ಬೇಕದಕ್ಕೆ! ಮೊದಲು ಒಂದು ಮರಿದುಂಬಿಯಾಗಿ, ಇಲ್ಲ ಒಂದು ಕೋಗಿಲೆಯಾಗಿ ಹುಟ್ಟಿ—ಕನ್ನಡನಾಡಿನಲ್ಲಿ—ಮೆಲ್ಲಗೆ ಮುಕ್ತಿಸೋಪಾನವನ್ನು ಹತ್ತುವೆ, ಮೆಟ್ಟಿಲು ಮೆಟ್ಟಲಾಗಿ. ಯಾವ ಪರದೇಶದಲ್ಲಿರು—ಒಂದು ತೆಂಗಾಳಿ ಸೋಕಲಿ, ಒಂದು ಒಳ್ಳೆಯ ನುಡಿ ಕಿವಿಗೆ ಬೀಳಲಿ, ಇಂಪಾದ ಹಾಡುಗಾರಿಕೆ ಎದೆಯನ್ನು ಹೊಗಲಿ, ಬಿರಿದ ಒಂದು ಮಲ್ಲಿಗೆ ಕಾಣಲಿ, ಪ್ರೇಮಸುಖ ಆನಂದದ ಸಖನಾಗಿ ಕೂಡಿಬರಲಿ, ವಸಂತೋತ್ಸವಗಳಾಗಲಿ : ಅದೇನು ಮಾಯವೋ, ಅದೇನು ಮೋಹವೋ, ಯಾರು ಅಂಕುಶವಿಟ್ಟರೂ ಮನಸ್ಸು ಕನ್ನಡನಾಡ ಕಡೆ ತಡೆಕಿತ್ತು ಸೊಕ್ಕಾನೆ

ಯಂತೆ ನುಗ್ಗುವುದು. ಅಪ್ಪುತವನ್ನು ಮುಕ್ಕಳಿಸಿದಂತಹ ಒಲುಮೆಯ ನಲುಮೆ; ಇಂಪಾದ ಹಾಡು, ಓದು, ಮಾತು; ತೋಟದ ತಂಪು; ಏನು ಬೇಕು, ಏನು ಬೇಡಬಹುದು, ಆ ಎಲ್ಲಾ ಸೌಖ್ಯ, ಸೌಭಾಗ್ಯ: ಕನ್ನಡ ನಾಡನ್ನು, ನಾಡಿಗರನ್ನು, ನೋಡಿ ನಾಟಕೊಂಡಿರುವಾಗ ಮನಸ್ಸಿನಲ್ಲಿ, ಹೇಗೆ ಮರೆಯುವುದಕ್ಕೆ ಮನಸ್ಸು ಬಂದೀತು ಆ ತೆಂಕನಾಡನ್ನು!

ಕವಿಕಂಡ ನಾಡು! ಪಂಪನ ಹೆಮ್ಮೆಯ ಕನ್ನಡನಾಡು; ಸಂಸಾರ ಸಾರ ಸರ್ವಸ್ವಫಲದ ಸ್ವರ್ಗದ ಬೀಡು! ಸಾಮ್ರಾಜ್ಯವೈಭವಗಳನ್ನು ಮತ್ತೆ ಬೆಳಸಿ ಕಂಡುಂಡ ನಾಡು. ಪಂಪನು ಹಾಡುತ್ತಿದ್ದಾನೆ. ಏಳು, ಎಚ್ಚರವಾಗು, ಉಸಿರು ತುಂಬು—ಈ ಚಿಮ್ಮುಗಾಲದಲ್ಲಿಯೂ ನೀನೇಳದೇ ಹೋದರೆ ಎಂದೆಂದಿಗೂ ಬೀಳು! ಬಿದ್ದಿರು! ಓ ಕನ್ನಡಮುಗುವೇ!

೪.೧೧.೧೯೩೮.

ಜೀವಗನ್ನಡ*

* * *

ಒಂದು ದೊಡ್ಡ ಸಂತೋಷ ಈ ಕವಿಗಳನ್ನು ಓದುವವರಿಗೆ—ಕವಿಗಳಲ್ಲವೆ ಅವರು ಜಿಡಿನುಡಿಯಲ್ಲಿ ಬರೆದರೋ? ಸೃಷ್ಟಿಕಾರರಲ್ಲವೇ ಅವರು ನಡೆಯುವ ಬಾಳನ್ನು ಹೊಂಬಣ್ಣದ ಕನಸಿನಲ್ಲಿ ತೂರಿಸಿದರೊ?—ಆ ಸಂತೋಷವೇನೆಂದರೆ ಪ್ರೌಢಮಾರ್ಗದಲ್ಲಿ ಪರಭಾಷೆಯ ಆಡಂಬರ ಚಮತ್ಕಾರಗಳಿಗೆ ಮಾರಿಹೋಗಿ ಕಬ್ಬಿಣದ ಕಡಲೆಯಾಗಿದ್ದ ನಮ್ಮ ಇಂಪಾದ ತಿರುಳು ಕನ್ನಡ ಮತ್ತೆ ಜೀವಗನ್ನಡವಾಗಿ, ಜೀವಗನ್ನಡಿಯಾಗಿ, ಕನ್ನಡ ನಾಡಿನ ಊರು ಹಳ್ಳಿಗಳಲ್ಲಿ, ಕೇರಿ ಮನೆಗಳಲ್ಲಿ, ಆಡುವ, ಓಡಾಡುವ, ನಲಿದಾಡುವ, ಕನ್ನಡವಾಗುತ್ತಿರುವುದು. ಹಿರಿಯರು, ಕಿರಿಯರು, ಹೆಣ್ಣುಮಕ್ಕಳು, ಓದಿ, ಹೀರಿ, ಹಿಗ್ಗಬಹುದಾದ ಕನ್ನಡವಾಗುತ್ತಿರುವುದು.—ಬಾಳಲಿ ಈ ಬಾಳುಗನ್ನಡ!

ಇನ್ನು ಈ ಸಾಹಿತ್ಯದ, ಕವಿತ್ವದ, ಈ ಸೃಷ್ಟಿಯ ಮಾತು ಒಂದು. ಸಾಹಿತ್ಯ ಕೇವಲ ಸಂತೋಷಕ್ಕೇ ಅಲ್ಲ, ಪ್ರೇರಣೆ ಗುರಿ. ಮನಸ್ಸನ್ನು ಕುಣಿಸು

* ಬೆಳಗಾಂವಿಯ 'ಕಥಾಕುಂಜ ಗ್ರಂಥಮಾಲೆ'ಯ ಮೊದಲನೆಯ ಗ್ರಂಥವಾದ 'ಆರು ಕಥೆಗಳು' ಎಂಬ ಪುಸ್ತಕಕ್ಕೆ ಬರೆದ ಮುನ್ನುಡಿಯಿಂದ (೧೯೩೯).

ವುದಕ್ಕೇ ಅಲ್ಲ, ಹೃದಯವನ್ನು ತೊಳೆದು ಶುದ್ಧಿಮಾಡುವುದಕ್ಕೂ; ಇರುವುದರ ಚೆಲುವಿನ ಬಣ್ಣನೆಯ ಹೆಮ್ಮೆಗೇ ಅಲ್ಲ, ಇರುವುದರ ಕೊಳಕಿನ, ಕೊರತೆಯ, ನಾಚಿಕೆಯ, ಕೊರಗಿಗೂ, ಮರುಕಕ್ಕೂ; ಇಲ್ಲದ್ದನ್ನು ಇರಮಾಡುವುದಕ್ಕೂ, ಇದ್ದದ್ದನ್ನು ಇಲ್ಲೆನಿಸುವುದಕ್ಕೂ; ಪ್ರಶ್ನೆಹಾಕಿ, ಕರುಳನ್ನು ಜಾಲಾಡಿ ಕಾವೇರಿಸಿ, ಹೊಸ ಸಮಾಜಸೃಷ್ಟಿಗೆ ದಾರಿಮಾಡಲಿಕ್ಕೂ; ಈ ಕತೆಗಳನ್ನು ಓದುವವರು ಕತೆಯ ಸ್ವಾರಸ್ಯಕ್ಕೆ ಹರ್ಷಗೊಳ್ಳುವರು. ಪಾತ್ರದ ಸ್ವಭಾವ ನಿರೂಪಣೆಗೇ ತಲೆದೂಗುವರು; ಶೈಲಿಯ ಸರಳತೆಗೆ ಮೆಚ್ಚುವರು. ಕಟ್ಟಿದ ಜೀವನ ಚಿತ್ರಕ್ಕೆ ಕೈಯೆಸ್ಸುವರು. ಆದರೆ ಅಲ್ಲಿಯೇ ತಣಿಯರು. ನಗೆಯೋ, ಕೊರಗೋ, ಹಿಂದಿನಿಂದ ಹರಿದುಬಂದು ಇಂದು ನಿಂತ ನೀರಾಗಿ ಕೊಳೆ ನಾರುತ್ತಿರುವ ಜೀವನಪ್ರವಾಹದ ಕಶ್ಮಲವೋ, ಶಾಶ್ವತವೋ ಎಂಬಂತೆ ಹೊಮ್ಮುತ್ತಿರುವ ಮಾನವ ಸ್ವಭಾವದ ಕೆಟ್ಟತನಗಳೋ, ದುರ್ಬುದ್ಧಿಗಳೋ,—ಈ ಕತೆಗಳ ಆಳದಲ್ಲಿ ಹುದುಗಿರುವ ತೀವ್ರ ಅನುಭವಗಳನ್ನು ಅನುಭವಿಸಿ, ಸತ್ಪ್ರೇರಣೆ ತುಂಬಿ, ತಮ್ಮ ಬದುಕನ್ನೂ ನಾಡಬದುಕನ್ನೂ ದೊಡ್ಡದು ಮಾಡುವರು, ಮಾಡಿಕೊಳ್ಳಲು ಹೋರಾಡುವರು. ಆಗ, ಓದಿದವರೂ ಧನ್ಯರು; ಬರೆದವರೂ ಇನ್ನೂ ಧನ್ಯರು.

ಕುಮಾರವ್ಯಾಸ*

ಈ ಕುಮಾರವ್ಯಾಸ ಪ್ರಶಸ್ತಿಯನ್ನು ಮೈಸೂರು ಮಹಾರಾಜರವರ ಕಾಲೇಜಿನ ಕರ್ಣಾಟಕ ಸಂಘದವರು ಕೈಕೊಂಡು ಹಲವು ವರ್ಷಗಳಾದುವು. ಮುನ್ನುಡಿಯಿಂದ ಕೂಡಿ ಇದು ಬೆಳಕು ಕಾಣುವ ಹೊತ್ತಿಗೆ ಕಾಲರಾಯನು ಇಬ್ಬರು ಸಾತ್ವಿಕ ಶಿರೋಮಣಿಗಳನ್ನು, ಇಡಿಯ ಕನ್ನಡನಾಡ ಭಕ್ತರನ್ನು, ಕನ್ನಡನುಡಿಯ ಹಿರಿಯ ನಾಯಕರನ್ನು ತನ್ನ ಕರಿಯ ನಾಲಗೆಯನ್ನು ಚಾಚಿ ನುಂಗಿಬಿಟ್ಟನು. ಇಬ್ಬರೂ ಈ ಗ್ರಂಥಕ್ಕೆ ಪ್ರೇರಕರು; ಅದಕ್ಕೆ ರೂಪುಕೊಟ್ಟು, ಲೇಖನಗಳನ್ನು ಸಂಗ್ರಹಿಸಿ, ದ್ರವ್ಯವನ್ನು ಕೂಡಿಸಿ, ಅದರ ಜೊತೆಗೆ ಒಂದು ಸಂಪೂರ್ಣ ಮೂಲಗ್ರಂಥದ ಪ್ರಕಟನೆಗೆ ನೆರವಾಗುವ

---

*ಮೈಸೂರು ಮಹಾರಾಜರವರ ಕಾಲೇಜು ಕರ್ಣಾಟಕ ಸಂಘದಿಂದ ೧೯೪೦ ರಲ್ಲಿ ಪ್ರಕಟವಾದ 'ಕುಮಾರವ್ಯಾಸ ಪ್ರಶಸ್ತಿ'ಗೆ ಬರೆದ ಮುನ್ನುಡಿ.

ಓಲೆ ಪ್ರತಿಗಳನ್ನು ಹುಡುಕಿ ತರಿಸಿ, ಅದರ ಒಂದು ಸಂಗ್ರಹ ರೂಪವನ್ನು ವಿಶ್ವ ವಿದ್ಯಾನಿಲಯಕ್ಕಾಗಿ ಸಿದ್ಧಪಡಿಸುವ ಪ್ರೇಮ ಕೈಂಕರ್ಯದಲ್ಲಿ ತೊಡಗಿದ್ದವರು; ಕುಮಾರವ್ಯಾಸನ ಹೃದಯವನ್ನು ತಾವು ಹೊಕ್ಕು, ಕನ್ನಡಿಗರಿಗೆ ದಾರಿಯನ್ನು ಸವಸಿದವರು-ಕೀರ್ತಿಶೇಷರಾದ ಶ್ರೀ.ಟಿ.ಎಸ್.ವೆಂಕಣ್ಣಯ್ಯನವರೊಬ್ಬರು, ಶ್ರೀ ಪಂಜೆ ಮಂಗೇಶರಾಯರೊಬ್ಬರು. ವೆಂಕಣ್ಣಯ್ಯನವರು ತಳಹದಿಯನ್ನು ಹಾಕಿ, ವಿಮರ್ಶಕರನ್ನು ಕೂಡಿಸಿ, ಗ್ರಂಥವನ್ನು ಈ ರೂಪಕ್ಕೆ ತಂದರು. ಮಂಗೇಶರಾಯರು ನೂರು ರೂಪಾಯಿಗಳನ್ನು ಕಾಣಿಕೆಯಾಗಿ ಕೊಟ್ಟು, ಸಲಹೆಗಳನ್ನು ಸೂಚಿಸಿ, ಆಶೀರ್ವದಿಸಿದರು! ಅವರ ನಷ್ಟಕ್ಕಾಗಿ ಕಣ್ಣೀರಿಡುತ್ತ, ಅವರ ಸಹಕಾರಿಗಳಾದ ಸಾಹಿತಿಗಳಿಗೆ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಅರ್ಪಿಸುತ್ತ ಮುನ್ನುಡಿಕಾರನು ಈ ತನ್ನ ಹಿನ್ನುಡಿಯನ್ನು ಬರೆಯುತ್ತಿದ್ದಾನೆ.

* * * *

ಈ ಲೇಖನಮಾಲೆಯಲ್ಲಿ ಕನ್ನಡನಾಡಿನ ಸುಪ್ರಸಿದ್ಧ ಸಾಹಿತಿಗಳು ಕುಮಾರವ್ಯಾಸನ ಕಾಲ, ಮತ, ಮಹಿಮೆ, ಆತನ ಮಹಾಕಾರ್ಯದ ಗುಣಗಳು, ಪಾತ್ರಗಳು, ಶೈಲಿ—ಮುಂತಾದ ವಿಷಯಗಳನ್ನು ನಾನಾದೃಷ್ಟಿಗಳಿಂದ ವಿಮರ್ಶಿಸಿದ್ದಾರೆ. ಕವಿ ೧೫ನೆಯ ಶತಮಾನದವನೇ, ಹದಿನೈದನೆಯ ಶತಮಾನದವನೇ ? ಭಾಗವತ ಸಂಪ್ರದಾಯದ ಸ್ಮಾರ್ತನೇ ? ವೈಷ್ಣವನೇ ? ವೀರಶೈವನಾದ ಚಾಮರಸನ ಭಾವಮೈದುನನೇ ಅಲ್ಲವೇ ?-ವಿಜಯನಗರದ ವೈಭವಗಳನ್ನು ಕಣ್ಣು ತುಂಬ ಕಟ್ಟಿಕೊಂಡು ಕಾವ್ಯದ ತುಂಬ ತುಂಬಿದ್ದಾನಲ್ಲವೇ, ಹೇಗೆ ? ಈತನ ಮೆಚ್ಚುಗೆಯಕ್ಕರೆಯ ಕೃಷ್ಣರಾಯನು ಶ್ರೀಕೃಷ್ಣನೆಯೋ ವಿಜಯನಗರದ ರಾಯನೂ ಹೌದೋ ?-ರಾಜಕೀಯವನ್ನು ಹೊಕ್ಕು ರಾಜಸೇವೆಯಲ್ಲಿ ತೊಡಗಿದ್ದ ಲೌಕಿಕ ಮಹಾನುಭಾವನೋ ಈತ: ಇಲ್ಲ, ಕಾವ್ಯವನ್ನು ಬರೆಯುವ ಹೊತ್ತಿಗೆ ಆತ್ಮಪಕ್ವತೆಯನ್ನು ಸಾಧಿಸಿದ, ಲೋಕಾನುಗ್ರಹಕ್ಕಾಗಿ ಭಕ್ತಿ ಜ್ಞಾನ ವೈರಾಗ್ಯಗಳನ್ನು ಪೌರಾಣಿಕ ಮಾರ್ಗದಲ್ಲಿ ರೂಪಿಸಿದ, ಪರಮಯೋಗೀಂದ್ರನೋ ಈತ : ಇಲ್ಲ, ಇಹಲೋಕ ಪರಲೋಕಗಳೆಂಬ ದ್ವೈತವನ್ನು ತೂರಿ ಒಂದೇ ಆನಂದಮಯ ಲೋಕವನ್ನಾಗಿ ಮಾಡಿಕೊಂಡಿದ್ದ ಕವಿಬ್ರಹ್ಮನೋ ಈತ ?—ಗದುಗಿನ ವೀರನಾರಾಯಣಸ್ವಾಮಿಯ ಮುಂದೆ ಒದ್ದೆಯ ಬಟ್ಟೆಯಲ್ಲಿ ಕಣ್ಮುಚ್ಚಿ ನಿಂತು ನಿರ್ಮಲಹೃದಯದಿಂದ ಆವೇಶವನ್ನು ಹೊರಸೂಸಿ

ದನೋ; ಕನ್ನಡನಾಡಿನಲ್ಲಿ ಹುಟ್ಟಿದ್ದರಿಂದಲೋ ಏನೋ ಆತ್ಮರೂಪಿನಲ್ಲಿ ಕನ್ನಡ ನಾಡಿನಲ್ಲಿ ಸುಳಿಯುತ್ತಿದ್ದ ಆ ಅಶ್ವತ್ಥಾಮನನ್ನು ಕಂಡು, ದುರ್ಯೋಧನನ ದುಃಖಕ್ಕೆ ಕಣ್ಣೀರು ಸುರಿಸಿ, ಕವಿಯ ಮೃದು ಸ್ವಭಾವದ ಕರುಣೆಯನ್ನು ಉಕ್ಕಿಸಿಕೊಂಡು, ವಾಲ್ಮೀಕಿಯಂತೆ ಸ್ಫೂರ್ತಿಗೊಂಡು ಹಾಡಿದನೋ ? ಆತನ ಹಣೆಯಮೇಲೆ ಯಾವ ಲಾಂಛನವಿದ್ದರೇನು ನಮಗೆ! ನಮ್ಮ ಈ ದಿವ್ಯಕವಿ ನಮ್ಮವನು; ಕನ್ನಡಿಗನು, ಕನ್ನಡಿಗರ ಕುಲವನ್ನು, ಒಂದಾಗಿ ಬೆಸೆಯುವವನು: ಕನ್ನಡಿಗರ ದೊಡ್ಡ ಹೆಮ್ಮೆ; ದೊಡ್ಡ ಕಣ್ಣು ; ಮಹಾತ್ಮ; ಪಂಪನಿಂದ ನೆಲಕ್ಕೆ ಕಾಲೂರಿ, ಗಗನಕ್ಕೆ ಚಿಮ್ಮಿ, ಲಕ್ಷ್ಮೀಪತಿಯಲ್ಲಿ ಮತ್ತೆ ನೆಲಮುಟ್ಟಿ, ಬಣ್ಣ ಬಣ್ಣಗಳಿಂದ ಮಿನುಗುತ್ತಿರುವ ಕನ್ನಡ ಕಾವ್ಯಸೃಷ್ಟಿಯ ಕಾಮನಬಿಲ್ಲಿನಲ್ಲಿ ಈತನ ನೆಲೆ ನಟ್ಟನಡು, ನೆತ್ತಿಯ ಮುಡಿ: ಹಳೆಯ, ಹೊಸಕನ್ನಡದ ತಲೆಯ ಕಿರೀಟ, ಹಳ್ಳಿಹಳ್ಳಿಯಲ್ಲಿ ಅಂದೂ ಇಂದೂ ಗಮಕಿ ಶಿರೋಮಣಿಗಳಿಂದ— ಆಗಿನ, ಈಗಿನ ಬಿಂದೂರಾಯರು ಕೃಷ್ಣರಾಯರು ಸಂಪತ್ಕುಮಾರಾಚಾರ್ಯ ರುಗಳಿಂದ-ನಾಡು ನಾಡೇ ಮೊಳಗಿ ರೋಮಾಂಚನಗೊಳ್ಳುವಂತೆ ರಸವನ್ನ, ಇಂಪನ್ನ, ಲಯವನ್ನ, ತಾನವನ್ನ, ಮಾತಿನ ಹರಹನ್ನ, ಛಂದಸ್ಸಿನ ಕುಣಿತ ವನ್ನ ಲೀಲಾಜಾಲವಾಗಿ ಹೊಮ್ಮಿಸಿ ಹರಿಯಿಸಿದ ಮಾಟಗಾರ. ಕನ್ನಡದ ಹೊಸ ಹುಟ್ಟಿನಲ್ಲಿ ಹೊಸಮಾರ್ಗಕ್ಕೆ ಹೊಸ ಶಕ್ತಿಗೆ ದಿಕ್ಸೂಚಿ, ಧ್ರುವತಾರೆ. ವೇದವ್ಯಾಸರ ಪ್ರೇಮಕುಮಾರ, ಕುಮಾರವ್ಯಾಸನೆಂದರೂ ಸರಿ—ವೀರ ನಾರಾಯಣನ ಪ್ರೇಮಕಿಂಕರ, ನಮ್ಮ ನಚ್ಚಿನ ನಾರಣಪ್ಪನೆಂದರೂ ಸರಿ- ಕನ್ನಡಿಗನ ಹೃದಯದಲ್ಲಿ ಒಟ್ಟಿನಮೇಲೆ ಬಿಂಬಿಸಿ ನಿಲ್ಲುವ ಚಿತ್ರ, ಆಕಾರ, ವ್ಯಕ್ತಿತನ, ಘಟ್ಟ—ಇವು ಈ ಪ್ರಶಸ್ತಿಯ ಸೂಕ್ಷ್ಮ ವಿಮರ್ಶಕ ಯಂತ್ರ ಗಳಿಂದ ಸಿದ್ಧಿಸುವ ಸಿದ್ಧಿ.

* * *

"ನಾರಾಯಣಂ ನಮಸ್ಕೃತ್ಯ ನರಂಚೈವ ನರೋತ್ತಮಂ
ದೇವೀಂ ಸರಸ್ವತೀಂ ಚೈವ [ವ್ಯಾಸಂ] ತತೋ ಜಯಮುದೀರಯೇತ್ !"

ಎಂದು ಆರಂಭಮಾಡಿ ಯಾವ ಒಂದು ಭಾರತ ಮಹಾಭಾರತವಾಯಿತೋ —ದೇವಾಂಶಪುರುಷರ ವೀರಕರ್ಮಗಳನ್ನು ಹೊಗಳಿ ಯುದ್ಧದ ಜಯವನ್ನು ಹಾಡಿ; ಶ್ರೀಕೃಷ್ಣ ಪರಮಾತ್ಮನನ್ನು ಮನುಷ್ಯನ ಆತ್ಮಯುದ್ಧಕ್ಕೆ ಸಾರಥಿಯ

ನ್ನಾಗಿ ಹೊಡಿ ಗೀತೆ ಅನುಗೀತೆಗಳನ್ನು ವಿಸ್ತರಿಸಿ; ಆಖ್ಯಾನ ಉಪಾಖ್ಯಾನಗಳನ್ನು ತನ್ನೊಳಕ್ಕೆ ಸೆಳೆದುಕೊಂಡು, ನಳ, ಹರಿಶ್ಚಂದ್ರ, ಸಾವಿತ್ರಿ, ಶಕುಂತಳೆ ಮುಂತಾದ ಅನೇಕ ಪುರಾತನ ಭಾರತ ವೀರರುಗಳ, ಪವಿತ್ರ ಪುರುಷರ, ದಿವ್ಯ ರಮಣಿಯರ ಚಿತ್ರ ವಿಚಿತ್ರ ಕಥೆಗಳನ್ನು ಸೇರಿಸಿಕೊಂಡು; ಒಂದು ಸಾವಿರ ವರ್ಷದ, ಉತ್ಕೃಷ್ಟ ನಾಗರಿಕತೆಯ, ಧರ್ಮ ಮಹೋನ್ನತಿಯ, ಜ್ಞಾನ ಭಂಡಾರದ ವಿಶ್ವಕೋಶವೆಂಬಂತೆ, ಮತೀಯ, ಸಾಮಾಜಿಕ, ರಾಜಕೀಯ, ಆರ್ಥಿಕ, ಪೌರಾಣಿಕ, ತಾತ್ವಿಕ, ಆಧ್ಯಾತ್ಮಿಕ, ಎಲ್ಲಾಬಗೆಯ ರಹಸ್ಯಗಳನ್ನ, ವಿಮರ್ಶೆಗಳನ್ನ, ಸಂವಾದಗಳನ್ನ, ಪ್ರಸಂಗಗಳನ್ನ, ಪ್ರಶ್ನೆಗಳನ್ನ, ಸುಳಿ ಸುಳಿಯಾಗಿ ತೆರೆತೆರೆಯಾಗಿ, ನೊರೆನೊರೆಯಾಗಿ, ಏಳಿಸಿ, ಕೇಳಿಸಿ. ಹೇಳಿಸಿ "ಮಹಾಭಾರಾವತಾರ"ವಾಯಿತೊ;—ಆದರೂ ಕಾವ್ಯವ ಕಾವನ್ನು ಕಳೆದುಕೊಳ್ಳದೆ, ಅದಿರಿನ ರಾಶಿಯಲ್ಲಿ ಚಿನ್ನ ಮಿನುಗುವಂತೆ, ಆ ಹಳೆ ಎಳೆ ಒಳ ಎಳೆ ಇನ್ನೂ ಮಿನುಗುತ್ತಲೇ ಇದ್ದು "ಪ್ರತಿಪರ್ವ ರಸೋದಯಂ" ಎನ್ನಿಸುತ್ತಿರುವುದೋ—ಆ ಮಹಾಭಾರತದ ಸಾರ, ಒಟ್ಟು ಆಕಾರ, ಭಾರತೀಯರ ಕಲ್ಪನಾಭಿತ್ತಿಯಲ್ಲಿ, ರಾಮಾಯಣದೊಡನೆ, ಇನ್ನೂ ಎಂದಿಗೂ ಪೂಜ್ಯವಸ್ತುವಾಗಿ ಬದುಕಿರುವುದೋ, ಆ ವಸ್ತುವನ್ನು ಜನಸಮುದಾಯದಲ್ಲಿ ಗಮಕಿಯೂ, ಹರಿಕಥೆಯ ಭಾಗವತನೂ, ಕವಿ ಮಹಾಕವಿಗಳೂ ಭಾವಿಸುತ್ತಲೇ ಇರುವರು, ರೂಪಿಸುತ್ತಲೇ ಇರುವರು, ಭಾಷೆ ಭಾಷೆಗೆ ಹೊಯ್ಯುತ್ತಲೇ ಇರುವರು. ರೀತಿ. ರೀತಿಗೆ ನೆಯ್ಯುತ್ತಲೇ ಇರುವರು. ಮೊದಲ ಭಾರತದಲ್ಲಿದ್ದದ್ದೆನೋ, ಇಲ್ಲದ್ದೇನೋ; ಸಂಸ್ಕೃತದ ಕಟ್ಟಕಡೆಯ ಭಾರತದಲ್ಲಿ ಇರುವುದೇನೋ, ಇಲ್ಲದ್ದೇನೋ: ಭಾರತದ ನಾನಾ ಭಾರತಗಳಲ್ಲಿ ಬಂದದ್ದೇನೋ, ಹೋದದ್ದೇನೋ: ಜನಗಳ ಕಥೆ ಉಪಕಥೆ ದಂತಕಥೆಗಳಲ್ಲಿ ಹಬ್ಬಿದ್ದೇನೊ, ಉಬ್ಬಿದ್ದೇನೋ—ದೊಡ್ಡ ಅರಣ್ಯ, ಅಗಾಧ ಸಮುದ್ರ, ಯುಗಯುಗಾಂತರದ ಜೀವಚರಿತ್ರೆ:

* * *

ಕವಿಯ ವೀರಭಾರತ, ಭಾಗವತನ ಪಂಚಮವೇದ, ಅಧ್ಯಾತ್ಮಿಯ ಪರಮ ರಹಸ್ಯ, ವಿದ್ಯಾರ್ಥಿಯ ವಿಶ್ವಕೋಶ, ಸುಧಾರಕನ ಜಿಜ್ಞಾಸೆಯ ಕೈಪಿಡಿ, ಶೈವ ವೈಷ್ಣವ ಸ್ಪರ್ಧೆಗಳ ವಾದಭೂಮಿ,—ಈ ಹತ್ತೆಂಟು ಮುಖಗಳಿಂದ

ದಿಗ್ಭ್ರಮೆಗೊಳಿಸುವ ಈ ಮಹಾಭಾರತದಿಂದ ಕನ್ನಡದ ಕವಿಗಳು—ಸಂಸ್ಕೃತದ ಸಂಕ್ಷೇಪಕಾವ್ಯಗಳಿಂದಲೂ, ಜನತೆಯ ಊಹಾಪೋಹೆಗಳಿಂದಲೂ, ತನ್ನ ಪ್ರತಿಭೆಯ ಕಲಾರಚನೆಯ, ಆವಶ್ಯಕತೆ ಸ್ಫೂರ್ತಿಗಳಿಂದಲೂ ಅನುಭವ ಆಶೋತ್ತರಗಳಿಂದಲೂ ಏನೇನನ್ನು, ಯಾವ ಯಾವಾಗ ನಿರ್ಮಿಸಿಕೊಂಡರು : ಗಣಿಯಿಂದ ಆಯ್ದು, ತಮ್ಮ ಉಳಿಯಿಂದ ಹೊಯ್ದು, ವಿಗ್ರಹ ಕೆತ್ತಿದರು ? ನಮ್ಮ ಆದಿಕವಿ ನಾಡೋಜ ಪಂಪ—ಆತನ ಹಿಂದೆ ೧೦ನೆಯ ಶತಮಾನದ ಮಧ್ಯಕಾಲಕ್ಕೆ ಮುಂಚೆ— ಭಾರತ ಕನ್ನಡಕ್ಕೆ ಬಂದಿತ್ತೋ ? ಕನ್ನಡಿಗರು ಭಾರತದ ಕಥೆಯನ್ನು ಬಲ್ಲವರಾಗಿದ್ದರೊ ? ಭಾರತದ ಭಾಗಗಳನ್ನು (ರನ್ನನ ಗದಾಯುದ್ಧದಂತೆ) ನಯಮಾಡಿ ಕವಿಗಳು ಹಾಡಿದ್ದರೋ ? ಪಂಪನೇನೋ ಹಿಂದೆ ಯಾರೂ ಸಮಸ್ತ ಭಾರತವನ್ನೂ ಹೇಳಿರಲಿಲ್ಲ, ನೀನು ಹೇಳೆಂದು ಹೇಳಲು ನಾನು ವ್ಯಾಸನೆಂದು ಗರ್ವಪಡದೆ ನನ್ನ ರಾಜನಿಗಾಗಿ ಹೇಳುತ್ತೇನೆಂದು ತಿಳಿಸಿದ್ದಾನೆ. ಆತನ **ವಿಕ್ರಮಾರ್ಜುನ ವಿಜಯವೇ** ಕನ್ನಡದ ಈಗ ಸಿಕ್ಕಿರುವ ಮೊದಲ ಭಾರತ. ಆಮೇಲೆ ಅದೇ ಶತಮಾನದ ರನ್ನನ **ಸಾಹಸ ಭೀಮ ವಿಜಯ** ; ಇದು ಗದಾಯುದ್ಧ ಮಾತ್ರ. ಮೂರನೆಯದು, ಕನ್ನಡದ ಕಾಮನಬಿಲ್ಲಿನ ನಡುನೆತ್ತಿಯ ಕಿರೀಟವೆಂದು ನಾನು ಮೇಲೆ ಹೇಳಿದ ಕುಮಾರವ್ಯಾಸನ **ಕರ್ನಾಟ ಭಾರತ ಮಂಜರಿ** : ಗದುಗಿನ ಭಾರತ. ನಾಲ್ಕನೆಯದು, ಷಡಕ್ಷರಿಯ **ಶಬರಶಂಕರ ವಿಲಾಸ** : ಇದು ಅರ್ಜುನನು ಪಾಶುಪತಾಸ್ತ್ರವನ್ನು ಪಡೆದ ಭಾಗ ಮಾತ್ರ. ಐದನೆಯದು "ಲಕ್ಷ್ಮೀಪತಿಯ ಕಾವ್ಯರಚನೆ"— **ಜೈಮಿನಿ ಭಾರತ** : ಅಶ್ವಮೇಧ ಪರ್ವ ಮಾತ್ರ.

ಇವು ಐದು, ಭಾರತವನ್ನು ಹೇಳುವ ಕನ್ನಡದ ಮಹಾಕವಿಗಳ ಹಿರಿಯ ಕಾವ್ಯಗಳು. (ಸಣ್ಣ ಪುಟ್ಟ ಕವಿಗಳ ಅನುಕರಣ, ಸಂಗ್ರಹ ಕಾವ್ಯಗಳು ಇಲ್ಲಿ ಬೇಡ.) ಒಟ್ಟಿನ ಮೇಲೆ, "ಕವಿ"ಯ ವೀರಭಾರತದ ತಿರುಳನ್ನು, ಕರುಳನ್ನು ಕಂಡುಕೊಂಡು, ತಮ್ಮ ಕಾಲದ, ಜನದ, ಮತದ, ತನ್ನದೇ ಒಂದುಅನುಭವದ, ದರ್ಶನದ, ರಸದ, ಜೀವವನ್ನು ತುಂಬಿ, ಕಡೆದು, ಕಾಲದ ತಲೆಯ ಮೇಲೆ ಮಣಿಗಳಂತ ಮಿರುಗಲಿಟ್ಟ ಐವರು ಕವಿಗಳಿವರು. ನಮ್ಮ ಅದೃಷ್ಟ, ಕನ್ನಡ ಸಾಹಿತ್ಯದ ತ್ರಿವೇಣೀ ಸಂಗಮದ ಮೂರು ಮತದ ಕವಿಗಳೂ ಇಲ್ಲಿರುವರು. ಇಬ್ಬರು ಜೈನರು ; ಇಬ್ಬರು ಬ್ರಾಹ್ಮಣರು ; ಒಬ್ಬ ವೀರಶೈವ (ಸತ್ತ್ವರ ಕಥೆ

ಯಲ್ಲ, ಶಿವಕಥೆ, ಅಂತೂ ಭಾರತದ, ಕರ್ನಾಟಕದ ಪೂಜ್ಯಕಥೆ). ಎರಡು ಸಂಪೂರ್ಣ ಭಾರತ ; ಮೂರು ಉಪಾಖ್ಯಾನಗಳು. ಎರಡು ಬೇಲೂರು, ಹಂಪೆ ಯಂತಹ ದಿವ್ಯ ದೇವಾಲಯಗಳು : ಮೂರು ಆ ದೇವಾಲಯದೊಳಗಿನ ದಿವ್ಯ ವಾಗಿ ಕಡೆದ ಮಂಟಪಗಳು, ಕಂಬಗಳು.

* * *

ಪಂಪ—ನಾರಣಪ್ಪ ; ನಾರಣಪ್ಪ—ಪಂಪ : ಯಾರು ದೊಡ್ಡವರು ? ಬೇಡ : ಯಾರು ನಮ್ಮ ಹೆಚ್ಚು ಮೆಚು ? ಉತ್ತರ ಹೇಳಲೇ ಬೇಕೆ ? ಹೇಳ ಬೇಕಾದ ನಿರ್ಬಂಧವೇನು ? ಒಮ್ಮೆ ಇವ ಒಮ್ಮೆ ಅವ ? ಹೀಗೆ ಅವ, ಹಾಗೆ ಇವ ? "ನನ್ನ ಜೀವದುಸಿರು, ಕಣ್ಣು"—

ಒಮ್ಮೆ ಅವಳು ಒಮ್ಮೆ ಇವಳು
ಕುಣಿಸುತಿರುವಳು !

ಸಾಮಾನ್ಯ ದೃಷ್ಟಿಯಿಂದ, ಈಗಿನ ಕನ್ನಡ ಮಕ್ಕಳ ಕಣ್ಣಿಂದು ಹೇಳಬಹುದಾ ದರೆ—ಪಂಪ, ಹಳಗನ್ನಡ : ಸರಳತೆ, ಕಾವು, ತಿರುಳ್ಗನ್ನಡ, ಸಾಜ ಉಂಟು : ಆದರೆ ಕಷ್ಟವೂ ಉಂಟು, ಮಾರ್ಗದ ಮಗ್ಗವೂ ಉಂಟು: ನಮಗೆ "ತಿಪ್ಪಾರ ಹಳ್ಳಿ ಬಲು ದೂ-ಉ-ಉ-ರ", ಗಾಂಭಿರ್ಯ—ಹೌದು, ಗಂಭೀರ ಮಿತವಚನ ರಚನ. ಸರಸತಿಯ ವಾಣಿ. ಕನ್ನಡದ ಹೆಮ್ಮೆ : "ಆರಂಕುಸಮಿಟ್ಟೊಡಂ." ಕಡೆಗೆ "ಕೋಗಿಲೆಯಾಗಿ, ಮರಿದುಂಬಿಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್." ಸರಿಯೆ—ಆದರೆ- -ಆದರೆ – ಅರ್ಜುನನನ್ನ ಅರಿ ಕೇಸರಿಯನ್ನೇಕೆ ಮಾಡಿದ ? ನಮ್ಮ ಕನ್ನಡದರಸರ ಹಿರಿಮೆಯನ್ನು ಕನ್ನಡಿಗರು ಬಲ್ಲರು—ಹೆರರೂ ಬಲ್ಲರು. ಆದರೆ ಅರ್ಜುನ ! ದ್ರೌಪದಿ ಯಾರ ಹೆಂಡತಿ ? ಭೀಮನಿಗೂ ಅವಳಿಗೂ ಏನು ಎಷ್ಟು ಸಂಬಂಧ ? ಹೋಗಲಿ. ಕೃಷ್ಣ, ನಮ್ಮ ಸಲಿಗೆಯ, ಸಮ್ಮೋಹನದ, ಸರ್ವವೂ ತಾನಾದ ಆ ಕೃಷ್ಣ ? "ಇವರ್ಗಳಿನೀ ಭಾರತಂ ಲೋಕಪೂಜ್ಯಂ"—ಯಾರಿಂದ ? (ಯಾವ ಭಾರತ?)—ದುರ್ಯೋ ಧನ, ಕರ್ಣ,—

(ನೆನೆಯದಿರಣ್ಣ ಭಾರತದೊಳಿನ್ ಪೆಱರಾರುಮನೊಂದೆ ಚಿತ್ತದಿನ್
ನೆನೆವೊಡೆ ಕರ್ಣನನ್ ನೆನೆಯ—ಇದು ಬೇರೆ !)

ಕರ್ಣ—ಭೀಮ, ಶಲ್ಯ, ಭೀಷ್ಮ, ದ್ರೋಣ, ಅರ್ಜುನ, ಧರ್ಮರಾಯ—

ಒಂದೊಂದು ಗುಣಕ್ಕೆ ಒಬ್ಬೊಬ್ಬರು ! ಇಲ್ಲಿ ಕೃಷ್ಣನ ಹೆಸರೇ ಇಲ್ಲ !

ಜೈನ ಪುರಾಣಗಳಲ್ಲಿ ಕೃಷ್ಣ ರಾಮ ಎಂದರೆ ಅಷ್ಟು ಪೂಜ್ಯಸ್ಥಾನವಿಲ್ಲ, ವೀರರು, ಮಹಾನುಭಾವರು, ಶಲಾಕಾಪುರುಷರು: ಆದರೆ ಸಾತ್ವಿಕ ಧರ್ಮಿಗಳೊ; ಅಹಿಂಸಾ ಚಾರಿತ್ರರೋ? ರಾಮ ಜಿನನುಂಟು ; ಕೃಷ್ಣ ಜಿನನಿಲ್ಲ. ಆದ್ದರಿಂದಲೋ ಏನೋ ಪಂಪನ ದರ್ಶನದಲ್ಲಿ ಕೃಷ್ಣ ಬಣ್ಣವಿಳಿದ: ಭಗವದ್ಗೀತೆ, ಅಕ್ಷಯ ವಸ್ತ್ರ ಮುಂತಾದುವು ಕಣ್ಣುಮರೆಯಾದುವು : ಇಲ್ಲ, ಸಣ್ಣ ಚುಕ್ಕಿಗಳಾದುವು : ಇದೆಯೋ, ಇಲ್ಲವೋ. (ಮತದ ಮಂಜಿನಲ್ಲಿ ಕಣ್ಣೇ ಮಸುಕಾಯಿತೋ ?)

ನಾರಣಪ್ಪನ ನೋಟ, ಕುಮಾರವ್ಯಾಸನ ದರ್ಶನ, ಭಕ್ತಿಯ ಆವೇಶ ಬೇರೆ. ಸೀರೆ ಸೆಳೆವದ್ದೂ ಸೆಳೆದದ್ದೇ : ಉಂಡು ತೇಗಿ ಹೊಟ್ಟೆ ನೀವಿದ್ದೂ ನೀವಿದ್ದೇ : ದೇವ ಬಂದಾ ನಮ್ಮ—ಓ ಹೋ ಹೋ! ಏಳನೆಯ ಸ್ವರ್ಗ! ಪರಮೇ ವ್ಯೋಮನ್ ! ಕಿವಿ ಹೊಗುವುದೇ ತಡ—ಪರವಶ! ಕೊಚ್ಚುವ ಪ್ರವಾಹ : ಇಂದಿಗೂ ನಮ್ಮ ಕರುಳಿನಿಂದ ಬಂದು ನಾಲಗೆಯಲ್ಲಿ ನಲಿಯುವ ಕನ್ನಡ! ಆಮಾತು, ಆ ಶೈಲಿ, ಆ ಮಾತ್ರೆಗಳ ವಿನ್ಯಾಸ, ಭಾವ, ರಸ, ಮೈಮರೆತ! ನಾರಣಪ್ಪನೂ ಮಾರ್ಗದ ಕೈವಾಡವನ್ನಾಗಲಿ, ಕೈಗೆ ಬಂದ ಮೊದಲ ಪದವನ್ನಿಟ್ಟು "ಆಳಿಸದ" ಜಂಭವನ್ನಾಗಲಿ ಬಿಟ್ಟಿಲ್ಲ. ಆದರೆ ಇವೆಲ್ಲೋ ಇಲ್ಲಿ, ಅಲ್ಲಿ! ಕಾಲಗುಣ, ವ್ಯಕ್ತಿದೋಷ. ತುಂಬು ಪ್ರವಾಹ ಬರಲಿ, ವಿಷಯ ಏರಲಿ, ರೀತಿ ಹೊಮ್ಮಲಿ, ರಕ್ತ ಕುದಿಯಲಿ : ಸಂಸ್ಕೃತ ಮಹಾ ಭಾರತದ ಅನುಕರಣವಲ್ಲ : ಅಂಧಶ್ರದ್ಧೆಯಲ್ಲ, ಅಕ್ಷರಪೂಜೆಯಲ್ಲ. ಆಧ್ಯಾತ್ಮಿಕದ ಕೆಚ್ಚು, ವೇದಾಂತದ ತಿರುಳು, ಕಾವ್ಯದ ಕಾವು, ಪಾತ್ರದ ಬೆಡಗು, ಸಂಭಾಷಣೆಯ ಸಾಜ-ಯಾವ ರಸ ಅಂದರೆ ಆ ರಸ, ಭಟ್ಟ ಇಳಿಸಿ. ಭಗವದ್ಗೀತೆಯ ಘಟ್ಟವನ್ನು ಸಿಂಹಾವಲೋಕನದಿಂದ ತನ್ನತನದಲ್ಲಿ ತಾನು ಹಾಡಿರುವುದನ್ನೂ ಪ್ರಕ್ಷಿಪ್ತವಾದ "ಮುಕ್ಕಿಗೆ ಮುಕ್ಕಿ"ಯನ್ನೂ ಹೋಲಿಸಿದರೆ ಕಾವ್ಯದಲ್ಲಿ ಒಂದು ಶಿಕ್ಷೆ (ಎರಡರ್ಥದಲ್ಲಿಯೂ). ಮತಕ್ಕೂ (ಧರ್ಮಕ್ಕಲ್ಲ) ಕಾವ್ಯಕ್ಕೂ ಇರುವ ದೂರ-ಮರವಣಿಗೆಂ, ಬೀಣೆಗಂ! ಯಾವ ಮಹಾಭಾರತ ಕ್ಷಾತ್ರವೇದವಾಗಿದ್ದು, ಬ್ರಾಹ್ಮೀ ಭಾರತವಾಯಿತೋ, ಯಾವವೀರಗಾಯಕನ ಹೃದಯದಿಂದ ಬ್ರಹ್ಮವಿಶ್ವನಾದ ಪರಮಾತ್ಮನು ಮೂಡಿ ಐಕ್ಯವಾದನೋ—

ಆ ಎರಡೂ ಕವಿಗಳ, ಋಷಿಗಳ, ಬ್ರಹ್ಮಚಾರಿಗಳ, ಆನಂದಪರವಶರ, ಸಾಯುಜ್ಯಸುಖಿಗಳ, ಇಹಲೋಕ ಪರಲೋಕದ್ವೈತಕ್ಕೆ ಮೀರಿದ ಅತಿ ವರ್ಣಾಶ್ರಮಿಗಳ ಪಂಕ್ತಿ ಕುವರಾರವ್ಯಾಸ. ಧರ್ಮಕ್ಷೇತ್ರೇ ಕುರುಕ್ಷೇತ್ರೇ—ಎರಡು ರಣಾಂಗಗಳಲ್ಲಿಯೂ ಹೋರಾಟವಾದಾಗ, ಮಾಮಕಾಃ ಪಾಂಡವಾಃ—ಆಸುರಿ, ದೈವಿ—ಇಬ್ಬರೂ, ಕಿಮಕುರ್ವತ ?—ಏನು ಮಾಡಿದರು, ಏನು ಮಾಡಬೇಕು : ಯಾರಲ್ಲಿ ಮರೆಹೋಗಬೇಕು? ಯಾರು ಸಾರಥಿಗಳು ಮನೋರಥಕ್ಕೆ, ಸಂದೇಹದಲ್ಲಿ, ದೌರ್ಬಲ್ಯದಲ್ಲಿ ?-ಅರಿಕೇಸರಿಯೋ ಅಸುರಾರಿಯೋ ? ಮಾಮೇಕಂ, ಮಮ ಪ್ರಾಣಾ ಹಿ, ಧರ್ಮಸಂಸ್ಥಾಪನಾರ್ಥಾಯ, ಪ್ರಿಯೋಸಿ ಮೇ, ಯುದ್ಧ್ಯಸ್ವ, ಮಯಿ ಸಂನ್ಯಸ್ಯ ; ವಿಮೃಶ್ಯ : ಯಥೇಚ್ಛಸಿ ತಥಾ ಕುರು: ಕುಮಾರವ್ಯಾಸನ ತಂತು ಇದು. ಕೃಷ್ಣಪರಮಾತ್ಮನ ಲೀಲೆ, ಭಕ್ತವತ್ಸಲತೆ, ಪ್ರೇಮದ ಸಲಿಗೆ :—ಮಾಯಾವಿ, ಜೋಕೆ : ಕೈ ಬಿಟ್ಟು ಬಿಟ್ಟವನಲ್ಲ ! ಹಿಡಿದು ಹಿಡಿದವನಲ್ಲ : ಅಹಂಕಾರ ಮುಸುಕೀತು, ಜೋಕೆ—ದಾಸ್ಯ, ಕೈಂಕರ್ಯ, ಧೈರ್ಯ, ವೀರ್ಯ: ಒಂದು ಮಾತಿನಲ್ಲಿ ಭಕ್ತಿ—ಇದು.

ಪಂಪನ ದರ್ಶನ—ಕುಮಾರವ್ಯಾಸನ ದರ್ಶನ : ಷಡಕ್ಷರಿಯ ದರ್ಶನ: ಬೇರೆ: ಹೌದೇ: ಬೇರೆಯೇ ಏನು ? ಜಿನಭಕ್ತಿ, ಹರಿಭಕ್ತಿ, ಶಿವಭಕ್ತಿ—ಇವು ಒಂದೋ, ಮೂರೋ, ಎರಡೋ ? ಸನಾತನಿಗಳಿಗೆ ಮೂರೂ, ಎರಡೂ, ಒಂದೂ ಹಿಂದಿನ ಕನ್ನಡಿಗರು ಹೇಗೋ; ಸಾಮಾನ್ಯರು—ಇಂದಿನ ಕನ್ನಡಿಗರು ಮೂರೂ ಒಂದೆಂದು ಅರಿತವರು : ಒಂದರಲ್ಲಿ ಒಂದಾಗುವವರು ; ತಮ್ಮತಮ್ಮ ಬೇರೆ ಸಂಸ್ಕಾರ ವಾಸನೆ ರುಚಿಗಳನ್ನು ಹೊಂದಿಸಿ, ನಂದಿಸಿ, ಅಲ್ಲ. ಇಂತಹವರಿಗೆ ನಾರಣಪ್ಪ ಮಹಾತ್ಮ, ವಿಶ್ವಾತ್ಮ : ಏಕಮೇವಾದ್ವಿತೀಯ. ಹತ್ತಿರ, ತೀರ ಹತ್ತಿರ, ನುಡಿ : ಇಂಪು—ಏನಿಂಪು ! ಹಾಡು ; ಆಳ-ಅಗಲ, ಅಗಲ-ಆಳ, ನೋಟ ; ಅನುಭವರಸಾಯನ, ಅಂಜನ. ಏನಚ್ಚರಿ ಈತ ಲೋಕಪ್ರಿಯನಾದದ್ದು, ಎಲ್ಲರ ಹೃದಯವನ್ನೂ ಸೂರೆಗೊಂಡದ್ದು !

ನಮ್ಮ ಕವಿಗಳಲ್ಲಿ ಹಿರಿಯ ತಲೆ : ಹಿರಿಯರಲ್ಲಿ ಹಿರಿಯ– ನಮ್ಮ ಸಾಹಿತ್ಯದ ಉತ್ತಮ ರತ್ನಗಳಲ್ಲಿ ನಾಯಕರತ್ನ ; ಪಂಪ, ರನ್ನ, ಬಸವಣ್ಣ, ಹರೀಶ್ವರ, ಪುರಂದರ, ಲಕ್ಷ್ಮೀಶ—ಇವರ ಜೊತೆಯಲ್ಲಿ ನಾರಣಪ್ಪನನ್ನು ನಿಲ್ಲಿಸಿ, ಕೈಯಲ್ಲಿ ಕನ್ನಡಬಾವುಟವನ್ನು ಕೊಟ್ಟು, ಲೋಕದ ಯಾವ ದೊಡ್ಡ

ಕವಿಯನ್ನಾದರೂ ಧೈರ್ಯದಿಂದ, ಪ್ರೇಮದಿಂದ, ಎದಿರುಗೊಳ್ಳಬಹುದು !

ಶ್ರೀವನಿತೆಯರಸನೆ ವಿಮಲ ರಾ
ಜೀವಪೀಠನ ಪಿತನೆ ಜಗಕತಿ
ಪಾವನನೆ ಸನಕಾದಿ ಸಜ್ಜನ ನಿಕರ ದಾತಾರ
ರಾವಣಾಸುರಮಥನ ಶ್ರವಣ ಸು
ಧಾ ವಿನೂತನ ಕಥನ ಕಾರಣ
ಕಾವುದಾನತ ಜನವ ಗದುಗಿನ ವೀರನಾರಯಣ.

ಹಲಗೆ ಬಳಪವ ಹಿಡಿಯದೊಂದ
ಗ್ಗಳಿಕೆ ಪದವಿಟ್ಟಳಿಸದೊಂದ
ಗ್ಗಳಿಕೆ ಪರರೊಡ್ಡವದ ರೀತಿಯ ಕೊಳ್ಳದಗ್ಗಳಿಕೆ
ಬಳಸಿ ಬರೆಯಲು ಕಂಠ ಪತ್ರದ
ಉಲುಹುಗೆಡದಗ್ಗಣಿಕೆಯೆಂಬೀ
ಬಲುಹು ಸಲುವುದು ವೀರನಾರಾಯಣನ ಕಿಂಕರಗೆ.

ಅರಸುಗಳಿಗಿದು ವೀರ ದ್ವಿಜರಿಗೆ
ಪರಮವೇದದ ಸಾರ ಯೋಗೀ
ಶ್ವರರ ತತ್ತ್ವವಿಚಾರ ಮಂತ್ರಿಜನಕ್ಕೆ ಬುದ್ಧಿಗುಣ
ವಿರಹಿಗಳ ಶೃಂಗಾರ ವಿದ್ಯಾ
ಪರಿಣತರಲಂಕಾರ ಕಾವ್ಯಕೆ
ಗುರುವೆನಲು ರಚಿಸಿದ ಕುಮಾರವ್ಯಾಸ ಭಾರತವ.

ಹೊನ್ನಮ್ಮ*

ಕನ್ನಡಸಾಹಿತ್ಯದಲ್ಲಿ ಸ್ತ್ರೀ ಲೇಖಕಿಯರಲ್ಲಿ ತೇಜಸ್ವಿಗಳಾದವರು ಇಬ್ಬರು : ವೀರತಪಸ್ವಿನಿಯಾದ, ಬಸವನ ಮಹಾಕಾರ್ಯದಲ್ಲಿ ದೀಕ್ಷೆವಹಿಸಿದ ಅಕ್ಕಮಹಾದೇವಿ ಒಬ್ಬಳು ; ಚಿಕ್ಕದೇವರಾಜ ಒಡೆಯರ ಸಂಚಿಯ ಊಳಿಗದವಳಾಗಿ ಅವರ ಕನ್ನಡದ ಪುನರುಜ್ಜೀವನ ಕಾರ್ಯದಲ್ಲಿ ಪ್ರೇರಣೆಗೊಂಡು

---

*ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆಯ ೧೪ನೆಯ ಗ್ರಂಥವಾದ 'ಹದಿಬದೆಯ ಧರ್ಮ'ದ ಮುನ್ನುಡಿಯಿಂದ. (೧೯೪೦)

ತನ್ನ ಅಳಿಲು ಸೇವೆಯನ್ನು ಸಲ್ಲಿಸಿದ ಹೊನ್ನಮ್ಮ ಇನ್ನೊಬ್ಬಳು. ಇಬ್ಬರೂ ಕನ್ನಡ ಪ್ರೇಮಿಗಳು, ಉಜ್ವಲ ಭಕ್ತರು, ಸಮಾಜ ಸೇವಕರು. ಅಕ್ಕಮಹಾದೇವಿ ರುದ್ರಕನ್ನಿಕೆ; ಸರ್ವಾಂತ್ಯರಾಮಿಯಾದ ದೇವರನ್ನು ಎಲ್ಲೆಲ್ಲೂ ಕಂಡು ಶಿವನೇ ಗಂಡನೆಂದು ತನ್ನ ಆತ್ಮವನ್ನೂ ಜೀವನವನ್ನೂ ಶಿವಕಾರ್ಯಕ್ಕೆ ಅರ್ಪಣಮಾಡಿ, ದೊಡ್ಡ ಧರ್ಮಚಳವಳಿಗಾಗಿ ನಾಡನ್ನೆಲ್ಲ ಸುತ್ತಿ, ವಚನಗಳಲ್ಲಿ ತನ್ನ ಕಾಣ್ಕೆಯನ್ನು ಬೀರಿ, ಆವೇಶ ಹುಟ್ಟಿಸಿದವಳು. ಮನೆಗಿಂತ ಅವಳಿಗೆ ನಾಡು ದೊಡ್ಡದಾಯಿತು. ಹೊನ್ನಮ್ಮ ಸೌಮ್ಯಮೂರ್ತಿ; ಮನೆ ಮಕ್ಕಳು, ಗಂಡ ಹೆಂಡಿರ, ಗೃಹಸ್ಥಾಶ್ರಮದ ಧರ್ಮಬಾಳಿನ ಚೆಲುವನ್ನು ಹೆಣ್ಣುಮಕ್ಕಳ ಹಾಡಿನಲ್ಲಿ ಹಾಡಿ, ನಿತ್ಯಸಂಸಾರದ ನಿಷ್ಕಾಮ ಕರ್ಮವೇ ಭಗವಂತನ ಪಾದವನ್ನು ಸೇರುವ ಹಾದಿ ಎಂದು ಸಾರಿದಳು. ಮನೆಯಲ್ಲಿಯೂ ತನ್ನ ಒಡೆಯರ ಮನಸ್ಸನ್ನು ಉಲ್ಲಾಸಪಡಿಸುವ ದುಡಿಮೆಯಲ್ಲಿಯೂ ನಾಡಿನ ಕೆಲಸವನ್ನು ಮಾಡಿದವಳು. ಸಂಸಾರದ ಎರಡು ಮುಖವನ್ನೂ ತೋರಿರುವ ಇಬ್ಬರೂ ಕನ್ನಡಿತಿಯರು, ಆರಾಧಿಸತಕ್ಕವರು.

* * * *

ಸಮಾಜದಲ್ಲಿಯೂ ಮನೆಯಲ್ಲಿಯೂ ಗೃಹಿಣಿಗೆ ಯಾವ ಸ್ಥಾನ, ಏನು ಅವಕಾಶಗಳು, ಹಕ್ಕು ಬಾಧ್ಯತೆಗಳೂ ಕರ್ತವ್ಯಗಳೂ ಯಾವುವು ಎಂದು ವಿಚಾರಮಾಡುತ್ತಿರುವ ಈ ಕಾಲದಲ್ಲಿ, ನಮ್ಮ ಪೂರ್ವಿಕರ ಅಭಿಪ್ರಾಯಗಳನ್ನೂ ಉತ್ತಮಧ್ಯೇಯಗಳನ್ನೂ ತಳಹದಿಯಾಗಿಟ್ಟುಕೊಂಡು ಯುಗಧರ್ಮಕ್ಕೆ ತಕ್ಕಂತೆ ಮಾರ್ಪಾಟುಮಾಡಿಕೊಂಡು, ಹೊಸದೂ ಹಳದೂ ಸಮನ್ವಯವಾಗಿ, ಶಕ್ತಿಯಿಂದಲೂ ಸೌಂದರ್ಯದಿಂದಲೂ ಭಾರತೀಯ ಜೀವನ ಮುಂದುವರಿಯುವಂತೆ ಆಗಲೆಂದು ಅಕ್ಕಮಹಾದೇವಿ ಹೊನ್ನಮ್ಮನವರ ಹೆಸರಿನಲ್ಲಿ ಹಾರೈಸಬಹುದಾಗಿದೆ.

ಹೊನ್ನಮ್ಮ ಕೇಳುವಂತೆ—

ಪೆಣ್ಣಲ್ಲವೆ ತಮ್ಮನೆಲ್ಲ ಪಡೆದ ತಾಯಿ?
　ಪೆಣ್ಣಲ್ಲವೆ ಪೊರೆದವಳು?
ಪೆಣ್ಣು ಪೆಣ್ಣೆಂದೇತಕೆ ಬೀಳುಗಳೆವರು
　ಕಣ್ಣು ಕಾಣದ ಗಾವಿಲರು?

ಕುವರನಾದೊಡೆ ಬಂದ ಗುಣವೇನದರಿಂದ ?
ಕುವರಿಯಾದೊಡೆ ಕುಂದೇನು ?
ಇವರಿರ್ವರೊಳೀಳ್ಗೆ ವಡೆದವರಿಂದ
ಸವನಿಪುದಿಹಪರ ಸೌಖ್ಯ.

ಆದಿಕವಿ ಪಂಪ

'ಪಸರಿಪ ಕನ್ನಡಕ್ಕೊಡೆಯನೊರ್ವನೆ ಸತ್ಕವಿ ಪಂಪನ್' ಎಂದ ಕವಿ ನಾಗರಾಜನ ಅಮೃತವಾಕ್ಯ ಇಂದಿಗೂ ಅನ್ವಯಿಸುವಂತಿದೆ. ಪಂಪ ಕಾವ್ಯ ಬರೆದು ಇಂದಿಗೆ ಸಾವಿರ ವರ್ಷಗಳಾದರೂ ಅವನ 'ಸಾಜದ ಪುಲಿಗೆಱೆಯ ತಿರುಳಕನ್ನಡ'ದ ಬಣ್ಣ ಇಂದಿಗೂ ಬತ್ತಿಲ್ಲ. ಇಂದಿಗೂ ಅವನು ಕವಿಕುಲಗುರುವಾಗಿ, ತಾನೇ ತಾನಾಗಿ, (ಅಭಿನವ ಪಂಪನೊಬ್ಬನಿದ್ದರೂ) ಕನ್ನಡಕ್ಕೆ ಒಬ್ಬನೆ ಪಂಪನಾಗಿ, ಆದಿಕವಿಯೆನಿಸಿ ಮೆರೆಯುತ್ತಿದ್ದಾನೆ.

ಪಂಪ ಬರೆದಿರುವುದು ಎರಡು ಕಾವ್ಯಗಳು—ಎರಡೂ ದೊಡ್ಡ ಕೃತಿಗಳು, ಆದರ್ಶ ಗ್ರಂಥಗಳು-ಒಂದು ಆದಿ ತೀರ್ಥಂಕರನಾದ ಪುರುದೇವನ ಚರಿತೆ, 'ಆದಿಪುರಾಣ'; ಇನ್ನೊಂದು 'ಪಂಪಭಾರತ' ಎಂದು ಹೆಸರಾಗಿರುವ 'ವಿಕ್ರಮಾರ್ಜುನವಿಜಯ.' ಇವು "ಮುನ್ನಿನ ಕಬ್ಬಮನೆಲ್ಲ ಮಿಕ್ಕಿ ಮೆಟ್ಟಿದುವು." ಪಂಪ ಒಂದರಲ್ಲಿ ಜಿನಾಗಮವನ್ನೂ, ಇನ್ನೊಂದರಲ್ಲಿ ಲೌಕಿಕವನ್ನೂ ಬೆಳಗಿದ್ದಾನೆ.

ಪಂಪನ ಹಿರಿಮೆಯನ್ನಾಗಲಿ, ಅವನ ಕಾವ್ಯಗಳ ಮಹತ್ವವನ್ನಾಗಲಿ, ಅವನ ಪಾಂಡಿತ್ಯವನ್ನಾಗಲಿ, ಅವನ ಶೈಲಿಯಸೊಬಗನ್ನಾಗಲಿ, ಅವನ ಮಾತಿನ ಪೆಂಪು, ಸೊಂಪು, ಇಂಪುಗಳನ್ನಾಗಲಿ ಇಲ್ಲಿ ಕುರಿತು ಹೇಳಲು, ನೆನೆಯಲು, ಮನತುಡಿಯುತ್ತಿದ್ದರೂ ಎಡೆಕಟ್ಟಿನ ಹವಣರಿತು ಸುಮ್ಮನಿರಬೇಕಾಗಿದೆ. ಪಂಪನ ಪಾತ್ರಸೃಷ್ಟಿಯೋ—ಅವನ ಅರ್ಜುನ, ದುರ್ಯೋಧನ, ಕರ್ಣ, ಭೀಷ್ಮ, ಶಲ್ಯ ಮುಂತಾದ ಮಹಾವ್ಯಕ್ತಿಗಳೋ, ಅವನ ಧರ್ಮದೃಷ್ಟಿಯೋ, ಧರ್ಮಾಭಿಮಾನವೋ, ಅವನ ಲೋಕಾನುಭವವೋ, ಅವನ ವೈರಾಗ್ಯಬೋಧೆಯೋ, ಅವನ ಕೋಮಲಹೃದಯವೋ, ಅವನ ರಸಿಕತೆಯೋ, ಅವನ ವಾಗ್ವಿಳಾಸವೋ, ಅವನ ನುಡಿಕಟ್ಟೋ, ಅವನ ಬಂಧದ ಬಿಗಿಯೋ ಬಂಧುರತೆಯೋ, ಅವನ ಹಾಳತವಾದ ವರ್ಣನೆಗಳೋ, ಅವನ

ಶಬ್ದಚಿತ್ರಗಳೋ–ಒಂದೊಂದೂ ಪಂಪನ ಘನತೆಯನ್ನು ಬಿಚ್ಚಳಿಸುವಂಥದು, ರಸಿಕರಿಗೆ ರಸದೂಟಿ. ಎಲ್ಲಕ್ಕಿಂತ ಮಿಗಿಲಾಗಿ, ಪಂಪನ ಕನ್ನನಾಡಪ್ರೇಮವನ್ನು ಭಕ್ತಿಯನ್ನು, ಎಷ್ಟು ಕೊಂಡಾಡಿದರೂ ಸಾಲದು: ಅದು ಎಲ್ಲ ಕಾಲಕ್ಕೂ ಎಲ್ಲ ಕನ್ನಡಿಗರಿಗೂ ದೊಡ್ಡ ಆದರ್ಶ' ಕನ್ನಡ ನಾಡಿನಲ್ಲಿ ಹುಟ್ಟುವುದೇ ಒಂದು ದೊಡ್ಡ ಭಾಗ್ಯ ಎಂದು ಎಣಿಸಿದ್ದ ಆತ. ಅಲ್ಲಿ, ಮನುಷ್ಯರಾಗಿ ಹುಟ್ಟುವ ಪುಣ್ಯವಿಲ್ಲದಿದ್ದರೆ, "ಮಱಿದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು" ಎಂಬುದು ಅವನ ಹಿರಿಹಂಬಲು. ನಮ್ಮಲ್ಲಿ ಎಷ್ಟು ಮಂದಿಗೆ ಈ ಹಂಬಲು ಇದ್ದೀತು ?

ಪಂಪನ ತರುವಾಯ ಬಂದ ಪೂರ್ವಕವಿಗಳು ಅವನಿಗೆ ಅರ್ಪಿಸಿರುವ ಪುಷ್ಪಾಂಜಲಿಯಿಂದ ಒಂದೆರಡು ಹೂಗಳ 'ಪ್ರಸಾದ' ಎತ್ತಿಕೊಡಬಯಸುತ್ತೇವೆ, ಭಕ್ತಿಯಿಂದ ಮುಡಿಗಿಟ್ಟುಕೊಳ್ಳಲು. 'ಸುಭಗಕವಿ ಪಂಪನಿಂ ವಾಗ್ವಿಭವೋನ್ನತಿ ನೆಗಱ್ದುದು' (ರನ್ನ); 'ಸುಕವಿ ಪಂಪ' (ನಾಗಚಂದ್ರ); 'ಪಂಪನ ಗೀರ್ಗುಂಫವ ಪೆಂಪು' (ದುರ್ಗಸಿಂಹ); 'ಗುರುಹಂಪಪ್ರೋಕ್ತ ಪ್ರಯೋಗಃ' (ನಾಗವರ್ಮ); 'ಪಂಪನ ನುಣ್ಪುವೆತ್ತ ನುಡಿ' (ಪಾರ್ಶ್ವ ಪಂಡಿತ); 'ಪಂಪನಿಂಪು' (ಜನ್ನ); ಪಂಪನೋಜೆ' (ಗುಣವರ್ಮ): 'ಸತ್ಕವಿ ಪಂಪನ ಪೆಂಪು' (ಕಮಲಭವ); 'ಆದಿಕವಿ ಪಂಪ' (ಮಧುರ).

ಇಂಥ ಕವಿಯನ್ನು ಪಡೆದ ಕನ್ನಡನಾಡು ಧನ್ಯ. ಪಂಪನ 'ಆದಿ ಪುರಾಣ' ಗ್ರಂಥರಚನೆಯ (ಕ್ರಿ. ಶ. ೯೪೧) ಸಹಸ್ರ ಸಾಂವತ್ಸರಿಕ ಸ್ಮಾರಕೋತ್ಸವ ಆಚರಿಸುವ ಸುಯೋಗ ನಮ್ಮ ಪಾಲಿಗೆ ಬಂದಿರುವುದು ನಮ್ಮ ಸುಕೃತ. ಈಗಾಗಲೇ ಹಲವುಕಡೆ ಉತ್ಸವಗಳು ನಡೆದಿವೆ, ನಡೆಯುವವಾಗಿವೆ. ಬರುವ ಡಿಸೆಂಬರಿನಲ್ಲಿ ಪುಲಿಗೆರೆಯಲ್ಲಿ (ಲಕ್ಷ್ಮೇಶ್ವರ) ಈ ಮಹೋತ್ಸವವನ್ನು ದೊಡ್ಡ ಪ್ರಮಾಣದಲ್ಲಿ ಪ್ರಾತಿನಿಧಿಕ ರೀತಿಯಲ್ಲಿ ನಡಸುವ ಏರ್ಪಾಟು ನಡೆಯುತ್ತಿದೆ. ಕನ್ನಡಿಗರೆಲ್ಲರೂ ಈ ಉತ್ಸವಕ್ಕೆ ಎಲ್ಲ ಬಗೆಯ ಸಹಕಾರಗಳನ್ನೂ ನೀಡಿ, ಅದರಲ್ಲಿ ಭಾಗವಹಿಸಿ, ಅದು ಯಶಸ್ವಿಯಾಗುವಂತೆ ನೆರವಾಗಬೇಕೆಂದು ಬೇಡಿಕೊಳ್ಳುತ್ತೇನೆ.

ಪದಿನೂಱು ನೆಱೆಯೆ, ಪಿರಿದೊಸಗೆ ಮೆಱೆಯೆ,
ಪುಲಿಗೆಱೆಯು ತಿರುಳ ಕನ್ನಡದ ಪುರುಳ

ರಸರಸದ ಬಾವಿ ಮನೆಮನೆಗೆ ತೀವಿ
ತನ್ನೆರಡು ಪಾಟ್ಟುವೆಸೆಯೆ, ನೆಲನೊಸೆಯೆ

ತನ್ನ ಸೆಜಿಪೇ ಸೆಜಿವು
ತನ್ನ ತೇಜಮೆ ತೇಜಮ್
ಎನೆ ಬೆಳಪ ಪಂಪನ್
ಎಮ್ಮ ತಾಯ್ನುಡಿಗೀಗೆ ಪೊಸಪೊಸತು ಪೆಂಪನ್

೨೫-೧೦-೧೯೪೧.

ಗ್ರೀಕರ ತತ್ವಶಾಸ್ತ್ರ*

*　　*　　*

ಪ್ರಪಂಚದ ಜ್ಞಾನ ವಿಜ್ಞಾನ ವಿಮರ್ಶೆಗಳನ್ನೂ, ರಾಜಕೀಯ ಸಾಮಾಜಿಕ ರಚನೆಗಳನ್ನೂ, ಕಲಾಸಾಹಿತ್ಯ ಸೌಂದರ್ಯಗಳನ್ನೂ, ವಿಚಾರ ಕ್ರಮಗಳನ್ನೂ, ಬೇರೆ ಆಧಾರವನ್ನು ಬಯಸದೆ ಕೇವಲ ಬುದ್ಧಿ ವ್ಯಾಪಾರದ ಅನುಭವದಿಂದಲೇ ಸತ್ಯಾನ್ವೇಷಣ ಮಾಡತಕ್ಕ ಧೈರ್ಯ ಸ್ಥೈರ್ಯ ಗಳನ್ನೂ, ಪಾಶ್ಚಾತ್ಯ ಸಂಸ್ಕಾರ ವ್ಯವಹಾರಗಳ ಮೂಲಾಧಾರಗಳನ್ನೂ ಅರಿಯಬೇಕೆಂಬವರಿಗೆ-ಯಾವ ವಿದ್ಯಾವಂತನು ತಾನೇ ಇದನ್ನು ಅರಿಯದೆ ವಿದ್ಯಾವಂತನಾಗುವನು ?-ಪೂರ್ವಕಾಲದ ಗ್ರೀಕರ ಸರ್ವತೋಮುಖವಾದ ಸಾಹಿತ್ಯದ ಪರಿಚಯು ಅತ್ಯಾವಶ್ಯಕ. ಇತಿಹಾಸಕಾವ್ಯವೆ, ನಾಟಕವೆ, ಭಾವಗೀತೆಯೆ, ಚರಿತ್ರೆಯೆ, ತತ್ವವೆ, ವಾಗ್ಮಿತೆಯೆ, ರಂಜನಕಥೆಯೆ, ರಾಜಕೀಯ ಆದರ್ಶಗಳೆ, ಧಾರ್ಮಿಕ ಸೂಕ್ಷ್ಮತೆಯೆ, ವ್ಯಾವಹಾರಿಕ ವಿವೇಕವೆ, ಕಲೆಯೆ, ಶಿಲ್ಪವೆ, ಚಿತ್ರವೆ, ಸಂಗೀತವೆ, ವಿಜ್ಞಾನವೆ, ಕುಶಲಕರ್ಮವೆ, ನಿತ್ಯಜೀವನದ ಸೊಬಗೆ, ವ್ಯಾಯಾಮವೆ, ಆರೋಗ್ಯವೆ, ವಿನೋದವೆ, ಗಭೀರತೆಯೆ, ದ್ಯಾವಾಪೃಥಿವಿಯ ವಿಶ್ವವರ್ತನೆಯಲ್ಲಿ ಸಕಲ ಸೌಭಾಗ್ಯಗಳಿಗೂ ಪುರಾತನ ಹೆಲಸ್ ತವರುಮನೆಯಾಗಿತ್ತು. ಇಂತಹ ಇನ್ನೊಂದು ದೇಶವೆಂದರೆ, ಇಂತಹ ಇನ್ನೊಂದು ಜನವೆಂದರೆ ಪುರಾತನ ಭಾರತ, ಪುರಾತನ ಭಾರತೀಯರು. ಇವರಿಬ್ಬರ ಪರಸ್ಪರ ಸಂಬಂಧಗಳನ್ನು ಇನ್ನೂ ಪರಿಶೋಧನೆ

* ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಗ್ರಂಥಮಾಲೆಯ ೧೭ನೆಯ ಗ್ರಂಥವಾದ "ಗ್ರೀಕರ ತತ್ವಶಾಸ್ತ್ರಸಾರ ಸಂಗ್ರಹ"ಕ್ಕೆ ಬರೆದ ಮುನ್ನುಡಿಯಿಂದ(೧೯೪೧).

ಮಾಡಿ ಪ್ರಕಾಶಪಡಿಸುವುದರಲ್ಲೇ ನಾವಿದ್ದೇವೆ. ಇಂದಿನ ಭಾರತೀಯರು ಈ ಎರಡು ಜನರ ಇತಿಹಾಸಗಳನ್ನೂ, ಕಾರ್ಯಸಾಧನೆಗಳನ್ನೂ ವಿಶ್ವಾಸದಿಂದ ಅಭ್ಯಾಸ ಮಾಡಬೇಕು. ತಮ್ಮ ಹಿರಿಯರ ಹೆಸರುಗಳ ಸಾಲಿನಲ್ಲಿ ಗ್ರೀಕರ ಹಿರಿಯರ ಹೆಸರುಗಳನ್ನೂ ಕೂಡಿಸಿಕೊಳ್ಳಬೇಕು. ಹೋಮರ್, ಈಸ್ಕಿಲಸ್, ಸಾಕ್ರಟೀಸ್, ಪ್ಲೇಟೊ, ಅರಿಸ್ಟಾಟಲ್, ಹೆರೊಡೊಟಸ್, ಥೂಸಿಡಿಡಿಸ್, ಪೆರಿಕ್ಲಿಸ್, ಅಲೆಕ್ಸಾಂಡರ್, ಡೆಮಾಸ್ಥಿನಿಸ್, ಎಪಿಕ್ಟೆಟಿಸ್, ಮಾರ್ಕಸ್ ಅರೀಲಿಯಸ್—ಒಂದೊಂದು ವ್ಯಕ್ತಿಯೂ ಒಂದೊಂದು ಪ್ರಪಂಚ; ಒಂದೊಂದು ಉಪನಿಷತ್ತು : ಒಂದೊಂದು ಜೀವಸಂಜೀವನ.

ಕಸ್ಮೈ ದೇವಾಯ ಹವಿಷಾ ವಿಧೇಮ?—ಯಾವ ದೇವನನ್ನು, ಯಾವ ಆದರ್ಶ ಪುರುಷನನ್ನು, ಯಾವ ಸುಖ ಸಮಾಜವನ್ನು ನಾವು ಅವಲಂಬಿಸೋಣ? ನೆನೆಯೋಣ, ನಂಬೋಣ, ನುಡಿಯೋಣ, ನಡೆಯೋಣ? ನಮ್ಮ ಮುಂದಿನ ಮಾರ್ಗ ಎತ್ತ? ಭಾರತದ ಕೆಂಡ ಬೂದಿಯಿಂದ ಮುಚ್ಚಿ ಕನಲುತ್ತಿದೆ. ಊದಿಬಿಡುವ ಬೂದಿ ಯಾವುದು; ಊದಿ ಕನಲಿಸುವ ಕೆಂಡ ಯಾವುದು? ವಿಚಾರಪರರು ಪುರಾತನ ಭಾರತೀಯರ, ಪುರಾತನ ಗ್ರೀಕರ, ಆಧುನಿಕ ಪ್ರಪಂಚದ ಸಾರಾಸಾರ ವಿವೇಕದಿಂದ ಮುಂದುವರಿಯಬೇಕಾಗಿದೆ. ಈ "ಗ್ರೀಕರ ತತ್ತ್ವಶಾಸ್ತ್ರ" ಗ್ರಂಥ ಅಂತಹವರಿಗೆ ಒಂದು ಕಿಟಕಿಯನ್ನು ತೆರೆದು ಹೊಸ ನೋಟಗಳನ್ನೂ ವಿಚಾರಸ್ಫೂರ್ತಿಯನ್ನೂ ಕೊಡಬಲ್ಲುದೆಂದು ನಂಬಲಾಗಿದೆ.

ವಚನ ಧರ್ಮಸಾರ*

'ವಚನಧರ್ಮಸಾರ'ದಲ್ಲಿ ಸುಮಾರು ಎಂಟುನೂರು ವಚನಗಳನ್ನು ಸಂಗ್ರಹಿಸಿ, ಶಿವಶರಣರು ಸಾರಿದ ವಿಶ್ವವ್ಯಾಪ್ತಿಯುಳ್ಳ ಧರ್ಮದ ತಿರುಳನ್ನು ತೆಗೆಯಲು ಪ್ರಯತ್ನಪಟ್ಟಿದೆ. ವಚನಗಳು ಶಾಸ್ತ್ರವೂ ಅಹುದು; ಸಾಹಿತ್ಯವೂ ಅಹುದು. ಕನ್ನಡಸಾಹಿತ್ಯದ ಜೀವರತ್ನಗಳಾಗಿಯೂ, ಕನ್ನಡ ನುಡಿಯ ಚೆಲುವುಗಳಾಗಿಯೂ ಬೆಳಗುವ ಈ ಹಿರಿಮೆಯ ಮಾತುಗಳನ್ನು ಕನ್ನಡಿಗ

* ಮೈಸೂರು ವಿಶ್ವವಿದ್ಯಾನಿಲಯ ಗ್ರಂಥಮಾಲೆಯ ೧೯ನೆಯ ಗ್ರಂಥವಾದ "ವಚನ ಧರ್ಮಸಾರ"ಕ್ಕೆ ಬರೆದ ಮುನ್ನುಡಿಯಿಂದ. (೧೯೪೨).

ರೆಲ್ಲರೂ ಸವಿದು, ತಮ್ಮ ಹಿಂದಿನ ಇತಿಹಾಸದ ಉಜ್ವಲತೆಯನ್ನು ಅನುಭವಿಸ ಬೇಕೆಂಬ ಉದ್ದೇಶದಿಂದ ಈ ಗ್ರಂಥವನ್ನು ಬರೆದಿದೆ.

* * * *

ಶರಣಸಾಹಿತ್ಯ ಹುಟ್ಟಿದ ಕಾಲ, ಮಹಾಪುರುಷರಾದ ಪ್ರಮುಖ ಶರಣರು, ಅವರ ವ್ಯಕ್ತಿತ್ವ, ಉಪದೇಶ, ವೀರಶೈವ ಮತದ ವೈಶಿಷ್ಟ್ಯಗಳಾದ ಅಷ್ಟಾವರಣ ಷಟ್ಸ್ಥಲ ಸಿದ್ಧಾಂತಗಳ ಪ್ರತಿಪಾದನೆ, ಸಾಮಾನ್ಯವಾಗಿ ವಚನ ಗಳಲ್ಲಿ ತಿಳಿಯುವ ನೀತಿ, ಸ್ತ್ರೀಯರ ಸ್ಥಾನ, ಸಮಾಜಧ್ಯೇಯಗಳು, ಅವುಗಳ ಕಾವ್ಯಗಣ—ಈ ವಿಷಯಗಳನ್ನು ಈ ಗ್ರಂಥದಲ್ಲಿ ವಿವರಿಸಿದೆ. ಬಸವಣ್ಣ, ಚೆನ್ನಬಸವಣ್ಣ, ಅಲ್ಲಮಪ್ರಭು, ಸಿದ್ಧರಾಮ, ಮಹದೇವಿಯಕ್ಕ ಈ ಅಯ್ವರನ್ನು ಆಯ್ದು, ಅವರನ್ನು ಶರಣರಿಗೆಲ್ಲಾ ಹಿರಿಯ ಪ್ರತಿನಿಧಿಗಳಾಗಿ ಭಾವಿಸಿ, ಅವರ ಮೂಲಕವೇ ಹೆಚ್ಚಾಗಿ ಶರಣ ಧರ್ಮವನ್ನು ತೋರಿಸಿದೆ. ೧೨ನೆಯ ಶತ ಮಾನದ ಮಧ್ಯಭಾಗದ ಸಮಾಜದ ರಚನೆಯನ್ನೂ, ಶರಣರು ಸಾಧಿಸಿದ ಸುಧಾರಣೆ ಕ್ರಾಂತಿಗಳನ್ನೂ, ಅವರ ನಿರ್ಭಯ, ನಿರ್ದಾಕ್ಷಿಣ್ಯವಾದ ವಿಚಾರ ಪರತೆಯನ್ನೂ ವಿಮರ್ಶಿಸಿದೆ. ಮುತ್ತಿನ ಮಣಿಯಂತೆ ಹೊಳೆಯುವ ತಿಳಿ ಗನ್ನಡದ ನಡೆಯನ್ನೂ, ಎಲ್ಲ ಜನಕ್ಕೂ ಬೆಳಕನ್ನು ಬೀರಬೇಕೆಂಬ ದೊಡ್ಡ ನೋಟವನ್ನೂ ಸ್ಪಷ್ಟಪಡಿಸಿದೆ.

* * * *

ಲೋಕದ ಮತಗಳಲ್ಲಿ ಕೇವಲ 'ಮತ'ಗಳೂ, ಮತೀಯಾಂಶಗಳೂ, ಪುರಾಣಕಥೆಗಳೂ, ಪುರಾತನ ಜೀವನಚರಿತ್ರೆಗಳೂ, ತತ್ವವಿಚಾರಗಳಲ್ಲಿ ವೈಶಿಷ್ಟ್ಯಗಳೂ, ಸಂಸ್ಕಾರಪ್ರತಿಕ್ರಿಯೆಗಳೂ ಮುಂತಾದ ವಿಚಾರಗಳು ಸೇರಿರು ತ್ತವೆ. ಇವುಗಳಲ್ಲಿ ಹಲವು ಸಮಾಜವನ್ನು ಒಡೆಯುತ್ತವೆ: ಬೇರೆ ಬೇರೆ ಗುಂಪುಗಳಾಗಿ ವಿಂಗಡಿಸುತ್ತವೆ. ಜ್ಞಾನದೃಷ್ಟಿಯಿಂದ ವಿಚಾರಮಾಡತಕ್ಕವ ನಿಗೆ, ತತ್ವಕಾಮುನಿಗೆ, ಇವೆಲ್ಲಾ ಬೇಕಾದ ಸಂಗತಿಗಳೇ. ಇವಕ್ಕೂ ಮೇಲಾಗಿ ಮಾನವನು ಮಾನವ ಕುಲಕ್ಕೆ ಹೊಂದಿಕೊಂಡು, ತನ್ನ ಆತ್ಮಶುದ್ಧಿಯನ್ನೂ, ಎಲ್ಲರ ಪ್ರೇಮಸಂಬಂಧವನ್ನೂ ಬೆಳಸಿಕೊಂಡು "ಇಲ್ಲಿಯೂ ಅಲ್ಲಿಯೂ ಸಲ್ಲು ವಂತೆ" ಬಾಳುವುವೇ ಮುಖ್ಯ ಗುರಿಯಾಗಿರಬೇಕು. ಆದುದರಿಂದರಿಂದಲೇ "ಮತ"ಕ್ಕಿಂತಲೂ 'ಧರ್ಮ' ದೊಡ್ಡ ಮಾತು. ಮತ ಕಾದಿ ಮಡಿದರೆ, ಧರ್ಮ

ಕೂಡಿಸಿ ಬದುಕಿಸುತ್ತವೆ. ಅಹಂಕಾರ, ಪ್ರತಿಷ್ಠೆ, ವಾದ, ತಾನೇ ಸರಿ ಎಂಬ ಹಟ ಒಂದು : ವಿನಯ, ಸೇವೆ, ತ್ಯಾಗ, ಸಾಮರಸ್ಯ, ಗಾಳಿಯಂತೆ ಎಲ್ಲರಿಗೂ ಜಾಗಬಿಡತಕ್ಕ, ಎಲ್ಲರಿಗೂ ಉಸಿರಾಗತಕ್ಕ, ದೊಡ್ಡ ಗುಣ ಮತ್ತೊಂದು. ಲೋಕಕಲ್ಯಾಣಕ್ಕೆ, ಭವರೋಗವೈದ್ಯಕ್ಕೆ, ಧರ್ಮ, ಸನಾತನಧರ್ಮ, ವಿಶ್ವ ದರ್ಶನಧರ್ಮ ಎಷ್ಟು ಅಗತ್ಯವೆಂದು ಎಲ್ಲ ಮತೀಯರೂ ತಿಳಿಯಬೇಕಾದ ಅಗತ್ಯ ಈಗ ಒದಗಿದೆ.

ಸತ್ಯ, ಸೌಂದರ್ಯ, ಸ್ವಾತಂತ್ರ್ಯ, ಸಹಾನುಭೂತಿ, ಸರ್ವಸಮತೆ— ಇವೆಲ್ಲಾ ಸದ್ಧರ್ಮದ ಲಕ್ಷಣಗಳು. ಚಿನ್ನವೊಡನೆ ಕೂಡುವುದು ಚಿನ್ನ— ಹಿತ್ತಾಳೆಯಲ್ಲ; ಪಾದರಸದೊಡನೆ ಹೊಂದಿಕೊಳ್ಳುವುದು ಪಾದರಸ, ಕಸ ವಲ್ಲ. ತೂರಬೇಕು, ಸೋಸಬೇಕು, ಒರೆಗಲ್ಲಿಗೆ ತೀಡಬೇಕು, ನೋಡಬೇಕು. ಎಲ್ಲ ಕಡೆಯಿಂದಲೂ ಒಳ್ಳೆಯದನ್ನು ತುಂಬಿಕೊಳ್ಳಬೇಕು. ಆಗ್ಗೆ ನಮ್ಮ ಪ್ರಾರ್ಥನೆ ನಿಜ—

ಅಸತೋ ಮಾ ಸದ್ಗಮಯ
ತಮಸೋ ಮಾ ಜ್ಯೋತಿರ್ಗಮಯ
ಮೃತ್ಯೋರ್ಮಾ ಅಮೃತಂ ಗಮಯ.

ಒಂದು ಮತ, ಧರ್ಮ, ಪ್ರಪಂಚದ ಒಂದು ಭಾಗದಲ್ಲಿ ಮಾತ್ರ ನಿಂತಿರಬಹುದು; ಮತ್ತೊಂದು ಪ್ರಪಂಚದಲ್ಲೆಲ್ಲಾ ಹರಡಿ ಬೆಳೆಯುತ್ತಿರ ಬಹುದು. ಆದರೆ ಬೆಲೆ ಜನಸಂಖ್ಯೆಯ ಮೇಲೆ, ವಿಸ್ತೀರ್ಣದ ಮೇಲೆ ನಿಂತಿಲ್ಲ. ಬೆಲೆ ಬೆಲೆಯ ಮೇಲೆ ನಿಂತಿದೆ. ವಚನ ಧರ್ಮದ ಧರ್ಮಸಾರ ಯಾರಿಗೂ ಸತ್ಯವೇ, ಯಾರಿಗೂ ಧರ್ಮವೇ. ಈ ಮಹಾವಾಕ್ಯಗಳಿಗಿಂತ ಹೆಚ್ಚಿನ ಧರ್ಮ, ಸತ್ಯ ಎಲ್ಲಿ ಕಾಣಬಹುದು ?—

ದೇವನೊಬ್ಬ ನಾಮ ಹಲವು.
ದಯವಿಲ್ಲದ ಧರ್ಮವಾವುದಯ್ಯಾ ?
ಅಯ್ಯಾ ಎಂದಡೆ ಸ್ವರ್ಗ, ಎಲವೋ ಎಂದಡೆ ನರಕ.
ನೊಂದ ನೋವ ನೋಯದವರೆತ್ತ ಬಲ್ಲರು ?

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ, ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ, ಇದೇ ನಮ್ಮ ಕೂಡಲಸಂಗಮದೇವನ ನೊಲಿಸುವ ಪರಿ.

ಹರ ತನ್ನ ಭಕ್ತರ ತಿರಿವಂತೆ ಮಾಡುವ. ಒರೆದು ನೋಡುವ ಸುವರ್ಣದ ಚಿನ್ನದಂತೆ, ಅರೆದು ನೋಡುವ ಚಂದನದಂತೆ, ಅರಿದು ನೋಡುವ ಕಬ್ಬಿನ ಕೋಲಿನಂತೆ, ಬೆದರದೆ ಬೆಚ್ಚದೆ ಇದ್ದಡೆ ಕರವಿಡಿದೆತ್ತಿಕೊಂಬ ನಮ್ಮ ರಾಮನಾಥ.

ಕೊಂದಡೆ ಶರಣೆಂಬುದು ಮಾಣೆ.

ಹುತ್ತವ ಬಡಿದಡೆ ಹಾವು ಸಾಯಬಲ್ಲುದೇ, ಅಯ್ಯ?

ಹಾವಿನ ಬಾಯ ಹಲ್ಲು ಕಳೆದು ಹಾವನಾಡಿಸಬಲ್ಲರೆ ಹಾವಿನ ಸಂಗವೇ ಲೇಸು ಕಂಡಯ್ಯ. ಕಾಯದ ಸಂಗವೇ ಲೇಸು ಕಂಡಯ್ಯ,

ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯಾ! ಒರೆಗೆ ಬಣ್ಣಕ್ಕೆ ತಂದೆನ್ನ ಪುಟವಿಕ್ಕಿ ನೋಡಯ್ಯಾ! ಕಡಿಹಕ್ಕೆ ಬಡಿಹಕ್ಕೆ ತಂದೆನ್ನ ಕಡಿಯಾಣಿಯ ಮಾಡಿ ನಿಮ್ಮ ಶರಣರ ಪಾದಕ್ಕೆ ತೊಡಿಗೆಯ ಮಾಡಿ ಸಲಹು ಕೂಡಲಸಂಗಮದೇವಾ!

ಶಿವನೊಡವೆಯ ಶಿವನಿಗೊಪ್ಪಿಸಿ.

ಇದೇ ಶರಣರ ಧರ್ಮಸಾರ, ಇದೇ ಶಿವಕುಲದ ಶಿವಪಥ. ಶಿವಂ ಭೂಯಾತ್.

ತಮಿಳಿನ 'ಪುಱನಾನೂಱು'ನಲ್ಲಿ ಪೊಯ್ಸಳರು?

ಸುಮಾರು ಒಂದು ಎರಡನೆಯ ಶತಮಾನದ ಕಾಲದ್ದೆಂದು ಹೇಳುವ 'ಪುಱನಾನೂಱು' ಎಂಬ ತಮಿಳಿನ ಗ್ರಂಥದಲ್ಲಿ ಎರಡು ಕವಿತೆಗಳು ಹೊಯ್ಸಳರ ರಾಜವಂಶವನ್ನು ಸೂಚಿಸುವಂತಿವೆ. ಹೊಯ್ಸಳರ ಕಾಲ ೯ನೆಯ ಶತಮಾನದ ಕಡೆಯಿಂದ ೧೪ನೆಯ ಶತಮಾನದ ಮೊದಲನೆಯ ಭಾಗದವರೆಗೆ ಆಗುವುದರಿಂದ ಈ ಸೂಚನೆ ನಿಜವೇ ಎಂಬ ಪ್ರಶ್ನೆ ಏಳುತ್ತದೆ. ಈ ಕವಿತೆಗಳು ಪುಱನಾನೂಱಿನ ೨೦೧-೨೦೨ ಆಗಿವೆ. ಇವನ್ನು ಹಾಡಿದವರು ಕಡೆಯ ಸಂಘದ ಪ್ರಸಿದ್ಧ ಕವಿಗಳಾದ ಕಪಿಲರು. ತನ್ನ ಕೆಳೆಯನಾದ ಪಱಂಬುನಾಡಿನ ಪಱಂಬುಮಲೆಯ ಒಡೆಯನಾದ ವೇಳ್‌ಪಾರಿ ಸತ್ತಮೇಲೆ ಅವನ ಇಬ್ಬರು ಹೆಣ್ಣುಮಕ್ಕಳನ್ನು ಕರೆದುಕೊಂಡು ವಿಚ್ಚಿಕ್ಕೋನ್ ಎಂಬ ದೊರೆಯ ಬಳಿ ಹೋಗಿ, ಅವರನ್ನು ಮದುವೆಮಾಡಿಕೊಳ್ಳಬೇಕೆಂದು ಕವಿ ಕೇಳಿದನು. ರಾಜನು ಒಪ್ಪಲಿಲ್ಲ. ಆಮೇಲೆ ಉತ್ತರ ದಿಕ್ಕಿನಲ್ಲಿ ಹೋಗಿ **ತುವರೈ** ಎಂಬ ಊರನ್ನು ಆಳುವ **ಇರುಂಗೋವೇಳ್** ಎಂಬ ಅರಸನನ್ನು ಬೇಡಲು ಅವನೂ ಒಪ್ಪಲಿಲ್ಲ.

ಅಲ್ಲಿಂದ ಹೋಗಿ ಬ್ರಾಹ್ಮಣರಿಗೆ ಆ ಹೆಣ್ಣುಮಕ್ಕಳನ್ನು ಮದುವೆಮಾಡಿ ಕೊಟ್ಟನು (೨೩೬) ಎಂದು ಮೇಲೆ ಹೇಳಿದ ಕವಿತೆಗಳಿಂದ ತಿಳಿದುಬರುತ್ತದೆ.

ಇರುಂಗೋವೇಳ್ ಎಂಬ ರಾಜನನ್ನು ಈ ಎರಡು ಕವಿತೆಗಳಲ್ಲಿ **ಪುಲಿ ಕಡಿಮಾಲ್** ಎಂದು ಕರೆದಿದೆ. ಈ ಗ್ರಂಥದ ಹಳೆಯ ಒರೆಯಲ್ಲಿ (ಉರೈ = ಅರ್ಥವಿವರಣೆ) ತುವರೈ ಎನ್ನುವುದಕ್ಕೆ ತುವರಾಪತಿ = ದ್ವಾರಾವತಿಯೆನ್ನುಂ ಪಡೈ ವೀಡು, ಎಂದು ಹೇಳಿದೆ. ಗ್ರಂಥದ ಸಂಪಾದಕರಾದ ಡಾಕ್ಟರ್ ಸ್ವಾಮಿ ನಾಥಯ್ಯರವರು ದ್ವಾರಾವತಿಯನ್ನು ದ್ವಾರಸಮುದ್ರವೆಂದು ಸ್ಪಷ್ಟಪಡಿಸಿ ದ್ದಾರೆ. ಪುಲಿಕಡಿಮಾಲ್ ಎಂದರೆ ಹುಲಿಯನ್ನು ಕಡಿದ ವೀರ ಎಂಬ ಮಾತು, ಸಳನು ಹುಲಿಯನ್ನು ಹೊಯ್ದು ಹೊಯ್ಸಳ ಎಂಬ ಹೆಸರನ್ನು ಪಡೆದ ಕಥೆ ಯನ್ನು ನೆನಪಿಗೆ ತರುತ್ತದೆ. ಒಟ್ಟಿನಮೇಲೆ ಈ ದ್ವಾರಾವತಿಯ ಹುಲಿ ಕಡಿ ದವನು ಹೊಯ್ಸಳನೇ ಎಂಬ ಪ್ರತೀತಿ ತಮಿಳರಲ್ಲಿ ಇದ್ದುದು ಹೊರಪಡುತ್ತದೆ. ೧೩ನೆಯ ಶತಮಾನದಲ್ಲಿ ಹೊಯ್ಸಳರು ತಮಿಳು ಜಿಲ್ಲೆಗಳನ್ನು ಗೆದ್ದು ಕಣ್ಣ ನೂರನ್ನು ರಾಜಧಾನಿಯಾಗಿ ಮಾಡಿಕೊಂಡಿದ್ದದ್ದು ಚರಿತ್ರೆಯ ವಿಷಯ ವಾಗಿದೆ.

ಪೊಯ್ಸಳರಿಗೂ ಪುಱನಾನೂಱಿನ ಈ ಎರಡು ಕವಿತೆಗಳಿಗೂ ಎರಡ ನೆಯ ಶತಮಾನದಷ್ಟು ಹಳೆಯದಾದುದೆಂದು ಊಹಿಸಿರುವ ಪುಱನಾನೂಱು ಗ್ರಂಥಕ್ಕೂ ಹೇಗೆ ಸಂಬಂಧ ಬಂದಿರಬಹುದು ?

ನಮಗೆ ಬೇಕಾದ ಭಾಗಗಳನ್ನು ಈ ಕವಿತೆಗಳಿಂದ ಎತ್ತಿತೆಗೆಯೋಣ.

೨೦೧. ನೀಯೇ ವಡಪಾನ್ ಮುನಿವನ್ ತಡವಿನುಳ್ ತೋನ್ಱಿ
....ತುವರೈಯಾಂಡು
ನಾಱ್ಪತ್ತೊಂಬದು ವೞಿಮುಱೈವಂದ
ವೇಳಿರುಳ್ ವೇಳೇ....
........ಪುಲಿಕಡಿಮಾಅಲ್
ಯಾನ್ ತರ ವಿವರೈ ಕೊಣ್ಮದಿ....

೨೦೨. ನೀಡುನಿಲೈಯರೈ ಯತ್ತುಕ್ಕೇಡುಂ ಕೇಳಿನಿ
ನುಂದೈ ತಾಯ ನಿಱೈವುಱ ವೆಯ್ದಿಯ....
........ಪುಲಿಕಡಿಮಾಅಲ್

ಸುಂಬೋೞಿಱ ವಿಸುಮುವರೊಳೊರುವನ್
ಪುಗೞ್ನ್ದ ಚೆಯ್ಯುಳ್ ಕಬಿಲಾಅತ್ತಲೈಯೈ
ಯಗೞ್ನ್ದ ದನ್‌ಪಯನೇ....

ಈ ಎರಡು ಭಾಗಗಳಲ್ಲಿ ಹುಲಿಯನ್ನು ಕಡಿದ ಈ ದೊರೆ ಬಡಗ ದೆಸೆಯಲ್ಲಿ ಒಬ್ಬ ಮುನಿಯ ಹೋಮಕುಂಡದಲ್ಲಿ ಹುಟ್ಟಿ ದ್ವಾರಾವತಿಯನ್ನು ಆಳಿ, ೪೯ ತಲೆಮೊರೆ ನಡೆದುಬಂದ ರಾಜವಂಶದ ರಾಜನೆಂದೂ, ಇವನ ಹಿರಿಯರು ಪಡೆದ ದಾಯಭಾಗ ತುಂಬಿ ಬಂದಿತೆಂದೂ ದೊಡ್ಡ ನೆಲೆಯಾದ 'ಅರೈಯ' ಎಂಬ ಊರು ನಾಶವಾಯಿತೆಂದೂ, ಅದು ಅವನಂತೆಯೇ ಹೀನಬುದ್ಧಿಯುಳ್ಳ ಅವರ ಹಿರಿಯನೊಬ್ಬನು ಪ್ರಸಿದ್ಧ ಕವಿಯಾದ ಕಬಿಲಾಅತ್ತಲೈಯನ್ನು ತೆಗಳಿದ್ದರ ಫಲವೆಂದೂ ಹೇಳಿರುತ್ತದೆ.

ಇಲ್ಲಿ ವಿಚಾರಿಸತಕ್ಕ ಸಂಗತಿಗಳು ಯಾವುವೆಂದರೆ :

೧. ಹೊಯ್ಸಳರ ಕಾಲಕ್ಕೂ ಪುಱನಾನೂಱಿನ ಕಾಲಕ್ಕೂ ಹೊಂದುತ್ತದೆಯೆ ?

೨. ಪುಲಿಕಡಿಮಾಲ್ ಎಂಬುದು ಸಳನಿಗೆ ಸಂಬಂಧಿಸಿದ್ದೇ ?

೩. ಸಳನ ಹಿಂದೆ ೪೯ ಮಂದಿ ಆ ವಂಶದ ರಾಜರು ಇದ್ದರೇ ?

೪. ವೇಳ್, ವೆಳ್ಳಾಳ, ಬಲ್ಲಾಳ, ಇವು ಒಂದೇ ಶಬ್ದದ ರೂಪಾಂತರಗಳೇ?

೫. ಹೋಮಕುಂಡದಲ್ಲಿ ಹುಟ್ಟಿದ್ದು ಹೊಯ್ಸಳರಿಗೆ ಇನ್ನೆಲ್ಲಾದರೂ ಹೇಳಿದೆಯೇ ?

೬. ತುವರೈ ಎಂಬುದು ದ್ವಾರಸಮುದ್ರವಾದರೆ ಅರೈಯ ಎಂಬುದು ಯಾವ ಊರು ? (ಇದು ಪೇರರೈಯಂ, ಚಿತ್ತರೈಯಂ ಎಂದ ಎರಡು ಭಾಗವಾಗಿತ್ತೆಂಬುದು ಹೇಳಿದೆ.)

೭. ಪುಱನಾನೂಱು ಸಂಗ್ರಹದ ಕವಿತೆಗಳೆಲ್ಲವೂ ಒಂದು ಕಾಲದ್ದಲ್ಲ, ಬೇರೆ ಬೇರೆ ಕಾಲದವು ಎಂದು ಊಹಿಸಿ, ಪುಱನಾನೂಱು ಎರಡನೆಯ ಶತಮಾನದಷ್ಟು ಹಳೆಯದಲ್ಲವೆಂದು ಸಂಶಯಪಡಬಹುದೆ ?

೮. ಹೋಮಕುಂಡದಲ್ಲಿ ಹುಟ್ಟಿದ್ದು, ಹುಲಿಯನ್ನು ಇರಿದದ್ದು, ಮೊಲ ನಾಯಿಯನ್ನು ಅಟ್ಟಿಸಿಕೊಂಡು ಹೋದದ್ದು, ಹಾವು ತಲೆಯ ಮೇಲೆ ಆಡಿದ್ದು, ಕೊಪ್ಪರಿಗೆ ಸಿಕ್ಕಿದ್ದು ಮುಂತಾದ ನಾಡ ಕಥೆಗಳು ಜನರಲ್ಲಿ ದಂತ

ಕಥೆಗಳಾಗಿ ತೇಲಾಡುತ್ತಿದ್ದು, ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ರಾಜರುಗಳಿಗೆ ಅಂಟಿಕೊಂಡಿರಬಹುದೆ ?

ಇವೇ ಮುಂತಾದ ವಿಚಾರಗಳನ್ನು ಚರಿತ್ರೆಯ ಶೋಧಕರು ವಿಮರ್ಶಿಸಬೇಕಾಗಿದೆ.

೧-೧೦-೧೯೪೩

ನಾಡಪದಗಳು*

ಶ್ರೀ ಮತಿಘಟ್ಟ ರಾಮಸ್ವಾಮಿ ಮತ್ತು ಕೃಷ್ಣಮೂರ್ತಿಯವರು ಸಂಗ್ರಹಿಸಿ ಶ್ರೀ ಎಲ್. ಗುಂಡಪ್ಪ, ಎಂ.ಎ., ಅವರು ಪರಿಚಯ ಟಿಪ್ಪಣಿಗಳನ್ನು ಬರೆದು ಸಂಪಾದಿಸಿರುವ ನಾಡಪದಗಳ ಸಂಗ್ರಹವನ್ನು ಓದಿ ಬಹಳ ಸಂತೋಷವಾಯಿತು. ಈ ರೀತಿ ಜನಪದ ಗೀತೆಗಳ ಸಂಗ್ರಹಗಳು ಉತ್ತರ ಕರ್ನಾಟಕ ಪ್ರಾಂತದಲ್ಲಿ ಧಾರವಾಡದಲ್ಲಿಯೂ ಇಲ್ಲಿ ಮೈಸೂರಿನಲ್ಲಿಯೂ ಈಗ ಕೆಲವು ವರ್ಷಗಳಿಂದಲೂ ನಡೆಯುತ್ತಲೇ ಇವೆ. ಇದುವರೆಗೆ ನಾನು ನೋಡಿರುವ ಸಂಗ್ರಹಗಳಲ್ಲೆಲ್ಲ ಈಗಿನ ಈ ಸಂಗ್ರಹವೇ ಸರ್ವೋತ್ತಮವಾದದ್ದು ಮತ್ತು ಅತ್ಯಂತ ಸ್ವಾರಸ್ಯವಾದದ್ದು. ಇದು ಸಂಗ್ರಹವಾಗಿ ಬಂದಿರುವುದು ಪ್ರಸಿದ್ಧ ಹೊಯ್ಸಳ ರಾಜಧಾನಿ ದೋರಸಮುದ್ರ (ಹಳೆಯಬೀಡು) ಪ್ರಾಂತದಿಂದ. ಇದರಲ್ಲಿ ಕೆಲವು ಚಾರಿತ್ರಿಕ ಲಾವಣಿಗಳೂ (ಉದಾ : ಲಕ್ಕಣ್ಣ ಈರಣ್ಣರೆಂಬ ರಾಜಕುಮಾರರನ್ನೂ ಶ್ರೀರಂಗಪಟ್ಟಣದ ಪತನವನ್ನೂ ಕುರಿತವು), ಅನೇಕ ಹೆಂಗಸರ ಹಾಡುಗಳೂ ಎದೆಗರಗಿಸುವ ಕರುಣಕಥೆಗಳೂ ಧಾರ್ಮಿಕ ಭಾವಗೀತೆಗಳೂ ಇವೆ. ಇವೆಲ್ಲ ಸಮಾಜ

---

* ಶ್ರೀಗಳಾದ ಮುತ್ತುರಾಮಸ್ವಾಮಿ ಮತ್ತು ಮತಿಘಟ್ಟ ಕೃಷ್ಣಮೂರ್ತಿಗಳಿಂದ ಆಯಲ್ಪಟ್ಟು ಶ್ರೀ ಎಲ್. ಗುಂಡಪ್ಪನವರಿಂದ ೧೯೪೭ರಲ್ಲಿ ಸಂಪಾದಿತ ಮತ್ತು ಪ್ರಕಾಶಿತವಾಗಿರುವ "ನಾಡಪದಗಳು" ಎಂಬ ಪುಸ್ತಕಕ್ಕೆ ಬರೆದ ಮುನ್ನುಡಿ. (೧೯೪೩)

ಜೀವನ, ಭಾವನೆ ಮತ್ತು ಸಂಸ್ಕೃತಿಗಳನ್ನು ಪ್ರತಿಬಿಂಬಿಸುತ್ತಿವೆ. ಈ ಕವನಗಳನ್ನೂ ಇಂಥ ಇತರ ಕವನಗಳನ್ನೂ ವಿಮರ್ಶಾತ್ಮಕವಾಗಿ ಅಭ್ಯಾಸ ಮಾಡಿದರೆ ಮೈಸೂರು ಚರಿತ್ರೆಯ ಮೇಲೆ ವಿಶೇಷ ಬೆಳಕು ಬೀಳುವುದು. ಇವುಗಳ ಆಧಾರದ ಮೇಲೆ ಭಾಷಾಶಾಸ್ತ್ರ ಮತ್ತು ಛಂದಶ್ಶಾಸ್ತ್ರಕ್ಕೆ ಸಂಬಂಧಿಸಿದ ಸಂಗತಿಗಳನ್ನೂ ಕುರಿತು ಅಭ್ಯಾಸಮಾಡಿ ತುಂಬ ಪ್ರಯೋಜನ ಪಡೆಯಬಹುದು. ಈ ಕವನಗಳು ವಿದ್ಯಾವಂತರಿಗೂ ಪಂಡಿತರಿಗೂ ಸ್ವಾರಸ್ಯವಾಗಿರುವುದು ಮಾತ್ರವೇ ಅಲ್ಲ; ಈಗ ನಾವು ಸಾಧಿಸಲು ಪ್ರಯತ್ನಿಸುತ್ತಿರುವ ಗ್ರಾಮಜೀವನದ ಪುನರುಜ್ಜೀವನ ಸಾಧನೆಯಲ್ಲೂ ಇವುಗಳ ಪ್ರಾಮುಖ್ಯ ವಿಶೇಷ ಮಹತ್ವ ಬೀರುವುದೆಂದು ನಾನು ಭಾವಿಸುತ್ತೇನೆ. ಕರುಳು ಕರುಳನ್ನು ಮಿಡಿಯುತ್ತದೆ. ಅಂತರಂಗ ಅಂತರಂಗವನ್ನು ತಟ್ಟಿ ಮಾರ್ದನಿಗೊಡುತ್ತದೆ. ನಮ್ಮ ಹಳ್ಳಿಗರ—ಗಂಡು ಹೆಣ್ಣುಗಳೆಲ್ಲರ—ಜೀವನ ಸಾರವನ್ನೆ ಹೊರಹೊಮ್ಮಿಸುತ್ತಿರುವ ಈ ಹಾಡುಗಳು ಅವರನ್ನು ತಣಿಸಿ ಹುರಿದುಂಬಿಸುವಂತೆ ಮತ್ತೆ ಯಾವುದೂ ಹುರಿದುಂಬಿಸಲಾರದು. ಇವುಗಳನ್ನು ಆಧಾರವಾಗಿಟ್ಟುಕೊಂಡು ನವೀನಕಾಲಕ್ಕೆ ಉಪಯುಕ್ತವಾದ ಅನೇಕ ಬೋಧನೆಗಳನ್ನು ಮಾಡಬಹುದು. ಈಗ ಬಿಡುವಿಲ್ಲದ ದುಡಿತ, ಬಡತನ, ನಿರಾಸೆ, ಎದೆ ಬಿರಿಸುವಂಥ ಸತ್ವಹೀನತೆ—ಇವುಗಳಲ್ಲಿ ಮುಳುಗಿ ಹೋಗಿರುವ ನಮ್ಮ ಜನಕ್ಕೆ ಆಟಪಾಟಗಳ ಮೂಲಕ ಬಹುಮಟ್ಟಿಗೆ ಹರ್ಷ ವಿಶ್ರಾಂತಿಗಳನ್ನುಂಟುಮಾಡಲು ಇವನ್ನು ಉಪಯೋಗಿಸಿಕೊಳ್ಳಬಹುದು. ನನ್ನ ಸ್ವಂತಕ್ಕೆ ಹೇಳುವುದಾದರೆ, ಚಿಕ್ಕಂದಿನಿಂದ ಮೊದಲುಗೊಂಡು ಜೀವಾವಧಿ ನನ್ನಲ್ಲಿ ನೆಲಸಿದ ಅಷ್ಟೊಂದು ಕನಸುಗಳನ್ನು ನನ್ನ ವಿದ್ಯಾರ್ಥಿಗಳು ಗ್ರಹಿಸಿ ಒಂದಲ್ಲ ಒಂದು ಬಗೆಯಲ್ಲಿ ನನಸಾಗಿಸಿ ಸಾಧಿಸುತ್ತಿರುವರೆಂಬುದು ನನಗೆ ಬಹಳ ಹೆಮ್ಮೆಯ ವಿಷಯ. ಈ ಹಾಡುಗಳ ಸಂಗ್ರಾಹಕರನ್ನೂ ಅದರ ಸಂಪಾದಕರನ್ನೂ ಅವರ ಬಹು ಸೊಗಸಾದ ಈ ಕಾರ್ಯಕ್ಕಾಗಿ ಅಭಿನಂದಿಸುತ್ತೇನೆ.

ಸಾಕ್ರಟೀಸ್*

"ವಿಚಾರವಿಲ್ಲದ ಬಾಳು ಬಾಳಲ್ಲ; ತಿಳಿವಳಿಕೆಯಿಂದ ನಡೆಯದ ನಡತೆ ನಡತೆಯಲ್ಲ; ಜ್ಞಾನವೇ ಶೀಲ"—ಎಂದು ಸಾಕ್ರಟೀಸ್ ಒತ್ತಿ ಒತ್ತಿ ಹೇಳುತ್ತಿದ್ದನು. ಸತ್ಯ ಯಾವುದು, ಧರ್ಮ ಯಾವುದು ಎಂಬ ನಿಷ್ಪಕ್ಷಪಾತವಾದ ವಿಚಾರ; ಅಂತಹ ವಿಚಾರದಿಂದ ಒಂದು ನಿರ್ಣಯಕ್ಕೆ ಬಂದ ಜ್ಞಾನ; ಆ ಜ್ಞಾನದಿಂದ ಪರಿಷ್ಕೃತವಾದ ಆತ್ಮ; ಎಲ್ಲಾ ನಡೆ, ನುಡಿ, ಬಗೆ, ಗುರಿಗಳಲ್ಲಿ ಅಂತಹ ಆತ್ಮವೇ ಕಾಣಿಸಿಕೊಳ್ಳುತ್ತಿರುವ ಜೀವನ; ರಾಗದ್ವೇಷಗಳನ್ನು ಬಿಟ್ಟು, ಕಷ್ಟ ಸುಖಗಳಲ್ಲಿ ಸಮಚಿತ್ತವನ್ನಿಟ್ಟು, ಸೆರೆ ಮನೆಗೂ ಕಡೆಗೆ ಸಾವಿಗೂ ಹೆದರದೆ, ಕರ್ತವ್ಯವನ್ನು ನೆರವೇರಿಸುವ ಸತ್ಯ ಸಂಕಲ್ಪ; ಅಹಿಂಸೆ; ದಯೆ;—ಇದು ಆ ಮಹಾತ್ಮನ ಜೀವನ ಚರಿತ್ರೆಯ ಸಾರ. ಪ್ರಪಂಚದ ಎಲ್ಲಾ ಮಹಾತ್ಮರ ಜೀವನದ ತಿರುಳೂ ಇದೇ. ದೇಶ ಕಾಲಾನುಗುಣ್ಯವಾಗಿ ವೇಷಭಾಷೆಗಳಲ್ಲಿ ಆಚಾರ ವ್ಯವಹಾರಗಳಲ್ಲಿ ಭೇದ ಕಾಣಬಹುದು, ಆತ್ಮಗುಣಗಳಲ್ಲಿ ಭೇದವಿಲ್ಲ. ಧರ್ಮಶಾಸ್ತ್ರಗಳಲ್ಲಿ, ಪುರಾಣ ಗಳಲ್ಲಿ, ಉತ್ತಮ ಸಾಹಿತ್ಯಗಳಲ್ಲಿ ಇದನ್ನು ಓದುವಾಗ ನಮಗೆ ನಂಬಿಕೆ ಹುಟ್ಟದಿರಬಹುದು. ಈ ವ್ಯಕ್ತಿಗಳು, ಈ ಲಕ್ಷಣಗಳು ಬಲಹೀನನಾದ ಆದರೆ ಧರ್ಮಪ್ರಿಯನಾದ ಮನುಷ್ಯನು ಆತ್ಮತೃಪ್ತಿಗಾಗಿ ಕಟ್ಟಿಕೊಂಡ ರಂಜನ ಕಥೆಗಳಾಗಿ ತೋರಬಹುದು. ಆದರೆ, ಈಗ, ಭರತ ಭೂಮಿಯಲ್ಲಿ ಮಹಾತ್ಮ ಗಾಂಧಿಯವರ ದಿವ್ಯ ತೇಜಸ್ಸನ್ನು ಕಂಡು, ಅನುಭವಿಸಿ, ಯಥಾಶಕ್ತಿ ಯಾಗಿ ಹಿಂಬಾಲಿಸಿದ ಧೀರ ಭಾರತ ಪುತ್ರ ಪುತ್ರಿಯರಿಗೆ ಇದು ನಂಬತಕ್ಕ ವಿಷಯ, ಮಾನವ ಸಾಧನೆಗೆ ಒಳಪಟ್ಟ ಆದರ್ಶ, ನಿಸ್ಸಂಶಯವಾದ ನಿತ್ಯ ಜೀವನ.

ಬಲಹೀನರಾದ ಜನರು ಇದೆಲ್ಲಾ ಅವತಾರ ಪುರುಷರಿಗೆ ಹೇಳಿದ್ದು; ನಮ್ಮಿಂದ ಸಾಧ್ಯವಲ್ಲವೆಂದು ಕೈಕಟ್ಟಿಕೊಂಡು ಕುಳಿತುಕೊಳ್ಳದೆ, ಒಂದಲ್ಲ ಹತ್ತುಕಡೆ ಈ ತತ್ವವನ್ನು ಕಂಡು, ನಂಬಿ, ನಡೆದು, ಆತ್ಮಲಾಭವನ್ನು ಪಡೆದು ಮುಕ್ತರಾಗಬೇಕು....

---

* ಶ್ರೀ ಸಿ. ರಾಜಗೋಪಾಲಾಚಾರಿಯವರ 'ಸೋಕ್ರಟೀಸ್' ಎಂಬ ತಮಿಳು ಪುಸ್ತಕದ ಕನ್ನಡ ಅನುವಾದ ಗ್ರಂಥಕ್ಕೆ ಬರೆದ ಮುನ್ನುಡಿ. (೧೯೩೧)

ಹಳ್ಳಿಗಳ ಏಳಿಗೆ*

ಮಹಾತ್ಮಾಗಾಂಧಿಯವರು ಭಾರತದ ಸ್ವಾತಂತ್ರ್ಯಕ್ಕೆ ಹಳ್ಳಿಗರ ಏಳಿಗೆಯೇ ತಳಹದಿಯೆಂದು ಸಾರಿ ಸಾರಿ ಹೇಳುತ್ತಿದ್ದಾರೆ; ಮತ್ತು ಅದಕ್ಕೆ ಬೇಕಾದ ಏರ್ಪಾಡುಗಳನ್ನು ಹೂಡುತ್ತಿದ್ದಾರೆ.

ವಿಧಿವಿಲಾಸದಿಂದ ನೂರು ನೂರೈವತ್ತು ವರ್ಷಗಳಿಂದೀಚೆಗೆ ಖಿಲವಾಗಿ ಕೆಟ್ಟಿರುವ ನಮ್ಮ ಹಳ್ಳಿಗಳ ಎಲ್ಲ ಬಗೆಯ ಕೊಳಕು ಕೊರತೆಗಳು ಮಾಯವಾಗಿ ಅವು ಮತ್ತೊಮ್ಮೆ ನಂದನವನಗಳಾಗಬೇಕು. ಜನ ತೇಜಸ್ವಿಗಳಾಗಬೇಕು. ಚೊಕ್ಕಟ, ಆರೋಗ್ಯ, ವಿದ್ಯೆ, ಒಕ್ಕಟ್ಟು, ಸಾಹಸ, ದೇಶಾಭಿಮಾನ, ಭಾಷಾಭಿಮಾನ, ಧರ್ಮಶ್ರದ್ಧೆ, ತುಂಬುಬದುಕು ಹಳ್ಳಿಗರಲ್ಲಿ ಮತ್ತೆ ಮನೆಮಾಡಬೇಕು. ಎಲ್ಲೆಲ್ಲಿಯೂ ಸಿರಿಯೂರು, ಸಿರಿಹಟ್ಟಿ, ಸಿರಿಹೊಳಲು ಎಂಬ ಹೆಸರುಗಳು ಒಪ್ಪಿಕೆಯಾಗಿ ಹೊಂದಿ ಜನಪದ ಹಾಡುಗಳು ಮತ್ತೆ ಊಟಿ ಬುಗ್ಗೆಯಂತೆ ನಲಿದಾಡಬೇಕು. ಗೆಯ್ಮೆ ಗೆಯ್ಯುತ್ತಾ ಹಾಡು ಹೊಮ್ಮಬೇಕು, ನಾಡು ಹಸನಾಗಬೇಕು. ನಾಡಿನ ಮುಂದಾಳುಗಳ ಆಸೆ ಇದು.

ಹಳ್ಳಿಗಳು ದೊಡ್ಡ ಬದುಕು ಬುದುಕಿದರೆ ನಾಡಿಗೆ ನಾಡೇ ಬಾಳೀತು, ಬೆಳಗೀತು....

---

* ಶ್ರೀಮಾನ್ ಎನ್. ಶಿ. ಅಣ್ಣಯ್ಯನವರಿಂದ ರಚಿತವಾದ 'ಗುಡಿಸಲ ಗುರು' ಎಂಬ ಪುಸ್ತಕಕ್ಕೆ ಬರೆದ ಮುನ್ನುಡಿಯಿಂದ. (೧೯೪೫, ಧಾರವಾಡ)

ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ

III

ಕಾವ್ಯಾವಲೋಕನಂ

ಕಾವ್ಯಾವಲೋಕನಂ

೧. ಮೈಸೂರು ವಿಶ್ವವಿದ್ಯಾನಿಲಯದ ಓರಿಯೆಂಟಲ್ ಲೈಬ್ರರಿಯ ೨೨ ನೆಯ ಸಂಖ್ಯೆಯ ಪ್ರಕಟನೆ: ಎರಡನೆಯ ಮುದ್ರಣ, ಸಂಪಾದಕರು: ಶ್ರೀಗಳಾದ ಎಂ. ಎಚ್. ಬಸವಲಿಂಗಯ್ಯನವರು, ಎಂ. ಎ., ಬಿ. ಎಲ್. ಮತ್ತು ಎಚ್. ಆರ್. ರಂಗಸ್ವಾಮಿ ಅಯ್ಯಂಗಾರರು, ಎಂ. ಎ., ಡೆಮಿ ಅಷ್ಟ ಪತ್ರ LXXIX + ೨೪೮ ಪುಟಗಳು. ಬೆಲೆ ೧ ರೂ. ೮ ಆಣೆ. ೨. ಧಾರವಾಡದ ವಿದ್ಯಾವರ್ಧಕ ಸಂಘದ ಪ್ರಕಟನೆ: ಮೊದಲನೆಯ ಮುದ್ರಣ. ಸಂಪಾದಕರು: ಶ್ರೀಗಳಾದ ಶಿ. ಶಿ. ಬಸವನಾಳ, ಎಂ. ಎ. ಅವರು ಮತ್ತು ವಿದ್ವಾನ್ ಕೇಪು ಶಂಕರನಾರಾಯಣ ಅವರು. ಡೆಮಿ ಅಷ್ಟಪತ್ರ ೮ + ೩೨೫ + ೨೬ ಪುಟಗಳು. ಬೆಲೆ ?

ನಾಗವರ್ಮನು ೧೨ ನೆಯ ಶತಮಾನದ ಕನ್ನಡ ಕೈಪಿಡಿಕಾರನೆಂದು ಧಾರಾಳವಾಗಿ ಹೇಳಬಹುದು. ತನ್ನ ಕಾಲದ ಜೈನಗ್ರಂಥಗಳೆಲ್ಲವನ್ನೂ 'ಅವಲೋಕನ' ಮಾಡಿ, ಲಕ್ಷಣಾಚಾರ್ಯನಾಗಿ, ವ್ಯಾಕರಣ ಛಂದಸ್ಸು ಅಲಂಕಾರ ನಿಘಂಟುಗಳನ್ನು ರಚಿಸಿದನು. ಸಂಸ್ಕೃತ ಪಂಡಿತನಾಗಿದ್ದು ಸಂಸ್ಕೃತ ಸೂತ್ರ ರೂಪದಲ್ಲಿ 'ಭಾಷಾ ಭೂಷಣ' ವೆಂದೂ, ಕಾವ್ಯಾವಲೋಕನದಲ್ಲಿ ಕನ್ನಡ ಕಂದಗಳಲ್ಲಿ 'ಶಬ್ದ ಸ್ಮೃತಿ' ಎಂದೂ ಕನ್ನಡ ವ್ಯಾಕರಣವನ್ನು ನಿರ್ಮಿಸಿದನು. ಈ ಶಬ್ದಸ್ಮೃತಿಯನ್ನು ವಿಸ್ತರಿಸಿಯೇ ಕೇಶಿರಾಜನು ಶಬ್ದಮಣಿ ದರ್ಪಣವನ್ನು, ಭಾಷಾ ಭೂಷಣವನ್ನು ವಿಸ್ತರಿಸಿ ಭಟ್ಟಾಕಲಂಕನು ಶಬ್ದಾನುಶಾಸನವನ್ನು ಬರೆದಿರುವರು. ಒಂದು ಜೈನ ಪುರಾಣವನ್ನು ರಚಿಸಿ ಲಕ್ಷ್ಯವನ್ನು ನಾಗವರ್ಮನು ಕೊಟ್ಟಿರುವನು. ಅಂದ ಮೇಲೆ ಆತನ ಪಾಂಡಿತ್ಯವನ್ನೂ ಕನ್ನಡ ಭಾಷೆ ಸಾಹಿತ್ಯಗಳ ಅಭ್ಯಾಸಿಗಳಿಗೆ ಆತ ಒದಗಿಸಿರುವ ಸಹಾಯವನ್ನೂ ಹೆಚ್ಚು ಪ್ರಶಂಸಿಸಬೇಕಾಗಿಲ್ಲ.

ಈತನ ಕಾವ್ಯಾವಲೋಕನ ಮೊದಲು ೧೯೦೩ ರಲ್ಲಿ ಶ್ರೀ. ಕೀರ್ತಿಶೇಷರಾದ ಆಚಾರ್ಯ ರಾ. ನರಸಿಂಹಾಚಾರ್ಯರು ಪರಿಶೋಧಿಸಿ ಪ್ರಕಟಿಸಿದರು. ಈಗ ಮೈಸೂರು ಓರಿಯೆಂಟಲ್ ಲೈಬ್ರರಿಯ ಪುಸ್ತಕಗಳಲ್ಲೊಂದಾಗಿ ಶ್ರೀ ಎಂ. ಎಸ್. ಬಸವಲಿಂಗಯ್ಯನವರೂ, ಶ್ರೀ ಎಚ್. ಆರ್.

ರಂಗಸ್ವಾಮಿ ಅಯ್ಯಂಗಾರ್ ಅವರೂ ಎರಡನೆಯ ಮುದ್ರಣವನ್ನು ಹೊರಡಿಸಿದ್ದಾರೆ (೯-೮-೧೯೩೯). ಇದರಲ್ಲಿ ರಾ. ನರಸಿಂಹಾಚಾರ್ಯರ ವಿದ್ವತ್ಪೂರ್ಣವೂ, ಐತಿಹಾಸಿಕ ಸಂಶೋಧನೆಯನ್ನೊಳಗೊಂಡುದೂ ಆದ ಇಂಗ್ಲಿಷ್ ಪ್ರಬಂಧವನ್ನು ಮತ್ತೆ ಅಚ್ಚುಮಾಡಿದ್ದಾರೆ. ಅದರ ಸಾರಾಂಶವನ್ನು ಕನ್ನಡದಲ್ಲಿ ಕೊಟ್ಟಿದ್ದಾರೆ. ಕೆಲವು ಹೊಸ ಮಾತೃಕೆಗಳನ್ನು ಉಪಯೋಗಿಸಿಕೊಂಡು ಪಾಠಾಂತರಗಳನ್ನು ತೋರಿಸಿದ್ದಾರೆ. ಪರಿಶಿಷ್ಟಗಳಲ್ಲಿ ಸೂತ್ರಗಳಿಗೂ ಉದಾಹರಣೆಗಳಿಗೂ ಆಕರಗಳನ್ನೂ, ಸಂವಾದಿಗಳನ್ನೂ, ನೃಪತುಂಗ ಕೇಶಿರಾಜ ಮುಂತಾದವರ ಗ್ರಂಥಗಳ ಹೋಲಿಕೆಗಳನ್ನೂ ವಿವರಿಸಿದ್ದಾರೆ. ಇವೆಲ್ಲವೂ ಅಪಾರ ಪಾಂಡಿತ್ಯಕ್ಕೂ ಶ್ರಮಕ್ಕೂ ನಿದರ್ಶನವಾಗಿವೆ.

Bombay Kannada Research Grant Publication ಎಂಬ ಶಿರೋನಾಮದಲ್ಲಿ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ಶ್ರೀ ಶಿ.ಶಿ. ಬಸವನಾಳರೂ, ಶ್ರೀ ಕೇವು ಶಂಕರನಾರಾಯಣರೂ ಸಂಪಾದಕರಾಗಿ 'ಕಾವ್ಯಾವಲೋಕನ'ವನ್ನು ಪ್ರಕಟಿಸಿದ್ದಾರೆ (೩೦-೧೨-೩೯). ಇದರಲ್ಲಿ ಹೊಸ ಮಾತೃಕೆಗಳಿಂದ ಪಾಠಾಂತರಗಳನ್ನು ಕೊಟ್ಟಿರುವರಲ್ಲದೆ, ೧೩೦ ಪುಟದಷ್ಟು ಟಿಪ್ಪಣಿಯನ್ನು ಜೋಡಿಸಿದ್ದಾರೆ. "ವಿದ್ಯಾರ್ಥಿಗಳಿಗೆ ಅನುಕೂಲವಾಗಬೇಕೆಂಬ ದೃಷ್ಟಿಯಿಂದ ಪಂಡಿತರಿಗೆ ಮಾನ್ಯವಾಗಬೇಕೆಂಬ ಧಾರ್ಷ್ಟ್ಯದಿಂದಲ್ಲ" ಎಂದು ಮುನ್ನುಡಿಯಲ್ಲಿ ಹೇಳಿದ್ದರೂ ಇದು ವಿನಯದ ಮಾತು. ಒಂದೆರಡು ಕಡೆ ವಾದಾಸ್ಪದವಾದ ವಿವರಣೆಗಳಿವೆ ಎಂದು ಅಭಿಪ್ರಾಯ ಪಡಬಹುದಾದರೂ, ಈ ಟಿಪ್ಪಣಿ ಅತ್ಯಾವಶ್ಯಕವೆಂದೂ ಬಹು ಪ್ರಯೋಜನಕರವೆಂದೂ ಒಪ್ಪಬಹುದಾಗಿದೆ. ಪಾರಿಭಾಷಿಕ ಶಬ್ದಗಳ ಅನುಕ್ರಮಣಿಕೆಯೂ ಓದುಗರ ಅನುಕೂಲಕ್ಕೆ ಒದಗುತ್ತದೆ. ಎರಡು ಪ್ರಕಟನೆಗಳಲ್ಲಿಯೂ ಪದ್ಯಗಳ, ಸೂತ್ರಗಳ ಅಕಾರಾದಿ ಇದೆ.

ಇಷ್ಟು ಸಾಹಿತ್ಯವನ್ನೊಳಕೊಂಡ ಈ ಎರಡು ಪ್ರಕಟನೆಗಳೂ ಪರಿಶೋಧನ ಪಾಂಡಿತ್ಯದಿಂದ ಕೂಡಿ ಸಾಹಿತ್ಯಾಭ್ಯಾಸಿಗಳಿಗೆ ಬೇಕಾದ ಎಲ್ಲಾ ಅಂಶಗಳಲ್ಲಿಯೂ ನೆರವಾಗುತ್ತವೆಂಬುದರದಲ್ಲಿ ಯಾವ ಸಂಶಯವೂ ಇಲ್ಲ. ಇದಕ್ಕಾಗಿ ಕನ್ನಡ ಪ್ರಪಂಚ ಈ ಸಂಪಾದಕರೆಲ್ಲರಿಗೂ ಚಿರ ಕೃತಜ್ಞವಾಗಿರಬೇಕು.

ಗ್ರಂಥದ ಪಾಠ ಇವರೆಲ್ಲರ ಶ್ರಮದ ಫಲವಾಗಿ ಬಲುಮಟ್ಟಿಗೆ ಶುದ್ಧವಾಗಿದೆ. ಕೆಲವು ಕಡೆ ಇನ್ನೂ ಶುದ್ಧವಾಗಬೇಕೆಂದು ತೋರುತ್ತದೆ.

ಪಾಠದ ವಿಷಯದಲ್ಲಿ ಕೆಲವು ಸೂಚನೆಗಳನ್ನು ಕೊಡಬಹುದು.

(i) ಆಂ, ನೀಂ, ಎಂಗುಂ, ತಿಂಬಂ, ನಿಲ್ನಿಲ್ನಿಲ್ಲೆನೆ, ಬಾಳಕಿಯರ್ಬಳೆವರ್ನಿರಂತರಂ—ಇವು ಆನ್, ನೀನ್, (ಬಹುವಚನ—ಆವರ್, ನೀವರ್). ಎನ್ಗುಂ, ತಿನ್ಬಂ ; ನಿಲ್ ನಿಲ್ ನಿಲ್ಲೆನೆ, ಬಾಳಕಿಯರ್ ಬಳೆವರ್ ನಿರಂತರಂ—ಎಂದಿರುವುದು ಸುಕರ.

(ii) ನೆರೆಪು, ನೆರಪು—ಪರೆಪು, ಪರಪು—ತೆಱೆಪು, ತೆಱಪು—ನಡೆಪು, ನಡಪು—ಪದೆಪು, ಪದಪು : ಈ ಎರಡು ರೂಪಗಳಲ್ಲಿ ಎರಡನೆಯ ಯದು ಶುದ್ಧ.

(iii) ರ, ಱ; ಳ, ೞ—ಇದನ್ನು ಎಚ್ಚರಿಕೆಯಿಂದ ಬಿಡಿಸಬೇಕು. ಈಗಿನ ಅಚ್ಚಿನ ಪ್ರತಿಗಳಲ್ಲಿ ಇವು ಸರಿಯಾಗಿಲ್ಲವೆ ಓದುಗರಲ್ಲಿ ಭ್ರಮೆ ಯನ್ನುಂಟುಮಾಡುತ್ತಿವೆ. ಶೋಧನೆಯಲ್ಲಿ ಅನುಮಾನ ಬಂದ ಕಡೆ, ತಮಿಳನ್ನು ನೋಡಬೇಕು.

ಪದ್ಯ ೪೭ : ಉಳಿದುಳಿದು (ಮೈಸೂರು) ಸರಿ, (=ಅವಿತುಕೊಂಡು). ಉೞಿದುೞಿದು (ಧಾರವಾಡ) ಸರಿಯಲ್ಲ (=ಬಿಟ್ಟು ಬಿಟ್ಟು). ಪದ್ಯ ೨೫೦ ರಲ್ಲಿಯೂ ಹೀಗೆಯೇ.

೫೫ : ತಗುಳ್ಚಿ (ಮೈ) ಸರಿ, ತಗುೞ್ಚಿ (ಧಾ) ತಪ್ಪು.

೩೬೬ : ಅಱೆಯಟ್ಟು (ಮೈ), ಅರೆಯಟ್ಟು (ಧಾ). ಮೊದಲನೆ ಯದು ಸರಿ.

೪೦೫ : ಪೆಱವುಳಿ (ಮೈ), ಪೆಱವುೞಿ (ಧಾ).—ಉೞಿ ಸರಿ.

೪೩೩ : ಅರೆ ಉಳಿ (ಮೈ) ತಪ್ಪು, ಅರೆ ಉೞಿ (ಧಾ) ಸರಿ. ಉೞಿ—ಸಪ್ತಮೀ ವಿಭಕ್ತಿಪ್ರತ್ಯಯ (ತಮಿಳು ನನ್ನೂಲ್ ಸೂತ್ರ ೩೦೨).

೪೮೯ : ಕಿಳಿಱ್ (ಮೈ, ಧಾ), ಕಿಳಿರ್ (ಕೇಶಿರಾಜ: ರಾಂತಧಾತು)

೫೩೨, ೯೧೭ : ಎಸೞ್ (ಮೈ), ಎಸಳ್ (ಧಾ). ತಮಿಳು: ಇದೞ್, ಕೇಶಿರಾಜ : ಪೂವಿನೆಸಳೊಳ್ ಕುಳಂ. ಸೂತ್ರ ೧೯.

೫೫೫, ೬೬೩, ೭೨೮, ೭೪೭, ೭೮೫, ೯೦೪ : ಪೊದಳ್ (ಮೈ), ಪೊದಱ್ (ಧಾ). ಕಿಟ್ಟೆಲ್ : ಪೊದಱ್.

೭೦೪ : ಉಳ್ಕು (ಮೈ), ಉಱ್ಕು (ಧಾ). ಉಳ್ಕು ಎಂದೋದಿ.

೭೮೬ : ಮಱ (ಧಾ). ಶುದ್ಧ ತಪ್ಪು. ಮರ.

(iv) ಇನ್ನು ಕೆಲವು ಪಾಠಾಂತರಗಳನ್ನು ಚರ್ಚಿಸೋಣ :

(ಪಾಠಾಂತರಗಳನ್ನು ವಿಚಕ್ಷಣೆಯಿಂದ ಆಯ್ದುಕೊಡುವುದೊಳ್ಳೆಯದು. ಸಂದೇಹಕ್ಕವಕಾಶ ಇರುವ ಕಡೆ ಕೊಡಬೇಕು. ಪ್ರತಿವಾದುವವರ ಪ್ರಮಾದಗಳನ್ನೆಲ್ಲಾ ತೋರಿಸುವುದರಿಂದ ಪ್ರಯೋಜನವಿಲ್ಲ).

ಪದ್ಯ ೪೯ : ಜವಸಿಟ್ಟ ರಕ್ಕೆ (ಮೈ, ಧಾ). ಪಾಠಾಂತರ ಕೊಟ್ಟಿಲ್ಲ. ಕೇಶಿರಾಜ : ಸೂತ್ರ ೫೬—ಉದಾಹರಣೆ : ಜವಸಿಟ್ಟ ರಕ್ಕೆ. ಶ್ರವಣಬೆಳ್ಗೊಳ ಶಾಸನ ೫೯ (೩೮) ಜವನಿಟ್ಟ ರಕ್ಕೆ. ಯಾವುದು ಸರಿ ?

೫೫ : ಪಱಿಗನ್ನಡಂ ಪುದುಂಗೊಳೆ (ಮೈ, ಧಾ)—ಪಾಠಾಂತರ 'ಪಱಿಗನ್ನಡದ' (ಕೇಶಿರಾಜ : ಸೂತ್ರ ೬೫ ಹೀಗೆಯೇ) —'ಪಱಿಗನ್ನಡದೆ' ಇರಬಹುದೆ ?

೧೦೧ : ಅಘು (ಮೈ)—ಅವು : ಅಚ್ಚಿನ ತಪ್ಪು.

೨೩೧ : ಕೂರಸಿಯಿಂ (ಮೈ)—ಕೂರಸಿಯಂ (ಧಾ). ಮೊದಲನೆಯದು ಸರಿಯಲ್ಲವೆ ?

೨೯೮ : ನಾಟ್ಕಿಡೆ (ಮೈ), ನಾಟ್ಟುಡಿ (ಧಾ). ಎರಡನೆಯದು ಸರಿ.

೩೦೪ : ದೌದಲೆ (ಮೈ, ಧಾ)—ತೌದಲೆ (ತವುದಲೆ = ನಾಶ)

೩೦೭ : ಧಾರವಾಡದ ಪಾಠ ಶುದ್ಧ. ಪ್ರಾಸನೋಡಿ.

೩೧೦ : ಮೆ (ಮ)ಚ್ಚದೆ ನೋವದೆ (ಮೈ, ಧಾ)—ಮೆಚ್ಚದ ನೋವದೆ.

೩೧೧ : ಮೆಯ್ಯರೆ—ಮೆಯ್ಯುರಿ ? ಸಂದಂದಿನಿಬರ್—ಲುಂದಿಂದಿರುಳೊಳ್ ? (ಪಾಠಾಂತರ ನೋಡಿ).

೪೧೨ : ಧಾರವಾಡದ ಪಾಠ ಸೂಕ್ತ.

೪೦೩ : ಎಡೆಗೋದು (ಧಾ. ಗೊಂಡು). ಮೈಸೂರು ಪಾಠ ಸೂಕ್ತ.

೬೨೨ : ಪಕ್ಕದೊಳ್ (ವ್ಯೈ), ಪಟ್ಟಿಕೆಯೊಳ್ (ಧಾ). ಕೇಶಿರಾಜ : ಪಟ್ಟಿಕೆಯೊಳ್. (ನೃಪತುಂಗ : ೩,೧೩೩ ಹೋಲಿಸಿ) ಪಕ್ಕದೊಳ್ ಎಂಬುದು ಸೂಕ್ಷ್ಮವಿದ್ದು ಉತ್ತಮವಲ್ಲವೆ?

೮೨೬ : ಇದು ಚಂಪಕ ಮಾಲೆಯಲ್ಲ (ಧಾ).

೮೫೫ : ಬೆಲಗಸೆದೀವಿಕೊಂಡು .(ವ್ಯೈ, ಧಾ). ಪಾಠಾಂತರ : ಬೆಲಸಗೆ—,—ತೀವಿ. ಬೆಲಗಿಸಿ ತೀವಿ ಎಂದು ಓದಿ. (ಬೆಲಗಿಸಿ = ಬೇರೆ ತೆಗೆದು)

೯೧೦ : ಓಯರೊಳ್ ಪೊಕ್ಕು(ವ್ಯೈ,ಧಾ)=ಓಯರ್ + ಒಳ್ಪೊಕ್ಕು ಓಯರೊಳ್ಪೊಕ್ಕು ಎಂದಿದ್ದರೆ ಒಳ್ಳಿತು.

೯೩೦ : ಸೋಯಲ್ (ವ್ಯೈ), ಸೋವಲ್ (ಧಾ). ಸೋಯೆ, ಸೋಯಲ್—ಸರಿ.

೯೩೬ : ಬೇಳ್ಕೆಯೆ = ಬೇಟ್ಕೆಯೆ ?

೯೬೫ : ಅಭಿದಾ (ವ್ಯೈ), ಅಭಿಧಾ—ಅಚ್ಚಿನ ತಪ್ಪು.

(v) ಕಾವ್ಯಾವಲೋಕನದಲ್ಲಿ ಈಗ ಸಿಕ್ಕದ ಹಿಂದಿನ ಕವಿಗಳಿಂದ ಉದಾಹರಣೆಗಳಿವೆ. ಇವು ಆ ಕಾಲದ ಗ್ರಂಥಗಳನ್ನು ಸೂಚಿಸುತ್ತವೆ. ಪಂಪಭಾರತಕ್ಕೆ ಮುಂಚಿನ ಭಾರತ ರಾಮಾಯಣಗಳೂ ಇದ್ದುವೆಂಬುದು ಸ್ಪಷ್ಟ.

ಇಲ್ಲಿ ಕೆಲವು ಅಪೂರ್ವ ಪದಗಳನ್ನು ಕೊಡುತ್ತೇವೆ.

ಅರಮೆ, ಅರಿಯನ್ (ಅರಿದು ಎಂಬುದರಿಂದ), ಅರೆ ಉಱು, ಪೆಱವುಱು ಆರ್ಕ್ಕಂ, ಆವಗಂ (=ಎತ್ತಲೂ, ಸಂಪೂರ್ಣವಾಗಿ : ಏಗಂ ಎಂಬುದನ್ನು ಹೋಲಿಸಿ. ಯಾವಾಗಲೂ ಎಂಬುದು ಈಚಿನ ಅರ್ಥ ; ಇದಕ್ಕೆ ಹಳಗನ್ನಡ ಏಗಳುಂ). ಅಳಸು, ಅಟ್ಟಿ, ಒಗಂಟು, ಒನಲ್, ಒಣರ್ (=ತಿಳಿ, ಭಾವಿಸು. ತಮಿಳಿನಲ್ಲಿ ಉಣರ್, ಸಾಮಾನ್ಯ ಪ್ರಯೋಗ), ಕುಳಿಯರ್, ತಳರ್ (=ಸೋಲು, ಬಳಲು—ತಳರ್ ನಡೆ ಹೋಲಿಸಿ ; ಈಚೆಗೆ ತೆರಳ್ ಎಂಬ ಅರ್ಥ ; ತೆರಳ್ = ರಾಶಿಯಾಗು, ರಾಶಿ ಎಂದು ಮೊದಲರ್ಥ ; ತೆರಳ್ಚು, ತೆರಳ್ಕೆ ಹೋಲಿಸಿ), ನೂಳದು, ಬರ್ದು, ಬರ್ದುಗೆ (ಮೊದಲರ್ಥ ನೋಯಿ, ಸಂಕಟ ; ಆಮೇಲೆ ಸಾಯಿ, ಸಾವು. ತಮಿಳು—ವರುಂದು : ಪಂಪನ ಆದಿ

ಪುರಾಣ, ೩-೬೫, ೫-೮೯, ೧೬-೫೯, ನೋಡಿ). ಪುಱಿಲ್ (ಪುಳಿನದ ತದ್ಭವವಲ್ಲ ;—ತೋಪು, ವನ : ತಮಿಳು, ಪೊಱಿಲ್).

(vi) ಕರ್ಮಣಿ ಪ್ರಯೋಗ :—

ಪದ್ಯ ೫೦೫ : ಪೇೞಲ್ ಪಡೆಗುಂ (ಪಾಠಾಂತರ—ಪಡು).

೫೧೨ : ಎನೆ ಪಡೆಗುಂ.

೮೪೬ : ಪ್ರಯೋಗಿಸೆ ಪಡೆಗುಂ.

೮೫೬ : ವಿರಚಿಸೆ ಪಡೆಗುಂ(—ಪಡು).

ತಮಿಳಿನಲ್ಲಿ ಸಂಘ ಸಾಹಿತ್ಯದಲ್ಲಿ ಈ ಕರ್ಮಣಿ ಪ್ರಯೋಗ ಹೆಚ್ಚಾಗಿ ಬಳಕೆಯುಂಟು. ಎನಪ್ಪಡು, ಅಱಿಯಪ್ಪಡುಂ—ಮುಂತಾಗಿ, ಅಲ್—ಅ—ಮುಂದೆ ಪಡುಸೇರಿ, ಹಳಗನ್ನಡದಲ್ಲಿಯೂ ಇದು ಕಾಣುತ್ತದೆ. ವಡ್ಡಾರಾಧನೆಯಲ್ಲಿ ಹೆಚ್ಚಾಗಿ ಇದೆ. ಬಸವ ಪುರಾಣದಲ್ಲಿ ಒಂದೆರಡು ಕಡೆ ಬಂದಿದೆ. ವೈಯಾಕರಣಿಗಳು ಸೂತ್ರ ಸೇರಿಸಿ ಅಲ್ + ಪಡು ಎಂದು ಪ್ರಯೋಗ ಕೊಟ್ಟಿದ್ದಾರೆ. ಅಲ್ಪಡು ಎಂಬುದು ನಿಂತಿತು. ಪಡೆ ಸೇರಿದ ಕಡೆ ಬೇರೆ ಅರ್ಥವಾಗಬಹುದು. ನೋಡಲ್ ಪಡೆಯದೆ ಅಂದರೆ ನೋಡಲ್ಪಡದೆ ಎಂದಲ್ಲ, ನೋಡಲು ಸಾಧ್ಯವಾಗದೆ, ನೋಡುವ ಆಸೆ ತೀರದೆ ಎಂದರ್ಥವಾಗುವ ಪ್ರಯೋಗಗಳುಂಟು. ಒಟ್ಟಿನ ಮೇಲೆ ಈ ಪ್ರಯೋಗ ಕನ್ನಡಕ್ಕೆ (ದ್ರಾವಿಡ ಭಾಷೆಗಳಿಗೆ) ಸಹಜವಲ್ಲ, ರೂಢಿಯಲ್ಲ. ಜನರಲ್ಲಿ ಹರಡಲಿಲ್ಲ.

(vii) ಇನ್ನು ಭಾಷಾಶಾಸ್ತ್ರ ದೃಷ್ಟಿಯಿಂದ ಕೆಲವು ವಿಚಾರ :—

(೧) ೧೦೭—೧೧೧. ಕ್ರಮದೆ—ಇದು ತೃತೀಯೆಯೆ, ಸಪ್ತಮಿಯೆ ? ನಮ್ಮ ವೈಯಾಕರಣಿಗಳು ಒಬ್ಬರನ್ನು ನೋಡಿ ಒಬ್ಬರು ಬರೆದು ಬಿಡುತ್ತಾರೆ. ತೆಂಕಮೊಗವೆ ಪಯಣಂಬೋಗಿ ಅಂದರೆ ತೃತೀಯೆಯೆ ಸಪ್ತಮಿಯೆ ?

(೨) ೨೩೩, ಪಚ್ಚನೆ ಮುಂತಾದುವು ಪ್ರಕೃತಿಗಳೆ ? ಪಯ್, ಪಚ್, ಪನ್ (=ಪಯ್‌ನ್), ಪಸು—ಇವುಗಳಿಂದ ನಿಷ್ಪತ್ತಿಯೆ? ಹೇಗಾದರೂ ರೂಪಸಿದ್ಧಿಯಾಗುತ್ತದೆ. ಆದರೆ ಶಾಸ್ತ್ರ ಸಮ್ಮತವಾದ ವಿವರಣೆಬೇಕು. ಟಿಪ್ಪಣಿ ಪುಟ—೭೨೩. "ಆದರೆ ಕನ್ನಡದಲ್ಲಿ ಮೊತ್ತಮೊದಲು ೧೨ ಸ್ವರಗಳೂ, ೨೪ ವ್ಯಂಜನಗಳೂ ಮಾತ್ರ ಇದ್ದಂತೆ ಕಂಡುಬರುತ್ತದೆ."

ಇದು ಇನ್ನೂ ವಿಚಾರಮಾಡತಕ್ಕ ವಿಷಯ. ಐ, ಔ ಗಳೂ, ಗ ಮುಂತಾದ ಮೃದು ವರ್ಗೀಯಗಳೂ, ಹ, ಸಗಳೂ ಮೊತ್ತಮೊದಲು ಇರಲಿಲ್ಲವೆಂದು ತೋರುತ್ತದೆ.

ಇದುವರೆಗೆ ಕಾವ್ಯಾವಲೋಕನದ ಎರಡೂ ಪ್ರಕಟನೆಗಳನ್ನೂ ಅವುಗಳಲ್ಲಿ ಕೆಲವು ಪಾಠಗಳನ್ನೂ, ಶಾಸ್ತ್ರೀಯವಾದ ಕೆಲವು ವಿಚಾರಗಳನ್ನೂ ನಮಗೆ ತಿಳಿದ ಮಟ್ಟಿಗೆ ಪರಿಶೀಲಿಸಿರುತ್ತೇವೆ. ಈ ವಿಸ್ತಾರ ಸಾಮಗ್ರಿಯೆಲ್ಲಾ ಮುಂದೆ ಬೇಕೆ? ಲಕ್ಷಣ ಪ್ರಪಂಚದಲ್ಲಿ ಬಿಡುವುವನ್ನು ಬಿಟ್ಟು ಹೊಸತನ್ನು ಸೇರಿಸಿ ಹೊಸ ಶಾಸ್ತ್ರವನ್ನು ಹೊಂದಿಸಿಕೊಂಡು ಸುಲಭ ಸರಳ ರೀತಿಯನ್ನು ಹಿಡಿಯ ಬೇಡವೆ ಎಂಬುದಾಗಿ ವಿದ್ವಾಂಸರು ಯೋಚಿಸಬೇಕಾಗಿದೆ. ಈ ವಿಚಾರಕ್ಕೆ ಇಲ್ಲಿ ಅವಕಾಶವಿಲ್ಲ, ಇದು ಸಮಯವಲ್ಲಿ. ತಮಿಳಿನ 'ನನ್ನೂಲ್' ಗ್ರಂಥದ ಕೊನೆಯ ಸೂತ್ರದಲ್ಲಿ ಹೇಳಿರುವಂತೆ—

ಪಟ್ಱೆಯನ ಕೞಿದಲುಂ ಪುದಿಯನ ಪುಗುದಲುಂ
ವೞುವಲ ಕಾಲವಗೈಯಿನಾನೇ.
(ಹಳೆಯವು ಕಳೆದು ಹೋಗುವುದೂ, ಹೊಸವು ಬಂದು
ಹೊ ಗುವುದೂ ತಪ್ಪಲ್ಲ ; ಕಾಲದ ಬಗೆಯಿಂದ).

—ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ (ವೃಷಸಂವತ್ಸರ ಪುಷ್ಯ) ಡಿಸಂಬರ್ ೧೯೪೧. ಸಂಪುಟ ೨೬—ಸಂಚಿಕೆ ೩, (ಪುಟಗಳು ೨೦೪ ಅ—ಈ)

KANARESE LITERATURE*

We have great pleasure in welcoming Mr. Rice's book as an attempt to give the Kannada people a real history of their literature as distinguished from the catalogue and chronology. It is, of course, based on the labours of Dr. Kittel, Mr. Lewis Rice and Mr. R. Narasimhachar, and other scholars in the field of Kannada language and literature, as well as South Indian antiquities generally. "Without their researches this book could not have been written"—(Preface). But it is no mere compendium that we have before us: the writer has avoided the easy method of enumerating "a long series of little known writers" (preface), and taken the study a step forward by treating the literature as a product of the Kannada people, in relation to their religious, political and cultural history. He groups the writers effectively—even including the Sanskrit writers who lived in the Kannada country—and relates them to their environment and background; the centres of influence where the standard works were written, the kings that patronised, the legends and beliefs, and the successive developments in religion—the Jaina, the Lingayat and the Vaishnava—and the modern impact of Western culture and religion. The purely linguistic side has not been ignored. There is just enough reference to the Dravidian family of languages, the periods and dialects of Kannada, the alphabet, the inscriptions, and a few remarks by the way on prosody and literary forms.

---

* By E. P. Rice, *The Heritage of India Series*, Calcutta.

A map of the Kannada country and an old inscription have been added. More important then these, at the end an attempt Is made to estimate the literary value of the whole body of writings, its merits are sifted from its defects, and suggestions offered on the right use and influence of the new culture of the West in developing a new literature in Kannada. On the whole, it is refreshing to find the material handled on the right lines, with the result that an excellent first book has been produced on the subject.

Good as we find the book to be, we should like to offer a few suggestions for the next edition, practically all the main facts on the subject so far established by research have been gathered into the book, but we miss the note of authoritative and independent scholarship, There is no real criticism, worth the name, of individual writers of the first rank. Where the material was full in the authorities used, the present book is full : as in the Ancient period, and to some extent thc Mediaeval. But full justice is not done, it seems to us, to the Modern period. Books that are no books, the mere atmosphere in which literature develops, are set down as literary works, e.g., educational and departmental publications, commentaries, periodicals (pp. 72-73). The second volume of Mr. Narasimhachar's *Kavi charite* is not yet published, we know, but even with the knowledge at present availabe the treatment couldhave been made fuller and more substantial.

The problems of language and prosody, again, are handled in a hesitating and misleading manner. "Dr. Kittel notes four stages in the history of the language during the past thousand years—viz., Ancient,

Mediaeval, Transitional and Modern" (p. 10). And we are referred to his *Dictionary*. where we have a division into three periods. The fact is, Mr. Lewis Rice, on the strength of a few early inscriptions, suggests a Primitive Ancient Kannada Period. *(purvada Halagannada)*. And we seem to have in the view quoted above a desire to accommodate both writers. Only three periods are generally accepted, and if there is to be a revision we should personally desire to reduce the periods to two, rather than extend them to four, treating the Mediaeval as a transitional or mixed stage which has few distinguishing characteristics to be ranked as a separate period. On the same page, the statement that "Ancient Kannada does not always denote an obsolete form of the language" is ambiguous and misleading. Ancient Kannada as a spoken language is obsolete ; it may, of course, still be written by learnned authors, who might use archaic forms or the whole archaic idiom. The history of prosody again hardly gets the attention it deserves. A remark or two is made, incidentally and at second-hand. On page 13, the Shatpadi is characterised as "monotonous"—in contrast, we suppose, to the Sanskrit metres of the Champus. We should have expected an English writer to appreciate a genuine native metre, evolved by the genius of the language, gradually displacing the foreign metres, and handled by the great masters of modern Kannada with a music and a varied harmony that has enchanted the hearts of all Kannada people. The origin and development of this freer metrical rhythm should have aroused the curiosity of a scholar, but we only get the traditional

story that it was "invented" by Raghavanka (pp. 43, 83). And the fact that the *Sabdamani-darpana* (1260) does not refer to the shatpadi is used to solve the question whether the Lingayat writings began about 1160 (according to Mr. Narasimhachar) or about 1260 (according to Mr. Lewis Rice), by no means a safe method of proof.

A few errors of detail may now be noticed. On p.52 *Jiva Sambodhana* is said to be "addressed to a certain Jivana"—an obscure individual, apparently ; it is addressed to the *Jiva* or the soul. On P. 73 *Panchali Parinaya* a play referred to as *Panchala Parinaya* in novel form. On p. 29 a misunderstanding in the text of *Kavicharite*, Part I, which has been cleared up in the Appendix, is repeated : that Nagavarma is thought by some to be a younger brother of Chamunda Raya. On p. 62 *Rajasekhara Vilasa* is described as a "specimen of fiction in verse", which gives a wrong impression. It is certainly not a fiction like *Lilavati*, which the writer calls "the earliest specimen of the novel or genuine work of fiction" in kannada verse. It is, on the other hand, an elaboration of the subject matter of *Bhava Chinta Ratna*, which is the Saiva legend of the pious king Satyendra Chola" (p.49). On p. 62 the date of Lakshmisa is left uncertain, without any reference to the upper limit offered by Lakshmisa's imitation of quite a number of verses from *Virupaksha* (1585). Finally, there is the phrase on p. 26—"the earliest author of which we have information"—a bad slip.

One other point we feel bound to notice in fairness to the people of this country. A Christian writer,

dealing with a literature that is essentially religious and legendary, naturally judges from his own standpoint, and we heartily welcome all criticism that is fair and makes us see ourselves as others see us. Such a judicial and fair attitude has on the whole been maintained by the writer, but we cannot help wishing that the following charitable sentiment, on p. 57, had been suppressed —"In South India......it was Krishna and his mistress, Radha, that gained by far the widest devotion. This is matter for regret, as the sensual imagery used by the votaries of Krishna has degraded religious conceptions, and introduced into the homes and minds of the people a most pernicious element from which the worship of Rama is free."

We love Kaunada, and should like to see Mr. Rice's book acceptable to everyone who has the interest of our language at heart. We congratulate him on the excellent addition he has made to the few books we possess on the subject, and unhesitatingly recommend it to the general reading public, and specially to the undergraduates of our university.

The Mysore University Magazine—Vol. III—February, 1919, pp. 71-73

KARNATAKA KAVIRAJAMARGAM*

This is the oldest known Kannada work, which the late Mr. K. B. Pathak edited in 1898 for the Bibliotheca Carnatica Series, publiseed under the direction of

* Edited by A. Venkata Rao, B.A., L.T., and Pandit H. Sesha Aiyangar; University Oriental Research Institute, Madras, 1930 Price Re. 1-8-0.

Mr. Lewis Rice. Thirty five years after, i.e., in 1933, it still retains tha unique distinction and a second edition of the classic, under the auspices of the Madras University, is eagerly to be welcomed by all students of old Kannada Literature.

In the present edition, the transliterated text in Roman characters is omitted and the room thus found is well utilized for appendices comparing the names of figures of speech in Nripatunga, Dandi and Bhamaha, and supplying the Sanskrit originals from Bhamaha and Dandi which have been translated in *Kavirajamarga*. Another appendix collates passages quoted or adopted in Nagavarma's *Chandombudhi*, Kesiraja's *Sabdamani-Darpana*, Bhattakalanka's *Sabdanusasana*, and Nagavarma's *Kavyavalokana*. Others deal with passages proving the author a Jain, and a few *Bandhas* illustrating the text. An alphabetical index of stanzas and a running analysis of the contents and suitable headings are also provided, for which the critical reader is duly thankful. The corrigenda cover eight pages and the different readings are given at the end in two lists and not at the foot of each page of the text. There is however, no reference in the text to suggest that there are these reading to consider.

It is not clear from the remarks on page XXIV of the preface regarding the manuscripts whether the editors had before them any additional mss. besides those on which Mr. Pathak's edition was based. The present editors have evidently followed one of the mss. instead of making up the text from the best readings available.

In the very first stanza, the reading is thus left unsatisfactory, the sense of the sentence being quite incomplete :—

ಶ್ರೀತಳ್ತುರದೊಳ್ ಕೌಸ್ತುಭ | ಜಾತದ್ಯುತಿ ಬಳಸಿಕೊಂಡಪಟದಂತಿರೆಸಂ ॥
ಪ್ರೀತಿಯಿನಾವಗಮುಗಲಳ್ | ನೀತಿನಿರಂತರನುದಾರನಾ ನೃಪತುಂಗಂ ॥

Surely, Mr. Pathak's reading of the third line, based on another manuscript, should have been adopted :—

......ಅವನನಗಲಳ್.

This is also observable in the following :—

(i) P. 5, st. 31—

ಕಾವ್ಯಸ್ವೀಕರಣೋದ್ಯುಕ್ತನಕ್ಕೆ should we think, read—ಕಾವ್ಯಶ್ರೀ..........

(ii) P. 8, st. 39.

For ಕಿಱುವಕ್ಕಳ್ ಮಾಮೂಗರುಂ, read ಕಿಱುವಕ್ಕಳು ಮಾ......

(iii) p. 15, st. 72—

ಕೇಡಡಸಿದಂದು ಬಗೆಯುಂ | ಮಾಡದು.

This should be ಕೇಡಡಸಿದಂದು ಬಗೆಯುಂ ಕೂಡದು, as is clear from the sense and from the reading in st. 74.

(iv) p. 19, st. 91—

ತತ್ಸೇವನೆಯಿಂ should, we believe, be ತತ್ಸೇವನೆಯುಂ, which preserves the dosham exemplified, the wrong collocation of words and phrases.

(v) p. 23, st. 114, lines 3—4—

ವಚನಮೇಕ ಬಹುಕ್ರಮದಿಂದೆರೞ್ತಿಱ |
ಕ್ಕಾರಯೆ ಪೇೞ್ತ್ವಂ........॥

Here ತೆಱಿಕ್ಕೆ is clearly an error for ತೆಱತ್ತು. Read ಎರೞ್ತಿಱ | ತ್ತಾರಯೆ........

(vi) p. 26, st. 128, line 3—

ಅದಿರ್ಪ ಬಾ (ರದೆ) |

ಪೋದೆ (ನಾಯೆ) ಡೆಯೊಳ (ಂ) ॥

Here is an attempt at emendation which sacrifices the metre and misses the point of the illustration.

Mr. Pathak has :—

ಅ. ಶಿರ್ಪ ಬಾ ।

ರದೆ ಪೋದೆಡೆಯೊಳೇ ॥

which seems to be nearer the text. This is an interesting stanza and we shall give the readings of the two editions and our own suggestion.

Mr. Pathak—

ಸಾದುಗೆತ್ತು ಬಗೆಯಾದವನಾಸೋ[1]ಡಲ[2]ಟ್ಟದೇ
ನಾದ ಮಾನುಮಱಮಾನಸನಾಗದೆಮಾಳದೊಳ್
ಮೋದದಾನುವ ಸೀರೆಗಮೆನ್ನನ. ಶಿರ್ಪ ಬಾ
ರದೆ ಪೋದೆಡೆಯೊಳೇ ತಡೆದಾನವನೆಂದಪೆಂ.

Messrs. Venkata Rao & Sesha Aiyangar—

ಸಾದುಗೆತ್ತು ಬಗೆಯಾದವನಾಸೊಡನಟ್ಟದೆ
ನಾದ ಮಾನುಮಱಮಾನಸನಾಗದೆ ಮಾಳದೊಳ್
ಮೋದದಿಂ ನುಡುವ ಸೀರೆಗ ಮನ್ನನದಿರ್ಪ ಬಾ (ರದೆ।)
ಪೋದೆ (ನಾಯೆ)ಡೆಯೊಳ(ಂ) ತಡೆದಾನವನಂದಮುಂ.

The true reading probably is—

ಸಾದುಗೆತ್ತು ಬಗೆಯಾದವನಾಸೊಡನಟ್ಟದೇ
ನಾದ ಮಾನುಮಱಿಮಾನಸನಾಗದೆ ಮಾಳದೊಳ್
ಮೋದದಾನುಡುವ ಸೀರೆಗಮೆನ್ನನದಿರ್ಪ ಬಾ
ರಾದೆ ಪೋದೆಡೆಯೊಳೇ ತಡೆದಾನವನೆಂದಪೆಂ.

It is apparently thought that no quotations from previous literature are to be found in this work (Pteface p. 22), the quotations under prasa, etc., being interpol–

[1] A ಸೊಡ. [2] A and C ನಟ್ಟದೆ.

ations (footnote, p. 22). But it has to be noticed that one merit in Kannada Lakshanagranthas is a careful and meticulous use of quotations from older writers by way of illustrations to rules and "Nripatunga", whoever he is, is no exception. In the stanza under reference, the writer is giving an instance of one or two errors mentioned in st. 127; that of using a Guru where a Laghu ought to be and vice versa. In stanza 128, he gives examples of ಗೌರವ ದೋಷ, making a syllable long where it should be short. These are : ಬಗೆಯೂದೆ for ಬಗೆಯುದೆ, ಅವನಾನ್ for ಅವನನ್, ಅಟ್ಟಿದೇನ್ for ಅಟ್ಟಿದೆನ್, ಬಾರಾದೆ (the true reading, which satisfies the metre) for ಬಾರದೆ which is the corrupt reading, apparently corrected by a copyist), ತಡೆದಾನ್ for ತಡೆದನ್. These, especially the negative forms of the verb, are taken even by the author of *Kavirajamarga* as errors, and as objectionable, when really the negative forms were the older forms found in inscriptions and nearer the Tamil forms which still persist to our own days. The older form in the accusative is noted by Kesiraja : Sutra 118, example : ತನತ್ತು ಬಿಲ್ಲಾನದನನ್ತೆ ಕೀಸುವಂ, Kittel, p. 143. Parishad, p. 103. Nripatunga himself in II, 15, 16, 17, 362. See also II. 104. p. 54). That of the first person singular verb occurs in *Kabbigarakava* of Andayya—ತನಿವಣ್ಣಂ ಲಂಚಂಮೀವೆಂ ಪುರುಳಿ......... ಮೆಲ್ಲೊಗ್ಗೆಯುಂ ಮಾಣದೆಂದುಂ | ನೀನಗೀವೇನಂಚೆ (st. 318) — corrected in a manuscript to ಈವೆಂ ಪಂಚೆ—but recorded by Bhattakalanka under Sutra 422. ಎನೋದೀರ್ಘಮುಖಿ ಕೇಚಿದಿಚ್ಛಂತಿ : ತನಿವಣ್ಣಂ........ನಿನಗೀವೇನಂಚೆ ....The Negative form of the verb with the long ಆ however, seems to have become

obsolete early. A curious trace of this is preserved in Kesiraja : (one wishes the full stanza had been kept in tact) Sutra 61 Kittel (p, 70; Parishad, pp. 48, 49). ಬಗೆವೊಡಮಿನಿಸಿಸಿಸಿರ ಅದೆ. ಇರ ಅದೆ, ಇರಾದೆ, ಇರದೆ. It is not obviously possible to go further into this question in the course of a review.

(vii) p. 30. st. 145, ಪ್ರತಿಜ್ಞೆಯನೆತಿರ್ದು should perhaps be ತೀರ್ಚು.

(viii) p. 36, st. 19, line 4 ಒಸಱಿಸುವುದು should be ಒಸರಿಸುವುದು. Similarly, p. 42, st. 48, line 3, ಬಂದೊದರೊಳ್ should be ಬಂದೊಂದಱೊಳ್ and p. 60, st. 145, ನೀೞ್ದ should be ನೀಳ್ದ. These have not been corrected in the corrigenda and we regret to say that we have noticed similar slips regarding ಱ and ೞ in the editions of *Santipurana* and *Rasa Ratnakara*.

(ix) p. 38, st. 26, line 3, ಪುಲಿ should be ಬಲಿ.

(x) p. 42, st. 46, line 2, for ತಱ್ಸಲಾರ್ಗಂ read ತಱಿಸಲಾರ್ಗಂ.

(xi) p. 44, st. 55, line 4, ತದ್ಭವದೊಳ್, we suspect the correct reading is ತದ್ದ್ವಯದೊಳ್. cp. stanza 51 above and 60 below. This is a phrase which the editors have also pressed into service for their theory about the author and nature of *Kavirajamarga*, p. viii.

(xii) p. 52, st. 99, line 4, ಪ್ರಶಾಂತದಿಂ should clearly be ಪ್ರಶಾಂತದಾ.

(xiii) p. 53, st. 104, line 2, ಅನಂತಸುಖ is surely ಅನಂಗಸುಖ. See st. 106, line 2.

(xiv) p. 62. st. 155, line 4, should not ಅಯ್ದುವರಿಂ be ಅಯ್ದುವಱಿಂ?

(xv) p. 62, st. 155, line 4, ಶ್ರೀ ವಿಜಯಪ್ರಭೂತ ಮುದಮಂ. This is an important passage on which the authorship of the work has been discussed, but the editors quote this in their preface as ಶ್ರೀ ವಿಜಯಪ್ರಭೂತಮುನಿದಂ (p. ix). Again, their reading of ಕ [ವೀಶ್ವರ] calls for explanation, as Mr. Pathak reads ಕವೀಶ್ವರಂ without any reading from MSS.

(xvi) p. 89, st. 133, line 2. ಸುಡಿವೃತ್ತಿರಿಂ should be ಸುಡಿಯುತ್ತಿರಿಂ.

(xvii) p. 90, st. 134, line 1, ಕೆಳದಿಯಮುಭಿಮತ....should be ಕೆಳದಿಯನಭಿಮತ........

(xviii) pp. 109-110, stanzas 232-236. We agree with the footnote that these are either displaced from chapter II or interpolated. They should be omitted from the present place. The remark in prose "ಈ ನಾಲ್ಕುಂ ಬೇಱೆ ಅನ್ಯಮಾರ್ಗಲಕ್ಷಣಂ" seems to imply that these have been interpolated from another work on rhetoric or prosody. No such prose sentence occurs in the body of the work elsewhere.

Into the vexed puestion of the authorship of *Kavirajamargam* we do not propose to go at any length, but refer the interested reader to the argnments and counter-arguments, involved interpretations and mis-taken indentities, clever inferences and tangle of surmises contained in (1) the introduction to "*Kavirajamarga*" by Mr. Pathak (1898), (2) two articles on Amoghavarsha I as patron of literature (p. 197) and Kavisvara's *Kavirajamarga* (p. 258) in the *Indian Antiquary*, vol. XXXIII. 1904, (3) the discussion under *Kavirajamarga* by the the profound vetern scholar Rao

Bahadur Praktanavimarsa Vichakshana R. Narasimhachar in his *Kavicharite*, vol. 1 (1907, see p. 19, Revised Edition, 1924), (4) the article ಕವಿರಾಜಮಾರ್ಗ ಗ್ರಂಥದ ಕರ್ತೃವು ಯಾರು ? by Sriman Narayana Srinivasa Raja Purohit in *Karnataka Sahitya Parishat Patrike* Vol. VI (1921-22) pp. 96-113, and (5) ಪತ್ರವ್ಯವಹಾರ pp. 63-68 and 266-294, the last by prof. T. S. Venkannaiya in which the whole question is thrashed out carefully with all the materials available and the conclusion is arrived at that Sri Vijaya is the author. Briefly stated, the results are that Messrs. Rice, Pathak and Rajapurohit are for Nripatunga, Dr. Fleet for Kavisvara, and professors T. S. Venkannaiya and A. R. Krishna Sastry for Sri Vijaya court-poet of Nripatunga.

The present editors have a thesis of their own, compounded of all these views. It is that Sri Vijaya wrote a *Kavimargam* (according to Durgasimha), and that his disciple Kavisvara adapted the work, added some stanzas and illustrations and called it *Kavirajamargam* and ascribed it to his royal patron Nripatunga. We have carefully scrutinised every argument advanced in the preface and must frankly confess that they are not convincing. No fresh or reliable evidence of any kind is adduced, but assumptions are freely made in support of an arbitrary conclusion reached by them.

For there is no evidence for the assumption that Sri Vijaya was the Guru of Kavisvara (ix,–xi) or that Ponna refers to Kavisvara in his gibe at poetasters who make a rehash of other's works— "ಎಸೆಯುದೆ ಪೂಬ್ದು ಕೆಟ್ಟ ಪಡಿಗಬ್ಬಮನಾವಗಮೆಮ್ಮವೆಂದು ಬಾಜಿಸಿ ಪೆಜಗಿರ್ತು......? (xviii). And if Sri Vijaya's work was not current and was buried and

lost, how did Durgasimha and Kesiraja know the work? If it was current and well known, how dare Kavisvara offer this stale dish to his imperial patron as his work and even try to pass it off as the emperor's own production? And was Sri Vijaya a contemporary of Nripatunga (vii) and did he write a panegyric on Nripatunga? (vii) Do the phrases ಪರಮ ಕವೀಶ್ವರರ್ ಅಕೃತಕಾಚಾರ್ಯಪರರ್, ಪರಮ ಕವಿ ವೃಷಭರ್ಕಳ್, in their context refer to poets in general or to Sri Vijaya only? (viii) How can ತದ್ in ತದ್ಭವದೊಳ್ refer to "ಆ ಕವಿಮಾರ್ಗ ?" (viii) Are we sure of the reading? Why is the last line of the last stanza of the second pariccheda misquoted as ಶ್ರೀ ವಿಜಯ ಪ್ರಭೂತವುನಿದಂ ? (ಮುದಮುಂ) ತನಗಾಗಿಸಿದೂಂ ಕವೀಶ್ವರಂ"? (ix) Kesiraja gives the names of a number of celebrated poets as sources of his ಲಕ್ಷ್ಯ's and adds there are other famous poets he has quoted. One such is Ranna, another Nagavarma and yet another may be Nripatunga. He is not mentioning Lakshanikas at all but poets and sri Vijaya may have been mentioned here for his *Chandraprabhapurana*. The argument from silence (vi) is not a convincing one. Durgasimha's pharse ಶ್ರೀ ವಿಜಯರ ಕವಿಮಾರ್ಗಂ *may* refer to his poetic manner and style, and not to any work on ಮಾರ್ಗ. Seeing that we have not got this "ಕವಿಮಾರ್ಗ" the exact process of adaptation detailed on p. xi would be a very fascinating study indeed. On pp. xiv-xv, we are treated to speculations as to Nripatunga's mastery of the Kannada language, his disquisitons on the Alankaras to court pandits and the possibility of a Sanskrit work by him called "Nripatungadevamarga" "ಇರಬಹುದು ... ಇರಬಹುದು ... ಇರಬಹುದು" "ಆದರೆ ಈ ಊಹೆಗೆ ಅಷ್ಟು ಪ್ರಬಲ ಕಾರಣಗಳು ದೊರೆತಿಲ್ಲ." (xv)

In the absence of real evidence or even of definite clues, we are not inclined to speculate in the matter of authorship but after reading all the literature on the subject we cannot help feeling that "Kavisvara" is a mere phantom and Durgasimha's "ಕವಿಮಾರ್ಗಂ" a delusive phrase. Sri Vijaya seems to be the only true begetter if even he does not some day dissolve into a title of Nripatunga, the Parama Sarasvati Tirthavatara and the author of *Prasnotharamalika*. *Kavirajamarga* is not a wonderful masterpiece in either matter or style, and there have been royal authors now in the world's history and Indian annals before. Tradition and Bhattakalanka may yet stand justified when better manuscripts without gaps at a decisive place (III. 217-230) are forthcoming.

—Mythic Socity Journal : Vol. XXIII-3 (pp. 436-442) January 1933.

A TRAGIC RAVANA

I

I have often pitied poor Ravana. His is no doubt a cursed name—*Loka-kantaka*, Scourge of the world—handed down the ages, branded—and who knows, wounded, none so human as to waste some symyathy on the Demon-Monster. Rishi and poet, Pouranik and dramatist, the saint in the rapture of Bhakti and the Prakrit or vernacular minor or major versifier in ecstasy borne on the swelling tide or devotion, the Dasa who spins out his *Hari-katha*, and the village Bottom who roars you in Pericles' vein—all, all have conspired to stamp on the imagination of India a repulsive Ravana,

the terrible Rakshasa, the mighty Asura, ten-headed monster, cruel Devil, incarnation of the wicked principle, enemy of Gods and men, harasser of saints and sages, destroyer of sacrifices, violater of women—all have but one name to give him "Ravana, thy name is Evil." It is all very edifying, impressive, sublime, undoubtedly. Black against white, evil against good, monstrosity against beauty, a simple law of contrast, the very trick of the early artist and primative preacher of morals. Rama and Ravana! All is said. And now look on this picture! Charming boy, obedient son, loving brother, loyal husband, chivalrous prince, fearless warrior, merciful enemy, lover of truth, soul of sacrifice, beloved by subject, beloved by all—Ramachandra, Ramabhadra—perfect Man, nay, is he not perfect God? And betwen Rama and Ravana, Sita: to name her is to praise her, to call her blessed. Not in vain was Valmiki hailed Rishi, Adi Kavi, Holy Saint, Father of poets: and he wept for a shot bird! and in his wake, with whatever touches of individual genius, variety of incident or modification of character, not in vain, have followed Bhasa and Kalidasa, Bhava-Bhuti and Tulsi-Das. The typical contrast between God and Satan, hero and villian must remain. To the devout and orthodox imagination, it is final—and the only excellent way for the artist.

And yet modern imagination feels that a different treatment is possible, perhaps better, more impressive, more appealing. Versions of the Ramayana are legion: but they have been one-sided, monotonous. And then, are there not some puerilities, folk-lore supernatural-

isms, dogmatisms (save our soul !)—that Valmiki, to give great genius the benefit of reverence, could not avoid, because it was in the story? Or which others, less gifted and more 'pious' have foisted on him? And which, once *heard*, *remembered*, and *written*, no truly national poet could help carrying on? How it all grew one cannot now know; the riddle of the Ramayana is still unsolved. Was it a harvest ritual of the Corn Spirit, some Indian Rape of Persephone? Was it a Nature-myth, conflict of Light and Darkness, Spring and Winter and so forth? A nugget of poetic metaphor and twisted text, hammered into gold ornament by bards? Or hero-worship round the tomb of a great ancestor, defied and danced out? Was it something more mundane—a historic conflict of tribes, of creeds, of ambitions of passionate kings and priests—a Vasistha and a Visvamitra, an Emperor of Lanka and an Aryan king with allies of Dravidian India? Buddhists have their Jataka story of the pious prince who for truth's sake went into exile: Jains have their version of Sita and her brother Prabhamandala who loved her in ignorance, and repented on being enlightened and fought for her with Rama at Lanka; Western scholars have suspected the influence of Homer and his Helen of Troy, who launched a thousand ships and was well worth it. Allegorists have been busy, too. Rama is the Universal Soul, Sita was not stolen but her phantom (Helen, again), Ravana was a *tapasvi* encompassed by Maya, whose killing was *Brahmhatya*, sacrilege, and all was *Lila*, Divine sport: explaining away awkward human weaknesses and faults embedded

in the Sacred Book. So many minds, influences, environments, at work on this world-great epic story :—all directed by one dominating idea—the ideal Rama and the Demon Ravana. Could not some independent poetic imagination look at it from some other point of view : remove the childish, clarify the beautiful, direct the sympathy ; with more critical, psychological and balanced poetic vision ? Cannot the Indian mind get out of the groove of Tulsi Das, for instance, whose Vedanta floods his poem with theological discourses and hymns to the Deity, whose Bhakti perverts so many natural incidents and human foibles as foreseen or put on or mere Maya, and compels even the Rakshasa heroes to cry out 'Rama' as they die so that their soul may be absorbed in the Universal Principle ? The Great Hindi poet has quite a book to spare to dilate on a Saint Crow, Kaka Bhusundi, (not the Kakasura who worried Sita), who lives through the ages, eternally singing 'Ram, Ram,' at whose feet even Siva and Garuda go to learn the Mahatmya of Rama ! And he has no emotion, no imagination to spend on poor Ravana, 'filthy and sensual monster' as he dubs him. Verily, he has his reward. Splended his Rama is, his Ravana *not* splenid, and children of poetry who are also children of pity can only turn away from him, disappointed.

II

So, I come back to the feeling that poor Ravana is 'wronged'—aesthetically, as the fair Briton of Heine said of Shylock the Jew. Yes. Shakespeare. Have we not known, and enjoyed Shakespeare's broad humanity,

his sanity, charity, impartiality, even his hedging and leaving things in the twilight—so unsatisfactory to the mere doctrinaire moralist, as the late Prof. Raleigh has declared ? Shakespeare knows no black and white saints and devils : 'Life is a mingled yarn, good and ill together.' His Macbath is a fiend, and an instrument of darkness, wading from blood to blood ; yet he loves his wife, and a fair name, and longs for 'honour, loves troops of friends,' has no use for 'mouth-honour' and vainglory. He agonises : Lost, no more sleep, 'I have sold mine eternal jewel to the common enemy of man' Even puritanical Milton has sympathy and insight into Satan who, in spite of his pride and unconquerable will, remembers his life in heaven and pines for lost virtue, pities the poor victims, and his own misled, ruined followers. Haven't they said that Milton set out to justify God, and ended by making Satan his hero ? Such a sympathetic treatment of the character of Ravana it is perhaps idle to expect in the ancient and the medieval Hindu atmosphere of India. From an independent and critical writer, however, such a thing was possible : indeed it has been done. Not quite with the freedom of a Western poet, perhaps, yet sufficiently distinct to arrest the attention and to refresh the imagination of a reader who longs for a new, a tragic Ravana.

Let me present the writer : Nagachandra, commonly known as Abhinava Pampa, a Jaina poet who flourished in Mysore at the court of Vishnuvardhana, the great Hoysala, about 1,100 A. D. In his *Ramachandra-Charita-Purana*, generally called *Pampa Ramayana*, he has left the beaten track and as though he was

in deliberate opposition to the Brahmin version-re-handled the character of the great antagonist of Sri Rama in a more natural and sympathetic spirit. Being himself an Indian, he has not done his work in a spirit of daring and defiance; but it is enough: there is no mistaking the note of tragedy that he has struck. The passion and the crime are there: they are not minimised, but other things are there too: good qualities, a rich nature, nobility, aspiring soul ruined by Fate and frailty, and death redeeming in its remorse and repentance.

Considering the weight of tradition, and the tastes of his audience, one may be permitted to wonder how he came to do it. He writes as if he were Ravana's court minstrel. Yet, he was a religious writer: anxious to extol Rama and hold up a model of piety and virtue, which also he has done, whole-heartedly. What led him—would it be impertinent to say, betrayed him—to do justice to Ravana also! Was it his independent Jaina point of view, or Jaina tradition preserving a human Ravana, not a mere hateful idea? Was it a desire to revise and correct Valmiki and his echoes, leaving God out of the picture and so the Devil, and insisting that destruction of sacrifices is not exactly a sin, and the man who did it had probably something in him? Was it a more refined, romantic and rational idea of the marvelious and the sublime, a taste that recoiled from cannibals, monkeys, mountain-bridges and burning tails? Or, a deeper grip on the art of preaching and illustrating the Law of Karma: in human environment, the characters, whatever supernatural powers they

might acquire by Tapas, remaining actual men and women : and so appealing like humanity to us : making us feel 'There but for the grace of God, go I'—or 'What he can, I can ?' In conceiving Ravana, did Nagachandra think of some old Jaina shrine so beautifully carved out of soft marble with its noble spire,—and the little chance-sown seed, sprouting in the rainy season, pushing down its roots, and in the ripe hour, shattering the spire and the pendents and the friezes till the noble edifice is a heap of ruins, wherein the serpents come and dwell ? Perhaps he had a sense of history : living at the court of a great king, he knew of alliances and conflicts and could get a real historical background for his epic war. It is even probable he had some personal experience, or some contemporary social scandal and calamity to set him on the right track and give him the key. So his poetic eye was purged of convention and dogma and the hard, cold, age-hewn rock of colossal Ravana put on flesh and flushed with warm blood, breathing. And so has Abhinava Pampa, one of our great poets in Kannada, given us a new romantic Ravana to contemplate, as a relief from the mechanical classical type.

III

In disengaging the character of Ravana as Nagachandra has conceived it, from the vast mass of Jaina incidents and ideas, episodes, pseudo-historical details, and constant variations or modifications of Valmiki Ramayana, I shall try to set forth in clear relief only

two things. First, the historical background, against which is set the great king of Lanka, with his heroic and softer qualities that won for him the respect and awe of men. And second, the one grand passion of his life, which he pursued in the blind security of supreme power, heedless of counsel, indeed made obstinate and reckless by advice, tortured by shame. and miserable, until his eyes were opened to the grandeur of a true woman's love and the degradation and folly of his own sin ; but his pride would not let him recant and submit, so he drove on to his doom. From the poem itself, I shall quote enough to support the view I have taken ; also because I wish the reader to feel for himself the grace, the lucidity and the weight of the style of Nagachaudra, whome I have loved now for over twenty years.

As the poet sees it, far away in the North is Ayodhya or Kosala ruled by kings of the Solar race, one of whom, Anaranya hears of Ravana's conquest of Mahismati and abdicates in favour of Dasaratha a month's child. And in Videha or Mithila reigns King Janaka. There was a prophecy that Ravana would die of Dasaratha's issue on account of Janaka's daughter, and Vibhishana (the Vishnu Bhakta of Valmiki) sends murderers to make things safe. Narada warns the two kings, who escape by leaving painted images behind; which are duly beheaded ! So early in the poem is the main motive, the Fate of Ravana announced. This is the prophecy :—

ಏನುಂ ತೊಡರಿಲ್ಲಿದುವೆ ಶಿ

ಲಾನಿಕ್ಷಿಪ್ತಾಕ್ಷರಂ, ವಿಭೀಷಣ, ರಣದೊಳ್ |

ಜಾನಕಿಯ ದೊಸಱಿಂ ಲಂ
ಕಾನಾಥಂ ದಾಶರಥಿಯ ಕೈಯೊಳ್ ಮಡಿಗುಂ ॥

—(III. 23)

On which Vibhishana argues—
ಕಾರಣವಿಘಟನಮೆ ಕಾರ್ಯವಿಘಟನಮುತ್ತೆ ?

—(III. 24)

'Remove the cause and you remove the effect.

And the poet comments, grimly:
ಕೊಲಲಾರ್ಪರೆ ಸಾಯದರಂ !
ಲಲಾಟದೊಳ್ ವಿಧಿಯ ಬರೆಪ ಲಿಪಿ ಜಲಲಿಪಿಯೆ ?

—(III. 24)

'Who can kill those who are not to die?
Is the writing of Fate on the forehead written in water?'

In Middle India is Ratha-Nupura-Chakravala, capital of the Vidyadhara or Khechara kings, (who by their magical powers could fly in the air). Indra, its monarch is ousted by Ravana from overlordship of the South. Prabhamandala, Sita's brother, who later joins Rama's army against Ravana is an adopted heir of the Vidyadhara king. Lower down, we come to Kishkind, and in the ocean lies Lanka. Bhima Rakshasa of Lanka adopts Toyadavahana of Rathanupura and from him proceeds the Rakshasa Vamsa. (Here is a reminiscene of colonisation from the North). The Kishkindha princes are Vanara Vamsa, because they have a monkey flag (X. 117 Prose) like the Kadamba kings of Banavasi. Marriage alliances and complicate wars confuse the previous history narrated of these three dynasties of kings—those of Ratha-Nupura, Kish-

kindha and Lanka. Ravana, for instance subdues Indra and sets up Sugriva's father on the throne of Kishkindha, who abdicates in favor of his eldest son Vali. Ravana desires the hand of Sri Prabhe, Vali's sister. Vali is spiritually minded and dislikes Ravana's airs—an upstart 'Kaiser.' He becomes a sannyasi and leaves it to Sugriva to give away the bride. Ravana, says Vali, is ಮದಾಂಧಂ, ಉದ್ಧತಂ, insolent and proud; I cannot give him my sister; if I fight, people will say I have broken the old alliance between the two Houses:—

> ಅದಱಿಂದಾತಂಗಾನೀ
> ಯದೆ ಕೂಸಂ, ಕಾಳೆಗಕ್ಕೆ ಮೆಯ್ದ್ದರೆ ಪಲಕಾ |
> ಲದ ರಾಕ್ಷಸವಾನರ ವಂ
> ಶದ ನಣ್ಪೆನ್ನಿಂದಮುಱಿದುದೆಂಬುದು ಲೋಕಂ ॥

—(X. 172)

Other princes subordinate and allied to Ravana are: Khara of Patala Lanka, who has married Ravana's sister Chandranakhi (notice the softening of the dame Surpanakhi) and is, so to say, Viceroy of the Frontier Province; it is by conflict with him in the outposts of the Empire that war is kindled between Rama and Ravana. And Hanuman, prince of Hanuvara Dvipa, who is married to Sugriva's cousin and Ravana's niece and has been given a separate kingdom in addition as dowry. There is an air of verisimilitude in this fictitious account of the subject kings of Ravana's Empire.

A full account of Ravana himself and his prowess is given by Sugriva's old mentor Jambunada to Rama and Lakshmana (Canto X). He is born in exile; his face is reflected in a nine-faced jewel, an heirloom of the

Rakshasa family coming down from Bhima the progenitor, and so he is called Dasamukha (again, a refinement on the ten heads and twenty arms!). His brothers are Bhanukarna and Vibhishana. They all practice Tapas, acquire celestial swords and miraculous powers by 'Vidyas', and recover Lanka from Vaisravana. who flies to Indra. Ravana marries Mandodari and crosses the border like Alexander and Caesar after him, (and Faier Lesley in Burns's poem) 'to spread his conquests further'. We have seen already his dealings with Indra and Sugriva and others. He defeats Yama, Varuna, Nalakubara, and Sahasrabahu (In Valmiki this is Kartaviryarjuna who is the victor not the vanquished Does not Pampa also save his hero from dangling in the armpits of Vali like a poor worm?) On his way back his Vimana stops over the hill of Vali's penance, and hero (as in Valmiki's account of lifting Siva's Kailasa) Dasamukha gets his name Ravana. He returns to his island home, having built up an Empire south of the Vindhyas, much like the British, by alliances, victories, restorations, and wise and firm handling, and generous dealing, when generosity pays, and a certain integrity of character which cannot but command respect and sympathy. He is a Khechara and a Vidyadhara (flier in the air and master of magical arts and weapons—in 20th century parlance, had airships and poison gases and sundry scientific inventions); a Jina Bhakta, with a fine Santisvara temple in his capital and many Chaityas all over his kingdom :—in short he is 'Dakshina Bharatha Chakravarti' Emperor of Soutnern India and well deserves the enthusiasm of Jambunada,

who warns Lakshmana that Ravana is not to be provoked with a light heart : (X. 221-231)—

> ಕದನ ಕ್ಷೋಣಿಯೊಳೋಡಿದರ್ ಮಡಿದರೆಂಬೀ ವಾರ್ತೆಯಂ ಕಂಡರೆಂ
> ದುದನೇಗೊಂದರಿಳೇಶರೆಂಬ ಸುದಿಯಂ ಭೂಭಾಗದೊಳ್ ಕೇಳಲಾ ।
> ದುದು ಗೆಲ್ದರ್ ಸರಿಗಾದಿದರ್ ಪಗವರೆಂಬೀ ವಾರ್ತೆಯಂ ಕೇಳಲಾ
> ಗದವಂ ವರ್ತಿಸಿದಿಂ ಬಱಿಕ್ಕೆನೆ ಜಗದ್ವಿದ್ರಾವಣಂ ರಾವಣಂ ॥

—(X. 226)

'Since Ravana came, we have heard that on the battle-field kings have died or run away or bowed to his wishes ; never have we heard that the foes won or were even well matched : the Terror of the World is Ravana.'

But an old prophecy crops up again : Jambunada has heard that whoever lifts Siddha Saila will kill Ravana (one thinks of Birnamwood and high Dunsinnane Hill.) Lakshmana retorts : 'That he is a hero is proved by his theft of Sita : Weigh Rama and him with your eyes when they are locked in fair fight.' —

> ....ರಾಮರಾವಣರ ಬಲ್ಪುಂ ಮೆಲ್ಪುಮಂ ಕಾಣಲ ।
> ಪ್ಪುದು ಘಟ್ಟೋತ್ತಿಱಿವಲ್ಲಿ ದಿಟ್ಟದೊಳೆಯಿಂ ತೂಗಿಂ
> ರಣಕ್ಷೋಣಿಯೊಳ್ ॥

And he lifts up Siddha Saila !

So much for the great Emperor and the Doom, awaiting. The episodes may now be adduced to illustrrate Ravana's kingly clemency and what is most important in view of his great fall, his purity.

When Indra and Sahasrabahu are captured, their parents come and beg, and Ravana releases and reinstates them on their thrones. He says to Varuna:—

ಕಲಿಸಾವಂ, ಪಿಡಿವಡೆವಂ,
ಕಲಹದೊಳಿದು ಭಂಗಮಲ್ತು ; ನೀಂ ಮುನ್ನಿನವೋಲ್ |
ನೆಲಸಿರ್ಪುದು ನಿಜರಾಜ್ಯದೊ
ಳೊಲವಿಂದೆಂದೊಸೆದು ವರುಣನಂ ಮನ್ನಿಸಿದಂ ॥

—(X. 230)

‘A brave man dies or is taken prisoner in battle; that is no disgrace; be a friend and rule as before in your kingdom; thus, graciousiy he honoured Varuna’.

For this, of course, as in similar cases, from Chandragupta Maurya onwards (and backwards too) he receives Varuna’s daughter in marriage. That takes me to Ravana’s attitude to women. He marries a number of them, but so does Rama too. I have not counted, but I am afraid it is a very large number; but then, ಬಹುವಲ್ಲಭಾ ರಾಜಾನಃ ಶ್ರೂಯಂತೇ. Eariy in life, however, he was vowed to ‘chastity, by his Guru. (IX. 114 and 149) and he has kept the vow faithfully. The poet enforces this by his rejection of Upa Rambhe, wlfe of Nalakubara (X. 187-196), This is one of those reversals of Valmiki in which our author delights. In Valmiki, Ravana violates Rambhe, wife of Nalakubara, his brother’s son, Here, Upa Ramabhe, who has heard of Ravana and has long felt a passion for him, sends her maid to him, offering to let him know the secrets of the fortress, if he will return her love. Ravana recoils, but Vibhishana (no piety puppet) counsels a ruse. So she is sent for, betrays the secret, and is then persuaded to be loyal to her husband. I must give the Kannada of this :—

ದಶಾನನಂ ಪೞಿಯುಂ ಪಾಪಮುಮಪ್ಪ ದುಶ್ಚರಿತ್ರಮನೇವನೆಂದು ನಿಶ್ಚಯಿಸಿ ವಿಭೀಷಣಂಜಿಪುವುದುಂ, ಆತಂ ವಿದ್ಯಾಪ್ರಾಕಾರಮುಂ ಕಿಡಿಸು

ವಂತುಟಂ ಪ್ರತಿವಿದ್ಯೆಯಿನಾಕೆಯುಂ ಬರಿಸಿ ಪುಸಿದು ನಂಬಿಸಿ ಕಲ್ತುಕೊಳ್ವುದೆನೆ, ರಾವಣಂ ಆಕೆಯುಂ ತಾಯೆಂದು ವಕ್ರೋಕ್ತಿಯಿಂ ನುಡಿವುದುಂ.....—(192 ff.)

'Dasanana would have none of the infamy and sin and wicked conduct; but Vibhishana thought that she might be given a false promise and the counter-charm to destory the charmed walls be learnt from her. So Ravana said in a double sense by a pun on words: Bring her or she is my mother.'

And when the fort and the king are taken,

ರಾವಣಂ ರಹಸ್ಯದಿಂದಾಕೆಯುಂ ಕರೆದು. 'ನೀಂ ವಿಶುದ್ಧಕುಲದ ಕುಶಧ್ವಜಂಗಂ ಮಧುಕಾಂತೆಗಂ ಪುಟ್ಟಿದುದಱಿಂ ನಿಜಕುಲಾಚಾರಮುಂ ಬಗೆದು ಶೀಲಪರಿಪಾಲನಂ ಮಾಳ್ಪುದು, ಅಂತಲ್ಲದೆಯುಂ ನೀನೆನಗೆ ವಿದ್ಯೋಪದೇಶಂಗೆಯ್ದುದಱಿಂ ಗುರುವಾದೆ; ಪೆಱತೇನುಮಂ ಬಗೆಯದೆ ನಳಕೂಬರನೊಳ್ ಕೂಡಿ ಸುಖಮಿರು, ಎಂದು ಆಕೆಯ ದುಷ್ಪರಿಣಾಮಮುಮಂ ಪತ್ತುವಿಡಿಸಿ—

ನಳಕೂಬರನುಮನಾಕ್ಷಣ
ದೊಳೆ ಬರಿಸಿ ನಿಜಾಗ್ರತನಯನಿಂದಗಿಯಿಂದ ।
ಗ್ಗಳಮೆನೆ ಮನ್ನಿಸಿ ಭಯಮುಂ
ಕಳೆದಿತ್ತಂ ಭೃತ್ಯಪದವಿಯುಂ ದಶವದನಂ ॥

—(195-196)

'Ravana *in private* sent for her and said—you are of a noble family; remember your father and mother: keep pure your character; besides, you have taught me an art and so you are my teacher; don't think of other things, but be loyal to Nalakubara and live happy. Having thus saved her from her infatuation, he immediately sent for Nalakubara and treating him with greater regard than his own eldest son Indagi he calmed his fears and made him a vassal king under his suzerainty'.

Truly, a self-disciplined and magnanimous king of men, this all-powerful Emperor!

IV

'But oh, vain boast! Who can control his fate?'—Was he not to die because of Janaki at the hand of Dasarathi (Lakshmana in this poem, not Rama; not a happy change this, but probably due to Jaina tradition). Karma was all this while pushing Rama, Lakshmana, Sita, nearer and nearer Ravana and weaving its web round them. One day, tidings arrive from his brother-in-law Khara that Rama and Lakshmana have killed his innocent son Shambhuka who was performing Tapas, and thereupon insulted his wife and Ravana's sister, and on a skirmish ensuing, Khara finds them too strong and prays for aid from his royal master.

So the fire is kindled—that is to burn Ravana, the fire of passion, the fire of sin—Death. He rises from his throne— ಕದನಮುದೋದ್ಧತಂ, ದುರ್ಜಯಂ, ಅಸ್ತಮಿತ ಪುಣ್ಯದಶಾನನ, ನಾದಶಾನನಂ, (IX. 72-73), 'drunk with the lust of war, invincible,—the star of his good fortune. and salvation, set!' ಸಂವರ್ತಸಮಯುದ ಸಮುದ್ರದಂತೆ ಕದಡಿ (IX. 71)-'tossed and stirred like the sea on the Day of Doom!'

In his Pushpaka Vimana, he flies to Dandakaranya, and sees Sita, his fate.

ಬಲೆ ದೃಷ್ಟಿಗೆ ವಜ್ರದ ಸಂ
ಕಲೆ ಹೃದಯಕ್ಕೆನಿಪ ರೂಪವತಿ ಜಾನಕಿ ಕ |
ಣ್ಬೊಲದೊಳಿರೆ ಪದ್ಮಪತ್ರದ
ಜಲಬಿಂದುವಿನಂತೆ ಚಲಿತಮಾಡುದು ಚಿತ್ತಂ ॥

—(IX. 76)

'A snare to the eye, chains of diamond for the heart, beautiful *Janaki* came into his field of vision-and his mind moved from its moorings like a water-drop on the lotus leaf'.

ಶೃಂಗಾರ ಸಮುದ್ರಮಂ ಕಡೆಯೆ ಹೃದ್ಭವನುದ್ಭವೆಯಾದಳೆಂದು ಕ
ಣ್ಣಾರೆ ದಶಾಸ್ಯನೀಕ್ಷಿಸದನೀಕ್ಷಿಸಿ ಕಣ್ಣಿಱಿದಾರೆ ಮನ್ಮಥಂ ||
ಪಲರುಂ ವಿದ್ಯಾಧರ ಸ್ತ್ರೀಯರುಮಮರಿಯರುಂ ಮಾನವಸ್ತ್ರೀಯರುಂ ತ
ಮ್ಮೊಲವಿಂ ಮೇಲ್ವಾಯ್ದೊಡಂ ಮುಂಬಗೆಯದ ಬಗೆಯೇನಾದು
ದೆಂದುದ್ಧತಂ ಮೂ
ದಲಿಸುತ್ತುಂ ರೂಪಿನೊಳ್ ಮಚ್ಚರಿಸುವನೆನಗೆಂದಂಬುಮಂಬಟ್ಟುವನ್ನಂ
ಪಲಕಾಲಕ್ಕೀಸುವೆತ್ತಂ ದಶಮುಖನೆಸುತುಂ ಮನ್ಮಥಂ ಮಾಣದೆಚ್ಚಂ ||

—(IX. 82-83)

" As Ravana gazed and gazed at Sita, glutting his eyes with her- 'O ! she was born, by Cupid churning the sea of Beauty !' ;-at him gazed Cupid, seeing it all at a glance shouting in triumph-'Ah ! my man, where is the mind now that minded not before so many fairies, goddesses and mortal women who threw themselves at you in love ? Long have I bided my time and at last you are shot, Dasamukha ! ' So gloating and taunting, Manmatha, envious also of Ravana's beauty, let fly arrow after arrow, incessant, one chasing another ! "

And the poet himself is surprised and sad—

ಎನ್ನರುಂ ಕಿಡಿಮಸಿಯಾದ ಪೋಲ್ ವಿಷಯ ಲೋಭದಿನೇಳಿದರಾಗದಿರ್ಪರೇ !
ವಿಹಿತಾಚಾರಮನನ್ವಯಾಗತ ಗುಣಪ್ರಖ್ಯಾತಿಯಂ ದುಷ್ಟನಿ
ಗ್ರಹ ಶಿಷ್ಟಪ್ರತಿಪಾಲನ ಕ್ಷಮತೆಯಂ ಕೈಗಾಯದನ್ಯಾಂಗನಾ ||
ಸ್ಪೃಹೆಯಂ ತಾಳ್ದಿದನತ್ತೆ ಕಾಲವಶದಿಂ ಲಂಕೇಶ್ವರಂ ವಿಸ್ಮಯಾ
ವಹವಲ್ತಬ್ಧಿಯುಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೇ ||

—(IX. 85-86)

' Passion makes light even the best men, like a glowing spark become soot. Alas, the Lord of Lanka, under the sway of Time, has come to lust after another's wife! abandoning approved conduct, the famed virtues of his house, and his kingly duty of guarding

the good and punishing the wiceked ! Wonders do happen : does not even the ocean outstep his limits once in the sway of Time !'

Lost already in the loss of spirituality, Ravana calls up his Avalokini Vidya :—

ಆತ್ಮಗುಣಹಾನಿಯೆ ಸೂಚಿಸದೇ ವಿನಾಶನುಂ ? —(IX. 86)

She chides him, warns him that Rama and Lakshmana are ಕಾರಣಪುರುಷರ್-men of Destiny, but he is in no mood for admonition ಉಪದೇಶಂ. She knows he is destined to die for Sita, and a man must needs follow where his Karma leads—

ಈತನ ಕಯ್ಯುಳವಲ್ತು ಪುರಾತನ ಕರ್ಮಾಯತ್ತಮುತ್ತೆ ದೇಹಿಗಳೆಸಕಂ

—(IX. 96)

She separates Lakshmana from Sita by a cry as from Rama, and Ravana seizes Sita :

ದೋಷಿ ಪಿಡಿವಂತೆ ದಿವ್ಯದ
ಕಾಸಿದ ಕುಳಿವಂ, ಕಡಂಗಿ ಕಾಳೋರಗನಂ ।
ಕೂಸು ಪಿಡಿವಂತೆ, ಪಿಡಿದಂ
ಸಾಸಿಗನವಿವೇಕಿ, ಸೀತೆಯಂ ದಶಕಂಠಂ ॥

' As a guilty man seizes the red hot plough-share in the ordeal, as a child seizes a furious black serpent with ardour, so rashly venturing fool, Dasakantha seized Sita.'

A certain prince Ratnajati hears the cries of Sita and flies up stopping Ravana : (it is he who later carries the news to Sugriva and Rama)—but Ravana remembers his old friendship for his father and merely cuts off his flying power.

........ಅರ್ಕಜಟಿಯ ನಣ್ಪಂಗವನೊಳ್
ಕಾದದೆ ಕರುಣಿಸಿ ವಿದ್ಯಾ
ಚ್ಛೇದಂಗೆಯ್ದಂ ನಿರಂಕುಶಂ ದಶಕಂಠಂ ॥

—(IX. 146)

As he flies on to Lanka, he cannot contain himself:
ಕಣ್ಗಳ್ ಕೀಱಿ ಸರ್ವಾಂಗಮಂ ತೆಗೆದಾಲಿಂಗಿಸೆ.......ಧೈರ್ಯಂಗೆಟ್ಟು ಮೇಲ್ವಾಯ್ವ ಚೇಷ್ಟೆಗೆ ಪೌಲಸ್ತ್ಯನುಮೊತ್ತುಗೊಟ್ಟನೆನಲಾರಂ ದರ್ಪಕಂ ದಂಡಿಸಂ ?— His eyes scoured and devoured and embraced her whole body, his self-control was lost and he began to approach her. When *even Ravana* allowed such tricks of passion to get hold of him, whom cannot Cupid punish? (IX. 148) But Sita threatens to pull out her tongue and die and Ravana desists, hoping for better times.

ಮಹಾಸತಿಯ ಶೀಲದಳವನಱಿಯನಪ್ಪುದಱಿಂ, ಅನಂತ ವೀರ್ಯ ಕೇವಲಿ ಗಳಿತ್ತ ಪರವಧೂ ವಿರತಿ ವ್ರತ ಪರಿಪಾಲನವೆನಗರಿದಾದುದೆನೆ ನಿಸರ್ಗರಾಗಿಗಳಪ್ಪ ಪೆಂಡಿರ ಪರಿಣಾಮಂ ಎಲ್ಲಿವರಂ ನಡೆದಪ್ಪುದೀಕೆಯನಾವತೆಱದೊಳಮೊಡಂಬಡಿಸುವುದಾವಗಹನಂ ಎಂದು ತನ್ನಂ ತಾನೆ ಸಂತಯಿಸುತ್ತುಂ—

'Consoling himself in this manner—because he had never known what the character of a noble wife was like—when I find it so hard to keep the vow and not desiring others' wives to which my Guru Anata Virya vowed me—how long will the resolution hold of women who are passionate by nature? It will not be very difficult to persuade this lady in some way.'

—(IX. 148 ff).

So he reaches Lanks and places her in a mansion in his Royal Park and tosses on his bed feverish for Sita and humiliated because he has not avenged his sister and nephew and brother-in-law His wife guesses it must be love—since war never meant all that pain to Ravana; but he shrinks from telling her; and when she has guessed, he is ashamed and confesses that he has brought away Sita like a fool:

ನಿನಗೆ ವಂಚಿಸಲಾಗದು,—ತಂದೆನಿಂದು ಮುಂದಱಿಯದೆ ಸೀತೆಯಂ

—(IX. 160)

Mandodari is frightened for her lord's life and

comforts him with the cynical remark—

ಅಚಿರಪ್ರಭೆಯುಂ ಪೆಂಡಿರ
ಶುಜಿತ್ವಮುಂ ಕ್ಷಣದಿನಗ್ಗಳಂ ನಿಲ್ಕುಮೆ......
ಅಕೆಯನೊಡಂಬಡಿಸಲಾನೆ ಸಾಲ್ವೆಂ ॥

—(IX. 161 ff.)

'Lightning and the chastity of women do not last beyond a moment. Leave me to bring her round.' (O woman! O wife! What wonder Ravana had his own opinion of woman's virtue!)

A stifling atmosphere, but the air clears as Sita speaks out sharp to Mandodari—

ಇದು ಮತ್ತೋನ್ಮತ್ತ ಜಲ್ಪಂ, ಕುಲವಧುವರ ಮಾತಲ್ತು, ನಿಮ್ಮಂದಿಗರ್ ವಂ
ಶದ ಕೇಡಂ ನೋಡದೊಳ್ಪಂ ಬಗೆಯದೆ ಪೞಿಗಂ ಪಾತಕಕ್ಕಂ ಭಯಂಗೊ ।
ಳ್ಳದೆ ಪೇೞಿರ್, ಪೊಲ್ಲಮಾತಂ ನುಡಿವಿರಿದು ಮನಂ ನೋೞ್ಪ ಸಂಕಲ್ಪ ಜಲ್ಪಂ ॥
ಮದಧೀಶಂ ರಾಮಚಂದ್ರಂ ಪೊಱಗೆನೆ, ಪೆಱರೇವಾತೊ ಜಾತಾನುಜಾತರ್ ॥

—(IX. 169)

'This is the foolish chatter of shameless women; not the speech of noble wives, ladies like you never talk like this, but think of the ruin of the house, think of goodness, and fear ill-fame and sin. You are speaking evil words. You must be making trial of me. Let one word do for all—saving my lord, Ramachandra, men are to me son and brothers.'

And to Ravana, who offers an empire and scouts danger from Rama, a poor, forsaken, wanderer of the woods—she says firmly,

ಗುಣಹಾನಿಯಿಂದಧೋಗತಿ,
ಗುಣದಿಂ ಸ್ವರ್ಗಾಪವರ್ಗ ಸುಖಮಕ್ಕುಮೆನಲ್ ।
ಗುಣಹೀನನ ಸಿರಿಯಿಂದಂ
ಗುಣಿಗಳ ಬಡತನಮೆ ನಾಡೆಯುಂ ಲೇಸಲ್ತೇ ॥

—(IX. 182)

'Hell and perdition by loss of virtue; and from virtue, heaven and salvation: If that is the truth, blessed far above the wealth of the wicked is the poverty of the good.'

Ravana is only maddened-' love, being baulked, rageth all the more,'

ಬಿಡೆನುಡಿಯೆ ಸೀತೆ, ಮುಳಿಸಿನ
ಪಡೆಮಾತಂತಿರ್ಕೆ, ರಾವಣಂಗೊಲವು ಪದಿ |
ಮ್ಮಡಿಸಿತ್ತಪ್ರಾಪ್ತಿ ರಸಂ
ಬಡೆಗುಂ ವೈಷಯಿಕ ಸುಕದೊಳಿದು ವಿಸ್ಮಯಮೇ ||

—(IX. 186)

I must now hurry on and come to the last scene of this strange eventful history. Vibhishana hears the sobs of Sita in the hush of night and remembers the ancient prophecy (IX. 192). Sugriva and Hanuman are falling away and joining Rama, for moral, and (obvious) political reasons. Vibhishana preaches and warns. Ravana is relentless and undismayed.

..............................ಕಪಿಚಿಹ್ನರಿಲ್ಲದೇಂ
ಕಿಡುವುದೊ? ಭೂಚರರ್ ಧುರದೊಳಾಂಪರೆ ಖೇಚರ ಚಕ್ರವರ್ತಿಯುಮಂ?||

—(IX. 195)

'If a few drops are lost to the sea, is the sea dry? If Khara and Dushana are killed, is our great army gone? If the Kapi Dhvajas go, are we lost? Can mere men, walkers of the earth, meet in battle the Emperor of the Khecharas, fliers iu the air?

Vibhishana hopes on—does not much water wear out a stone?—and strengthens the fortifications and watches events, (Preparedness waiting and seeing!)

The Allies gather ; old Jambunada advises settlement by conference. 'Vibhishana is an honest man, and if Ravana has gone astray, well, a stained mirror can be cleaned. Remember we are relations and friends of Ravana'.—(XI.20-26). Hanuman comes on the embassy; has anxious discussion with Vibhishana :—

ಶೌಚದಗ್ಗಳಿಕೆಯುಂ...............ಕೊಂಡಾಡುವೀರಾವಣಂ
ಎಣಿಸದೆ ತನ್ನ ಶೌಚಗುಣಮಂ, ವ್ರತರಕ್ಷಣಮಂ, ಪರಾಂಗನಾ
ಪ್ರಣಯಮನುಪ್ಪುಕೈಯೆ, ಶರಣಾಗತ ರಕ್ಷಣದಕ್ಷನಪ್ಪ ದ|
ಕ್ಷಿಣ ಭರತತ್ರಿಖಂಡ ಧರಣೀಪತಿ, ದಾನವ ಚಕ್ರವರ್ತಿ, ರಾ
ವಣಸಿದನಾಗದೆನ್ನದೊಡೆ ನಿನ್ನನೆಗಱ್ತೆಗೆ ಬನ್ನಮಾಗದೇ ॥

—(XI. 78)

'When Ravana who sings the praises of chastity, careless of his purity, his vow, yields to passions Ravana the guardian of the weak who seek his shelter, the sovereign of the three kingdoms in South Bharata, the Emperor of the Danavas, if you will not say, this must not be, will it not be your dishonour ?

Vibhishana pleads–' Do you think I have said nothing ? Can I be indifferent ? He won't listen. Poor Sita has been starving to save her family honour, her own virtue, her ideal of herseif, and still my elder brother is not moved to renunciation. He is sending her messengers every day.'

ಆಗದೆಂದಾನಿದನಱಿಪದುದಾಸೀನದಿಂ ಮುನ್ನಮೇನಿರ್ದೆನೆ........ಪೇೞ್ದುದಂ ಕೇಳನೆ........ಅನ್ನತ್ಯಾಗದೊಳೆ ದೇವಿ ಕುಲಮುಂ ವ್ರತಮುಂ ॥ ತನ್ನುನ್ನತಿಯುಂ ಕಾದೊಡ ! ಮಿನ್ನುಂ ವೈರಾಗ್ಯಮಾದುದಿಲ್ಲಗ್ರಜನೊಳ್ !........ಮತ್ತಮಟ್ಟಟ್ಟಯಟ್ಟುತಿರ್ದಪಂ ॥

—(XI- 80-82)

An angry scene follows between Hanuman and Ravana. 'Traitor' cries the King, 'forgetful of our relationship, of my kindnesses, of your own dignity, you come as the servant of a Bhuchara.'—(XI. 104, 136, 187),

It is now war. Rama's army crosses over, by air-flight, Nagachandra remarking dryly that this is more economic than pulling up and heaping hills.

ಬೆಟ್ಟಮನೊಟ್ಟಿ ಬಟ್ಟೆನಡೆಪಚ್ಚುಗಮೇವುದೊ !

—(XII. 96)

Vibhishana meanwhile has joined them; after a final appeal to Ravana : leaving Lanka like an elephant avoiding a wood set on fire and following his Karma, which was to be the next Emperor—(XII. 52-76) His words on sin are worth quoting—

ಬಗೆದೆಸೆಬಿದ್ದಂ ಪರಿವುದು,
ಬಗೆಯಂ ಬಗೆದಂತೆ ಪರಿಯಲೀಯದೆ, ಪಿರಿಯಂ ।
ತೆಗೆವುದು ಪೞಿಪೊರ್ದದ ಬ
ಟ್ಟೆಗೆ, ನಿಜದಿಂದಾರ ಬಗೆಗಳುಂ ನೇರಿದುವೇ ||

—(XII. 54)

Man's mind runs to all quarters of the earth. The great man is he who does not let it run as it likes but leads it to the path that hath no stain. No one's mind is by nature *straight*.

And, now the last scene, the most powerfully dramatic and touching, it seems to me, in the whole poem. Ravana has spurned away his own brother, another revolter. 'Let them fly all' The battle has steadily gone against him. Sons and brothers are lost. He orders worship in Shanti Jina's temple and himself performs

Japa to secure the Bahu Rupini Vidya, by which he could multiply himself endlessly. Angada tries to break his Yoga but fails. The Shakti appears and will grant power to kill all except Rama and Lakshmana. Ah!

—(XIV. 82-106)

Assuming the most beautiful form, he goes to tempt Janaki. And lo! the tempter that went out to tempt, he turns again home, clean!

ದಶಾನನನಿಂತೆಂದಂ— ಬಹುರೂಪಿಣೀ ವಿದ್ಯೆ ಸಾಧಿತಮಾದುದು. ಇನ್ನೆನಗ ಸಾಧ್ಯಮಪ್ಪುದುರುವಕ್ಕಮಿಲ್ಲ. ನಿನ್ನ ನಚ್ಚಿನ ರಾಮನ ದೆಸೆಯುಂ ಬಿಟ್ಟು, ಎನಗೊಡಂ ಬಟ್ಟು ಸಾಮ್ರಾಜ್ಯ ಸುಖಮನನುಭವಿಸೆನೆ—ಸೀತೆ ವಿಹ್ವಲೀಭೂತ ಚಿತ್ತೆಯಾಗಿ—

ಕರುಣಿಸುವೊಡೆನಗೆ, ದಶಕಂ
ಧರ, ಧುರದೊಳ್ ರಘುತನೂಜನಾಯುಃ ಪ್ರಾಣಂ |
ಬರೆಗಂ ಬಾರದಿರೆನುತುಂ
ಧರಿತ್ರಿಯೊಳ್ ಮೆಯ್ಯನೊಕ್ಕು ಮೂರ್ಛೆಗೆ ಸಂದಳ್ ||
ಜಾನಕಿ ಮೂರ್ಛಿತೆಯಾಗೆ, ದ
ಶಾನನನನುಕಂಪೆ ಪುಟ್ಟೆ, ಕರುಣಿಸಿ, ತನ್ನಂ |
ತಾನೆ ಪೞಿದುೞಿದು ಕರ್ಮಾ
ಧೀನ ಸಮುತ್ಪನ್ನ ದುರಘ ದುಷ್ಪರಿಣತಿಯುಂ ||
ಕದಡಿದ ಸಲಿಲಂ ತಿಳಿವಂ
ದದೆ, ತನ್ನಿಂ ತಾನೆ ತಿಳಿದ ದಶವದನಂಗಾ |
ದುದು ವೈರಾಗ್ಯಂ ಸೀತೆಯೊ
ಳುದಾತ್ತನೊಳ್ ಪುಟ್ಟದಲ್ತೆ ನೀಲೀರಾಗಂ ||
ಪತ್ತುವಿಡದಿರ್ದನೇ ರವಿ
ಪತ್ತಿದ ಸಂಧ್ಯಾನುರಾಗಮಂ, ಮನದೞಿಪಿಂ ||
ದೆತ್ತಾನುಂ ಪೊಲ್ಲೆನಿಪುದ
ನುತ್ತಮನಾಚರಿಸಿ ಪತ್ತುವಿಡದಿರ್ದಪನೇ ! ||

ಅಂತು ಮನದೊಳೊಗೆದ ಕಾರುಣ್ಯ ರಸಮೆ ಸೀತೆಯೊಳಾದನುರಕ್ತತೆಯಂ ಕರ್ಚಿಕಳೆವುದುಂ, ಸ್ವಭಾವಪರಿಣತಿಯೊಳ್ ನಿಂದು, ಸ್ವಕೀಯಾಪ್ತ ಪುರುಷಪರಿಷಜ್ಜನಕ್ಕಿಂತೆಂದಂ :—

ಗುಣಪರಿಪಾಲನಾರ್ಥಮೆನಗಂ ಬಗೆದೋೞಿದಳಿಲ್ಲ, ದಿವ್ಯಭೂ
ಷಣ ವಸನಾಂಗರಾಗಮುಮನೊಲ್ಲದೆ, ಖೇಚರ ರಾಜ್ಯಲಕ್ಷ್ಮಿಯುಂ |
ತೃಣ ಸಮನಾಗೆ ಭಾವಿಸವಳೀ ಸತಿಯುಂ, ಮೊದಲಾಗೆ ಪೌರುಷ
ಪ್ರಣಯಿಯೆನಿಂತಪೇಕ್ಷಿಸುವೆನೇ ಗುಣಹಾನಿಯನೆನ್ನ ಪಾಪದಿಂ ! ||

ಇವರಂ, ಪ್ರಾಣಪ್ರಿಯರಂ,
ನೆವಮಿಲ್ಲದೆ, ಕರ್ಮವಶಮೆ ನೆವಮೆನೆ, ಕಂದ |
ರ್ಪ ವಿಮೋಹದಿಂದಗಲ್ಚಿದೆ
ನವಿವೇಕಿಯೆನೆನ್ನ ಕುಲದ ಪೆಂಪೞಿವಿನೆಗಂ ! ||

ರಾಮನನಗಲ್ಚಿ ತಂದಾ
ನೀಮಾನಿನಿಗಿನಿತು ದುಃಖಮಂ ಪುಟ್ಟಿಸಿದೆಂ |
ಕಾಮವ್ಯಾಮೋಹದಿನಾ
ಶಾ ಮುಖಮಂ ಪುದಿಯೆ ದುರ್ಯಶಃ ಪಟಪರವಂ ||

ಎನಗೆ ವಿಭೀಷಣಂ ಹಿತಮನಾದರದಿಂದಮೆ ಪೇೞೆ, ಕೇಳದಾ
ತನನವಿನೀತನೆಂ ಗಜಱಿ ಗರ್ಜಿಸಿ ಬಯ್ದು ಸುಜಾತನಂ ವಿನೀ |
ತನನೞೆಯಟ್ಟಿ ದುರ್ವ್ಯಸನಿಯಂ ಕೞಿದೆಂ, ವ್ಯಸನಾಭಿಭೂತನಾ
ವನುಮನುರಾಗ ವೇಗದೆ ಹಿತಾಹಿತ ಚಿಂತೆಯನೇಕೆ ಮಾಡುಗುಂ ||

ಜಸದೞಿವಂ, ಪರಾಭವದ ಪತ್ತುಗೆಯಂ, ದೊರೆವೆತ್ತ ತಪ್ಪು ಮಾ |
ನಸಿಕೆಯ ಕೇಡನುನ್ನತಿಯ ಬನ್ನಮನನ್ಯಭವಾನುಬದ್ಧಮ |
ಪ್ಪ ಸುಗತಿಯಂ, ಸುಹೃಜ್ಜನದ ಬೇವಸಮಂ, ಜನತಾಪವಾದಮಂ ।
ವ್ಯಸನಿಗಳಾರುಮೆತ್ತಲೞಿವರ್ ವಿಷಯಾಸವಮತ್ತ ಚೇತಸರ್ ||

ಎಂದು ಉದ್ವೇಗಪರನಾಗಿ ನುಡಿದು, ಆತ್ಮಗತದೊಳಿಂತೆಂದಂ—

ಇರದುಯ್ದೀಗಳೆ ಕೊಟ್ಟೊಡೆನ್ನಕಡುಪುಂ, ಕಟ್ಟಾಯಮುಂ, ಬೀರಮುಂ
ಬಿರುದುಂ, ಬೀಸರವುಕ್ಕು ಮೋಸರಿಸಿದಂತಾಗಿರ್ಕುಮಂತಾಗದಂ |
ತಿರೆ, ದೋರ್ಗರ್ವಮನಿರ್ವಲಂ ಪೊಗೞ್ವಿನಂ, ಸೌಮಿತ್ರಿಯಂ ರಾಮನಂ
ವಿರಥರ್ಮಾಡಿ, ರಣಾಗ್ರದೊಳ್ ಪಿಡಿದು ತಂದಾಂ ಕೊಟ್ಟಪೆಂ ಸೀತೆಯಂ ||

'Said Dasanana :—I have acquired the art of myriad forms. No enemy can withstand me now. Give up your dear, trusted Rama as a refuge. Consent to me and enjoy imperial happiness.

'Sita suddenly lost all her presence of mind. 'O Ravana, she cried', if you really have any loving kindness for me, do anything in the fight short of taking the life of Rama! and her limbs were loosened and she fell on the ground and swooned away.

'Touched was Ravana; sympathy was born, and mercy. Himself blaming himself, he left off the sinful, evil turn of his mind, born of the sway of Karma. Like turbid water clearing, himself cleared himself and felt renunciation with regard to Sita. *No noble soul ever becomes black in grain.*

'Doesn't the Sun unflush from the crimson love of Evening? A noble man, will he not give up evil, after doing wrong, some time, from the temptations of the mind?

'So, the Karunya Rasa (flood of Mercy) in his mind now swelling washed off the red taint of his love for Sita, and he stood forth in his *native disposition of mind* and said to his inner circle of friends and counsellors.—

'See, for Virtue's sake, even to me, she gave not her heart. She would have none of our ornament, robes, perfume, colour. The wealth and grandeur of sovereignty she deemed mere straw, this woman! And I, a man, lover of the true excellence of man, shall I desire the loss of my virtue by continuing in my sin?

'These lovers, dear to each other as life, for no cause but the sway of Karma, no other cause, maddened

with passion, I separated, fool, and wrecked the greatness of my family.

'From brute passion, I tore away this honourable lady from Rama, and brought her all this sorrow. My disgrace has been trumpeted to the ends of the world!

'Lovingly, Vibhishana told me my own good; but wretched villain that I was, I would not hear, I flamed up, I shouted, I said hard words and drove away from home my own dear brother, that noble heart! Oh! carried away by the mad rush of love, who ever stopped to enquire what was or was not for his good?

'How can men feel, when their mind is intoxicated by lust, the loss of reputation, the certainty of humiliation, the ruin of their peerless manhood, the break-up of the highest in them, the bonds of fresh lives into which their salvation is lost, the heart-sorrow of friends, the scandal among people!

'So spoke Ravana, remorseful,-and said to himself—If I give her back now, my will, and strength and valour and titles, will all be as if they had never been. I shall be taken for a coward, who swerves, for he cannot face Death! That must not be, I shall fight till both the hosts ring with my praises, drag Lakshmana and Rama down from their chariots, bring them to Lanka and present Sita!' (XIV. 110–119)

Mandodari, frightened at omens, comes to stop Ravana (like another Calpurnia), and offers to buy peace by herslf delivering Sita. But he cannot brook her sight, and orders her in anger to go away.

ರೋಷಾವೇಶದಿಂ ನೀನಿಲ್ಲಿಂ ತೊಲಗೆಂದು ಚಪ್ಪರಿಸಿದಂ.

—(XIV. 125)

The wheel of Lakshmana does its appointed work, and Ravana's soul at last knows rest.

A last word of pity from Abhinava Pampa—

ಹೃದಯಂ ಸೀತಾನಿಮಿತ್ತಂ ಮನಸಿಜನಿಸೆ ಪಂಚೇಷುವಿಂ ಭಿನ್ನಮಾಗಿ
ದರ್ಗದಱಿಂ, ಲಕ್ಷ್ಮೀಧರಂ ಕೋಪದಿನಿಡೆ ಪೆಱತೇಂ ಚಕ್ರರತ್ನಕ್ಕೆ ಪಾಡಾ|
ದುದೆನಲ್, ಥಟ್ಟುರ್ಚಿ ಬೆನ್ನಿಂ ಪೋಱಮಡೆ, ವಿಗತ ಪ್ರಾಣನಾ
ದಾನವೇಂದ್ರಂ
ತ್ರಿದಶೇಂದ್ರಂ ವಜ್ರದಿಂದಿಟ್ಟೊಡೆ, ನಡುಗೆನೆಲಂ, ಬೆಟ್ಟುಬೀೞ್ವಂತೆ ಬಿೞ್ದಂ॥

'The heart, pierced and shattered by the arrows of Love, on account of Sita—what could it do but burst at the touch of Lakshmana's wheel? As the Chakra pierced and left at the back, like a mountain struck by the lightning of Indra, the Indra of the Danavas fell earth-shaking'.

And Vibhishana, is made to express amazement—

ಶೌಚಾಚಾರ ಪರಾಯಣನಪ್ಪ ರಾವಣನಾವ ಪಾಪಂಗೆಯ್ದನಾಗಿ ಸೀತಾದೇವಿಗೆ ಮರುಳ್ಗೊಂಡು ಪೋದಂ ?

—(XVI. 36. ff)

'What sin had Ravana committed, that, with all his devotion to purity, he went so mad over Queen Sita?

If the soul of Tulsi Das's Ravana was taken into God's bosom–I have no doubt it was—we may be sure about Nagachandra's. The Highest has a large heart and understands tragedies. Ravana, the shattered man, fell; but his spirit, having paid the supreme penalty of sin, has risen and dwelt in the imaginations of men like Nagachandra—men who can divine a grief and sympathise.

KANNADA RESURGENT*

Trends and Aims :-Half a century of Kannada resurgent has thrown up trends and aims, which may be summed up as a sort of writer's creed.

1) Revolutionise, socialise, humanise.

2) Rouse the men, women and children for Kannada in a re-unified Karnataka.

3) Publish and study critically the old classics, broadcast the really good things in them and build them into the future.

4) Re-organise the standard language; purify, strengthen and discipline it. Make it a fit vehicle for modern and ancient knowledge, and for a new literature of powers.

5) Absorb world-culture—"the best that has been said and thought and done in the world" in the great literatures of East and West. Let there be in Karnataka a few speciatists in each to bring in light from all quarters.

6) With regard to our own Indian heritage, sift the true from the false, the universal from the local and temporary, deepen and refine and popularise it, so that a free, united, happy India may come into being and take her place among the nations.

7) Establish a living catholic taste. Experiment in freedom. Work out old things and new in a sympathetic imagination, to ennoble and enrich the human spirit. Steep yourself in life and the great Masters. "A good book is the precious life-blood of a master-spirit."

---

* Extract from the Mysore Census Report, 1941 Appendix V

8) No more meaningless conventions or flourishes for pedants. Write for the people, simply, sincerely, strongly. Give them the truth you see, fearless in the interpretation of life and frank in the faith needed for a life in God—in goodness, truth and beauty. Cultivate the garden of your fathers afresh for the fruits of the reborn spirit.

FLOURISH KARNATAKA

ಅರಿಕೆ

ಚಿರಸ್ಮರಣೀಯರಾದ ಬಿ. ಎಂ. ಶ್ರೀ. ಅವರ ಕನ್ನಡ ಭಾಷಣ ಗದ್ಯ ಲೇಖನಗಳನ್ನೆಲ್ಲ ಈ ಪುಸ್ತಕದ ಒಂದು ಎರಡನೆಯ ವಿಭಾಗಗಳಲ್ಲಿ ಒಟ್ಟುಗೂಡಿಸುವ ಪ್ರಯತ್ನಮಾಡಲಾಗಿದೆ. ಮೂರನೆಯ ವಿಭಾಗದಲ್ಲಿ ಅವರ ಪುಸ್ತಕ ವಿಮರ್ಶೆಯ ಲೇಖನಗಳನ್ನು (ಕನ್ನಡ ಮತ್ತು ಇಂಗ್ಲಿಷ್ ಸಹ) ಅಳವಡಿಸಲಾಗಿದೆ. ಆದರೂ ಅವರ ಎಲ್ಲ ಗದ್ಯ ಲೇಖನಗಳೂ ಇಲ್ಲಿ ಬಂದಿಲ್ಲವೆಂಬ ಸಂಶಯವಿದೆ, ಈ ಸಂಪಾದಕನಿಗೆ. ಬೈಬಲನ್ನು ಕುರಿತು ಸೊಗಸಾದ ಲೇಖನವೊಂದನ್ನು ಇಂಗ್ಲಿಷಿನಲ್ಲಿ ಬರೆದಿದ್ದರೆಂದೂ ಅದು ಮೈಸೂರು ಯೂನಿವರ್ಸಿಟಿ ಮ್ಯಾಗಜೀನಿನಲ್ಲಿ ಪ್ರಕಟವಾಗಿತ್ತೆಂದೂ ದಿ॥ ಎ. ಆರ್. ಕೃಷ್ಣಶಾಸ್ತ್ರಿಗಳು ತಿಳಿಸಿದ್ದರು. ಎಷ್ಟು ಪ್ರಯತ್ನಪಟ್ಟರೂ ಆ ಲೇಖನ ನನಗೆ ದೊರೆಯಲಿಲ್ಲ. 'ತಾರೆಯ ಬಳಗ' ದವರ ಕವಿತೆಗಳ ಸಂಕಲನಕ್ಕೆ ಒಂದು ಮುನ್ನುಡಿ ಬರೆದಿದ್ದರಂತೆ. ಆ ಮುನ್ನುಡಿಯೂ ನನಗೆ ಎಟುಕಲಿಲ್ಲ. ಮೈಸೂರು ಎಕನಾಮಿಕ್ ಕಾನ್ಫರೆನ್ಸ್ ಒಂದರ ಮುಂದೆ ಭಾಷಣ ಮಾಡಿದರಂತೆ. ಕನ್ನಡಕ್ಕೆ ಸಂಬಂಧಪಟ್ಟಂತೆ ಅಲ್ಲಿ ಏನು ಹೇಳಿದ್ದರೆಂಬುದು ಸೋಜಿಗದ ವಿಷಯವಾಗಿದೆ. ಸೆಂಟ್ರಲ್ ಕಾಲೇಜಿನ ಶತಮಾನೋತ್ಸವದ ಸಂದರ್ಭದಲ್ಲಿ ಮಾಡಿದ

ಭಾಷಣವೂ, ಮಹಾರಾಜ ಕಾಲೇಜಿನ ಹಳೆಯ ವಿದ್ಯಾರ್ಥಿ ಸಂಘದ ಅಧ್ಯಕ್ಷರಾಗಿ ಮಾಡಿದ ಭಾಷಣವೂ ದೊರೆತಿಲ್ಲ. ಬ್ರೌನಿಂಗ್ ಕವಿಯನ್ನು ಕುರಿತ ಒಂದು ಲೇಖನವೂ ಇದೆಯಂತೆ. 'ಶ್ರೀ' ಅವರಲ್ಲಿ ಅಭಿಮಾನವುಳ್ಳ ಮಹಾಶಯರು ಮೇಲೆ ಸೂಚಿಸಿರುವ ಲೇಖನಗಳನ್ನು ಒವಗಿಸಿಕೊಟ್ಟಲ್ಲಿ ಈ ಸಂಪಾದಕನು ಉಪಕೃತನಾಗುತ್ತಾನೆ.

ಈ ಬಾರಿಯ ಮುದ್ರಣ ಬಲು ಅವಸರದಲ್ಲಿ ನಡದದ್ದರಿಂದ 'ಮುದ್ದಣ'ನನ್ನು ಕುರಿತ ಶ್ರೀ ಅವರ ಲೇಖನವನ್ನೂ ಇಲ್ಲಿ ಅಳಡಿಸಲಾಗಲಿಲ್ಲ.

ಈ ಗ್ರಂಥದ ವಿಷಯದಲ್ಲಿ ಕನ್ನಡ ಮಹಾಜನರೂ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ವಿಭಾಗಾಧಿಕಾರಿಗಳೂ ತೋರುತ್ತಿರುವ ಕುಂದದ ಅಭಿಮಾನಕ್ಕಾಗಿ ಪ್ರಕಾಶಕರು ಕೃತಜ್ಞರಾಗಿರುತ್ತಾರೆ. ಅತ್ಯಲ್ಪಕಾಲದಲ್ಲಿ ಈ ಗ್ರಂಥವನ್ನು ಅಚ್ಚಿಟ್ಟುಕೊಟ್ಟ ಮೈಸೂರು ಪ್ರಿಂಟಿಂಗ್ ಹೌಸಿನ ಶ್ರೀ ರಾಮರಾಯರ ಸಹಕಾರವನ್ನು ಬಹುವಾಗಿ ನೆನೆಯುತ್ತೇನೆ. ಶ್ರೀ ಅವರ ವ್ಯಕ್ತಿತ್ವವನ್ನೂ ಗೆಯ್ಮೆಯನ್ನೂ ಮಂವಟ್ಟುಮಾಡಿಕೊಡುವ ಶ್ರೀ ರಂಗಣ್ಣನವರ ಉತ್ಕೃಷ್ಟ ಪೀಠಿಕೆಗಳು ಈ ಗ್ರಂಥವನ್ನು ಜನಪ್ರಿಯವಾಗಿಸಲು ಅಲ್ಪ ಸ್ವಲ್ಪ ಸಹಾಯಮಾಡಿಲ್ಲ. ಆದರೆ ಕನ್ನಡದ ಅಭಿವೃದ್ಧಿಗಾಗಿ ಕನ್ನಡಿಗರು ಕಾರ್ಯೋನ್ಮುಖರಾಗಿ ಶ್ರಮಿಸಿದರೆ ಶ್ರೀ ಅವರ ಆತ್ಮಕ್ಕೆ ತೃಪ್ತಿಯಾದೀತು.

೨೮.೯.೧೯೬೦ **ಕೂಡಲಿ ಚಿದಂಬರಂ**

ಈ ಮುನ್ನುಡಿಗಳೂ ಕನ್ನಡಿಗರಿಗೆ ಒಳ್ಳೆಯ ಗದ್ಯ ಸಾಹಿತ್ಯವೇ. ಶಿಶುಗೀತವಾಗಲೀ ವಚನಧರ್ಮಸಾರ ವಾಗಲೀ, ನಾಡಪದವಾಗಲೀ, ಸಂಸ್ಕೃತ ನಾಟಕ ವಾಗಲೀ, "ಶ್ರೀ"ಯವರು ಹೇಗೆ ವಸ್ತುವಿನ ಒಳಹೊಕ್ಕು, ಅದರಲ್ಲಿನ ಸಾರಾಸಾರವನ್ನು ಹೊರತಂದು, ದೊಡ್ಡ ದೊಡ್ಡ ಪ್ರಶ್ನೆಗಳನ್ನು, ಮುಖ್ಯವಾಗಿ ಈಗಿನ ಕನ್ನಡ ನಾಡು ಕಟ್ಟಿಕೊಳ್ಳಬೇಕಾದ ಪ್ರಧಾನ ಪ್ರಶ್ನೆಗಳನ್ನು ಸೂಚಿಸಬಲ್ಲರೆಂಬುದು ಇಲ್ಲಿ ತೆರೆದು ತೋರಿದೆ. ಯಾವ ಅಂಶದಲ್ಲಾದರೂ ಅವರು ಹೇಗೆ ಸಂಸ್ಕೃತಿಯ ಘನತೆ ಯನ್ನು ಕಾಣುತ್ತಿದ್ದರು, ಜನತೆಯ ಪುರೋಭಿವೃದ್ಧಿಗೆ ಹೇಗೆ ಅದನ್ನು ಅನ್ವಯಿಸುತ್ತಿದ್ದರು, ಎಂಬುದು ಅಚ್ಚರಿ ಆನಂದ ಈಯುವ ಸಂಗತಿ . . .

* * *

—ಈತರದ ನಿಷ್ಪಕ್ಷಪಾತವಾದ, ರಾಗರಹಿತವಾದ, ದಟ್ಟವಾದ, ವಿಚಾರವಿಚಕ್ಷಣೆಯನ್ನು ಪ್ರಚೋದಿಸು ವುದು, ಪ್ರೋತ್ಸಾಹಿಸುವುದು ಅವರ ಉಪದೇಶದ ಸಾರ, ತಿರುಳು, ಸತ್ವ, ಸ್ವಾರಸ್ಯ. "ಧಿಯೋ ಯೋ ನಃ ಪ್ರಚೋ ದಯಾತ್" "ನವೋ ನವೋ ಭವತಿ ಜಾಯಮಾನಃ" ಎಂಬುವೇ ಅಲ್ಲವೆ ಈ ಅಧುನಿಕ ಋಷಿಶ್ರೇಷ್ಠರ ಪ್ರಾಣ ಮಂತ್ರ ?

ಶ್ರೀ ಎಸ್. ವಿ. ರಂಗಣ್ಣನವರ

ಪೀಠಿಕೆಯಿಂದ

ಕಾವ್ಯಾಭ್ಯಾಸಿಗಳಿಗೆ ಉಪಯುಕ್ತವಾದ ಗ್ರಂಥಗಳು

ಸಾಹಿತ್ಯ ಮತ್ತು ಜೀವನ ಕಲೆ—ರಾ. ಅನಂತಕೃಷ್ಣ ಶರ್ಮ
ಸಾಹಿತ್ಯ ಶಕ್ತಿ—ಡಾ|| ಡಿ. ವಿ. ಜಿ.
ಜೀವನ ಸೌಂದರ್ಯ ಮತ್ತು ಸಾಹಿತ್ಯ—ಡಾ|| ಡಿ. ವಿ. ಜಿ.
ಬಾಳಿಗೊಂದು ನಂಬಿಕೆ—ಡಾ|| ಡಿ. ವಿ. ಜಿ.
ಸಂಸ್ಕೃತಿ—ಡಾ|| ಡಿ. ವಿ. ಜಿ.
ಜ್ಞಾಪಕ ಚಿತ್ರ ಶಾಲೆ—೧—ಡಾ|| ಡಿ. ವಿ. ಜಿ.
ಕಲೋಪಾಸಕರು —ಡಾ|| ಡಿ. ವಿ. ಜಿ.
ಸಾಹಿತ್ಯೋಪಾಸಕರು —ಡಾ|| ಡಿ. ವಿ. ಜಿ.
ವೃತ್ತ ಪತ್ರಿಕೆ —ಡಾ|| ಡಿ. ವಿ. ಜಿ.
ಅರಿಸ್ಟಾಟಲನ ಕಾವ್ಯಮೀಮಾಂಸೆ—ಎನ್. ಬಾಲಸುಬ್ರಹ್ಮಣ್ಯ
ಹಳ್ಳಿಯ ಬಾಳು—ಗೊರೂರು ರಾಮಸ್ವಾಮಿ ಐಯಂಗಾರ್
ಶೈಲಿ—೧, ೨—ಪ್ರೊ|| ಎಸ್. ವಿ. ರಂಗಣ್ಣ
ಲೌಕಿಕ ನ್ಯಾಯಗಳು—ಎನ್. ರಂಗನಾಥ ಶರ್ಮ
ವಾಗ್ಗೇಯಕಾರ ವಾಸುದೇವಾಚಾರ್ಯ—ಸಂ. ಎಸ್. ಕೃಷ್ಣಮೂರ್ತಿ
ಕಾವ್ಯ ಸಮೀಕ್ಷೆ—ತೀ. ನಂ. ಶ್ರೀಕಂಠಯ್ಯ
ಪಂಚ ಕಲಶ ಗೋಪುರ—ಡಾ|| ಬಿ. ಜಿ. ಎಲ್. ಸ್ವಾಮಿ
ಸಾಹಿತ್ಯ—ರವೀಂದ್ರನಾಥ ಠಾಕೂರ್
ಕರ್ಣಾಟಕ ಸಂಗೀತ ರತ್ನಗಳು—ಪ್ರೊ|| ಸಾಂಬಮೂರ್ತಿ
ಕಲೆಗಳು ಮತ್ತು ಮಾನವ—ಅರ್ವಿನ್ ಎಡ್ಮನ್
ಸಂಯುಕ್ತ ಸಂಸ್ಥಾನಗಳ ಸಾಹಿತ್ಯ—ಮಾರ್ಕಸ್ ಕನ್ಲಿಫ್
ಕನ್ನಡ ಸಾಹಿತ್ಯದ ಇತಿಹಾಸ—ಪ್ರೊ|| ರಂ. ಶ್ರೀ. ಮುಗಳಿ
Art Experience—*Prof. M. Hiriyanna*
Sanskrit Studies—*Prof. M. Hiriyanna*

ಕಾವ್ಯಾಲಯ ಪ್ರಕಾಶಕರು * ಜಯನಗರ * ಮೈಸೂರು-೪